ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಪದ್ಯ ಸಾಹಿತ್ಯ

೨೧



ಗಾಮೊಕ್ಕಲ ಮಹಾಭಾರತ

ಸಂ. ಡಾ. ಎನ್. ಆರ್. ನಾಯಕ

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೪೦

ಪದ್ಯ ಸಾಹಿತ್ಯ ಪ್ರಕಾರ – ೨೧

ಗಾಮೊಕ್ಕಲ ಮಹಾಭಾರತ

ಸಂಪಾದಕರು

ಡಾ. ಎನ್.ಆರ್. ನಾಯಕ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು – ೫೬೦ ೦೦೨

Gamokkala Mahabharatha Edited by **Dr. N.R. Nayak** Published by K.A. Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಪ್ರಥಮ ಮುದ್ರಣ : ೨೦೧೪
ಪುಟಗಳು : xcii + ೩೯೪ = ೪೯೬
ಪ್ರತಿಗಳು : ೧೦೦೦
ಬಿಡಿ ಪ್ರತಿ ಬೆಲೆ : ರೂ. ೫೦/-
Print : 2014
Pages : xcii + 394 = 496
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
ಶ್ರೀ ಕೆ.ಎ. ದಯಾನಂದ, ಕ.ಆ.ಸೇ. ಅವರಿಂದ ಪ್ರಕಟಿತ
ಸಹಕಾರ : ಶ್ರೀ ಬಿ.ಎನ್. ಪರಡ್ಡಿ, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಸಮಿತಿ

ಅಧ್ಯಕ್ಷರು

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಸದಸ್ಯರು

ಡಾ. ಸೋಮಶೇಖರ ಇಮ್ರಾಪುರ

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಂ. ಪ್ರಭಾಕರ ಜೋಶಿ

ಡಾ. ತೀ.ನಂ. ಶಂಕರನಾರಾಯಣ

ಶ್ರೀಮತಿ ಶಾಂತಿನಾಯಕ

ಡಾ. ಅರವಿಂದ ಮಾಲಗತ್ತಿ

ಡಾ. ಮ.ಗು. ಬಿರಾದಾರ

ಪ್ರೊ. ಎ.ವಿ. ನಾವಡ

ಡಾ. ವೆಂಕಟೇಶ ಇಂದ್ವಾಡಿ

ಸದಸ್ಯ ಕಾರ್ಯದರ್ಶಿ

ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು

ಶ್ರೀ ಪಿಚ್ಚಳ್ಳಿ ಶ್ರೀನಿವಾಸ

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ನಾಡೋಜ ಬೆಳಗಲ್ಲು ವೀರಣ್ಣ

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಟಿ. ತಿಮ್ಮೇಗೌಡ

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
ಶ್ರೀ ಪಿ.ಎನ್. ಶ್ರೀನಿವಾಸಚಾರಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ಜಂಟಿ ನಿರ್ದೇಶಕರು (ಆಡಳಿತ)

ಶ್ರೀ ಬಲವಂತರಾವ್ ಪಾಟೀಲ್
ಜಂಟಿ ನಿರ್ದೇಶಕರು (ಸು.ಕ.)

ಶ್ರೀ ಬಿ.ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

ಶ್ರೀ ಎನ್. ಹರಿಕುಮಾರ್
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪

ದಿನಾಂಕ : ೦೪-೦೨-೨೦೧೪

ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.

ಸಿದ್ಧರಾಮಯ್ಯ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೭೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

ಉಮಾಶ್ರೀ

ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ–ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ-ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಘೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನುಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಷ್ಟರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರ ಮಾತು

ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

ಮಾತಿನ ಸರಣಿ : ಮುತ್ತಿನ ಬೆಲೆ

ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

ದ. ರಾ. ಬೇಂದ್ರೆ

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೪)**

ಬೆಟಗೇರಿ ಕೃಷ್ಣಶರ್ಮ

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

ಬಿ. ಎಸ್. ಗದ್ಗೀಮಠ

‘ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ ‘ವಿಶ್ವಕೋಶ’ವೇ ಆಗಬಹುದೆಂದು ಹೇಳಬಹುದು’. **(ಕನ್ನಡ ಜನಪದ ಗೀತೆಗಳು ೧೯೬೩)**

ದೇ. ಜವರೇಗೌಡ

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

ಎಚ್. ಎಲ್. ನಾಗೇಗೌಡ

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

ಜೀ.ಶಂ. ಪರಮಶಿವಯ್ಯ

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

– ૩ –

ಕಟ್ಟುವ ಕನಸು ; ನೆಟ್ಟ ಸಸಿ

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯುಗಳು ಮೈಸೂರು ವಿಶ್ವವಿದ್ಯಾಲಯುದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯುವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ, ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– ರಾಘವಾಂಕ

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ–ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ
ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

ಪೀಠಿಕೆ

೧. ಜಾನಪದ ಮತ್ತು ಅಭಿಜಾತ ಮಹಾಕಾವ್ಯಗಳು :

ಪ್ರಪಂಚದ ಪ್ರತಿಯೊಂದು ದೇಶದ ಸಂಸ್ಕೃತಿಯು ಆಯಾ ರಾಷ್ಟ್ರದ ಮಹಾಕಾವ್ಯಗಳಲ್ಲಿ ಕೆನೆಗಟ್ಟಿರುತ್ತದೆ. ನಮ್ಮ ದೇಶದ ರಾಮಾಯಣ ಮಹಾಭಾರತ ಬೃಹತ್ ಕಥೆಗಳು, ನಮ್ಮ ಮಹಾಕೃತಿಗಳಾಗಿದ್ದು, ನಮ್ಮ ಸಂಸ್ಕೃತಿಯ ಹೂರಣಗಳಾಗಿವೆ. ಇವು ಭಾರತೀಯ ಸಂಸ್ಕೃತಿಯ ಸತ್ವಸಾರವನ್ನು ಹೀರಿ, ಸುಪುಷ್ಟವಾಗಿ ಬೆಳೆದು, ಅಖಂಡ ಭಾರತ ಸಂಸ್ಕೃತಿಗೆ ಮೂಲಾಧಾರವಾಗಿ ನಿಂತು, ನಮ್ಮ ಸಂಸ್ಕೃತಿಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಿವೆ. ವರ್ತಮಾನದಲ್ಲೂ ಸಹ ಈ ಬೃಹತ್ ಕೃತಿಗಳು ಜನಮಾನಸದ ಮೇಲೆ ತಮ್ಮ ಪ್ರಭಾವ ಬೀರುತ್ತಲೇ ಇವೆ. ಭರತ ಖಂಡದ ಪೌರ–ಜಾನಪದರೆಲ್ಲ ಈ ಮಹಾಕೃತಿಗಳಲ್ಲಿ ಕೆನೆಗಟ್ಟಿನಿಂತ ಧ್ಯೇಯ ಧೋರಣೆ, ಆದರ್ಶಗಳನ್ನು ತಮ್ಮಲ್ಲಳವಡಿಸಿಕೊಂಡು, ತಮ್ಮ ಬಾಳಿನ ಸಾರ್ಥಕ್ಯವನ್ನು ಕಂಡುಕೊಂಡಿದ್ದಾರೆ, ಇಲ್ಲಿಯ ಧೀರೋದಾತ್ತ ನಾಯಕರನ್ನು ಅನುಸರಿಸಿ ತಮ್ಮ ಬಾಳನ್ನು ಹೊಳಪಿಸಿಕೊಂಡಿದ್ದಾರೆ.

ಈ ಮಹಾಕೃತಿಗಳ ಕಥಾ ಶಿಲ್ಪ ಬೌದ್ಧ ಜಾತಕಗಳಲ್ಲಿ, ವೈದಿಕ ಹಾಗೂ ಜೈನ ಸಾಹಿತ್ಯ, ಪುರಾಣಗಳಲ್ಲಿ, ಜಾನಪದ ಪರಂಪರೆಯಲ್ಲಿ ಆಯಾ ಸಂಸ್ಕೃತಿಯ ಮನೋಧರ್ಮಕ್ಕನುಗುಣವಾಗಿ ವೈವಿಧ್ಯಪೂರ್ಣವಾಗಿ ರೂಪುಗೊಂಡು ತನ್ನ ಅನನ್ಯತೆಯನ್ನು ಪ್ರಕಟಿಸಿದೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ದೇಶಕ್ಕಾಗಿ ಹೋರಾಡಿ ಮಡಿದ ರಾಜರು, ವೀರರು ಮುಂತಾದವರ ಕಾರ್ಯಕಲಾಪಗಳನ್ನು ನೆನೆಯುವ ಅವರ ಕೀರ್ತಿಗಳನ್ನು ಹಾಡಿ ಹೊಗಳುವ, ವೀರಗಾಥೆಗಳು, ದಾನ ಸ್ತುತಿಗಳು ಹಾಗೂ ಪುರಾಣ ಕಥೆಗಳು ಹೇರಳವಾಗಿವೆ. ಅವನ್ನೆಲ್ಲ ಸೂತರು, ಭಟ್ಟಂಗಿಗಳು ತಾಳ, ಲಯ ಬದ್ಧವಾಗಿ ಹಾಡುತ್ತಿದ್ದ ಪುರಾವೆಗಳಿವೆ. ರಾಮಾಯಣದಲ್ಲಿ ಸೂತ ಸುಮಂತ್ರನ ಪ್ರಸ್ತಾವವಿದೆ. ಸೂತ ಸಂಜಯ ಧೃತರಾಷ್ಟನಿಗೆ ಮಹಾಭಾರತದ ಯುದ್ಧವನ್ನು ಬಣ್ಣಿಸಿದ್ದಿದೆ. ಐತಿಹಾಸಿಕ ಘಟನಾವಳಿಗಳಿಂದ ಕೂಡಿದ ವೀರಗಾಥೆಗಳು, ಸಂಚಾರಿ ಗಾಯಕರಿಂದ ವಿಶೇಷ ಸಂದರ್ಭಗಳಲ್ಲಿ, ಜನಪದ ಭಾಷೆಯಲ್ಲಿ ಹಾಡಿನ ಮೂಲಕ ರವಾನೆಯಾಗುತ್ತಿದ್ದುವೆಂದು ತಿಳಿದು ಬರುತ್ತದೆ. ಅವು ಒಬ್ಬರಿಂದೊಬ್ಬರಿಗೆ ಸಂವಹನೆಗೊಳ್ಳುವಾಗ ವಿಭಿನ್ನ ಸಂಸ್ಕೃತಿ ಹಾಗೂ ವ್ಯಕ್ತಿಯ ಮನೋಧರ್ಮ,

ಅಭಿರುಚಿಗನುಗುಣವಾಗಿ ಹಲವು ಪ್ರಕ್ಷೇಪಗಳನ್ನು ಪಡೆಯುತ್ತವೆ. ಮೂಲ ಕಥೆಗೆ ಹಲವಾರು ಕಥೆ, ಉಪಕಥೆಗಳು ಆಯಾ ಕಾಲಧರ್ಮದ ಲೋಕರೀತಿ, ನೀತಿ, ನಡವಳಿಕೆಗಳು ಮಿಳಿತವಾಗಿ, ಮೂಲಕಥೆ ಹಿಗ್ಗುತ್ತ ಕುಗ್ಗುತ್ತ ಬದಲಾವಣೆ ಪಡೆಯುತ್ತ ಕಥೆ ಕಥಾ ಪುಂಜವಾಗಿ ಮಾರ್ಪಡುತ್ತದೆ. ಈ ಕಥಾ ಪುಂಜಗಳನ್ನು ವೀರಗಾಥಾ ಚಕ್ರ Ballad Cycle ಎನ್ನುತ್ತಾರೆ. ಈ ಕಥಾಚಕ್ರ, ನಾಡಿನಲ್ಲಿ ಹರಡಿ ಜನರ ನಾಲಿಗೆಯ ಮೇಲೆ ನಲಿಯುವಾಗ, ಅವನ್ನೆಲ್ಲ ಒಟ್ಟುಗೂಡಿಸಿ, ಓರೆಕೋರೆಗಳನ್ನು ತಿದ್ದಿ ತೀಡಿ ನೇರ್ಪುಗೊಳಿಸಿ, ಅವುಗಳಲ್ಲಿ ಏಕಸೂತ್ರತೆ, ಸಮನ್ವಯವನ್ನು ಸಾಧಿಸಿ, ಅವಕ್ಕೊಂದು ಆಕರ್ಷಕ ರೂಪುಕೊಡುವ ಕಾರ್ಯವನ್ನು ಪ್ರತಿಭಾನ್ವಿತನೊಬ್ಬ ಮಾಡುತ್ತಾನೆ. ಅವನ ಪ್ರತಿಭಾ ಕನ್ನಡಿಯಲ್ಲಿ ಪ್ರತಿಫಲನಗೊಂಡ ಕಥಾಚಕ್ರ ಮುಂದೆ ಮಹಾಕಾವ್ಯವಾಗಿ ಹೊಮ್ಮುತ್ತದೆ. ಇಂದು ಮಹಾಕಾವ್ಯಗಳೆಂದು ಪರಿಗಣಿತವಾದ ಮಹಾಭಾರತ, ರಾಮಾಯಣ, ಇಲಿಯಡ್, ಒಡಿಸಿ, ಷಹಾನಾಮಾ, ಬೀವುಲ್ಫ, ಕಲೆವಾಲ, ಖಂಡೋಬಾ, ದೇವನಾರಾಯಣ, ಜುಂಜಪ್ಪ, ಮಂಟೇಸ್ವಾಮಿ, ಮೈಲಾರಲಿಂಗ ಮಾದೇಶ್ವರ, ಹಾಲುಮತ, ಕುಮಾರರಾಮ, ಸಿರಿ ಮುಂತಾದವು ರೂಪುಗೊಂಡದ್ದು ಹೀಗೆ. ಮಹಾಕಾವ್ಯಗಳ ಮೂಲಸಾಮಗ್ರಿ, ಪ್ರಾಚೀನ ಪರಂಪರೆಯಲ್ಲಿ ಯಾರ‍್ಯಾರಿಂದಲೋ ಸೃಜನಗೊಂಡ ಇತಿಹಾಸ ಮತ್ತು ಜನಪದ ಕಥಾ ಪರಂಪರೆಯಿಂದ ಕೂಡದ್ದೆನ್ನ ಬಹುದು.

ಮಹಾಕಾವ್ಯಗಳು ಬೃಹತ್ ರೂಪವನ್ನು ತಾಳುವ ಮೊದಲು ನೂರಾರು ವರ್ಷಗಳಿಂದ ಬರವಣಿಗೆಗಿಳಿಯದೆ ಬಾಯಮಾತಿನ ಮೂಲಕ ಬಂದವು ಗಳೆಂದು ಪಂಡಿತರ ಅನಿಸಿಕೆ. ರಾಮಾಯಣವನ್ನು ವಾಲ್ಮೀಕಿಯಿಂದ ಕೇಳಿ ತಿಳಿದ ಕುಶಲವರು ಅದನ್ನು ಆರಂಭದಲ್ಲಿ ಆಶ್ರಮದ ಮುನಿಗಳ ಮುಂದೆ ಹಾಡಿದರು. ಆಮೇಲೆ ಅದನ್ನು ಅನೇಕ ಕೇಳುಗರ ಗುಂಪಿನ ಮುಂದೆ ಹಾಡಿ ಹಾಡಿ, ಮನದಟ್ಟಾಗಿಸಿಕೊಂಡು ಅಯೋಧ್ಯೆಗೆ ಆಗಮಿಸಿ ಶ್ರೀರಾಮನ ಮುಂದೆ ತುಂಬಿದ ಸಭೆಯಲ್ಲಿ ಹಾಡಿದರು. ವ್ಯಾಸ ಪ್ರಣೀತ ಮಹಾಭಾರತವನ್ನು, ಜನಮೇಜಯನು ಕೈಕೊಂಡ ಸರ್ಪಯಾಗದ ಸಮಯದಲ್ಲಿ ನೆರೆದ ನೆರವಿಯೆದುರಿಗೆ ವೈಶಂಪಾಯನನು ಹಾಡಿದನು. ವರರುಚಿಯ ಕಥಾ ಸಮೂಹವನ್ನು ಕಾಣಭೂತಿಯೆಂಬ ಪಿಶಾಚಿಯಿಂದ ಕೇಳಿಸಿಕೊಂಡ ಗುಣಾಢ್ಯನು 'ಬೃಹತ್ ಕಥೆ'ಯನ್ನು ಸಂಗ್ರಹಿಸಿದನು – ಎಂದು ಮುಂತಾಗಿ ವದಂತಿಗಳಿವೆ. ಈ ವದಂತಿಗಳು ಮಹಾಕಾವ್ಯಗಳಿಗೆ ತೋಂಡಿ ಮೂಲದ ಜಾನಪದ ಸಂಪ್ರದಾಯದ ವಜ್ರಲೇಪವಿರುವುದನ್ನು ದೃಢಪಡಿಸುತ್ತವೆ. ಈ ಮಹಾಕಾವ್ಯಗಳ ಮೂಲವಸ್ತು ಪುರಾಣಕಾಲದಲ್ಲಿ ವಿಭಿನ್ನ ನೆಲೆಯ ಪ್ರತಿಭಾವಂತರಿಂದ ನಿರೂಪಿತವಾದ ಇತಿಹಾಸ ಮತ್ತು ಜಾನಪದ ಕಥಾ ಪರಂಪರೆಯ

ಸರಿಬೆರಕೆಯಿಂದ ಹದಗೊಂಡದ್ದು. ಇದರಲ್ಲಿ ಒಂದು ರಾಷ್ಟ್ರದ, ನಾಡಿನ, ಇಲ್ಲವೆ ಜನಾಂಗ ಸಂಸ್ಕೃತಿಯ ಆಚಾರ ವಿಚಾರ, ಆಹಾರ ಪಾನೀಯ, ವಿಹಾರ ವ್ಯವಹಾರ, ಲೋಕ ರೀತಿ ನೀತಿ, ಬದುಕಿನ ಒಳನೋಟ, ಜೀವನ ಮೌಲ್ಯಗಳೆಲ್ಲ ಹಾಸುಹೊಕ್ಕಾಗಿ ಬೆರೆತಿರುತ್ತದೆ. ವೀರ ಸ್ತುತಿಗೆ ಸಂಬಂಧವಾದ ಕಾವ್ಯಕಡಲಿಗೆ ಪೌರಜಾನಪದರೆಲ್ಲರ ವಿಚಾರಧಾರೆಗಳು ಸೇರ್ಪಡೆಗೊಂಡು, ಅದು ಯಾರೊಬ್ಬರ ಸೊತ್ತೂ ಆಗದೆ ಸಮಸ್ತ ಜನಪದ ಸಮೂಹದ ಆಸ್ತಿಯಾಗಿ ಪ್ರಾಣ ಶಕ್ತಿಯಾಗಿ ಮಹಾಕಾವ್ಯ ರೂಪದಿಂದ ಹೊರಹೊಮ್ಮುತ್ತದೆ.

೨. ಮಹಾಭಾರತ :

ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಭಾರತೀಯ ಮಹಾಕಾವ್ಯ ಮಹಾಭಾರತವು ಆರಂಭದಲ್ಲಿ ಹಸ್ತಿನಾವತಿಯ ಪಟ್ಟಕ್ಕಾಗಿ ಧೃತರಾಷ್ಟ್ರ ಹಾಗೂ ಪಾಂಡುರಾಜನ ಮಕ್ಕಳು ಕುರುಕ್ಷೇತ್ರದಲ್ಲಿ ಯುದ್ಧವನ್ನು ಮಾಡಿ ಪಾಂಡು ಪುತ್ರರು 'ಜಯ'ಗಳಿಸಿ ಪಟ್ಟಾಭಿಷಿಕ್ತರಾದ ಚಿಕ್ಕ ಘಟನೆಯನ್ನು ಯಾರೋ ಸೂತಪುರಾಣಿಕರು 'ಜಯ'ವೆಂದು ಕರೆದು ಹಾಡಿದ ವೀರಗಾಥೆ. ಇದಕ್ಕೆ ಶತಮಾನಗಳುರುಳಿದಂತೆ ಭರತ ಖಂಡದ ಬೇರೆ ಬೇರೆ ರಾಜವಂಶಗಳ ಕಥೆ ಬೆರೆತುಕೊಂಡು ಅದು ಮುಂದಿನ ಹಂತದಲ್ಲಿ ಭಾರತವಾಯ್ತು. ಆ ಭಾರತ ಕಥೆಗೆ ಮತ್ತೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಲವಾರು ಕಥೆ ಉಪಕಥೆಗಳು ಬೆರೆತು ಬೃಹತ್ತಾಗಿ ಬೆಳೆದು ಇಂದಿನ ಮಹಾಭಾರತ ಸ್ವರೂಪವನ್ನು ಪಡೆಯಿತೆಂದು ಹೇಳುತ್ತಾರೆ. ಉಗ್ರಶ್ರವನು ಹೇಳಿದ ೮೮೦೦ ಶ್ಲೋಕಗಳ ಭಾರತ ಕ್ರಮೇಣ ೨೪ ಸಾವಿರ, ೬೦ ಸಾವಿರ ಶ್ಲೋಕಗಳ ವಸ್ತು ವಿನ್ಯಾಸವನ್ನು ಹೊಂದಿ, ವಿಸ್ತೃತಗೊಂಡು ಇಂದು ಸುಮಾರು ಒಂದು ಲಕ್ಷ ಶ್ಲೋಕ ವ್ಯಾಪ್ತಿಯನ್ನು ಪಡೆದು ವಿಜೃಂಭಿಸಿದೆ. ಇದರಲ್ಲಿ ಮೇದೋಪನಿಷತ್ತು ಬ್ರಾಹ್ಮಣಗಳಲ್ಲಿಯ ತತ್ತ್ವ ವಿಚಾರಗಳು ಸೇರಿ, ಪೌರ-ಜಾನಪದರಿಗೆ ಸತ್ಕಥಾಕಾಲಕ್ಷೇಪ, ನೀತಿ, ಧರ್ಮಬೋಧೆ ಒಟ್ಟಿಗೇ ಲಭಿಸಿ ಈ ಗ್ರಂಥ ಪಂಚಮವೇದವೆಂದು ಲೋಕಪ್ರಿಯ ವಾಯಿತು. ಇದನ್ನು ತಿಂಗಳುಗಟ್ಟಲೆ ಓದಿ ವ್ಯಾಖ್ಯಾನಿಸುವ ರೂಢಿಯೂ ಬೆಳೆಯಿತು.

ವ್ಯಾಸ ಪ್ರಣೀತ ಮಹಾಭಾರತಕ್ಕೂ ಮೊದಲು ಜಾನಪದ ಮೂಲದ ಮಹಾಭಾರತ ಪರಂಪರೆಯೂ ಒಂದಿದ್ದು, ಅದೂ ಜನಸಾಮಾನ್ಯರಲ್ಲಿ ಅನೂಚಾನವಾಗಿ ಬೆಳೆದುಕೊಂಡು ಬಂದು ಜನರ ನಾಲಿಗೆಯ ಮೇಲೆ ನಲಿಯುತ್ತಿತ್ತು. ಇನ್ನೊಂದೆಡೆಗೆ ಮಹಾಭಾರತದ ಕಥೆ ಉಪಕಥೆಗಳನ್ನೆತ್ತಿಕೊಂಡು ಪುರಾಣ ಪ್ರವಚನಕಾರರು, ಕೀರ್ತನಕಾರರು, ಕವಿ ಗಮಕಿಗಳು, ಯಕ್ಷಗಾನ ಪ್ರಸಂಗಕರ್ತರು, ತಮ್ಮ ತಮ್ಮ ಮಾಧ್ಯಮಗಳ ಮೂಲಕ ಜನ ಸಾಮಾನ್ಯರಿಗೆ ಒರೆಯುತ್ತಿದ್ದರು. ಹಾಗೆ ಒರೆಯುವಾಗ ಅವರು ಬದುಕಿನಲ್ಲಿ ತಾವು ನಂಬಿದ

ಜೀವನ ಮೌಲ್ಯಗಳನ್ನು, ರೂಢಿ ಸಂಪ್ರದಾಯಗಳನ್ನು ಪರಂಪರೆಯಿಂದ ತಾವು ಕೇಳಿದ ಭಿನ್ನ ಸಂಪ್ರದಾಯದ ಕಥಾ ವಸ್ತುವನ್ನು, ತಮ್ಮ ಜಾಯಮಾನಕ್ಕೆ ಹೊಂದುವ ಸಮಕಾಲೀನ ಪ್ರಜ್ಞೆಯನ್ನು ಎರಕಹೊಯ್ದು, ಒಡನಾಡಿ ಪೀಳಿಗೆಗೆ ಮುಟ್ಟಿಸಿದರು. ಹೀಗಾಗಿ ಇಂದಿನ ಜಾನಪದ ಮಹಾಭಾರತದ ಮೇಲೆ ಅಭಿಜಾತ ಮಹಾಭಾರತದ ಪ್ರಭಾವ, ಪುರಾಣ ಪ್ರವಚನಕಾರರ ಪ್ರಭಾವ, ಪರಂಪರೆಯಿಂದ ಬಂದ ತೋಂಡಿ ಸಂಪ್ರದಾಯದ ಪ್ರಭಾವ, ವಿಭಿನ್ನ ಕಾಲ ದೇಶಗಳ ಜಾನಪದ ಪ್ರಜ್ಞೆಯ ಪ್ರಭಾವ ಹೀಗೆ ನಾಲ್ಕು ಮಜಲುಗಳಲ್ಲಿ ಪ್ರಭಾವವಾದಂತಿದೆ. ಇದೇ ಬಗೆಯಲ್ಲಿ ಅಭಿಜಾತ ಮಹಾಭಾರತವೂ, ಜಾನಪದ ಮಹಾಭಾರತದಿಂದ ಪ್ರಭಾವ ಪ್ರೇರಣೆಗೊಳಗಾಗಿದ್ದನ್ನು ಗುರುತಿಸಬಹುದಾಗಿದೆ. ಈ ಪ್ರಭಾವ ಪ್ರೇರಣೆಗಳನ್ನೊಪ್ಪಿ ಕೊಳ್ಳುತ್ತಲೇ, ಜಾನಪದ ಮತ್ತು ಅಭಿಜಾತ ಮಹಾಭಾರತ ಕಥಾ ಪರಂಪರೆಯಲ್ಲಿ ವಸ್ತು, ಪಾತ್ರ, ತಂತ್ರಗಳಲ್ಲಿ ತೀರ ಭಿನ್ನವಾದ ಸಂಪ್ರದಾಯಗಳಿದ್ದಿರಬಹುದೆಂಬ ಕಲ್ಪನೆಗೆ ಗಾಮೊಕ್ಕಲ ಮಹಾಭಾರತ ಗ್ರಾಸವನ್ನೊದಗಿಸುತ್ತದೆ.

೩. ಗಾಮೊಕ್ಕಲ ಮಹಾಭಾರತ :

ಗಾಮೊಕ್ಕಲ ಮಹಾಭಾರತ ಕಥಾ ವಸ್ತು ವ್ಯಾಸಮಹಾಭಾರತ ಕಥಾ ವಸ್ತುವಿನಿಂದ ಬಹು ಅಂಶಗಳಲ್ಲಿ ಭಿನ್ನವಾಗಿದ್ದು, ಇಲ್ಲಿಯ ಪಾತ್ರಗಳ ಗುಣಸ್ವಭಾವಗಳೂ ಸಹ ಸಾಕಷ್ಟು ಭಿನ್ನವಾಗಿವೆ. ವ್ಯಾಸಭಾರತದಲ್ಲಿಲ್ಲದ ಹಲವಾರು ಜಾನಪದ ರೂಢಿ ನಂಬಿಕೆ ಸಂಪ್ರದಾಯಗಳು, ಜೀವನ ಮೌಲ್ಯಗಳು ಇವುಗಳ ಜೊತೆಗೇ ಕೆಲವು ಮೌಢ್ಯಗಳೂ ಬೆರೆತುಕೊಂಡು ಈ ಮಹಾಭಾರತ ಕಥೆ ಭಿನ್ನ ಜಾಡು ಹಿಡಿಯುತ್ತದೆ. ಇಲ್ಲಿಯ ಮಾರ್ಪಾಡುಗಳೆಲ್ಲವೂ ಸುಂದರವಾದ, ಸಮುಚಿತವಾದ ಮಾರ್ಪಾಡಾಗಿ ತೋರದಿದ್ದರೂ ಇಲ್ಲಿ ಗಾಮೊಕ್ಕಲ ಮಣ್ಣವಾಸನೆ ತುಂಬಿದ, ಇನ್ನೊಂದು ಜಾನಪದ ಮಹಾಭಾರತ ಲೋಕದರ್ಶನವನ್ನು ನಾವು ಕಾಣಬಹುದಾಗಿದೆ.

ಸೂತರು ಸಂಚಾರಿ ಗಾಯಕರ ನಾಲಿಗೆಯ ಮೇಲೆ ನಲಿಯುತ್ತಿದ್ದ ಖಂಡಕಾವ್ಯದ ಪುಂಜ ಮಹಾಕವಿ ವ್ಯಾಸನ ಪ್ರತಿಭಾ ಮೂಸೆಯಲ್ಲಿ ಹದಗೊಂಡು ಮಹಾಕಾವ್ಯವಾಗಿ ಹೊಮ್ಮಿದಂತೆ, ಜಾನಪದ ಮಹಾಭಾರತ ಪರಂಪರೆಯ ಕಥಾ ಚಕ್ರಗಳು ಜಾನಪದ ವ್ಯಾಸನೊಬ್ಬನ ಮಹಾ ಪ್ರತಿಭೆಯಲ್ಲಿ ಪುನರ್ ಸೃಷ್ಟಿಗೊಂಡು ಅಖಂಡ ಜಾನಪದ ಮಹಾಭಾರತವೊಂದು ಮೈದುಂಬಿ ಬರಬೇಕಾಗಿದೆ. ಬೌದ್ಧ, ಜೈನ ವೈದಿಕ ಪರಂಪರೆಯಲ್ಲಿ ವಿಭಿನ್ನ ಸ್ವರೂಪದ ಮಹಾಭಾರತಗಳಿರುವಂತೆ ಜಾನಪದದಲ್ಲಿಯೂ ಇವೆಯೆನ್ನಲು ಸಾಕ್ಷಾಧಾರಗಳಿವೆ. ಭಾರತದಾದ್ಯಂತ ಇರುವ ಬೇರೆ ಬೇರೆ ಕಂಠಸ್ಥ ಸಂಪ್ರದಾಯಗಳಲ್ಲಿ ಉಪಲಬ್ಧವಿದ್ದ, ಮಹಾಭಾರತಕ್ಕೆ ಸಂಬಂಧಿಸಿದ ಪಠ್ಯ

ಸಿದ್ಧಪಡಿಸುವುದು ಕಷ್ಟದಾಯಕವಾದರೂ, ಯಾವುದೋ ಒಂದು ಸಂಪ್ರದಾಯಕ್ಕೆ ಸೇರಿದ ಮಹಾಭಾರತ ಖಂಡಕಾವ್ಯಗಳ ಮೊತ್ತವನ್ನು ಒಂದೆಡೆ ತಂದು, ಅಭಿಜಾತ ಮಹಾಭಾರತದಿಂದ ಪ್ರತ್ಯೇಕ ಹಾದಿ ಹಿಡಿದ, ಜಾನಪದ ಮಹಾಭಾರತದ ಪುನರ್ ಸೃಷ್ಟಿಗೆ ತೊಡಗುವ ಅವಶ್ಯಕತೆಯಿದೆ. ಇದರಿಂದ ನಮ್ಮ ಸಂಸ್ಕೃತಿಯ ಪುನರ್ ಮೌಲೀಕರಣಕ್ಕೆ ಹೆಚ್ಚಿನ ಅವಕಾಶ ಸಿಗುವ ಸಾಧ್ಯತೆಯಿದೆ. ಈ ಮಹದಾಶೆಯನ್ನು ಹೊತ್ತ ನಾನು (ಡಾ॥ ಎನ್. ಆರ್. ನಾಯಕ) ೧೯೬೯ – ೧೯೭೦ ರ ಮಧ್ಯಾವಧಿಯಲ್ಲಿ ಗಾಮೊಕ್ಕಲು ಬುಡಕಟ್ಟಿನಲ್ಲಿ ಪ್ರಚಲಿತವಿರುವ ಮಹಾಭಾರತಕ್ಕೆ ಸಂಬಂಧಿಸಿದ ಕಥಾ ಪುಂಜಗಳನ್ನು ಕಷ್ಟಪಟ್ಟು ಸಂಗ್ರಹಿಸಿ, ಸಂಪಾದಿಸಿ ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಸಾರಾಂಗದ ನೆರವಿನಿಂದ ೧೯೭೨ರಲ್ಲಿ ಪ್ರಕಟಿಸಿದೆ. ಅನಂತರ ೧೯೯೬ರಲ್ಲಿ ಲಭ್ಯವಾದ ನಾಲ್ಕೈದು ಖಂಡಕಾವ್ಯಗಳನ್ನು ೨೦೦೩ರಲ್ಲಿ 'ಅಭಿಮನ್ಯು' ಎಂಬ ಹಾಗೂ ೨೦೦೬ರಲ್ಲಿ 'ನಾರಾಯಣದೇವ' ಎಂಬ ತಲೆಬರೆಹದಡಿ ಎರಡು ಕಂತುಗಳಲ್ಲಿ ಹೊನ್ನಾವರದ ಜಾನಪದ ಪ್ರಕಾಶನದಿಂದ ಪ್ರಕಟಿಸಿದೆ. ಈಗ ಈ ಹಿಂದೆ ಮೂರು ಗ್ರಂಥಗಳಲ್ಲಿ ದಾಖಲುಗೊಂಡ ಮಹಾಭಾರತಕ್ಕೆ ಸಂಬಂಧಿಸಿದ ಕಥಾ ಪುಂಜಗಳೆಲ್ಲ ಒಟ್ಟಿಗೆ ಸೇರಿ, ವಿಸ್ತೃತವಾದ 'ಗಾಮೊಕ್ಕಲ ಮಹಾಭಾರತ' ಸಂಪುಟ ಪ್ರಕಟವಾಗುತ್ತಿದೆಯೆಂದು ಹೇಳಲು ಸಂತೋಷವೆನಿಸುತ್ತದೆ.

ನಿರಕ್ಷರಿಗಳಿಂದ ಜೀವಂತ ಪರಂಪರೆಯಲ್ಲಿ ತೋಂಡಿಯಾಗಿ ಮುಂದುವರಿಯುವ ಜನಪದ ಕಾವ್ಯ ನಿತ್ಯ ಪರಿವರ್ತನಶೀಲವಾದುದು. ಅದು ತಲೆಮಾರಿನಿಂದ ತಲೆಮಾರಿಗೆ ಸಂವಹನೆಗೊಳ್ಳುವಾಗ, ವ್ಯಕ್ತಿಯ ಗುಣ ಸ್ವಭಾವ, ಉಚ್ಚಾರ ಭೇದ, ಸಮೂಹ ಸಂಸ್ಕೃತಿಯ ಒತ್ತಾಸೆ ಹಾಗೂ ಕಾಲಮಾನ ಪರಿಸ್ಥಿತಿಗನುಗುಣವಾಗಿ ಹಲವಾರು ಪ್ರಕ್ಷೇಪಗಳಿಗೊಳಗಾಗಿ ಭಿನ್ನರೂಪವನ್ನು ಪಡೆಯುತ್ತದೆ. ತನ್ನ ನಿತ್ಯ ನೂತನತೆಯನ್ನೂ, ಜೀವಂತಿಕೆಯನ್ನೂ ಕಾಪಾಡಿಕೊಳ್ಳುತ್ತದೆ. ಅದಕ್ಕಾಗಿ ಜಾನಪದ ಸಂಗ್ರಹಣೆ, ಸಂಪಾದನೆಯ ಕಾರ್ಯ ನಿಂತ ನೀರಾಗಬಾರದು, ಅದು ಕಾಲಕಾಲಕ್ಕೆ ಅವ್ಯಾಹತವಾಗಿ ಸಾಗುತ್ತಲೇ ಹೋಗಬೇಕು. ಆಗ ಜಾನಪದ ಯಾವ ರೀತಿಯಲ್ಲಿ ಬದಲಾವಣೆಯನ್ನು ಹೊಂದುತ್ತ ಹೋಗುತ್ತದೆಯೆನ್ನುವುದರ ಇತಿಹಾಸ ನಮಗೆ ದೊರಕುವುದು ಸಾಧ್ಯವಾಗುತ್ತದೆ ; ಭಾಷೆ, ವಸ್ತು ತಂತ್ರಗಳಲ್ಲಿ ಆದ ಮಾರ್ಪಾಡುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿಯೇ, ಈ ಗಾಮೊಕ್ಕಲ ಮಹಾಭಾರತ ಸಂಪುಟದಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ವ್ಯಕ್ತಿಗಳಿಂದ ಸಂಗ್ರಹಿಸಿದ, 'ಕನಕಾಂಗಿ ಕಲ್ಯಾಣ', ಹಾಗೂ 'ಅಭಿಮನ್ಯು' ಎನ್ನುವ ಅಭಿಮನ್ಯುವಿನ ಮದುವೆ ಹಾಗೂ ಅವನ ಮರಣಕ್ಕೆ ಸಂಬಂಧಿಸಿದ ಎರಡು ಖಂಡಕಾವ್ಯಗಳ, ಭಿನ್ನ ಪಾಠಗಳನ್ನು ನೀಡಿದ್ದೇನೆ. ಇಡಿಯ 'ಗಾಮೊಕ್ಕಲ ಮಹಾಭಾರತ'ದ ಇನ್ನೊಂದು

ಪಾಠವನ್ನು ನಾನು, ಆ ಪರಂಪರೆಯ ಜೀವಂತ ಉಳಿಕೆಯಾದ ಹನ್ನಿಕ್ಷೇತ್ರಗೌಡ ಇವರಿಂದ ಸಂಗ್ರಹಿಸಿ ಕೊಡಬಹು ದಾಗಿತ್ತಾದರೂ, ಸಂಪುಟ ವಿಸ್ತಾರ ಭಯದಿಂದ ಆ ಕೆಲಸಕ್ಕೆ ಕೈಹಾಕಿಲ್ಲ. ಆದರೂ ಜನಪದ ಕಾವ್ಯ ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಹೇಗೆ ಬದಲಾವಣೆಯನ್ನ ಪಡೆಯುತ್ತ ಹೋಗುತ್ತದೆ ಯೆನ್ನುವುದರ ಸ್ಪಷ್ಟ ಚಿತ್ರವನ್ನು ಈ ಸಂಪುಟದಲ್ಲಿ ಕೊಡಲಾದ ಎರಡು ಮೂರೇ ಪಾಠಾಂತರಗಳಿಂದ ನಾವು ಕಂಡುಕೊಳ್ಳಬಹುದಾಗಿದೆ. ಇಲ್ಲಿ ನಿರೂಪಿತವಾದ ಮಹಾಭಾರತ ಕಥೆ ತನ್ನದೇ ಆದ ಸ್ವಂತಿಕೆಯಿಂದ ಜಾನಪದ ಜಗತ್ತಿಗೊಂದು ವಿಶಿಷ್ಟ ಕೊಡುಗೆಯಾಗಿದೆ. ವ್ಯಾಸ ಮಹಾಭಾರತದಿಂದ ಬಹು ಭಿನ್ನವಾದ ಈ ಸಂಪುಟವನ್ನು ನಾನು ಸಂಪಾದಿಸಿದ್ದು ಗಾಮೊಕ್ಕಲಿಂದ ಆದ್ದರಿಂದ ಇದು ಗಾಮೊಕ್ಕಲ ಮಹಾಭಾರತ.

ಈ ಸಂಪುಟದಲ್ಲಿ ೧೪ ಖಂಡಕಾವ್ಯಗಳಿದ್ದು ಪ್ರತಿಯೊಂದು ಕಥಾ ಖಂಡವೂ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿದೆ, ಸ್ವಯಂಪೂರ್ಣವಾಗಿದೆ. ಕಥಾವಸ್ತು ಮಹಾಭಾರತ ಕಥಾ ವಸ್ತುವಿನ ಜೊತೆಗೆ ಸಾದೃಶ್ಯಪಡೆಯುವುದಕ್ಕಿಂತ ವೈದೃಶ್ಯ ಪಡೆಯುವುದೇ ಹೆಚ್ಚಾಗಿದೆ. ಇಲ್ಲಿಯ ಪ್ರತಿಯೊಂದು ಕಥಾಖಂಡದ ಆರಂಭದಲ್ಲಿ ದೇವತಾಸ್ತುತಿ ಅಂತ್ಯದಲ್ಲಿ ಕಾವ್ಯಗಾಯನ ಶ್ರವಣ ಫಲವಿದೆ. ಈ ಸಂಪುಟದಲ್ಲಿ ಏಕರೂಪವಾಗಿರುವ ದೇವತಾಸ್ತುತಿ ಹಾಗೂ ಕಾವ್ಯಫಲಗಳನ್ನು ಬಿಟ್ಟು, ಕೊಂಚ ಮಟ್ಟಿಗೆ ಭಿನ್ನವಾಗಿರುವವು ಗಳನ್ನು ಉಳಿಸಿಕೊಳ್ಳಲಾಗಿದೆ. ಕಾವ್ಯ ಖಂಡಗಳ ವರ್ಣನಾ ಭಾಗಗಳಲ್ಲಿರುವ ಕೆಲವು ಪುನರುಕ್ತಿ ವರ್ಣನೆಗಳು ಓದುಗರಿಗೆ ಕೆಲವೊಮ್ಮೆ ಕಿರಿಕಿರಿಯನ್ನುಂಟು ಮಾಡಿದರೂ, ಕಥಾಶಿಲ್ಪಕ್ಕೆ ಅರೆಕೊರೆಯಾಗ ಬಾರದೆಂದು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಈ ಕಥಾಖಂಡಗಳ ಛಂದಸ್ಸು ಕನ್ನಡದ ಅತ್ಯಂತ ಹಳೆಯದಾದ ಛಂದೋರೂಪ ಏಳೆಯಂತಿದ್ದು, ಆ ಏಳೆ ಸರಪಳಿಯಾಗಿ ಕಾವ್ಯದುದ್ದಕ್ಕೂ ಮೈಚಾಚಿಕೊಳ್ಳುತ್ತದೆ. ಕಾವ್ಯ ಹಾಡಿನಲ್ಲಿ ಮುಂದುವರಿಯುವಾಗ ಎರಡನೆಯ ಸಾಲು ಕೆಳಗಿನಂತೆ ಪುನರುಕ್ತವಾಗುತ್ತಲೇ ಹೋಗುತ್ತದೆ :

ಹನ್ನೆಯ್ಡುವರಸೀನಾ ಸೆಣ್ಣಿವಳು ಸೂಬದ್ರೆ

ಮತ್ತೆ ಮಂಗಲಕೆ ನೆರದಾಳೆ

ಮತ್ತೆ ಮಂಗಲಕೆ ನೆರದಾಳಂದ್ ಮಾದೇವಿ

ಹೂಂಗಿನ ಚಬ್ಬೀ ತಡದಾಳೆ

ಹೂಂಗಿನ ಚಬ್ಬಿ ತಡದಾಳೆ ಮಾದೇವಿ

ಮಾಳಗ್ಗಿಂದ್ಹೆರಗೇ ಬರೋವಾಳೆ

ಮಾಳಗ್ಗಿಂದ್ಹೆರಗೇ ಬರುವಾಳೆ ಮಾದೇವಿ

ರಾಜಂಗ್ಣಮೆಟ್ಟ ಇಳದಾಳೆ.

ಹೀಗೆ ಏಳೆಯ ಸರಪಳಿ ಮುಂದುವರಿಯುತ್ತದೆ. ಇಲ್ಲಿ ಕೆಲವು ಕಾವ್ಯಖಂಡಗಳಲ್ಲಿ ಎರಡನೆಯ ಸಾಲಿನ ಪುನರುಕ್ತಿಯನ್ನು ಸೂಚಿಸಲು, ಎರಡನೇ ಸಾಲಿನ ಮುಂದೆ ಗೆರೆಯೆಳೆದು ತೋರಿಸಿದೆ :

ಹನ್ನೆಯ್ದವರಸೀನಾ ಸೆಣ್ಣವಳು ಸೂಬದ್ರೆ
ಮತ್ತೆ ಮಂಗಲಕೆ ನೆರದಾಳೆ /ಅಂದ್ ಮಾದೇವಿ
ಹೂಂಗಿನ ಚಬ್ಬೀ ತಡದಾಳೆ /ಮಾದೇವಿ
ಮಾಳಗ್ಗಿಂದ್ಹೆರಗೇ ಬರೋವಾಳೆ ಮಾದೇವಿ
ರಾಜಂಗ್ಳಮೆಟ್ಟ ಇಳದಾಳೆ /

ಇತ್ಯಾದಿ. ಕೆಲವು ಕಾವ್ಯಖಂಡಗಳಲ್ಲಿ ಹಾಡುಗಾರ್ತಿಯರ ಹಾಡಿನ ಮೂಲ ಸ್ವರೂಪವನ್ನೇ ಬಳಸಿಕೊಳ್ಳಲಾಗಿದೆ.

೪. ಗಾಮೊಕ್ಕಲು :

ಬುಡಕಟ್ಟಿನಿಂದ ಜಾತಿಯಾಗಿ ಮಾರ್ಪಟ್ಟ ಗಾಮೊಕ್ಕಲನ್ನು ಶಿರ್ಶಿ ಸಿದ್ಧಾಪುರ ಕಡೆ ಕೊಟ್ಟೆ ಒಕ್ಕಲೆಂದು, ಕುಮಟಾ ಕಡೆ ಪಟಕಾರರೆಂದು ಕರೆಯುವುದಿದೆ. ಇವರು ತಮ್ಮನ್ನು ಭೂಮಿ ಪುತ್ರರೆಂದೂ ಕರೆದುಕೊಳ್ಳುತ್ತಾರೆ. ಗಾಮೊಕ್ಕಲು ಉಳಿದ ಒಕ್ಕಲು ಬುಡಕಟ್ಟುಗಳಾದ ಹಾಲಕ್ಕಿ ಒಕ್ಕಲು, ಗೊಂಡರು ಮುಂತಾದವರಿಂದ ಬೇರ್ಪಟ್ಟು, ಕಾಡು ತೊರೆದು, ಇಲ್ಲವೆ ಕಾಡು ಕಡಿದು ಗ್ರಾಮವಾಗಿ ಪರಿವರ್ತಿಸಿ, ತಮ್ಮ ಕಾಡಾಡಿತನವನ್ನು ಬಿಟ್ಟು, ಕರಾವಳಿಯ ನದೀ ತೀರದ ಬಯಲು ಪ್ರದೇಶ, 'ಪಡ' ಗಜನಿಭೂಮಿ, ಕುರುವಗಳಲ್ಲಿ ನೆಲೆಸಿ, ಒಕ್ಕಲುತನ ಹಾಗೂ ಗಜನಿಬೇಸಾಯ ಮಾಡಿದರು, ಗ್ರಾಮಕಟ್ಟಿ, ಒಕ್ಕಲುತನ ಮಾಡಿ (ಗ್ರಾಮ > ಗಾಮ + ಒಕ್ಕಲು) ಗಾಮೊಕ್ಕಲು ಎಂದು ತಮ್ಮನ್ನು ಕರೆದುಕೊಂಡರು.

ಇವರ ಮುಖ್ಯ ಉದ್ಯೋಗ ಬೇಸಾಯ. ಇವರಲ್ಲಿ ಬಹುಸಂಖ್ಯಾತರು ಕೃಷಿ ಕಾರ್ಮಿಕರು, ಕೂಲಿಗಳಾಗಿದ್ದಾರೆ, ಅಲ್ಪ ಪ್ರಮಾಣದಲ್ಲಿ ಖಾಸಗಿ ಹಾಗೂ ಸರಕಾರಿ ನೌಕರಿಯಲ್ಲಿದ್ದಾರೆ. ಪ್ರಥಮ ಹಾಗೂ ದ್ವಿತೀಯ ದರ್ಜೆಯ ನೌಕರರು ಅತಿ ಕಡಿಮೆ, ಕೈಬೆರಳೆಣಿಕೆಯ ಕೆಲವರು ವ್ಯಾಪಾರೋದ್ದಿಮೆಗಳಲ್ಲಿ ನಿರತರು. ಇವರು ಉಳಿದ ಬುಡಕಟ್ಟುಗಳಿಗಿಂತ ಹೆಚ್ಚಿನ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದರೂ ಇವರ ಸಾಕ್ಷರತಾ ಪ್ರಮಾಣ ಶೇಕಡಾ ಅಯ್ವತ್ತಕ್ಕಿಂತ ಹೆಚ್ಚಾಗದು. ಹಾಲಕ್ಕಿ ಒಕ್ಕಲು ಹಾಗೂ ಗೊಂಡರಿಗಿಂತ ಸುಧಾರಿಸಿದ ಗಾಮೊಕ್ಕಲರದು ವ್ಯವಸ್ಥಿತವಾದ ಬದುಕು. ಇವರು ವೇಷಭೂಷಣಗಳಲ್ಲಿ ಹಾಲಕ್ಕಿ ಒಕ್ಕಲಿಂದ ತೀರ ಭಿನ್ನ. ಆದರೆ ಗೊಂಡರಿಗೆ ಅತಿ ಸಮೀಪ ; ಇವರು ಶ್ರಮ ಜೀವಿಗಳು, ವಿನಯಶೀಲರು.

ಇತ್ತೀಚೆಗೆ ಕೆಲವರು ತಾರಸಿಯ ಮಹಡಿ ಮನೆಗಳಲ್ಲಿ ವಾಸಿಸುತ್ತಿದ್ದರೂ ಬಹು ಸಂಖ್ಯಾತರು ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿಯೇ ವಾಸಿಸುತ್ತಿದ್ದಾರೆ. ಅಕ್ಕಿ, ರಾಗಿ, ಬೇಳೆ ಕಾಳು, ತರಕಾರಿ ಮೀನು ಮಾಂಸಗಳು ಇವರ ಪ್ರಮುಖ ಆಹಾರ. ವೈಷ್ಣವ ಮತಾವಲಂಬಿಗಳಾದ ಇವರ ಮನೆಯ ಮುಂದೆ ತುಲಸಿ ಕಟ್ಟೆ, ಇಲ್ಲವೇ ತುಲಸಿ ಮನೆಯಿದೆ, ತಿರುಪತಿ ವೆಂಕಟರಮಣನನ್ನು ಕುಲದೇವ ರೆಂದು ಪರಿಗಣಿಸುತ್ತಾರೆ. ತಿರುಪತಿಯ ಯಾತ್ರೆಯನ್ನು ಮಾಡಿ, ಹರಿದಿನವನ್ನಾಚರಿಸುವಲ್ಲಿ ತಮ್ಮ ಬದುಕಿನ ಪರಮಾರ್ಥವನ್ನು ಕಂಡುಕೊಳ್ಳುತ್ತಾರೆ. ಇತ್ತೀಚೆಗೆ ಗಾಮೊಕ್ಕಲು ಆದಿಚುಂಚನಗಿರಿ ಮಠಕ್ಕೆ ನಿಷ್ಠೆ ವ್ಯಕ್ತಪಡಿಸಿ ಸಂಘಟಿತ ರಾಗುತ್ತಿದ್ದಾರೆ. ಗೋಕುಲಾಷ್ಟಮಿ, ದೀಪಾವಳಿ ಹೊಸತು, ಗಂಟಿಹುಣ್ಣಿಮೆ, ತುಲಸಿ ವಿವಾಹ, ಸುಗ್ಗಿ, ಯುಗಾದಿ, ಬಂಡಿ ಹಬ್ಬಗಳನ್ನಾಚರಿಸುತ್ತಾರೆ. ಕೋಳಿಯಂಕ ಬೇಟೆಗಳಿಗೆ ನಿಷೇಧವಿದ್ದರೂ ಕ್ರೀಡಾಸಕ್ತರಾದ ಇವರು ಕದ್ದುಮುಚ್ಚಿ ಯಾದರೂ ಆಟಗಳನ್ನಾಡುತ್ತಾರೆ.

ಜನಪದ ಸಾಹಿತ್ಯ ಇವರಲ್ಲಿ ವಿಪುಲವಾಗಿದ್ದು ಇದರಲ್ಲಿ ಮಹಾಭಾರತ ಹಾಗೂ ಮದುವೆಯ ಹಾಡುಗಳು ಸಿಂಹಪಾಲು ಪಡೆಯುತ್ತವೆ.

೫. ಕಾವ್ಯಖಂಡ ಹಾಡುವ ಸಂದರ್ಭ ಹಾಗೂ ನಿರೂಪಕರು :

ಈ ಸಂಪುಟದಲ್ಲಿ ಸಂಪಾದಿಸಲಾದ ಮಹಾಭಾರತ ಖಂಡಕಾವ್ಯ ಪುಂಜವನ್ನು ಸಂಗ್ರಹಿಸಿದ್ದು ಹೊನ್ನಾವರ ತಾಲೂಕಿನ ಹಳಗೆರೆ, ಮಾವಿನಕುರ್ವೆ ಹಾಗೂ ಮಾಳ್ಕೋಡಿನಲ್ಲಿ. ಈ ಮೂರೂ ಊರುಗಳು ಶರಾವತಿಯ ದಂಡೆಯ ಮೇಲಿನ ಅಕ್ಕಪಕ್ಕದ ಸುಂದರವಾದ ಕುರುವಗಳು. ಈ ಕುರುವಗಳ ದೋಣಿ ಪ್ರಯಾಣ ಆಪ್ಯಾಯಮಾನ. ತೆಂಗು, ಕೌಂಗು, ಬಾಳೆ ಬನಗಳಿಂದ, ಫಲವತ್ತಾದ ಕೆಯ್ವೊಲಗಳಿಂದ ಮನಸೂರೆಗೊಳ್ಳುವ ಈ ನಿಸರ್ಗ ರಮ್ಯತಾಣದಲ್ಲಿ ಹಿಂದೆ ಅಮ್ಮನವರ ಮತ್ತು ಹನುಮಂತ ದೇವರ ಮೆರವಣಿಗೆಯ ಕಾಲಕ್ಕೆ, ದೇವಕಾರ್ಯ ಮಾಡುವಾಗ, ಮದುವೆಯ ನೆಂಟರೂಟದ ಸಮಯದಲ್ಲಿ, ಹೆಣ್ಣಿಗೆ ಬಯಕೆ ಬಡಸುವಾಗ, ಕಳೆ ತೆಗೆಯುವಾಗ, ಸಸಿ ನಾಟಿ ಮಾಡುವಾಗ, ಅಡಿಕೆ ಸುಲಿಯುವಾಗ ಈ ಖಂಡಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುವ ರೂಢಿಯಿತ್ತಂತೆ. ಈಗ ಆ ರೂಢಿ ತಪ್ಪಿ ಹೋಗಿದೆಯಾದರೂ ಕ್ವಚಿತ್ತಾಗಿ ಕೆಲವರು ಈ ಹಾಡುಗಳನ್ನು ತಮ್ಮ ಸ್ಮೃತಿಯ ಒಂದಂಗವಾಗಿಟ್ಟುಕೊಂಡಿರುವುದು ಸಂತೋಷದಾಯಕ ಸಂಗತಿಯಾಗಿದೆ.

ಈ ಮಹಾಭಾರತ ಖಂಡಕಾವ್ಯ ಪುಂಜದ ಧರ್ಮರು, ಗೀಜಗ, ಸುಭದ್ರೆ, ಲಕ್ಮಣ ಈ ಖಂಡಕಾವ್ಯಗಳ ನಿರೂಪಕಿ ಹೊನ್ನಾವರ ತಾಲೂಕಿನ ಹಳಗೆರೆಯ ಕುಪ್ಪಿ (ಸುಬ್ಬಿ) ಬೆಳಿಯಾ ಗೌಡ, ಕುಪ್ಪಜ್ಜಿಯೆಂದು ಊರವರಿಗೆಲ್ಲ ಅಚ್ಚು

ಮೆಚ್ಚಿನವರಾದ ಇವರು ತೀರಿಕೊಂಡೇ ಇಪ್ಪತ್ತೈದು ವರ್ಷಮೇಲಾಯಿತು. ಕುಪ್ಪಜ್ಜಿ ಒಂದು ಕಂಡುಗ ಅಕ್ಕಿಯನ್ನು ಕೊಟ್ಟು ಒಬ್ಬಳಿಂದ ಧರ್ಮರ ಹಾಗೂ ಸುಭದ್ರೆಯ ಹಾಡು ಕಲಿತಿದ್ದಳಂತೆ. ಹಾಡು ಕಲಿಸಿದವರ ಹೆಸರನ್ನವರು ತಮ್ಮ ಇಳಿವಯಸ್ಸಿನಲ್ಲಿ ಮರೆತಿದ್ದಾರೆ. ಕುಪ್ಪಜ್ಜಿಯವರನ್ನು ಹಾಡಿನ ಹಡಗೆಂದರೂ ತಪ್ಪಾಗಲಾರದು. ಅವರಿಗೆ ಮದುವೆ ಶುಭ ಶೋಭನಾದಿಗಳ, ಹಬ್ಬ ಹರಿದಿನಗಳ ಹಾಡುಗಳು ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದವು. ರುಕ್ಮಿಣಿ, ಅರ್ಜುನ, ಸತ್ತಪ್ಪ ಈ ಮೂರು ಹಾಡುಗಳನ್ನು ಹಾಡಿದವರು ಮಾವಿನ ಕುರ್ವೆಯ ಈರಮ್ಮಾಗೌಡ, ಜನಪದ ಹಾಡುಗಳನ್ನು ವಿವಿಧ ಧಾಟಿಯಲ್ಲಿ ಹಾಡಿ, ಕೇಳುಗರನ್ನು ಮಂತ್ರಮುಗ್ಧಗೊಳಿಸುವ ಕಥೆಗಾರಿಕೆ ಈರಮ್ಮನಿಗೆ ಕರಗತ; ಹಾಡುವಾಗ ಹಾಸ್ಯ ಚಟಾಕಿಗಳನ್ನು ಸಿಡಿಸುತ್ತ ಕಥಾ ನಿರೂಪಿಸುವ ಅವರ ಬಗೆ ಮೋಹಕ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇವರೂ ದಮ್ಮಿನರೋಗದಿಂದ ತೀರಿಕೊಂಡಿದ್ದಾರೆ. ಇವರನ್ನು ಹೊನ್ನಾವರದ ಜಾನಪದ ಪ್ರಕಾಶನ ೧೯೮೫ರಲ್ಲಿ ಸನ್ಮಾನಿಸಿ ಗೌರವಿಸಿದೆ. ಕುಸುಮಾಲಿ ಹಾಡನ್ನು ಹಾಡಿದವರು ಬೆಳಿಯಮ್ಮ ಸುಬ್ಬಯ್ಯ ಪಟಕಾರ ; 'ಸೆಣಸೂಬದ್ರೆ'ಯ ಹಾಡುಗಾರ್ತಿ ಲಕ್ಕಿಗೌಡ, ಅಗಮಂಜು ಹಾಡಿನ ನಿರೂಪಕಿ ಗೌರಿ ತಿಮ್ಮಪ್ಪ ಗೌಡ, ಇವರೆಲ್ಲ ಹಳಗೆರೆಯ ನಿವಾಸಿಗಳು. ಇವರು ಹಾಡುಕಲಿತದ್ದು ಕುಪ್ಪಜ್ಜಿಯಿಂದ. ನಾಲ್ವರು ಹೆಂಡಿರು, ಸಾವಿತ್ರಿ ಹಾಡು ಹೇಳಿದವರು ಕನ್ನೆಗೌಡ, ಮಾವಿನಕುರ್ವೆಯ ಇವರು ಹಾಡು ಕಲಿತದ್ದು ಈರಮ್ಮನಿಂದ. ಪ್ರಾರ್ಥನೆ, ನಾರಾಯಣ ದೇವನ ಮದುವೆ, ಅತ್ತಗ್‌ಮಯ್ಯ್ದ್ನಿ, ಕನಕಾಂಗಿ ಕಲ್ಯಾಣ, ಅಭಿಮನ್ಯು, ಕಾವ್ಯಫಲ ಈ ಹಾಡುಗಳ ನಿರೂಪಕಿ ಹನ್ನಿಕ್ಷೇತ್ರಗೌಡ. ಇವರ ತವರು ಮನೆ ಹೊನ್ನಾವರ ತಾಲೂಕಿನ ಅಳ್ಳಂಕಿ. ಮುಂದೆ ಮಾಳ್ಕೋಡಿನ "ಬಾವಂತಿಮನೆ"ಯ ಕ್ಷೇತ್ರ ಗೌಡರ ಪತ್ನಿಯಾಗಿ ಬಂದರು. ಇವರು ನಾಲ್ಕನೆಯ ತರಗತಿಯವರೆಗೆ ಓದಿದವರು. ಗ್ರಾಮ ಪಂಚಾಯತಿಯ ಸದಸ್ಯೆಯಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಇವರು ಹಾಡುವುದನ್ನು ಕಲಿತದ್ದು ಅವರ ತಾಯಿಯಿಂದ. ಕೆರವಳ್ಳಿಯ ಸುಬ್ಬಿಯಂದಲೂ ಕೆಲವು ಹಾಡುಗಳನ್ನು ಕಲಿತ ಇವರು ಇಡಿಯ ಗಾಮೊಕ್ಕಲ ಮಹಾಭಾರತದ ಕಥಾಪುಂಜವನ್ನು. ಹಬ್ಬ ಹರಿದಿನಗಳಿಗೆ ಸಂಬಂಧಿಸಿದ, ಮದುವೆ ದಿಂಡು ಶುಭ ಶೋಭನಾದಿಗಳಿಗೆ ಸಂಬಂಧಿಸಿದ ಹಾಗು ಲಾಲಿ, ಬತ್ತ ಮೆರೆಯುವಾಗಿನ ಹಾಡುಗಳನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ಗಾಮೊಕ್ಕಲಲ್ಲಿ ಪರಂಪರೆಯಿಂದ ಬಂದ ಎಲ್ಲ ಹಾಡುಗಳನ್ನು ದಿನಗಟ್ಟಲೆ ಕುಳಿತು ಹಾಡಬಲ್ಲರು. ಇವರಿಗೆ ಬರುವ ಎಲ್ಲ ಹಾಡುಗಳನ್ನು ಮುದ್ರಿಸಿದರೆ ಸಾವಿರ ಪುಟಗಳನ್ನು ಮೀರಬಹುದಾಗಿದೆ. ಗಾಮೊಕ್ಕಲ ಮಹಾಭಾರತ ಪರಂಪರೆಯ ಹಾಡುಗಾರಿಕೆಯ ಸತ್‌ಸಂಪ್ರದಾಯ

ವನ್ನು ಜೀವಂತ ಉಳಿಕೆಯಾಗಿಸಿಕೊಂಡ ಹನ್ನಿಕ್ಷೇತ್ರ ಗೌಡರನ್ನು ೧೯೬೬ರಲ್ಲಿ ಹೊನ್ನಾವರದ ಜಾನಪದ ಪ್ರಕಾಶನ ಗೌರವಿಸಿ ಸತ್ಕರಿಸಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೨ರಲ್ಲಿ ರಾಜ್ಯಪ್ರಶಸ್ತಿ ನೀಡಿ ಇವರನ್ನು ಗೌರವಿಸಿದ್ದು ಗಾಮೊಕ್ಕಲ ಮಹಾಭಾರತಕ್ಕೆ ಸಂದ ಗೌರವವೆಂದೇ ಹೇಳಬೇಕು.

ಗಾಮೊಕ್ಕಲ ಮಹಾಭಾರತ ಕಥಾಸಾರ :

೧. **ನಾರಾಯಣ ದೇವನ ಮದುವೆ :** ಮನೆ ಮುಂದಿನ ಜಲಾಶಯದಲ್ಲಿ ಕೈಕಾಲು ಮುಖ ತೊಳೆದು ನಾರಾಯಣ ದೇವನು, ದೋತರವುಟ್ಟು, ಮುತ್ತಿನಂಗಿ ಧರಿಸಿ, ಮುಂಡಾಸ ಸುತ್ತಿ, ಹಚ್ಚಡ ಹೊದೆದು, ಉಂಗುರತೊಟ್ಟು ತಂಗಿಯುರಮನೆಗೆ ಬರುತ್ತಾನೆ. ತಂಗಿ ಸುಭದ್ರೆಯು ಹತ್ತಿರ ತನ್ನ ಮದುವೆಗಪ್ಪಣೆಯನ್ನು ಕೇಳುತ್ತಾನೆ. ತಂಗಿ ಸುಭದ್ರೆ, "ಊರಿಗೇ ನೀನರಸು; ಜೀವಕೋಟಿಗೆ ಆಹಾರ ನೀಡುವ ದೊರೆ ನೀನು ಮುದ್ದು ಮದುವೆಯನ್ನು ಮಾಡಿಕೋ" ಎಂದು ಒಪ್ಪಿಗೆಯನ್ನು ಸೂಚಿಸುತ್ತಾಳೆ. ಮುಂದೆ ನಾರಾಯಣ ದೇವ ತಂಗಿಯೊಡಗೂಡಿ, ದೇವತೆಗಳೆಡೆ ಹೋಗಿ ಅವರಿಂದಲೂ ಮದುವೆಗಪ್ಪಣೆಯನ್ನು ಪಡೆದು, ತುಲಸಿಗೆ ಕಾಯಿಟ್ಟು ಕೈಮುಗಿದು ತಂಗಿಯೊಡನೆ ತನ್ನರಮನೆಗೆ ಬರುತ್ತಾನೆ. ಸುಭದ್ರೆ ಮನೆ ಗುಡಿಸಿ ಸಾರಿಸಿ, ರಂಗೋಲಿ ಬರೆದು, ಹೆಗ್ಗರೆಯಿಂದ ನೀರು ತಂದು, ಸಣ್ಣಕ್ಕಿಯನ್ನ, ಹಳ್ಳಗನಕ್ಕಿಯ ಪಾಯಸ, ಕೆಂಪು ಹರಿವೆ, ಹೀರೆ, ಹಾಗಲ, ತೊಂಡೆ, ಗುಳ್ಳೆ, ನೆಲ್ಲಿಕಾಯಿ, ಬಸಲೆ ಸೊಪ್ಪು, ಕಳಲೆ ಮುಂತಾದವುಗಳಿಂದ ಬಹುಬಗೆಯ ಭಕ್ಷ್ಯ ಭೋಜನಗಳನ್ನಟ್ಟು ತಿರುಳು ಬಾಳೆಲೆಯಲ್ಲಿ ಅಣ್ಣನಿಗೆ ಬಡಿಸುತ್ತಾಳೆ. ನಾರಾಯಣ ದೇವ ಊಟ ಮಾಡಿದ ಮೇಲೆ ಅವನಿಗೆ ತಾಂಬೂಲವನ್ನು ನೀಡಿ, ತಾನೂ ಊಟ ಮಾಡಿ ತನ್ನರಮನೆಗೆ ಹೊರಡುತ್ತಾಳೆ.

ಊಟ ಮುಗಿಸಿದ ನಾರಾಯಣದೇವ ತನ್ನುಗ್ರಾಣಕ್ಕೆ ತೆರಳಿ, ತನಗೆ ಹೋಗಿ ಬರಲಿಕ್ಕೆ ಹನ್ನೆರಡು ತಿಂಗಳು ತಡವಿದೆಯೆಂದು, ಹಕ್ಕಿ ಪಕ್ಷಿಗಳಿಗೆ ಹನ್ನೆರಡು ತಿಂಗಳು ಬೇಕಾಗುವಷ್ಟು ಪಡಿಯನ್ನು ತೆಗೆದಿಟ್ಟು ಉಗ್ರಾಣ ಮುಚ್ಚಿ, ತನ್ನ ಪೋಷಾಕು ತೊಟ್ಟು, ನಾಗಬೆತ್ತಹಿಡಿದು, ಬೆಳ್ಳಿರಥವೇರಿ ಕೌಲೀಂದ್ರನ ರಾಜ್ಯಕ್ಕೆ ಹೋಗುತ್ತಾನೆ. ಕೌಲೀಂದ್ರನಿಂದ ಆತಿಥ್ಯವನ್ನು ಸ್ವೀಕರಿಸಿದ ನಾರಾಯಣದೇವ, "ನನಗೆ ತಂದೆ–ತಾಯಿ ಯಾರೂ ಇಲ್ಲ ; ಭಾವಾ ನಿನ್ನ ತಂಗಿ ಮಾದೇವಿಯನ್ನು ನನಗೆ ಕೊಡಬೇಕು. ನನ್ನ ತಂಗಿ ಸುಭದ್ರೆಯನ್ನು ನಿನಗೆ ಧಾರೆಯೆದುಕೊಡುತ್ತೇನೆ ಎಂದು ಕೌಲೀಂದ್ರನನ್ನು ಕೇಳುತ್ತಾನೆ. ಕೌಲೀಂದ್ರ ತಾಯಿಯ ಅಭಿಪ್ರಾಯವನ್ನು ಕೇಳಿ ಅವಳ ಅಭಿಪ್ರಾಯದಂತೆ "ಸಕಣ ಸಾರಾವಳಿ"ಯನ್ನು ಕೇಳಲು ಕೌಲಿಂದ್ರ ನಾರಾಯಣ ದೇವನೊಡನೆ ಭಟ್ಟರ

ಮನೆಗೆ ಬರುತ್ತಾನೆ. ಭಟ್ಟರಿಂದ ಪಂಚಾಂಗ ಬಿಡಿಸಿ ನೋಡಿಸಿದಾಗ ನಾರಾಯಣ ದೇವ ಮಾದೇವಿಯರಿಗೆ ಮದುವೆ ಜಾತಕ ಕೂಡಿಬರುತ್ತದೆ. ಕೌಲೀಂದ್ರ ಸನ್ನೆಯನ್ನು ಮಾಡಿ, ಇನ್ನೊಮ್ಮೆ ಪಂಚಾಂಗ ನೋಡಿಸಿ, ಕೌಲೀಂದ್ರ ಸುಭದ್ರೆಯರಿಗೆ ಮದುವೆ ಕೂಡಿಬರುತ್ತದೆಂದು ಸುಳ್ಳು ಹೇಳಿಸಿ, ಭಟ್ಟರಿಗೆ ಹಣ ನೀಡಿ ಕಪ್ಲಿಂದ್ರನ ಮನೆಗೆ ಬರುತ್ತಾರೆ.

ಕಪ್ಲಿಂದ್ರ ತಾಯಿಯ ಹತ್ತಿರ, "ಗುರುವಾರ ಬಿದಿಗೆ, ಶುಕ್ರವಾರ ತದಿಗೆ, ಶನಿವಾರ ಮಾದೇವಿಯ ಮದುವೆ"ಯೆಂದು ತಿಳಿಸಿ ತಾಯಿಗೆ ಶುಭಕಾರ್ಯದ ಸಿದ್ಧತೆ ಮಾಡಲು ತಿಳಿಸಿ ತಾನು ಮದುವೆಯ ಕರೆಗಾಗಿ ಮಾರಾಯರಕೇರಿಗೆ ತೆರಳಿ ಅವರಿಗೆ ಮದುವೆಯ ವಿಚಾರ ತಿಳಿಸಿ ಮದುವೆಗೆ ಚಪ್ಪರವಿಕ್ಕಲು ಕರೆ ನೀಡುವನು. ಊರನಾರಿಯರಿಗೆ, ಅಡಿಗೆಗೆ ಆಮಂತ್ರಿಸುವನು. ಕೆಲಸಿ, ಕುಂಬಾರ, ಅಗಸ, ಭಟ್ಟರಿಗೆ ವೀಳ್ಯವಿತ್ತು ಮದುವೆಗೆ ಆಮಂತ್ರಿಸುವನು. ಜವಳಿಯ ಅಂಗಡಿಗೆ ಹೋಗಿ ಜವಳಿಯನ್ನು ಅಕ್ಕಸಾಲಿಯೆಡೆ ಹೋಗಿ ಬಂಧಿ, ತೋಳ್ಬಳೆ, ಚಿಂತಾಕು, ಮಣಿ, ಸರಾದಿಗಳನ್ನು ಖರೀದಿಸಿ ಬರುತ್ತಾನೆ.

ಮನೆಯ ಮುಂದೆ ಚಪ್ಪರ ತಳಿರು ತೋರಣಗಳು ಶೋಭಿಸುತ್ತವೆ. ಅಕ್ಕಿಗೇರುವವರು, ರಂಗೋಲಿ ಹಾಕುವವರು, ಚವಕವನ್ನು ತುಂಬುವವರು, ಹಸಗರ ಬರೆಯುವವರು ತಮ್ಮ ತಮ್ಮ ಕಾರ್ಯ ನಿರ್ವಹಿಸಿದರು. ಕುಂಬಾರ ಕುಂಭ ತಂದ ; ಮಡಿವಾಳ ಮೇಲ್ಗಟ್ಟು ಕಟ್ಟಿದ, ಕೆಲಸಿ ಪನ್ನೆಮಾಡಲು ಬಂದ, ನೆಂಟರು ಬಂದು ಮಂಟಪಕಟ್ಟಿದರು, ಕಳಸ ಸಿದ್ಧಗೊಳಿಸಿದರು, ಹಾಲಿಗಿಡ ಹೀಲಿ ಸತ್ತಿಗೆ ಬಂದವು ಭಾವಂದಿರು ತಾಳಿಬಂದಿ ತಂದರು, ಮಾದೇವಿಗೆ ಕಲಶ ನೀರು ಮೀಯಸಿದರು, ಪಾವನಸರ, ಮುತ್ತಿನ ಸರಾದಿ ಆಭರಣ ತೊಡಿಸಿದರು. ಹೂ ಮುಡಿಸಿ ಆರತಿಯೆತ್ತಿದರು, ಕಪ್ಲಿಂದ್ರ ತುಲಸಿ ಪೂಜಿಸಿ ಮಾದೇವಿಗೆ ತುಲಸಿ ತೀರ್ಥ ಪ್ರಸಾದಗಳನ್ನಿತ್ತನು. ಮಾದೇವಿಯನ್ನು ಹಸೆಮಣೆಯ ಮೇಲೆ ಕೂಡ್ರಿಸಿ ಸೇಸೆಯಿಟ್ಟರು.

ಮದುಮಗ ನಾರಾಯಣ ದೇವ ಬಂದ. ಕಪ್ಲಿಂದ್ರ ನಾರಾಯಣ ದೇವನಿಗೆ, ಊರಿಗೆ ದೊರೆ, ಹಕ್ಕಿ ಪಕ್ಕಿಗಳಿಗೆ ಪಡಿ ನೀಡುವ ನೀನೊಬ್ಬನೇ ದಿಬ್ಬಣಕ್ಕೆ ಬಂದೆಯಲ್ಲ, ನಿನಗೆ ಅಕ್ಕ ಭಾವ ಯಾರೂ ಇಲ್ಲವೆ? ನಿನ್ನ ನೀತಿ ನಿನಗೆ ಮಾತ್ರ ಚೆಂದ" ಎಂದಾಗ ನಾರಾಯಣದೇವ ಚಪ್ಪರದಿಂದ ಹೊರಗೆ ಬಂದು, ಮಾಯೆ ಮಾಡಿ ದೇವಲೋಕ, ನಾಗಲೋಕಗಳಿಂದ ದಿಬ್ಬಣಿಗರನ್ನು ನೆರೆಯಿಸುತ್ತಾನೆ. ತಂಗಿ ಸುಭದ್ರೆ ಬರುತ್ತಾಳೆ. ದೇವತೆಗಳು ನಾರಾಯಣ ದೇವನಿಗೆ ಮದುಮಗನ ಸಿಂಗಾರ ಮಾಡುತ್ತಾರೆ. ಬಿರುಸು ಬಾಣಗಳು ಬರುತ್ತವೆ. ತಂಗಿ ಸುಭದ್ರೆ ಕಲಶಕ್ಕೆ ಸಜ್ಜಾಗಿ ನಿಂತಳು. ನಾರಾಯಣ ದೇವ ಸತ್ತಿಗೆಯ ನೆರಳಿಗೆ ಸುಭದ್ರೆಯನ್ನು ಕರೆದು ಸಕಲ ವಾದ್ಯ ಸಹಿತ ದಿಬ್ಬಣಗೂಡಿ ಕಪ್ಲಿಂದ್ರನ ಬಾಗಿಲಲ್ಲಿ

ನಿಲ್ಲುತ್ತಾನೆ. ಒಳಗಿನಿಂದ ಅತ್ತೆ ಬಂದು ಶ್ರೀಕೃಷ್ಣನಿಗೆ ಆರತಿಯೆತ್ತುತ್ತಾಳೆ, ಆತ ಬಲಗಾಲು ಮುಂದಿಟ್ಟು ಧಾರೆಯ ಮಂಟಪಕ್ಕೆ ಬರುತ್ತಾನೆ. ತಂಗಿ ಸುಭದ್ರೆ ಹಸಗರಕ್ಕೆ ಹೋಗಿ ಮಾದೇವಿಗೆ ಒಡವೆ ವಸ್ತ್ರಾದಿಗಳಿಂದ ಸಿಂಗರಿಸಿ ಹೂ ಮುಡಿಸಿ ತೊಂಡಿಲು ಕಟ್ಟುತ್ತಾಳೆ, ಕಪ್ಲಿಂದ್ರ ಮಾದೇವಿಯನ್ನು ಹೆಗಲಿಗೇರಿಸಿಕೊಂಡು ಧಾರೆ ಮಂಟಪಕ್ಕೆ ತಂದು ತುಂಬೆ ಹೂವು, ತುಲಸಿ ಕದರು ಸಹಿತ ನೊರೆ ಹಾಲಗಿಂಡಿಯನ್ನು ಹೊತ್ತು ತಂಗಿಯ ಧಾರೆಯೆರೆಯುತ್ತಾನೆ.

ಕಪ್ಲಿಂದ್ರ ತಂಗಿಗೆ ಬಳವಳಿಯನ್ನು ನೀಡಿ, ತಂಗಿಯನ್ನು ಬೀಳ್ಕೊಡುತ್ತಾನೆ. ನಾರಾಯಣ ದೇವ ದಿಬ್ಬಣದೊಡನೆ ಚಪ್ಪರಕ್ಕೆ ಬಂದು, ಮಾಯಕದಿಂದ ದೇವತೆಗಳ ದಿಬ್ಬಣವನ್ನು ಹಿಂದಿರುಗಿಸಿ ಬೆಳ್ಳಿ ರಥವೇರಿ ಮಾದೇವಿಯೊಡನೆ ಹೊರಡುತ್ತಾನೆ.

ಮನೆಯ ಬಾಗಿಲಲ್ಲಿ ಮದುಮಕ್ಕಳು ನಿಂತಾಗ ಸುಭದ್ರೆ ಆರತಿಯೆತ್ತುತ್ತಾಳೆ. ಮದುಮಕ್ಕಳು ತುಲಸಿಯ ಮುಂದೆ ನಿಂತಾಗ ಬಾಸಿಂಗ ಬಿಚ್ಚುತ್ತಾರೆ. ದಂಪತಿಗಳು ದೇವರಿಗೆ ವಂದಿಸುತ್ತಾರೆ.

೨. **ರುಕ್ಮಿಣಿ :** ಚಕ್ರಪಾಣಿಯ ಹೆಂಡತಿ ರುಕ್ಮಿಣಿಯು ದಾಸಿಯನ್ನು ತನ್ನ ತಂಗಿ ದೇವಿಯರನ್ನು ಕರೆಯಲು ಕಳಿಸಿದಾಗ, ದೇವಿಯರು ಮಗಳ ಮದುವೆಯೋ, ಮಗನ ಚೊಳಂಗಿಯೋ ಮಗಳು ಮೈನೆರೆದ ಸುದ್ದಿಯೋ ಯಾಕಾಗಿ ತನ್ನನ್ನು ಅಕ್ಕ ಕರೆದಿದ್ದಾಳೆಂದು ತಿಳಿಯದೆ, ಅಚ್ಚರಿಯಿಂದ ಅಕ್ಕನ ಮನೆಗೆ ವಸ್ತ್ರಾಭರಣ ಭೂಷಿತೆಯಾಗಿ ಬಂದು, ಅಕ್ಕನಿಗೆ ಕರೆದ ಕಾರಣವನ್ನು ಕೇಳುತ್ತಾಳೆ. ಅಕ್ಕ ರುಕ್ಮಿಣಿ ಹೂಮುಡಿಯಲು ಅವಳನ್ನು ಕರೆದುದಾಗಿ ತಿಳಿಸಿ, ಹೂಬುಟ್ಟಿ ಹಿಡಿದು, ಹೂದೋಟಕ್ಕೆ ಹೋಗಿ ಹಲವು ಬಗೆಯ ಹೂಗಳನ್ನು ಕೊಯ್ದು ತಂದು ಹೂದಂಡೆ ಕಟ್ಟುವಳು. ತಂಗಿ ದೇವಿಯರು, "ಅಕ್ಕ ಕಟ್ಟಿದ ಮಂಡೆಯನ್ನು ಬಿಚ್ಚದೆ, ಹೂವಿನ ಮೇಲೆ ಹೂವನ್ನು ಮುಡಿಸು" ಎಂದು ಅಕ್ಕನ ಕೈಯಿಂದ ಹೂದಂಡೆ ಮುಡಿಸಿಕೊಳ್ಳುತ್ತಾಳೆ.

ಹೂಮುಡಿದು ದೇವಿಯರು ಬರುವಾಗ ನಾರಾಯಣ ದೇವರು, ಸಂಪಿಗೆ ಬನದಲ್ಲಿ ದೇವಿಯರನ್ನು ತಡೆಯುತ್ತಾರೆ. ಆಗ ದೇವಿಯರಿಗೆ ಸುವರ್ಣದ ಮುಳ್ಳು ಚುಚ್ಚುತ್ತದೆ. ಆಗ ದೇವರು "ಮುಳ್ಳು ಚುಚ್ಚಿದರೆ ತೆಗೆಯಲಿಲ್ಲಾರಿಲ್ಲ" ಎಂದು ಅವಳನ್ನು ಬೆನ್ನಟ್ಟಿ ರುಕ್ಮಿಣಿಯೆಡೆ ಬರುತ್ತಾರೆ. ಇದನ್ನು ದೂರದಿಂದ ಗಮನಿಸಿದ ರುಕ್ಮಿಣಿ, ಕಂಚಿನ ಬಾಗಿಲಿಕ್ಕಿ, "ನಾನು ಬರುವಷ್ಟರಲ್ಲಿ ಹಿಂದಿರುಗಿ ಹೋದಳು, ಇಲ್ಲಿದ್ದರೆ ಅವಳನ್ನು ಗಕ್ಕನೆ ತೊಳೆಯುತ್ತಿದ್ದೆ, ಗಕ್ಕನೆ ತೊಳೆದರೆ ಅಕ್ಕಿಗೂ ಮಣ್ಣು. ಇಕ್ಕೇರಿಯ ಕುಂಬಾರನಿಗೆ ನಾನು ಕದ ತೆರೆಯಬೇಕೆ?" ಎಂದು ಒಗಟಾಗಿ ಮಾತಾಡುತ್ತಾಳೆ. ಆಗ ದೇವರು, "ನಾನು ಕುಂಬಾರನಲ್ಲ,

ವನದ ಜಾಜಿ, ನೇರಿಲು ಹಾಗೂ ಪಕ್ಷಿಯೇ ಮೊದಲಾದವುಗಳಿಗೆ ನಾನು ಸ್ವಾಮಿ ಕದವನ್ನು ತೆಗೆ" ಎನ್ನುತ್ತಾರೆ. ಕದ ತೆರೆದು ರುಕ್ಮಿಣಿ "ಯಾರೋ ಎಂದು ತಿಳಿದೆ ದೇವರೆಂದು ಅರಿಯಲಿಲ್ಲ ಸಿಟ್ಟಾಗಬಾರದು" ಎಂದು ಪಾದಕ್ಕೆರಗುತ್ತಾಳೆ. ದೇವರು ರುಕ್ಮಿಣಿಯ ಮುಖವನ್ನು ಹಿಡಿದೆತ್ತಿ, "ರುಕ್ಮಿಣಿ ನಾನೂ ನೀನೂ ಜೊತೆಗೂಡಿರುವ ಈ ಹಿತ್ತಿಲಿನ ತೆಂಗು, ಬಾಳೆ, ಕಂಚು, ತಾಮ್ರವೆಲ್ಲ ಚಿಕ್ಕಂದಿನಿಂದ ತಂದ ಮಡದಿಗಾಗಲಿ" ಎಂದು ಬೆಳ್ಳಿ ಶಾಸನವನ್ನು ಬರೆಯುತ್ತಾನೆ.

ಅರ್ಜುನ : ಅರ್ಜುನ ತನ್ನ ಗಿಳಿಗಳನ್ನು ಕರೆದು, ದ್ರೌಪದಿಯ ಪುರಕ್ಕೆ ಹೋಗಿ, ಅವಳನ್ನು ಕರೆತರಲು ಹೇಳುತ್ತಾನೆ. ಗಿಳಿಗಳು ಅರ್ಜುನನ ಸಂದೇಶವನ್ನು ಹೊತ್ತು ದ್ರೌಪದಿಯೆಡೆ ಹೋಗಿ, ಅರ್ಜುನನ ಸಂದೇಶವನ್ನು ಮುಟ್ಟಿಸುತ್ತವೆ. ದ್ರೌಪದಿ ಗಿಳಿಗಳ ಹತ್ತಿರ "ನನ್ನ ಧಾರೆಯೆರೆಯುವಾಗ ನನಗೆ ಮೂರು ವರ್ಷ, ಅರ್ಜುನ ಕಾನಲ್ಲಿ ಮನೆ ಕಟ್ಟಿ 'ನಾಗಣಿ' (ನಾಗಕನ್ನೆ) ಜೊತೆಗಿದ್ದಾನೆ. ನನ್ನೊಡಲ ತಾಪವನ್ನೇನು ಹೇಳಲಿ? ನನ್ನೊಡಲ ತಾಪ ನಾಗಣಿಗೆ ಅರಗಲಿ. ಗಿಳಿಗಳೇ ನಾನು ಬರುತ್ತೇನೆಂಬ ಸತ್ಯವನ್ನು ಅರ್ಜುನನಿಗೆ ಹೇಳಿರಿ" ಎಂದು ಹೇಳಿ, ಅಲಂಕಾರ ಭೂಷಿತೆಯಾಗಿ ಅರ್ಜುನನೆಡೆಗೆ ಹೋದರೆ ಅವನ ಸುಳಿವಿಲ್ಲ. "ನಾನು ಬರುವುದಿಲ್ಲವೆಂದು ಹೇಳಿದರೂ ಓಲೆಯನ್ನು ಕಳುಹಿ ಈಗ ಎಲ್ಲಿ ಹೋದ ?" ಎಂದು ಸಿಟ್ಟಿನಿಂದ ತನ್ನ ಮನೆಗೆ ಹಿಂದಿರುಗುತ್ತಾಳೆ.

ದ್ರೌಪದಿಯು ಮನೆಗೆ ತೆರಳಿದ ಮೇಲೆ ನಾಗಣಿ, "ಅರ್ಜುನ ಸುಮನಿದ್ರೆಯಿಂದ ಎಚ್ಚರಾಗಲಿ" ಎಂದು ಶಾಪವಿಡುತ್ತಾಳೆ. ಆಗ ಅರ್ಜುನ ನಿದ್ದೆ ತಿಳಿದೆದ್ದು ತನ್ನ ಪೋಷಾಕು ತೊಟ್ಟು ಹೊರಬಂದು, "ನಾಗಿಣಿಗೆ ನಿದ್ದೆ ಕವಿಯಲಿ" ಎಂದು ಶಾಪವಿತ್ತು ಮನೆಯಿಂದ ಹೊರಟು, ಆ ಮೇಲೆ ಅವಳ ನಿದ್ದೆ ತಿಳಿಯಲಿ ಎಂದು ಹೊರಡುತ್ತಾನೆ. ನಿದ್ದೆಯಿಂದೆದ್ದ 'ನಾಗಣಿ' ಅರ್ಜುನನನ್ನು ಕಾಣದೆ ಹೊರಬಂದು ಅವನನ್ನೆದುರಿಸಿ, "ಮೋಜುಗಾರ ಗಂಡನಿಗೆ ಎಷ್ಟು ಮೋಜು" ಎಂದು ಅವನ ವಸ್ತ್ರಾಭರಣಗಳನ್ನೆಲ್ಲ ಕಸಿದುಕೊಂಡು ತನ್ನರಮನೆಗೆ ಬರುತ್ತಾಳೆ. ಆಗ ಅರ್ಜುನ ತನ್ನ ಮನೆ ಕೂಸನ್ನು ಕರೆದು, ನಾಗಣಿ ತನ್ನ ವಸ್ತ್ರಾಭರಣ ದೋಚಿದ್ದನ್ನು ಕುಸುಮಾಲಿಗೆ ತಿಳಿಸಿ ಬರಲು ಕಳಿಸುತ್ತಾನೆ.

ಮನೆಕೂಸು ಕುಸುಮಾಲೆಯೆಡೆ ಬಂದು, ನಡೆದ ವೃತ್ತಾಂತವನ್ನು ತಿಳಿಸಿ, "ಅರ್ಜುನ ದೇವನ ಉಡುಗೆ ತೊಡುಗೆಯನ್ನು ಕೊಡಬೇಕು" ಎಂದು ಅಂಗಲಾಚುತ್ತಾನೆ. ಆಗ ಕುಸುಮಾಲಿ ನಾಗಣಿಯೆಡೆ ಬಂದು ಅವಳು ಅರ್ಜುನನಿಂದ ಕಸಿದು ತಂದ ವಸ್ತ್ರ ಒಡವೆಗಳನ್ನು ಕೂಡಲೇ ಕಳಿಸಬೇಕು, ಇಲ್ಲದಿದ್ದರೆ ಮುಂಗುಸಿಯನ್ನು ತಂದು ನಿನ್ನ ಕತೆ ಮುಗಿಸುತ್ತೇನೆಂದು

ಬೆದರಿಕೆಯೊಡ್ಡಿ ಅವಳಿಂದ ಅರ್ಜುನನ ವಸ್ತ್ರ ಒಡವೆಗಳನ್ನೆಲ್ಲ ತರಿಸಿಕೊಡುತ್ತಾಳೆ. ಅರ್ಜುನ ಆ ಪೋಷಾಕನ್ನು ತೊಟ್ಟು ದ್ರೌಪದಿಯೆಡೆ ಬರುತ್ತಾನೆ. ಬಹು ದಿನಕ್ಕೆ ತನ್ನೆಡೆಗೆ ಬಂದ ಪತಿಯನ್ನು ದ್ರೌಪದಿ ಆದರದಿಂದ ಬರಮಾಡಿಕೊಂಡು, ಅವನ ಜೊತೆ ಉಂಡು ತಾಂಬೂಲ ಸೇವಿಸಿ ಹಾಸಿಗೆಯಲ್ಲಿ ಪವಡಿಸುತ್ತಾಳೆ. ಅವರು ಪವಡಿಸಿ ಸುಖ ನಿದ್ದೆ ಮಾಡಿದ್ದನ್ನು ನಾಗಣಿ ಕನಸಿನಲ್ಲಿ ಕಂಡು, ಕಸವಿಸಿಗೊಂಡು, ಅರ್ಜುನ ದ್ರೌಪದಿಯರು ಸುಖ ನಿದ್ದೆ ಮಾಡುವೆಡೆ ಬಂದು, ದ್ರೌಪದಿಗೆ ವಿಷವುಣಿಸಿ, ತನ್ನರಮನೆಗೆ ಹಿಂದಿರುಗುತ್ತಾಳೆ.

ಮುಂಜಾನೆ ಅರ್ಜುನನೆದ್ದು ದ್ರೌಪದಿಯ ಹತ್ತಿರ "ಸುತ್ತಲಿನ ಗರತಿಯರು ಎಸರೆತ್ತಿ, ಮೊಸರು ಕಡಿದು ಕೊಡ ಹಿಡಿದು ನೀರಿಗೆ ಹೋದರು. ನಮ್ಮನೆಯ ನಿದ್ಗೇಡಿಗೆ ನಿದ್ರೆ ಮುಗಿಯಲಿಲ್ಲ" ಎಂದು ಮುಸುಕು ತೆರೆದು ನೋಡಿದರೆ ದ್ರೌಪದಿ ಸತ್ತು ಹೋಗಿದ್ದಾಳೆ. ಇದನ್ನು ನೋಡಿದ ಅರ್ಜುನ ಮರುಗುತ್ತಾನೆ. ತನ್ನ ಮನೆಕೂಸನ್ನು ಕರೆದು ಕುಸುಮಾಲೆಯೆಡೆ ಕಳಿಸುತ್ತಾನೆ. ಮನೆಕೂಸ ಕುಸುಮಾಲಿಗೆ ದ್ರೌಪದಿಯನ್ನು ನಾಗಣಿ ಕಚ್ಚಿ ಸಾಯಿಸಿದ ಸಮಾಚಾರವನ್ನು ತಿಳಿಸಿದ ತತ್‌ಕ್ಷಣ, ನಾಗಕನ್ನೆಯೆಡೆ ಬಂದು ಉಣಿಸಿದ ವಿಷವನ್ನು ಹಿಂದಕ್ಕೆಳೆಯಲು ಆದೇಶಿಸುತ್ತಾಳೆ. ನಾಗಕನ್ನೆ ದ್ರೌಪದಿಗಿಟ್ಟ ವಿಷವನ್ನು ಹಿಂದೆಗೆದುಕೊಳ್ಳುತ್ತಾಳೆ. ದ್ರೌಪದಿ ಮೈಮುರಿದೆದ್ದು ಕುಳಿತು ಅಕ್ಕ ಕುಸುಮಾಲಿಯೆಡೆ ಬಂದು ಕುಳ್ಳುತ್ತಾಳೆ. ಅಕ್ಕ ಕುಸುಮಾಲಿ ತಂಗಿ ದ್ರೌಪದಿಗೆ ತಾಂಬೂಲ ನೀಡುತ್ತಾಳೆ. ದ್ರೌಪದಿ ಕುಸುಮಾಲಿಗೆ ವಂದಿಸಿ, "ಅಕ್ಕ ನನ್ನ ಹೊಟ್ಟೆಯಲ್ಲಿ ಹೆಣ್ಣೊಂದು ಹುಟ್ಟಿದರೆ ನಿನ್ನ ಹೆಸರನ್ನು ಇಡುತ್ತಿದ್ದೆ, ಆದರೆ ನನಗೆ ಹೆಣ್ಣು ಸಂತಾನವೇ ಇಲ್ಲ ಎಂದು ಹಳಹಳಿಸುತ್ತಾಳೆ.

ಈ ಹಾಡಿನ ಇನ್ನೊಂದು ಪಾಠವಿದ್ದು ಅದರಲ್ಲಿ ಅರ್ಜುನನ ಸ್ಥಾನದಲ್ಲಿ ಸೂಲಿದೇವ ಬರುತ್ತಾನೆ. ಉಳಿದ ಅಂಶಗಳಲ್ಲಿ ಆ ಪಾಠ ಈ ಹಾಡಿನಿಂದ ಭಿನ್ನವಾಗಿಲ್ಲ.

ಕುಸುಮಾಲಿ : ಪಟ್ಟ ಮಂಚದಲ್ಲಿ ಕುಳಿತ ದ್ರೌಪದಿಯು ಅರ್ಜುನನೊಡನೆ ತಾಂಬೂಲ ಸೇವಿಸುವಾಗ, "ಯಾವ ನಾರಿ ಚೆಂದ, ಯಾವ ನಾರಿಯ ಮೇಲೆ ನಿಮಗೆ ಕಡುಮೋಹ?" ಎಂದು ಅರ್ಜುನನಿಗೆ ಪ್ರಶ್ನಿಸಿದಾಗ ಆತ, "ಅಂದಕ್ಕೆ ದ್ರೌಪದಿ, ಚೆಂದಕ್ಕೆ ಕುಸುಮಾಲಿ, ಕುಸುಮಾಲಿಯ ಮೇಲೆ ನನಗೆ ಕಡುಮೋಹ" ಎನ್ನುತ್ತಾನೆ. ಈ ಉತ್ತರದಿಂದ ಸಿಡಿಮಿಡಿಗೊಂಡ ದ್ರೌಪದಿ, "ಕುಸುಮಾಲಿ ತೋಟದಲ್ಲಿರುವ ತಾಟಗತಿ ಅವಳ ಮೇಲೆ ಜೋಗಿ ಜಂಗಮರ ಒಲುಮೆಯೆ?" ಎಂದು ಕೂಡಲೇ ಅರ್ಜುನ ಜೋಗಿಯ ವೇಷ ತೊಟ್ಟು ತಂಬೂರಿ ಬಾರಿಸಿ ಕುಣಿಯುತ್ತ ಕುಸುಮಾಲಿಯ ಮನೆಗೆ ಹೋಗುತ್ತಾನೆ.

ಕುಸುಮಾಲಿ ಹೂದೋಟದಲ್ಲಿ ಹೂ ಕೊಯ್ಯುವಾಗ ಅವಳೆಡೆ ಬೈರಾಗಿ ಬರುವುದನ್ನು ಕಂಡು ಗಾಬರಿಗೊಳ್ಳುತ್ತಾಳೆ. ಹೂವನ್ನಲ್ಲೆ ಒಗೆದು ಮನೆಗೆ ಬಂದು ಬಾಗಿಲು ಕಾಯುವವರಿಗೆ, "ಎಂದೂ ಬಾರದೇಯಿದ್ದ ಜೋಗಿಯೊಬ್ಬ ಬರುತ್ತಿದ್ದಾನೆ. ಆತನಿಗೆ ಪ್ರವೇಶ ನೀಡಕೂಡದೆಂದು" ಮಾಳಿಗೆಯೇರುತ್ತಾಳೆ.

ಜೋಗಿ ಕುಸುಮಾಲಿಯ ಮನೆಗೆ ಬಂದು, ಬಾಗಿಲು ತಡೆದವರನ್ನೆಲ್ಲ ಬದಿಗೆತಳ್ಳಿ "ನಾನು ನಿಮಗೂ, ನಿಮ್ಮಮ್ಮನಿಗೂ ಹಾಗೂ ನಿಮ್ಮ ಸಂಬಳಕ್ಕೂ ಕರ್ತನು" ಎಂದು ಒಳಹೊಕ್ಕು ಪದ್ಮಾಸನ ಹಾಕಿ ಕೂಡ್ರುತ್ತಾನೆ. ಕುಸುಮಾಲಿ ಹಿಂಬಾಗಿಲಿನಿಂದ ಬಂದು ದಾಸಿಯರಿಗೆ "ಜೋಗಿಯ ಲೂಟಿ ಅತಿಯಾಗಿದೆ, ಅವನಿಗೆ ಪಡಿ ನೀಡಿ ಕಳಿಸಿಬಿಡಿ" ಎನ್ನುತ್ತಾಳೆ. ದಾಸಿಯರು ಪಡಿಕೊಡಹೋದರೆ, "ನಿಮ್ಮಕ್ಕನ ಕೈಪಡಿಯೇಬೇಕು" ಎಂದು ಹಠ ಮಾಡುತ್ತಾನೆ. ಈ ವಿಷಯವನ್ನು ದಾಸಿಯರು ಕುಸುಮಾಲಿಗೆ ತಿಳಿಸಿದಾಗ, ಕುಸುಮಾಲಿ ಕಣ್ಣೀರಿಟ್ಟು, ಸಾದಾ ಉಡುಪು ತೊಟ್ಟು, ಮಂಡೆ ಬಿಚ್ಚಿ ಅಂದವನ್ನು ಕೆಡಿಸಿಕೊಂಡು, "ಇಕ್ಕೊಳ್ಳೊ ಜೋಗಿ ಪಡಿದಾನ"ವನ್ನುತ್ತಾಳೆ. ಜೋಗಿ ಪಡಿ ಮುಟ್ಟದೆ, "ಇನ್ನೊಂದು ಮೆಟ್ಟಿಲು ಇಳಿದು ಪಡಿಕೊಟ್ಟರೆ ನಿನ್ನ ಮುತ್ತೈದೆ ತನಕ್ಕೆ ಹರಸುತ್ತೇನೆ" ಎನ್ನುತ್ತಾನೆ. ಆಗ ಕುಸುಮಾಲಿ, "ಜೋಗಿ ನೀನೇನು ಹರಸುವುದು? ನನ್ನ ಮಾವನ ಮಗ ಸುಖ ಬಾಳಿದ್ದರೆ ನನ್ನ ಮುತ್ತೈದೆ ತನಕ್ಕೆ ಕೊರತೆಯಿಲ್ಲ" ಎಂದು ಇನ್ನೊಂದು ಮೆಟ್ಟಿಲಿಳಿದು ಪಡಿಕೊಡಲು ಹೋದಾಗ ಜೋಗಿ, "ನಿನ್ನ ಪುತ್ರ ಸಂತಾನಕ್ಕೆ ಹರಸುತ್ತೇನೆ" ಮತ್ತೊಂದು ಮೆಟ್ಟಿಲಿಳಿ"ಯೆನ್ನುತ್ತಾನೆ. ಮತ್ತೊಂದು ಮೆಟ್ಟಿಲಿಳಿದು ಪಡಿಕೊಡಹೋದರೆ, "ಅಕ್ಕಿಕೊಳ್ಳಲು ಜೋಳಿಗೆಯಿಲ್ಲ ನೀನೇ ಎಸರೆತ್ತು" ಎನ್ನುತ್ತಾನೆ. ಕುಸುಮಾಲಿ, "ಎಸರೆತ್ತಲು ಮನೆಯಲ್ಲಿ ಅತ್ತೆ, ಮಾವ, ಗಂಡ ಯಾರೂ ಇಲ್ಲ, ಮಠದ ಜಗುಲಿಗೆ ಹೋಗು" ಎನ್ನುತ್ತಾಳೆ. ಹಠ ಬಿಡದೆ ಜೋಗಿ, "ಗೋವೆಗೆ ಹೋಗೋಣ ಬರುತ್ತೀಯಾ, ಗೋವೆದಂಡೆ ಮುಡಿಸುತ್ತೇನೆ" ಎನ್ನುತ್ತಾನೆ. "ತನ್ನ ಮಾವನ ಮಗ ಬದುಕಿದ್ದರೆ ನನಗೆ ಅದಕ್ಕೆ ಬರಗಾಲವಿಲ್ಲ" ಎನ್ನುತ್ತಾಳೆ ಕುಸುಮಾಲಿ. ಆಗ ಜೋಗಿ "ಆಡಾಡಿದ ಮಾತು ಗೆಲ್ಲುತ್ತೀಯೆ, ಆದರೆ ಹಳ್ಳ ದಾಟುವಾಗ ನನ್ನನ್ನು ನೆನೆಯುತ್ತೀಯೆ" ಎಂದು ಜೋಗಿಯೆಂದಾಗ, "ಹಳ್ಳದಾಟುವಾಗ ಅತ್ತೆ, ಮಾವ ಮತ್ತು ಕೈಹಿಡಿದ ಗಂಡನನ್ನು ನೆನೆಯುತ್ತೇನೆ. ಸೋರೆ ಬುರುಡೆ ನಿನ್ನನ್ನಾರು ನೆನೆಯುತ್ತಾರೆ?" ಎಂದು ಹೇಳುತ್ತಲೇ ಕುಸುಮಾಲಿ, ಅಮೃತ ಗಿಂಡಿಯನ್ನು ತಂದು ಅದರ ನೀರನ್ನು ಜೋಗಿಯ ಮೇಲೆ ತಳಿಯುತ್ತಾಳೆ. ಜೋಗಿಗೆ ನಿದ್ದೆ ಕವಿಯುತ್ತದೆ. ತಡಮಾಡದೆ ಕುಸುಮಾಲಿ ಕುಂತಿಯೆಡೆ ಹೋಗಿ, "ಜೋಗಿಯೊಬ್ಬ ಬಂದಿದ್ದಾನೆ, ಅವನ ಲೂಟಿ ಅತಿಯಾಗಿದೆ. ಅವನಿಗೆ ಹೊಡೆದು ಕಳಿಸಲೆ ?" ಎಂದಾಗ ಕುಂತಿ "ಹಾಗೆ ಮಾಡಿದರೆ ನಿನ್ನಣ್ಣ ಸೂಲಿಸುಕ್ರನಿಗೆ ಕುಂದು, ಅವನಿಗೆ ಅಟ್ಟು ಬಡಿಸಿ ಕಳಿಸು"

ಎನ್ನುತ್ತಾಳೆ. ಕುಸುಮಾಲಿ ಸಿಟ್ಟಿನಿಂದ, "ಗಂಡುರೂಪದಲ್ಲಿ ಚೆಲುವನಾದ ನಿಮ್ಮ ಮಗ ಹೆಂಡಿರನ್ನು ಅಸಮಾನವಾಗಿ ಬಳಸುತ್ತಿದ್ದಾನೆ" ಎಂದು ಹೇಳಿ ಧರ್ಮನೆಡೆ ನಡೆದಾಗಲೂ ಕುಂತಿಯಿಂದ ಪಡೆದ ಉತ್ತರವನ್ನೇ ಪಡೆಯುತ್ತಾಳೆ. ಆಗ ಕುಸುಮಾಲಿ ತನ್ನಣ್ಣನಿಗೆ, "ಇಂದು ಮಧ್ಯಾಹ್ನದೊಳಗೆ ನೀವಿಲ್ಲಿಗೆ ಬರದಿದ್ದರೆ ನಾನು ಪ್ರಾಣ ತೆಗೆದುಕೊಳ್ಳುತ್ತೇನೆ" ಎಂದು ಗಿಳಿಗಳ ಮೂಲಕ ಓಲೆ ಕಳಿಸುತ್ತಾಳೆ. ಆಗ ಸೂಲಿಸುಕ್ರನು ಅವನ ತಾಯಿ "ಹೆಣ್ಣುಮಕ್ಕಳು ಹೊತ್ತಿಗೆ ಹನ್ನೆರಡು ನೆನೆಸುತ್ತಾರೆ, ಅವರ ಮಾತು ಹೊತ್ತುಕೊಂಡು ಹೋಗಬಾರದು" ಎಂದರೂ ಕೇಳದೆ ತಂಗಿಯ ಮನೆಗೆ ಬೆಳ್ಳಿಯ ಖಡ್ಗ ಹಿಡಿದು ಆನೆಯೇರಿ ತಂಗಿಯರಮನೆಗೆ ಬರುತ್ತಾನೆ. ಆಗ ಕುಸುಮಾಲಿ ಅಮೃತ ನೀರನ್ನು ಸಿಂಪಡಿಸಿ ಜೋಗಿಯನ್ನು ಎಚ್ಚರಿಸುತ್ತಾಳೆ. ಆಗ ಜೋಗಿ ಹಳ್ಳದೆಡೆ ಹೋಗಿ ತನ್ನ ಜೋಗಿ ವೇಷವನ್ನು ನೀರಲ್ಲಿ ಬಿಟ್ಟು ಅರ್ಜುನ ರೂಪದಲ್ಲಿ ಕುಸುಮಾಲಿಯೆಡೆ ಬರುತ್ತಾನೆ. ಆಗ ಸೂಲಿಸುಕ್ರನು ಬೇಸರದಿಂದ ಅರ್ಜುನನಿಗೆ, "ಹೆಂಡಿರನ್ನಾಳುವ ಗಂಡರಲ್ಲಿ ಚೆಲುವಾ, ನನ್ನ ತಂಗಿ ನಿನಗೆ ಬೇಡವಾದರೆ ಬಿಡಬಹುದು" ಎನ್ನುತ್ತಾನೆ. ಆಗ ಅರ್ಜುನ "ಭಾವಾ ನೀನು ನಿನ್ನ ಹೆಂಡತಿಯನ್ನು ಬಿಟ್ಟರೆ, ನಾನು ನಿನ್ನ ತಂಗಿಯನ್ನು ಬಿಡುತ್ತೇನೆ" ಎನ್ನುತ್ತಾನೆ. ಆಗ ಸಿಟ್ಟಿನಿಂದ ಸೂಲಿಸುಕ್ರ ತನ್ನ ಖಡ್ಗವನ್ನು ಹಿರಿದಾಗ ಕುಸ್ಮಾಲಿ ಅಣ್ಣನನ್ನು ತಡೆದು "ಅಣ್ಣ ಸಿಟ್ಟಿನಿಂದ ನನ್ನ ಮುತ್ತೈದೆತನವನ್ನು ಅಳಿಯದಿರು" ಎಂದು ಅಂಗಲಾಚುತ್ತಾಳೆ. ಆಗ ಸೂಲಿಸುಕ್ರ ಹಿರಿದ ಖಡ್ಗವನ್ನು ಒರೆಗೆ ಸೇರಿಸಿ ತನ್ನ ದಂಡಿನೊಡನೆ ಹಿಂದಿರುಗುತ್ತಾನೆ.

ಕುಸುಮಾಲಿ ಹಲವು ಬಗೆಯ ಮೇಲೋಗರವನ್ನಟ್ಟು ಅರ್ಜುನನಿಗೆ ಬಡಿಸುತ್ತಾಳೆ. ಆಗ ಅರ್ಜುನ "ಅನ್ನ ಬಡಿಸುವಾಗ ಯಾರನ್ನು ನೆನೆದೆ ? ಬಡಿಸಿದ ಅನ್ನ ನನಗೆ ಹೆಚ್ಚಾಗಿದೆ; ಇಬ್ಬರೂ ಒಟ್ಟಿಗೇ ಉಣ್ಣೋಣ" ಎಂದು ಕುಸುಮಾಲಿಯ ತೋಳು ಹಿಡಿಯುತ್ತಾನೆ. ಕುಸುಮಾಲಿ ಉಪ್ಪು ತರುವ ನೆವ ಹೇಳಿ, ಕೈತಪ್ಪಿಸಿಕೊಂಡು ಬಸ್ತಿಗೆ ಹೋಗುತ್ತಾಳೆ. ಬಸ್ತಿಯನ್ನು ಪೂಜಿಸಿ, ಬಸ್ತಿ ಒಡನಲ್ಲಿ ಬರುತ್ತೇನೆನ್ನುತ್ತಾಳೆ. ಕುಸುಮಾಲಿಯ ಮಾತುಗಳನ್ನಾಲಿಸಿದ ಗಿಳಿಗಳು, ಅರ್ಜುನನಿಗೆ ಸುದ್ದಿ ಮುಟ್ಟಿಸುತ್ತವೆ. ಅರ್ಜುನ ಕುಸುಮಾಲಿಯೆಡೆಬಂದು ಮನೆಗೆ ಹಿಂದಿರುಗಲು ಕೇಳಿಕೊಳ್ಳುತ್ತಾನೆ. ಬಾರದಾಗ ಅವಳ ರಟ್ಟೆಯನ್ನು ಎಳೆಯುತ್ತಾನೆ. ಕುಸುಮಾಲಿ ಅರಿಸಿಣ ಎಲೆಯಾಗಿ ಹುಸಿದು ಬಂದಳು. ಮತ್ತು ಅರ್ಜುನನಿಗೆ "ವರ್ಷಕ್ಕೊಮ್ಮೆ ಮುಂಜಾನೆ ಸುರಗಿಯ ಹೂವಾಗಿ ಬರುತ್ತೇನೆ, ಹೆಣ್ಣಿನ ಮುಡಿಯೇರುತ್ತೇನೆ, ನೀವು ನೋಡಿ ಸಂತೋಷಪಟ್ಟರಾಯಿತು. ನೀವೀಗ ಅರಮನೆಗೆ ಹೋಗಿ" ಎನ್ನುತ್ತಾಳೆ.

ಸುಭದ್ರೆ : ಸುಭದ್ರೆಯು ಮದುವೆಗೆ ನೆರೆದಾಗ, ಅವಳತ್ತಿಗೆ ಮಾದೇವಿ, "ನಾನು ನಿನ್ನಣ್ಣನಿಗೆ ವಧುವಾಗಿ ಬಂದಿದ್ದೆ, ನೀನು ನನ್ನಣ್ಣನಿಗೆ ಜೋಡಿಯಾಗು"

ಎಂದು ಹಸ್ತ ಕಡಗವನ್ನು ಸುಭದ್ರೆಯ ತೋಳಿಗಿಡುತ್ತಾಳೆ. ಸುಭದ್ರೆ ಪಾಂಡವರಿಗಲ್ಲದೆ ಅನ್ಯರಿಗೆ ಪಟ್ಟುಗ ಹಿಡಿಯಲಾರೆನೆಂದು ಪ್ರತಿಭಟಿಸಿದಾಗ, ಮಾದೇವಿ ಸಿಟ್ಟಿನಿಂದ ಗಂಡನೆಡೆ ನಡೆದು ಗಂಡನಿಗೆ ತನ್ನ ಬಯಕೆಯನ್ನೊರೆಯುತ್ತಾಳೆ. ಗಂಡ ಅವಳಿಷ್ಟದಂತೆ ಮದುವೆಗೆ ಸಿದ್ಧಗೊಳಿಸಲು ತಿಳಿಸುತ್ತಾನೆ. ಮಾದೇವಿ, "ಶನಿವಾರ ಸುಭದ್ರೆಯ ಮದುವೆ", ಮದುವೆಯ ಸಿದ್ಧತೆಗಳನ್ನು ಮಾಡಿರಿ ಎಂದು ದಾಸಿಯರಿಗೆ ತಿಳಿಸಿ ತಾನು ಅಣ್ಣ ಕೌಲಿಂದ್ರನ ಮನೆಗೆ ಹೋಗುತ್ತಾಳೆ. ಈ ಸಮಾಚಾರ ತಿಳಿದ ನಾರಾಯಣದೇವ, "ಇನ್ನೇಳು ದಿನಗಳಲ್ಲಿ ಸುಭದ್ರೆಯ ಮದುವೆ, ಅಷ್ಟರಲ್ಲಿ ನಿನ್ನ ತೊಂಡಿಲು ಬಾಸಿಂಗ ತೂಗಾಡದಿದ್ದಲ್ಲಿ ಕೂಸು ಪರರಿಗಾಗುತ್ತದೆ" ಎಂದು ಅರ್ಜುನನಿಗೆ ಓಲೆ ಕಳಿಸುತ್ತಾನೆ.

ಗಿಳಿಗಳ ಮೂಲಕ ಬಂದ ಪತ್ರವನ್ನೋದಿದ ಅರ್ಜುನ ತನ್ನ ನಾರಿಯರಿಗೆ, "ನಾನು ಗಂಗಾ ಸ್ನಾನಕ್ಕೆ ಹೋಗುತ್ತೇನೆ" ಎಂದು ತಿಳಿಸಿ, ನಾರಿಯರಿಗೆ ನಿದ್ದೆ ಹತ್ತಿದಾಗ, ಅವರಿಗೆ ಇನ್ನೂ ನಿದ್ದೆ ಕವಿಯಲೆಂದು ಶಾಪವಿತ್ತು ಮನೆಯಿಂದ ಹೊರಡುತ್ತಾನೆ. ಹೋಗುತ್ತಾ ತಾರಿ ದಾಟಿ, ತಾರಿ ಕೂಸನಿಗೆ ತಾನು ಹೋದ ವಿಷಯುವನ್ನು ನಾರಿಯರಿಗೆ ಹೇಳಬೇಡಿ, ಅವರನ್ನು ತಾರಿಯಿಂದ ದಾಟಿಸಬೇಡಿರೆಂದು ಹೇಳಿ ಹೊರಡುತ್ತಾನೆ.

ಈ ಕಡೆ ನಾರಿಯರು ನಿದ್ದೆಯಿಂದೆಚ್ಚತ್ತು ಬಿಟ್ಟ ಮಂಡೆಯಲ್ಲಿಯೇ ತಾರಿಯವರೆಗೆ ಬಂದು ತಾರಿಕೂಸನನ್ನು ಅರ್ಜುನನ ಕುರಿತು ವಿಚಾರಿಸಿ ಸುಳಿವು ಸಿಗದೆ ಕೊರಗುತ್ತಾರೆ. "ಕಂಡು ಇರುವುದಕ್ಕಿಂತ ಕಾಣದೆ ಇರುವುದೊಳ್ಳೆಯದು. ಕಂಡು ಅಗಲಿಕೆಯುಂಟಾದರೆ ಕಂಡಗ ಮೆಣಸನ್ನು ಅರಿದು ಕುಡಿದಂತಾಗುತ್ತದೆ" ಎಂದು ವ್ಯಥೆಯಿಂದ ಮನೆಗೆ ಹೋಗುತ್ತಾರೆ. ಈ ಕಡೆ ಅರ್ಜುನ "ಇಷ್ಟಕ್ಕೆ ಬಂದವರೇ, ಇಷ್ಟು ವ್ಯಥೆ ಪಟ್ಟರೆ, ನನ್ನ ಮಾವನ ಮಗಳೆಷ್ಟು ಮರುಗುವಳೊ?" ಎಂದಂದುಕೊಂಡು ಬಡಮಾಣಿಯ ವೇಷದಿಂದ ಮುಂದುವರಿಯುತ್ತಾನೆ. ಹೋಗುವ ದಾರಿಯಲ್ಲಿ ಸಿಕ್ಕ ಪಾಂಡ್ವಾಳ ಹಕ್ಕಿಗೆ, "ದೇವರ ತಂಗಿ ನನ್ನನ್ನು ನೆನೆಯುತ್ತಾಳೆಯೆ?" ಎಂದು ಪ್ರಶ್ನಿಸುತ್ತಾನೆ. ಪಾಂಡ್ವಾಳ ಹಕ್ಕಿ, "ದೇವರ ತಂಗಿಗೂ ನಿನಗೂ ಏನು ಸಂಬಂಧ, ಅವಳು ನಿನ್ನನ್ನು ನೆನೆಯುವದಿಲ್ಲ" ಎನ್ನುತ್ತದೆ. ಆಗ ಅರ್ಜುನ ಸಿಟ್ಟಿನಿಂದ "ನೀ ಕುಳಿತ ರಾಜ್ಯ ಶುಭವಿಲ್ಲ" ಎಂದು ಶಪಿಸುತ್ತಾನೆ. ಮುಂದೆ ಹೋಗಿ ಕಂಡ ಗಿಳಿಗಳಿಗೂ ಇದೇ ಪ್ರಶ್ನೆ ಕೇಳುತ್ತಾನೆ. ಅವು "ದೇವರ ತಂಗಿ ನಿಮ್ಮನ್ನು ನೆನೆಯುತ್ತಾಳೆ" ಎಂದಾಗ, ಅರ್ಜುನ ಆನಂದದಿಂದ "ನೀವು ಕುಳಿತ ರಾಜ್ಯ ಶುಭ ; ನೀವು ಕಚ್ಚಿದ ಎರೆ ಹುಸಿಯಲ್ಲ" ಎಂದು ಹರಸುತ್ತಾನೆ.

ಅರ್ಜುನ ಹಸ್ತಿನಾಪುರದ ಸಮೀಪ ಬಂದಾಗ, ಎದುರು ಬಂದ ಅಗಸಗಿತ್ತಿಯ ಹತ್ತಿರ ತನ್ನವಸ್ತ್ರ ಒಗೆದುಕೊಡ ಹೇಳುತ್ತಾನೆ. ಅವಳು ಹೆಂಗಸರ ವಸ್ತ್ರದಲ್ಲಿ ಗಂಡಸರ ವಸ್ತ್ರ ಬೆರಸಲೊಪ್ಪುವುದಿಲ್ಲ. ಆಗ ಅಲ್ಲಿಗೆ ಬಂದ ಅಗಸಗಿತ್ತಿಯ ಗಂಡ ಹೆಂಗಸರ ಹತ್ತಿರ ಬಂಡು ಮಾಡುವವನಿಗೆ ಚಬಕದಲ್ಲಿ ಬಿಗಿಯಲೇನು" ಎನ್ನುತ್ತಾನೆ. ಆಗ ಸಿಟ್ಟಿನಿಂದ ಅರ್ಜುನ, "ನೀನು ಒಗೆಯುವ ಹಳ್ಳ ಕದಡಿಹೋಗಲಿ, ನಿನ್ನ ಮನೆ ಮಾಡು ಹೊಗೆಯಲಿ" ಎಂದು ಶಾಪವೀಯುವನು. ಗಾಬರಿಗೊಂಡ ಅಗಸ ನಾರಾಯಣ ದೇವನೆಡೆ ಹೋಗಿ, ತಾನು ಬಡಮಾಣಿಯಿಂದ ಶಾಪಗ್ರಸ್ತನಾದ ವಿಷಯ ತಿಳಿಸುವನು. ಆಗ ನಾರಾಯಣದೇವ ಆತ ಬಡಮಾಣಿಯಲ್ಲ ಸುಭದ್ರೆಯ ಪುರುಷ" ಎಂದು ತಿಳಿಸಿ ಅವನ ವಸ್ತ್ರ ಒಗೆದು ಕೊಡ ಹೇಳುತ್ತಾನೆ. ಅಗಸ ಅರ್ಜುನನೆಡೆ ಹೋದಾಗ ಆತ ಮಣಿನಾಗವನ್ನೆಳತಂದು ಅದರ ಹೆಡೆಯ ಮೇಲೆ ವಸ್ತ್ರವನ್ನೊಗೆದು ತನ್ನ ಸಾಮರ್ಥ್ಯವನ್ನು ತೋರಿಸಿ ಅವನಿಗಿತ್ತ ಶಾಪವನ್ನು ಹಿಂದೆಗೆಯುತ್ತಾನೆ.

ಆ ಮೇಲೆ ಅರ್ಜುನ ಮಾಣಿ ವೇಷವನ್ನು ಬದಲಿಸಿ ಸಂನ್ಯಾಸಿಯ ವೇಷಧರಿಸಿ, ನಾರಾಯಣ ದೇವನ ಮನೆಗೆ ಬಂದು, ಒಡೆದ ನೆಲವನ್ನು ನೇರ್ಪುಗೊಳಿಸಿ, ಸಾರಣೆ, ಕಾರಣೆ ಗೈಯ್ಯುವ ದಾಸಿಯರಿಗೆ, "ಮೊನ್ನೆ ಸತ್ತವರ ಹೊಲೆಯೇನು?" ಎಂದಮಂಗಲ ನುಡಿಯುತ್ತಾನೆ. ಆಗ ಗೌಡಿಯರು, "ಸುಭದ್ರೆಯ ಮದುವೆ ಶನಿವಾರ, ನಾಳೆ ಬಂದು ನೀನೂ ಒಂದು ತುತ್ತುಣ್ಣಬಹುದೆನ್ನುತ್ತಾರೆ. ಆಮೇಲೆ ಸಂನ್ಯಾಸಿ ನಾರಾಯಣ ದೇವನ ಹತ್ತಿರ ತನ್ನ ಹೊಟ್ಟೆ ಹಸಿದಿದೆಯೆಂದಾಗ ನಾರಾಯಣದೇವ ಅವನನ್ನು ಸುಭದ್ರೆಯ ಮನೆಗೆ ಕಳಿಸುತ್ತಾನೆ.

ಸನ್ಯಾಸಿ ತನ್ನ ಜುಟ್ಟಿಗೆ ಮಲ್ಲಿಗೆ, ಸಂಪಿಗೆ ಹೂಗಳನ್ನು ಸಿಕ್ಕಿಸಿಕೊಂಡು ಸುಭದ್ರೆಯರಮನೆಗೆ ಬಂದುದನ್ನು ಗಮನಿಸಿದ ಸುಭದ್ರೆ, ಗೌಡಿಯರನ್ನು ಕರೆದು ಅವನಿಗೆ ಭಿಕ್ಷೆ ನೀಡಿ ಕಳಿಸ ಹೇಳುತ್ತಾಳೆ. ದಾಸಿಯರು ಪಡಿ ತಂದುಕೊಟ್ಟರೆ, "ನಿಮ್ಮಕ್ಕನ ಕೈಪಡಿಯೇ ಬೇಕು" ಎಂದು ಹಠ ಹಿಡಿಯುತ್ತಾನೆ. ಸುಭದ್ರೆ ಪಡಿ ತಂದಾಗ, "ಜೋಳಿಗೆಯನ್ನು ತಂದಿಲ್ಲ ನೀನೇ ಎಸರಿಗೆತ್ತು" ಎನ್ನುವನು. "ಮನೆಯಲ್ಲಾರಿಲ್ಲ ನೀನು ಮಠದ ಜಗುಲಿಗೆ ಹೋಗೆಂದು" ಸುಭದ್ರೆ ಹೇಳಿದರೂ ಸಂನ್ಯಾಸಿ ಹಠ ಸಡಿಲಿಸುವುದಿಲ್ಲ. ಸುಭದ್ರೆ ಸಂನ್ಯಾಸಿಯ ಹಠಮಾರಿತನವನ್ನು ನಾರಾಯಣದೇವನಿಗೊರೆದರೂ ಆತ "ಒಂದೆರಡು ದಿನ ಬಂದು ಉಂಡು ಹೋಗುವ ಸಂನ್ಯಾಸಿಗೆ ಅಡಿಗೆ ಮಾಡಿ ಬಡಿಸು" ಎಂದೇ ಹೇಳಿಕಳಿಸುತ್ತಾನೆ. ಸುಭದ್ರೆ ಅಡಿಗೆಯಟ್ಟು ಊಟಕ್ಕೆ ಕರೆದರೆ, ನೀರು ಕಾಸಿ ಕಮ್ಮೆಣ್ಣೆಯನ್ನುದ್ದಲು ಸುಭದ್ರೆಗೆ ಆದೇಶಿಸುತ್ತಾನೆ. ಉಪಾಯಗಾಣದ ಸುಭದ್ರೆ ಮತ್ತೆ ಗೌಡಿಯರನ್ನು

ನಾರಾಯಣದೇವನೆಡೆ ಕಳಿಸಿದರೆ, ಆತ ಅವರ ಬೆನ್ನಮೇಲೆ ಬಾರೇರುವಂತೆ ಹೊಡೆದು ಬಡಿದು ಕಳಿಸುತ್ತಾನೆ. ಗೌಡಿಯರು ಮೈ ತಿಕ್ಕಿಕೊಳ್ಳುತ್ತ ಸುಭದ್ರೆಯೆಡೆಗೆ ಬಂದು, "ಜೋಗಿಯು ಹತ್ತಿರ ಕಂತೆ ಕಪ್ಪಡವಿಲ್ಲ, ಜೋಳಿಕೆಯಿಲ್ಲ, ಮಂಚಕೊಪ್ಪುವ ಬಿಳಿಯೆಲ್ಲೆ ಹಿಡಿದು ಬಂದಿದ್ದಾನೆ" ಎಂದು ಸಂನ್ಯಾಸಿಯ ವಿಷಯದಲ್ಲಿ ಸಂದೇಹತಾಳುತ್ತಾರೆ. ಆಗ ಜೋಡಿ, ಕಂತೆ, ಕಪ್ಪಡ, ಜೋಳಿಗೆಯನ್ನೆಲ್ಲ ಹಾರುವರ ಮನೆಯಲ್ಲಿಟ್ಟಿದ್ದೇನೆ. ಹಾರುವರು ಮದುವೆಯಲ್ಲಿ ಬಿಳಿಯೆಲೆಯನ್ನು ನೀಡಿದರು" ಎಂದವರ ಸಂದೇಹ ನಿವಾರಣೆ ಮಾಡುತ್ತಾನೆ. ಸುಭದ್ರೆ ಅವನನ್ನು ಸಂನ್ಯಾಸಿಯೆಂದು ನಂಬಿ, ಅವನಿಗೆ ನೀರು ಕಾಸಿ ಕಮ್ಮೆಣ್ಣೆ ತಿಕ್ಕುತ್ತಾಳೆ. ಆಗ ಸಂನ್ಯಾಸಿ ಅವಳ ಕಂಕಣವನ್ನು ತಿದ್ದುತ್ತಾ, "ಇದು ಕವ್ವರು ತೊಡಿಸಿದ ತೊಡುಗೆಯೇನು" ಎಂದಾಗ, ಸುಭದ್ರೆ ಅಚ್ಚರಿಯಿಂದ "ನೀನು ಯಾವೂರ ಸಂನ್ಯಾಸಿ?" ಎನ್ನುತ್ತಾಳೆ. ಅದಕ್ಕೆ ಸಂನ್ಯಾಸಿ ತಾನು ಹಸ್ತಿನಾಪುರದವನೆನ್ನುತ್ತಾನೆ. ಆಗ ಸುಭದ್ರೆ, "ಹಸ್ತಿನಾಪುರದಲ್ಲಿ ನನ್ನತ್ತೆ ಮಾವ, ಅವರ ಮಕ್ಕಳಾದ ಧರ್ಮ, ಭೀಮ, ನಕುಲ, ಸಹದೇವ ಕ್ಷೇಮವೇ?" ಎಂದು ಸಂನ್ಯಾಸಿಗೆ ಕೇಳಿದಾಗ, "ಐವ್ವರಲ್ಲಿ ನಾಲ್ವರ ಹೆಸರನ್ನು ಹೇಳಿ ಇನ್ನೊಬ್ಬನ ಹೆಸರನ್ನು ಮರೆತೆಯಾ?" ಎಂದು ಪ್ರಶ್ನಿಸುತ್ತಾನೆ. ಆಗ ಸುಭದ್ರೆ ನಾಚಿ "ಚಿಕ್ಕಂದಿನಲ್ಲಿ ನನ್ನನ್ನು ಇನ್ನೊಬ್ಬನಿಗೆ ಕೊಡುತ್ತೇನೆಂದು ಹೇಳಿದುದರಿಂದ ಅವನ ಹೆಸರು ಹೇಳಲಿಕ್ಕೆ ಹಿಂಜರಿದೆ" ಎನ್ನುತ್ತಾಳೆ. ಸುಭದ್ರೆ ಸಂನ್ಯಾಸಿಗೆ ಕಮ್ಮೆಣ್ಣೆ ತಿಕ್ಕಿ, ಸ್ನಾನ ಮಾಡಿಸಿ, ಊಟ ಬಡಿಸಿ ಹಿಂದಿರುಗುವಾಗ ಅರ್ಜುನ ಅವಳ ನಳತೋಳನ್ನು ಹಿಡಿಯುತ್ತಾನೆ. "ಎಲೆ ಹೆಣ್ಣೆ ನಾನು ನೀನು ಕೂಡಿ ಉಣ್ಣೋಣ" ಎನ್ನುತ್ತಾನೆ. ಸುಭದ್ರೆ ಉಪ್ಪು ಬಡಿಸುವ ನೆವದಲ್ಲಿ ಅವನಿಂದ ತಪ್ಪಿಸಿಕೊಂಡು ಹೊರಬಂದು ಒಂದು ಮಾವಿನ ಮರಕ್ಕೆ ಹಗ್ಗ ಕಟ್ಟಿ "ಪಾಪದ ಫಲುಗುಣನು ಪುಣ್ಯವಿಲ್ಲದವನು" ಎಂದು 'ಗಳಪಾಶ' ಹಾಕಿಕೊಂಡಳು.

ಗಿಳಿಗಳಿಂದ ಸುದ್ದಿ ತಿಳಿದ ಅರ್ಜುನ ಸುಭದ್ರೆಯೆಡೆ ಹೋಗಿ ಅಮೃತ ನೀರು ಚಿಮುಕಿಸಿ ಅವಳನ್ನು ಬದುಕಿಸಿ, ತಾನೇ ಅರ್ಜುನನೆಂದು ಸಾಬೀತುಪಡಿಸುತ್ತಾನೆ. ನಾರಾಯಣ ದೇವನಿಗೆ "ಕೂಸಿನ ಪ್ರಾಣ ಮಾಣಿಯ ಕಯ್ಯಲ್ಲಿದೆ. ಕೂಸನ್ನು ಮಾಣಿಗೆ ಧಾರೆಯೆರೆದು ಹೋಗಬೇಕು" ಎಂದು ಅರ್ಜುನ ಓಲೆ ಬರೆಯುತ್ತಾನೆ. ನಾರಾಯಣ ದೇವ ಬಂದು ಅರ್ಜುನನಿಗೆ ಸುಭದ್ರೆಯನ್ನು ಧಾರೆಯೆರೆಯುತ್ತಾನೆ.

ಅರ್ಜುನ ಸುಭದ್ರೆಯೊಡನೆ ಹೊರಡುವಾಗ, ಕೌರವರ ದಿಬ್ಬಣ ಎದುರಾಗುತ್ತದೆ. ಅರ್ಜುನ ಕೌರವರನ್ನು ಎದುರಿಸಿ ಹಣಿಯ ಹೊರಟಾಗ ಸುಭದ್ರೆ ತಡೆದು, "ಮದುಮಕ್ಕಳೆನ್ನುವವರು ಮೂರು ದಿನ ದೇವರು. ದೇವರನ್ನು ಕೊಲ್ಲಬಾರದು" ಎಂದು ಮದುವಣಿಗನಾಗಿ ಬಂದ ಕೌರವನನ್ನು ಅರ್ಜುನ

ಕೊಲ್ಲುವುದನ್ನು ತಡೆಯುತ್ತಾಳೆ. ಅರ್ಜುನ ಕೌರವೇಂದ್ರ ಹಾಗೂ ಮಾದೇವಿಯರನ್ನು ಹಾಗೆಯೇ ಬಿಟ್ಟುಗೊಟ್ಟು, ಸುಭದ್ರೆಯೊಡನೆ ತನ್ನರಮನೆಗೆ ಹೊರಟು, ತನ್ನರಮನೆಯ ನಾರಿಯರಿಗೆ, "ಇಂದ್ರಕನ್ನೆ ಕಸತೆಗೆ, ದೇವಕನ್ನೆ ಹಸೆಹಾಕು, ದೇವರ ತಂಗಿಗೂ ತನಗೂ ಸೆಳಮಂಚ ಸಿದ್ಧವಾಗಲಿ" ಎಂದು ಆದೇಶಿಸುತ್ತಾನೆ. ನಾರಿಯರು, "ನಮ್ಮನ್ನು ಹೋಲುವವರು ಈ ಪ್ರಪಂಚದಲ್ಲಿಲ್ಲ, ಆದರೂ ದೇವರ ತಂಗಿ ಮಾತ್ರ ನಮಗಿಂತ ಚೆಲುವೆ," ಎಂದು ಅವರೆಲ್ಲ ಚೆನ್ನಾಗಿ ಉಳಿಯುತ್ತಾರೆ.

ಲಕ್ಮಣ : ಪಟ್ಟೆ ದೋತ್ರವನ್ನುಟ್ಟ ಮುತ್ತಿನ ಮುಂಡಾಸತೊಟ್ಟ 'ಇಸರರು' ಕವ್ಲರ ಮನೆಗೆ ಹೋಗಿ "ನಮ್ಮಲ್ಲಿ ಹೆಣ್ಣಿದೆ ನಿಮ್ಮಲ್ಲಿ ಗಂಡಿದೆ ಮದುವೆ ಮಾಡೋಣ" ಎಂದು ತಮ್ಮ ಮಗಳ ಮದುವೆಯ ಪ್ರಸ್ತಾಪವನ್ನು ಮಾಡಿ, ಕವ್ಲರನ್ನು ಒಪ್ಪಿಸುತ್ತಾರೆ. ಈ ಸುದ್ದಿಯನ್ನು ಗಿಳಿಗಳು ಲಕ್ಮಣನೆಡೆಗೆ ಬಂದು "ಮಾಳಿಗೆಯಲ್ಲಿ ಹಾಲನ್ನವುಣ್ಣುವ ಲಕ್ಮಣ ನಿನ್ನ ಮಾವನ ಮಗಳನ್ನು ಬೇರೆಡೆ ಕೊಡುತ್ತಾರೆ" ಎಂದು ತಿಳಿಸುತ್ತವೆ. ಆ ಕೂಡಲೇ ಲಕ್ಮಣ ಮಾವನ ಮನೆಗೆ ಹೋಗಿ, ಹವಳ ಸುರಿಯುತ್ತಿರುವ ಅತ್ತೆಯ ಹತ್ತಿರ "ಮಾವನೆಲ್ಲಿ" ಎಂದು ಪ್ರಶ್ನಿಸುತ್ತಾನೆ. ಅತ್ತೆ, "ಇನ್ನೊಂದರಗಳಿಗೆಯಲ್ಲಿ ಬರುತ್ತಾರೆ" ಎಂದು ಹೇಳುತ್ತಿರುವಾಗಲೇ "ಮಾದೇವಿಯನ್ನು ಬೇರೆಯವರಿಗೆ ಧಾರೆಯೆರೆದು ಕೊಟ್ಟರೆ ರಾಮನಾಣೆಯಿದೆ, ಭೀಮನಾಣೆಯಿದೆ" ಎಂದು ಆಣೆಯಿಟ್ಟು, ಸಣ್ಣ ಮಾವ ಪರವಿಂದ್ರರ ಮನೆಗೆ ಹೊರಡುತ್ತಾನೆ. ಅವರ ಹತ್ತಿರ "ಮಾವನ ಮಗಳನ್ನು ಬೇರೆಯವರಿಗೆ ಕೊಡುತ್ತಾರಂತೆ ನಾನು ತಂದುಕೊಳ್ಳಬೇಕೆಂದಿದ್ದೆ" ಎಂದು ತನ್ನ ಹಕ್ಕು ಚಲಾಯಿಸುತ್ತಾನೆ. ಆಗ ಸಣ್ಣ ಮಾವ, "ನಿನಗೆ ಬೇರೆಯ ಹೆಣ್ಣನ್ನು ತಂದು ಮದುವೆ ಮಾಡಿದರಾಯ್ತು" ಎಂದು ಸಮಾಧಾನಪಡಿಸಿದರೂ ಕೇಳದೆ ಮನೆಗೆ ಬಂದು, "ಮಾವನ ಮಗಳನ್ನು ಮದುವೆಯಾಗುವವರೆಗೆ ಊಟವಿಲ್ಲ" ಎಂದು ತಾಯಿಗೆ ತಿಳಿಸಿ ಮುಸುಕಿಟ್ಟು ಮಲಗಿ ಬಿಡುತ್ತಾನೆ.

ಇತ್ತ ಇಸರರು, "ಶನಿವಾರ ಮಾದೇವಿಯ ಮದುವೆ, ಮದುವೆಗೆ ದಿಬ್ಬಣ ಸಹಿತವಾಗಿ ಬಂದು ಬಾಳೆಯ ಬನದಲ್ಲಿ ನಿಲ್ಲಬೇಕು" ಎಂದು ಕವ್ಲರಿಗೆ ಹೇಳಿ ಬರುತ್ತಾನೆ. ಮನೆಗೆ ಬಂದಾಗ ಇಸರರ ಹೆಂಡತಿ ಲಕ್ಮಣ ಬಂದು ಆಣೆಯಿಟ್ಟು ಹೋದ ವಿಚಾರವನ್ನು ತಿಳಿಸುತ್ತಾಳೆ. ಆಗ ಇಸರರು, "ಇಲ್ಲಿ ಬಂದವನು ನಿಲ್ಲದೇ ಹೋದ. ನಿಂತಿದ್ದರೆ ಅವನ ಮುಂದಲೆಯನ್ನು ಹಿಡಿದೆಳೆಯುತ್ತಿದ್ದೆ" ಎಂದು ಕೆಂಡಕಾರುತ್ತಾನೆ. ಆ ಮೇಲೆ ಮದುವೆಯ ವೀಳ್ಯವನ್ನು ತೆಗೆದುಕೊಂಡು, ಹಸಗರ ಬರೆಯುವವರಿಗೆ, ಬಿನ್ನಾಣಿ, ಆಚಾರಿ, ಕುಂಬಾರ ಮುಂತಾದವರಿಗೆ ನೀಡಿ, ಇಂದ್ರ ಲೋಕದ ಪಟ್ಟೆ, ಸೊನಗಾರನಿಂದ ತೋಳ್ಬಳೆ, ಕಟ್ಟಾಣಿ, ಮಣಿಸರಗಳನ್ನು ತರುತ್ತಾನೆ.

ಲಕ್ಮಣ ಬೊಗಸೆ ತುಂಬ ಹಣವನ್ನೊಯ್ದು, ಸಿಂಪಿಯಿಂದ ಮದುವೆಯ ವಸ್ತ್ರ, ಗುಡಗಾರನಿಂದ ಬಾಸಿಂಗ ತೊಂಡಿಲ, ಸೊನಗಾರನಿಂದ ಚಿನ್ನಾಭರಣಗಳನ್ನು ತಂದು, ಜೋಳಗೆಯೊಂದರಲ್ಲಿ ತುಂಬಿಕೊಂಡು ದೇವರಿಗೆ ಕೈಮುಗಿದು, ಜೋಗಿಯ ವೇಷವನ್ನು ತೊಟ್ಟು, ನಾರಿಯರ ಕೇರಿಗೆ ಹೋಗುತ್ತಾನೆ. ಮೇಲಿನ ಹಾಗೂ ಕೆಳಗಿನ ಕೇರಿಯ ನಾರಿಯರಿಗೆ, “ಮದುವೆಯ ಮನೆಗೆ ಬರುತ್ತೀರೇನು?” ಎಂದು ಕೇಳುತ್ತಾನೆ. ಅವರು ತಾವು ಜೋಗಿಯ ಬೆನ್ನು ಹತ್ತಿ ಬರುವುದಿಲ್ಲ ಎಂದು ಹೇಳಿದ್ದನ್ನು ಕೇಳಿ, ಮುಗುಳ್ನಕ್ಕು ಇಸರರ ಮನೆಗೆ ಹೋಗಿ ಅಂಗಳದಲ್ಲಿ ಕೂತು ಕೊಳ್ಳುತ್ತಾನೆ.

ಮದುವೆಯ ಚಪ್ಪರ ಹಾಕುತ್ತಿರುವ ಇಸರರಿಗೆ ಜೋಗಿ, “ನಿನಗೆ ಅಣ್ಣ, ತಮ್ಮ, ಸೋದರಳಿಯ ಯಾರೂ ಇಲ್ಲವೇ? ಒಬ್ಬರೇ ಚಪ್ಪರ ಹಾಕುತ್ತೀರಲ್ಲ” ಎಂದು ಛೇಡಿಸುತ್ತಾನೆ. ಆಗಲೇ ಕುಂಬಾರ, ಬಿನ್ನಾಣಿ, ಆಚಾರಿ, ಅಗಸ ಮುಂತಾದ ಆಯಗಾರರು ಬಂದು ತಮ್ಮ ತಮ್ಮ ಕಾರ್ಯ ನಿರ್ವಹಿಸುತ್ತಾರೆ. ಹೆಂಗಸರು ಹಸಗರ ಬರೆಯುತ್ತಾರೆ. ಮದುವೆಗೆ ಮಂಟಪ ಸಿದ್ಧವಾಗುತ್ತದೆ. ಇಸರರ ಮಡದಿ ಹೊನ್ನ ಮಣಿಯ ಮೇಲೆ ಕುಳಿತ ಮಾದೇವಿಗೆ ಸೇಸೆಯಿಡುತ್ತಾಳೆ. ಆಗ ಜೋಗಿಯೂ ತನ್ನ ಮೈಮೇಲೆ ಸೇಸೆ ತಳಿದುಕೊಳ್ಳುತ್ತಾನೆ. ಇದನ್ನು ನೋಡಿದ ನಾರಿಯರು, “ಎಲೆ ಜೋಗಿ ಮಾದೇವಿಗೆ ತಂದ ಸೇಸೆಯನ್ನು ನೀನೇಕೆ ತಳಿದುಕೊಂಡೆ” ಎಂದು ಕೇಳುತ್ತಾರೆ. ಆಗ ಜೋಗಿ, “ಸೇಸೆ ಕಾಣದೆ ಹನ್ನೆರಡು ವರ್ಷಗಳಾದವು, ಈಗ ಸಿಕ್ಕಿತು ತಳಿದುಕೊಂಡೆ” ಎನ್ನುತ್ತಾನೆ. ಮಾದೇವಿಗೆ ‘ಚಿಗರು’ ತಿಕ್ಕಿದಾಗ, ಜೋಗಿಯೂ ಚಿಗುರು ತಿಕ್ಕಿಕೊಳ್ಳುತ್ತಾನೆ. ಅವಳಿಗೆ ಪನ್ನೆ ಮಾಡಿದಾಗ ಜೋಗಿ ಪನ್ನೆಯನ್ನು, ಕಲಶ ನೀರಿನ ಸ್ನಾನ ಮಾಡಿಸಿದಾಗ ಜೋಗಿ ತಾನೂ ಕಲಶ ನೀರಿನ ಸ್ನಾನ ಮಾಡುತ್ತಾನೆ.

ಕಲಶ ನೀರು ಮಿಂದುಬಂದ ಮಾದೇವಿಗೆ ಗರತಿಯರು ಪಟ್ಟೆಯುಡಿಸಿ ಮಂಡೆಬಾಚಿ ಮುಡಿಕಟ್ಟಿ, ಹೂ ಮುಡಿಸಿ ತಿಲಕವಿಡುತ್ತಾರೆ. ತುಲಸಿಯನ್ನು ಪೂಜಿಸಿದ ಇಸರರು ಮಾದೇವಿಗೆ ಪ್ರಸಾದ ನೀಡುತ್ತಾರೆ. ಮಾದೇವಿ ತುಲಸಿಗೆ ಕೈಮುಗಿದು ಪ್ರಸಾದ ಸ್ವೀಕರಿಸಿ ಹಸಗರಕ್ಕೆ ಹೋಗುತ್ತಾಳೆ.

ಇತ್ತ ಕೌರವರ ದಿಬ್ಬಣ ಬಂದಾಗ ಇಸರರು ಅವರನ್ನೆದುರುಗೊಂಡು ಹಂದರಕ್ಕೆ ಕರತರುತ್ತಾರೆ. ಕೌರವರು ಹೆಣ್ಣಿಗೆ ಶೃಂಗರಿಸಲು ತಂದ ವಸ್ತು ಒಡವೆಗಳನ್ನು ತೆಗೆದು ನೋಡಿದರೆ ಅವೆಲ್ಲ ಪುಡಿ ಪುಡಿಯಾಗಿವೆ. ಇದನ್ನು ಕಂಡ ಕವ್ಲರು ತಲೆತಗ್ಗಿಸಿದಾಗ ಜೋಗಿ, “ಕವ್ಲರೇ ಏಕೆ ತಲೆ ತಗ್ಗಿಸಿದ್ದೀರಿ? ಚಿಂತಿಸಬೇಡಿ ನಾನು ತಂದ ಪಟ್ಟೆಯಿದೆ, ಚಿನ್ನ, ಹೂವು ತೊಂಡಿಲ ಎಲ್ಲಾ ಇವೆ. ಅವನ್ನು ಹೆಣ್ಣಿಗೆ ತೊಡಿಸಿ ಧಾರೆಯೆರೆದುಕೊಳ್ಳಿ” ಎಂದು ಎಲ್ಲವನ್ನೂ

ಕವ್ಲರಿಗೆ ಕೊಡುತ್ತಾನೆ. ಕವ್ಲರು ಅವನ್ನು ಮಾದೇವಿಗೆ ತೊಡಿಸಿ ಧಾರೆಗೆ ಸಿದ್ಧರಾಗುತ್ತಾರೆ. ಆಗ ನೆರೆದವರು, "ಧಾರೆಯೆರೆಯುವಾಗ ಜೋಗಿ ಮುಂದಿರಬಾರದು, ಅವನಿಗೆ ಪಡಿಕೊಟ್ಟುಕಳಿಸಿಬಿಡಿ." ಎನ್ನುತ್ತಾರೆ. ಇಸರರು ಪಡಿಯನ್ನು ಜೋಗಿಗೆ ಕೊಡ ಹೋದಾಗ, ಜೋಗಿ, "ನಿಮ್ಮ ಕೈಪಡಿ ಮುಟ್ಟುವವನಲ್ಲ ಮಾದೇವಿಯ ಕೈಪಡಿಯೇಬೇಕು" ಎಂದು ಹಠ ಹಿಡಿದಾಗ, ಇಸರರು ಮಾದೇವಿಯನ್ನೇ ಕಳಿಸುತ್ತಾರೆ. ಆಗ ಜೋಗಿ ಹಗಲನ್ನು ಇರುಳು ಮಾಡಿ ಮಾದೇವಿಯನ್ನು ಎತ್ತಿಕೊಂಡು ಬಾಳೆಯ ಬನಕ್ಕೆ ಹೋಗುತ್ತಾನೆ. ತಲೆತಗ್ಗಿ ನಿಂತ ಕವ್ಲರನ್ನು ನೋಡಿ ಇಸರರು "ಇದು ಲಕ್ಮಣನ ಮಾಯಿಕ" ಎಂದೊರೆದು, ಆಡಲು ಹೋದ ಪಾರ್ವತಿಯನ್ನು ಕರೆದು ಮದುವಣಗಿತ್ತಿಯಾಗಿ ಸಿಂಗರಿಸಿ ಕವ್ಲರಿಗೆ ಧಾರೆಯೆರೆಯುತ್ತಾರೆ. ಕವ್ಲರ ದಿಬ್ಬಣ ಪಾರ್ವತಿ ಸಹಿತವಾಗಿ ಹೊರಡುತ್ತದೆ.

ಇತ್ತ ಜೋಗಿ ಕೇದಿಗೆ ವನಕ್ಕೆ ಬಂದು, ಜೋಗಿ ವೇಷವನ್ನು ಬಿಟ್ಟು, ಲಕ್ಷಣವಾಗಿ ಮಾವನಿಗೆ "ಮಾದೇವಿಯನ್ನು ಧಾರೆಯೆರೆದು ಹೋಗು" ಎಂದು ಪತ್ರ ಬರೆದು ಗಿಳಿಗಳ ಹತ್ತಿರ ಕಳಿಸುತ್ತಾನೆ. ಗಿಳಿಗಳು ತಂದ ಓಲೆಯನ್ನು ಓದಿದ ಇಸರರು ಮುಗುಳು ನಗೆ ನಕ್ಕು ಲಕ್ಮಣನೆಡೆಗೆ ಧಾವಿಸಿ, ಲಕ್ಮಣ ಮಾದೇವಿಯರನ್ನು ಮನೆಗೆ ಕರೆತಂದು, ಲಕ್ಮಣನಿಗೆ ಮಾದೇವಿಯನ್ನು ಧಾರೆಯೆರೆದು ಕೊಡುತ್ತಾನೆ.

ನಾಲ್ವರು ಹೆಂಡಿರು (ದ್ರೌಪದಿ) : ಸುಪ್ಪತ್ತಿಗೆಯಲ್ಲೊರಗಿದ ದ್ರೌಪದಿ ಕನಸಿನಲ್ಲಿ "ನಾಲ್ಕು ಕಳಸ, ನಾಲ್ಕು ಕನ್ನಡಿ ನೀಲ ಕುದುರೆಗಳನ್ನು ಕಾಣುತ್ತಾಳೆ. ತನ್ನ ಕನಸಿನ ವಿವರವನ್ನು ಅತ್ತೆ ಕುಂತಿಯ ಮುಂದಿಟ್ಟಾಗ, "ನಾಲ್ಕು ಕಳಸವೆನ್ನುವುದು ನಾಲ್ಕು ತಂಗಿಯರು ನೀಲ ಕುದುರೆಯೆಂದರೆ ನಿನ್ನಪತಿ. ನೀನು ಕಂಡ ಕನಸು ಸುಳ್ಳಾಗದು" ಎನ್ನುತ್ತಾಳೆ. ಆಗ ದ್ರೌಪದಿ, "ಮದುವೆಯಾದ ಹೆಂಡರಿರುವಾಗ ನಿಮ್ಮ ಮಗನಿಗೆ ಮತ್ತೆಂತಹ ಮದುವೆ" ಎನ್ನುತ್ತಾಳೆ. "ಮಾತುಕಲಿತ ಅರ್ಜುನನು ಮತ್ತು ಹತ್ತು ಹೆಣ್ಣು ತಂದಾನು, ಅವನಿಗೆ ಕಳಂಕವಿಲ್ಲ" ಎನ್ನುತ್ತಾಳೆ ಕುಂತಿ. ದ್ರೌಪದಿ ಕನಸಿನ ವೃತ್ತಾಂತವನ್ನು ಪತಿ ಧರ್ಮರ ಹತ್ತಿರ ಹೇಳಿದಾಗಲೂ ಆತ ಕುಂತಿಯಂತೆಯೇ ಉತ್ತರಿಸುತ್ತಾನೆ. ಸಿಟ್ಟಿನಿಂದ ದ್ರೌಪದಿ ಸಹದೇವನೆಡೆಗೆ ಬಂದು ಸಕುನ ನೋಡಿಸುತ್ತಾಳೆ. ಆತ "ಅಣ್ಣನು ನಾಲ್ವರನ್ನು ಮದುವೆ ಮಾಡಿಕೊಂಡು ಬರುತ್ತಾನೆ; ನೀನು ಬೆಟ್ಟದ ನೆಲ್ಲಿಕಾಯನ್ನು ಚಪ್ಪರದಲ್ಲಿ ಒಪ್ಪಾಗಿ ಹರಗಿಸು" ಎಂದೊರೆಯುವನು.

ಇದನ್ನು ಕೇಳಿಸಿಕೊಂಡು ಅರ್ಜುನ, ಒಂದು ಬಾಸಿಂಗ ನಾಲ್ಕು ಮಂಗಲ ಸೂತ್ರಗಳನ್ನು ತೆಗೆದುಕೊಂಡು ಗುಟ್ಟಾಗಿ ಮೂಡಣ ರಾಜ್ಯಕ್ಕೆ ಹೋಗಿ, ಅಲ್ಲಿ

ಜನರ ಭಾಷೆ ಕಲಿತು, ಅವರ ಉಡುಗೆ ತೊಡುಗೆತೊಟ್ಟು ಮೂಡಣ ರಾಜನ ಮಗಳನ್ನು ವರಿಸುತ್ತಾನೆ. ಅನಂತರ ಬಡಗಣ, ತೆಂಕಣ, ಪಡುವಣ ರಾಜ್ಯಗಳಿಗೆ ಹೋಗಿ ಆಯಾ ದೇಶ ಭಾಷೆಗಳನ್ನು ಕಲಿತು ಅಲ್ಲಿಯ ವೇಷ ಭೂಷಣಗಳನ್ನು ಧರಿಸಿ ಆಯಾ ದೇಶಗಳ ರಾಜರ ಮಕ್ಕಳನ್ನು ಮದುವೆಯಾಗಿ ತನ್ನ ನಾಡಿಗೆ ಹಿಂದಿರುಗುತ್ತಾನೆ. ಮದುವೆಯಾಗಿ ಬಂದ ಹೆಂಡಿರನ್ನು ಈಳೆ, ಬಾಳೆ, ಕಂಚಿ, ನಿಂಬೆ ಬನಗಳಲ್ಲಿ ಒಬ್ಬೊಬ್ಬರನ್ನೂ ನಿಲ್ಲಿಸಿ ಮನೆಗೆ ಬಂದು “ಮನೆಯಲ್ಲಿ ಅಕ್ಕ, ತಂಗಿ, ಹಿರಿಯರು ಯಾರಿದ್ದಾರೆ. ದ್ರೌಪದೀ ತಂಬಿಗೆಯಲ್ಲಿ ನೀರು ತೆಗೆದುಕೊಂಡು ಬಾ” ಎನ್ನುವನು ಅದಕ್ಕೆ ದ್ರೌಪದಿ, “ನಿಮಗೆ ನೀರು ಕೊಡಲಿಕ್ಕೆ ಇಲ್ಲಾರಿದ್ದಾರೆ? ನೀವು ಬಾಳೆ, ಈಳೆ, ಕಂಚಿ, ನಿಂಬೆ ಬನಕ್ಕೆ ಹೋಗಿ, ಅಲ್ಲಿ ನೀರು ಕೊಡುತ್ತಾರೆ” ಎನ್ನುತ್ತಾಳೆ. ಈ ಮಾತು ಕೇಳಿದ ಅರ್ಜುನ ಕಪ್ಲಿಕೊಟ್ಟಿಗೆಗೆ ಬಂದು ಕಪ್ಲಿಯನ್ನು ದ್ರೌಪದಿಯ ಹೂಬನಕ್ಕೆ ಬಿಟ್ಟು, “ಮನೆಯಲ್ಲಿ ಹಿರಿಯರಾರಿದ್ದಾರೆ? ದ್ರೌಪದಿಯ ತೋಟ ದನ ಮೆಂದಿತು” ಎನ್ನುತ್ತಾನೆ. ದ್ರೌಪದಿ ಹೊರಗೆ ಬಂದು ಕಪ್ಲಿಯನ್ನು ಕೊಟ್ಟಿಗೆಗೆ ಹೊಡೆಯುತ್ತಾಳೆ. ಆಗ ಅರ್ಜುನ ಮಡದಿಯರನ್ನು ಕರೆದುಕೊಂಡು ಬರುತ್ತಾನೆ. ಆಗ ದ್ರೌಪದಿ ನೀರನ್ನು ತಂದು ಅರ್ಜುನನಿಗೆ ಕೊಡುತ್ತಾಳೆ. ಎಲ್ಲರೂ ಕೈಕಾಲು ಮುಖ ತೊಳೆದು ಒಳಗೆ ಹೋದ ಮೇಲೆ, ದ್ರೌಪದಿ ಎಲ್ಲರಿಗೂ ಹಾಲ್ಗಂಜಿಯನ್ನು ಬಡಿಸುತ್ತಾಳೆ. ಊಟವನ್ನು ಮುಗಿಸಿದ ಅರ್ಜುನ ತಾಂಬೂಲ ಮೆಲ್ಲುತ್ತ, “ನೀವಯ್ವರು ಕೊಟ್ಟ ತಾಂಬೂಲ ಮೆಲ್ಲುವ ನಾನೊಬ್ಬ ಬಡವಾದೆ” ಎನ್ನುತ್ತ, “ತಂದ ಹೆಂಡಿರಾದ ನೀವು ಹೀಗೇಕೂಡುವುದು ಸರಿಯಲ್ಲ; ಬಾಗಿಲ ಕಸ, ಕೊಟ್ಟಿಗೆ ಸಗಣಿ, ತೆಗೆಯಿರಿ; ಪಾತ್ರೆ ತೊಳೆಯಿರಿ” ಎನ್ನುತ್ತಾನೆ. ದೊಡ್ಡಸ್ತನದಲ್ಲಿ ಬೆಳೆದ ನಾರಿಯರು ಅರ್ಜುನನ ಮಾತೊಪ್ಪದೆ, “ನಾವು ನಿಮಗೆ ಸರಿಯಾಗಿ ತೋರದಿದ್ದರೆ, ನಮ್ಮನ್ನು ನಮ್ಮ ತವರಿಗಾದರೂ ಕಳಿಸಿರಿ” ಎನ್ನುತ್ತಾರೆ.

ಧರ್ಮರು : ಮಲ್ಲಿಗೆಯನ್ನು ಹಾಸಿದ ಸುಪ್ಪತ್ತಿಗೆಯ ಮೇಲೆ ಧರ್ಮರೊಡನೆ ಒರಗಿದ ದ್ರೌಪದಿಯು ಕೆಟ್ಟ ಕನಸೊಂದನ್ನು ಕಂಡು ಎಚ್ಚತ್ತು, ಅತ್ತೆ ಕುಂತಿಯೆಡೆ ಹೋಗಿ, “ಸತ್ಯಕುಲದ ಪಾಂಡವರು, ತಮ್ಮ ಜೊತೆ ಆಡುವಾಗ ಧರ್ಮರು ಸೋಲಲೆಂದು ಬಯಸಿ, ಗು(ಕು)ರುರಾಯನು ಪತ್ರ ಬರೆದಿದ್ದಾನೆ.” ಎನ್ನುತ್ತಾಳೆ. ಆಗ ಅತ್ತೆ ದುಸ್ವಪ್ನ ಶಾಂತಿಗಾಗಿ ಭಟ್ಟರಿಗೆ ದಾನಕೊಡಲು ಸೂಚಿಸುತ್ತಾಳೆ. ಅತ್ತೆಯಾಣತಿಯಂತೆ ದ್ರೌಪದಿ, ಧರ್ಮರೊಡಗೂಡಿ, ಭಟ್ಟರಿಗೆ ದಾನ ಧರ್ಮವನ್ನು ಮಾಡಿ, ದೋಷ ಪರಿಹಾರವಾಯಿ ತೆಂದು ನಿಶ್ಚಿಂತಳಾಗುತ್ತಾಳೆ. ಅದೇ ಸಮಯದಲ್ಲಿ ಕುರುರಾಯನ ಓಲೆಕಾರರು ಬಂದು ಧರ್ಮರಿಗೆ ಓಲೆಯನ್ನೀಯುತ್ತಾರೆ. ಧರ್ಮರು ಓಲೆಯನ್ನೋದಲು ಸಹದೇವನಿಗೆ ಕೊಟ್ಟಾಗ ಆತ, ಸತ್ಯ ನಿಷ್ಠರಾದ ಧರ್ಮರು ಹಾಗೂ ದ್ರೌಪದಿ ತಮ್ಮ ಜೊತೆಯಲ್ಲಿ

ಪಗಡೆಯಾಡಿ ಸೋಲುವುದನ್ನು ಬಯಸಿ ಕುರುರಾಯನು ಪತ್ರಬರೆದುದನ್ನು ಅಣ್ಣನಿಗೆ ತಿಳಿಸುತ್ತಾನೆ. ಆಗ ಧರ್ಮರು "ಅಣ್ಣನು ಆಟಕ್ಕೆ ಕರೆದಾಗ ಉಪೇಕ್ಷಿಸಬಾರದೆಂದು ಗುರುರಾಯನ ಹತ್ತಿರ ಪಗಡೆಯಾಡಲು ತಮ್ಮಂದಿರೊಡನೆ ಹೊರಡಲು ಸಿದ್ಧನಾಗುತ್ತಾನೆ. ಆಟಕ್ಕೆ ಹೋಗುವಾಗ ಧರ್ಮರು, ಬಾಗಿಲಿಗೆ ಪೂಜಿಸಿ ಕಾಯೊಡೆಯುವಾಗ ಕಾಯಿ ಕಡಿ ಕವಚಿ ಬೀಳುತ್ತದೆ. ಈ ಅಪಶಕುನವನ್ನು ಕಂಡ ಸಹದೇವನು, ಅಂದಿನ ಪಯಣವನ್ನು ಮುಂದೂಡಲು ಸೂಚಿಸಿದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಧರ್ಮರು ಪಗಡೆಯಾಡಲು ಹೊರಡುತ್ತಾರೆ.

ಪಗಡೆಯಾಟದ ಮೊದಲೆರಡು ಆಟಗಳನ್ನು ಧರ್ಮರು ಗೆಲ್ಲುತ್ತಾರೆ. ಆಗ ಗುರುರಾಯ ಆಟ ಮುರಿದು ಗಣನಾಥನಿಗೆ ಹರಕೆ ಹೊತ್ತು, ಪುನಃ ಅಯ್ದು ಆಟಗಳನ್ನಾಡಿ, ಪಂಡಾವರ್ರೈವರು, ಅವರ ಛತ್ರ, ಚಾವರಗಳನ್ನೆಲ್ಲ ಗೆಲ್ಲುತ್ತಾನೆ. ಸೋತ ಧರ್ಮರು ತಲೆ ತಗ್ಗಿಸಿ ಕುಳಿತಾಗ, ಕುರುರಾಯ, ಅವರರಸಿಯನ್ನು ಆಟಕ್ಕೆ ಕರೆತರಲು ಸೂಚಿಸುತ್ತಾನೆ. ದಿಕ್ಕು ತೋಚದ ಧರ್ಮರು ಈ ವಿಷಯವನ್ನು ದ್ರೌಪದಿಯ ಹತ್ತಿರ ಪ್ರಸ್ತಾಪ ಮಾಡಿ ಅವಳನ್ನು ಆಟಕ್ಕೆ ಕರೆಯುತ್ತಾರೆ. ಆಗ ದ್ರೌಪದಿ, "ನಾನು ಮುಟ್ಟಾಗಿ ಮೂರು ದಿನದ ಸ್ನಾನ ಮಾಡಿಲ್ಲ, ತುಲಸಿ ಕದಿರನ್ನು ಮುಡಿದಿಲ್ಲ. ಈ ಸ್ಥಿತಿಯಲ್ಲಿ ನಾನು ಆಟ ಆಡಲಾರೆ" ಎಂದು ಹೇಳಿದಾಗ ಧರ್ಮರು, ದ್ರೌಪದಿ ಆಟಕ್ಕೆ ಬರಲಾಗದ ಪರಿಸ್ಥಿತಿಯನ್ನು ದುರ್ಯೋಧನನೆಡೆ ಬಂದು ವಿವರಿಸುತ್ತಾನೆ. ರೂಪಸಿಯಾದ ದ್ರೌಪದಿಯೊಡನೆ ಪಗಡೆಯಾಡುವುದು ತಪ್ಪಿದ್ದಕ್ಕೆ ಕುರುರಾಯ ವ್ಯಥಿಸುತ್ತಾನೆ. ಆದರೂ ಪಟ್ಟು ಬಿಡದೆ, ಅವಳನ್ನು ಕರೆತರಲು ಕರ್ಣನಿಗೆ ಆಜ್ಞಾಪಿಸುತ್ತಾನೆ. ಸಾತ್ವಿಕನಾದ ಕರ್ಣನು "ಯಾರ ತಲೆಯನ್ನಾದರೂ ಕತ್ತರಿಸಿ ತರುತ್ತೇನೆ, ಆದರೆ ಪರಸತಿಯನ್ನು ಮಾತ್ರ ತರಲಾರೆ" ಎನ್ನುತ್ತಾನೆ. ಆಗ ಕೆರಳಿದ ಕುರುರಾಯ "ನನ್ನನ್ನವುಂಡು, ಸುಣ್ಣ ತಿಂದು ನನ್ನ ಮಾತು ನಡೆಸುವುದಿಲ್ಲವೇ? ಎಲೈ ಕರ್ಣನೇ, ನೀನು ಪ್ರತ್ಯೇಕ ಅರಮನೆಯನ್ನು ಕಟ್ಟಿಕೋ" ಎಂದು ಗುಡುಗುತ್ತಾನೆ. ಆಗ ಕರ್ಣ "ಒಬ್ಬರ ಊಳಿಗದಲ್ಲಿರುವುದು ಕಷ್ಟ; ಇದ್ದ ಮೇಲೆ ಅವರು ಹೇಳಿದ ಕೆಲಸವನ್ನು ಮಾಡಬೇಕು, ಇಲ್ಲ ಅವರಿಂದ ದೂರವಾಗಬೇಕು." ಎಂದು ಕಣ್ಣೀರು ಸಿಡಿಸುತ್ತಾನೆ. ಉಪಾಯಗಾಣದೆ ತಂದೆ ಸೂರ್ಯದೇವನೆಡೆ ಹೋಗಿ, ಅವನ ಅಪ್ಪಣೆಯಂತೆ ದ್ರೌಪದಿಯೆಡೆ ಹೋಗುತ್ತಾನೆ.

ದ್ರೌಪದಿ ಆದರದಿಂದ ಕರ್ಣನನ್ನುಪಚರಿಸಿ, "ಭಾವನವರೇ ನನ್ನವರು ನನಗೆ ಸಣ್ಣ ಕಾಲಿನ ಮಂಚವನ್ನಿತ್ತಿದ್ದಾರೆ. ಇಬ್ಬರು ಕೂಡ್ರಲಾಗದು. ಅರ್ಜುನನ ಸೆಳಮಂಚವನ್ನು ತರಲೋ" ಎಂದಾಗ ಕರ್ಣ, "ನನ್ನ ತಮ್ಮಂದಿರು ಸೆರೆಯಲ್ಲಿರುವಾಗ ನನಗೇಕೆ ಸೆಳಮಂಚ? ಮಣೆಯೊಂದು ಸಾಕು" ಎನ್ನುತ್ತಾನೆ.

ದ್ರೌಪದಿ ಕರ್ಣನಿಗೆ ತಾಂಬೂಲವಿತ್ತು ತಾನೂ ಸೇವಿಸುತ್ತಾಳೆ. ಆಗ ಅಡಿಕೆ 'ತಲೆಗೆ ಹತ್ತಿ' ದ್ರೌಪದಿ ತಲೆ ತಿರುಗಿ ಬೀಳುವಾಗ ಕರ್ಣ ತನ್ನ ಹಚ್ಚಡದ ಸೆರಗಿನಿಂದ ಅವಳನ್ನು ಹಿಡಿಯುತ್ತಾನೆ. ಎಚ್ಚರಾದ ಮೇಲೆ ದ್ರೌಪದಿ," ಇದೇನು ಭಾವನವರೇ ನನ್ನನ್ನು ಹಚ್ಚಡದ ಸೆರಗಿನಿಂದ ಹಿಡಿದಿರಿ? ಗೋವಳ ವಂಶದವರಿಗೂ, ನಿಮಗೂ ಹೊಲೆ ಮೈಲಿಗೆಯೇನು?" ಎಂದು ಪ್ರಶ್ನಿಸುತ್ತಾಳೆ. ಆ ಮಾತಿಗೆ ಕರ್ಣ, "ಭಾವ ಮೈದಿನಿಯನ್ನು ಮುಟ್ಟಬಾರದೆಂದು ನಿನ್ನನ್ನು ನಾನು ಹಚ್ಚಡದ ಸೆರಗಿನಿಂದ ಹಿಡಿದೆ," ಎನ್ನುವನು. ಮುಂದೆ ಕರ್ಣ ಪಗಡೆಯಾಟದ ಪ್ರಸ್ತಾಪವನ್ನು ಮಾಡಿ, "ಕುರುರಾಯ ನಿನ್ನನ್ನು ಆಟಕ್ಕೆ ಬರ ಹೇಳಿದ್ದಾನೆ." ಎಂದಾಗ ದ್ರೌಪದಿ, "ನಾನು ನಿಮ್ಮ ಬೆನ್ನಿಗೆ ಹೋದರೆ ನಿಮ್ಮ ಹೆಂಡತಿಯೆಂದಾರು; ನಿಮ್ಮ ಮುಂದೆ ನಡೆದರೆ ತಂಗಿಯೆಂದಾರು; ಆದ್ದರಿಂದ ನಿಮ್ಮೊಡನೆ ಬರುವುದಿಲ್ಲ." ಎನ್ನುತ್ತಾಳೆ. ಆಗ ಕರ್ಣ ರಹಸ್ಯವಾಗಿ "ದ್ರೌಪದಿ ನಾನು ಹೋದ ಮೇಲೆ ದುಶ್ಯಾಸನ ಬರುತ್ತಾನೆ. ನೀನು ಮೀಡ ಜಡಿದು ಏಳು ಮಾಳಿಗೆಯ ಒಳಗಿರು, ಬಾಗಿಲು ತೆರೆಯಬೇಡ. ಆತ ನಿನ್ನ ಮಣಿಮಾಡನ್ನು ಮುರಿದು ಒಳಬಂದು, ನಿನ್ನ ಮೇಲುದವನ್ನೆಳೆಯುತ್ತಾನೆ. ಆಗ ನೀನು ಶ್ರೀಹರಿಯನ್ನು ನೆನೆದುಕೋ ನಿನ್ನ ಮೇಲುದ ಸ್ಥಿರವಾಗುವುದು. ದುಶ್ಯಾಸನ ನಿನ್ನನ್ನೆಳೆದು ಬೀದಿಗೆ ತರುತ್ತಾನೆ." ಎಂದು ಮುಂಜಾಗ್ರತೆಯಿಂದಿರಲು ಸೂಚಿಸಿ ಕುರುರಾಯನೆಡೆ ಹಿಂದಿರುಗುತ್ತಾನೆ.

ಕರ್ಣ ಹಿಂದಿರುಗಿ ಬಂದುದನ್ನು ಕಂಡು ಕುರುರಾಯ ಉರಿಯುತ್ತಾನೆ. ದುಶ್ಯಾಸನನನ್ನು ಕರೆದು ಪಾಂಡವರನ್ನು ಸೆರೆಯಲ್ಲಿಡಲು ನಿರ್ದೇಶಿಸುತ್ತಾನೆ. ಅಣ್ಣನ ನಿರ್ದೇಶನದಂತೆ ಪಾಡವರನ್ನು ಕೆಂಡದ ಕೋಟೆಯಲ್ಲಿಟ್ಟು, ಅಣ್ಣನೆಡೆ ಹೋಗುತ್ತಾನೆ. ಆಗ ಕುರುರಾಯ ದ್ರೌಪದಿಯನ್ನು ಕರೆತರಲು ದುಶ್ಯಾಸನನಿಗೆ ಆಜ್ಞಾಪಿಸುತ್ತಾನೆ. ದುಶ್ಯಾಸನನಿಗೆ ಬಲು ಖುಷಿ. "ಹಿತ್ತಿಲಲ್ಲಿ ಬೆಳೆದ ಸವತೆ ನೆಟ್ಟವರಿಗೆ ಅರ್ಧ ನೆರೆಯವರಿಗೆ ಅರ್ಧ; ಅಣ್ಣ ತಂದ ಮಡದಿ ಅಣ್ಣನಿಗರ್ದ, ನನಗರ್ದ" ಎಂದು ಕನಸು ಕಾಣುತ್ತ, "ಅತ್ತಿಗೆ ಅತ್ತಿಗೆ" ಎನ್ನುತ್ತ ಬರುತ್ತಾನೆ. ಅತ್ತಿಗೆ ಮಾತಿಗೆ ಓಗೊಡದ್ದನ್ನು ಕೇಳಿ ರೋಷ ತಾಳಿ, ಅವಳರಮನೆಯನ್ನೇ ಮುರಿಯುತ್ತಾನೆ. ದ್ರೌಪದಿಯೆಡೆ ಹೋಗಿ ಸೀರೆಯ ಸೆರಗು ಹಿಡಿದೆಳೆಯುತ್ತಾನೆ. ದ್ರೌಪದಿ ಶ್ರೀಹರಿಯನ್ನು ನೆನೆಯುತ್ತಾಳೆ. ಆಗವಳ ಮೇಲುದ ಸ್ಥಿರವಾಗುತ್ತದೆ. ಸಿಟ್ಟಿನಿಂದ ದುಶ್ಯಾಸನ ದ್ರೌಪದಿಯನ್ನು ಬೀದಿಗೆಳೆಯುತ್ತಾ, "ಅತ್ತಿಗೆ ಬಿಚ್ಚಿದ ಸೀರೆಯುಟ್ಟುಕೋ, ಮುಡಿಕಟ್ಟಿಕೋ, ಹಾದಿಯಲ್ಲಿ ಹೋಗುವವರು ನಿನ್ನನ್ನು ಕಂಡರೆ ಅಪಶಕುನವಾಗುವುದು" ಎನ್ನುತ್ತಾನೆ.

ಮಾನಭಂಗದಿಂದ ಕೆರಳಿದ ದ್ರೌಪದಿ "ಎಲೋ ಕಳ್ಳ ದುಶ್ಯಾಸನ, ನಿನ್ನನ್ನು ಭೀಮನೆದ್ದು ಮುರಿಯಲಿ, ರಕ್ತ ಕೋಡಿ ಹರಿಯಲಿ, ಅದರಲ್ಲಿ ನನ್ನ

ದೇವಾಂಗವನ್ನು ನಾನು ಅದ್ದಿಸಿ ಉಡುತ್ತೇನೆ, ನನ್ನ ಬಿಚ್ಚಿದ ಮುಡಿಯನ್ನು ಕಟ್ಟುತ್ತೇನೆ" ಎಂದು ಭೀಮ ಪ್ರತಿಜ್ಞೆ ಮಾಡುತ್ತಾಳೆ. ಅಲ್ಲಿಂದ ದುಶ್ಯಾಸನನೊಡನೆ ಕುರುರಾಯನೆಡೆ ಬರುತ್ತಾಳೆ. ದ್ರೌಪದಿಯನ್ನು ಕಂಡ ಕುರುರಾಯ ತಾಯಿಗೆ, "ಅಮ್ಮ ನಿನ್ನ ಮನೆಗೆ ಸೊಸೆ ಬರುತ್ತಿದ್ದಾಳೆ. ಮುಖ ತೊಳೆಯಲು ನೀರು ಕೊಡು, ಕೂಡ್ರಲು ಹೊನ್ನಮಣೆ ಕೊಡು" ಎಂದು ಆತಿಥ್ಯಕ್ಕೆ ಮುಂದಾದಾಗ ದ್ರೌಪದಿ ಆತಿಥ್ಯ ಸ್ವೀಕರಿಸುವುದಿಲ್ಲ. ಕುರುರಾಯ ತಾಂಬೂಲ ನೀಡಿದರೆ, ನಿರಾಕರಿಸಿ ಕರ್ಣನ ಕೈವೀಳ್ಯ ಮೆಲ್ಲುತ್ತಾಳೆ. ಕುರುರಾಯ ದ್ರೌಪದಿಗೆ, "ಬೊನ್ನತಿಯ ಹತ್ತಿರ ಹೇಳಿ ಹೊನ್ನ ಹಸೆ ಮಾಡಿಸಿದ್ದೆ, ಹಸೆಯನ್ನು ಹಾಸಿದ್ದೇನೆ. ದ್ರೌಪದಿ ಒಂದು ರಾತ್ರಿ ನನ್ನೊಡನೆ...." ಎಂದು ಹಲ್ಲುಕಿರಿಯುವ ಕುರುರಾಯನಿಗೆ ದ್ರೌಪದಿ "ಬೋನ್ನತಿಯ ಹತ್ತಿರ ಹೇಳಿ ಹೊನ್ನ ಹಸೆ ಮಾಡಿಸಿದರೆ ನೀನಿದ್ದೀಯಲ್ಲ ಮಲಗಲು, ಬೇಕಾದರೆ ನಿನ್ನ ತಾಯಿಯನ್ನು ಜೊತೆಯಿರಿಸಿಕೊ" ಎಂದು ದುರುಗುಟ್ಟುತ್ತಾಳೆ. ಆಗ ಸಿಟ್ಟಿನಿಂದ ಕುರುರಾಯ ಅವಳನ್ನು ಒಂಟಿಗಾಲಿನ ಮೇಲೆ ಉರಿಬಿಸಿಲಲ್ಲಿ ನಿಲ್ಲಿಸಲು ದುಶ್ಯಾಸನನಿಗೆ ಹೇಳುತ್ತಾನೆ. ದುಶ್ಯಾಸನ ಅವಳನ್ನು ಚಿನ್ನದ ಕೋಟೆಯ ಹತ್ತಿರ ಉರಿಬಿಸಿಲಿನಲ್ಲಿ ನಿಲ್ಲಿಸುತ್ತಾನೆ. ದ್ರೌಪದಿ ಕರುಣೆದೋರಬೇಕೆಂದು ಗಂಡಂದಿರಿಗೆ "ಅಯ್ವರ ಮಡದಿ ನೋಯುವಾಗ ನೀವಯ್ವರು ನೋಡಿ ಸುಖಿಸುವಿರಾ?" ಎಂದು ಗೋಳಿಡುತ್ತಾಳೆ. ಆಗ ಭೀಮ ಮಣಿಮಾಡನ್ನು ಮುರಿದನು, ಧರ್ಮರು ಅವನನ್ನು ತಡೆದು "ಸತ್ಯ ಕುಲದ ಹೆಣ್ಣು ತನ್ನ ಸತ್ವದಲ್ಲಿರುತ್ತಾಳೆ. ಇನ್ನೊಂದು ತಾಸು ಸಿಟ್ಟನ್ನು ತಡೆದುಕೋ" ಎಂದು ಸಂತೈಸುತ್ತಾನೆ.

ಕುರುರಾಯ ದ್ರೌಪದಿಯನ್ನು ಪಗಡೆಯಾಡಲು ಕರೆಸಿಕೊಳ್ಳುತ್ತಾನೆ. ಕುರುರಾಯ ಪಗಡೆಯಾಡಲು ದ್ರೌಪದಿಗೆ ಹೊಸ ಪಗಡೆ ಮಣೆ ಕೊಟ್ಟರೆ, ದ್ರೌಪದಿ ಅದನ್ನು ಪುಡಿ ಮಾಡಿ, "ಕಳ್ಳ ಹಲಿಗೆಯಿಂದ ಕಳ್ಳ ಪಗಡೆಯಾಡಿ ಎಲ್ಲರನ್ನು ಗೆದ್ದೆ" ಎಂದು ಬೀದಿಗೊಗೆದು ಕರ್ಣನನ್ನು ಕರೆದು, ಹೊಸ ಹಲಗೆ ತರಲು ನಾರಾಯಣ ದೇವನೆಡೆ ಕಳಿಸುವಳು. ನಾರಾಯಣ ದೇವ ಕರ್ಣನ ಹತ್ತಿರ ಹೊಸ ಹಲಿಗೆಯನ್ನು ಕೊಟ್ಟು, "ತಂಗಿ ಪಗಡೆಯಾಡುವಾಗ, ತಂಗಾಳಿ ಬೀಸಿ ತಂಗಿಯ ಮೇಲುದ ಸೆರಗು ಮರಚಿ ಬಿದ್ದು, ತಂಗಿಯೆದೆಯ ಸೌಂದರ್ಯವನ್ನು ಕಂಡು ಗುಂಗಾಗಿ ಕುರುರಾಯ ಪಗಡೆಯಾಟ ಮರೆಯುತ್ತಾನೆ. ಆಗ ತಂಗಿ ಪಗಡೆಯಾಟ ಗೆಲ್ಲುತ್ತಾಳೆ." ಎಂದು ಹರಸಿ ಕರ್ಣನನ್ನು ಕಳಿಸಿಕೊಡುತ್ತಾನೆ.

ಕರ್ಣ ನೀಡಿದ ಪಗಡೆ ಹಲಿಗೆಯಿಂದ ದ್ರೌಪದಿ ಕುರುರಾಯನೊಡನೆ ಅಯ್ದು ಆಟಗಳನ್ನಾಡಿ ಪಾಂಡವರೈವರು, ಛತ್ರ ಚಾಮರಾದಿಗಳನ್ನು ಗೆಲ್ಲುತ್ತಾಳೆ. ಸೋತ ಕುರುಪತಿ ಪಾಂಡವರನ್ನು ಬಿಡುಗಡೆ ಮಾಡುತ್ತಾನೆ. ಪಾಂಡವರಿಗೆ

ತಾಂಬೂಲವನ್ನಿತ್ತು ಉಪಚರಿಸುವಾಗ ದ್ರೌಪದಿ ಕುರುಪತಿಯ ತಾಂಬೂಲವನ್ನು ತಿರಸ್ಕರಿಸಿ ಕರ್ಣನ ಕೈವೀಳ್ಯವನ್ನು ಸ್ವೀಕರಿಸುತ್ತಾಳೆ. ಇದು ಸೇರದ ಕುರುರಾಯ, "ಅಂಬಿಗರ ಕಡುಚೆಲ್ವ ಕರ್ಣನ ವೀಳ್ಯವನ್ನು ದ್ರೌಪದಿ ತಿನ್ನುತ್ತಾಳೆ" ಎಂದು ತುಂಬಿದ ಸಭೆಯಲ್ಲಿ ನುಡಿಯುತ್ತಾನೆ. ಇದರಿಂದ ಕೆರಳಿದ ಕರ್ಣನು "ಅಂಬಿಗನೆಂದು ತುಚ್ಚೀಕರಿಸಿ ಮಾತಾಡುವ ನಿನ್ನನ್ನು ಕೊಲ್ಲುತ್ತೇನೆ" ಎಂದು ಗರ್ಜಿಸುತ್ತಾನೆ. ಆಗ ಅರ್ಜೇರು ಮುನ್ನೂರು ಕೋಟಿ, ಬಿಲ್ಲುಗಾರರು ಮುನ್ನೂರು ಕೋಟಿ ಇಂದ್ರಾಕ್ಷರು ಮುನ್ನೂರು ಕೋಟಿ ಕರ್ಣನ ಬೆನ್ನಿಗೆ ನಿಲ್ಲುತ್ತಾರೆ. ಕುರುರಾಯ ಏಕಾಂಗಿಯಾಗುತ್ತಾನೆ. ಇದನ್ನು ಕಂಡ ಬೊಸ್ಟತಿ ಹೊರಗೆ ಬಂದು, "ಕರ್ಣನನ್ನಾರು ಬಯ್ದರು, ಅವನಿಲ್ಲದ ನಮ್ಮ ರಾಜಂಗಳ ಶುಭವಿಲ್ಲ" ಎಂದಾಗ ಕುರುರಾಯ ಕರ್ಣನನ್ನು ಸಮಾಧಾನ ಪಡಿಸುವನು.

ಈ ಕಡೆ ಧರ್ಮರು ಮಾತ್ರ "ನಾವು ಯೋಚಿಸಿದ ಮನಸ್ಸು ಯೋಚಿಸಿದಂತೆಯೇ ಇದ್ದರೆ ಹನ್ನೆರಡು ವರ್ಷ ವನವಾಸ ತಿರುಗಿ ಬರುತ್ತೇವೆ" ಎಂದು ತಮ್ಮಂದಿರೊಡನೆ ವನವಾಸಕ್ಕೆ ಹೊರಡಲನುವಾಗುತ್ತಾನೆ. ಒಂದು ಆಲದ ಮರನೆಡೆ ಹೋಗಿ ತಮ್ಮ ಬಿಲ್ಲು ಬಾಣಗಳನ್ನು ಅದರ ಮೇಲಿಟ್ಟು, "ಈ ಬಿಲ್ಲು ಬಾಣಗಳು ಮನುಷ್ಯರಿಗೆ ಸಿಗಕೂಡದು, ಇದನ್ನವರು ಮುಟ್ಟಿದರೆ, ಸರ್ಪವಾಗಿ ಕಡಿಯಲಿ" ಎಂದು ಶಾಪವಿತ್ತು ಹೊರಡುತ್ತಾರೆ.

ಹನ್ನೆರಡು ವರ್ಷ ವನವಾಸ ಕಳೆದು, ಆಲದ ಮರನೆಡೆ ಬಂದು ಕುಳಿತಾಗ ಧರ್ಮರು, "ನಮ್ಮ ತಾಯಿಗೊಂದು ಹೆಣ್ಣು ಮಗುವಿದ್ದರೆ ಅವಳೆಡೆ ಹೋಗಿ ಒಂದು ತುತ್ತುಂಡು ಬರಬಹುದಿತ್ತು" ಎಂದು ಮರುಗುತ್ತಾನೆ. ಆಗ ದ್ರೌಪದಿ ಕರ್ಣನನ್ನು ಕರೆದು, ತನ್ನಣ್ಣ ನಾರಾಯಣ ದೇವನೆಡೆ ಕಳಿಸಿ, ಭೂಮಿ ತೂಕದ ಹಲಸಿನ ಹಣ್ಣೊಂದನ್ನು ತರಿಸುತ್ತಾಳೆ. ಧರ್ಮರು ಆ ಹಣ್ಣನ್ನು ಬಿರಿದು, ಅರ್ಧಭಾಗವನ್ನು ಭೀಮನಿಗೆ ಉಳಿದರ್ಧವನ್ನು ಮಿಕ್ಕವರು ಹಂಚಿಕೊಂಡು ತಿನ್ನುತ್ತಾರೆ. ಹಲಸಿನ ಹಣ್ಣಿನರ್ಧವನ್ನು ಭೀಮನು ಹಣ್ಣಿನಚಾರಿ, ಗೊಂಚಲು ಸಹಿತ ತಿಂದರೂ ಭೀಮನ ಕಿಬ್ಬೊಟ್ಟೆಯೂ ತಂಬಲಿಲ್ಲ.

ಅಲ್ಲಿಂದ ಪಾಂಡವರು ಕುರುರಾಯ ಬೊನ್ಟತಿ (ವಿರಾಟರಾಯ ಸುದೇಷ್ಣೆ) ಯರ ಅರಮನೆಗೆ ಹೋಗುತ್ತಾರೆ. ಅಲ್ಲಿ ಧರ್ಮರು ದೇವರ ಕೆಲಸಕ್ಕೆ, ಭೀಮನು ಅಡಿಗೆ ಮಾಡಲಿಕ್ಕೆ, ಅರ್ಜುನನು ಮಕ್ಕಳಿಗೆ ಓದು ಬರಹ ಕಲಿಸಲಿಕ್ಕೆ, ನಕುಲನು ಸೊಪ್ಪು ತರಲಿಕ್ಕೆ, ಸಹದೇವನು ದನ ಕಾಯಲಿಕ್ಕೆ, ದ್ರೌಪದಿಯು ಸುದೇಷ್ಣೆಗೆ ಹೂವು ಮುಡಿಸಲಿಕ್ಕೆ ಉಳಿಯುತ್ತಾರೆ.

ಕೀಚಕ (ಗೀಜಗ) : ಪಾಂಡವರ ದಂಡು ತಮ್ಮ ರಾಜ್ಯದೆಡೆ ತಿರುಗಿದ ಕನಸನ್ನು ಕೀಚಕ ಕಂಡು, ಅಕ್ಕ ಬೊನ್ಟತಿ (ಸುದೇಷ್ಣೆ) ಯ ಮನೆಗೆ ಬರುತ್ತಾನೆ.

ಬೊನ್ನತಿ ತಮ್ಮನಿಗೆ ಕೈಕಾಲು ಮುಖ ತೊಳೆಯಲು ನೀರು ಕೊಡಲು ದಾಸಿ ದ್ರೌಪದಿಗೆ ಹೇಳುತ್ತಾಳೆ. ಆಗ ದ್ರೌಪದಿ "ನನ್ನಣ್ಣನಲ್ಲ, ತಮ್ಮನಲ್ಲ ಯಾರೆಂದು ನೀರು ಕೊಡಲಿ?" ಎಂದಾಗ ಬೊನ್ನತಿ, "ನನ್ನನ್ನವುಂಡು ನನ್ನ ಸುಣ್ಣ ತಿಂದು ಹೇಳಿದ ಕೆಲಸ ಮಾಡಲಾರೆಯಾ?" ಎಂದಾಗ ದ್ರೌಪದಿ ಕೀಚಕನಿಗೆ ನೀರು ಕೊಡುತ್ತಾಳೆ. ಕೈಕಾಲು ಮುಖ ತೊಳೆದ ಕೀಚಕ ತಾಂಬೂಲ ಸೇವಿಸಿ ಮಲಗಿದಾಗ, ಬೊನ್ನತಿಯ ಆದೇಶದ ಮೇರೆಗೆ ದ್ರೌಪದಿ ಕೀಚಕನನ್ನೆಬ್ಬಿಸಿದಾಗ, ದ್ರೌಪದಿಯ ರೂಪರಾಶಿಯನ್ನು ಕಂಡು ಮನ ಸೋಲುತ್ತಾನೆ. ಅವಳನ್ನು ತನ್ನರಮನೆಗೆ ಕಳಿಸಲು ಅಕ್ಕನಿಗೆ ಕೇಳಿಕೊಳ್ಳುತ್ತಾನೆ. ಅಕ್ಕ ಅವಳಿಗೆ ಅಯ್ವರು ಪತಿಗಳಿದ್ದ ಸಂಗತಿಯನ್ನು ತಿಳಿಸಿ, ಅವರಿಗೆ ಈ ವಿಷಯಗೊತ್ತಾದರೆ ಕೀಚಕನನ್ನು ಕೊಂದು ಹಾಕುವರೆಂದು ಎಚ್ಚರಿಸಿದರೂ ಕೀಚಕ ಪಟ್ಟು ಬಿಡದೆ ಅವಳನ್ನು ಕಳಿಸಲೇಬೇಕೆಂದು ಹೇಳಿ ಹೊರಡುತ್ತಾನೆ.

ನಿರುಪಾಯಳಾದ ಬೊನ್ನತಿ, ದ್ರೌಪದಿಗೆ ಸಿಂಗರಿಸಿಕೊಂಡು ಕೀಚಕನರಮನೆಗೆ ಹೋಗಲು ಆದೇಶಿಸುತ್ತಾಳೆ. ಒಡತಿಯ ಆಜ್ಞೆಯನ್ನು ಮೀರಲಾರದ ದ್ರೌಪದಿ ಕೀಚಕನೆಡೆಗೆ ಹೋದಾಗ, ಕಾಮಾಂಧ ಕೀಚಕ ಅವಳ ತೋಳು ಹಿಡಿಯುತ್ತಾನೆ. ಉಪಾಯದಿಂದ ಕೀಚಕನ ಕೈ ತಪ್ಪಿಸಿಕೊಂಡು ಹೊರ ನಡೆದ ದ್ರೌಪದಿ ಪೂಜಾರಿ ಧರ್ಮನೆಡೆ ಹೋಗಿ, "ದೇವರ ಪೂಜೆಗೆ ಮಾತ್ರ ನೀವಿರುವಿರಿ, ನಿಮ್ಮ ಹೆಂಡಿರ ಪಂಥ ಮಾತ್ರ ನಿಮಗಿಲ್ಲ" ಎಂದು ಮೂದಲಿಸಿ ತನ್ನನ್ನು ಸಂಕಟದಿಂದ ಪಾರು ಮಾಡಲು ವಿನಂತಿಸುವಳು. ಅವಳ ಮೊರೆಗೆ ಕಿವಿಗೊಡದ ಧರ್ಮರು ಅವಳನ್ನು ಅರ್ಜುನನೆಡೆಗೆ ಕಳಿಸುವರು. ದ್ರೌಪದಿ ಅರ್ಜುನ, ನಕುಲ, ಸಹದೇವ ಹೀಗೆ ಎಲ್ಲರೆಡೆ ಸುತ್ತಿ ಪರಿಹಾರ ಮಾರ್ಗವನ್ನು ಕಾಣದೆ ಭೀಮನೆಡೆ ಬರುತ್ತಾಳೆ. ಭೀಮ, "ದುಡುಕು ಸಲ್ಲ ಇನ್ನೊಮ್ಮೆ ಹೋಗಿ ನೋಡು" ಎಂದು ತಿಳಿಯ ಹೇಳಿದರೂ ದ್ರೌಪದಿ ಹಿಂದೆಸರಿಯದೆ ಭೀಮನನ್ನು ಪುಸಲಾಯಿಸುತ್ತಾಳೆ. ಭೀಮ ದ್ರೌಪದಿಯ ವೇಷಧರಿಸಿ ಕೀಚಕನೆಡೆ ಹೋಗುತ್ತಾನೆ. ಕಾಮಾಂಧನಾದ ಕೀಚಕ, ದ್ರೌಪದಿ ವೇಷದ ಭೀಮನ ತೋಳು ಹಿಡಿದು, "ನಿನ್ನ ತೋಳು ಕೋಮಲವಿತ್ತು ಈಗೇನು ಗಟ್ಟಿಯಾಗಿದೆ" ಎಂದು ಪ್ರಶ್ನಿಸುತ್ತಾನೆ. ಆಗ ದ್ರೌಪದಿ ವೇಷದ ಭೀಮನು "ಕೀಚಕ ನಿನ್ನಕ್ಕನ ಮನೆಯ ಕಂಡುಗ ಭತ್ತವನ್ನೆಲ್ಲ ಒಬ್ಬಳೆ ಮಿರಿದು ಬಂದೆ ಅದಕ್ಕಾಗಿ ಈ ತೋಳುಗಳು ಗಟ್ಟಿಯಾಗಿವೆ." ಎಂದು ಉತ್ತರಿಸುತ್ತಲೇ ಕೀಚಕನನ್ನು ಸೀಳಿಹಾಕಿ ಮೂರು ಹಾದಿ ಕೂಡಿದಲ್ಲಿ ನಿಲ್ಲಿಸುತ್ತಾನೆ.

ಅತ್ತಗ್‌ಮೈದ್ನಿ : ಅಭಿಮನ್ಯು ಹುಟ್ಟು : ಸುಭದ್ರೆ ಮಾದೇವಿಯರು ಗಂಗೆಗೆ ಹೋಗಿ ಮೀಯುವಾಗ ಗಂಗೆಯಲ್ಲಿ ಮಾವಿನ ಹಣ್ಣೊಂದು ತೇಲಿಬರುವುದನ್ನು ನೋಡಿ, ಅದನ್ನು ಸುಭದ್ರೆ ತೆಗೆದುಕೊಂಡು ಬಂದು ಸೆಳ್ಳುಗುರಿನಿಂದ ಸೀಳಿ,

ಸಿಪ್ಪೆಯನ್ನು ಮಾದೇವಿಗೆ ನೀಡಿ ತಾನು ಗೊರಟಿನ ಭಾಗವನ್ನು ತಿಂದು, "ಅತ್ತಿಗೆ ಗೊರಟು ತಿಂದವರಿಗೆ ಗಂಡು, ಸಿಪ್ಪೆ ತಿಂದವರಿಗೆ ಹೆಣ್ಣು ಫಲವಾಗುತ್ತದೆ. ಮುಂದೆ ಅವರ ಮದುವೆಯನ್ನು ಮಾಡುವಾ". ಎಂದು ಇಬ್ಬರೂ ತಮ್ಮರಮನೆಗೆ ಬರುತ್ತಾರೆ.

ಮಾವಿನ ಹಣ್ಣು ತಿಂದ ಸುಭದ್ರೆ ಬಸಿರಾಗಿ ಒಂಭತ್ತು ತಿಂಗಳಾದಾಗ, ಅರ್ಜುನನಿಗೆ ವನವಾಸಕ್ಕೆ ಹೋಗುವ ಪ್ರಸಂಗ ಬರುತ್ತದೆ. ಆಗ ಅರ್ಜುನ ತಾಯಿಯನ್ನು ಕರೆದು ಸುಬದ್ರೆಯ ಬಯಕೆಯೂಟಕೆ ಅನುವಾಡಿಸಿ, ಕುಂತಿಯೊಡನೆ ವನವಾಸಕ್ಕೆ ತೆರಳಲು ಅನುವಾಗುತ್ತಾನೆ. ಸುಭದ್ರೆಯೂ ವನವಾಸಕ್ಕೆ ಹೊರಡಲು ಸನ್ನದ್ಧಳಾದಾಗ ಕುಂತಿ, "ನಾವು ಹೋಗುವ ದಾರಿಯಲ್ಲಿ ನೆರಳಿಲ್ಲ, ಅಲ್ಲಿ ಮಗನನ್ನೆಲ್ಲಿ ಮಲಗಿಸುವೆ?" ಎಂದಳು. ಸುಭದ್ರೆ "ಅತ್ತಿಯ ಮರಕ್ಕೆ ತೊಟ್ಟಿಲು ಕಟ್ಟಿ, ಸೊಪ್ಪು ಹಾಸಿ, ಬೇಡರ ಮನೆಯಿಂದ ಹಾಲು ತಂದು ಮಗುವನ್ನು ಸಾಕುತ್ತೇನೆ" ಎಂದು ವನಕ್ಕೆ ಅವರೊಡನೆ ಹೋಗಲು ಹಠಮಾಡುತ್ತಾಳೆ. ಆಗ ಕುಂತಿ, "ಮಾತು ಕೇಳದ ಮಡದಿಯನ್ನು ಯಾಕೆ ತಂದೆ ಅರ್ಜುನ ಅವಳ ಮಾತು ಮದ್ದಳೆಯಂತೆ; ಅವಳನ್ನು ಹುಣಸೆ ಮರದಾಚೆ ದೂಕಿ ಬಿಡು" ಎನ್ನುವಾಗಲೇ ಅವಳಣ್ಣ ನಾರಾಯಣ ದೇವ ಅಲ್ಲಿಗೆ ಬಂದು, "ಬಳ್ಳಿಗೆ ಕಾಯಿ ಹೊರೆಯಲ್ಲ. ಅವಳನ್ನು ತವರಿಗೆ ಕಳಸಿಕೊಡು." ಎನ್ನುತ್ತಾನೆ.

ಅರ್ಜುನ ಸುಭದ್ರೆಯನ್ನು ತವರಿಗೆ ಕಳಿಸುವಾಗ ಸುಭದ್ರೆ "ಅತ್ತೆ ನೀವು ವನವಾಸಕ್ಕೆ ಹೊರಡುತ್ತೀರಿ, ನನಗೆ ಹುಟ್ಟುವ ಮಗನಿಗೆ ಏನೆಂದು ಹೆಸರಿಡಲಿ?" ಎಂದಾಗ ಕುಂತಿ, "ಅಭಿಮನ್ಯು" ಎಂದು ಹೆಸರಿಡಲು ಸೂಚಿಸಿ ಅರ್ಜುನನೊಡನೆ ವನವಾಸಕ್ಕೆ ತೆರಳುತ್ತಾಳೆ. ಸುಭದ್ರೆ ಮತ್ತು ನಾರಾಯಣದೇವ ಸುಭದ್ರೆಯ ತವರಿಗೆ ಬರುತ್ತಾರೆ.

ಕಾಡಿನಲ್ಲಿ ಬರುವಾಗ ಜಿಂಕೆ, ಹಂದಿ, ಕಪಿ, ನವಿಲುಗಳ ಹಿಂಡು ನೋಡಿ ಸುಭದ್ರೆ ಇದೇನು ಹೊಸಪರಿ?" ಎಂದು ಅಣ್ಣನನ್ನು ಪ್ರಶ್ನಿಸುತ್ತಾಳೆ. ನಾರಾಯಣದೇವ ಆ ಪ್ರಾಣಿಗಳು ಪಾಂಡವರ ದನಕರು, ಎಮ್ಮೆ, ಹನುಮಂತ ಹಾಗೂ ಮರಿ ಹುಂಜಗಳೆನ್ನುತ್ತಾನೆ. ಹೀಗೆ ತಮಾಷೆ ಮಾಡುತ್ತ ಸುಬದ್ರೆಯ ತವರಿಗೆ ಬರುತ್ತಾರೆ. ಸುಭದ್ರೆಯ ಬರವನ್ನು ದೂರದಿಂದ ನೋಡಿದ ಮಾದೇವಿ "ಇವಳು ನನಗೆ ಪ್ರಿಯಳಾದರೆ, ನನಗೆ ಬಯಕೆ ತರುತ್ತಿದ್ದಳು. ಇವಳೆನ್ನ ವೈರಿ" ಎಂದು ಇವರಿಗೆ ಬೆನ್ನು ಹಾಕಿ ಮಾಳಿಗೆಯಿಂದ ಕೆಳಗಿಳಿಯಲಿಲ್ಲ. ನಾರಾಯಣ ದೇವನೇ ತಂಗಿಗೆ ಮುಖ ತೊಳೆಯಲು ನೀರು ಕೊಟ್ಟು, ಹೆಂಡತಿಯನ್ನು ಕರೆದು, "ಬಸುರಿಯಾದ ತಂಗಿ ಬಿಸಿಲಲ್ಲಿ ಬಂದಿದ್ದಾಳೆ, ಪಿತ್ತ ಕೆಣಕಿದೆ, ಅವಳಿಗೆ ಹಾಲ್ಗಂಜಿಯೂಟಕ್ಕೆ ಸಿದ್ಧ ಮಾಡು" ಎನ್ನುತ್ತಾನೆ.

ಮಾದೇವಿ ನೆರೆಯ ನಾರಿಯರೆಡೆ ಹೋಗಿ, ಸಿಹಿಯಕ್ಕಿ, ಒಳ್ಳೆಯ ತೆಂಗಿನ ಕಾಯಿ ಕೊಟ್ಟು, ಕಹಿಯಕ್ಕಿ ಕೊಳಕು ತೆಂಗಿನ ಕಾಯನ್ನು ತಂದು, ಗಂಡನ ತಂಗಿ ಉಣಬಂದಳೆಂದು ಅಡಿಗೆ ಮಾಡಿದಳು. ಗಂಡನಿಗೆ ಒಳ್ಳೆಯ ಅಕ್ಕಿಯೂಟ ಬಡಿಸಿ, ಅತ್ತಿಗೆಗೆ ಕಹಿಯಕ್ಕಿ, ಕೊಳಕು ಕಾಯಿನ ಊಟ ಬಡಿಸುತ್ತಾಳೆ. ಒಂದು ತುತ್ತು ಊಟ ಮಾಡಿದ ಸುಭದ್ರೆ "ಅಣ್ಣ ನಿನ್ನ ಮನೆಯ ಅನ್ನ ಕಾಣಲಿಕ್ಕೆ ಚೆಂದ, ಉಂಡು ನೋಡಿದರೆ ಕಹಿ" ಎನ್ನುತ್ತಾಳೆ. ಆಗ ಅಣ್ಣ, "ನೀನು ಬಿಸಿಲಲ್ಲಿ ಬಂದದ್ದರಿಂದ ನಿನ್ನ ಪಿತ್ತ ಕೆಣಕಿದೆ ಇನ್ನೊಂದು ತುತ್ತು ಉಂಡು ನೋಡು; ಅಪ್ಪ ಕಟ್ಟಿದ ಇಪ್ಪತ್ತಂಕಣದ ಮಣಿ ಮಾಡನ್ನು ನೋಡು" ಎಂದು ತಂಗಿಯ ದೃಷ್ಟಿಯನ್ನು ಇನ್ನೊಂದೆಡೆಗೆ ತಿರುಗಿಸಿ, ಅವಳೆಡೆಯನ್ನು ಎಳೆದು ತಾನಿಟ್ಟುಕೊಂಡು, ತನ್ನೆಡೆಯನ್ನು ಅವಳಿಗಿಟ್ಟು ತಂಗಿಗೆ ಇನ್ನೊಂದು ತುತ್ತು ಉಣ ಹೇಳಿದನು. ಆಗ ತಂಗಿ ಒಂದು ತುತ್ತುಂಡು "ಅಣ್ಣ ನಿನ್ನ ಮನೆಯ ಅನ್ನ ರುಚಿಯಾಗಿದೆ" ಎನ್ನುತ್ತಾಳೆ. ಆಗ ನಾರಾಯಣ ದೇವ ತಾನೊಂದು ತುತ್ತು ಉಂಡು ಕಹಿಯಾಗಿ ಉಣ್ಣಲಾಗದೇ ಕೈತೊಳೆದುಕೊಂಡು ಬಂದು, ಹೆಂಡತಿಯನ್ನು ಹೊಡೆಯಲು ಮುಂದಾದಾಗ ಸುಭದ್ರೆ ಅಣ್ಣನನ್ನು ತಡೆದು, "ಗಂಡನ ಮನೆ ಹೆಣ್ಮಕ್ಕಳು ಬಂದು ಹೊಡೆಸಿದರು ಎನ್ನುವರು, ಹೆಂಡತಿಯನ್ನು ಹೊಡೆಯಬೇಡ" ಎಂದು ಬೆತ್ತ ಕಸಿಯುತ್ತಾಳೆ. ಮಾದೇವಿ ಊಟ ಮಾಡಿ ಮುಸುರೆ ತೆಗೆದು ಮಂಚಕ್ಕೆ ಹಾಸಿಗೆಯನ್ನು ಹಾಸಿ ಮಂಚದ ಕೆಳಗೆ ತಣ್ಣೀರು ತಳಿದು, ಮಾಳಿಗೆಗೆ ಹೋಗಿ ಮಲಗುತ್ತಾಳೆ. ನಾರಾಯಣದೇವ ಮಂಚದ ಮೇಲೆ ಮಲಗಿದ, ಸುಭದ್ರೆ ಕೆಳಗೊರಗಿ "ಅಣ್ಣ ನಿನ್ನ ಮನೆಯ ನೆಲ ತಣ್ಣಗೆ, ನನಗೆ ನಿದ್ದೆ ಬಾರದು, ಭಾರತದ ಕಥೆ ಹೇಳು, ಭಾರತದ ಹಿಂದಿನ ಕಥೆಯನ್ನು ನಾನು ಕೇಳಿದ್ದೇನೆ, ಮುಂದಿನ ಕಥೆಯನ್ನು ಹೇಳು" ಎನ್ನುವಳು. ಅಣ್ಣ ಕಥೆ ಹೇಳುತ್ತಾನೆ; ಕಥೆ ಕೇಳುತ್ತಿರುವಾಗಲೇ ತಂಗಿಗೆ ನಿದ್ದೆ ಕವಿಯುತ್ತದೆ. ಆದರೆ ಕಥೆಯನ್ನು ಈ ಸುಭದ್ರೆಯ ಗರ್ಭದ ಶಿಶು ಕೇಳಿ 'ಹೂಂ' ಗುಡುತ್ತದೆ. ಇದನ್ನು ಗಮನಿಸಿದ ಮಾದೇವಿ ಗಂಡನೆಡೆ ಹೋಗಿ, "ನಿಮ್ಮ ತಂಗಿಯ ಧ್ವನಿಯಲ್ಲ, ಇದೆಲ್ಲಿಯ ಹೊಸ ಧ್ವನಿ?" ಎಂದಾಗ ನಾರಾಯಣ ದೇವ ಮೈಮುರಿದೆದ್ದು ಕುಳಿತನು.

ಸ್ವಲ್ಪ ಸಮಯದ ಮೇಲೆ ಸುಭದ್ರೆ ಬೇನೆಯಿಂದ ಕುದಿದಳು. ನಾರಾಯಣದೇವ ಶೂಲಗಿತ್ತಿ ಕರೆತರುವಾಗ ಶೂಲಗಿತ್ತಿಗೆ, "ಶಿಶು ಕಾಲು ಮುಂದಾಗಿ ಹುಟ್ಟಿದರೆ ಕಾಲನ್ನು, ಕೈಮುಂದಾಗಿ ಹುಟ್ಟಿದರೆ ಕೈಯನ್ನು ಕತ್ತರಿಸು, ಗಂಡು ಮಗುವಾದರೆ ಕತ್ತು ಮುರಿ; ಹೆಣ್ಣಾದರೆ ಸಲಹು, ನಿನಗೆ ಹಿಡಿಮುತ್ತನ್ನೀಯುತ್ತೇನೆ" ಎಂದು ನಿರ್ದೇಶಿಸಿ ಮನೆಗೆ ಕರೆದುಕೊಂಡು ಬರುತ್ತಾನೆ.

ನಾರಾಯಣ ದೇವ ಮತ್ತು ಶೂಲಗಿತ್ತಿ ಮನೆಗೆ ಬಂದ ಮೇಲೆ ಸುಭದ್ರೆ ಬಟ್ಟೆ ಬದಲಿಸಿ ಶೂಲಗಿತ್ತಿಯೆಡೆ ಹೋಗುತ್ತಾಳೆ. ಶೂಲಗಿತ್ತಿ ಸುಭದ್ರೆಗೆ ಎಣ್ಣೆ ತಿಕ್ಕ ತೊಡಗಿದಳು. ಆಗ ಸುಭದ್ರೆಯ ಗರ್ಭದೊಳಗಿನ ಶಿಶು, "ನಾನು ಕಾಲು ಮುಂದಾಗಿ ಹುಟ್ಟಿದರೆ ಕಾಲು ಕಡಿಯುತ್ತಾಳೆ, ಕೈ ಮುಂದಾಗಿ ಹುಟ್ಟಿದರೆ ಕೈ ಕಡಿಯುತ್ತಾಳೆ, ಗಂಡಾದರೆ ಕುತ್ತಿಗೆ ಮುರಿಯುತ್ತಾಳೆ ಈ ಶೂಲಗಿತ್ತಿ" ಎಂದು ಅತ್ತೆ ಮಾವಂದಿರಿಗೆ ಹಿಡಿ ಶಾಪ ಹಾಕಿ, ಅತ್ತೆಯನ್ನು ಗುತ್ತಿಯಲ್ಲಿಟ್ಟು, ಮಾವನನ್ನು ಮಳಿಗೆಯಲ್ಲಿಟ್ಟು, ಶೂಲಗಿತ್ತಿಯನ್ನೊದ್ದು ಮೂರು ಮುಡಿ ಗದ್ದೆಯಾಚೆಯೊಗೆದು ಅಭಿಮನ್ಯು ಹುಟ್ಟಿತ್ತಾನೆ. ಅಭಿಮನ್ಯು ಒದ್ದ ರಭಸಕ್ಕೆ ಶೂಲಗಿತ್ತಿಯ ಮುಂದಿನ ಮೂರು ಹಲ್ಲುಗಳು ಉದುರಿಬೀಳುತ್ತವೆ. ಶೂಲಗಿತ್ತಿ ತನ್ನ ಮಿಂಚುವ ಮುಂದಿನ ಮೂರು ಹಲ್ಲುಗಳನ್ನು ಕಳೆದುಕೊಂಡು ವ್ಯಥೆಯಿಂದ ಗೊಣಗುತ್ತ ಹೋಗುವಳು.

ಇತ್ತ ಅಭಿಮನ್ಯು ತನ್ನ ತಾಯಿಯನ್ನುದ್ದೇಶಿಸಿ, "ನನ್ನನ್ನು ತತ್‌ಕ್ಷಣದಲ್ಲಿ ಒಯ್ದು ಬಿಡು. ಮಾವನದೋತರ, ಅತ್ತೆಯ ಪಟ್ಟೆಯ ಸೀರೆಯನ್ನು ಸೀಳಿ, ನನಗೆ ಒಂದು ತುಂಡನ್ನು ಹಾಸು, ಇನ್ನೊಂದು ತುಂಡನ್ನು ಹೊದೆಸು. ಮತ್ತೊಂದು ತುಂಡನ್ನು ನೀನುಟ್ಟುಕೋ. ಮುತ್ತಿನ ತೊಟ್ಟಿಲಲ್ಲಿ ನನ್ನನ್ನು ಮಲಗಿಸಿ ಹೊತ್ತುಕೊಂಡು ನನ್ನಪ್ಪನೆಡೆಗೆ ಹೊರಟು ಬಿಡು.'' ಎಂದು ನಿರ್ದೇಶನವೀಯುತ್ತಾನೆ.

ಸುಭದ್ರೆ ಅಭಿಮನ್ಯುವಿನ ನಿರ್ದೇಶನದಂತೆ ಹೊರ ಹೊರಡುತ್ತಾಳೆ. ಹೋಗುವಾಗ, "ಮಾವನ ಮಗಳನ್ನು ನೀನು ನೆನಪು ಮಾಡಿ ತರಬೇಕು; ಅತ್ತೆ ಮಾವಂದಿರಿಗೆ ಶಾಪವೀಯಬೇಕು." ಎಂದು ಮಗನಿಗೊರೆಯುತ್ತಾಳೆ. ತಾಯಿಯ ಸೂಚನೆಯಂತೆ ಅಭಿಮನ್ಯು ಅತ್ತೆ ಮಾವಂದಿರಿಗೆ ಶಾಪಹಾಕುತ್ತಾನೆ. ಆ ಸಮಯದಲ್ಲಿ ನಾರಾಯಣದೇವ ಸುಳಿಗಾಳಿಯಾಗಿ ಸುಳಿದು ಸುಭದ್ರೆಯನ್ನು ಹೆದರಿಸುತ್ತಾನೆ. ಸುಭದ್ರೆ ಬಿರುಗಾಳಿಗೆ ಹೆದರದೆ, ಅಭಿಮನ್ಯುವನ್ನು ಹೊತ್ತ ತೊಟ್ಟಿಲನ್ನು ಗಟ್ಟಿಯಾಗಿ ಹಿಡಿದು ವನವಾಸಕ್ಕೆ ಹೋಗುತ್ತಾಳೆ.

ಸುಭದ್ರೆ ಅಭಿಮನ್ಯುವಿನ ತೊಟ್ಟಿಲನ್ನು ಹೊತ್ತು ವನ ವನ ಸುತ್ತಿ ಹೋಗುವಾಗ, ಒಂದು ಆಲದ ಕಟ್ಟೆಯ ಮೇಲೆ ಅತ್ತೆ ಕುಂತಿ, ಅರ್ಜುನರನ್ನು ನೋಡಿ, ಅಲ್ಲಿ ಹೋಗಿ ತನ್ನ ಪತಿಯ ಹತ್ತಿರ ಮುತ್ತಿನ ತೊಟ್ಟಿಲನ್ನಿಡುತ್ತಾಳೆ. ಅರ್ಜುನ ಮಗುವನ್ನೆತ್ತಿಕೊಂಡು ಮಗುವಿನ ನೆತ್ತಿಯನ್ನು ನೇವರಿಸುತ್ತಾನೆ. ಸುಭದ್ರೆ ಆಲದ ಮರಕ್ಕೆ ತೊಟ್ಟಿಲನ್ನು ಕಟ್ಟಿ ಆಲದೆಲೆಯ ಹಾಸಿಗೆ ಹಾಗೂ ತಲೆದಿಂಬುಮಾಡಿ ಮಗನನ್ನಲ್ಲಿ ಮಲಗಿಸುತ್ತಾಳೆ. ಗಂಡನ ಜೊತೆ ಮಂಡಿಸಿ ತಾಂಬೂಲ ಸೇವಿಸಿ, ಅವನೊಡನಿರುತ್ತಾಳೆ.

ಕನಕಾಂಗಿ ಕಲ್ಯಾಣ : ಮುಂಜಾನೆಯೆದ್ದು ಸುಭದ್ರೆ ಹೂದೋಟಕ್ಕೆ ಹೋಗಿ, ಕೇದಿಗೆ ಮಲ್ಲಿಗೆ, ಸುರಗಿ ಸೇವಂತಿಗೆಯಾದಿ ಹಲವು ಬಗೆಯ ಹೂಕೊಯ್ದು ಕೊಂಡು ಬರುತ್ತಾಳೆ. ತಲೆಗೆಣ್ಣೆಯನ್ನು ಹಾಕಿ, ಬಣ್ಣದ ಬಾಚಣಿಕೆಯಿಂದ ಮಂಡೆ ಬಾಚಿ ಶ್ರೀಮುಡಿ ಕಟ್ಟಿ ಹೂ ಮುಡಿದು. ಚಿನ್ನ ತೊಟ್ಟು, ಹೂವರ್ಣದ ಸೀರೆಯುಟ್ಟು, ರವಕೆ ತೊಟ್ಟು ಶ್ರೀಗಂಧವನ್ನಿಟ್ಟು, ಕಣ್ಣಿಗೆ ಕಪ್ಪಿಟ್ಟು, ಎರಡು ಕಡಗದ ಜೋಡುಗಳನ್ನು ಮಡಿಲಲ್ಲಿಟ್ಟುಕೊಂಡು ಬಿಂಕದಿಂದ ಅಣ್ಣನರಮನೆಗೆ ಹೊರಡುತ್ತಾಳೆ.

ಮನೆಗೆ ಬಂದ ತಂಗಿಯನ್ನು ನಾರಾಯಣದೇವ ಚೆಂದದಿಂದುಪಚರಿಸಿ, “ಎಂದೂ ಬರದಿದ್ದ ತಂಗಿ ಇಂದೇಕೆ ಬಂದೆ? ನನ್ನ ರಾಜ್ಯವನ್ನು ಬೇಕಾದರೆ ನೀನೇ ಆಳು" ಎಂದು ಬಾಯುಪಚಾರದ ಮಾತನ್ನಾಡುತ್ತಿದ್ದಾಗ ಸುಭದ್ರೆ, “ನೀನಾಳುವ ರಾಜ್ಯ ನೀನೇ ಆಳು. ನಾ ಬಂದದ್ದು ನಿನ್ನ ಮಗಳನ್ನು ಕೇಳಲು” ಎನ್ನುತ್ತಾಳೆ. ಆಗ ಅಣ್ಣ, “ಹೆಣ್ಣಿಗೆ ಬರುವವಳು ನಿನ್ನೆಯೇ ಬರಬೇಕಾಗಿತ್ತು. ನಿನಗಿಂತ ಮೊದಲೇ ‘ಕವ್ಲೋರು’ ಬಂದು ಹೆಣ್ಣಿಗೆ ಚೂಡಂಗವನ್ನಿಟ್ಟು ಹೋಗಿದ್ದಾರೆ." ಎಂದಾಗ ಸುಭದ್ರೆ ಸಿಟ್ಟಿನಿಂದ, “ಅವರಿಟ್ಟ ಚೂಡಂಗವನ್ನು ಕಿತ್ತೊಗೆದು ನಾನು ಹಸ್ತಕಡಗವನ್ನಿಡುತ್ತೇನೆ” ಎಂದು ಗುಡುಗಿದಳು. ಆಗ ನಾರಾಯಣದೇವ, “ಹೆಣ್ಣು ಕೇಳುವವಳು ನನ್ನೇನು ಕೇಳುತ್ತೀಯೆ? ಹೆಣ್ಣಿನ ತಾಯಿ ಒಳಗಿದ್ದಾಳೆ, ಹೋಗಿ ತಿಳಿದು ಬಾ” ಎನ್ನುತ್ತಾನೆ. ಆಗ ಸುಭದ್ರೆ ಅತ್ತಿಗೆಯೆಡೆ ಹೋಗಿ,” ಸಣ್ಣಕ್ಕಿಯನ್ನು ತಳಿಸುವ ಅತ್ತಿಗೆ, ನಿನಗೆ ನೆರವಾಗುತ್ತೇನೆ" ಎನ್ನುವಾಗಲೇ ಅತ್ತಿಗೆ, “ಸಣ್ಣಕ್ಕಿ ತಳಿಸಲು ನನಗೆ ಆಳುಗಳಿವೆ, ನೀನು ದಿಟ್ಟತನ ತೋರದೆ ನಿನ್ನ ಮನೆಗೆ ಹೋಗು,” ಎನ್ನುತ್ತಾಳೆ. ಸಿಟ್ಟಿಗೆದ್ದ ಸುಭದ್ರೆ, ಸೋಡಿಯಾಟವಾಡುತ್ತಿರುವ ಅಭಿಮನ್ಯುವಿನೆಡೆ ಹೋಗಿ, “ಅಭಿಮನ್ಯು ನಿನ್ನತ್ತೆಮಾವ ಸೊಕ್ಕಿನಲ್ಲಿದ್ದಾರೆ” ಎಂದು ಅಭಿಮನ್ಯುವನ್ನು ರೇಗಿಸುತ್ತಾಳೆ. ಆಗ ಅಭಿಮನ್ಯು, “ಅವರ ಮಗಳನ್ನು ತರದೇಯಿದ್ದರೆ ನಾನು ವೀರ ಪಾಂಡವರ ಮಗನಲ್ಲ” ಎಂದು ಪಣತೊಟ್ಟು, ಆನೆಯೇರಿ ಮನೆಗೆ ಬರುತ್ತಾನೆ. ಮನೆಗೆ ಬಂದು ವಸ್ತ್ರಾಭರಣಗಳಿಂದ ಅಲಂಕರಣಗೊಂಡು ಆನೆಯೇರಿ ಮಾವನ ರಾಜ್ಯಕ್ಕೆ ಬರುತ್ತಾನೆ.

ಮಾವನರಮನೆಯಲ್ಲಿ ಮಾವನ ಆತಿಥ್ಯ ಸ್ವೀಕರಿಸಿ, ಮಾವನ ಪಾದಕ್ಕೆರಗುತ್ತಾನೆ. ಮಾವ “ಆಯುಷ್ಯವಂತನಾಗು, ನಿನ್ನ ಪಟ್ಟೆ ಮುಂಡಾಸು ಸ್ತಿರವಾಗಲಿ" ಎಂದು ಹರಸುತ್ತಾನೆ. ಆಗ ಅಭಿಮನ್ಯು, “ಕಟ್ಟಿದ ಮುಂಡಾಸಕ್ಕೆ ಎಲ್ಲರೂ ಹರಸುತ್ತಾರೆ; ನಾನು ನಿನ್ನ ಮಗಳಿಗಾಗಿ ಬಂದಿದ್ದೇನೆ.” ಎಂದಾಗ ಮಾವ ಈ ಮೊದಲೇ ಕೌರವರು ಹೆಣ್ಣಿಗೆ ಚೂಡಂಗ ತೊಡಿಸಿದ ವಿಚಾರವನ್ನು ಹೇಳುತ್ತಾನೆ. ಅಭಿಮನ್ಯು, “ಅವರಿಟ್ಟ ಚೂಡಂಗವನ್ನು ಬಿಚ್ಚಿ ಬಿಸುಟು, ನಾನು

ಕೈಕಡಗವನ್ನಿಡುತ್ತೇನೆ" ಎಂದು ಆರ್ಭಟಿಸುವಾಗ ನಾರಾಯಣದೇವ ಮುಗುಳು ನಗುತ್ತಾನೆ.

ಇನ್ನೊಂದೆಡೆ ಮಾದೇವಿ ಮಗಳಿಗೆ, "ಅಭಿಮನ್ಯುವಿಗೆ ನೀನು ಮದುವೆ ಯಾದರೆ, ನಿನಗಂಬಲಿಯುಣಿಸುವರು, ಕಂಬಳಿ ಹೊದಿಸುವರು, ಡೊಂಬರ ಭಾಷೆಯನು ಕಲಿಸುವರು. ಮಗಳೇ ಅಭಿಮನ್ಯುವಿಗೆ ಹಾಗೂ ನಿನಗೆ ಸರಿ ಜೋಡಿಯಲ್ಲ; ಕೌರವರ ಭಾವನಿಗೆ ನೀನು ಸರಿಜೋಡಿ" ಎಂದು ಮಗಳಿಗೆ ಕಿವಿ ಚುಚ್ಚುತ್ತಾಳೆ. ಆಗ ಕನಕಾಂಗಿ, "ಅಂಬಲಿಯುಣಿಸಲಿ, ಕಂಬಳಿ ಹೊದಿಸಲಿ, ನಾನು ಅಭಿಮನ್ಯು ಭಾವನಿಗೆ ಸರಿಜೋಡಿ, ಕೌರವರ ಭಾವನಿಗಲ್ಲ" ಎಂದು ಮುತ್ತಿನ ಚಪ್ಪರಕ್ಕೆ ಬರುತ್ತಾಳೆ. ಕೂಡಲೇ ಅಭಿಮನ್ಯು, "ಮುತ್ತಿನ ಚಪ್ಪರದಲ್ಲೋಡಾಡುವ ಕನಕಾಂಗಿ ಮುತ್ತಿನ ವೀಳ್ಯವನ್ನು ಹಿಡಿದು ಹೋಗು," ಎಂದ ಕೂಡಲೇ ಕನಕಾಂಗಿ ಮುತ್ತಿನ ವೀಳ್ಯವನ್ನು ಸ್ವೀಕರಿಸುತ್ತಾಳೆ. ಅಭಿಮನ್ಯು ಕೂಡಲೇ ಅವಳ ನಳಿತೋಳನ್ನು ಹಿಡಿದು ಕೈಗೆ ಕಡಗವನ್ನು ತೊಡಿಸುತ್ತಾನೆ. ಕೂಡಲೇ ಕನಕಾಂಗಿ ಮಾಳಿಗೆಯೇರಿ, ಪಟ್ಟೆ ಸೀರೆಯನ್ನುಟ್ಟು, ಸಿಂಗಾರ ಸೂಡಿ, ಅಭಿಮನ್ಯುವಿನೆಡಕ್ಕೆ ಬಂದು ಕುಳ್ಳುತ್ತಾಳೆ. ನಾರಾಯಣದೇವ ಹೊನ್ನಗಿಂಡಿ ಹೊತ್ತು ಧಾರೆಮಂಟಪಕ್ಕೆ ಬರುತ್ತಾನೆ; ಉಪಾಯಗಾಣದೆ ಮಾದೇವಿಯೂ ಬರುತ್ತಾಳೆ. ನಾರಾಯಣದೇವ ಧಾರೆಯೆರೆಯುತ್ತಾನೆ. ಮಾಣಿಕ್ಯದ ಜ್ಯೋತಿಯುರಿಯುವ ಹಸಗರದಲ್ಲಿ ಅಭಿಮನ್ಯು ಕನಕಾಂಗಿಯರು ಮಂಡಿಸುತ್ತಾರೆ. ಉಡುಗೊರೆ ಅಳಿಯ ಮಗಳಿಗೆ ಸಂದಾಯ ವಾಗುತ್ತದೆ. ಸಡಗರದಿಂದ ಕನಕಾಂಗಿ ದಿಬ್ಬಣ ಹೊರಡುತ್ತದೆ.

ದಿಬ್ಬಣ ಹೊರಡುವಾಗ ಮಾವ ನಾರಾಯಣದೇವ ಅಳಿಯನಿಗೆ, "ಕೊಡುವಷ್ಟು ಬಳುವರಿ ಕೊಟ್ಟಿದ್ದೇನೆ. ಏನು ಬಳುವರಿ ತಂದಿಯೆಂದು ನನ್ನ ಮಗಳನ್ನು ಜರಿಯದಿರು," ಎಂದಾಗ ಅಭಿಮನ್ಯು "ಬಳುವರಿ ಕೊಟ್ಟರೆ ಮಗಳು ಬೆಳಗುಣ್ಣುವಳು; ನಾನು ಹೇಳದೆ ಇರುವವನಲ್ಲ" ಎನ್ನುತ್ತಾನೆ. ಅತ್ತಿಯ ಮರದವರೆಗೆ ಅತ್ತೆ ಬಂದು, "ನನ್ನ ಮಗಳಿಗೆ ಹೊಡೆಯಬೇಡ, ಬಯ್ಬೇಡ" ಎಂದಾಗ ಅಭಿಮನ್ಯು, "ಹೊಡೆಯಲಿಕ್ಕೆ, ಬಯ್ಯಲಿಕ್ಕೆ ನಾನೇನೂ ಮರುಳನಲ್ಲ. ನನಗೆ ಹಾಗೂ ನನ್ನಮ್ಮನಿಗೆ ಅಂಜಿ ನಡೆದರೆ ಬಾಳೆ ಸುಳಿಯಂತೆ ಅವಳನ್ನು ಬಾಳಿಸಿಕೊಳ್ಳುವೆನು" ಎಂದು ಆನೆಯೇರಿ ಅಭಿಮನ್ಯು ತನ್ನರಮನೆಗೆ ಹೋಗುತ್ತಾನೆ.

ಮನೆಯ ಬಾಗಿಲಲ್ಲಿ ತಾಯಪ್ವಿ ಮುತ್ತನ್ನು ಕುಟ್ಟಿ ಪುಡಿಮಾಡಿ, ಬಾಗಿಲಲ್ಲಿ ನಿಂತ ವಧೂವರರಿಗೆ ಮುತ್ತಿನಾರತಿಯೆತ್ತುತ್ತಾಳೆ. ಅಭಿಮನ್ಯು ಕನಕಾಂಗಿಯರು ಮುತ್ತಿನಾರತಿಗೆ ತಲೆಬಾಗಿ ತುಲಸಿಯ ಮುಂದೆ ಹೋಗಿ ನಿಲ್ಲುತ್ತಾರೆ. ಆಗ

ಅಭಿಮನ್ಯು ಕನಕಾಂಗಿಯರ ಬಾಸಿಂಗ ತೊಂಡಿಲಗಳನ್ನು ಸಡಿಲಿಸಿ, ಚಿನ್ನದ ಕೋಳ್ಗಂಟಕ್ಕೆ ಕಟ್ಟುತ್ತಾರೆ. ನವ ದಂಪತಿಗಳು ತುಲಸಿಗೆ ಕೈಮುಗಿದು ಪಟ್ಟೆ ಮಂಚದಲ್ಲಿ ಆಸೀನರಾಗುತ್ತಾರೆ.

ಅಭಿಮನ್ಯು : ನಾರಾಯಣದೇವನೊಡಗೂಡಿಕೊಂಡು ಗಂಗೆಯ ಯಾತ್ರೆಗೆ ಹೋಗಲು ನಿಶ್ಚಯಿಸಿದ ಅರ್ಜುನ ದೇವಲೋಕ, ನಾಗಲೋಕಗಳಿಗೆ ತೆರಳಿ ಅಲ್ಲಿಂದ ಅಭಿಮನ್ಯುವಿಗೆ ಪಟ್ಟೆಗಳನ್ನು ತಂದು, ಅಭಿಮನ್ಯುವನ್ನು ಸಿಂಗರಿಸಿ, “ಮಗನೇ ನೀನು ರಾಜ್ಯವಾಳುವವನು. ನೀನುಟ್ಟ ಈ ಪಟ್ಟೆಯನ್ನು ನೀನು ಯಾರು ಬೇಡಿದರೂ ಕೊಡಬೇಡ, ಕೊಟ್ಟರೆ ನಿನ್ನ ಆಯುಷ್ಯದ ಸಿರಿ ತೊಲಗುವುದು” ಎಂದು ಹೇಳಿ ಹೆಂಡತಿ ಸುಭದ್ರೆಯನ್ನು ಕರೆದು, “ಅಭಿಮನ್ಯುವನ್ನು ಕಾಳಗಕ್ಕೆ ಕಳಿಸಬೇಡ, ನಾನು ಗಂಗೆಗೆ ಹೋಗಿ ಬರುತ್ತೇನೆ” ಎಂದು ಅರ್ಜುನ ದೇವರ ಪೂಜೆಯನ್ನು ಮುಗಿಸಿ ಗಂಗೆಗೆ ಹೊರಡಲು ಸಿದ್ಧನಾದ. ಆಗ ಆ ನಾರಾಯಣದೇವ ಅವನ ಜೊತೆಗೂಡುತ್ತಾನೆ.

ಗಂಗೆಗೆ ಹೋದ ಅರ್ಜುನ ಗಂಗೆಯನ್ನು ಪೂಜಿಸಿ ಮೂರು ಸಲ ಮುಳುಗೇಳುತ್ತಾನೆ. ಆಗ ನಾರಾಯಣದೇವ “ನೀನು ಮೂರು ಸಲ ಗಂಗೆ ಮುಳುಗೆದ್ದದ್ದು, ನಿನ್ನ ಅಪ್ಪ, ಅಮ್ಮ ಹಾಗೂ ಹಿರಿಯರಿಗಾಯಿತು. ನನಗಾಗಿ ನಾಲ್ಕನೇ ಸಲ ಮುಳುಗು” ಎಂದು ಹೇಳಿದ. ಅರ್ಜುನ ನಾಲ್ಕನೆಯ ಬಾರಿ ಮುಳುಗಿದಾಗ ನಾರಾಯಣದೇವ ನೀರಿಗಿಳಿದು, ಅರ್ಜುನನನ್ನು ಚಂಡಿಕೆ ಹಿಡಿದೊತ್ತಿ ನೀರಿನಲ್ಲಿ ಮುಳುಗಿಸಿ, ತಾನು ಗಂಗೆಯಲ್ಲಿ ಮಿಂದು ತಂಗಿಯರಮನೆಗೆ ಹಿಂದಿರುಗುತ್ತಾನೆ.

ತಂಗಿಯ ಮನೆಗೆ ಬಂದ ನಾರಾಯಣದೇವ ತಂಗಿಗೆ “ನಾನು ಗಂಗೆಗೆ ಹೋಗುವಾಗ ಸೂರ್ಯದೇವನ ಹಾಗಿದ್ದ ನೀನು ಇಂದೇಕೆ ಹಣ್ಣೆಲೆಯಂತೆ ಬಾಡಿದ್ದೀಯೆ?” ಎಂದು ಪ್ರಶ್ನಿಸುತ್ತಾನೆ. ಆಗ ಸುಭದ್ರೆ, “ಇಬ್ಬರು ಹೋದವರಲ್ಲಿ ಒಬ್ಬನೇ ಬಂದಿದ್ದೀಯೆ ಇನ್ನೊಬ್ಬರೆಲ್ಲಿ?” ಎನ್ನುತ್ತಾಳೆ. ಆಗ ನಾರಾಯಣದೇವ “ಗಂಗೆಗೆ ಹೋದವರು ತಿರುಪತಿಗೆ ಹೋಗಿರಬೇಕು. ಇನ್ನೊಂದರಗಳಿಗೆಯಲ್ಲಿ ಬರುತ್ತಾನೆ” ಎಂದು ಹೇಳಿ ತಂಗಿಗೆ ಒರಳಲ್ಲಿ ಕುಟ್ಟದ, ಉಗುರಲ್ಲಿ ಸುಲಿಯದ ಅಕ್ಕಿಯಿಂದ ಮಾಡಿದ ಹಾಲ್ಗಂಜಿಯೂಟಕ್ಕೆ ಅಣಿಮಾಡ ಹೇಳುತ್ತಾನೆ. ಸುಭದ್ರೆ ಊಟವನ್ನು ಸಿದ್ಧಗೊಳಿಸಿ ಊಟಕ್ಕೆ ಕರೆದಾಗ, ನಾರಾಯಣದೇವ, “ಅಡಿಗೆ ಮಾಡಿ ಖುಷಿ ಪಡಬೇಡ, ನಿನ್ನ ಕಂದನನ್ನು ಯುದ್ದಕ್ಕೆ ಕಳುಹು” ಇಲ್ಲದಿದ್ದರೆ ನಿನ್ನ ಬಾಗಿಲಿಗೆ ದಂಡನ್ನು ತಿರುಗಿಸಿ ಅವನನ್ನು ಕೊಲ್ಲುತ್ತೇನೆ” ಎಂದು ಹೆದರಿಸುತ್ತಾನೆ. ಆಗ ಸುಭದ್ರೆ, “ಎಣ್ಣೆಯುದ್ದಿದರೆ ಕಣ್ಣೀರಿಡುವ, ಹರಗಿ ಸೊಪ್ಪಿನ ರಸ ಕಂಡು ಬೆದರುವ, ಯುದ್ಧ ಕಲಿಯದ ಮಗನನ್ನು ಕಾಳಗಕ್ಕೆ ಕಳುಹಲಾರೆ”

ಎನ್ನುತ್ತಾಳೆ. ಆಗ ನಾರಾಯಣದೇವ," ಅರಸು ಮಕ್ಕಳು ತಾಯ ಗರ್ಭದಲ್ಲೇ ಯುದ್ಧವನ್ನು ಕಲಿತಿರುತ್ತಾರೆ. ಕಡಚಕ್ರವನ್ನಾಡಿ ಗೆಲ್ಲುತ್ತಾರೆ" ಎನ್ನುವಾಗ ಸುಭದ್ರೆ "ಬೇಲಿ ಕೆಯ್ಯನ್ನು ತಿನ್ನುವಾಗ ನೀನೇ ನಿನ್ನಳಿಯನನ್ನು ಕೊಲ್ಲುವಾಗ ನಾನು ಯಾರ ಹತ್ತಿರ ನನ್ನ ಅಳಲು ತೋಡಿಕೊಳ್ಳಲಿ?" ಎಂದು ವ್ಯಥಿಸುವಳು. ನಾರಾಯಣದೇವ, "ಅಭಿಮನ್ಯು ನಿನಗೆ ಮಗ, ನನಗೆ ಅಳಿಯ ನನಗೂ ನಿನ್ನಷ್ಟೇ ದುಃಖವಿದೆ. ನೀನು ಕಂದನನ್ನು ಕಾಳಗಕ್ಕೆ ಕಲಿಮಾಡು." ಎಂದು ಅಂತಿಮ ನಿರ್ದೇಶನ ಕೊಡುತ್ತಾನೆ.

ಸುಭದ್ರೆ ಸೋಡಿಯಾಡುತ್ತಿದ್ದ ಮಗನನ್ನು ಕರೆದು, ಬೆಂಕಿಗೆ ಉಪ್ಪು ಹಾಕಿ ಕೆಟ್ಟ ದೃಷ್ಟಿ ತೆಗೆಯುವಳು. ನಾರಾಯಣದೇವ ಅಭಿಮನ್ಯು ದೃಷ್ಟಿಗೆ ಕತ್ತಲೆ ಕವಿಸುತ್ತಾನೆ. ಅಭಿಮನ್ಯು ಮನೆಯೆಲ್ಲ ತಡಕಾಡುತ್ತಾನೆ. ಸುಭದ್ರೆ ಮಗನಿಗೆ "ಎತ್ತ ಏನು ಹುಡುಕಾಡುವೆ" ಎಂದಾಗ ಅಭಿಮನ್ಯು "ಅಮ್ಮ ಕಣ್ಣಿಗೆ ಕತ್ತಲು ಮಾವನನ್ನು ಹುಡುಕಿ ನಮಸ್ಕರಿಸುವೆ" ಎನ್ನುತ್ತಾನೆ. ಆಗ ನಾರಾಯಣದೇವ ಅವನ ಕಣ್ಣ ಕತ್ತಲೆ ತೊಲಗಿಸಿ, ಅವನನ್ನು ಬೋಳೈಸಿ, ಕಾಳಗಕ್ಕೆ ಕಲಿಯಾಗಲು ಪುಸಲಾಯಿಸಿ ತನ್ನರಮನೆಗೆ ತೆರಳುತ್ತಾನೆ.

ಇತ್ತ ಸುಭದ್ರೆ ಕಣ್ಣೀರಿಡುವಾಗ ಅಭಿಮನ್ಯು "ಅಮ್ಮಾ ಚಿಂತಿಸದಿರು. ಬಾಳೆಯ ಸುಳಿಯಲ್ಲಿ ಕತ್ತಿಯನ್ನು ಮಸೆದು, ವೈರಿಯ ತಲೆಯನ್ನು ಕತ್ತರಿಸುತ್ತೇನೆ." ಎಂದು ತಾಯಿ ಮತ್ತು ಅಜ್ಜಿಯರನ್ನು ಸಮಾಧಾನಪಡಿಸಿ, ತಾಯಿಗೆ ದಂಡಿನೂಟ ಸಿದ್ಧಪಡಿಸಲು ಹೇಳಿ, ಆನೆಯ ಸಾಲಿಗೆ ಬಂದು ಆನೆಯನ್ನು ಸಿಂಗರಿಸಿ, ಯುದ್ಧ ಕರೆಗೆ ಹೋಗುತ್ತಾನೆ. "ಅಕ್ಕ ತಂಗಿಯರ ಮಕ್ಕಳೇ, ಕತ್ತಿ ಕೋವಿಯವರೇ, ಸೀಗ್ರರೇ ನೀವೆಲ್ಲ ದಂಡಿಗೆ ಬರಬೇಕು" ಎಂದು ದಂಡಿನ ಕರೆಯನ್ನು ಮುಗಿಸಿ ಮನೆಗೆ ಬರುತ್ತಾನೆ.

ಮನೆಯಲ್ಲಿ ದಂಡಿನೂಟ ಸಿದ್ಧವಾಗುತ್ತದೆ. ಅಭಿಮನ್ಯು ಸ್ನಾನ, ದೇವರ ಪೂಜೆ ಮಾಡಿ, ದಂಡಿನೂಟವನ್ನು ಸವಿದು, ತಾಯಿ ಅಜ್ಜಿಯರಿಗೆ "ಕಾಳಗದಲ್ಲಿ ನಿಮ್ಮ ಕಂಪಿನೂಟವನ್ನು ನೆನೆಯುತ್ತೇನೆ" ಎಂದು ಹೇಳಿ, ಯುದ್ದುಡಿಗೆಯನ್ನು ತೊಟ್ಟು ಕಾಳಗಕ್ಕೆ ಸಜ್ಜಾಗುತ್ತಾನೆ. ಆಗ ಸುಭದ್ರೆ "ಅಭಿಮನ್ಯು ನೀನು ಕಾಳಗಕ್ಕೆ ಸಿದ್ಧನಾಗಿದ್ದಿ, ಅಲ್ಲಿ ನಿನ್ನ ಮಾವನ ಮಗಳು ನೆರೆದಿದ್ದಾಳೆ ಅವಳನ್ನು ಭೋಗಿಸಲಾರೆಯಾ?" ಎಂದಾಗ ಅಭಿಮನ್ಯು "ಅವಳನ್ನು ಭೋಗಿಸಬಲ್ಲೆ. ಈಗ ನೀನು ನನ್ನನ್ನು ದಂಡಿಗೆ ಹರಸಿ ಕಳಿಸು." ಎಂದು ಆನೆಯೇರುತ್ತಾನೆ. ಸುಭದ್ರೆ ಮಗನಿಗೆ ಆರತಿಯೆತ್ತಿ, "ಕಾಳಗದಲ್ಲಿ ಕಲಿಯಾಗಿ ಕಾದಿ ನೂರಾಳು ಸವರಿ ಮನೆಗೆ ಬಾ" ಎಂದು ಹಾರೈಸಿದಾಗ, ಆರತಿ ಎರಡು ಕುಡಿಯಾಗುತ್ತದೆ. ಆಗ ಸುಭದ್ರೆ ಚಿಂತಿಸುತ್ತಾಳೆ. ಆಗ ಅಭಿಮನ್ಯು ತಾಯಿಯನ್ನು ಸಮಾಧಾನಪಡಿಸಿ,

ಆನೆಯಂಬಾರಿಯೇರಿ, ಕೆಂದೂಳನ್ನು ಆಕಾಶಕ್ಕೇರಿಸುತ್ತ ಕೇರಿಯ ಮೇಲಿಂದ ಹೊರಡುವಾಗ ಸುಮಂಗಲೆಯರು ಬಾಲ ಅಭಿಮನ್ಯು ಯುದ್ಧಕ್ಕೆ ಹೋಗುವುದನ್ನು ನೋಡಿ ಕಣ್ಣೀರಿಡುತ್ತಾರೆ, ತಮ್ಮ ಮುತ್ತಿನ ಸರಗಳನ್ನು ಅಭಿಮನ್ಯುವಿನ ಕೊರಳಿಗಿಕ್ಕಿ ಶೂನ್ಯ ಮನಸ್ಕರಾಗುತ್ತಾರೆ.

ಅಭಿಮನ್ಯು ರಸರಾಳಿಯ ಮನೆಗೆ ಬರುತ್ತಾನೆ. ಕಿರಿಯ ರಾಣಿ ರಸರಾಳಿಯ ಮಗಳು ಓಡಿ ಬಂದು ಅಭಿಮನ್ಯುವಿನ ತೊಡೆಯನ್ನೇರುತ್ತಾಳೆ. ಅವಳನ್ನು ಅಭಿಮನ್ಯು ಮುಂಡಾಡಿ ಮುದ್ದಿಸುತ್ತಾನೆ. ಹೆಂಡತಿ ತನ್ನ ತೊಡೆಯಿಂದಿಳಿಯುವಾಗ ತನ್ನ ಕೊರಳಿನ ಪಾವನ ಸರವನ್ನು ಅವಳಿಗಿಕ್ಕಿ ಅಭಿಮನ್ಯು ಖಿನ್ನತೆಯಿಂದ ಅಲ್ಲಿಂದ ಹೊರಟು ನಾರಾಯಣದೇವನ ಮನೆಗೆ ಬರುತ್ತಾನೆ. ಅವನ ಬರವನ್ನು ಗ್ರಹಿಸಿದ ನಾರಾಯಣದೇವ ಬಾಗಿಲ ಕಾಯುವವರಿಗೆ, "ಅಭಿಮನ್ಯು ಬರುತ್ತಿದ್ದಾನೆ. ಅವನಿಗೆ ಬಾಗಿಲು ಬಿಡದಿರಿ. ಅವನು ತಾನು ಕನಕಾಂಗಿಯ ಪತಿ, ನಾರಾಯಣದೇವನ ಅಳಿಯನೆಂದರೂ ಬಾಗಿಲು ಬಿಡದೆ, ಅವನುಟ್ಟ ಪಟ್ಟೆಯನ್ನಿತ್ತಾಗ ಮಾತ್ರ ಬಾಗಿಲು ಬಿಡಿರಿ" ಎಂದು ಕಟ್ಟಪ್ಪಣೆ ಮಾಡುತ್ತಾನೆ. ತನ್ನ ಮಗಳನ್ನು ಮುದ್ದಿಸಿ, "ಅಭಿಮನ್ಯು ಬರುತ್ತಿದ್ದಾನೆ; ಅವನಿಗೇನೆಂದು ಹರಸುವೆ" ಎಂದಾಗ ಅವಳು ಗಂಡನ ಆಯುಷ್ಯ ಹೆಚ್ಚಾಗಲಿ ಎಂದು ಹೇಳುತ್ತಿರುವಾಗಲೇ ನಾರಾಯಣದೇವ "ನಿನ್ನ ಕಿರುನಾಲಿಗೆ ಮುರಿದು ಹೋಗಲಿ" ಎಂದು ಮಗಳಿಗೆ ಶಾಪವೀಯುತ್ತಾನೆ. ಕಿರುನಾಲಿಗೆ ಮುರುಟಿ ಮಾತನಾಡಲಾಗದ ಕನಕಾಂಗಿ ಪಟ್ಟೆಯುಟ್ಟು ಹೂ ಮುಡಿದು ಮಾಲ್ಯದ ಕಂಬ ಸೇರಿ ನಿಂತಳು.

ಮಾವನರಮನೆಗೆ ಬಂದ ಅಭಿಮನ್ಯು ದ್ವಾರಪಾಲಕರಿಗೆ ದಾರಿ ಬಿಡ ಹೇಳುತ್ತಾನೆ. ಆಗ ಅವರು ದೇವರಪ್ಪಣೆಯಿಲ್ಲದೇ ಬಾಗಿಲು ಬಿಡಲಾಗದು ಎಂದಾಗ, ಅಭಿಮನ್ಯು "ತಾನು ಕನಕಾಂಗಿ ಪತಿ, ನಾರಾಯಣ ದೇವನ ಅಳಿಯ" ಎಂದಾಗ, ಅವರು ನೀನುಟ್ಟ ಪಟ್ಟೆಯನ್ನು ಉಡುಗೊರೆ ಕೊಟ್ಟರೆ ಮಾತ್ರ ಬಾಗಿಲನ್ನು ಬಿಡುತ್ತೇವೆ" ಎಂದು ಹೇಳಿ ಅವನಿಂದ ಪಟ್ಟೆಯನ್ನು ಉಡುಗೊರೆಂಯಾಗಿ ಪಡೆದು ಬಾಗಿಲನ್ನು ಬಿಡುತ್ತಾರೆ. ಇದರಿಂದ ಅಭಿಮನ್ಯುವಿನಾಯುಷ್ಯ ಕಡಿಮೆಯಾಗುತ್ತದೆ.

ಒಳಪ್ರವೇಶಿಸಿದ ಅಭಿಮನ್ಯು ಎದುರಾದ ಭಾವಂದಿರ ಹತ್ತಿರ "ಭಾವ ನಿಮ್ಮನೆಯಲ್ಲಿ ಸಾವಿರಾರು ಜನ, ಅವರಲ್ಲಿ ನಿಮ್ಮ ಕಿರಿ ತಂಗಿ ಯಾರು?" ಎಂದಾಗ ಅವರು "ಪಟ್ಟೆಯುಟ್ಟು, ಮಲ್ಲಿಗೆ ಮುಡಿದು ಮಾಲ್ಯದ ಕಂಬ ಸೇರಿ ನಿಂತವಳು" ಎಂದ ಕೂಡಲೇ ಅಭಿಮನ್ಯು ಅವಳ ಸೆರಗು ಹಿಡಿದು, "ನಾರಾಯಣ ದೇವನ ಮಗಳು ನಾಡಿಗೊಳ್ಳೆಯವಳು. ಮಾತಾಡಿದರೆ ಮುತ್ತು ಸುರಿಯುವದೆಂದು ನಿನ್ನಪ್ಪ ಮಾತಾಡಬೇಡೆಂದು ಹೇಳಿದ್ದಾನೆಯೆ?" ಎಂದು

ಛೇಡಿಸುವಾಗ ನಾರಾಯಣದೇವ ಅವಳಿಗಿಟ್ಟ ಶಾಪವನ್ನು ಹಿಂದೆಗೆಯುತ್ತಾನೆ. ಆಗ ಕನಕಾಂಗಿ ಮುಗುಳ್ನಕ್ಕು ಗಂಡನನ್ನ ಸ್ವಾಗತಿಸಿ ತಾಂಬೂಲವನ್ನು ನೀಡಿದಾಗ ನಾರಾಯಣದೇವ ಎಲೆಸರ್ಪವಾಗಿ ಹರಿಯುತ್ತಾನೆ. ಆಗ ಅಭಿಮನ್ಯು "ಕನಕಾಂಗಿ ನಿನ್ನಪ್ಪ ನಮಗೆ ಹಿಂದೂ ವೈರಿ, ಮುಂದೂ ವೈರಿ, ಹೋಗು ಹಾಸಿಗೆ ಹಾಸು" ಎಂದಾಗ ಕನಕಾಂಗಿ ಹಾಸಿಗೆ ಹಾಸಿ, ಅಭಿಮನ್ಯುವಿನೊಡನೆ ಒರಗುವಾಗ ನಾರಾಯಣದೇವ ಕಟ್ಟಿರುವೆಯಾಗಿ ಕನಕಾಂಗಿಯ ಪಾವನ ಸರ ಕಡಿಯುತ್ತಾನೆ. ಹರಿದ ಪಾವನಸರದ ಮಣಿಗಳನ್ನು ಕನಕಾಂಗಿ ಪೋಣಿಸುವಾಗ ಅಭಿಮನ್ಯು "ಹರಿದ ಮಣಿಗಳನ್ನು ಪೋಣಿಸುವುದು ಗರತಿಯರಿಗೆ ಸಲ್ಲ" ಎಂದು ಹೇಳಿ, ಬೇರೆಡೆ ಹಾಸಿಗೆ ಏರ್ಪಾಡು ಮಾಡಿಕೊಂಡು ಕನಕಾಂಗಿಯೊಡನೆ ಮಲಗುವಾಗ ನಾರಾಯಣದೇವ ಕಲ್ಲಕೋಳಿಯಾಗಿ ಸರಗೈಯ್ಯುತ್ತಾನೆ. ಆಗ ಅಭಿಮನ್ಯು "ಕೋಳಿ ಕೂಗಿದ ಮೇಲೆ ಹೆಂಡಿರ ಹಾಸಿಗೆ ಸಲ್ಲ, ಅದು ಗಂಡಸುತನಕ್ಕೆ ಹೊಲ್ಲ" ಎಂದಾಗ ಕನಕಾಂಗಿ "ಊರ ಕೋಳಿಯಾದರೆ ಊರೆಲ್ಲ ಬೆಳಕಾಗುತ್ತಿತ್ತು. ಕೂಗಿದ್ದು ಊರಕೋಳಿಯಲ್ಲ, ಸಿಂಹ ಕೋಳಿ, ನನ್ನಪ್ಪ ಕಲ್ಲ ಕೋಳಿಯಾಗಿ ಸರಗೈದಿದ್ದಾನೆ." ಎನ್ನುತ್ತಾಳೆ. ಅಭಿಮನ್ಯು ವೈರಿ ನಿನ್ನಪ್ಪ ಒಂದು ದಿನವೂ ನಿನ್ನೊಡನೆ ಇರಗೊಡನು. ನನ್ನನ್ನು ಹರಸಿ ದಂಡಿಗೆ ಕಳಿಸು" ಎನ್ನುವನು. ಕನಕಾಂಗಿ, "ನೀನು ಹೋಗುವ ರಕ್ಕಸ ಕೋಟೆ ಕಾಳಗಕ್ಕೆ ಹೋದವರು ಹಿಂದಿರುಗಿ ಬಂದದ್ದೇ ಇಲ್ಲ." ಎಂದು ದುಃಖಿಸುತ್ತಾಳೆ. ಗಂಡನಿಗೆ ತನ್ನ ಪಟ್ಟೆಯೊಂದನ್ನು ಕನಕಾಂಗಿ ಕೊಡಹೋದಾಗ ಅಭಿಮನ್ಯು, "ನಾನು ದಂಡಿಗೆ ಹೋಗುತ್ತಿದ್ದೇನೆ. ಈ ಹೆಂಗಸರ ಪಟ್ಟೆಯನ್ನು ಕಂಡರಸರು ನಗುವರು; ಇದನ್ನು ನಿನ್ನ ಅತ್ತಿಗೆಯರು ಉಟ್ಟು ಹರಿಯಲಿ ಪೆಟ್ಟಿಗೆಯಲ್ಲಿಡು" ಎಂದು ಕಾಳಗಕ್ಕೆ ಸಜ್ಜಾಗಿ ರಾಜಂಗಳದಲ್ಲಿ ನಿಲ್ಲುತ್ತಾನೆ. ಕನಕಾಂಗಿ ಗಂಡನಿಗೆ "ಕಲಿಯಾಗಿ ಕಾದಿ, ನೂರಾಳು ಕಡಿದು ಬಾ" ಎಂದು ಮುತ್ತಿನಾರತಿ ಬೆಳಗುತ್ತಾಳೆ. ಅಲ್ಲಿಯೂ ಆರತಿ ಎರಡು ಕುಡಿಯಾಗಿ ಬೆಳಗಿ ಅಪಶಕುನವನ್ನೇ ಸೂಚಿಸುತ್ತದೆ.

ಅಭಿಮನ್ಯುವಿನ ಅಕ್ಕತಂಗಿಯರ ಮಕ್ಕಳು, ಕೋವಿಯವರು, ಸೀಗ್ರರೆಲ್ಲ ಕಾಳಗಕ್ಕೆ ಸಿದ್ಧರಾಗುತ್ತಾರೆ. ಅಭಿಮನ್ಯು ವೀರಗಾಸೆಯುಟ್ಟು, ಬಿಲ್ಲು ಬಾಣ, ಉಕ್ಕಿನ ಕತ್ತಿ ಹಿಡಿದು ದಂಡಿನ ಕೋಟೆಗೆ ಹೋಗಿ ಒಂದು ಸುತ್ತು ತಿರುಗಿ ಸುತ್ತಿನ ಮಂದಿಯನ್ನು ಚೆಂಡಾಡುತ್ತಾನೆ. ಇದನ್ನು ಗಮನಿಸಿದ ನಾರಾಯಣದೇವ ಗಾಬರಿಗೊಂಡು ಕರ್ಣನೆಡೆ ಧಾವಿಸಿ, "ಭಾವಾ ಯಾವುದೋ ಊರಿನ ದಂಡು ಬಂದು, ದಂಡಿನ ಕೋಟೆ ನಾಶ ಮಾಡಿದೆ. ನೀನು ಕರಿಯ ವಸ್ತ್ರ ತೊಟ್ಟು, ಸಣಚಕ್ರ ಕೋಟಿ ಹಿಡಿದು ಕಾರ್ಮುಗಿಲಿನಂತೆ ಬರಬೇಕು. ಕೋಟೆಯ ಮರೆ ಸೇರಿ ವೈರಿಯನ್ನು ಹಣಿಯಬೇಕು." ಎಂದು ತಿಳಿಸುತ್ತಾನೆ. ಆಗ ಕರ್ಣ ಕಾರ್ಮುಗಿಲಿನಂತೆರಗಿ ಕೋಟೆಯ ಮರೆ ಸೇರಿ ಹೊಡೆದಾಗ ಅಭಿಮನ್ಯು

ಮುಂಗಾಲು ಮುರಿದು ಬೀಳುತ್ತಾನೆ. ಹಿಂದಿರುಗಿ ನೋಡಿದರೆ ಅವನ ದೊಡ್ಡಪ್ಪ ಕರ್ಣ. ಆಗ ಅಭಿಮನ್ಯು "ದೊಡ್ಡಪ್ಪ ಎದುರಾಗಿ ಬಂದರೆ ನಿನ್ನ ಸಾಮರ್ಥ್ಯವನ್ನು ನೋಡುತ್ತಿದ್ದೆ, ಮೋಸದಲ್ಲಿ ನನ್ನನ್ನು ಕೊಲ್ಲಬಂದೆಯಾ?" ಎಂದ ಧ್ವನಿಯನ್ನು ಕೇಳಿ ಕರ್ಣ ತಾನು ಹೊಡೆದದ್ದು ಅಭಿಮನ್ಯುವೆಂದರಿತು, "ಅಯ್ಯೋ ಮಗನೆ ನೀನೆಂದರಿಯದೆ ಹೊಡೆದೆ. ಈಗ ಏನು ಮಾಡಿದರೆ ನೀನು ಬದುಕುವೆ"? ಎಂದಾಗ, ಅಭಿಮನ್ಯು ಧೀರೋದಾತ್ತತೆಯಿಂದ, "ನನ್ನ ಸಂಗಡಿಗರು ಮುಳ್ಳು ತೆಗೆಯುವಾಗ, ಪನ್ನೆ ಮಾಡುವಾಗ ಇದೆಂಥ ಕಲೆಯೆಂದು ನನ್ನನ್ನು ಪ್ರಶ್ನಿಸಿದರೆ ನನಗೆ ಸತ್ತಂತಾಗುವುದು." ಎನ್ನುತ್ತಾನೆ. ಅಭಿಮನ್ಯುವಿನ ಧೀರ ನುಡಿಯನ್ನು ಕೇಳಿದ ಕರ್ಣನು "ಅಭಿಮನ್ಯು ಬಿದ್ದಲ್ಲಿ ಪೇಟೆ ಪಟ್ಟಣವಾಗಲಿ, ಮಾಲ್ಯದ ಕಂಬವಾಗಲಿ, ಅವನಿಗೆ ಮನೆಯಷ್ಟೇ ಸುಖವಾಗಲಿ, ತುಲಸಿಗಿಡ ಹುಟ್ಟಲಿ" ಎಂದು ಸಾವಿರ ಹರಸುತ್ತಾನೆ.

ಅಭಿಮನ್ಯು ತಾನು ಕಾಳಗದಲ್ಲುರುಳಿದ ಹಾಗೂ ಇನ್ನೂ ಕನ್ನೆಯಾಗಿಯೇ ಉಳಿದ ತನ್ನ ಹೆಂಡತಿ ರಸರಾಳಿ ಮಗಳಿಗೆ ಅರ್ಧ ಮುತ್ತೈದೆತನ ಮತ್ತು ಅರ್ಧರಾಜ್ಯವನ್ನು ಕೊಟ್ಟು ಅವಳ ತವರು ಮನೆಗೆ ಕಳಿಸುವ ವಿಚಾರವನ್ನು ಪತ್ರ ಮುಖೇನ ಗಿಳಿಗಳ ಜೊತೆಗೆ ತನ್ನ ಅಜ್ಜಿ ತಾಯಿ ಮತ್ತು ಮಡದಿಯರಿಗೆ ಕಳಿಸುತ್ತಾನೆ. ಪತ್ರವನ್ನೋದಿದ ಅಜ್ಜಿ, "ಹೆಣ್ಣು ಹೆತ್ತವರು ಕೆಟ್ಟರು, ನಾರಾಯಣ ದೇವನ ಹೆಣ್ಣು ತಂದು ಪಾಂಡವರು ಕೆಟ್ಟರು" ಎಂದು ಕಣ್ಣೀರಿಡುತ್ತಾಳೆ.

ಪತ್ರವೋದಿದ ಕನಕಾಂಗಿ ಗೋಳಿಡುತ್ತಾಳೆ. ಆಗ ನಾರಾಯಣದೇವ ಬಂದು "ಕರೆಯುವ ಎಮ್ಮೆಯ ಕರು ಸತ್ತಿತು. ಹಿರಿಯ ಮಗಳ ಗಂಡ ಸತ್ತ. ಇವಳು ಕಾಳೆಮ್ಮೆಗೆ ಹುಲ್ಲು ಹೊರಲಿಕ್ಕಾದಳು" ಎಂದು ಕನಕಾಂಗಿಯ ಒಂದು ಚಿನ್ನದ ಓಲೆಯನ್ನು ಕಳಚಿ ಆ ಸ್ಥಾನದಲ್ಲಿ ಮರದೋಲೆಯನ್ನು ತೊಡಿಸಿ ಕನಕಾಂಗಿಯೊಡನೆ ದಂಡಿನ ಕೋಟೆಗೆ ಹೊರಡುವಾಗ ಸೀಗ್ರರನ್ನು ಕರೆಸಿ, "ಓಲೆಯಿಲ್ಲದ ನಿಮ್ಮತ್ತಿಗೆ ಬರುತ್ತಿದ್ದಾಳೆ. ಅವಳನ್ನು ಕೂಡುಕೊಳ್ಳುವಿರೇನು?" ಎನ್ನುತ್ತಾನೆ. ಅವರು "ನಮ್ಮ ಆಳ್ತನಕ್ಕೆ ಹೊಂದಿಕೆಯಾದಲ್ಲಿ ಕೂಡಿಕೊಳ್ಳುತ್ತೇನೆ" ಎನ್ನುತ್ತಾರೆ.

ನಾರಾಯಣ ದೇವನೊಡನೆ ಒಂದೇ ಓಲೆಯಿಟ್ಟುಕೊಂಡು ಬರುತ್ತಿರುವ ಹೆಂಡತಿಯನ್ನು ನೋಡಿ ಅಭಿಮನ್ಯು, "ಒಂದೋಲೆಯಿಟ್ಟುಕೊಂಡು ಬಂದಿದ್ದೀಯೆ ಇನ್ನೊಂದೋಲೆ ನಿನ್ನಪ್ಪನಿಗೆ ಕೊಟ್ಟೆಯೇನು?" ಎಂದು ಹೆಂಡತಿಗೆ ಹೀನೈಸಿ ಮಾತಾಡುವಾಗ ನಾರಾಯಣದೇವ, ತಿರುಗಿ ಮನೆಗೆ ಬಂದು, ಕನಕಾಂಗಿಗೆ ಚಿನ್ನವನ್ನು ತೊಡಿಸಿ ದಂಡಿನ ಕೋಟೆಗೆ ಬರುತ್ತಾನೆ. ಕನಕಾಂಗಿ ಗಂಡನೊಡನೆ ಹೋಗಿ ಕುಳ್ಳುತ್ತಾಳೆ.

ಅಭಿಮನ್ಯುವಿನ ಪತ್ರವನ್ನೋದಿದ ಅಭಿಮನ್ಯುವಿನ ಇನ್ನೊಬ್ಬ ಹೆಂಡತಿ ಉತ್ತರೆ ಹೂದೋಟಕ್ಕೆ ಹೋಗಿ, ಸರಗಿ ಸೇವಂತಿಗೆಯಾದಿ ಹಲವು ಬಗೆಯ ಹೂಕೊಯ್ದು ದಂಡೆಕಟ್ಟಿ, ನೆತ್ತಿ ತುಂಬೆಣ್ಣೆ ಹಾಕಿ ಮಂಡೆ ಬಾಚಿ, ಹೂದಂಡೆ ಮುಡಿದು, ಪಟ್ಟೆ ಸೀರೆಯುಟ್ಟು, ಚಿನ್ನಯಿಟ್ಟು ತೊಟ್ಟಿಲಲ್ಲಾಡುವ ತನ್ನ ಕಂದನನ್ನೆತ್ತಿಕೊಂಡು, ಕುಂತಿಯೆಡೆ ಬಂದು, ತೊಟ್ಟಿಲ ಕಂದನನ್ನೊಪ್ಪಿಸಿ, "ನನ್ನ ಮಗನಿಗೆ ತಣ್ಣೆಯನ್ನ ಹಾಕಬೇಡಿ, ಕಂಬಳಿ ಹೊದಿಸಬೇಡಿ, ರಂಡೆಮಗ ನೆಂದು ಕರೆಯದಿರಿ, ಅವನನ್ನು ಚೆನ್ನಾಗಿ ಸಾಕಿ ಸಲಹಿರಿ" ಎಂದು ವಿನಂತಿಸಿ ದಂಡಿನ ಕೋಟೆಗೆ ಬರುತ್ತಾಳೆ. ಅಕ್ಕ ಕನಕಾಂಗಿಯೆಡೆ ಹೋಗಿ, "ತವರಿನಲ್ಲಿ ಪಡೆದ ಕಂದನನ್ನು ಅತ್ತೆಗೊಪ್ಪಿಸಿ ಬಂದಿದ್ದೇನೆ." ಎಂದಾಗ ಕನಕಾಂಗಿ, "ಅತ್ತೆ ನಿನ್ನ ಕಂದನಿಗೆ ಕೆಡಕು ಮಾಡದೆ ಸಾಕುತ್ತಾಳೆ" ಎನ್ನುತ್ತಾಳೆ. ಆಗ ಅಭಿಮನ್ಯು ಅವಳೆಡೆ ಕೆಂಗಣ್ಣು ಬಿಟ್ಟು, "ನೀನು ಹಲ್ಲಿಯಾಗಿ ಪಚ್ಚದ ಕಂಬ ಸೇರಿ ಬರಹೋಗುವವರಿಗೆ ಶಕುನವನ್ನು ನುಡಿ" ಎಂದು ಉತ್ತರೆಯನ್ನು ಒದೆಯುತ್ತಾನೆ. ಉತ್ತರೆ ಹಲ್ಲಿಯಾಗಿ ಪಚ್ಚದ ಕಂಬ ಸೇರಿ, ಬರಹೋಗುವವರಿಗೆ ಶಕುನ ನುಡಿಯುತ್ತಾಳೆ.

ಈ ಕಡೆ ದೇವಲೋಕದಿಂದ ಸತ್ತಿಗೆ ಬರುತ್ತವೆ. ಅಜ್ಜ ದೇವೇಂದ್ರನು ದೇವಲೋಕದ ನವಿಲು ಕಳಿಸುತ್ತಾನೆ. ಅಭಿಮನ್ಯು ಕನಕಾಂಗಿಯೊಡಗೂಡಿ ದೇವಲೋಕದ ದಂಡಿಗೆಯನ್ನೇರಿ ದೇವಲೋಕಕ್ಕೆ ಹೋಗುತ್ತಾರೆ.

ಕಾಮದೇವ (ಸತ್ತಪ್ಪನ ಹಾಡು) : ಬಾಗಿಲ ಮುಂದೆ ಚೆಂಡಾಡುತ್ತ ಕುಳಿತ ಕಾಮದೇವನನ್ನು ನೋಡಿದ ತಾಯಿ, "ಮಗನೇ ಬಾಗಿಲ ಮುಂದೆ ಚೆಂಡಾಡಿದರೆ ಯಾರು ನೋಡುತ್ತಾರೆ? ಅರಮನೆಯ ಮುಂದೆ ಚೆಂಡಾಟದ ಬಯ್ಲಲ್ಲಿ ಚೆಂಡಾಡಿದರೆ ಅಲ್ಲೇ ಮದುವೆಯಾಗುತ್ತದೆ." ಎನ್ನುತ್ತಾಳೆ. ಆ ಮಾತನ್ನಾಲಿಸಿದ ಕಾಮದೇವನಪ್ಪ ನಾರಾಯಣದೇವ, ಹಚ್ಚಡದ ಸೆರಗಿನಲ್ಲಿ ಮೂರು ಬೊಗಸೆ ಹಣವನ್ನು ಕಟ್ಟಿಕೊಂಡು ಸೊನಗಾರನಿಂದ ಚಿನ್ನದ ಹಾಗೂ ಹವಳದ ಚೆಂಡುಗಳನ್ನು ಮಾಡಿಸಿಕೊಂಡು, ಹಣವನ್ನು ನೀಡಿ ಸೊನಗಾರ ಕೆಮಣ್ಣನಿಂದ, "ನಾನು ಕೊಟ್ಟ ಹಾಗೂ ನೀನು ಹಿಡಿದ ಮುಹೂರ್ತದಲ್ಲಿ ಕಾಮದೇವನ ಆಯುಷ್ಯ ಹೆಚ್ಚಾಗಲಿ" ಎಂದು ಆಶೀರ್ವಾದ ಪಡೆದು ಚೆಂಡು ತಂದು ತನ್ನ ಮಗ ಕಾಮದೇವನಿಗೆ ನೀಡುತ್ತಾನೆ.

ಕಾಮದೇವ ಚೆಂಡಾಟಕ್ಕೆ ಹೊರಡುವ ಮುನ್ನ ತಾಯಿಗೆ ಊಟ ಸಿದ್ಧಗೊಳಿಸ ಹೇಳಿ, ತನ್ನಾನೆಯನ್ನು ಸಿಂಗರಿಸಿ ಮನೆಗೆ ಬಂದು, ಮಿಂದು ಮಡಿಯುಟ್ಟು, ಗಂಧದ ಬೊಟ್ಟಿಟ್ಟು ದೇವರಿಗೆ ಕೈಮುಗಿದು ಊಟ ಮಾಡಿ ತಾಂಬೂಲ ಸೇವಿಸಿ, ಸುಂದರ ಪೋಷಾಕು ಧರಿಸಿ ಆನೆಯನ್ನೇರಿ ಆಟದ

ಬೈಲಿಗೆ ಹೋಗಿ ಆನೆಯಿಂದಿಳಿದ. ಆಟದ ಬೈಲಿನಲ್ಲಿ ಆರು ಗೆರೆ ಬರೆದು, ಒಂಭತ್ತು ಗೆರೆಗಳನ್ನು ಕಟ್ಟಿ, ಚಿನ್ನದ ಚೆಂಡನ್ನೊದೆಯುತ್ತಾನೆ. ಹೊಡೆದ ಚೆಂಡು ಮಂಡಲವನ್ನು ದಾಟುತ್ತದೆ. ಆಗ ಕಾಮದೇವ ಚೆಂಡನ್ನು ತಂದು ಕೊಟ್ಟವರಿಗೆ ಚಿನ್ನದುಪ್ಪರಿಗೆ ಲಂಚ ನೀಡುತ್ತೇನೆ" ಎನ್ನುತ್ತಿರುವಾಗಲೇ ಆಕಾಶವಾಣಿಯಾಗುತ್ತದೆ, "ಕಾಮದೇವ ನೀನಾರಿಗೆ ಲಂಚ ನೀಡುವೆ? ಒಗೆದ ಚೆಂಡು ರತ್ನಿಯ ಮಡಿಲಲ್ಲಿ ಬಿದ್ದಿದೆ. ಚೆಂಡಿನಲ್ಲಿ ನಿನಗೆ ಮದುವೆ ಬಂತು" ಎಂದು ನುಡಿಯುವಾಗಲೇ ರತ್ನಿ ಚೆಂಡಾಟಕ್ಕೆ ಕುಳಿತಳು.

ಕಾಮದೇವ ತಾನು ತಂದ ಚೆಂಡನ್ನು ಮಡಗಿಟ್ಟು ಮಾವನರಮನೆಗೆ ಬರುತ್ತಾನೆ. ಉದ್ದಿನಕಾಳಿನಂತೆ ತಿದ್ದಿದ ನೆರೆಯುಳ್ಳ ರತ್ನಿ ಚೆಂಡಿನಿಂದ ಕಾಮದೇವನೆಡೆಗೆ ಹೊಡೆಯುತ್ತಾಳೆ. ಕಾಮದೇವನ ಎದೆಗೆ ಕತ್ತಲು ಕವಿದು ಬೀಳುತ್ತಾನೆ. ಆಗ ಗಿಂಡಿ ಸಣ್ಣಕ್ಕ ಬಂದು ಎದೆಗೆ ನೀರು ಚಿಮುಕಿಸಿ ಕಾಮದೇವನನ್ನೆಚ್ಚರಿಸುತ್ತಾಳೆ. ಎಚ್ಚತ್ತ ಕಾಮದೇವ ಮಾವನೆಡೆಗೆ ಹೋಗಿ ವಂದಿಸಿದ. ಮಾವ, "ಆಯುಷ್ಯವಂತನಾಗು, ದಂಡಿಗೆ ಭಂಡಾರವನು ಹಿಡಿ" ಎನ್ನುತ್ತಾನೆ. ಕಾಮದೇವ, "ಆ ಕೆಲಸ ನಿಮ್ಮ ಮಕ್ಕಳಿಗೆ ನಾನು ನಿಮ್ಮ ಮಗಳಿಗಾಗಿ ಬಂದಿದ್ದೇನೆ." ಎನ್ನುತ್ತಾನೆ. ಮಾವ "ಕಾಮದೇವ ಸೊಕ್ಕಿನ ಮಾತಾಡಬೇಡ. ನಿನ್ನ ಮುಸುಡಿಗೆ 'ಸುಣಗಿ'ಯನ್ನು ತಂದು ತಿಕ್ಕುವೆ." ಎಂದಾಗ ಕಾಮದೇವ ಸಿಟ್ಟಿನಿಂದ ತನ್ನ ಮನೆಗೆ ಹೊರಡುತ್ತಾನೆ.

ಮನೆಗೆ ಬಂದ ಮಗನಿಗೆ ತಾಯಿ, "ನಿನ್ನ ಮಾವಂದಿರು ಏನು ಬುದ್ಧಿ ಹೇಳಿ ಕಳಿಸಿದ್ದಾರೆ." ಎಂದಾಗ ಕಾಮದೇವ ಅಲ್ಲಿ ನಡೆದ ಸಂಗತಿಯನ್ನು ವಿವರಿಸುತ್ತಾನೆ. ಆಗ ತಾಯಿ ಮತ್ತೊಮ್ಮೆ ಮಾವನೆಡೆ ಹೋಗಿ "ನೀವಯ್ವರಿಗೆ ನಾನೊಬ್ಬನೇ ಅಳಿಯ, ಅಳಿಯನನ್ನು ಬಿಡಬೇಡಿ" ಎಂದು ಮಾವಂದಿರಿಗೆ ಶರಣಾಗಲು ತಿಳಿಸುತ್ತಾಳೆ. ಅಂತೆಯೇ ಕಾಮದೇವ ಮಾವಂದಿರಿಗೆ ಶರಣಾಗಿ ಮಗಳಿಗಾಗಿ ಕೇಳಿಕೊಳ್ಳುವನು. ಮಾವಂದಿರು ತಮ್ಮ ಮಗಳಿಗೆ ಮದುವೆಯಾಗಲು ಚಿನ್ನಾಭರಣಗಳೊಂದಿಗೆ ದಿಬ್ಬಣ ಸಹಿತವಾಗಿ ಬರಲು ಸೂಚಿಸುತ್ತಾರೆ. ಆಗ ಕಾಮದೇವ ತಾಯಿಗೆ ತಿಳಿಸಿ, ಊರ ನಾರಿಯರಿಗೆ, ಆಮಂತ್ರಿಸಿ ಸೊನೆಗಾರನಿಂದ ಚಿನ್ನಾಭರಣ ಮಾಡಿಸಿ, ಕುಂಬಾರ ಬಿನ್ನಾಣಗಳಿಗೆ ವೀಳ್ಯ ನೀಡಿ ಮದುವೆಗೆ ಪಟ್ಟೆ ಸೀರೆಯನ್ನು ಖರೀದಿಸುತ್ತಾನೆ.

ಕಾಮದೇವನ ಮನೆಯಲ್ಲಿ ಊರ ನಾರಿಯರು ಹಸಗರ ಬರೆಯುತ್ತಾರೆ. ಅಕ್ಕಿ ತಳಿಸುತ್ತಾರೆ. ಕೆಲಸಿ ಬಂದು ಪನ್ನೆ ಮಾಡುತ್ತಾನೆ. 'ತಿಗರೆಣ್ಣೆ' ತಿಕ್ಕಿಕೊಂಡು, ಕಲಶ ನೀರಿನ ಸ್ನಾನ ಮಾಡಿ ತಿಲಕವಿಟ್ಟು ಮದುಮಗನ ಪೋಷಾಕುತೊಟ್ಟು ಕಾಮದೇವ ನೀಲಾಣೆಯೆಂಬ ಕುದುರೆಯನ್ನೇರಿ ದಿಬ್ಬಣ ಸಹಿತವಾಗಿ ಬಂದು, ಬಾಳೆ ಬನದಲ್ಲಿ ಇಣುಕಿ ನೋಡುತ್ತಾನೆ.

ದಿಬ್ಬಣ ಬಂದುದನ್ನು ನೋಡಿ ಅರ್ಜುನನ ಮನೆಯವರು ಮದುವೆಯ ಸಿದ್ಧತೆಯನ್ನು ಮಾಡುತ್ತಾರೆ. "ಎಲ್ಲರೋಲೆಗಳೂ ಮಿನುಗುವಾಗ ನನ್ನೋಲೆಗೆಂಥ ಅವಗಡ" ಎಂದು ರತ್ನದೇವಿ ಮರುಗುವುದನ್ನು ನೋಡಿ ಚಿಕ್ಕಪ್ಪ ಅರ್ಜುನ ಅವಳನ್ನು ಹೆಗಲಿಗೇರಿಸಿಕೊಂಡು ಚಪ್ಪರ ಸುತ್ತಿಸಿ" ಇದೆಲ್ಲ ನಿನ್ನ ಮದುವೆಯ ಸಿದ್ಧತೆ" ಎನ್ನುವನು. ರತ್ನದೇವಿ "ಈ ಚಪ್ಪರವನ್ನೆಷ್ಟು ಸುತ್ತಿದರೇನು? ನನ್ನಪ್ಪನಿಲ್ಲದ ಮದುವೆಗೆ ನಾನು ಮದುಮಗಳಾಗಲಾರೆ. ಚಿಕ್ಕಪ್ಪ ನನ್ನಪ್ಪನನ್ನು ಕರೆದುಕೊಂಡು ಬಾ" ಎನ್ನುತ್ತಾಳೆ. ಆಗ ಅರ್ಜುನ ಅವಳನ್ನು ಹಸಗರದಲ್ಲಿ ಕೂಡ್ರಿಸಿ, ಅವಳಪ್ಪ ಕರ್ಣನನ್ನು ಕರೆತರಲು ಯಮಲೋಕಕ್ಕೆ ಬರುತ್ತಾನೆ. ಯಮಲೋಕದ ಹೂಬನದಲ್ಲಿ ಕರ್ಣನನ್ನು ನೋಡಿ, ಅವನೆಡೆ ಹೋಗಿ, "ಅಣ್ಣ ನಿನ್ನ ಮಗಳು ಮದುವೆಗೆ ನೆರೆದಿದ್ದಾಳೆ, ಧಾರೆಯೆರೆದು ಹೋಗು" ಎನ್ನುತ್ತಾನೆ. ಆಗ ಕರ್ಣ "ಅರ್ಜುನ ಇದೇನು ಹುಚ್ಚುತನ ಬದುಕಿದ್ದವರ ಮದುವೆಗೆ ಸತ್ತವರು ಬರುವುದುಂಟೆ?" ಎನ್ನುತ್ತಾನೆ. ಅರ್ಜುನ "ಅಣ್ಣಾ ನಿನ್ನನ್ನು ಕರೆದುಕೊಂಡು ಬರುತ್ತೇನೆಂದು ನಿನ್ನ ಮಗಳಿಗೆ ಭಾಷೆಯಿತ್ತಿದ್ದೇನೆ. ನೀನಿಲ್ಲದೆ ನಾನು ಹಿಂದಿರುಗಲಾರೆ" ಎಂದು ಅರ್ಜುನ ಹಿಂದಿರುಗಲೊಪ್ಪದಿದ್ದಾಗ, ಅರ್ಜುನನನ್ನು ಕರ್ಣ ಹೂಬನದಲ್ಲಿರಿಸಿ ಯಮರಾಯನೆಡೆಗೆ ಬಂದು, ಅವನಿಂದ ಮಗಳ ಧಾರೆಯೆರೆದು ಬರಲು ಮೂರು ದಿನದ ಅಪ್ಪಣೆಯನ್ನು ಪಡೆಯುತ್ತಾನೆ. ಯಮರಾಯ ನೆರವಿಗೆ ಕೊಟ್ಟ ಚಿನ್ನದ ಚೆಂಡಿನೊಡನೆ ಕರ್ಣ ಹೂಬನಕ್ಕೆ ಬಂದು ಕಣ್ಸನ್ನೆಯಿಂದ ಅವನನ್ನು ಕರೆದು ಅವನನ್ನು ಮುಂದೆ ಮಾಡಿಕೊಂಡು ಯಮಲೋಕದ ವಿಚಿತ್ರಗಳನ್ನು ಅವನಿಗೆ ತೋರಿಸುತ್ತ ಭೂಲೋಕಕ್ಕೆ ಬಂದು ತೆಂಗಿನ ಬನದಲ್ಲಿ ನಿಲ್ಲುತ್ತಾನೆ. ಅರ್ಜುನ ತನ್ನರಮನೆಗೆ ಬರುವಾಗ ಕಾಮದೇವನನ್ನು ಮದುವೆಯ ಮಂಟಪಕ್ಕೆ ಕರೆದು ತರುತ್ತಾನೆ. ಕರ್ಣ ಬಂದು ಎಡದ ತೊಡೆಯ ಮೇಲೆ ರತ್ನಿ, ಬಲದೊಡೆಯ ಮೇಲೆ ಕಾಮದೇವನನ್ನು ಕುಳ್ಳಿಸಿಕೊಂಡು 'ಜಯ' ಎಂದು ಧಾರೆಯೆರೆಯುತ್ತಾನೆ.

ಕರ್ಣ ಮಗಳಿಗೆ ಬಳುವಳಿ ನೀಡಿ, ತೊಡೆಯಿಂದ ಕೆಳಗಿಳಿಯ ಹೇಳಿದಾಗ ರತ್ನಿ ಇಳಿಯುವುದಿಲ್ಲ. ಆಗ ಕರ್ಣ ತಾನು ತಂದ ಚಿನ್ನದ ಚೆಂಡನ್ನು ಕೆಳಕ್ಕೊಗೆದನು. ರತ್ನಿ ಅದನ್ನು ಹೆಕ್ಕಲು ಕೆಳಗಿಳಿದಾಗ ಕರ್ಣ ಅಲ್ಲಿಂದ ಮಾಯವಾಗುತ್ತಾನೆ. ಆಗ ರತ್ನಿ ಚಿಕ್ಕಪ್ಪನಿಗೆ, "ಚಿಕ್ಕಪ್ಪ ನಿನ್ನಂಥ ಕಾಲು, ತೋಳು ತೊಡೆ ಹಾಗೂ ಹೃದಯ ಇದ್ದ ನನ್ನ ತಂದೆಯನ್ನು ಕೊಲ್ಲಲು ನಿನಗೆ ಹೇಗೆ ಮನಬಂತು?" ಎಂದ ಕೂಡಲೇ ಕರ್ಣ "ನನ್ನ ಬೆನ್ನ ಹಿಂದಿನಿಂದಲೇ ಈ ಪಾಪ ಪರಿಹಾರವಾಗಲಿ" ಎಂದು ಶಾಸನ ಬರೆದು ಯಮಲೋಕಕ್ಕೆ ಪಯಣಿಸಿದ. ಇತ್ತ ಸುರಬಾಣ ಸಕಲ ವಾದ್ಯ ಸಮೇತವಾಗಿ

ಕಾಮದೇವನ ದಿಬ್ಬಣ ಹೊರಡುತ್ತದೆ. ಬಂದ ದಿಬ್ಬಣವನ್ನು ಕಾಮದೇವನ ತಾಯಿ ಆದರದಿಂದ ಸ್ವಾಗತಿಸುತ್ತಾಳೆ.

ಸಾವಿತ್ರಿ ಸತ್ಯವಾನ (ಸತಿಸಪ್ತ) : ಸಾವಿತ್ರಿ ಸತ್ಯವಾನರು ಮೂಡಣ ಗಂಗೆಯಲ್ಲಿ ಸ್ನಾನಮಾಡಿ ತಮ್ಮರಮನೆಗೆ ಬರುತ್ತಾರೆ. ಸತ್ಯವಾನ ದೇವಾಲಯದ ಕಂಬ ತರಲು ಕಾಡಿಗೆ ಹೊರಡುವಾಗ, ಸಾವಿತ್ರಿ ಗಂಡ ಮರಹತ್ತಿ ಬೀಳಬಹುದೆಂಬ ಹೆದರಿಕೆಯಿಂದ ಅವನ ಜೊತೆಗೆ ಕಾಡಿಗೆ ಹೋಗಲು ಹಠತೊಟ್ಟು ಕಾಡಿಗೆ ಬರುತ್ತಾಳೆ. ಕಾಡಿನ ಭೀಕರ ದೃಶ್ಯತೋರಿಸುತ್ತ ಸತ್ಯವಾನ ಸಾವಿತ್ರಿಯೊಡನೆ ಕಾಡಿನ ಒಂದು ಆಲದ ಕಟ್ಟೆಯೆಡೆ ಬಂದು ವಿಶ್ರಮಿಸುತ್ತಾನೆ.

ಕಾಡಿನಲ್ಲಿ ಸತ್ಯವಾನ ಒಂದು ಅತ್ತಿಯ ಮರವನ್ನು ಹತ್ತಿ, ಅದರ ಕಿರು ಟೊಂಗೆಯನ್ನು ಕಡಿಯುವಾಗ, ಹೆಣೆ ಅವನ ಕಣ್ಣಿಗೆ ಬಡಿದು, ಕಣ್ಣಿಗೆ ಕತ್ತಲು ಕವಿದು ಆತ ಬೀಳುವಾಗ ಸಾವಿತ್ರಿ ನಲಿತೋಳು ನೀಡಿ ಸಹಕರಿಸಿ ಅವನನ್ನು ಕೆಳಗಿಳಿಸುತ್ತಿರುವಾಗಲೇ ಅವಳ ತೋಳ ಮೇಲೆ ಪ್ರಾಣ ಬಿಡುತ್ತಾನೆ. ಸಾವಿತ್ರಿ ಗೋಳಿಡುವಾಗ ಯಮದೂತರು ಬಂದು ಸತ್ಯವಾನನ ಪ್ರಾಣವನ್ನೆಳೆಯುತ್ತಾರೆ. ಸಾವಿತ್ರಿ ಯಮದೂತರಿಗೆ ಸತ್ಯವಾನನ ಪ್ರಾಣಾಪಹರಣಕ್ಕೆ ಬಿಡುವುದಿಲ್ಲ. ಯಮದೂತರು ಈ ವಿಷಯವನ್ನು ಯಮನಿಗೆ ಮುಟ್ಟಿಸಿದಾಗ, ಯಮರಾಜನೇ ಸಾವಿತ್ರಿಯೆಡೆ ಬರುತ್ತಾನೆ. ಸಾವಿತ್ರಿ ಯಮರಾಯನ ಪಾದ ತೊಳೆದು ನಮಸ್ಕರಿಸುತ್ತಾಳೆ. ಯಮರಾಯ, "ಮಗಳೇ ಆಯುಷ್ಯವಂತಳಾಗು, ನಿನ್ನ ಬಂಗಾರದೋಲೆ ಸ್ಥಿರವಾಗಲಿ" ಎಂದು ಹರಸುತ್ತಾನೆ. ಯಮರಾಯನ ಮಾತನ್ನು ಸೆರಗಿಗೆ ಗಂಟಿಕ್ಕಿ, ಅವನು ಕೊಟ್ಟ ವರವನ್ನು ಸ್ಥಿರವಾಗಿಸಲು, ಗಂಡನ ಕಳೇಬರಕ್ಕೆ ಮುಸ್ಕಿನ ಸೊಪ್ಪು ಮರೆಮಾಡಿ, ಸುತ್ತಲಿನ ಹಕ್ಕಿ ಪಕ್ಕಿಗಳಿಗೆ ಸತ್ಯವಾನನ ಕಳೇಬರವನ್ನು ಮುಟ್ಟಕೂಡದೆಂದು ಪ್ರಾರ್ಥಿಸಿ ಯಮರಾಯನ ಬೆನ್ನು ಹತ್ತುತ್ತಾಳೆ. ಯಮರಾಯ ಯಮನ ಕೊಂಡದಲ್ಲಿಯ ರುದ್ರ ಭಯಾನಕ ದೃಶ್ಯಗಳನ್ನು ಸಾವಿತ್ರಿಗೆ ತೋರಿಸಿ, ಅವಳಿಗೆ ಹೆದರಿಕೆಯುಂಟಾಗಿ, ಅವಳು ಹಿಂದಿರುಗಿ ಹೋಗುವಂತೆ ಪ್ರಯತ್ನಿಸುವನು. ಸಾವಿತ್ರಿ ಅದಕ್ಕೆ ಹೆದರದೆ ಯಮರಾಯನನ್ನು ಹಿಂಬಾಲಿಸುತ್ತಾಳೆ.

ಯಮರಾಯ ತನ್ನರಮನೆಗೆ ಬಂದು ತನ್ನರಸಿಯರಿಗೆ, "ಕಾಡಿನಲ್ಲೊಂದು ಹೆಣ್ಣು ನಿಮ್ಮನ್ನು ಬಯ್ದು ಕಳಿಸಿದ್ದಾಳೆ ಎನ್ನುವನು. ಆಗ ಯಮರಾಯನ ಮಡದಿಯರು, "ನಮ್ಮನ್ನು ಬಯ್ಯುವವರು ನಮ್ಮ ಮುಂದೆ ಬಂದರೆ ಅವರ ಮುಂದಲೆ ಹಿಡಿದೆಳೆದು ಮಂಚಕ್ಕೆ ಬಡಿಯುತ್ತಿದ್ದೆವು" ಎನ್ನುತ್ತಾರೆ. ಅವರ ಮಾತಿಗೆ ನಕ್ಕು ಯಮರಾಯ, ಸಾವಿತ್ರಿಯನ್ನು ಕರೆದು, "ಎಲೆ ಹೆಣ್ಣೆ ನೀನು ಗೋಕರ್ಣಕ್ಕೆ ಹೋಗು, ಅಲ್ಲಿ ಗುಡಿಸಲು ಕಟ್ಟಿಕೋ, ನಿನ್ನ ಕಾಜಿನ ಬಳೆಯನ್ನು

ಒಡೆದುಕೋ, ಪಟ್ಟೆಯನ್ನು ಬಿಡು, ದಟ್ಟಿಯನ್ನು ಉಡು ಹಚ್ಚಿದ ಶ್ರೀಗಂಧವನ್ನು ಅಳಿಸಿಕೋ, ಕಾಡಿನಲ್ಲಿ ನಿನ್ನ ಗಂಡ ಸತ್ತು ಹೋದ" ಎನ್ನುತ್ತಾನೆ. ಈ ಮಾತನ್ನು ಕೇಳಿ ಸಾವಿತ್ರಿ, "ಈ ಮಾತನ್ನು ನಿನ್ನ ಹೆಂಡಿರಿಗೆ ಹೇಳಿಕೊಡು" ಎಂದು ಸಿಡುಕುತ್ತಾಳೆ. ಅವಳ ದಿಟ್ಟತನ ಕಂಡ ಯಮರಾಯನ ಹೆಂಡಿರು, "ನಿಮಗೆ ಹೆದರದ ಈ ನಾರಿ ನಮಗಂಜುವಳೆ" ಎಂದು ತಲೆತಗ್ಗಿಸಿ ಮಾಳಿಗೆಯನ್ನು ಸೇರುತ್ತಾರೆ.

ಇತ್ತ ಯಮರಾಯನು ಸಾವಿತ್ರಿಗೆ ಅಮೃತಗಿಂಡಿಯನ್ನು ಕೊಡುತ್ತಾನೆ. ಸಾವಿತ್ರಿ ಅಮೃತ ಗಿಂಡಿಯೊಡನೆ ಬರುವಾಗ, ಯಮನ ಕೊಂಡದಲ್ಲಿ ಮಿಡುಕಾಡುತ್ತಿರುವವರನ್ನು ನೋಡಿ ಕರುಣೆ ಮೂಡಿ, ಅವರ ಮೇಲೆ ಅಮೃತ ಸಿಂಪಡಿಸುವಳು. ಅವರೆಲ್ಲ ಸಾವಿತ್ರಿಯ ಬೆನ್ನು ಹತ್ತುವರು. ಇದರಿಂದ ತನ್ನ ಪಟ್ಟಣ ಹಾಳಾಗುವುದೆಂದು ಗಾಬರಿಗೊಂಡು, ಸಾವಿತ್ರಿಗೆ ಕೊಟ್ಟ ಅಮೃತ ಗಿಂಡಿ ಕಸಿಯುವನು. ಆಗ ಸಾವಿತ್ರಿ ತನ್ನ ಸೆಳ್ಳುಗುರಲ್ಲಿ ಒಂದು ಹನಿ ಅಮೃತವನ್ನು ಅಡಗಿಸಿಕೊಂಡು, ಸತ್ಯವಾನನಿದ್ದಲ್ಲಿ ಬರುತ್ತಾಳೆ. ಅವನ ಮೇಲೆ ಮುಚ್ಚಿದ ಸೊಪ್ಪನ್ನು ಬದಿಗೆ ಸರಿಸಿ, ಸತ್ಯವಾನನ ಮೇಲೆ ತಾನು ಅಡಗಿಸಿ ತಂದ ಅಮೃತವನ್ನು ಸಿಂಪಡಿಸುತ್ತಾಳೆ. ಸತ್ಯವಾನ ಮೈಮುರಿದೆದ್ದು ಕುಳಿತುಕೊಳ್ಳುತ್ತಾನೆ.

ಕಥಾವಸ್ತು ಪಾತ್ರ ಪರಿಶೀಲನೆ

ಅ. "ನಾರಾಯಣ ದೇವನ ಮದುವೆ" : ಕಾವ್ಯಖಂಡದ ಕಥಾವಸ್ತು ನಾರಾಯಣದೇವ ಮತ್ತು ಮಾದೇವಿಯರ ಮದುವೆಗೆ ಸೀಮಿತವಾಗಿದೆ. ಇಲ್ಲಿ ನಿರೂಪಿತವಾದ ಕಥಾವಸ್ತು ವ್ಯಾಸ ಮಹಾಭಾರತದಲ್ಲಿಲ್ಲ. ನಾರಾಯಣದೇವನ ಮದುವೆಯ ವರ್ಣನೆಯಲ್ಲಿ ಗಾಮೊಕ್ಕಲ ಮದುವೆಯ ಹಲವಾರು ಚಡಂಗಗಳ ಪುನರಾವರ್ತನೆಯನ್ನು ಕಾಣುತ್ತೇವೆ. ಇಲ್ಲಿಯ ಪಾತ್ರಗಳ ನಿತ್ಯ ಹಾಗೂ ವಿಶೇಷ ಸಂದರ್ಭಗಳ ನಡವಳಿಕೆಯಲ್ಲೂ ಗಾಮೊಕ್ಕಲ ನೀತಿ ನಡಾವಳಿಗಳನ್ನೇ ನೋಡುತ್ತೇವೆ. ಇಲ್ಲಿ ಸೃಷ್ಟಿಗೊಂಡ ಮಾದೇವಿ ಗಾಮೊಕ್ಕಲ ಮಹಾಭಾರತದ ಹೊಸ ಸೃಷ್ಟಿ. ಇದೇ ಸಂಪುಟದ ಮತ್ತೊಂದು ಖಂಡಕಾವ್ಯದಲ್ಲಿ ಲಕ್ಷ್ಮಣನ ಹೆಂಡತಿಯಾಗಿ ಬೇರೊಬ್ಬ ಮಾದೇವಿ ಬರುತ್ತಾಳೆ. ವ್ಯಾಸ ಮಹಾಭಾರತದಲ್ಲಿ ದೇವರ ದೇವನಾಗಿ ಅವತರಿಸಿದ ಶ್ರೀಕೃಷ್ಣನು ಗಾಮೊಕ್ಕಲ ಮಹಾಭಾರತದಲ್ಲಿ ನಾರಾಯಣ ದೇವನಾಗಿದ್ದಾನೆ. ಊರಿಗೆ ದೊರೆ, ಹಕ್ಕಿ ಪಕ್ಕಿ ಮನುಷ್ಯಾದಿ ಜೀವಕೋಟಿಗೆ "ಪಡಿ" ಅಳೆಯುವ ಸ್ವಾಮಿಯಾದರೂ, ನಾರಾಯಣದೇವ ಇಲ್ಲಿ ದುರ್ಬಲ ಮಾನವನಾಗಿ ಕಪಟಿಯಾಗಿ, ಮಾಯಗಾರನಾಗಿ ನಮ್ಮ ಕಣ್ಣಿಗೆ ರಾಚುತ್ತಾನೆ. ನಾರಾಯಣ ದೇವನು ಕೌಲಿಂದ್ರ (ಕೌರವ)ನಿಗೆ ತನ್ನ ತಂಗಿ ಸುಭದ್ರೆಯನ್ನು ಮದುವೆ ಮಾಡಿಕೊಡುವೆನೆಂದು ಸುಳ್ಳುಹೇಳಿ, ಕೌಲಿಂದ್ರ

ಸುಭದ್ರೆಯರ ಜಾತಕ ಕೂಡಿ ಬರದಿದ್ದರೂ ಜೋಯಿಸರಿಂದ ಜಾತಕ ಕೂಡಿ ಬರುತ್ತದೆಯೆಂದು ಸುಳ್ಳು ಹೇಳಿಸಿ, ಕೌಲಿಂದ್ರನ ತಂಗಿ ಮಾದೇವಿಯನ್ನು ಮದುವೆಯಾಗುತ್ತಾನೆ. ಮಾದೇವಿಯ ಮದುವೆಯನ್ನು ಮಾಡಿಕೊಂಡು ಉಡುಗೊರೆ ಪಡೆದು, ನವವಧು ಮಾದೇವಿಯೊಡಗೂಡಿ ಹೋಗುವಾಗಲೂ ಒಳ್ಳೆಯ ವರನಂತೆ ವರ್ತಿಸದೆ ಮಾಯಾಜಾಲವನ್ನೇ ಬೀಸಿ ಮಾದೇವಿಯನ್ನು ಕರೆದೊಯ್ದು ತನ್ನ ಮನೆತುಂಬಿಸಿಕೊಳ್ಳುತ್ತಾನೆ.

ಮುಂದೆ ನಾರಾಯಣದೇವ ಕೌಲಿಂದ್ರನಿಗೆ ತಾನು ಮಾತು ಕೊಟ್ಟಂತೆ ವರ್ತಿಸದೆ, ಕುತಂತ್ರದಿಂದ ಕೌಲಿಂದ್ರನನ್ನು ವಂಚಿಸಿ ತನ್ನ ತಂಗಿ ಸುಭದ್ರೆಯನ್ನು ಅರ್ಜುನನಿಗೆ ಮದುವೆ ಮಾಡಿಕೊಡುವಲ್ಲಿ ಯಶಸ್ವಿಯೂ ಆಗುತ್ತಾನೆ.

ಆ. ರುಕ್ಮಿಣಿ ಹಾಡನ್ನು "ದೇವಿಯರ ಹಾಡು" ಎಂದೂ ಕೆಲವು ಹಾಡುಗಾರ್ತಿಯರು ಕರೆಯುತ್ತಾರೆ. ರುಕ್ಮಿಣಿಯ ತಂಗಿ ದೇವಿ ನಿರೂಪದಂತೆ, ಅಕ್ಕನ ಮನೆಗೆ ಬಂದು ಹೂಮುಡಿದು ಹೋಗುವಾಗ, ಭಾವ ನಾರಾಯಣ ದೇವ ಅವಳನ್ನು ಅಡ್ಡಗಟ್ಟಿ ಬಯಸಿ ವಿಫಲನಾಗುವ ಚಿಕ್ಕ ಘಟನೆಯೇ ಈ ಕಾವ್ಯ ಖಂಡದ ವಸ್ತು. ರುಕ್ಮಿಣಿಯ ತಂಗಿ ದೇವಿಯರು ನಾಮೊಕ್ಕಲ ಹೊಸಸೃಷ್ಟಿ.

ಇಲ್ಲಿ ನಾರಾಯಣ ದೇವನ ವರ್ತನೆ ನಾಚಿಕೆಗೇಡಿನದು. ಅಕ್ಕನ ಮನೆಗೆ ಬಂದು ಸಂಭ್ರಮದಿಂದ ಹೂ ಮುಡಿದು ಮನೆಗೆ ಹೋಗುವಾಗ ಹೂಬನದಲ್ಲಿ ದಾರಿಯಡ್ಡಗಟ್ಟಿ ವಿಫಲನಾಗಿ ಮನೆಗೆ ಬಂದು, ಏನೂ ನಡೆಯದವನಂತೆ ತೆಪ್ಪಗಿರುವ ನಾರಾಯಣದೇವನ ವರ್ತನೆ ಸಭ್ಯವಲ್ಲ. ಆದರೆ ಅವನ ಹೆಂಡತಿ ರುಕ್ಮಿಣಿ ಗಂಡನ ಕಪಟದಾಟವನ್ನು ನೋಡಿಯೂ ಪ್ರತಿಭಟಿಸದಿರುವುದು, ಹೃದಯವಂತ ಭಾರತೀಯ ನಾರಿಯ ದುರ್ಬಲತೆಯನ್ನು ಅನಾವರಣಗೊಳಿಸುತ್ತದೆ. ನಾರಾಯಣದೇವ ಮುಗ್ಧ ಸ್ತ್ರೀಯ ಮುಗ್ಧತೆಯ ಫಲಾನುಭವಿಯಾಗಿ ಕಾಣುತ್ತಾನೆ. ಹೆಂಡತಿಗೆ ಹಿತ್ತಲ ಬೆಳೆಯ ಸಂಪತ್ತನ್ನೆರೆದು ತನ್ನ ವಂಚನೆಯ ಸುಳಿವು ಮರೆಮಾಚ ಹೊರಟ ಕಪಟಿಯಾಗಿ ಮಿಂಚುತ್ತಾನೆ.

ಇ. ಮೂರು ವರ್ಷದ ದ್ರೌಪದಿಯನ್ನು ಅರ್ಜುನ ಮದುವೆಯಾಗಿ ಅವಳನ್ನು ಬಿಟ್ಟು, ತಾನು ಕಾನನದಲ್ಲಿ 'ನಾಗಾಣಿ'ಯ ಜೊತೆ ವಾಸ್ತವ್ಯ ಹೂಡಿ, ಅನಂತರ ದ್ರೌಪದಿ ದೊಡ್ಡವಳಾದ ಮೇಲೆ ಪುನಃ ಊರಿಗೆ ಬಂದು, ದ್ರೌಪದಿಯೊಡಗೂಡುವುದು, ಅರ್ಜುನ ದ್ರೌಪದಿಯರು ಸುಖನಿದ್ದೆಯಲ್ಲಿದ್ದಾಗ ನಾಗಕನ್ಯೆ ನಾಗಾಣಿ ದ್ರೌಪದಿಯ ಮೇಲೆ ವಿಷವನ್ನು ಕಕ್ಕಿ ಕೊಲ್ಲುವುದು, ವ್ಯಥಿತನಾದ ಅರ್ಜುನ ತನ್ನ ಪ್ರೇಯಸಿ ಕುಸಮಾಲಿಯನ್ನು ಕರೆಯಿಸಿಕೊಂಡು ಅವಳ ಮೂಲಕ ನಾಗಾಣಿಗೆ ಬೆದರಿಕೆಯೊಡ್ಡಿ ನಾಗಾಣಿಯಿಂದ ದ್ರೌಪದಿಯನ್ನು

ಬದುಕಿಸಿ ಪಡೆದ ವಸ್ತು, ಅರ್ಜುನ ಕಾವ್ಯಖಂಡದ ವಸ್ತು. ಇಲ್ಲಿಯ ಕಾವ್ಯ ವಸ್ತುವಿಗೂ ಮಹಾಭಾರತ ಕಾವ್ಯ ವಸ್ತುವಿಗೂ ಹೊಂದಾಣಿಕೆಯಿಲ್ಲ. ಇಲ್ಲಿಯ 'ನಾಗಾಣಿ', ಮತ್ತು ಕುಸುಮಾಲಿಯರು ಮಹಾಭಾರತದ ಅರ್ಜುನ ತೀರ್ಥಯಾತ್ರೆಗೆ ಹೋದಾಗ ಅವನು ಕೈ ಹಿಡಿದ ಉಲೂಪಿ ಹಾಗೂ ಚಿತ್ರಾಂಗದೆಯರನ್ನು ನೆನಪಿಸುತ್ತಾರೆ. ಆದರೆ ಅಲ್ಲಿಯ ಕಥಾವಸ್ತು ತೆರೆದುಕೊಳ್ಳುವ ರೀತಿಯೇ ಬೇರೆ. ಗಂಡನ ಅಗಲುವಿಕೆಯಿಂದ ಕುದಿಯುವ ದ್ರೌಪದಿಯ ಅಳಲು; ಸವತಿ ಮಾತ್ಸರ್ಯದ ಕಾಳ್ಗಿಚ್ಚಿನಲ್ಲಿ ಬೆಂದು, ದ್ರೌಪದಿಯ ಕೊಲೆಗೂ ಮುಂದಾದ ಕಠೋರಮತಿ ನಾಗಾಣಿಯ ಕ್ರೂರಕರ್ಮ, ಮೂರು ಹೆಂಡಿರ ಗಂಡನಾದ ಅರ್ಜುನನ ಧರ್ಮಸಂಕಟ ಇವರೆಲ್ಲರ ಮಧ್ಯೆ ಸಮನ್ವಯ ಸೇತುವೆಯಾಗಿ, ಅಮೃತ ನಿಧಿಯಾಗಿ ಹೊಮ್ಮುವ ಕುಸುಮಾಲಿಯ ಔದಾರ್ಯ, ಅನುಕಂಪ ಈ ಕಾವ್ಯದ ಮುಖ್ಯ ಹೂರಣ.

ಮಹಾಭಾರತದಲ್ಲಿ ತೀರ್ಥಯಾತ್ರೆಗೆ ಹೋದ ಅರ್ಜುನನು ಸುಭದ್ರಾಪಹರಣ ಮಾಡಿದ ಕಥೆ ಪ್ರಖ್ಯಾತವಾಗಿದೆ. ಅದೇ ವಸ್ತುವನ್ನೊಳಗೊಂಡ ಇಲ್ಲಿಯ ಸುಭದ್ರೆ ಕಾವ್ಯಖಂಡ, ಜಾನಪದ ಮನೋಭೂಮಿಕೆಗನುಗುಣವಾಗಿ ಭಿನ್ನ ಆಶಯಗಳೊಂದಿಗೆ ಮಹಾಭಾರತ ಕಥೆಯಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಇಲ್ಲಿಯ ಕಥಾರಂಭದಲ್ಲಿದ್ದ ನಾರಿಯರಾದ ಇಂದ್ರ ಕನ್ನೆ ದೇವಕನ್ನೆಯರ ಪ್ರಸ್ತಾಪ ಮಹಾಭಾರತದಲ್ಲಿಲ್ಲ. ಬಹುಶಃ ಮಹಾಭಾರತದ ಉಲೂಪಿ, ಚಿತ್ರಾಂಗದೆಯರೇ ಇಲ್ಲಿ ಇಂದ್ರ ಕನ್ನೆ ದೇವಕನ್ನೆಯರಾಗಿ ಪರಿವರ್ತಿತರಾದಂತಿದೆ. ಅರ್ಜುನ ನಾರಿಯರ ಮೋಹಪಾಶದಲ್ಲಿ ಬಂಧಿಯಾಗಿರುವುದು, ಮಾದೇವಿ ಅಣ್ಣ ಕಬ್ಲಿಂದ್ರನೊಡನೆ ಸುಭದ್ರೆಯ ಮದುವೆ ನಿಶ್ಚಯಿಸುವುದು, ನಾರಾಯಣ ದೇವ ಈ ಸಂಗತಿಯನ್ನು ಅರ್ಜುನನಿಗೆ ಪತ್ರ ಮುಖೇನ ತಿಳಿಸುವುದು, ಸುಭದ್ರೆಯ ಕೈಭಿಕ್ಷೆಯೇ ಬೇಕೆಂದು ಸಂನ್ಯಾಸಿ ಹಠಮಾಡುವುದು, ಸಂನ್ಯಾಸಿಯ ಕಾಟವನ್ನು ಸಹಿಸಲಾಗದೆ ಸುಭದ್ರೆ ಆತ್ಮಹತ್ಯೆ ಮಾಡಿಕೊಳ್ಳುವುದು, ಸಂನ್ಯಾಸಿ ಅರ್ಜುನ ತನ್ನಲ್ಲಿರುವ ನಾಗಬೆತ್ತ, ಅಮೃತ ಗಿಂಡಿಯ ನೀರನ್ನು ಚಿಮುಕಿಸಿ ಅವಳನ್ನು ಬದುಕಿಸುವುದು, ಸುಭದ್ರೆಯ – ಮದುವೆ ಮಾಡಿಕೊಂಡು ದಿಬ್ಬಣ ಸಮೇತನಾಗಿ ಹೋಗುವಾಗ ಮಾರ್ಗ ಮಧ್ಯದಲ್ಲಿ ಕೌರವರನ್ನು ಎದುರಿಸುವುದು, ಸುಭದ್ರೆ ಅರ್ಜುನನನ್ನು ತಡೆದು ಮದುಮಕ್ಕಳು ಮೂರು ದಿನಗಳ ಮಟ್ಟಿಗೆ ದೇವರೆಂದು ಅರ್ಜುನನಿಗೆ ತಿಳಿಸಿ ಮದುಮಗನಾಗಿ ಬಂದ ಕೌರವನನ್ನು ಕೊಲ್ಲದೆ ಹಾಗೇ ಬಿಟ್ಟು ಬಿಡಲು ಅರ್ಜುನನಿಗೆ ತಿಳಿಸುವುದು, ಅರ್ಜುನ ಮದುಮಗ ಕೌರವೇಂದ್ರನನ್ನು ಹಾಗೂ ಅವನಕ್ಕ ಕಳಸಗಿತ್ತಿ ಮಾದೇವಿಯರನ್ನು ಕೊಲ್ಲದೆ ಬಿಡುವುದು ಈ ಮುಂತಾದ ಹಲವಾರು ಸಂಗತಿಗಳಿಂದ ಮಹಾಭಾರತದ ಕಥಾವಸ್ತುವಿನಿಂದ ಭಿನ್ನವಾಗಿದೆ. ಮಹಾಭಾರತದ ಬಲರಾಮ

ಇಲ್ಲಿ ಕಣ್ಮರೆಯಾಗಿದ್ದಾನೆ. ಕೌರವೇಂದ್ರನ ಪರವಾಗಿ ಇಲ್ಲಿ ನಿಲ್ಲುವಳು ನಾರಾಯಣ ದೇವನ ಹೆಂಡತಿ ಮಾದೇವಿ.

ಸುಭದ್ರೆ ಅರ್ಜುನನಲ್ಲಿಟ್ಟಿರುವ ಅವ್ಯಾಜ ಪ್ರೇಮವನ್ನು ಅರ್ಜುನ ಸಂನ್ಯಾಸಿ ಸುಭದ್ರೆಯ ಬಾಯಿಂದಲೇ ಕೇಳುವ ರೀತಿ, ಇಲ್ಲಿ ಸೊಗಸಾಗಿ ನಾಟಕೀಯವಾಗಿ ಮೂಡಿಬಂದಿದೆ. ಜನಪದ ಕವಿ ಸುಭದ್ರೆ ಅರ್ಜುನನಲ್ಲಿ ಇಟ್ಟಿರುವ ಪ್ರೀತಿಯ ಉತ್ಕಟತೆಗೆ ಭಂಗವುಂಟಾಯಿತೆಂದು ಆತ್ಮ ಬಲಿದಾನಕ್ಕೆ ಮುಂದಾಗುವ ಸನ್ನಿವೇಶವನ್ನು ಹೃದ್ಯವಾಗಿ ಬಣ್ಣಿಸಿದ್ದಾನೆ; ಮಾದೇವಿಯನ್ನು ಮದುವೆಯಾಗುವಾಗ ನಾರಾಯಣದೇವ ಕೌರವೇಂದ್ರನಿಗೆ ತನ್ನ ತಂಗಿ ಸುಭದ್ರೆಯನ್ನು ಮದುವೆ ಮಾಡಿಕೊಡುತ್ತೇನೆಂದು ಆಡಿದ ಮಾತನ್ನು ಉಳಿಸಿಕೊಳ್ಳದ ಅವನ ಕಪಟ ನಾಟಕವನ್ನೂ ಅನಾವರಣ ಗೊಳಿಸಿದ್ದಾನೆ.

ಉ. ಲಕ್ಮಣ ಕಾವ್ಯ ಖಂಡವು ಸುಭದ್ರೆಯ ಹಾಡನ್ನು ಹೋಲುತ್ತದೆಯಾದರೂ ಸುಭದ್ರೆ ಹಾಡಿನ ಹಲವಾರು ಆಶಯಗಳು ಲಕ್ಮಣ ಖಂಡ ಕಾವ್ಯದಲ್ಲಿ ಕಾಣೆಯಾಗಿವೆ. ಬೇಕಾದರೆ ಇದೇ ಸಂಪುಟದ ಸುಭದ್ರೆ ಕಾವ್ಯ ಖಂಡವನ್ನು ಅವಲೋಕಿಸಬಹುದು. ಇಲ್ಲಿ ಲಕ್ಮಣನ ಮಾವ ಇಸರರು ಕೌಲ (ಕೌರವ) ರಿಗೆ ತನ್ನ ಮಗಳನ್ನು ಮದುವೆಯಾಗಲು ಕೇಳಹೋಗುವುದು. ಇದನ್ನು ತಿಳಿದ ಲಕ್ಮಣ ಕೆರಳಿ ಮಾವನ ಮಗಳಿಗಾಗಿ ಶಪಥ ತೊಡುವುದು, ಜೋಗಿಯ ವೇಷವನ್ನು ತೊಟ್ಟು ಲಕ್ಮಣ ತನ್ನ ಮಾವನ ಮಗಳ ಮದುವೆಗೆ ಹೋಗುವುದು, ಅಲ್ಲಿ ಮದುಮಕ್ಕಳಿಗೆ ಸೇಸೆ ತಳಿಯುವಾಗ ತಾನೂ ಸೇಸೆ ತಳಿದುಕೊಳ್ಳುವುದು, ಚಿಗುರು ತಿಕ್ಕುವಾಗ ತಾನೂ ತಿಕ್ಕಿಕೊಳ್ಳುವುದು, ಕೌಲರ ದಿಬ್ಬಣ ಧಾರೆಗೆ ಬಂದಾಗ, ಅವರು ಮದುಮಗಳಿಗೆ ತಂದ ವಸ್ತ್ರಾಭರಣ ತೊಂಡಿಲು ಬಾಸಿಂಗಗಳೆಲ್ಲ ಪುಡಿ ಪುಡಿಯಾಗುವುದು, ಆ ಸಂದರ್ಭದಲ್ಲಿ ಲಕ್ಮಣ ತಾನು ತಂದ ವಸ್ತ್ರಾಭರಣ ತೊಂಡಿಲು ಬಾಸಿಂಗಗಳನ್ನೆಲ್ಲ ಕೌಲರಿಗೆ ಕೊಡುವುದು, ಧಾರೆಯೆರೆಯುವಾಗ ಜೋಗಿಯಿರಬಾರದೆಂದು ಮದುವೆಗೆ ನೆರೆದವರು ಜೋಗಿಗೆ ಪಡಿಕೊಟ್ಟು ಹೊರಗೆ ಸಾಗಹಾಕಲು ಹೇಳುವುದು, ವಧು ಮಾದೇವಿ, ಜೋಗಿ ಲಕ್ಮಣನಿಗೆ ಪಡಿಕೊಡಲು ಬಂದಾಗ ಲಕ್ಮಣ ಅವಳನ್ನು ಅಪಹರಿಸುವುದು, ಇಸರರು ತನ್ನ ಚಿಕ್ಕ ಮಗಳನ್ನು ಕೌಲರಿಗೆ ಧಾರೆಯೆರೆಯುವುದು, ಕೊನೆಯಲ್ಲಿ ಲಕ್ಮಣ ತನ್ನ ಮಾವನಿಂದ ಮಾದೇವಿಯ ಧಾರೆಯೆರೆಸಿಕೊಳ್ಳುವುದು ಈ ಮುಂತಾದ ಹೊಸ ಆಶಯಗಳು ಸೇರಿಕೊಂಡು ಲಕ್ಮಣನ ಹಾಡು ಸುಭದ್ರೆಯ ಹಾಡಿನಿಂದ ಭಿನ್ನವಾಗಿ ನಿಲ್ಲುತ್ತದೆ.

ಸುಭದ್ರೆ ಮತ್ತು ಲಕ್ಮಣ ಕಾವ್ಯ ಖಂಡಗಳಲ್ಲಿ ಜೋಗಿಯ ವೇಷವು ಸಾಮಾನ್ಯವಾಗಿದ್ದರೂ, ಆ ವೇಷಗಳ ಉದ್ದೇಶ ಬೇರೆ ಬೇರೆಯಾಗಿದೆ. ಸುಭದ್ರೆ

ಹಾಡಿನಲ್ಲಿ ಜೋಗಿಯ ವೇಷ ಸುಭದ್ರೆಯ ಪ್ರೀತಿಯ ಆಳ ಅಗಲಗಳ ಪರೀಕ್ಷೆಗಾಗಿ ಬಂದಿದ್ದರೆ, ಲಕ್ಮಣನ ಹಾಡಿನಲ್ಲಿ ಜೋಗಿ ವೇಷವು ತನಗೆ ಹೆಣ್ಣು ಕೊಡಲು ನಿರಾಕರಿಸಿದ ಸೋದರ ಮಾವನ ಕಣ್ಣಿಗೆ ಮಣ್ಣೆರಚಿ, ಬಯಸಿದ ಹೆಣ್ಣನ್ನು ಅಪಹರಿಸಲು ಬರುತ್ತದೆ. ಜೋಗಿ ವೇಷದ ನಡೆನಡಾವಳಿಗಳೂ ಸಹ ಎರಡೂ ಹಾಡುಗಳಲ್ಲಿ ಭಿನ್ನವಾಗಿವೆ.

ಈ ಕಾವ್ಯ ಖಂಡದಲ್ಲಿ ಅರ್ಜುನನ ಹೆಸರು ಲಕ್ಮಣ ಸುಭದ್ರೆಯ ಹೆಸರು ಮಾದೇವಿಯಾದರೆ ಸುಭದ್ರೆಯ ತಂದೆಯ ಹೆಸರು 'ಇಸರ' ಎಂದಾಗಿದೆ. ಜಾನಪದದಲ್ಲಿ ಹೀಗೆ ಒಬ್ಬರ ಹೆಸರು ಇನ್ನೊಬ್ಬರಿಗೆ ವರ್ಗಾವಣೆಯಾದ ಹಲವಾರು ನಿದರ್ಶನಗಳಿವೆ.

ಎ. ಅರ್ಜುನನು ಕೈಹಿಡಿದ ನಾರಿಯರಲ್ಲಿ ಯಾವ ನಾರಿ ಚೆಂದವೆಂದು ದ್ರೌಪದಿ ಕೇಳಿದ ಪ್ರಶ್ನೆಗೆ ಉತ್ತರವಾಗಿ "ಚೆಂದಕ್ಕೆ ಕುಸುಮಾಲಿ – ಅವಳ ಮೇಲೆ ನನಗೆ ಕುಡು ಮೋಹ" ಎಂದಾಗ, ಕ್ರುದ್ಧಳಾದ ದ್ರೌಪದಿ ಕುಸುಮಾಲಿಯನ್ನು "ತೋಟದಲ್ಲಿರುವ ತಾಟಗಿತಿ" ಎಂದು ಕಡೆಗಣಿಸಿ ಮಾತಾಡುತ್ತಾಳೆ. ಆಗ ಅರ್ಜುನ ದ್ರೌಪದಿಗೆ ಅವಳ ಪಾತಿವ್ರತ್ಯದ ನಿಷ್ಠೆಯನ್ನು ತೋರ್ಪಡಿಸಲು ಜೋಗಿಯ ವೇಷವನ್ನು ಧರಿಸಿ ಕುಸುಮಾಲಿಯನ್ನು ಪರೀಕ್ಷಿಸ ಹೋಗಿ, ತಾನು ಮಾಡಿದ ಚಿಕ್ಕ ಪ್ರಮಾದದಿಂದ ಕುಸುಮಾಲಿಯನ್ನೇ ಕಳೆದುಕೊಳ್ಳುವ ದುರಂತ ವಸ್ತು ವಿನ್ಯಾಸವನ್ನು ಕುಸುಮಾಲಿ ಕಥೆ ಹೊಂದಿದೆ. ಇಲ್ಲಿಯ ಕಥಾವಸ್ತು ವ್ಯಾಸ ಮಹಾಭಾರತದಲ್ಲಿಲ್ಲದಿದ್ದರೂ ಜನಪದ ಮೂಲದ ಮಹಾಭಾರತದಲ್ಲಿ ಹಲವು ಪಾಠಗಳು ಉಪಲಬ್ದವಿವೆ :

ಡಾ॥ ಬಿ.ಎಸ್. ಗದ್ದಗಿಮಠರು ಸಂಪಾದಿಸಿದ 'ಅರ್ಜುನ ಜೋಗಿ'ಯ ಹಾಡಿನಲ್ಲಿ, ಅರ್ಜುನ ಕೈಹಿಡಿದ ಚದುರಂಗಿ ಕುಸುಮಾಲೆಯನ್ನು ಹನ್ನೆರಡು ವರ್ಷ ಅಗಲಿದ್ದು, ಆಮೇಲೆ ಜೋಗಿಯ ವೇಷವನ್ನು ಧರಿಸಿ, ಅವಳ ಅಕಳಂಕ ಪ್ರೇಮವನ್ನು ಪರೀಕ್ಷಿಸಿ, ಅವಳನ್ನು ಪಡೆದ ಕಥೆ ಹೃದ್ಯವಾಗಿ ಚಿತ್ರಿತವಾಗಿದೆ. ಹಾಡಿನಲ್ಲಿ ಚದುರಂಗಿ ಕುಸುಮಾಲೆಯರ ವಿರಹ ವರ್ಣನೆ ಆಕರ್ಷಕವಾಗಿದೆ. ಕೊನೆಯಲ್ಲಿ ಅವರು ಅರ್ಜುನನೊಡನೆ ಹಸ್ತಿನಾಪುರ ಪ್ರವೇಶ ಮಾಡುವಲ್ಲಿ ಕಥೆ ಸುಖಾಂತ ಕಾಣುತ್ತದೆ. ಆದರೆ ಕುಸುಮಾಲಿಯ ಹಾಡು ಹಲವಾರು ಭಿನ್ನ ಆಶಯಗಳಿಂದ ಅರ್ಜುನ ಜೋಗಿಯ ಹಾಡಿನಿಂದ ಭಿನ್ನವಾಗಿದೆ. ಕುಸುಮಾಲಿಯ ಹಾಡಿನಲ್ಲಿ, ಅರ್ಜುನ ಕುಸುಮಾಲಿಯನ್ನು ಹನ್ನೆರಡು ವರ್ಷ ಬಿಟ್ಟ ಪ್ರಸ್ತಾಪವಿಲ್ಲ, ಚದುರಂಗಿ ಪ್ರವೇಶವಿಲ್ಲ, ಚದುರಂಗಿ ಕುಸುಮಾಲೆಯರ ವಿರಹ ವರ್ಣನೆಯನ್ನು ಗಿಳಿಗಳ ಮೂಲಕ ಅರ್ಜುನ ಕೇಳುವ ಸನ್ನಿವೇಶವಿಲ್ಲ. ಜೊತೆಗೆ ಕುಸುಮಾಲಿ, ಜೋಗಿಗೆ "ಸುಮ್ ನಿದ್ರೆ" ಕವಿಸುವುದು, ಅಣ್ಣ

"ಸೂಲಿಸುಕ್ರ"ನನ್ನು ಕರೆಯಿಸುವುದು, ಆತ ಅರ್ಜುನನ ಮೇಲೆ ಅಸಮಾಧಾನ ತಾಳುವುದು. ಕುಸುಮಾಲಿ ಬಸ್ತಿಯೇರಿ, ಬಲಿಗೂಳು ತಿಂದು ಅರ್ಜುನನಿಗೆ ದಕ್ಕದೇ ಹೋಗುವುದು, ಅರಿಸಿಣ, ಸುರಗಿಯ ಹೂವಾಗಿ ಕಣ್ಮರೆಯಾಗಿ ಕಥೆ ದುರಂತವನ್ನು ಕಾಣುವುದು, ಈ ಮುಂತಾದ ಹೊಸ ಆಶಯಗಳನ್ನು ಹೊಂದಿ ತನ್ನ ಅನನ್ಯತೆಯನ್ನು ಕಾಯ್ದುಕೊಂಡಿದೆ.

ಈ ಹಾಡಿನಲ್ಲಿ ಬರುವ ಬಸ್ತಿಯ ಪ್ರಸ್ತಾಪವು ಈ ಹಾಡು ಜೈನ ಪರಂಪರೆಯಿಂದ ಬಂದಿರಬೇಕು ಎಂಬ ಅನುಮಾನ ಹುಟ್ಟಿಸುತ್ತದೆ. ಗಂಡ ಹೆಂಡತಿಗೆ ತೊಂದರೆಯನ್ನು ಕೊಟ್ಟ ಪ್ರಸಂಗದಲ್ಲಿ, ಹೆಂಡತಿ ಬಸ್ತಿಗೆ ಹೋಗಿ, ದೀಕ್ಷೆಯನ್ನು ತೊಟ್ಟು ಸಂಸಾರದಿಂದ ವಿರಕ್ತಿ ಹೊಂದುವ ಸಂಪ್ರದಾಯ ಜೈನರಲ್ಲಿದೆ. ಕುಸುಮಾಲಿ ದೀಕ್ಷಾ ಬದ್ಧಳಾಗಿ, ಅರ್ಜುನನಿಗೆ ಕೊನೆಯಲ್ಲಿ ದಕ್ಕದೇ ಹೋದ ದುರಂತ ವಿನ್ಯಾಸವನ್ನು ಈ ಹಾಡಿನಲ್ಲಿ ನೋಡಬಹುದು.

'ಜನಪದ ಗೀತಗಳಲ್ಲಿ ಮಹಾಭಾರತ' ಎಂಬ ಕ.ರಾ.ಕೃ. ಅವರ ಗ್ರಂಥದಲ್ಲಿ ಜೋಗಯ್ಯ ಎಂಬ ಹಾಡು, 'ಅರ್ಜುನ ಜೋಗಿ' ಸುಭದ್ರೆ ಹಾಗೂ ಕುಸುಮಾಲಿ ಹಾಡುಗಳನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆಯಾದರೂ ಅದು ತನ್ನದೇ ಆದ ವಿಶಿಷ್ಟತೆಯಿಂದ ಭಿನ್ನವಾಗಿದೆ: ಹನ್ನೆರಡು ವರ್ಷ ಪರ್ಯಂತ ಊರು ಬಿಟ್ಟಿದ್ದ ಅರ್ಜುನನು ಹಸ್ತಿನಾಪುರಕ್ಕೆ ಆಗಮಿಸುತ್ತಾನೆ. ಅರ್ಜುನ ಜೋಗಿಯ ಸುಂದರವಾದ ರೂಪಕ್ಕೆ ಮರುಳಾದ, ಬಾಲೆಯರ ಹಾಗೂ ಗಂಡುಳ್ಳ ಗರತಿಯರ ಮನಸ್ಸು ಚಂಚಲವಾದ ಅಂಶ ಹಾಡಿನಲ್ಲಿ ಸೊಗಸಾಗಿ ನಿರೂಪಿತವಾಗಿದೆ. ಅರ್ಜುನ ಜೋಗಿ ತನ್ನ ತಾಯಿಯ ಹತ್ತಿರವೇ ಹೋಗಿ ಭಿಕ್ಷೆಯನ್ನು ಕೇಳುವುದು, ಹೆಣ್ಣು ಬೇಡುವುದು, ಅದಕ್ಕುತ್ತರವಾಗಿ ತಾಯಿ ಕುಂತಿಯು ತನಗೊಬ್ಬಳು ಮಗಳಿದ್ದರೆ ನಿನಗೆ ಕೊಡುತ್ತಿದ್ದೆನೆಂದು ಹೇಳುವುದು, ಕೊನೆಗೆ ರಸಿಕನಾದ ಜೋಗಿ, ಕುಂತಿಯ ಸೊಸೆ ದ್ರೌಪದಿಯನ್ನೇ ಕೊಡಲು ಕೇಳಿಕೊಳ್ಳುವುದು, ಕುಂತಿ ದ್ರೌಪದಿಯಿಂದ ಜೋಗಿಗೆ ಶಾಪವನ್ನು ಕೊಡಿಸುವ ಬೆದರಿಕೆಯನ್ನೊಡ್ಡುವುದು, ದ್ರೌಪದಿ ಸೇವಕರನ್ನು ಕಳುಹಿಸಿ ತನ್ನನ್ನು ಕರೆಯಿಸಿಕೊಂಡಳೆಂದು ಜೋಗಿ ಕುಂತಿಗೆ ಹೇಳುವುದು, ಕೊನೆಗೆ ಕುಂತಿ ಅಡಿಗೆ ಮಾಡಿ ನಾಲ್ವರ ಜೊತೆಯಲ್ಲಿ ಜೋಗಿಗೆ ಬಡಿಸುವುದು, ಆಗ ಜೋಗಿ ಇನ್ನೊಬ್ಬನೆಲ್ಲಿ?" ಎಂದು ಕೇಳಿದಾಗ, ದ್ರೌಪದಿಯ ಮನೆಯಲ್ಲಿಯ ಅರ್ಜುನನನ್ನು ಕರೆತರಲು ಕಳಿಸುವುದು, ಅರ್ಜುನ ದ್ರೌಪದಿಯಿಂದ ಪಗಡೆಯಲ್ಲಿ ಸೋತು ಹನ್ನೆರಡು ವರ್ಷ ಜೋಗಿಯಾಗಿ ಹೋದನೆಂದು ತಿಳಿಯಹೇಳುವುದು, ಆಮೇಲೆ ಶ್ರೀಕೃಷ್ಣ ಅರ್ಜುನ ಜೋಗಿಯ ವೇಷದ ತೆರೆಯ ಮರೆಯನ್ನು ಸರಿಸುವುದು ಈ ಮುಂತಾದ ಹೊಸ ಆಶಯಗಳಿಂದ ಈ ಹಾಡು ಬೇರೆಯದೇ ಜಾಡು ಹಿಡಿಯುತ್ತದೆ. ಈ ಕಾವ್ಯಖಂಡ ಅರ್ಜುನ ಜೋಗಿಯ ಹಾಡುಗಬ್ಬ ಹಾಗೂ

ಕುಸುಮಾಲಿಗಿಂತ ಸಪ್ಪೆಯಾಗಿದೆ. ಕಥೆಯಲ್ಲಿ ಅರ್ಜುನ ಜೋಗಿಯಾದ ಹಿನ್ನೆಲೆ ಸೊಗಸಾಗಿಲ್ಲ. ದ್ರೌಪದಿಯೊಡನೆ ಪಗಡೆಯಲ್ಲಿ ಸೋತದ್ದೇ ಅವನು ಜೋಗಿಯಾಗಲು ಕಾರಣ.

ಏ. ದ್ರೌಪದಿಯ ಕನಸಿನ ರುಜುವಾತಿಗಾಗಿಯೇ ಬೆಳೆದುಕೊಂಡಂತಿರುವ ನಾಲ್ವರು ಹೆಂಡಿರು ಈ ಕಾವ್ಯಖಂಡದಲ್ಲಿ ಮಾತು ಕಲಿತ ಅರ್ಜುನನು ಮೂಡಣ, ಪಡುವಣ, ತೆಂಕಣ, ಬಡಗಣ ರಾಜ್ಯಗಳಿಗೆ ಹೋಗಿ, ಆಯಾ ದೇಶ ಭಾಷೆ ಕಲಿತು, ವೇಷಭೂಷಣಗಳನ್ನು ತೊಟ್ಟು, ಆ ರಾಜ್ಯಗಳ ರಾಜಕುಮಾರಿಯರನ್ನು ಮದುವೆಯಾಗಿ ತನ್ನ ಮನೆಗೆಲಸಗಳಿಗೆ ನೇಮಿಸಿಕೊಳ್ಳುವ ವಸ್ತುವನ್ನು ಹೊಂದಿದೆ. ಕಾವ್ಯ ವಸ್ತುವಿನಲ್ಲಿ ಕುತೂಹಲ ಕೆರಳಿಸುವ ಅಂಶಗಳೇನಿಲ್ಲ.

ಐ. ಧರ್ಮರ ಹಾಡಿನ ಕೇಂದ್ರ ವ್ಯಕ್ತಿ ದ್ರೌಪದಿ. ಇಲ್ಲಿಯ ಕಥಾ ವಸ್ತು ಪಾತ್ರಗಳೆಲ್ಲ ಮಹಾಭಾರತದಿಂದ ಭಿನ್ನಸ್ವರೂಪದವು. ಇಲ್ಲಿಯ ದ್ರೌಪದಿ ಮಹಾಭಾರತದ ದ್ರೌಪದಿಗಿಂತ ಗಟ್ಟಿಗಳು. ಗಂಡಂದಿರು ಪಗಡೆಯಲ್ಲಿ ಸೋತು ಸೆರೆಯಾಳಾದರೂ ಇವಳು ಎದೆಗುಂದಲಿಲ್ಲ. ದುಶ್ಯಾಸನನು ಅಪಮಾನ ಮಾಡಿದ ಸಂದರ್ಭದಲ್ಲಿ ಅಸಹಾಯಕಳಾಗಿ ಗೋಗರೆಯದೆ, ಸಿಟ್ಟಿನಿಂದ ದುಶ್ಯಾಸನನ ರಕ್ತದಿಂದ ತನ್ನ ದೇವಾಂಗವನ್ನು, ಅದ್ದಿಸಿ ಉಡುವ, ತನ್ನ ಬಿಚ್ಚು ಮುಡಿ ಕಟ್ಟುವ ಪ್ರತಿಜ್ಞೆಗೈದವಳು. ಮಹಾಭಾರತದಲ್ಲಿ ದ್ರೌಪದಿಯ ವಸ್ತ್ರಾಪಹರಣವು ಅವಳ ಪತಿಗಳೆದುರು, ಭೀಷ್ಮ, ದ್ರೋಣ ಮುಂತಾದ ಧರ್ಮಿಷ್ಠರೆದುರು ತುಂಬಿದ ಸಭೆಯಲ್ಲಾಗುತ್ತದೆ. ಅವರೆಲ್ಲ ಈ ಅನೀತಿಯುಕ್ತ ಕೃತಿಯನ್ನು ಪ್ರತಿಭಟಿಸದೆ ನಿಷ್ಕ್ರಿಯರಾಗಿದ್ದುದು ವಿಚಿತ್ರವೆನಿಸುತ್ತದೆ. ಇದನ್ನು ಗಮನಿಸಿದ ಸೂಕ್ಷ್ಮ ಪ್ರಕೃತಿಯ ಜಾನಪದ ಕವಿ ಆ ಪ್ರಸಂಗವನ್ನು ಬದಲಿಸುವಲ್ಲಿ ತನ್ನ ಔಚಿತ್ಯ ಪ್ರಜ್ಞೆಯನ್ನು ತೋರಿದ್ದಾನೆ. ಈ ಬದಲಾವಣೆಯಲ್ಲಿ ಜಾನಪದ ಕವಿಯ ಉನ್ನತ ಮಟ್ಟದ ಸಾಂಸ್ಕೃತಿಕ ಹಿನ್ನೆಲೆಯ ದರ್ಶನವಾಗುತ್ತದೆ. ಈ ಅಪೂರ್ವ ಬದಲಾವಣೆ ಗಾಮೊಕ್ಕಲ ಮಹಾಭಾರತದ ಅಗ್ಗಳಿಕೆಯೂ ಹೌದು. ಪಾದರಸದ ಬುದ್ಧಿಯ ದ್ರೌಪದಿ, ಕುರುರಾಯ ಕಪಟ ಪಗಡೆಯ ಮಣೆಯನ್ನುಪಯೋಗಿಸಿ, ಪಗಡೆಯಾಟ ಗೆದ್ದುದನ್ನು ಬೇಗನೆ ಅರಿತು, ಅಣ್ಣ ನಾರಾಯಣ ದೇವನಿಂದ ಹೊಸ ಪಗಡೆಮಣೆ ತರಿಸಿಕೊಂಡು, ಪಗಡೆಯಾಟ ಗೆಲ್ಲುತ್ತಾಳೆ. ಗಂಡಂದಿರು ಸೆರೆಯಾಳಾದಾಗಲೂ ದುರ್ಯೋಧನ ದುಶ್ಯಾಸನರಿಗೆ ದಿಟ್ಟತನದ ಉತ್ತರ ನೀಡಿ ತನ್ನ ಗಟ್ಟಿತನ ಪ್ರದರ್ಶಿಸುತ್ತಾಳೆ.

ಕ.ರಾ.ಕೃ. ಅವರು ಸಂಪಾದಿಸಿದ 'ಜನಪದ ಗೀತಗಳಲ್ಲಿ ಮಹಾಭಾರತ' ಗ್ರಂಥದಲ್ಲಿಯ 'ದ್ರೌಪದಿ' ಹಾಡನ್ನು ಧರ್ಮರ ಹಾಡು ಸ್ವಲ್ಪ ಮಟ್ಟಿಗೆ ಹೋಲುತ್ತದೆ. ದ್ರೌಪದಿಗೆ ಕೆಟ್ಟ ಕನಸು ಬೀಳುವುದು., ಪಾಂಡವರು ದುರ್ಯೋಧನನೊಡನೆ

ಪಗಡೆಯಾಡಿ ಸೋಲುವುದು, ಕೊನೆಗೆ ದ್ರೌಪದಿ ಪಗಡೆಯಲ್ಲಿ ದುರ್ಯೋಧನನನ್ನು ಗೆಲ್ಲುವುದು ಈ ಮೂರು ನಾಲ್ಕು ಅಂಶಗಳಲ್ಲಿ ಮಾತ್ರ ಹೋಲಿಕೆ. ಧರ್ಮರ ಕಥೆಯ ಕರ್ಣ, ದುಶ್ಯಾಸನ, ನಾರಾಯಣಸ್ವಾಮಿಯರ ಪ್ರಸ್ತಾಪ ಕ.ರಾ.ಕೃ ಅವರ 'ದ್ರೌಪದಿ' ಕಥೆಯಲ್ಲಿಲ್ಲ. ದುಶ್ಯಾಸನ ದ್ರೌಪದಿಯ ಸೀರೆಸೆಳೆಯುವುದು, ಶ್ರೀಕೃಷ್ಣ ಅವಳ ಸೆರಗು ಸ್ಥಿರವಾಗುವಂತೆ ಹರಸುವುದು. ದ್ರೌಪದಿಯ ಪ್ರತಿಜ್ಞೆ, ದುರ್ಯೋಧನನ ಕಳ್ಳ ಪಗಡೆ ಮಣೆಯ ಪ್ರಸ್ತಾಪ, ದ್ರೌಪದಿ ಕರ್ಣನ ಮೂಲಕ ನಾರಾಯಣದೇವನಿಂದ ಹೊಸ ಪಗಡೆ ಮಣೆಯನ್ನು ತರಿಸಿಕೊಳ್ಳುವುದು, ಪಗಡೆಯಾಡುವಾಗ ಗಾಳಿಯಿಂದ ದ್ರೌಪದಿಯ ಸೆರಗು ಜಾರಿದಾಗ ಅವಳ ಬಾಹುಮೂಲವನ್ನು ನೋಡಿ ಚಂಚಲನಾದ ದುರ್ಯೋಧನ ಪಗಡೆಯಾಟದಲ್ಲಿ ಸೋಲುವುದು, ದ್ರೌಪದಿಯ ವಿಷಯದಲ್ಲಿ ಕರ್ಣ ತಾಳುವ ಉನ್ನತ ಮನೋಭಾವನೆ, ಅವನ ಚಾರಿತ್ರಿಕ ಶುದ್ಧಿ ಹಾಗೂ ಅವನು ದ್ರೌಪದಿಗೆ ಮುಂದೊದಗಬಹುದಾದ ಕೇಡಿನ ಸೂಚನೆ ನೀಡುವುದು ಈ ಮುಂತಾದ ಹೊಸ ಆಶಯಗಳಿಂದ ಧರ್ಮರ ಕಥೆ ಕ.ರಾ.ಕೃ. ಅವರ 'ದ್ರೌಪತಿ' ಹಾಗೂ ವ್ಯಾಸ ಮಹಾಭಾರತ ಕಥೆಯಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಕ.ರಾ.ಕೃ. ಅವರ 'ದ್ರೌಪತಿ' ಯ ಹಾಡಿನಲ್ಲಿ ದ್ರೌಪತಿ ಎಸೆದ ದಾಳದಿಂದ ದುರ್ಯೋಧನನ ಹಣೆಯೊಡೆದು ಸುರಿದ ರಕ್ತದಿಂದ, ದ್ರೌಪತಿ ತನ್ನ ತುರುಬನ್ನು ಅದ್ದಿಸಿ ಕಟ್ಟಿಕೊಂಡ ಅಪೂರ್ವ ವಿಚಾರವನ್ನು ಬಿಟ್ಟರೆ ಉಳಿದ ಅಂಶಗಳಲ್ಲಿ ಧರ್ಮರ ಹಾಡು 'ದ್ರೌಪತಿ'ಯ ಹಾಡಿಗಿಂತ ಮಿಗಿಲಾಗಿದೆ.

ಧರ್ಮರ ಹಾಡಿನ ಕರ್ಣನ ಪಾತ್ರ ಅಭೂತಪೂರ್ವ. ಅವನ ಧರ್ಮಭೀರುತ್ವ, ಬಂಧು ಪ್ರೇಮ, ಪರಾಂಗನಾ ವಿರತಿ ನೀತಿ, ಸಾತ್ವಿಕ ತೇಜ ಗಮನಾರ್ಹ. ದ್ರೌಪದಿ ತಲೆ ತಿರುಗಿ ಬಿದ್ದಾಗ ತನ್ನ ಹಚ್ಚಡದ ಸೆರಗಿನಿಂದ ಅವಳನ್ನು ಹಿಡಿದೆತ್ತುವಲ್ಲಿ ಅವನ ಚಾರಿತ್ರ್ಯಶುದ್ಧಿ ಮೆಚ್ಚುವಂಥದ್ದು. ಮಹಾಭಾರತದಲ್ಲಿ ದ್ರೋಣ, ಅಶ್ವತ್ಥಾಮಾದಿಗಳು ಕರ್ಣನನ್ನು ಕುಲಹೀನನೆಂದು ಬೇರೆ ಬೇರೆ ಪ್ರಸಂಗಗಳಲ್ಲಿ ಕೆರಳಿಸಿದ್ದಿದೆ. ಆದರೆ ಇಲ್ಲಿ ದುರ್ಯೋಧನನೇ ಕರ್ಣನ ಹಿರಿಮೆಗೆ ಮಾತ್ಸರ್ಯಪಟ್ಟು, ಅವನನ್ನು 'ಅಂಬಿಗ'ನೆಂದು ಕರೆದು ಕರ್ಣನ ನಿಷ್ಠುರ ಕಟ್ಟಿಕೊಂಡ ಹಾಗೂ ಇದೇ ಪ್ರಸಂಗದಿಂದ ಕರ್ಣನ ಜನಪ್ರಿಯತೆ ಸಾಬೀತಾಗುವ ಹೊಸ ಆಶಯಗಳು ಸೇರಿ, ಮಹಾಭಾರತದಲ್ಲಿ ಖಳಚತುಷ್ಟಯರಲ್ಲಿ ಒಬ್ಬನಾದ ಕರ್ಣನು ಧರ್ಮರ ಕಾವ್ಯಖಂಡದಲ್ಲಿ ಉದಾತ್ತೀಕರಣಗೊಂಡಿದ್ದಾನೆ.

ಧರ್ಮರ ಹಾಡಿನಲ್ಲಿ ಪಾಂಡವರು ದ್ಯೂತವನ್ನು ದ್ರೌಪದಿಯ ಮುಖಾಂತರ ಗೆದ್ದರೂ, ಅವರು ಪುನಃ ರಾಜ್ಯವನ್ನು ಆಳದೆ, ವನವಾಸಕ್ಕೆ ಹೋಗುತ್ತಾರೆ.

ಅವರು ಹಾಗೆ ವನವಾಸಕ್ಕೆ ಹೋಗಲು ಕಾರಣವಾದ ಹಿನ್ನೆಲೆ 'ಧರ್ಮರ' ಕಥೆಯಲ್ಲಿ ಉಕ್ತವಾಗಿಲ್ಲ. ಇದಕ್ಕೆ ಹಾಲಕ್ಕಿ ಒಕ್ಕಲಿಗರಲ್ಲಿ ಪ್ರಚಲಿತವಿರುವ ಮಹಾಭಾರತ ಕಥೆಯಲ್ಲಿ ಉತ್ತರ ದೊರೆಯುತ್ತದೆ. ಅಲ್ಲಿ "ಹೆಂಗಸರು ಗೆದ್ದ ರಾಜ್ಯದಲ್ಲಿ ಉಳಿಯುವುದು ಸರಿಯಲ್ಲ" ಎಂದುಕೊಂಡು ಪಾಂಡವರು ದ್ರೌಪದಿಯ ಮೂಲಕವಾಗಿ ರಾಜ್ಯವನ್ನು ಗೆದ್ದರೂ, ಹೆಂಗಸರ (ದ್ರೌಪದಿಯ) ಹಂಗಿನಲ್ಲಿ ಉಳಿಯ ಬಯಸದೆ ಹನ್ನೆರಡು ವರ್ಷ ವನವಾಸಕ್ಕೆ ತೆರಳುತ್ತಾರೆ. ಬಹುಶಃ ಪಿತೃಪ್ರಾಧಾನ್ಯತೆಯೆಡೆ ಬುಡಕಟ್ಟುಗಳು ವಾಲುತ್ತಿರುವುದರ ಅಂಶವನ್ನು ಈ ಮಾರ್ಪಾಡು ಸೂಚಿಸುವಂತಿದೆ.

ಒ. ಮಹಾಭಾರತದ ವಿರಾಟ ಪರ್ವದ ಕಥೆಯು ಸಂಕ್ಷಿಪ್ತವಾಗಿ 'ಗೀಜಗ' ಹಾಡಿನಲ್ಲಿ ನಿರೂಪಿತವಾಗಿದೆ. ಮಹಾಭಾರತದ ಕೀಚಕ ಇಲ್ಲಿ ಗೀಜಗನಾಗಿದ್ದಾನೆ. ವಿರಾಟರಾಯನ ಹೆಂಡತಿ ಸುದೇಷ್ಣೆ ಇಲ್ಲಿ 'ಬೊನ್ವತಿ' ಯಾಗಿದ್ದಾಳೆ. ಕಥಾ ವಸ್ತು ಜಾನಪದೀಯ ಹಿನ್ನೆಲೆಯಲ್ಲಿ ತುಸು ಮಾರ್ಪಾಡು ಕಂಡಿದೆ. ಕೀಚಕ ತೂಗು ಮಂಚದಲ್ಲಿ ಕುಳಿತು ನಿದ್ದೆ ಹೋದಾಗ ದ್ರೌಪದಿ ಬೆನ್ವತಿಯ ಆದೇಶದ ಮೇರೆಗೆ ಅವನನ್ನು ಹಿಡಿದೆತ್ತುವ ಘಟನೆ ಮಹಾಭಾರತದಲ್ಲಿಲ್ಲದ ಹೊಸ ಸೇರ್ಪಡೆ. ದ್ರೌಪದಿ ವೇಷದ ಭೀಮ ತನ್ನ ತೋಳುಗಳು ಗಟ್ಟಿಯಾಗಲಿಕ್ಕೆ ಕೊಟ್ಟ ಕಾರಣ ಹಾಗೂ ಕೀಚಕ ಭೀಮನನ್ನು ಸೀಳಿ, ಮೂರು ಹಾದಿ ಕೂಡಿದಲ್ಲಿ ನಿಲ್ಲಿಸಿದ ಅಂಶಗಳು ಮಾತ್ರ ಮಹಾಭಾರತ ಕಥೆಗೆ ಸೇರದ ಜಾನಪದ ಮೂಲವುಳ್ಳ ಹೊಸ ಆಶಯಗಳು.

ಓ. ಈ ಸಂಪುಟದಲ್ಲಿಯ ಅತ್ತಗ್‌ಮೈದ್ನಿ, ಕನಕಾಂಗಿ ಕಲ್ಯಾಣ ಹಾಗೂ ಅಭಿಮನ್ಯು ಈ ಮೂರು ಕಾವ್ಯ ಖಂಡಗಳು ಕ್ರಮವಾಗಿ ಅಭಿಮನ್ಯುವಿನ ಹುಟ್ಟು, ಮದುವೆ ಹಾಗೂ ಸಾವಿನ ಸುತ್ತ ಹೆಣೆದುಕೊಂಡಿವೆ. ಅಭಿಮನ್ಯುವಿನ ಮದುವೆಯ ವೃತ್ತಾಂತವನ್ನು ನಿರೂಪಿಸುವ ಸೆಣ ಸುಭದ್ರೆ, ಕನಕಾಂಗಿ ಕಲ್ಯಾಣ ಹಾಗೂ ಅವನ ವೀರಮರಣವನ್ನು ಸಾರುವ ಅಗಮಂಜು, ಅಭಿಮನ್ಯು ಕಥಾ ವಸ್ತುಗಳ ಭಿನ್ನ ಪಾಠಗಳನ್ನು ಗಾಮೊಕ್ಕಲ ಜಾತಿಗೆ ಸೇರಿದ ಬೇರೆ ಬೇರೆ ಹಾಡುಗಾರ್ತಿಯರಿಂದ ಸಂಗ್ರಹಿಸಿ ಇಲ್ಲಿ ಒಟ್ಟಿಗೆ ನೀಡಲಾಗಿದೆ. ಎರಡೂ ಪಾಠಗಳ ಸಂಗ್ರಹಣೆಯಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಅಂತರವಿರು ವುದರಿಂದ ಎರಡೂ ಪಾಠಗಳಲ್ಲಿ ಸಾಕಷ್ಟು ಭಿನ್ನತೆಯಿದೆ : ಸೆಣ ಸುಭದ್ರೆ ಹಾಡಿನಲ್ಲಿ ಅಣ್ಣನ ಮನೆಗೆ ಹೆಣ್ಣು ಕೇಳಲು ಹೋಗುವ ಸುಭದ್ರೆಯ ಅಲಂಕರಣ ವಿಷಯದ ವರ್ಣನೆಯಿಲ್ಲ. ಅಣ್ಣನ ಮನೆಯ ಬಣ್ಣದ ಜಗುಲಿಯ ಮೇಲೆ ಕುಳಿತ ಸುಭದ್ರೆಯನ್ನು ಅಣ್ಣ "ಎಂದೂ ಬರದಿದ್ದ ತಂಗಿ ಇಂದೇಕೆ ಬಂದೀಯೆ? ರಾಜ್ಯ ಬೇಕಾದರೆ ಬರೆದುಕೋ" ಎಂದು ಕಥೆ ಆರಂಭವಾಗುತ್ತದೆ. ಅಭಿಮನ್ಯುವಿಗೆ

ಹೆಣ್ಣು ಕೊಡುವುದಿಲ್ಲವೆಂದು ಹೇಳಿದ ಅತ್ತಿಗೆಯನ್ನು ಚೆನ್ನಾಗಿ ಜರಿದು, ಝಂಕಿಸಿ ಹಿಂದಿರುಗುವ ಸುಭದ್ರೆಯ ಕೋಪಾಟೋಪ ಹಾಗೂ ಅತ್ತಿಗೆ ಮಾದೇವಿ ತನ್ನ ಮಗಳು ಕನಕಾಂಗಿಗೆ, ಅವಳು ಅಭಿಮನ್ಯುವನ್ನು ಮದುವೆಯಾದರೆ, ಅಂಬಲಿ ಉಣಿಸಿ, ಕಂಬಳಿ ಹೊದಿಸಿ, ಡೊಂಬರ ಭಾಷೆಯನ್ನು ಕಲಿಸುವರು, ಅಭಿಮನ್ಯುವನ್ನು ಮದುವೆಯಾಗುವುದು ಸರಿಯಲ್ಲವೆಂದು ಹೇಳುವ ಸಂಗತಿ ಸೆಣಸುಬದ್ರಿ ಹಾಡಿನಲ್ಲಿಲ್ಲ. ಕನಕಾಂಗಿ ಕಲ್ಯಾಣದಲ್ಲಿಯ ಮದುವೆಯ ವಿಸ್ತ್ರತ ವರ್ಣನೆಯೂ ಸೆಣಸುಬದ್ರಿ ಹಾಡಿನಲ್ಲಿ ಮೊಟಕಾಗಿದೆ. ಸೆಣಸೂಬದ್ರಿ ಹಾಡಿನಲ್ಲಿ ಅಭಿಮನ್ಯುವಿನ ಹೆಂಡತಿ "ಕನಕಾಂಗಿ" ಎಂಬ ಪ್ರಸ್ತಾಪವೂ ಬರುವುದಿಲ್ಲ. ಎಂಟು ಪುಟ ಪರಿಮಿತಿಯ 'ಸೆಣಸುಬದ್ರಿ' ಕಥೆ ಕನಕಾಂಗಿ ಕಲ್ಯಾಣದಲ್ಲಿ ಹದಿನೇಳು ಪುಟ ವ್ಯಾಪ್ತಿ ಪಡೆದಿದೆ.

ಊ. ಅಗಮಂಜು ಹಾಡಿನಲ್ಲಿ ಸುಭದ್ರೆ, ನಾರಾಯಣ ದೇವನಿಗೆ "ಸಂಗಡ ಹೋದ ಅರ್ಜುನನನ್ನು ಎಲ್ಲಿ ಬಿಟ್ಟು ಬಂದೆ" ಎಂದು ಕೇಳಿದಾಗ ಆತ, "ಗಂಗೆಗೆ ಹೋದವರು ಒಟ್ಟಿಗೇ ಬರಬಾದರು, ನಿನ್ನ ಗಂಡನಿಗೆ ನಾಡೇ ನೆಂಟರು, ಆತ ಇನ್ನೊಂದುಗಳಿಗೆಯಲ್ಲಿ ಬರುತ್ತಾನೆ." ಎಂದು ಹೇಳಿದರೆ, ಅಭಿಮನ್ಯು ಹಾಡಿನಲ್ಲಿ, "ಗಂಗೆಗೆ ಹೋದವರು ತಿರುಪತಿಗೆ ಹೋಗದೆ ಹಿಂದಿರುಗಬಾರದೆಂದು ಅರ್ಜುನ ತಿರುಪತಿಗೆ ಹೋಗಿರಬೇಕು" ಎನ್ನುತ್ತಾನೆ. ಒರಳಲ್ಲಿ ಕುಟ್ಟದ, ಉಗುರಲ್ಲಿ ಸುಲಿಯದ ಅಕ್ಕಿಯಿಂದ ಹಾಲ್ಗಂಜಿಯೂಟ ಸಿದ್ಧಪಡಿಸಲು ನಾರಾಯಣದೇವ ಸುಭದ್ರೆಗೆ ನಿರ್ದೇಶಿಸುವ ಹಾಗೂ ಅವಳ ಕಂದನನ್ನು ಕಾಳಗಕ್ಕೆ ಕಳಿಸದಿದ್ದರೆ, ಅವಳ ಮನೆಬಾಗಿಲಿಗೆ ದಂಡನ್ನು ತಿರುಗಿಸಿ ಅಭಿಮನ್ಯುವನ್ನು ಮೂರು ದಿನಗಳಲ್ಲಿ ಕೊಲ್ಲುತ್ತೇನೆ ಎಂದು ಬೆದರಿಕೆಯೊಡ್ಡುವ ಮಾತು 'ಅಗಮಂಜು' ಹಾಡಿನಲ್ಲಿಲ್ಲ. ಅಗಮಂಜು ಕಾವ್ಯಖಂಡದಲ್ಲಿ ಸುಭದ್ರೆ ಅಗಮಂಜುವನ್ನು ಕಾಳಗಕ್ಕೆ ಕಳಿಸಲು ಮೀನಮೇಷ ಮಾಡುತ್ತ, "ನನ್ನ ಮಗ ಚಿಕ್ಕವನು, ನೆತ್ತಿಯ ಸುಳಿ ಬಲಿಯಲಿಲ್ಲ, ಅವನು ಕಾಳಗ ಕಲಿಯಲಿಲ್ಲ" ಎನ್ನುವ ಮಾತು ಬಂದರೆ, ಅಭಿಮನ್ಯು ಹಾಡಿನಲ್ಲಿ 'ಎಣ್ಣೆಯೆರೆದರೆ ಕಣ್ಣೀರಿಡುವ, ಮೊಸರನ್ನವಿಕ್ಕಿದರೆ ಚೀರಾಡುವ ಕೆಂಪು ಹರಿವೆ ಸೊಪ್ಪಿನ ರಸವನ್ನು ಕಂಡು ಹೆದರುವ ಯುದ್ಧವಿದ್ಯೆಯರಿಯದ ಅಭಿಮನ್ಯುವನ್ನು ಕಾಳಗಕ್ಕೆ ಕಳಿಸಲಾರೆ' ಎಂಬ ಮಾತಿದೆ. ಇಲ್ಲಿಯ ಸುಭದ್ರೆ ಅಭಿಮನ್ಯುವಿಗೆ ನಾರಾಯಣ ದೇವನ ಪಾದಕ್ಕೆರಗಲು ಸೂಚಿಸುವ, ನಾರಾಯಣದೇವ ಅಭಿಮನ್ಯುವಿನ ಕಣ್ಣಿಗೆ ಕತ್ತಲೆ ಕವಿಸುವ, ಅಭಿಮನ್ಯು ತಡಕಾಡಿ ಮಾವನಿಗೆ ನಮಸ್ಕರಿಸುವ, ಆತ ಅಭಿಮನ್ಯುವಿನ ಮುಂದಲೆ ನೇವರಿಸುವ ಸಂಗತಿಗಳು 'ಅಗಮಂಜು' ಕಾವ್ಯಖಂಡದಲ್ಲಿಲ್ಲ. ಅಗಮಂಜು ಕಾವ್ಯಖಂಡದ, "ಬಡವರ ಮಕ್ಕಳನ್ನು ಹೊಗೆ ಹಾಕಿ ಕೊಂದು ಮಣ್ಣು ಮಾಡುವವ ನೀನು" ಎನ್ನುವ ಮಾತು ಅಭಿಮನ್ಯು ಕಾವ್ಯ ಖಂಡದಲ್ಲಿಲ್ಲ.

"ದಂಡಿನಲ್ಲಿ ನೂರಾಳು ಸವರಿ ವೀರನಾಗಿ ಬಾ" ಯೆಂದು ಸುಭದ್ರೆ ಅಭಿಮನ್ಯುವಿಗೆ ಆರತಿಯೆತ್ತುವಾಗ ಆರತಿ ಎರಡು ಕುಡಿಯಾಗುವ, ಅಭಿಮನ್ಯು ಹಾರುವ ಕೇರಿ, ಶೆಟ್ಟರ ಕೇರಿಯ ಮೇಲಿಂದ ಯುದ್ಧಕ್ಕೆ ಹೊರಡುವಾಗ, ಸುಮಂಗಲೆಯರು ತಮ್ಮ ಮುತ್ತಿನ, ಪಾವನ ಸರಗಳನ್ನು ಕಣ್ಣೀರಿಡುತ್ತ ಅಭಿಮನ್ಯುವಿಗೆ ಹಾಕುವ ದೃಶ್ಯಾವಳಿಗಳು 'ಅಗಮಂಜು' ಕಥೆಯಲ್ಲಿಲ್ಲ' ಅಗಮಂಜು ಕಥೆಯಲ್ಲಿದ್ದ "ಉತ್ತರೆ, ಮಂದುರೆ (ಕನಕಾಂಗಿ)ಯರ ಚಿಂತೆ ನನಗಿಲ್ಲ. ರಸರಾಳಿಯರ ಮಗಳು ಚಿಕ್ಕವಳು; ಅವಳಿಗೆ ಅರ್ಧ ಹಿತ್ತಿಲಕೊಡು, ಬದುಕು ಬಂಗಾರಕೊಟ್ಟು ಅವಳನ್ನು ತವರಿಗೆ ಕಳಿಸು" ಎಂಬ ಅಭಿಮನ್ಯುವಿನ ಹೇಳಿಕೆಯಂತೆ ಅವಳನ್ನು ತವರಿಗೆ ಕಳಿಸುವ ಸನ್ನಿವೇಶ 'ಅಭಿಮನ್ಯು' ಕಥೆಯಲ್ಲಿ ಕಾಣದು. ಅಗಮಂಜು ಕಥೆಯಲ್ಲಿ ಅಭಿಮನ್ಯು ಕಥೆಯ ಅಭಿಮನ್ಯು ಕನಕಾಂಗಿಯರ ಹೆಸರು, ಅಗಮಂಜು, ಮಂದುರಿ ಎಂದಾಗಿದೆ. ಅಗಮಂಜು ಹಾಡಿನಲ್ಲಿ ಮಂದುರಿ ಪಚ್ಚದ ಕಂಬಿನ ಮರೆ ಸೇರಿದರೆ 'ಅಭಿಮನ್ಯು' ಹಾಡಿನಲ್ಲಿ ಕನಕಾಂಗಿ ಮಾಲ್ಯದ ಕಂಬದ ಮರೆ ಸೇರುತ್ತಾಳೆ. ಅಗಮಂಜು ಕಥೆಯಲ್ಲಿ ಅಗಮಂಜು ಹೆಂಡತಿ ಮಂದುರಿಯು ಮಿಲನಕ್ಕೆ ಹೋದಾಗ ಅವಳಿಗೆದುರಾಗುವವರು ಮಂದುರಿಯ ಅಣ್ಣ ಮಸಣಯ್ಯ. ಆದರೆ ಅಭಿಮನ್ಯು ಕಥೆಯಲ್ಲಿ ಆ ಹೆಸರಿರದೆ ಅವನ ಭಾವಂದಿರೆಂದಿದೆ. ಕನಕಾಂಗಿ ಅಭಿಮನ್ಯುವಿಗೆ ತಾಂಬೂಲ ಕೊಟ್ಟಾಗ, ನಾರಾಯಣದೇವ ತಾಂಬೂಲದಲ್ಲಿ ಎಲೆ ಸರ್ಪವಾಗಿ ಹರಿಯುವ ಪ್ರಸಂಗವಿದ್ದು ಆ ಪ್ರಸಂಗ ಅಗಮಂಜು ಕಥೆಯಲ್ಲಿ ಕಾಣೆಯಾಗಿದೆ.

ಅಗಮಂಜು ತನ್ನ ಪಟ್ಟೆಯನ್ನು ಬಾಗ್ಲೋರಿಗೆ ಉಡುಗೊರೆಕೊಟ್ಟು ಕಣ್ಣಿಗೆ ಕತ್ತಲುಬಂದು ಬಿದ್ದಾಗ, ಗಿಂಡಿಕಾಲ್ ಸಣ್ಣಕ್ಕ ಬಂದು ಅವನ ಮೇಲೆ ಅಮೃತ ಚಿಮುಕಿಸುವ ಪ್ರಸಂಗ ಅಭಿಮನ್ಯು ಹಾಡಿನಲ್ಲಿ ಕಣ್ಮರೆಯಾಗಿದೆ. ಅಗಮಂಜು ಕಥೆಯಲ್ಲಿ ಅಗಮಂಜು ಮಂದುರಿಯೊಡನೆ ಪವಡಿಸಹೋದಾಗ, ಅವಳ ಕರಿಮಣಿಸರ ತಾನಾಗಿಯೇ ಹರಿದರೆ, ಅಭಿಮನ್ಯು ಕಥೆಯಲ್ಲಿ ನಾರಾಯಣದೇವ ಕಟ್ಟಿರುವೆಯಾಗಿ ಕನಕಾಂಗಿಯ ಪಾವನಸರ ಹರಿಯುತ್ತಾನೆ. ಅಭಿಮನ್ಯು ಕನಕಾಂಗಿಯು ಹಾಸಿಗೆಯಲ್ಲಿ ಪವಡಿಸುತ್ತಿರುವಾಗ ನಾರಾಯಣದೇವ ಕಲ್ಲಕೋಳಿಯಾಗಿ ಸರಗೈಯ್ಯುತ್ತಾನೆ. ಆಗ ಕನಕಾಂಗಿ "ಊರಕೋಳಿಯಾದರೆ ಊರೆಲ್ಲ ಬೆಳಕಾಗುತ್ತಿತ್ತು. ಊರ ಕೋಳಿಯಲ್ಲ, ನನ್ನಪ್ಪನೇ ಕಲ್ಲಕೋಳಿಯಾಗಿ ಕೂಗಿದ್ದಾನೆ" ಎಂದು ಹೇಳುತ್ತಾಳೆ. ಅಗಮಂಜು ಕಥೆಯಲ್ಲಿ ಈ ಮಾತನ್ನಾಡುವವನು ಅಗಮಂಜು. ಅಗಮಂಜು ಕಥೆಯ ಕಡಚಕ್ರಕೋವಿ ಅಭಿಮನ್ಯು ಕಥೆಯಲ್ಲಿ ಸಣಚಕ್ರ ಕೋವಿಯಾಗಿದೆ. ಅಭಿಮನ್ಯು ಹಾಡಿನ ಕರ್ಣನು ಕೋಟೆಯ ಮರೆ ಸೇರಿ, ತಾನು ಹೊಡೆದದ್ದು ಅಭಿಮನ್ಯುವೆಂದರಿತು "ಏನು ಮಾಡಿದರೆ ನೀನು ಬದುಕುತ್ತಿಯೇ?" ಎಂದು ಕೇಳಿದಾಗ, ಅಭಿಮನ್ಯು "ನನ್ನ

ಸಂಗಡಿಗರು ಕುಳಿತು ಮುಳ್ಳು ತೆಗೆಯುವಾಗ, ಪನ್ನೆ ಮಾಡುವಾಗ, ಇದೆಂಥ ಕಲೆಯೆಂದು ಕೇಳಿದರೆ ನನಗೆ ಸತ್ತಂತಾಗುವುದು" ಎನ್ನುತ್ತಾನೆ. ಕರ್ಣನು ಅಭಿಮನ್ಯು ಬಿದ್ದಲ್ಲಿ ಪೇಟೆ ಪಟ್ಟಣಗಳಾಗಲಿ, ಅಭಿಮನ್ಯುವಿಗೆ ಮನೆಯಲ್ಲಿದ್ದಷ್ಟೇ ಸುಖವಾಗಲಿ" ಎನ್ನುವ ಪಾಠಗಳ ಸ್ಥಳದಲ್ಲಿ ಅಗಮಂಜು ಹಾಡಿನಲ್ಲಿ" ಜೊತೆಗಾರರನ್ನು ಕೂಡಿಕೊಂಡು ಪಗಡೆಯಾಡುವಾಗ" ಎನ್ನುವ ಅಗಮಂಜು ಮಾತು, "ಅಭಿಮನ್ಯು ಬಿದ್ದಲ್ಲಿ ಹನ್ನೆರಡು ಸುತ್ತಿನ ಕೋಟೆಯಾಗಲಿ" ಎಂದು ಕರ್ಣ ಭರತವಾಕ್ಯ ನುಡಿಯುವ ಪಾಠ ಬಂದು ಅಗಮಂಜು ಹಾಡಿನ ಸ್ವಾರಸ್ಯ ಹೆಚ್ಚಾಗಿದೆ. ರಸರಾಳಿಯ ಮಗಳಿಗೆ ಅರ್ಧ ಮುತ್ತೈದೆತನವನ್ನು ನೀಡುವ ಹಾಗೂ ನಾರಾಯಣದೇವ, "ಓಲೆಯಿಲ್ಲದ ಅತ್ತಿಗೆಯನ್ನು ಕೂಡಿಕೊಳ್ಳುವಿರೇನು" ಎಂದು ಕೇಳಿದ್ದಕ್ಕೆ, "ನಮ್ಮ ಆಳ್ತನಕ್ಕೆ ಹೊಂದಿಕೆಯಾದಲ್ಲಿ ಕೂಡಿಕೊಳ್ಳುತ್ತೇವೆ." ಎಂದು ಅಭಿಮನ್ಯು ಹಾಡಿನಲ್ಲಿ ಬರುವ ಸಂಗತಿಗಳು ಅಗಮಂಜು ಹಾಡಿನಲ್ಲಿಲ್ಲ. ನಾರಾಯಣ ದೇವನ ಕಿರಿಯ ಹೆಂಡಿರು ಮಂದುರಿಯನ್ನು ಕುರಿತು, "ಈ ನಾರಿ ನಿಮ್ಮ ಮುದ್ದಿನ ಮಗಳು, ಇಲ್ಲಿದ್ದರೆ ನಮಗೆ ಸುಖವಾಗಿರಗೊಡಳು, ಇವಳನ್ನು ಇವಳ ಗಂಡನ ಜೊತೆ ಸುರಲೋಕದಲ್ಲಿ ಬಿಟ್ಟು ಬನ್ನಿರಿ" ಎಂದು ಅಗಮಂಜು ಕಥೆಯಲ್ಲಿ ಬರುವ ಮಾತು, ಅಭಿಮನ್ಯು ಕಥೆಯಲ್ಲಿಲ್ಲ. ಕನಕಾಂಗಿ ಅಭಿಮನ್ಯುವಿನೆಡೆ ಹೋಗುವಾಗ ನಾರಾಯಣ ದೇವನ ತೆಂಗು, ಬಾಳೆ, ಈಳೆ ಬನಗಳೆಲ್ಲ ಕನಕಾಂಗಿಯ ಜೊತೆಗೆ ಸಾಗುವ ಹಾಗೂ ಉತ್ತರೆ, ಅಭಿಮನ್ಯುವಿನೆಡೆ ಸಹಗಮನಕ್ಕೆ ಹೋಗುವಾಗ ಪಕ್ಕದಲ್ಲಿದ್ದ ಅಕ್ಕ ಕನಕಾಂಗಿಯ ಹತ್ತಿರ, ಕಂದನನ್ನು ಅತ್ತೆಗೊಪ್ಪಿಸಿ ಬಂದಿದ್ದೇನೆಂದು ಹೇಳುವಾಗ, ಅಭಿಮನ್ಯು ಸಿಟ್ಟಾಗಿ ಅವಳನ್ನೊದ್ದು ಕೆಡವಿ, ಅವಳು ಹಲ್ಲಿಯಾಗಿ ಪಚ್ಚದ ಕಂಬ ಸೇರಿ, ಬರ ಹೋಗುವವರಿಗೆ ಶಕುನವನ್ನು ನುಡಿಯೆಂದು ಶಪಿಸುವ ಸಂದರ್ಭಗಳು ಅಗಮಂಜು ಹಾಡಿನಲ್ಲಿಲ್ಲ. ಅಗಮಂಜು ಹಾಡಿನಲ್ಲಿ ಉತ್ತರೆ, ಮಂದುರಿ (ಕನಕಾಂಗಿ) ಯರಿಬ್ಬರೂ ಗಂಡನೊಡನೆ ಸಹಗಮನವನ್ನು ಮಾಡಿದರೆ, ಅಭಿಮನ್ಯು ಹಾಡಿನಲ್ಲಿ ಗಂಡನೊಡನೆ ಸಹಗಮನ ಮಾಡಿ ದೇವಲೋಕ ಸೇರುವವಳು ಕನಕಾಂಗಿಯೊಬ್ಬಳೆ, ರಸರಾಳಿಯ ಮಗಳು ಅರ್ಧಮುತ್ತೈದೆತನವನ್ನು ಪಡೆದು ಅರ್ಧರಾಜ್ಯ ಸುಖವನ್ನು ಪಡೆದರೆ, ಉತ್ತುರಿ ಹಲ್ಲಿಯಾಗಿ ಪಚ್ಚದ ಕಂಬೇರಿ ಬರಹೋಗುವವರಿಗೆ ಶಕುನ ನುಡಿಯುತ್ತಾಳೆ.

ಅಗಮಂಜು ಮತ್ತು ಅಭಿಮನ್ಯು ಹಾಡಿನ ನಿರೂಪಣಾ ವಿನ್ಯಾಸದಲ್ಲಿಯೂ ವ್ಯತ್ಯಾಸಗಳಿವೆ. ಅಗಮಂಜು ಹಾಡಿನ ಇಮ್ಮಡಿಯಾಗಿ ಅಭಿಮನ್ಯು ಹಾಡು ಬೆಳೆದುಕೊಂಡಿದೆ. ಹಾಡಿನ ಭಾಷೆ, ನುಡಿಗಟ್ಟನಲ್ಲಿಯೂ ಕೆಲಮಟ್ಟಿಗೆ ವ್ಯತ್ಯಾಸ ಕಂಡು ಬರುತ್ತದೆ. ಇದಕ್ಕೆ ಕಾರಣ ಅಗಮಂಜು ಹಾಡಿನ ನಿರೂಪಕಿಯಂತೆ ಅಭಿಮನ್ಯು ಹಾಡಿನ ನಿರೂಪಕಿ ನಿರಕ್ಷರಿಯಲ್ಲ. ನಾಲ್ಕನೇ ತರಗತಿಯವರೆಗೆ

ಓದಿದವಳು. ಸಾಮಾಜಿಕ ಕಾರ್ಯಕರ್ತೆ. ಸ್ವಲ್ಪಮಟ್ಟಿಗೆ ಅನುಕೂಲಸ್ಥೆಯೂ ಹೌದು. ಇಲ್ಲಿಯ ಎರಡೂ ಪಠ್ಯಗಳ ನಿರೂಪಕರು ಶರಾವತಿಯ ಕೊಳ್ಳದ ಅಕ್ಕಪಕ್ಕದವರಾದರೂ, ಎರಡೂ ಪಠ್ಯಗಳ ಸಂಗ್ರಹಣೆಯ ಮಧ್ಯದಲ್ಲಿ ಇಪ್ಪತ್ತೈದು ವರ್ಷಗಳ ಅಂತರವಿದೆ. ಜೊತೆಗೆ ಇತ್ತೀಚಿನ ಸಾಕ್ಷರತಾ ಪ್ರಸಾರ, ಆಧುನಿಕತೆಯ ಪ್ರಭಾವಾದಿಗಳೂ ಹಲವಾರು ಪ್ರಕ್ಷೇಪಗಳಿಗೆ ದಾರಿ ಮಾಡಿಕೊಟ್ಟಿವೆ.

ಅಭಿಮನ್ಯು ಕಾವ್ಯ ಖಂಡ ಆಂಶಿಕವಾಗಿ ಶಿಷ್ಟ ಮಹಾಭಾರತದ ಐತಿಹ್ಯ ಪ್ರಸಂಗವನ್ನುಳ್ಳುದಾದರೂ, ಅಭಿಮನ್ಯುವಿನ ಹುಟ್ಟು, ಮದುವೆ ಹಾಗೂ ಸಾವಿನ ಕಥಾ ಶಿಲ್ಪ ಶಿಷ್ಟ ಮಹಾಭಾರತದಿಂದ ಭಿನ್ನ ಸ್ವರೂಪವನ್ನು ಪಡೆದಿದೆ. ಜಾನಪದ ಹಾಗೂ ಶಿಷ್ಠ ಮಹಾಭಾರತಗಳೆರಡರಲ್ಲಿಯೂ ಅಭಿಮನ್ಯು ವೀರೋಚಿತವಾಗಿ ವರ್ತಿಸುವುದು ಸಾಮಾನ್ಯವಾಗಿದ್ದರೂ ಕಥಾ ವಸ್ತುವಿನ ಬೆಳವಣಿಗೆ, ಲೋಕದೃಷ್ಟಿ, ರೂಢಿ ನಂಬಿಕೆ, ಸಂಪ್ರದಾಯ, ಆಡುವ ಆಟ, ಅಡುವ ಅಡುಗೆ, ಬರುವ ವರ್ಣನೆಗಳು ಬರುವ ಪಾತ್ರಗಳ ಸ್ವಭಾವ ವಿಶೇಷಗಳಲ್ಲಿ ಸಾದೃಶ್ಯಕ್ಕಿಂತ ವೈದೃಶ್ಯವನ್ನೇ ಹೆಚ್ಚಾಗಿ ಕಾಣುತ್ತೇವೆ.

ಅಭಿಮನ್ಯುವಿಗೆ ಸಂಬಂಧಿಸಿದ ಇಲ್ಲಿಯ ಮೂರು ಕಾವ್ಯಕಥಾ ಖಂಡಗಳಲ್ಲಿ ನಾರಾಯಣ ದೇವ ಸಂಭಾವಿತನಾಗಿ ಗೋಚರಿಸುವುದೇ ಇಲ್ಲ. ಈತ ತನ್ನ ತಂಗಿ, ಭಾವ, ಅಳಿಯ ದ್ವೇಷಿಯಾಗಿ ರೂಪುಗೊಂಡಿದ್ದಾನೆ. ಈತನ ಅಭಿಮನ್ಯುವಿನ ಮೇಲಿನ ದ್ವೇಷವಂತೂ ಪರಾಕಾಷ್ಠೆಗೆ ಮುಟ್ಟಿ, ಅದು ಅವನನ್ನು ಕರ್ಣನ ಮೂಲಕ ಕೊಲೆ ಮಾಡಿಸುವಲ್ಲಿ ಪರ್ಯವಸಾನಗೊಳ್ಳುತ್ತದೆ. ಆದರೆ ಈ ದ್ವೇಷಕ್ಕೆ ಕಾರಣವಾದ ಹಿನ್ನೆಲೆ ಮಾತ್ರ ಗಾಮೊಕ್ಕಲ ಮಹಾಭಾರತ ಸಂಪುಟದಲ್ಲೆಯೂ ಉಕ್ತವಾಗಿಲ್ಲ. ಆದರೆ ಜನಪದ ಮಹಾಭಾರತ ಪರಂಪರೆಯ ಒಂದೆರಡು ಗದ್ಯ ಕಥೆಗಳಲ್ಲಿ ಇದಕ್ಕೆ ಕಾರಣವಾದ ಹಿನ್ನೆಲೆಯ ಕಥೆಯನ್ನು ನಾನು ಚಿಕ್ಕಂದಿನಲ್ಲಿ ಕೇಳಿ ತಿಳಿದ ನೆನಪಿದೆ. ಕೃಷ್ಣನ ವೈರಿಯಾದ ಕಾಳಿಂಗವೊಂದು ಸುಭದ್ರೆಯ ಗರ್ಭವನ್ನು ಸೇರಿ, ಅಭಿಮನ್ಯುವಾಗಿ ಹುಟ್ಟಿ, ನಾರಾಯಣದೇವ (ಕೃಷ್ಣ) ನ ಮೇಲೆ ಸೇಡು ತೀರಿಸಿಕೊಳ್ಳಲಿರುವ ಸಂಗತಿಯನ್ನರಿತ ನಾರಾಯಣದೇವನು ಅವನನ್ನು ಕೊಲ್ಲಲು ಸಂಚುಮಾಡಿ, ಅವನನ್ನು ಚಕ್ರವ್ಯೂಹದಲ್ಲಿ ಕೊಲ್ಲಿಸುತ್ತಾನೆ. ಇನ್ನೊಂದು ಕಥೆಯಲ್ಲಿ ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಿ ಮುನ್ನಡೆಯಲು ತನ್ನ ಬಾಣ, ಕತ್ತಿಗಳನ್ನು ಮಸೆಯುತ್ತಿರುವಾಗ, ನಾರಾಯಣದೇವ ಪ್ರಚ್ಛನ್ನ ವೇಷದಲ್ಲಿ ಬಂದು, ಅವನ ಸಾಮರ್ಥ್ಯಕ್ಕೆ ಸವಾಲೊಡ್ಡಿ, ಒಂದು ದೊಡ್ಡ ಅಶ್ವತ್ಥ ವೃಕ್ಷವನ್ನು ತೋರಿಸಿ, ಒಂದೇ ಬಾಣದ ಹೊಡತಕ್ಕೆ ಅದರ ಎಲೆಗಳನ್ನೆಲ್ಲ ಉದುರಿಸ ಹೇಳಿದಾಗ, ಅಭಿಮನ್ಯು ಒಂದೇ ಬಾಣಕ್ಕೆ ಅಶ್ವತ್ಥ ವೃಕ್ಷದ ಅಯ್ದು ಮತ್ತು ಅರ್ಧ ಎಲೆಗಳನ್ನು ಮಾತ್ರ ಉಳಿಸಿ, ಉಳಿದೆಲೆಗಳನ್ನು ಕತ್ತರಿಸಿ ತನ್ನ ಸಾಮರ್ಥ್ಯವನ್ನು ಮೆರೆದು,

"ಆ ಅಯ್ದು ಎಲೆಗಳು ಪಾಂಡವರು; ಅರ್ಧ ಕತ್ತರಿಸಿದ ಎಲೆ ನಾರಾಯಣದೇವ. ನನ್ನನ್ನು ಮೀರಿದ ಶಕ್ತಿವಂತರು ಪಾಂಡವರು ಮಾತ್ರ. ಮಾವ ನಾರಾಯಣದೇವ ನನಗೆ ಲೆಕ್ಕಕ್ಕಿಲ್ಲ; ಅವನನ್ನು ನಾನು ಅರೆಜೀವವಾಗಿರಿಸಬಲ್ಲೆ" ಎಂದು ಅಹಮಹಮಿಕೆಯಿಂದ ಬೀಗಿದ. ಅಭಿಮನ್ಯು ಸಾಮರ್ಥ್ಯಕ್ಕೆ ಹೆದರಿದ ನಾರಾಯಣದೇವ ಅವನನ್ನು ಹಾಗೆಯೇ ಬೆಳೆಯಗೊಟ್ಟರೆ ಅಪಾಯವೆಂದು ಬಗೆದು ಕರ್ಣನಿಗೆ ಪ್ರಚೋದಿಸಿ ಅವನನ್ನು ಚಕ್ರವ್ಯೂಹದಲ್ಲಿ ಕೊಲ್ಲಿಸುತ್ತಾನೆ. ಈ ಸಂಪುಟದಲ್ಲಿ ನಾರಾಯಣದೇವ ಸುಭದ್ರೆಯ ಗರ್ಭಸ್ಥ ಶಿಶುವನ್ನು ಮುಗಿಸಲು ಯತ್ನಿಸಿ ವಿಫಲನಾಗುವುದು, ಅಭಿಮನ್ಯುವಿಗೆ ಹೆಣ್ಣು ಕೊಡಲು ನಿರಾಕರಿಸಿ ಅವನನ್ನು ಮುಖಭಂಗಿತನನ್ನಾಗಿಸಲು ಹವಣಿಸುವುದು, ಕೊನೆಯಲ್ಲಿ ಕಡಚಕ್ರಕೋಟೆ ಕಾಳಗದಲ್ಲಿ ಅಭಿಮನ್ಯುವನ್ನು ಕರ್ಣನ ಕೈಯಲ್ಲಿ ಮೋಸದಿಂದ ಕೊಲ್ಲಿಸಿ ತನ್ನ ಗುರಿ ತಲುಪುವುದು ನಿಚ್ಚಳವಾಗಿ ಮೂಡಿ ಬಂದಿದೆ. ಇಲ್ಲಿಯ ಅಭಿಮನ್ಯುವಿನ ರೋಷ ಕೌರವಾದಿಗಳ ಮೇಲಲ್ಲ. ಕಪಟಿಯೂ ಕುಹಕಿಯೂ ಆದ ನಾರಾಯಣದೇವನ ಮೇಲೆ. ಆತ ಸಾವ್ಯೆದುವುದು ದ್ರೋಣ ವಿರಚಿತ ಚಕ್ರವ್ಯೂಹ ಕಾಳಗದಲ್ಲಲ್ಲ. ನಾರಾಯಣ ದೇವ ರೂಪಿಸಿದ ಕಡಚಕ್ರ ಕೋಟೆಯ ಕಾಳಗದಲ್ಲಿ.

ಕರ್ಣನು ಅಭಿಮನ್ಯು ಯಾರೆಂದು ತಿಳಿಯದೆ, ಮರೆಯಲ್ಲಿ ನಿಂತು ಅವನನ್ನು ಹೊಡೆದುರುಳಿಸುವುದು, ಆಮೇಲೆ ಆತ ಅಭಿಮನ್ಯುವೆಂದರಿತು ದುಃಖಿಸುವುದು, ಅವನಿಗಾಗಿ ಶುಭ ಕೋರುವುದು, ಶಿಷ್ಟ ಮಹಾಭಾರತದ ಕರ್ಣನಂತೆ ದುಷ್ಟ ಚತುಷ್ಟಯದಲ್ಲಿ ಸೇರ್ಪಡೆಯಾಗದಿರುವುದು ಮುಂತಾದುವೆಲ್ಲ ಈ ಕಾವ್ಯ ಖಂಡದ ವಿಶೇಷಗಳು.

ಅಭಿಮನ್ಯುವಿಗೆ ಮೂವರು ಪತ್ನಿಯರು, ಹಿರಿಯವಳು ಉತ್ತರೆ. ಎರಡನೆಯವಳು ಕನಕಾಂಗಿ ಇವಳನ್ನು ಮಂದುರಿಯೆಂದೂ ಕರೆಯುತ್ತಾರೆ. ಇವಳು ನಾರಾಯಣ ದೇವನ ಮಗಳು. ಅಭಿಮನ್ಯು ಕಾಳಗಕ್ಕೆ ಹೋಗುವಾಗ ಋತುಮತಿಯಾದ ಇವಳನ್ನು ಭೋಗಿಸದೇ ಅಭಿಮನ್ಯು ಸಾವ್ಯೆದುದುವುದು ಘೋರ ದುರಂತ. ಮೂರನೆಯ ಹೆಂಡತಿ ರಸರಾಳಿಯ ಮಗಳು; ಇವಳ ಹೆಸರಿನ ಉಲ್ಲೇಖ ಪಠ್ಯದಲ್ಲಿಲ್ಲ. ಅಭಿಮನ್ಯು ಕಡಚಕ್ರ ಕೋಟೆಯ ಕಾಳಗಕ್ಕೆ ಹೋಗುವಾಗ ಈಕೆ ನೆರೆಯಲ್ಲಿ ಇಲ್ಲ; ಕನ್ನೆಯಾಗಿದ್ದ ಅವಳಿಗೆ ಅಭಿಮನ್ಯು ಅರ್ಧರಾಜ್ಯ ಹಾಗೂ ಅರ್ಧ ಮುತ್ತೈದೆತನವನ್ನು ನೀಡಲು ತಾಕೀತು ಮಾಡಿ, ಅಭಿಮನ್ಯು ಅನುಕಂಪ ವ್ಯಕ್ತಪಡಿಸುತ್ತಾನೆ. ಹಾಡುಗಾರ್ತಿ ಹನ್ಮಿಗೌಡರ ಹೇಳಿಕೆಯ ಪ್ರಕಾರ ಅವಳು ಗಾಮೊಕ್ಕಲ ಜಾತಿಗೆ ಸೇರಿದವಳು. ಆರು ತಿಂಗಳ ತೊಟ್ಟಿಲು ಬಾಲೆಯನ್ನೇ ಅಭಿಮನ್ಯು ಮದುವೆಯಾಗಿದ್ದನಂತೆ. ಆ ಬಾಲೆಗೆ ಅಭಿಮನ್ಯು ನೀಡಿದ ವರಪ್ರಸಾದದ ಮುಂದುವರಿಕೆಯಾಗಿ ಗಾಮೊಕ್ಕಲಲ್ಲಿ ಗರತಿಯರು

ಗಂಡಸತ್ತಾಗ ಮೂಗುತಿಯನ್ನು ಕಳಚದಿರುವ, ತಂದೆಯ ಆಸ್ತಿಯ ಅರ್ಧಪಾಲನ್ನು ಪಡೆಯುವ ಸಂಪ್ರದಾಯ ಬಂದಿದೆಯೆಂದು ಹೇಳಲಾಗುತ್ತದೆ. ಈ ಸಂಪ್ರದಾಯ ಒಕ್ಕಲು ಬುಡಕಟ್ಟಿನವರು ತಮ್ಮನ್ನು ಪಾಂಡವರ ಕುಲದವರೆಂದುಕೊಳ್ಳುವುದನ್ನು ಸಮರ್ಥಿಸುತ್ತದೆ. ಅಭಿಮನ್ಯು ರಸರಾಳಿಯ ಮಗಳಿಗೆ ಅರ್ಧಮುತ್ತೈದೆತನವನ್ನು ಹರಸುವುದು, ಉತ್ತರೆ ಸಹಗಮನಕ್ಕೆ ಬಂದಾಗ ಅವಳನ್ನು ಒದ್ದು ಹಿಂದಕ್ಕೆ ಕಳಿಸುವುದು, ಮೈನೆರೆಯದವರಿಗೆ ಹಾಗೂ ಚಿಕ್ಕ ಮಕ್ಕಳಿದ್ದವರಿಗೆ ಸಹಗಮನ ನಿಷೇಧ ಸೂಚನೆಯ ನಿದರ್ಶನಗಳಾಗಿವೆ.

ವೀರ ಅಭಿಮನ್ಯುವಿನ ಕಥೆ ಜಾನಪದ ಮತ್ತು ಅಭಿಜಾತ ಮಹಾಭಾರತಗಳಲ್ಲಿ ಪ್ರಸಿದ್ಧವಾಗಿದ್ದು, ಎರಡೂ ಸಂಪ್ರದಾಯದ ಕಥಾಶಿಲ್ಪದಲ್ಲಿ ವೈದೃಶ್ಯಗಳಿವೆ. ಅಭಿಮನ್ಯುವಿಗೆ ಸಂಬಂಧಿಸಿದ ಜಾನಪದ ಪರಂಪರೆಯ ವಸ್ತುಗಳು ಸಹ ಏಕರೂಪವಾಗಿಲ್ಲ. ಗುಂಡ್ಮಿ ಚಂದ್ರಶೇಖರ ಐತಾಳರ ಕೌಲಿಯ ಕರೆದ ನೊರೆಹಾಲು, ಸಂಕಲನದ ಸುಭದ್ರೆಯ ಹಾಡಿನಲ್ಲಿ ಅಭಿಮನ್ಯು ಜನ್ಮ ವೃತ್ತಾಂತವಿದೆ. ಡಾ॥ ಎಲ್. ಆರ್. ಹೆಗಡೆಯವರ "ಬೆಳಿಯಮ್ಮನ ಹಾಡಿನಲ್ಲಿ 'ಕನಕಾಂಗಿ ಕಲ್ಯಾಣ'ವಿದೆ. ಬಸವನಗೌಡ ಪಾಟೀಲರ "ತೂಕಮಾಡಿ ಹೇಳತೀನಿ ನ್ಯಾಯ" ಸಂಕಲನದ 'ವೀರ ಅಭಿಮನ್ಯು' ಪದದಲ್ಲಿ, ಅಭಿಮನ್ಯು ಕರ್ಣಾದಿಗಳ ಕುತಂತ್ರದಿಂದ ಮಡಿಯುವ ಪ್ರಸಂಗವಿದೆ. ಸುಶೀಲಾ ಸೊಂಡೂರ್ ಅವರ 'ಸುವ್ವಿ ಸುವ್ವಮ್ಮ ಲಾಲಿ ಸುವ್ವಲಾಲಿ' ಗ್ರಂಥದಲ್ಲಿ ಕನಕಾಂಗಿ ಕಲ್ಯಾಣದ ಕಥೆಯಿದೆ. ಡಾ॥ ಕೃಷ್ಣಮೂರ್ತಿಹನೂರ ಅವರ "ಜನಪದ ವೀರಗೀತೆಗಳು" ಗ್ರಂಥದಲ್ಲಿ ಅಭಿಮನ್ಯು ಮಹದೇವಿ ಎಂಬ ಹೆಣ್ಣಿಗಾಗಿ ಯುದ್ಧಕ್ಕೆ ನಿಂತು ಯುದ್ಧದಲ್ಲಿ ಹತನಾಗುವ ಕಥೆಯಿದೆ. ಆದರೆ ಅಲ್ಲೆಲ್ಲ ಅಭಿಮನ್ಯುವಿನ ಒಟ್ಟು ಬದುಕಿನ ಚಿತ್ರವಿಲ್ಲ. ಆ ಚಿತ್ರ ಇದ್ದದ್ದು ಈ ಸಂಪುಟದಲ್ಲಿ ಮಾತ್ರ.

ಕ. ಕಾಮದೇವನ ಮದುವೆಯ ಹಾಡನ್ನು "ಸತ್ತಪ್ಪನ ಹಾಡು" ಎಂದು ಕರೆದು, ಹಾಡುಗಾರ್ತಿಯರು ಕರ್ಣನ ಹಿರಿಮೆಯ ಭರತವಾಕ್ಯವನ್ನು ನುಡಿಯುತ್ತಾರೆ. ಗಾಮೊಕ್ಕಲ ಮಹಾಭಾರತದ ಕರ್ಣ, ವ್ಯಾಸಭಾರತದ ಕರ್ಣನಂತೆ ಖಳಚತುಷ್ಟಯರ ಲ್ಲೊಬ್ಬನಲ್ಲ. ಈತ ಧರ್ಮಭೀರು, ಒಂದು ಹಂತದಲ್ಲಿ ಈತ ಪಾಂಡವ ಪಕ್ಷಪಾತಿಯೂ ಆಗಿದ್ದಾನೆ. ಗುಣಕ್ಕೆ ಮತ್ಸರಪಡದ ಉದಾರಿ. ಅಭಿಮನ್ಯುವಿನ ಘನತೆಯನ್ನು ಮೆಚ್ಚಿ, 'ಅಭಿಮನ್ಯು ಬಿದ್ದಲ್ಲಿ ಪೇಟೆ ಪಟ್ಟಣವಾಗಲಿ' ಎಂದು ಹರಸಿದ ಮಹಾನುಭಾವ. ಸತ್ತಪ್ಪನ ಹಾಡಿನಲ್ಲಿ ಕರ್ಣನು, ಭೂತ ಹಾಗೂ ವರ್ತಮಾನಕ್ಕೆ ಸೇತುವೆಯಾಗಿ ಬಂದು, ಕಾಮದೇವ ಮತ್ತು ರತ್ನಿಯರ ಭವಿಷ್ಯದ ಕೊಂಡಿಯೂ ಆಗುತ್ತಾನೆ. ಕರ್ಣನ ಮಗಳ ವಾಂಛೆಯನ್ನು ಈಡೇರಿಸಲು ಅರ್ಜುನ ಯಮಲೋಕಕ್ಕೆ ಬಂದು, ಕರ್ಣನ ಹತ್ತಿರ ಮಗಳ ಧಾರೆಯೆರೆದು ಕೊಡಲು ಭೂಲೋಕಕ್ಕೆ ಬರಲು ಆಮಂತ್ರಿಸಿದಾಗ,

ಆತ ಯಮರಾಯನಪ್ಪಣೆಯನ್ನು ಪಡೆದು, ಮಗಳ ಧಾರೆಯೆರೆದು, ತಮ್ಮನ ಕೋರಿಕೆ, ಮಗಳ ಇಚ್ಛೆಯನ್ನು ಪೂರೈಸಿ, ಮತ್ತೆ ಯಮಲೋಕಕ್ಕೆ ಹಿಂದಿರುಗಿದ ಧೀರ. "ದಾಯಾದಿ ಕಲಹವು ತನ್ನ ಬೆನ್ನ ಹಿಂದೆಯೇ ಮಾಯವಾಗಲಿ" ಎಂದು ಹಾರೈಸಿ, ದಾಯಾದಿ ದ್ವೇಷದ ಜ್ವಾಲೆ ಮತ್ತೆ ಪ್ರಜ್ವಲಿಸದಂತೆ ಕಾಳಜಿ ವಹಿಸಿದ ಸಾತ್ವಿಕ. ಪಂಪನ ಭಾರತ, ಕರ್ಣರಸಾಯನವಾದಂತೆ ಗಾಮೊಕ್ಕಲ ಮಹಾಭಾರತವೂ ಕರ್ಣರಸಾಯನ ; ಕರ್ಣನ ಸಾತ್ವಿಕ ತೇಜವಿಲ್ಲಿ ರಂಗುಪಡೆದಿದೆ.

ಸಾವಿತ್ರಿಯ ಕಥೆ ಮಹಾಭಾರತದ ಅರಣ್ಯಪರ್ವದಲ್ಲಿ ಉಕ್ತವಾಗಿದೆ. ಈ ಗಾಮೊಕ್ಕಲ ಮಹಾಭಾರತ ಸಂಪುಟದಲ್ಲಿ ಸಾವಿತ್ರಿ ಸತ್ಯವಾನರ ಬದುಕಿನ ಉತ್ತರ ಭಾಗದ ಕಥೆ ಮಾತ್ರ ಜಾನಪದ ಮನೋಧರ್ಮಕ್ಕನುಗುಣವಾಗಿ ಕೆಲವು ಹೊಸ ಜಾನಪದ ಆಶಯಗಳ ಬೆರಕೆಯೊಂದಿಗೆ ನಿರೂಪಿತವಾಗಿದೆ. ಸಾವಿತ್ರಿಯ ಪತಿ ಪ್ರೇಮ, ಅತ್ತೆ ಮಾವಂದಿರಲ್ಲಿಯ ನಿಷ್ಠೆಯ ಜೊತೆಗೆ ಅವಳ ದಿಟ್ಟತನವೂ ವ್ಯಕ್ತವಾಗಿದೆ. ಆದರೆ ಸಾವಿತ್ರಿಯ ದಿಟ್ಟತನವನ್ನು ಹೊರಗೆಡಹುವ, ಅವಳು ಯಮರಾಯನ ಮಡದಿಯರ ಮುಂದೆ ಕೊಡುವ ಉತ್ತರವಾಗಲಿ, ಅವಳ ಭೂತಾನುಕಂಪೆಯನ್ನು ಪ್ರಕಟಿಸುವ, ಯಮರಾಯನ ಕುಂಡದಲ್ಲಿಯ ಪಾಪಿಗಳನ್ನು ಬದುಕಿಸುವ ಘಟನೆಯಾಗಲಿ ಅಭಿಜಾತ ಭಾರತದಲ್ಲಿಲ್ಲ. ಈ ಹೊಸ ಬದಲಾವಣೆಗಳು ಸಾವಿತ್ರಿ ಇಲ್ಲವೆ ಯಮನ ಘನತೆಯನ್ನು ಪೋಷಿಸುವ ಘಟನೆಗಳಾಗಿ ಬರುವುದಿಲ್ಲ. ಯಮನ ಕುಂಡದ ಪಾಪಿಗಳ ಮೇಲೆ ಕರುಣೆಯನ್ನು ತೋರಿಸಲು ಹೊರಟ ಸಾವಿತ್ರಿ, ತನ್ನ ಮೂಲ ಉದ್ದೇಶವನ್ನು ಮರೆತು, ತನ್ನ ಪತಿಯನ್ನು ಬದುಕಿಸುವಲ್ಲಿ ವಿಲಂಬಿಸುವುದು ವಿಚಿತ್ರವೆನಿಸುತ್ತದೆ. ಯಮರಾಯನ ಕಣ್ತಪ್ಪಿಸಿ ಅಮೃತವನ್ನು ಗಂಡನಿಗಾಗಿ ಸೆಳ್ಳುಗುರಿನಲ್ಲಿ ಕದ್ದಿಟ್ಟುಕೊಳ್ಳುವುದು ಸಾವಿತ್ರಿಯ ಹಿರಿತನಕ್ಕೆ ಶೋಭಿಸುವುದಿಲ್ಲ; ಅದೇ ರೀತಿ ಯಮರಾಯ ಸಾವಿತ್ರಿಗೆ ಕೊಟ್ಟ ಅಮೃತ ಗಿಂಡಿಯನ್ನು ಕಸಿದು, ಪುನಃ ತನ್ನಲ್ಲಿಟ್ಟುಕೊಳ್ಳುವುದೂ ಸಹ. ಇಲ್ಲೆಲ್ಲ ಉದಾರತೆ ಮಸ ಮಸಕಾಗಿದೆ. ಒಟ್ಟಿನಲ್ಲಿ ಹಾಡಿನ ಮಾರ್ಪಾಡು ಸಾವಿತ್ರಿ ಹಾಗೂ ಯಮರಾಯರ ವ್ಯಕ್ತಿತ್ವಕ್ಕೆ ಎಳೆದ ಕರಿಗೆರೆಗಳೆಂದೇ ಹೇಳಬೇಕು.

ಈ ಸಂಪುಟದಲ್ಲಿ ನಿರೂಪಿತವಾದ ಪ್ರತಿಯೊಂದು ಕಾವ್ಯ ಖಂಡವೂ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿದ್ದು, ವ್ಯಾಸಭಾರತದಿಂದ ಭಿನ್ನವಾದ ಯಾವುದೋ ಜಾನಪದ ಮಹಾಭಾರತದಿಂದ ಪ್ರೇರಣೆ, ಪೋಷಣೆಯನ್ನು ಪಡೆದಂತೆ ಕಾಣುತ್ತದೆ. ಯಾಕೆಂದರೆ ಇಲ್ಲಿಯ ಕಥಾವಸ್ತುವನ್ನು ಗಾಮೊಕ್ಕಲು ತಮಗಿಷ್ಟವಾದ ಯಾವುದೋ ಭಾರತ ಕಥೆಯ ಸನ್ನಿವೇಶ ಸಂದರ್ಭವನ್ನೆತ್ತಿಕೊಂಡು, ತಮ್ಮ ಮನೋಧರ್ಮಕ್ಕೆ, ಲೋಕ ದೃಷ್ಟಿಗೆ ಹೊಂದುವಂತೆ ಅದರಲ್ಲಿ ಹೊಸ ಹೊಸ ಆಶಯಗಳನ್ನು ಮೇಳೈಸಿ, ತಮ್ಮಲ್ಲಿ ಪ್ರಚಲಿತವಿರುವ ಜನಪ್ರಿಯ ರೂಢಿ, ನಂಬಿಕೆ ಸಂಪ್ರದಾಯಗಳನ್ನು ತುರುಕಿ, ಜನಸಾಮಾನ್ಯರ ಮುಷ್ಟಿಗ್ರಾಹ್ಯವಾಗುವ ರೀತಿಯಲ್ಲಿ,

ಸಮಷ್ಟಿ ಸಂಸ್ಕೃತಿಗೆ ಒಗ್ಗುವ ಹಾಗೆ ತಿದ್ದಿ ಮಾರ್ಪಡಿಸಿಕೊಂಡು ಪ್ರತ್ಯೇಕ ಕಾವ್ಯ ಖಂಡಗಳನ್ನು ರಚಿಸಿಕೊಂಡು ಹಾಡಿದಂತಿದೆ. ಹೀಗಾಗಿ ಇಲ್ಲಿಯ ಪ್ರತಿಯೊಂದು ಕಾವ್ಯ ಖಂಡವೂ ತನ್ನಷ್ಟಕ್ಕೆ ತಾನು ಪ್ರತ್ಯೇಕವಾಗಿದ್ದು, ಇನ್ನೊಂದು ಕಾವ್ಯ ಖಂಡಕ್ಕೆ ಕೊಂಡಿ ಬೆಸೆಯುವುದಿಲ್ಲ. ಸಾವಯವ ಸಂಬಂಧವುಳ್ಳ, ಮಹಾಭಾರತ ಕಥೆಯಂತೆ ತನ್ನ ಅಖಂಡತೆಯನ್ನು, ಸಮಗ್ರತೆಯನ್ನು ಕಾಪಾಡಿಕೊಳ್ಳುವುದಿಲ್ಲ. ಇವೆಲ್ಲ ಖಂಡ ಕಾವ್ಯಗಳ ಪುಂಜ. ಈ ಖಂಡ ಕಾವ್ಯ ಪುಂಜ ಮುಂದೊಂದು ದಿನ ಒಬ್ಬ ಪ್ರತಿಭಾವಂತನ ಪ್ರತಿಭೆಯ ಪನ್ನೀರಿನಲ್ಲಿ ಮುಳುಗೆದ್ದು ಮಹಾಕಾವ್ಯವಾಗಿ ಪರಿಮಳಿಸಬೇಕು ಅಷ್ಟೆ.

ಇಲ್ಲಿ ರೂಪುಗೊಂಡ ಪಾತ್ರಗಳ ಗುಣ ಸ್ವಭಾವಾದಿಗಳೂ ಸಹ ಮಹಾಭಾರತದ ಪಾತ್ರಗಳ ಗುಣಸ್ವಭಾವದಿಂದ ಬೇರೆ ಸ್ವರೂಪದವು. ವ್ಯಾಸ ಮಹಾಭಾರತದಲ್ಲಿ 'ಪಾಂಡವರು ತನ್ನ ಪ್ರಾಣ'ವೆಂದು ತಿಳಿದುಕೊಂಡ ಶ್ರೀಕೃಷ್ಣ, ಇಲ್ಲಿ ನಾರಾಯಣ ದೇವನಾಗಿ ಕಾಣಿಸಿಕೊಂಡು, ಬಹುತೇಕ ಪಾಂಡವ ದ್ವೇಷಿಯಾಗಿ ನಿಲ್ಲುತ್ತಾನೆ. ಕೌರವರ ಪಕ್ಷಪಾತಿಯೂ, ದುರ್ಯೋಧನನ ದುಷ್ಟಕೂಟದ ಅಗ್ರೇಸರನೂ ಆದ ಕರ್ಣನು ಇಲ್ಲಿ ಪಾಂಡವ ಪಕ್ಷಪಾತಿಯೂ ಸಾತ್ವಿಕನೂ, ಸತೀಧರ್ಮರಕ್ಷಕನೂ, ಧರ್ಮಭೀರುವೂ ಕರುಣಾಮಯಿಯೂ ಆಗಿ ನಮ್ಮ ಮನ ಸೆಳೆಯುತ್ತಾನೆ. ಬಹುಶಃ, "ಕರ್ಣರಸಾಯನಮಲ್ತೆ ಭಾರತಂ" ಎಂದೊರೆದ ಆದಿಕವಿ ಪಂಪನಿಗೂ ಜಾನಪದ ಪರಂಪರೆಯ ಮಹಾಭಾರತ ಕತೆಯೇ ಪ್ರೇರಣೆ ನೀಡಿರಲೂಬಹುದು.

ಮಹಾಭಾರತದ ಅನೇಕ ಪಾತ್ರಗಳು ಜಾನಪದರ ನಾಲಿಗೆಗೆ ಸರಿಯಾಗಿ ಅಳವಡದೆ, ಅಭಿಮನ್ಯು – ಅಗಮಂಜು, ಅಭಿಮಾನ ಎಂದೂ, ಅರ್ಜುನ– ಅರ್ಜಿಣ್ಣ, ಅರಜೀಣ, ಅರಜೂಣ ಎಂದೂ, ದ್ರೌಪದಿ–ರೋಪತಿ, ರೂಪತಿ ಎಂದೂ, ಸುಭದ್ರೆ–ಸೂಬದ್ರಿ ಎಂದೂ, ಭಾನುಮತಿ–ಬೊನ್ನತಿಯೆಂದೂ, ದುಶ್ಯಾಸನ–ದುಸುವಯ್ಯನೆಂದೂ, ಕೀಚಕ–ಗೀಜಗನೆಂದೂ ರೂಪಾಂತರ ಹೊಂದಿದ್ದನ್ನು ನೋಡಬಹುದು. ಕೆಲವೆಡೆ ಒಬ್ಬರ ಹೆಸರನ್ನು ಇನ್ನೊಬ್ಬರಿಗೆ ವರ್ಗಾಯಿಸಲಾಗಿದೆ. ಭಾನುಮತಿ (ಬೊನ್ನತಿ) ವಿರಾಟರಾಯನ ಹೆಂಡತಿಯಾಗಿ ಮಾದೇವಿ ಲಕ್ಕಣನ ಹೆಂಡತಿಯಾಗಿ ಕಾಣಿಸಿ ಕೊಂಡಿದ್ದಾಳೆ. ಸಾಮಾನ್ಯವಾಗಿ ಹಾಡುಗಾರ್ತಿಯರು ಪಾತ್ರಗಳ ಹೆಸರಿನ ಕಡೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸದೆ, ಕಥಾವಸ್ತುವಿನೆಡೆ ನೋಡಿದಂತಿದೆ. ಅಭಿಜಾತ ಮಹಾಭಾರತದಲ್ಲಿ ಇಂಥ ಪ್ರಮಾದಗಳು ಘಟಿಸಲು ಸಾಧ್ಯವೇ ಇಲ್ಲ.

ವೀರ ರಸದ ಮಡುವಾದ ಮಹಾಭಾರತದ ವೀರರ ಉತ್ಸಾಹ ಗಾಮೊಕ್ಕಲ ಮಹಾಭಾರತ ಸಂಪುಟದಲ್ಲಿ ಕಡಿಮೆ. ಇಲ್ಲಿ ಭೀಕರ ಯುದ್ಧಗಳ ಸರಮಾಲೆಯಿಲ್ಲ,

ಇಲ್ಲಿ ಅದೇನಿದ್ದರೂ ಕಲ್ಯಾಣಗಳ ರಂಗ ಮಂಟಪಗಳು. ಕಲ್ಯಾಣ ಪ್ರಸಂಗಗಳಲ್ಲಿ ಕೊಂಚಮಟ್ಟಿಗೆ ಘರ್ಷಣೆಗಳಿದ್ದರೂ, ಅಲ್ಲಿ ವೀರಾಳುಗಳ ಕೋಪಾಟೋಪ ಪ್ರದರ್ಶನಗಳು ಕಡಿಮೆ. ಮಹಾಭಾರತ ಯುದ್ಧದ ರುದ್ರಭೀಷಣವಾದ ನೋವು ನರಳುವಿಕೆಗಳ ಎದೆ ಬಿರಿಯುವ ರೋದನ ಸನ್ನಿವೇಶಗಳಿಲ್ಲ. ಮುಖಾಮುಖಿ ಎದುರಿಸಿ ಹೋರಾಡುವ ನಾಯಕಮಣಿಗಳ ಖಡ್ಗಾಖಡ್ಗಿಯಾಗಲಿ, ಮುಷ್ಟಾಮುಷ್ಟಿ ಯಾಗಲಿ, ರಥ ಚಕ್ರಗಳ ಚೀತ್ಕಾರವಾಗಲಿ ಇಲ್ಲವೇ ಇಲ್ಲ. ಇಲ್ಲಿ ಏನಿದ್ದರೂ ಕೌಟುಂಬಿಕ ಜೀವನದ ಮಾನವ ಸಹಜವಾದ ರಸ – ವಿರಸಗಳ ತುಮುಲ, ಆದರೆ ಆ ತುಮುಲದಲ್ಲಿ ರಕ್ತಪಾತಕ್ಕೆ ಅವಕಾಶ ಕಡಿಮೆ. ಗಾಮೊಕ್ಕಲ ಮಹಾಭಾರತದಲ್ಲಿ ವೇದ ವೇದಾಂತಗಳ ಒಜ್ಜೆಯಿಲ್ಲ. ಇಲ್ಲಿ ಕಾಣುವುದು ಜಾನಪದ ಲೋಕದ ರೀತಿ ನೀತಿಗಳ ರೂಢಿ ಸಂಪ್ರದಾಯಗಳ ಆಡು ಕಳವನ್ನು.

ಒಕ್ಕಲು ಬುಡಕಟ್ಟಿನವರು ಹಿತ್ತಿಲಲ್ಲಿ ಬೆಳೆಯುವ ಬಸಲೆ, ತೊಂಡೆ, ಹೀರೆ, ಹಾಗಿಲ, ಕಾನಲ್ಲಿ ಕಲ್ಲೊಡೆದು ಬೆಳೆಯುವ ಕಳಲೆ, ಅವರ ಬದುಕಿಗೆ ಆಸರೆಯಾಗಿರುವ ತೆಂಗು, ಅಡಿಕೆ, ಬಾಳೆಯ ಬನಗಳು, ಊಟಕ್ಕೆ ಬಳಸುವ ಸಣ್ಣಕ್ಕಿ, ಹಳ್ಳಗನ ಅಕ್ಕಿಗಳು ತಿನ್ನುವ ತಿಂಡಿ ತಿನಿಸುಗಳು, ಉಡುವ ಉಡುಗೆ ತೊಡುಗೆಗಳು, ಆಡುವ ಆಟಗಳು, ವಿವಾಹಾದಿ ಮಂಗಲ ಕಾರ್ಯಗಳು, ನಿತ್ಯ ಜೀವನದ ರೀತಿ ನೀತಿಗಳು ಮುಂತಾದುವೆಲ್ಲ ಮೇಲಿಂದ ಮೇಲೆ ಬಂದು ಗಾಮೊಕ್ಕಲ ಬುಡಕಟ್ಟು ಸಂಸ್ಕೃತಿಯ ಗಂಧದ ಗಿಟಕವನ್ನು ತೆರೆದಂತಾಗುತ್ತದೆ; ಕಥಾಶಿಲ್ಪ ಬುಡಕಟ್ಟು ಸಂಸ್ಕೃತಿಯ ಸುಗಂಧ ಲೇಪನದಿಂದ ಹೊಸರಂಗು ಪಡೆಯುತ್ತದೆ. ಇಲ್ಲಿಯ ಕಾವ್ಯ ಖಂಡಗಳಲ್ಲಿ ಬರುವ ಹಲವಾರು ವರ್ಣನೆಗಳು ತಮ್ಮ ಚಿತ್ರಕ ಶಕ್ತಿಯಿಂದ ಆಪ್ಯಾಯಮಾನವಾಗಿದ್ದು, ಆಯಾ ಸನ್ನಿವೇಶಗಳ ಪೂರ್ಣಚಿತ್ರವನ್ನು ಸೆರೆಹಿಡಿಯುವಲ್ಲಿ ಸಾಫಲ್ಯ ಪಡೆಯುತ್ತವೆ. ಕೆಲವು ಜನಪ್ರಿಯ ಆಚರಣೆ, ಸಂಪ್ರದಾಯಗಳನ್ನು ಮೇಲಿಂದ ಮೇಲೆ ಪುನರಾವರ್ತನಗೊಳಿಸಿ, ಆಯಾ ಸಂಪ್ರದಾಯ ನಶಿಸಿ ಹೋಗದಂತೆ ಕಾವ್ಯದಲ್ಲಿ ಮುತುವರ್ಜಿವಹಿಸಿದ್ದು ಗೋಚರಿಸುತ್ತದೆ. ಈ ಪುನರಾವರ್ತನೆ, ವರ್ತಮಾನದಲ್ಲಿ ನಮಗೆ ಕಿರಿಕಿರಿಯೆನಿಸಿದರೂ, ಎಲ್ಲವೂ ತೋಂಡಿಯಾಗಿ ನಡೆಯುವ ಕಾಲಕ್ಕೆ ಈ ಸಂಪ್ರದಾಯಗಳನ್ನು ತಮ್ಮ ಸ್ಮೃತಿಯ ಒಂದಂಗವಾಗಿಸಲು ಅವರಿಗೆ ಈ ಬಗೆಯ ಪುನರಾವರ್ತನೆ ಅನಿವಾರ್ಯವೂ ಆಗಿತ್ತು.

ಸುಹಾಸ
ಹೊನ್ನಾವರ
ದಿನಾಂಕ ೧೪.೨.೨೦೦೭ **ಡಾ॥ ಎನ್.ಆರ್. ನಾಯಕ**

ಪರಿವಿಡಿ

		ನಿರೂಪಕರು	
೧.	ಪ್ರಾರ್ಥನೆ	ಹನ್ನಿಕ್ಷೇತ್ರಗೌಡ	೧
೨.	ನಾರಾಯಣ ದೇವನ ಮದುವೆ	ಹನ್ನಿಕ್ಷೇತ್ರಗೌಡ	೫
೩.	ರುಗುಮಿಣಿ (ರುಕ್ಮಿಣಿ)	ಈರಮ್ಮಾ ಗೌಡ	೪೦
೪.	ಅರ್ಜುನ	ಈರಮ್ಮಾ ಗೌಡ	೪೫
೫.	ಸುಭದ್ರೆ (ಸೂಭದ್ರಿ)	ಕುಪ್ಪಿ (ಸುಬ್ಬಿ) ಬೆಳಿಯಾಗೌಡ	೫೪
೬.	ಲಕ್ಮಣ	ಕುಪ್ಪಿ (ಸುಬ್ಬಿ) ಬೆಳಿಯಾಗೌಡ	೧೦೦
೭.	ಕುಸುಮಾಲಿ	ಬೆಳಿಯಮ್ಮ ಸುಬ್ಬಯ್ಯ ಪಟಕಾರ	೧೨೯
೮.	ನಾಲ್ವರು ಹೆಂಡಿರು (ದ್ರೌಪತಿ)	ಕನ್ನೆಗೌಡ	೧೫೧
೯.	ಧರ್ಮರು	ಕುಪ್ಪಿ (ಸುಬ್ಬಿ) ಬೆಳಿಯಾಗೌಡ	೧೬೨
೧೦.	ಗಿಜಗ (ಕೀಚಕ)	ಕುಪ್ಪಿ (ಸುಬ್ಬಿ) ಬೆಳಿಯಾಗೌಡ	೨೧೭
೧೧.	ಅತ್ತಗ್ ಮೈದ್ನಿ	ಹನ್ನಿಕ್ಷೇತ್ರ ಗೌಡ	೨೨೭
೧೨.	ಸೇಣಸೂಭದ್ರೆ	ಲಕ್ಷ್ಮಿ ಗೌಡ	೨೪೯
೧೩.	ಕನಕಾಂಗಿ ಕಲ್ಯಾಣ	ಹನ್ಮಿಕೇತ್ರ ಗೌಡ	೨೫೬
೧೪.	ಅಗಮಂಜು	ಗೌರಿ ತಿಮ್ಮಪ್ಪ ಗೌಡ	೨೭೨
೧೫.	ಅಭಿಮನ್ಯು	ಹನ್ನಿಕ್ಷೇತ್ರ ಗೌಡ	೩೦೨
೧೬.	ಸತ್ತಪ್ಪ (ಕಾಮದೇವ)	ಈರಮ್ಮಾಗೌಡ	೩೫೫
೧೭.	ಸಾವಿತ್ರಿ	ಕನ್ನೆಗೌಡ	೩೭೨
೧೮.	ಕಾವ್ಯಫಲ	ಹನ್ನಿಕ್ಷೇತ್ರಗೌಡ	೩೮೪
೧೯.	ಶಬ್ದಾರ್ಥಕೋಶ		೩೮೬

ಪ್ರಾರ್ಥನೆ

ಕೇಸಕ್ಕಿ[೧] ಕೆಂಗಳ[೨] ರಾಸೀಗೂಡಿದ ಬೆಲ್ಲಾ
ಉದ್ದೂ ಉಂಡಲಿಯಾ ಹುರೋಽ ಗಡಲೆ
ಉದ್ದು ಉಂಡಲಿಯಾ ಹುರಗಡಲೆ ಒಳದುಂಬಿ
ಮತಿಯಕ್ಕನ ಬಳಿಗೆ ಕಳಽಗುವ್ವೋ
ಮತಿಯಕ್ಕನ ಬಳಿಗೆ ಏನಂದೀ ಕಳಗೂವ್ವೋ
ಹಾಡೀಗೆ ಮತಿಯಾ ಕೊಡಽಬೇಕೇ
ಹಾಡಗ್ ಮತಿ ಕೊಡುಕೇ ನಾನೊಬ್ಬಳಲ್ಲಾವೇ
ನನ್ನಮ್ಮ ದೇವಿ ಸರಸಾಽಪತಿಯೇ
ನನ್ನಮ್ಮ ದೇವಿ ಸರಸ್ವತಿ ಬಲಗೊಂಡರೆ
ಹಾಡಿಗೇ ಮತಿಯಾ ಕೊಡಽವಾಳೆ ।
ಹಾಡಗ್ ಮತಿ ಕೊಡುಕೇ ನಾನೊಬ್ಬಳಲ್ಲಾವೇ
ನನ್ನಕ್ಕ ದೇವಿ ಸರಸಾಽಪತಿಯೇ
ನನ್ನಕ್ಕದೇವಿ ಸರಸ್ವತಿ ಬಲಗೊಂಡರೆ
ಓದಿಗೇ ಮತಿಯಾ ಕೊಡವಾಳೆ
ಎಲ್ಲರೊಚನಕೇ ನಿಲ್ಲಾಳೇ ಸರಸ್ವತೇ
ನೆಲ್ಲೀ[೩] ಕದರಂತೆ[೪] ಬಳಽಕೀತೆ
ನೆಲ್ಲೀ ಕದರಂತೆ ಬಳಕೀತೇ ಬಾಡೀತ
ಬಾ ನಮ್ಮಾ ಬಾಯಾ ವಚಽನಕೇ ।
ಎಲ್ಲರೊಚನಕು ಬಾರಾಳೇ ಸರಸ್ವತೇ
ತೆನಿಯಾ ಕದರಂತೆ ಬಳಽಕೀತೇ
ತೆನಿಯಾ ಕದರಂತೆ ಬಳಕೀತ ಬಾಡೀತ
ಬಾ ನಮ್ಮಾ ಬಾಯಾ ವಚಽನಕೇ ।
ಬರುವರ ಬತ್ತಿರಲಿ ಬದ್ರ್ಯೋರೇಣೀಮ್ಯನೆ
ಮುದ್ದುಳ್ ಪಾರ್ವತಿಯಾ ಬಲನಾ ತೋಳೀಲಿರುವಾ
ಬದ್ರೇ ಕೊಡೆ ನಮಗೆ ಮತೀಽ ಹಾಡೇ ।
ಶಂಬು ಶಂಕರಗು ಎಂಬತ್ತು ಬಾಗಲಗು

---

೧. ಕೆಂಪಕ್ಕಿ   ೨. ಕೆಂಪಗೆ   ೩. ನೆಲ್ಲು, ಬತ್ತ   ೪. ತೆನಿಯಂತೆ

ತುಂಬೀ ಮಲ್ಲಗಿಯಾ ಹರಽಗೂವೊ ।
ತುಂಬೀ ಮಲ್ಲಗಿಯಾ ಹರಗೂವೊ ನಮಗೊಳ್ಳಾ
ತುಂಬಿದ್ದ ಪದನಾ[೫] ಬರಽಬೇಕೇ ।
ಶಂಬು ಶಂಕರನು ಅರವತ್ತು ಬಾಗಲಗು
ಅರಗಿ ಕ್ಯೆದಗಿಯಾ ಹರಗೂವೊ । ನಮಗೊಳ್ಳಾ
ಲೇಸಾದ ಪದನಾ ಬರಽಬೇಕೇ ।
ಅಜ್ಜಾ ಅಜ್ಜೀ ಪಾದ ಮತ್ತೆ ಗುರುವಿನ ಪಾದ
ಪಡದಮ್ಮಾ ನಿನ್ನಾ ಸಿರೀಽಪಾದ ।
ಪಡದಮ್ಮಾ ನಿನ್ನಾ ಶ್ರೀ ಪಾದಕೆ ಶರಣೆಂಬೆ
ತೊಡಗೂವೊ ಕಲತಾ ಪದಽನಾವೇ ।
ಅತ್ತೆ ಮಾವನ ಪಾದ ಮತ್ತೆ ಗುರುವಿನ ಪಾದ
ಹೆತ್ತಮ್ಮ ನಿನ್ನಾ ಸಿರೀಪಾದ ।
ಹೆತ್ತಮ್ಮಾ ನಿನ್ನಾ ಶ್ರೀ ಪಾದಕೆ ಶರಣೆಂಬೆ
ಹೇಳೂವೋ ಕಲತಾ ಪದಽನಾವೇ ।
ಅಜ್ಜಾ ಅಜ್ಜೀಗು ಅಬ್ಬಲಗಿ[೬] ಹೂಂಗೀಗು
ಇದ್ದೀ ಬುದ್ದೀ ಕೊಡುವಾ ಗುರಽವೀಗೆ ।
ಇದ್ದಿ ಬುದ್ದಿ ಕೊಡು ಗುರುವಿನ ಸಿರಿಪಾದಕೆ
ಶರಣಂದೆ ಹಾಡಾ ತೊಡಽಗೂವೊ ।
ಅಲ್ಲೂರಿಲ್ಲೂರು ಬಿಲ್ಲೂರು ಗ್ವೊಕರ್ಣ
ಅಲ್ಲಿರುವರು ನಮ್ಮಾ ಹೆರಿಽಯೋರೆ
ಅಲ್ಲಿರುವರು ನಮ್ಮಾ ಹೆರಿಯೋರ ಶ್ರೀ ಪಾದಕೆ
ಶರಣೆಂದೆ ಹಾಡಾ ತೊಡಽಗೂವೊ ।
ಅಂಬರ ಮ್ಯೆನೀನ ಲಿಂಬೀ ಹಣ್ಣೇ ಬಾರೇ
ರಂಬ್ಯೋರಂಜಿಸುವಾ ಗಿಳೀ ಬಾರೇ
ರಂಬ್ಯೋರಂಜಿಸುವಾ ಗಿಳಿ ಬಾರೆ ಸುರಮಂಡಲದ
ಎಳದುಂಬೇ ದೆನಿಯಾ ಸೆಳದೇಽತಾರೇ ।
ಆಕಾಸ ಮ್ಯೆನೀನಾ ಈಳಿಹಣ್ಣೇ ಬಾರೇ
ನಾರ್‍ಯೋರಂಜಿಸುವಾ ಗಿಳೀ ಬಾರೇ ।
ಮೊವೆಣ್ಣೆ[೭] ದೆನಿಯಾ ಸೆಳದೇಽತಾರೇ ।
ಮಾಳುಗಿ ಒಳಗಿರುವಾ ಹಾರ್‍ವರ ಮಗಳೇ ಬಾರೇ
ಹೇಳಗಿ[೮] ಒಳಗಿರುವಾ ಅರಳೇ ಬಾರೇ ।
ಹೇಳಗಿ ಒಳಗಿರುವಾ ಅರಳ್‌ಬಾರೇ ಅತ್ತಗದೀರೆ

---

೫. ಹಾಡು ೬. ಕನಕಾಂಬರ ೭. ಮೋಹಕ ಹೆಣ್ಣೇ ೮. ಬುಟ್ಟಿ

ನೀವ್ ಬನ್ನಿ ನನ್ನಾ ಒಡಽನಲ್ಲೆ ।
ನೀವ್ ಬನ್ನಿ ನನ್ನಾ ಒಡನಲ್ಲಿ ನಾವೇಳಿದ
ಸ್ವೊಬನದಾ ದೆನಿಯಾ ಸೆಳದೇ ತಾರೇ ।
ಸ್ವೊಬನದ ದೆನಿನಾ ಸೆಳತಾರೇ ನಾರೀಯೋರೆ
ಕೇಳೀರಿ ನಿಮ್ಮಾ ಕೆಮೀದುಂಬೇ ।
ಅಟ್ಟದ ಮ್ಯೆನಿರುವಾ ಬಟ್ಟರ ಮಗಳೇ ಬಾರೇ
ಪೆಟ್ಟಿಗಿ ಒಳಗಿರುವಾ ಅರಳೇ ಬಾರೇ ।
ಪೆಟ್ಟಿಗಿ ಒಳಗಿರುವಾ ಅರಳ್ ಬಾರೇ ತಂಗೀದೀರೆ
ನೀವ್ ಬನ್ನಿ ನನ್ನಾ ಒಡಽನಲ್ಲೆ ।
ನೀವ್ ಬನ್ನಿ ನನ್ನಾ ಒಡನಲ್ಲಿ ನಾವ್ ಹೇಳೀದಾ
ಸ್ವೊಬನದಾ ದೆನಿಯಾ ಸೆಳದೇ ತಾರೇ
ಹಾಡ ಹೇಳ್ವರ್ ಬನ್ನಿ ಜೋಡಿ ಹಲಗೀ ಮ್ಯೆನೆ
ಕೇಳೂವರ್ ಬನ್ನಿ ಒಡಽನಲ್ಲೇ ।
ಕೇಳುವರ್ ಬನ್ನಿ ಒಡನಲ್ಲಿ ನನಕಯ್ಯನ
ಮಾಭಾರತವ ಒದಗೇಳೇ ।
ಮಾಭಾರತವ ಒದಗೇಳಿ ನಾರೀಯೋರೆ ।
ಕೇಳೀತೆ[೧೧] ಕೆಲಸಾ ಗೆಯೀಽಬೇಕೇ[೧೨] ।
ಹಾಡ ಹೇಳ್ವೊ ಅಂದ್ರೆ ಸಿರಿದೆನಿ ತರುವರಿಲ್ಲ
ಗ್ವೊವೀಗಿಂದಿತ್ತೇ ಗೆಳೀಽಯೋರೆ ।
ಗ್ವೊವೀಗಿಂದಿತ್ತೇ ಗೆಳಿಯೋರಿಲ್ಲಾ ತಂಗಿ
ಹಾಡೇಳು ಅಂಬಾ ಬಗೀಯೇನೆ ।
ಹಾಡ ಕಲತಮ್ಯೆನೆ ಹೇಳದಿದ್ದರೆ ದೋಸ
ಹಾಡನ ಕಯ್ಯಲಗೇ ನುಗಲಾ ಸೂತ್ರ
ಹಾಡನ ಕಯ್ಯಲಗೇ ನುಗಲ್ ಸೂತ್ರ ತಡಕಂಡೇ
ಹಗಲವೇ[೧೩] ಇರುಳು ಬೆಳಽತಂಕ ನಾರೀಯೋರೆ ।
ಕೇಳೀತೇ ಕೆಲಸಾ ಗೇಯೀಽಬೇಕೆ ।
ಉದ್ದನ ಕಾಳ್ನಂತೆ ಉದ್ದವೇ ನನ್ಹಾಡು
ಉದ್ದನ ಕಾಳೆಯ್ಡು ಅರಽಕೊಡೆ ।
ಉದ್ದನ ಕಾಳೆಯ್ಡು ಅರಕೊಡೆ ತಂಗವ್ವ
ಉದ್ದಾಡನೇಳೀ ಮುಗೀಽಸೂವೆ ।
ರಾಗೀ ಕಾಳ್ನಂತೇ ರಾಗಾವೇ ನನ್ಹಾಡು
ರಾಗೀ ಕಾಳೆಯ್ಡು ಅರಽಗೊಡೆ ।

---

೯. ಶುಭದ ೧೦. ಕಿವಿ ೧೧. ಕೇಳುತ್ತ ೧೨. ಮಾಡಬೇಕು ೧೩. ಹಗಲು

ರಾಗಿ ಕಾಳೆಯ್ದು ಅರಕೊಡೆ ನಾವಿನ್ನು
ರಾಗಾದಿಂದ್ಹಾಡ ತೊಡಗೂವೊ ।
ಹಾಡ ಕಲತರ್ಗೆ ಹೇಳ್ವೆನೆಂಬೂ ಗಮನ
ಕೇಳ್ವೆನಂಬರಗೆ ಅಲಸೂಗೆ ।[೧೪]
ಕೇಳ್ವೆನಂಬರಗೆ ಅಲಸೂಗೆ ಬಾಲರೆ
ಕಟಕಟಿ ಮಾತೆಲ್ಲ ಕಡುಗಿರಸಿ ।
ಕಟಕಟಿ ಮಾತೆಲ್ಲ ಕಡಗಿರಿಸಿ ನಾವಿನ್ನು
ಉದ್ಹಾಡ ನೇಳಿ ಮುಗೀಽಸೂವೆ ।
ಹಾಡ್ಹೇಳು ಅಂದರೆ ನಾಯೇನ ಹೇಳೂನೆ
ಆಯುಳ್ಳ[೧೫] ಹಣ್ಣಡಕೆ ಬೆಳೀಯೆಲೆ ।
ಆಯುಳ್ಳ ಹಣ್ಣಡಕೆ ಬೆಳಿಯೆಲೆ ಕೊಟ್ಟರೆ
ಹಾಡ್ಹೇಳುವೆ ಇರುಳು ಬೆಳಽತಂಕೆ ।
ಕಣ್ಣಕೂರದರೆ[೧೬] ತಣ್ಣೀರ ತೊಳಕೊಳ್ಳಿ
ಸೆಣ್ಣೋಳು ನಾನು ಹಸೀಯೋಳೆ
ಸೆಣ್ಣೋಳು ನಾನು ಹಸಿಯೋಳ್ ಹೇಳಿದ ಹಾಡ
ಚೆನ್ನಾಗಿ ಕೇಳಿ ಜನಽರೆಲ್ಲ ।
ಚೆನ್ನಾಗಿ ಕೇಳಿ ಜನರೆಲ್ಲ ನಾರಿಯೋರೆ
ಕೇಳೀತೆ ಕೆಲಸ ಗೇಯೀಬೇಕೇ ।
ಅರವತ್ ವರುಸಾದ್ರು ಮರಿಯಾವೇ ನನ್‌ಹಾಡು
ಅರುಗು ಬೆರಗಣಿಯಾ ದರೀಯಾವೇ
ಅರಗು ಬೆರಗಣಿಯಾ ದರಿಯಾವೇ ನನ್ ಹಾಡೀನ
ಸೆರಗಾ ಬಿಡಿಸದರೆ ತೆರಽಣಿಲ್ಲ ।
ಎಪ್ಪತ್ ವರುಸಾದ್ರು ತಪ್ಪಾವೇ ನನ್ಹಾಡು
ಕಟ್ಟೂಕಳೆ ಜಂಬಾ ದರೀಯಾವೇ ।
ಕಟ್ಟೂಕಳೆ ಜಂಬಾ ದರಿಯಾ ನನ್‌ಹಾಡೀನಾ
ಕಟ್ಟಾ ಬಿಡಿಸಿದರೆ ತೆರಽಣಿಲ್ಲ ।

---

೧೪. ಆಲಸ್ಯ   ೧೫. ಹದವಾದ   ೧೬. ತೂಕಡಿಕೆ ಬಂದರೆ

ನಾರಾಯಣ ದೇವನ ಮದುವೆ

ನಾರೆಣದ್ಯೆವಾನಾ ಹಾಡ್ಡೇಳುವೊ ಅಂದ್ದೇಳೇ
ಇಟ್ಟೂ ಹೋದಳೆ ಮನೆಯಾ ಕೆಲಸಾಕೆ
ಇಟ್ಟ್ ಹೋದಳೆ ಮನೆಯಾ ಕೆಲಸಕೆ ನಾರೆಣ್‌ದ್ಯೆವ್ನ
ಮನಿಯಾ ಬಾಗಲ್ಲೇ[೧] ಹರವಾ ಸದಮದಗ[೨]
ನಾರೆಣದ್ಯೆವಾನಾ ಹಾಡೇಳುವೊ ಅಂದಾರೇ
ಹಾಕ್ ಹೋದಳೆ ಮನೆಯಾ ಕೆಲಽಸಾಕೆ
ಹಾಕ್ ಹೋದಳೆ ಮನಂಯಾ ಕಲಸಾಕೆ ನರೆಣದ್ಯೆವ್ನ
ಮನಿಯಾ ವಸ್ತಲ್ಲೇ[೩] ಹರವಾ ಸದಮದಗ
ಮನಿಯಾ ವಸ್ತಲ್ಲೇ ಹರವಾ ಸದಮದಗನಾರೆಣದ್ಯೆವಾ
ಕಾಲೂ ಸಿರಿಮೊಕವಾ ತೊಳಽದಾನೆ
ಕಾಲೂಸಿರಿ ಮೊಕವಾ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡದಾನೆ ನಾರೆಣದ್ಯೆವಾ
ಅಟ್ಟದ ಪೆಟ್ಟಗಿಯಾ ತೆಗಽದಾನೆ
ಅಟ್ಟದ ಪೆಟ್ಟಗಿಯಾ ತೆಗದಾನೆ ನಾರೆಣದ್ಯೆವಾ
ಮೆಟ್ಟೀ ಬೀಗವ ಕರೀದಾನೆ
ಮೆಟ್ಟೀ ಬೀಗವ ಕರಿದಾನೆ ನಾರೆಣದ್ಯೆವಾ
ಮುಚ್ಚೀಳ ತೆಗದೇ ಕಡಗಿಟ್ಟೇ
ಮುಚ್ಚೀಳ ತೆಗದೇ ಕಡಗಿಟ್ಟೇ ನಾರೆಣದ್ಯೆವಾ
ಪಟ್ಟೆ ಜೋತರವಾ ನೆರಽದುಟ್ಟೆ
ಪಟ್ಟೆ ಜೋತರವಾ ನೆರದುಟ್ಟೆ ನಾರೆಣದ್ಯೆವಾ
ನೆಡವಿಗೆ ನ್ಯೆವಳವಾ ಇಡಽವಾನೆ
ನೆಡವಿಗೆ ನ್ಯೆವಳ ಇಡವಾನೆ ನಾರೆಣದ್ಯೆವಾ
ಮುತ್ತನ ನೆರಿಯಂಗಿ ಬುಜಕಿಟ್ಟೆ
ಮುತ್ತನ ನೆರಿಯಂಗಿ ಬುಜಕಿಟ್ಟೆ ನಾರೆಣದ್ಯೆವಾ
ಮುತ್ತನ ಮುಂಡೆಸೆನ ತಲೆಸುತ್ತೇ

---

೧. ಬಾಗಿಲಲಿ　　೨. ಜಲಾಶಯ　　೩. ಹೊಸ್ತಿಲಲ್ಲಿ

ಮುತ್ತನ ಮುಂಡೆಸನ ತಲೆಸುತ್ತಿ ನಾರೆಣದ್ಯೆವಾ
ಬೆರಳೀಗುಂಗಿಲವಾ ಇಡಽವಾನೆ
ಬೆರಳೀಗುಂಗಿಲವಾ ಇಡವಾನೆ ನಾರೆಣದ್ಯೆವಾ
ಸಾಲೆ ಹಚ್ಚಡವ ಹೊಗಲೀಗೆ
ಸಾಲೆ ಹಚ್ಚಡವ ಹೊಗಲಿಗೆ ಇಟ್ಟೀಗಂಡಿ
ಪೆಟ್ಟಿಗಿ ಬಾಯಲ್ಲೇ ಮಡಽಗಾನೆ
ಪೆಟ್ಟಿಗಿ ಬಾಯಲ್ಲೇ ಮಡಗಾನೆ ನಾರೆಣದ್ಯೆವಾ
ಮಲ್ಗಂದು[೧] ಕೆಳಗೆ ಇಳಽದಾನೆ
ಮಲ್ಗಂದು ಕೆಳಗೆ ಇಳದಾನೆ ನಾರೆಣದ್ಯೆವಾ
ಹಾಲಾಗಾಯೊಂದ ತಡಽದಾನೆ
ಹಾಲಾಗಾಯೊಂದ ತಡದಾನೆ ನಾರೆಣದ್ಯೆವಾ
ಮಾಳಗ್ಗಿಂದ್ಹೆರಗೆ ಬರಽವಾನೆ
ಮಾಳಗ್ಗಿಂದ್ಹೆರಗೆ ಬರವಾನೆ ನಾರೆಣದ್ಯೆವಾ
ರಾಜಂಗಳ ಮೆಟ್ಟ ಇಳಽದಾನೆ
ರಾಜಂಗಳ ಮೆಟ್ಟ ಇಳದಾನೆ ನಾರೆಣದ್ಯೆವಾ
ರಾಜಮಾರಗದಲೆ ನೆಡಽದಾನೆ
ರಾಜಮಾರಗದಲೆ ನೆಡದಾನೆ ನಾರೆಣದ್ಯೆವಾ
ತಂಗೀಯರಮನಗೆ ಬರಽವಾನೆ
ತಂಗೀಯರಮನಗೆ ಬರವದ್ನು ಸೂಬದ್ರಿ
ತಡದಳೆ[೨] ಚಂಬಗಲಿ ಉದಽಕವಾ
ತಡದಳೆ ಚಂಬಗಲಿ ಉದಕವಾ ನಾರೆಣದ್ಯೆವಾ
ಕಾಲು ಸಿರಿಮೊಕವಾ ತೊಳಽದಾನೆ
ಕಾಲು ಸಿರಿಮೊಕವಾ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡವದ್ನು ಸೂಬದ್ರಿ
ಬಣ್ಣದ ಹಾಸ[೩] ಬಿಡಽಸಾಲೆ
ಬಣ್ಣದ ಹಾಸ ಬಿಡಸ್ವದ್ನು ನಾರೆಣದ್ಯೆವಾ
ಹಾಸನ ಮ್ಯೆನೋಗೇ ಕುಳಽತಾನೆ
ಹಾಸನ ಮ್ಯೆನೋಗಿ ಕುಳವದ್ನು ಸೂಬದ್ರಿ
ಬೆಳ್ಳಿ ಸಂಬಳಗಿ[೪] ಬೆಳೀಽಯೆಲೆ
ಬೆಳ್ಳಿ ಸಂಬಳಗಿ ಬೆಳಿಯೆಲಡಕೀಬಾಗ[೫]
ಹಾಲೀನಲಿ ಬೆಂದ ತೆನೆಽಸುಣ್ಣ

೧. ಮಾಳಿಗೆಯಿಂದ ೨. ಹಿಡಿದಳು ೩. ಹಸೆ ೪. ಕರಡಿಗೆ ೫. ಅಡಿಕೆಯ ಹೋಳು

ಹಾಲಿನಲಿ ಬೆಂದ ತೆನೆಸುಣ್ಣ ತಂಡಕಂಡೇ
ಮಾಳಗ್ಗಿಂದ್ವೆರಗೆ ಬರಽವಾಳೆ
ಮಾಳಗ್ಗಿಂದ್ವೆರಗೆ ಬರವಾಳು ಸೂಬದ್ರಿ
ಅಣ್ಣನೊಡನ್ಹೋಗಿ ನಿಲಽವಾಲೆ
ಅಣ್ಣನೋಡನ್ಹೋಗಿ ನಿಲವಾಳು ಸೂಬದ್ರಿ
ಅಣ್ಣಗೊಂದೀಳ್ಯ ಕೊಡಽವಾಳೆ
ಅಣ್ಣಗೊಂದೀಳ್ಯವ ಕೊಡವಾಳು ಸೂಬದ್ರಿ
ತಾನೊಂದೀಳ್ಯವ ಮೆಲಽವಾಳೆ
ತಾನೊಂದೀಳ್ಯವ ಮೆಲವದ್ನು ನಾರೆಣದ್ಯೆವ
ಸೋದೀಸೊಂದೀಳ್ಯವ ಮೆಲೋಽವಾನೆ
ಎಲಿಯೊಂದ್ ತಿಂದಾನೆ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡೀದಾನೆ
ಕೇಳೇ ಕೇಳೆ ಮೊವುಳ್ಳ ಕಿರದಂಗಿ
ಆಗಬೇಕೆ ಮುದ್ದೂ ಮದಽವೀಯೇ
ಆಗಬೇಕೆ ಮುದ್ದು ಮದವಿಯ ತಂಗೀಕೇಳೆ
ಮಂಗಲಕಪ್ಪಣಿಯಾ ಕೊಡಽಬೇಕೇ
ಅಟ್ಟೊಂದು ಮತಾ ಕೇಳೀತೋ ಸೂಬದ್ರಿ
ಆಗೊಂದು ಮಾತಾ ನುಡೀಽದಾಳೆ
ಊರೀಗರಸೋ ನೀನು ಕೇರಿಗ್ ದೊರಿಯೋ ನೀನು
ಹಕ್‌ಪಕ್ಷಿಗ್ ಪಡಿಯಾ[೧೦] ಅಳಽವಂತ
ಹಕ್‌ಪಕ್ಷೀಗ್ ಪಡಿಯಾ ಅಳವಂತಾ ದೊರ ನೀನು
ಆಗೀ ಬಾ ಮುದ್ದೂ ಮದಽವಿಯಾ
ಊರೀಗರಸೋ ನೀನು ಕೇರಿಗ್ ದೊರಿಯೋ ನೀನು
ಮನ್ಸ ಮಕ್ಕಳಿಗೆ[೧೧] ಪಡಿಯಾ ಅಳವಂತ
ಮನ್ಸ್ ಮಕ್ಕಳಿಗ್ ಪಡಿನಾ ಅಳವಂತ ದೊರ ನೀನು
ಆಗಲಕೊ ಮುದ್ದೂ ಮದಽವೀಯ ।
ಆಗಲಕೊ ಮುದ್ದೂ ಮದವಿಯಾ ಅಂದಳೇ
ಮಂಗಲಕಪ್ಪಣಿಯಾ ಕೊಡಽವಾಳೆ
ಮಂಗಲಕಪ್ಪಣಿಯಾ ಕೊಡವದ್ನು ನಾರೆಣದ್ಯೆವಾ
ಕುಳತಾ ಗದ್ದಗಿಯಾ ಜಡಽದೆದ್ದೇ
ಕುಳತಾ ಗದ್ದಗಿಯಾ ಜಡದೆದ್ದಿ ನಾರೆಣದ್ಯೆವಾ
ತಂಗೀ ಕರಕಂಡೇ ನೆಡಽದಾನೆ

೯. ತಾಂಬೂಲ ಹುಡಿ ೧೦. ಆಹಾರ ೧೧. ಮನುಷ್ಯ ಮಕ್ಕಳಿಗೆ

ತಂಗೀ ಕರಕಂಡೇ ನೆಡದಾನೆ ನಾರೆಣದ್ಯೆವಾ
ದೇವತ್ಗೋಳರಮನಗೆ ಬರಽವಾನೆ
ದೇವತ್ಗೋಳರಮನಗೆ ಬರವಾರವರಿಬ್ಬರು
ಬಂದೀ ಬಾಗಲ್ಲೇ ನಿಲಽವಾರೆ
ಬಂದೀ ಬಾಗಲೇ ನಿಲವದ್ನು ದೇವತ್ಗೋಳು
ತಡದರೆ ಚಂಬಗಲೆ ಉದಽಕವಾ
ಅಜ್ಜೀ ಕೊಟ್ಟುದಕಾ ತಟ್ಟನೆ ತಡದಾನೆ
ಕಾಲು ಸಿರಿಮೊಕವಾ ತೊಳಽದಾನೆ
ಕಾಲು ಸಿರಿಮೊಕವಾ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡವದ್ನು ಸೂಬದ್ರಿ
ಮಾಳೂಗಿ ಒಳಗೆ ನೆಡಽದಾಳೆ
ಮಾಳೂಗಿ ಒಳಗೆ ನೆಡದಾರಣ್ಣಾ ತಂಗಿ
ಪಟ್ಟೆ ಮಂಚದಲೆ ಕುಳಽತಾರೆ
ಪಟ್ಟೆ ಮಂಚದಲೆ ಕುಳವದ್ನು ದೇವತ್ಗೋಳು
ತಮ್ಮ ಕೈ ಚೆಂಚೀ[೧೨] ಬಿಡಽಸಾರೆ
ತಮ್ಮ ಕೈ ಚೆಂಚೀ ಬಿಡಸಾರೆ ದೇವತಗೋಳು
ಅವರಿಬ್ಬರಗು ಈಳ್ಯ ಕೊಡಽವಾರೆ
ದೇವತಗೋಳ ಕೊಟ್ಟೀಳ್ಯ ತಟ್ಟನೇ ತಡದಾನೆ
ಸೋದೀಸೊಂದೀಳ್ಯ ಮೆಲಽವಾನೆ
ಸೋದೀಸೊಂದೀಳ್ಯ ಮೆಲವಾನೆ ನಾರೆಣದ್ಯೆವಾ
ದೇವತ್ಗೋಳ ಸಿರಿಪದಕೆ ಸರಽಣಂದೇ
ಕೇಳಿ ಕೇಳಿ ನನ್ನಾ ಮೊವ್ಳುಳ್ಳ[೧೩] ದೇವತೆಗೋಳೆ
ಆಗಬೇಕು ಮುದ್ದು ಮದಽವೀಯೇ
ಊರೀಗರಸೋ ನೀನು ಕೇಳಿಗ್ ದೊರಿಯೋ ನೀನು
ಹಕ್‌ಪಕ್ಷಿಗ್ ಪಡಿಯಾ ಅಳಽವಂತಾ
ಹಕ್‌ಪಕ್ಷಿಗ್ ಪಡಿಯಾ ಅಳವಂತ ದೊರ ನೀನು
ಆಗಲಕೊ ಮುದ್ದೊ ಮದಽವೀಯ
ಕೇಳೀ ಕೇಳಿ ನನ್ನ ಮೊವುಳ್ಳ ದೇವತಗೋಳೆ
ಆಗಬೇಕು ಮುದ್ದು ಮದಽವಿಯೇ
ಆಗಬೇಕು ಮುದ್ದು ಮದವಿಯ ದೇವತೆಗೋಳೆ
ಮಂಗಲಕಪ್ಪಣೆಯಾ ಕೊಡಽಬೇಕೆ

---

೧೨. ಸಂಚಿ   ೧೩. ಮೋಹವುಳ್ಳ

ಊರಿಗರಸೋ ನೀನು ಕೇಳಿಗ್ ದೊರಿಯೋ ನೀನು
ಮನ್ಸ್ ಮಕ್ಕಳಿಗೆ ಪಡಿಯಾ ಅಳಽವಂತ
ಮನ್ಸ್ ಮಕ್ಕಳಿಗೆ ಪಡಿಯಾ ಅಳವಂತ ದೊರ ನೀನು
ಆಗಲಕೊ ಮುದ್ದು ಮದಽವೀಯಾ
ಆಗಲಕೊ ಮುದ್ದು ಮದವೀಯ ಅಂದೇಳೆ
ಮಂಗಲಕಪ್ಪಣಿಯಾ ಕೊಡಽವಾರೆ
ಮಂಗಲಕಪ್ಪಣಿಯಾ ಕೊಡವದ್ನು ನಾರೆಣದ್ಯೆವಾ
ಕುಳತಾ ಕದ್ದಗಿಯಾ ಜಡಽದೆದ್ದೇ
ಕುಳತಾ ಗದ್ದಗಿಯಾ ಜಡದೆದ್ದಿ ನಾರೆಣದ್ಯೆವಾ
ತುಳಚೀ ಮುಂದ್ಹೋಗೇ ನಿಲಽವಾನೆ
ತುಳಚೀ ಮುಂದ್ಹೋಗೇ ನಿಲವಾನೆ ನಾರೆಣದ್ಯೆವಾ
ಹಾಲಾಗಾಯೊಂದ[೧೪] ಮಡಽಗಾನೆ
ಹಾಲಾಗಾಯೊಂದ ಮಡಗಾನೆ ನಾರೆಣದ್ಯೆವಾ
ದೇವರಿಗೆ ಕಯ್ಯಾ ಮುಗೀಽದಾನೆ
ದೇವರಿಗೆ ಕಯ್ಯಾ ಮುಗದಾನೆ ನಾರೆಣದ್ಯೆವಾ
ರಾಜಂಗ್ಯ ಮೆಟ್ಟ ಇಳಽದಾನೆ
ರಾಜಂಗ್ಯ ಮೆಟ್ಟ ಇಳವದ್ನು ಸೂಬದ್ರಿ
ರಾಜಂಗ್ಯ ಮೆಟ್ಟ ಇಳದಾಳೆ
ರಾಜಂಗ್ಯಮೆಟ್ಟ ಇಳದಾರಣ್ಣತಂಗಿ
ತಮ್ಮಲರಮನಗೆ ಬರಽವಾರೆ
ತಮ್ಮಲರಮನಗೆ ಬರುವಾರಣ್ಣ ತಂಗಿ
ಬಂದೀ ಬಾಗಲ್ಲೇ ನಿಲಽವಾರೆ
ಬಂದೀ ಬಾಗಲ್ಲೇ ನಿಲವಾರಣ್ಣ ತಂಗಿ
ಕಾಲು ಸಿರಿಮೊಕವಾ ತೊಳಽವಾರೆ
ಕಾಲು ಸಿರಿಮೊಕವಾ ತೊಳದಾರಣ್ಣ ತಂಗಿ
ಮಾಳೂಗಿ ಒಳಗೆ ನೆಡಽದಾರೆ
ಮಾಳೂಗಿ ಒಳಗೆ ನೆಡವದ್ನು ನಾರೆಣದ್ಯೆವಾ
ಪಟ್ಟೆ ಮಂಚದಲೆ ಕುಳಽತಾನೆ
ಪಟ್ಟೆ ಮಂಚದಲಿ ಕುಳವದ್ನು ಸೂಬದ್ರಿ
ಮಾಳೂಗಿ ಒಳಗೆ ನೆಡಽದಾಳೆ
ಮಾಳೂಗಿ ಒಳಗೆ ನೆಡದಾಳೆ ಸೂಬದ್ರಿ
ಮಾಳೂಗಿ ಕಸವಾ ತೆಗಽದಾಳೆ

---

೧೪. ತೆಂಗಿನಕಾಯಿ

ಕೆಂದೀಯ ಸಗಣೀಯಾ ಅಂಗಯ್ಲಿ ತಡಕಂಡೆ
ಮುಂದಿನ ಮಾಳಗಿಯಾ ಬೆಳಽಗಾಳೆ
ಮುಂದಿನ ಮಾಳಗಿಯಾ ಬೆಳಗಾಳೆ ಸೂಬದ್ರಿ
ಅಂಕಣದಯ್‌ಸೇಡೀ[೧೫] ಬರಽದಾಳೆ
ಅಂಕಣದಯ್‌ಸೇಡಿ ಬರದಾಳೆ ಸೂಬದ್ರಿ
ಜೋಡಿಲಿ ಕೊಡಪನವ ತಡಽದಾಳೆ
ಜೋಡಿಲಿ ಕೊಡಪನವ ತಡದಾಳೆ ಸೂಬದ್ರಿ
ಮೂಡಣೆಗ್ಗೆರಿಗೆ[೧೬] ನೆಡಽದಾಳೆ
ಹಕ್ಕೀ ಕಿಟದಿದ್ದ ನೀರು ಪಕ್ಷೀ ಮುಟದಿದ್ದ ನೀರೇ
ದೈವರ್ಥೆಗ್ಗೆರಿಯಾ ಹಣೀ ನೀರೇ
ದೈವರೆಗ್ಗೆರಿಯಾ ಹಣಿ ನೀರ ತಂದಿನ್ನು
ಮಾಳೂಗಿ ಒಳಗೆ ನೆಡಽದಾರೆ
ಅಟ್ಟದ ಮೈನನ ಪುಟ್ಟೂ ಸಣ್ಣಕ್ಕಿಯಾ
ಅನ್ನಮ್ಯಾಗರಕೆ ಅನೂಽಮಾಡೇ
ಮಾಳಗೀ ಒಳಗೀನಾ ಹಾಲೂ ಹಳ್ಳಗನಕ್ಕಿ
ಹಾಲೂ ಪಾಯಸಕೇ ಅನೂಽಮಾಡೇ
ಹಿತ್ತಲ ಕಣಕೀನ[೧೭] ಗಟ್ಟು ಕೆಂಬರಗಿಯಾ
ಬೊಟ್ಟೆಣ್ಣಿ ಕಿಟ್ಟೇ ಬೆಗರಿಸೆ[೧೮]
ಬೇಲೀಯಾ ಮೈನಿನಾ ದಾರೇ ಹೀರೇಕಾಯ
ದಾರೀಯನರದೇ ಮೆಣಸಿಟ್ಟೇ
ಹರದಬ್ಬು[೧೯] ಹಾಗೀಲೇ ಮುರದಬ್ಬು ತೊಂಡೀಯೆ
ಪಲಬರು ಸೊಪ್ಪೇ ಬಸಽಳಿಯೇ
ಪಲಬರು ಸೊಪ್ಪೇ ಬಸಳೀ ಕೊಡಿಯಾತಂದಿ
ತುಪ್ಪಾದಲ್ಲ ದರಾ ಹದಾಮಾಡೇ
ಎಲ್ಲಾ ಗುಳ್ಳೀಕಾಯೇ ಎಲ್ಲಾ ನಿಲ್ಲಿಕಾಯೇ
ಕಲ್ಲೊಡದೇ ಬೆಳುವಾ ಕಣಽಲಿಯೇ
ಕಲ್ಲೊಡದೇ ಬೆಳುವಾ ಕಣಲಿಯಾ[೨೦] ಸೂಸಿಕದ
ಎಲ್ಲಾ ಮೈಗರಕು ಕಡಽರಿತೆ
ಎಲ್ಲಾ ಮೈಗರಕು[೨೧] ಕಡರಿತಿ ಕಜ್ಜಯವಾ
ಅನುಮಾಡಾಳೊಂದು ಗಳಗ್ಯಲ್ಲೇ
ಅನುಮಾಡಾಳೊಂದು ಗಳಗ್ಯಲ್ಲೇ ಸೂಬದ್ರಿ

೧೫. ರಂಗೋಲಿ ೧೬. ಪೂರ್ವ ದಿಕ್ಕಿನ ಕೆರೆ ೧೭. ಕಡೆಯ ೧೮. ಒಗ್ಗರಣೆ ಹಾಕಿ
೧೯. ಹರಿದು ಹಬ್ಬುವ ೨೦. ಕಳಿಲೆ ೨೧. ಮೇಲೋಗರ

ಮಾಳಗ್ಗಿಂದ್ಧೆರಗೆ ಬರsವಾಳೆ
ಮಾಳಗ್ಗಿಂದ್ಧೆರಗೆ ಬರವಾಳು ಸೂಬದ್ರಿ
ಸೆಣ್ಣಗಿಂಡ್ಯಲ್ಲಿ ಉದsಕಾವೇ
ಸೆಣ್ಣಗಿಂಡ್ಯಲ್ಲಿ ಉದಕಾವಾ ತಡಕಂಡೇ
ಅಣ್ಣನೊಡನೋಗಿ ನಿಲsವಾಳೆ
ಅಣ್ಣನೊಡನೋಗಿ ನಿಲವಾಳು ಸೂಬದ್ರಿ
ಕೊಟ್ಟಾಳೇ ಕಯ್ಯಾ ಉದsಕಾವೇ
ಕೊಟ್ಟಾ ಉದಕಾವಾ ತಟ್ಟಾನೇ ತಡದಾನೆ
ಮಾಳಗ್ಗಿಂದ್ಧೆರಗೆ ಬರsವಾನೆ
ಮಾಳಗ್ಗಿಂದ್ಧೆರಗೆ ಬರವಾನೆ ನಾರೆಣದ್ಯೆವಾ
ಕಾಲು ಸಿರಿಮೊಕವಾ ತೊಳದಾನೆ
ಕಾಲು ಸಿರಿಮೊಕವಾ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡsದಾನೆ
ಮಾಳೂಗಿ ಒಳಗೆ ನೆಡದಾನೆ ನಾರೆಣದ್ಯೆವಾ
ಮಣೆಯಾ ಮ್ಯೆನೋಗೇ ಕುಳsತಾನೆ
ಮಣೆಯಾ ಮ್ಯೆನೋಗಿ ಕುಳವದ್ನು ಸೂಬದ್ರಿ
ತಿರುಳು[೨೨] ಬಾಳೆಲಿಯಾ ತೊಳsದ್ದಾಸೇ
ತಿರಳು ಬಾಳೆಲಿಯಾ ತೊಳದ್ದಾಸೀ ಸೂಬದ್ರಿ
ಅನ್ನ ಮ್ಯೆಗ್ರವ ಬಡsಸಾಳೆ
ಅನ್ನ ಮ್ಯೆಗ್ರವ ಬಡಸಾಳೆ ಸೂಬದ್ರಿ
ತುಪ್ಪಾ ಸೆಕ್ಕರಿಯಾ ಎರsದಾಳೆ
ತುಪ್ಪಾ ಸೆಕ್ಕರಿಯಾ ಎರದಾಳೆ ಸೂಬದ್ರಿ
ಹಾಲೂ ಪಾಯಸವ ಬಡsಸಾಳೆ
ಹಾಲೂ ಪಾಯಸವಾ ಬಡಸೀ ತಿರಗೂರೊಟಗೇ
ಉಂಡೆದ್ದನೊಂದು ಗಳಗ್ಯಲ್ಲೇ
ಉಂಡಾನೂಟವ ತೊಳದನೆ ಎಂಜಲಮೊಕವ
ಪಟ್ಟೆ ಮಂಚದಲೆ ಕುಳsತಾನೆ
ಪಟ್ಟೆ ಮಂಚದಲಿ ಕುಳವದ್ನು ಸೂಬದ್ರಿ
ತನ್ನೂಟಕಲ್ಲೇ ಎಡೆsಮಾಡೇ
ಉಂಡೆದ್ದಳೊಂದು ಗಳಗ್ಯಲ್ಲೇ
ಉಂಡಾಲೂಟವ ತೊಳದಳೆ ಎಂಜಲ ಮೊಕವ
ಎಂಜಲ ಮ್ಯೆಲಗಿಯಾ ತೆಗsದಾಳೆ

೨೨. ತಳಿರು

ಎಂಜಲ ಮಯ್ಲುಗಿಯಾ ತೆಗದಾಳೆ ಸೂಬದ್ರಿ
ಬೆಳ್ಳೀ ಸಂಬಳಗಿ ಬೆಳೀsಯೆಲೆ
ಬೆಳ್ಳೀ ಸಂಬಳಗಿ ಬೆಳಿಯೆಲಡಕೀಬಾಗಾ
ಹಾಲಿನಲಿ ಬೆಂದ ತೆನಿಸುಣ್ಣ
ಹಾಲಿನಲಿ ಬೆಂದ ತೆನಿಸುಣ್ಣ ತಡಕಂಡೇ
ಅಣ್ಣನೊಡನೋಗೇ ನಿಲsವಾಳೆ
ಅಣ್ಣನೊಡನೋಗಿ ನಿಲವಾಳು ಸೂಬದ್ರಿ
ಅಣ್ಣಗೊಂದೀಳ್ಯ ಕೊಡುವಾಳೆ
ಅಣ್ಣಗೊಂದೀಳ್ಯವ ಕೊಡುವಾಳು ಸೂಬದ್ರಿ
ತಾನೊಂದೀಳ್ಯವ ಮೆಲsವಾಳೆ
ಎಲಿಯೊಂದ್ ತಿಂದಾಳೆ ರಜವಲ್ಲೇ ಉಗಳಾಳೆ
ಹೇಳಿ ಅಣ್ಣಾಗೆ ಹೊರsಟಾಳೆ
ಹೇಳಿ ಅಣ್ಣಾಗೆ ಹೊರಟಾಳ ಸೂಬದ್ರಿ
ತನ್ನಲರಮನಗೇ ನೆಡsದಾಳೆ
ತನ್ನಲರಮನಗೇ ನೆಡವದ್ನು ನಾರೆಣದ್ಯೆವಾ
ಕುಳತಾ ಗದ್ದಗಿಯಾ ಜಡsದೆದ್ದೇ
ಕುಳತಾ ಗದ್ದಗಿಯಾ ಜಡದೆದ್ದಿ ನಾರೆಣದ್ಯೆವಾ
ಉಗ್ರಣದರಮನಗೆ ನೆಡsದಾನೆ
ಉಗ್ರಣ[೨೩] ದರಮನಗೆ ನೆಡದಾನೆ ನಾರೆಣದ್ಯೆವಾ
ಉಗ್ರಣದ ಬಾಗಿಲವಾ ತೆಗsದಾನೆ
ಉಗ್ರಣದ ಬಾಗಿಲವಾ ನೆಗದಾನೆ ನಾರೆಣದ್ಯೆವಾ
ಹಕ್‌ಪಕ್ಷಿಗೆ ಪಡಿಯಾ ಅಳsದಾನೆ
ಹೋಗ್ವಾಕಾರೂ ತಿಂಗ್ಳ ಬರುವಾಕಾರೂ ತಿಂಗ್ಳ
ಹೆನ್ನೆಯ್ಡು ತಿಂಗ್ಳ ತನಗೇ ತಡsವುಂಟೇ
ಹನ್ನೆಯ್ಡ್ ತಿಂಗ್ಳು ತನಗೇ ತಡವೂಟ ಅಂದೇಳಿ
ಹನ್ನೆಯ್ಡ್ ತಿಂಗ್ಳ್ ಪಡಿಯಾ ಅಳsದಾನೆ
ಹನ್ನೆಯ್ಡ್ ತಿಂಗ್ಳ ಪಡಿಯಾ ಅಳದಾನೆ ನಾರೆಣದ್ಯೆವಾ
ಮನ್ಸ್‌ಮಕ್ಕಳಿಗೆ ಪಡಿಯಾ ಅಳsದಾನೆ
ಹೋಗ್ವಾಕಾರೂ ತಿಂಗ್ಳ ಬರುವಾಕಾರು ತಿಂಗ್ಳ
ಹನ್ನೆಯ್ಡ್ ತಿಂಗ್ಳ ತನಗೇ ತಡsವುಂಟು
ಹನ್ನೆಯ್ಡ್ ತಿಂಗ್ಳ್ ತನಗೇ ತಡವುಂಟು ಅಂದೇಳಿ
ಹನ್ನೆಯ್ಡ್ ತಿಂಗ್ಳ ಪಡಿಯಾ ಅಳsದಾನೆ

---

೨೩. ಉಗ್ರಾಣ

ಹನ್ನೆಯ್ಡ್ ತಿಂಗ್ಳ ಪಡಿಯಾ ಅಳದಾನೆ ನಾರೆಣದ್ಯೆವಾ
ಉಗ್ರಣದ ಬಾಗಿಲವಾ ಇಡಽವಾನೆ
ಉಗ್ರಣದ ಬಾಗಿಲವಾ ಇಡವಾನೆ ನಾರೆಣದ್ಯೆವಾ
ಹಿಂದಕೆ ತಿರಗೇ ಬರಽವಾನೆ
ಹಿಂದಕೆ ತಿರಗೇ ಬರವಾನೆ ನಾರೆಣದ್ಯೆವಾ
ಅಟ್ಟದ ಪೆಟ್ಟಗಿಯಾ ತೆಗಽದಾನೆ
ಅಟ್ಟದ ಪೆಟ್ಟಗಿಯಾ ತೆಗದಾನೆ ನಾರೆಣದ್ಯೆವಾ
ಮೆಟ್ಟೀ ಬೀಗವಾ ಕರೀದಾನೆ
ಮೆಟ್ಟೀ ಬೀಗವಾ ಕರಿದಾನೆ ನಾರೆಣದ್ಯೆವಾ
ಮುಚ್ಚೀಳ ತೆಗದೇ ಕಡಗಿಟ್ಟೇ
ಮುಚ್ಚಳ ತೆಗದೇ ಕಡಗಿಟ್ಟಿ ನಾರೆಣದ್ಯೆವಾ
ಪಟ್ಟೆ ಜೋತರವಾ ನೆರಽದುಟ್ಟೇ ।
ಪಟ್ಟೆ ಜೋತರವಾ ನೆರದುಟ್ಟಿ ನಾರೆಣದ್ಯೆವಾ
ಮುತ್ತಿನ ನೆರಿಯಂಗಿ ಬುಜಕಿಟ್ಟಿ
ಮುತ್ತಿನ ನೆರಿಯಂಗಿ ಬುಜಕಿಟ್ಟಿ ನಾರೆಣದ್ಯೆವಾ
ಮುತ್ತಿನ ಮುಂಡೆಸವ ತಲೆಸುತ್ತೇ
ಮುತ್ತಿನ ಮುಂಡೆಸವ ತಲೆಸುತ್ತೀ ನಾರೆಣದ್ಯೆವಾ
ನಿಡವಿಗೆ ನ್ಯೆವಳವ ಇಡಽವಾನೆ
ನಿಡವಿಗೆ ನ್ಯೆವಳವ ಇಡವಾನೆ ನಾರೆಣದ್ಯೆವಾ
ಬೆರಳೀಗುಂಗಿಲವಾ ಇಡಽವಾನೆ
ಬೆರಳೀಗುಂಗಿಲವಾ ಇಡವಾನೆ ನಾರೆಣದ್ಯೆವಾ
ಸಾಲೆ ಹಚ್ಚಡವಾ ಹೊಗಲಿಗೆ[೨೪]
ಸಾಲೆ ಹಚ್ಚಡವಾ ಹೊಗಲೀಗಾಯೀ ಕಂಡೇ
ದ್ಯೆವಾ ಬೆತ್ತವಾ ತಡಽದಾನೆ
ದ್ಯೆವಾ ಬೆತ್ತವಾ ತಡದಾನೆ ನಾರೆಣದ್ಯೆವಾ
ನಾಗಾಬೆತ್ತವ ತಡಽದಾನೆ
ನಾಗಾ ಬೆತ್ತವ ತಡದಾನೆ ನಾರೆಣದ್ಯೆವಾ
ಪೆಟ್ಟಗಿ ಬಾಯಲ್ಲೇ ಮಡಽಗಾನೆ
ಪೆಟ್ಟಿಗೆ ಬಾಯಲ್ಲೇ ಮಡಗಾನೆ ನಾರೆಣದ್ಯೆವಾ
ಮಾಳ್ಗಿಂದು ಕೆಳಗೆ ಇಳಽದಾನೆ
ಮಾಳ್ಗಿಂದು ಕೆಳಗೆ ಇಳದಾನೆ ನಾರೆಣದ್ಯೆವಾ
ಮಾಳ್ಗಿಂದ್ಹೆರಗೆ ಬರಽವಾನೆ

---

೨೪. ಹೆಗಲಿಗೆ

ಮಾಳಗ್ಗಿಂಧ್ವೆರಗೆ ಬರವಾನೆ ನಾರೆಣದ್ಯೆವಾ
ರಾಜಂಗಳ ಮೆಟ್ಟ ಇಳsದಾನೆ
ರಾಜಂಗಳ ಮೆಟ್ಟ ಇಳದಾನೆ ನಾರೆಣದ್ಯೆವಾ
ಬೆಳ್ಳೀಯಾ ರತವಾ ನೆಗsದ್ವತ್ತೇ
ಬೆಳ್ಳಿಯಾ ರತವಾ ನೆಗದ್ವತ್ತಿ ನಾರೆಣದ್ಯೆವಾ
ರತದಾ ಕೀಲ್ಗೋಳ ತಿರsಗಿಸೇ
ರತದಾ ಕೀಲ್ಗಳ ತಿರಗಿಸಿ ನಾರೆಣದ್ಯೆವಾ
ಕೌಲಿಂದ್ರನ್ ರಾಜ್ಯಕೆ ನೆಡsದಾನೆ
ಕೌಲಿಂದ್ರನ ರಾಜ್ಯಕೆ ನೆಡದಾನೆ ನಾರೆಣದ್ಯೆವಾ
ರಾಜಮಾರ್ಗದಲೆ ಬರsವಾನೆ
ರಾಜಮಾರ್ಗದಲಿ ಬರವದ್ನು ಕೌಲಿಂದ್ರ
ಅರಗೀ ನೋಡಿದನೆ ಹೆರsಗೊಮ್ಮೆ
ಅರಗೀ ನೋಡಿದನೆ ಹೆರಗೊಮ್ಮೆ ಕೌಲಿಂದ್ರ
ಆಗೊಂದು ಮಾತಾ ನುಡೀದಾನೆ
ಯಾವುರ ದಂಡೋ ಏನೋ ಯಾವುರ ದಳವೋ ಏನೋ
ಹಿಂದನಿಂದೇ ನಮ್ಮೂರ್ಗೆ ಬರsತಾದೆ
ಹಿಂದ್‌ನಿಂದ್ ನಮ್ಮೂರ್ಗೆ ಬರsತಾದೆ
ಇಂದೇ ನಮ್ಮ ಜೀಂವಾ ಇರವಾದಿಲ್ಲ
ಇಂದೆ ನಮ ಜೀಂವಾ ಇರವಾದಿಲ್ಲ ಅಂದೇಳೇ
ಗಡಗಡನಲ್ಲೇ ಹೆದರಾನೆ
ಗಡಗನಲ್ಲಿ ಹೆದರ್ವದ್ನು ತಾಯವ್ವಿ
ಮಾಳಗ್ಗಿಂಧ್ವೆರಗೆ ಬರsವಾಳೆ
ಮಾಳಗಿಂಧ್ವೆರಗೆ ಬರವಾಳು ತಾಯವ್ವಿ
ಅರಗಿ ನೋಡಿದಲೆ ಹೆರsಗೊಮ್ಮೆ
ಅರಗಿ ನೋಡಿದಳೆ ಹೆರಗೊಮ್ಮೆ ತಾಯವ್ವಿ
ಆಗೊಂದು ಮಾತಾ ನುಡೀದಾಲೆ
ಯಾವೂರ ದಂಡಲ್ಲ ಯಾವೂರ ದಳವಲ್ಲ
ನಾರೆಣದ್ಯೆವ ರತವೇರಿ ಬರsತಾನೆ
ಕವ್ಲಿಂದ್ರನ ರಾಜೀಲಿ ಹೆಣ್ಣು ನೆರದೂದಂದಿ[೨೫]
ನಾರೆಣದ್ಯೆವ ರತವೇರಿ ಬರsತಾನೆ
ನಾರೆಣದ್ಯೆವ ರತವೇರಿ ಬರತಾನೆ ಕೌಲಿಂದ್ರ
ಮಳ್ಳೇನೋ ನೀನು ಮರsಳೇನೋ

೨೫. ದೊಡ್ಡವಳಾಗಿದ್ದಾಳೆ

ಅಷ್ಟೊಂದು ಮಾತಾ ಹೇಳಿ ಕೇಳೂರೊಟಗೇ
ರಾಜಂಗ್ಯದಲ್ಲೋಗಿ ಇಳಽದಾನೆ
ರಾಜಂಗ್ಯದಲ್ಲೋಗಿ ಇಳದಾನೆ ನಾರೆಣದ್ಯೆವ
ರತಗಿಂದ ಕೆಳಗೆ ಇಳಽದಾನೆ
ರತಗಿಂದು ಕೆಳಗೆ ಇಳದಾನೆ ನಾರೆಣದ್ಯೆವಾ
ಬಂದೀ ಬಾಗಲ್ಲೇ ನಿಲಽವಾನೆ
ಬಂದೀ ಬಾಗಲ್ಲೇ ನಿಲವದ್ನು ತಾಯವ್ವಿ
ತಡೆದಳೆ ಚಂಬಗಲಿ ಉದಽಕವ
ಅತ್ತೆ ಕೊಟ್ಟುದಕವ ತಟ್ಟನೆ ತಡದಾನೆ
ಕಾಲು ಸಿರಿಮೊಕವ ತೊಳಽದಾನೆ
ಕಾಲು ಸಿರಿಮೊಕವ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡದಾನೆ ನಾರೆಣದ್ಯೆವಾ
ಕೌಲಿಂದ್ರನೊಡನೋಗಿ ಕುಳಽತಾನೆ
ಕೌಲಿಂದ್ರನೊಡನೋಗಿ ಕುಳವದ್ನು ಕೌಲಿಂದ್ರ
ತನ್ನ ಕಯ್ಚೆಂಚಿ ಬಿಡಽಸಾನೆ
ತನ್ನ ಕಯ್ಚೆಂಚಿ ಬಿಡಸಾನೆ ಕೌಲಿಂದ್ರ
ಬಾವಾಗೊಂದೀಳ್ಯ ಕೊಡಽವಾನೆ
ಬಾವಾಗೊಂದೀಳ್ಯ ಕೊಡವಾನೆ ಕೌಲಿಂದ್ರ
ತಾನೊಂದೀಳ್ಯವ ಮೆಲಽವಾನೆ
ಎಲಿಯೊಂದ ತಿಂದಾನೆ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡೀಽದಾನೆ
ಯಾವಾಗಿ ನಿನ್ನ ಅರಮಲ್ಲಿರು ಬಾವಯ್ಯ
ಏನ್‌ಬಂದ್ಯೊ ನನ್ನಾ ಅರಮನ್ಗೆ
ಏನ್‌ಬಂದ್ಯೊ ನನ್ನಾ ಅರಮನ್ಗೆ ಅಂಬದ್ನು
ಆಗೊಂದು ಮಾತಾ ನುಡೀದಾನೆ
ತಾಯಿಲ್ಲ ತಂದಿಲ್ಲಾ ನಾನು ಒಬ್ಬನೆ ಸಯ್ಯೊ
ನಿನ್ನಮ್ಮಾ ನನ್ನಾ ಸಲಗಾಬೇಕೋ[೨೬]
ನಿನ್ನಮ್ಮಾ ನನ್ನಾ ಸಲಗ್ಬೇಕು ಬಾವಾಕೇಳೋ
ನಿನ ತಂಗಿ ಮಾದೇವಿ ಕೊಡಬೇಕೋ
ನಿನ ತಂಗಿ ಮಾದೇವಿ ಕೊಡಬೇಕು ಬಾವಾಕೇಳೋ
ನನತಂಗಿ ಸವ್‌ಬದ್ರಿ ಕೊಡತೀನೋ

೨೬. ಸಲಹಬೇಕು

ಊರಿಗರಸಾ ತಾನು ಕೇರಿಗೆ ದೊರೆ ತಾನು
ಹಕ್‌ಪಕ್ಷಿಗ್ ಪಡಿಯಾ ಅಳವಂತ
ಹಕ್‌ಪಕ್ಷಿಗ್ ಪಡಿಯಾ ಅಳವಂತ ದೊರೆ ತಾನು
ನಿನತಂಗಿ ಮಾದೇವಿಯಾ ಕೊಡsಬೇಕೋ
ನಿನತಂಗಿ ಮಾದೇವಿ ಕೊಡಬೇಕು ಬಾವಾ ಕೇಳು
ನನತಂಗಿ ಸೂಬದ್ರಿ ಕೊಡsತೀನೋ
ಊರಿಗರಸೂ ತಾನೂ ಕೇರಿಗೆ ದೊರೆ ತಾನು
ಮನ್ಸ್‌ಮಕ್ಕಳಿಗೆ ಪಡಿಯಾ ಅಳವಂತ
ಮನ್ಸ್‌ಮಕ್ಕಳಿಗ್ ಪಡಿಯಾ ಅಳವಂತ ದೊರೆ ತಾನು
ನಿನತಂಗಿ ಮಾದೇವಿಯಾ ಕೊಡsಬೇಕೋ
ನಿನತಂಗಿ ಮಾದೇವಿ ಕೊಡಬೇಕು ಬಾವಾ ಕೇಳು
ನನತಂಗಿ ನಿನಗೆ ಕೊಡsತೀನೋ
ಅಷ್ಟೊಂದು ಮಾತಾ ಕೇಳಾನೇ ಕೌಲಿಂದ್ರ
ತನ್ನಾ ತಾಯವ್ವಿಯಾ ಕರsದಾನೆ
ಒಂದ ಕರವೀಗೇ ಬಂದಾಳೇ ತಾಯವ್ವಿ
ನಿಂದಳೆ ಕೌಲಿಂದ್ರನ ಒಡsನಲ್ಲಿ
ನಿಂದಳೆ ತಾಯವ್ವಿ ಒಡನಲ್ಲಿ ತಾಯವ್ವಿ
ಏನು ಕಾರಣಲಿ ಕರsದೀಯೋ
ಏನು ಕಾರಣಲಿ ಕರದೀಯೋ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಊರಿಗರಸೂ ಅಂಬ ಕೇರಿಗೆ ದೊರೆಯಂಬ
ಹಕ್‌ಪಕ್ಷಿಗೆ ಪಡಿಯಾ ಅಳವಂತ
ಹಕ್‌ಪಕ್ಷಿಗ್ ಪಡಿಯಾ ಅಳವಂತ ದೊರೆಯಂಬ
ನನತಂಗಿ ಮಾದೇವಿಯಾ ಕೊಡತೀನೆ
ನನತಂಗಿ ಮಾದೇವಿಯಾ ಕೊಡತೀನೆ ತಾಯಿ ಕೇಲೇ
ಸೂಬದ್ರಿ ನನಗೆ ಕೊಡsತಾನೆ
ಅಷ್ಟೊಂದು ಮಾತಾ ಕೇಳೀತು ತಾಯವಿ
ಆಗೊಂದು ಮಾತಾ ನುಡೀದಾಲೆ
ಆಗೊಂದು ಮಾತಾ ಏನಂದೀ ನುಡಿದಾಳೆ
ಹೋಗ್ಬನ್ನಿ ಬಟ್ಟರ ಅರಮನ್ಗೆ
ಹೋಗ್ಬನ್ನಿ ಬಟ್ಟರ ಅರಮನ್ಗೆ ಅಂಬದ್ನು ಕೌಲಿಂದ್ರ
ಕೂತ ಗದ್ದಗಿಯಾ ಜಡsದೆದ್ದೇ
ಕೂತ ಗದ್ದಗಿಯಾ ಜಡದೆದ್ದೀ ಕೌಲಿಂದ್ರ

ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡದಾನೆ ಕೌಲಿಂದ್ರ
ಅಟ್ಟದ ಪೆಟ್ಟಗಿಯ ತೆಗಽದಾನೆ
ಅಟ್ಟದ ಪೆಟ್ಟಗಿಯ ತೆಗದಾನೆ ಕೌಲಿಂದ್ರ
ಮೆಟ್ಟೀ ಬೀಗವ ಕರೀದಾನೆ[೨೭]
ಮೆಟ್ಟೀ ಬೀಗವ ಕರಿದಾನೆ ಕೌಲಿಂದ್ರ
ಮುಚ್ಚೀಳ ತೆಗದೇ ಕಡಽಗಿಟ್ಟೇ
ಮುಚ್ಚೀಲ ತೆಗದೇ ಕಡಗಿಟ್ಟೆ ಕೌಲಿಂದ್ರ
ಪಟ್ಟೆ ಜೋತರವ ನೆರಽದುಟ್ಟೇ
ಪಟ್ಟೆ ಜೋತರವ ನೆರದುಟ್ಟೇ ಕೌಲಿಂದ್ರ
ಮುತ್ತಿನ ನೆರಿಯಂಗಿ ಬುಜಕಿಟ್ಟೇ
ಮುತ್ತಿನ ನೆರಿಯಂಗಿ ಬುಜಕಿಟ್ಟೇ ಕೌಲಿಂದ್ರ
ಮುತ್ತನ ಮುಂಡೆಸವ ತಲೆಽಸುತ್ತೇ
ಮುತ್ತನ ಮುಂಡೆಸವ ತಲೆಸುತ್ತೇ ಕೌಲಿಂದ್ರ
ಸಾಲೇ ಹಚ್ಚಡವ ಹೊಗಲೀಗೆ
ಸಾಲೇ ಹಚ್ಚಡವ ಹೊಗಲೀಗೆ ಕೌಲಿಂದ್ರ
ನಿಡವೀಗೆ ನೈವಳವಾ ಇಡಽವಾನೆ
ನಿಡವೀಗೆ ನೈವಳವಾ ಇಡವಾನೆ ಕೌಲಿಂದ್ರ
ಬೆರಳೀಗುಂಗಿಲವ ಇಡಽವಾನೆ
ಬೆರಳೀಗುಂಗಿಲವ ಇಡವಾನೆ ಕೌಲಿಂದ್ರ
ಪೆಟ್ಟಗಿ ಬಾಯಲ್ಲೇ ಮಡಽಗಾನೆ
ಪೆಟ್ಟಗಿ ಬಾಯಲ್ಲೇ ಮಡಗಾನೆ ಕೌಲಿಂದ್ರ
ಮೆಲ್ಗೆಂದು ಕೆಳಗೆ ಇಳಽದಾನೆ
ಮೆಲ್ಗೆಂದು ಕೆಳಗೆ ಇಳದಾನೆ ಕೌಲಿಂದ್ರ
ಮಾಳಗ್ಗಿಂದ್ಹೆರಗೆ ಬರಽವಾನೆ
ಮಾಳಗ್ಗಿಂದ್ಹೆರಗೆ ಬರವದ್ನು ನಾರೆಣದ್ಯೆವ
ಕುಳತಾ ಗದ್ದಗಿಯಾ ಜಡದೆದ್ದೇ
ನಾರೆಣದ್ಯೆವಾ ಮುಂದಾಗಿ ಕೌಲಿಂದ್ರ ಹಿಂದಾಗಿ
ರಾಜಂಗ್ಯ ಮೆಟ್ಟ ಇಳಽದಾರೆ
ರಾಜಂಗ್ಯ ಮೆಟ್ಟ ಇಳದಾರವ್ರಿಬ್ಬರು
ಬೆಳ್ಳೀಯಾ ರತವಾ ನೆಗದ್ಹತ್ತೇ
ಬೆಳ್ಳೀ ರತವಾ ನೆಗದ್ಹತ್ತಿ ನಾರೆಣದ್ಯೆವಾ

೨೭. ತೆಗೆದಾನೆ

ರತದಾ ಕೀಲ್ಗಳ ತಿರಽಗಿಸೇ
ರತದಾ ಕೀಲ್ಗಳ ತಿರಗಿಸೀ ಬಾವಾನೆಂಟಾ
ಬಟ್ಟರರಮನಗೆ ನೆಡಽದಾರೆ
ಬಟ್ಟರರಮನಗೆ ನೆಡವದನ್ನು ಬಟ್ಟರು
ಬಾಳೀ ಬನದಲ್ಲೇ ಇರಽವಾರೆ
ಬಾಳೀ ಬನದಲ್ಲೇ ಇರವಾರು ಬಟ್ಟರು
ತಿರಗಿ ನೋಡಿದರೆ ಹೆರಗೊಮ್ಮೆ
ಯಾವೂರರಸೊ ಏನೋ ಯಾವೂರ ದೊರೆಯೊಯೇನೊ
ನಮ್ಮೂರ ರತವೇರಿ ಬರಽತಾರೆ
ನಮ್ಮೂರ ರತವೇರಿ ಬರತಾರೆ ಅಂದಳೇ
ಗಡಗಡನಲ್ಲೇ ಹೆದಽರಾರೆ
ಗಡಗಡನಲ್ಲೇ ಹೆದರಾರೆ ಬಟ್ಟರು
ತನ್ನಲರಮನಗೆ ನೆಡಽದಾರೆ
ತನ್ನಲರಮನಗೆ ನೆಡದಾರೆ ಬಟ್ಟರು
ಮಡದೀಯ ಕರದೇ ನುಡೀಽ ಮಾತೇ
ಯಾವೂರರಸೋಯೇನೋ ಯಾವೂರ ದೊರೆಯೊಯೇನೊ
ನಮ್ಮೂರ ರತವೇರಿ ಬರಽತಾರೆ
ನಮ್ಮೂರ್ ರತವೇರಿ ಬರತಾರೆ ಮಡದೀಕೇಳೇ
ಇಂದೆ ನಮ ಜೀಂವ[೨೮] ಇರುವಾದಿಲ್ಲಾ
ಅಷ್ಟೊಂದು ಮಾತು ಕೇಳಿತು ಬಟ್ಟರ ಮಡದಿ
ಅರಗಿ ನೋಡಿದಳೆ ಹೆರಽಗೊಮ್ಮೆ
ಅರಗಿ ನೋಡಿದಳೆ ಹೆರಗೊಮ್ಮೆ ಮಡದಿ
ಆಗೊಂದು ಮಾತ ನುಡೀಽದಾಳೆ
ಕೌಲಿಂದ್ರನ ರಾಜೀಲೇ ಹೆಣ್ಣು ನೆರದದಿಯಂದೆ
ಸಕಣ ಸರವಳಿಗೇ[೨೯] ಬರಽತಾರೆ
ಸಕಣ ಸರವಳಿಗೇ ಬರತಾರೆ ದ್ಯೆವರೇ
ಮಳ್ಳೇನು ನೀವು ಮರಳೇನೆ
ಮಳ್ಳೇನೆ ನೀವು ಮರಳೇನೆ ಅಂದೇಳೇ
ತಡದಳೆ ಚಂಬಗಲೆ[೩೦] ಉದಕಾವ
ತಡದಳೆ ಚಂಬಗಲೆ ಉದಕಾವ ಬಾವಾನೆಂಟ
ಹೋಗಿ ರಾಜಂಗ್ಳಾ ನೆಗದ್ದತ್ತೆ
ಹೋಗಿ ರಾಜಂಗ್ಳ ನೆಗದ್ದತ್ತೆ ಬಾವಾನೆಂಟಾ

---

೨೮. ಜೀವ　　೨೯. ಶಕುನ ಸಾರಾವಳಿ, ತಾರಾಬಲ　　೩೦. ತಂಬಿಗೆಯಲ್ಲಿ

ರತಗಿಂದು ಕೆಳಗೆ ಇಳsದಾರೆ
ರತಗಿಂದು ಕೆಳಗೆ ಇಲವಾರೆ ಬಾವನೆಂಟಾ
ಬಂದೀ ಬಾಗಲ್ಲೇ ನಿಲsವಾರೆ
ಬಂದೀ ಬಾಗಲ್ಲೇ ನಿಲವದ್ನು ಬಟ್ಟರಮಡದಿ
ಕೊಟ್ಟಳೆ ಕಯ್ಯಾ ಉದಕವೆ
ಕೊಟ್ಟುದಕವ ತಟ್ಟನೆ ತಡದರೆ
ಕಾಲೂ ಸಿರಿಮೊಕವ ತೊಳದಾರೆ
ಕಾಲು ಸಿರಿಮೊಕವ ತೊಳದರವರಿಬ್ಬರು
ಮಾಳೂಗಿ ಒಳಗೆ ನೆಡsದಾರೆ
ಮಾಳೂಗಿ ಒಳಗೆ ನೆಡದಾರವರಿಬ್ಬರು
ಪಟ್ಟೆ ಮಂಚದಲೆ ಕುಳsತಾರೆ
ಪಟ್ಟೆ ಮಂಚದಲೆ ಕುಳವಾರೆ ನಾರೆಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಆಗೊಂದು ಮಾತಾ ಏನಂದಿ ನುಡಿದಾನೆ
ಸಕಣ ಸರವಳಿಗೆ ಒದಗೇ ಬಂದೊ
ಸಕಣ ಸರವಳಿಗೆ ಒದಗ್ ಬಂದು ಬಟ್ಟರೆ
ಒಳ್ಳೇತಾನೇಳಿ ಸಕಣವಾ
ಅಷ್ಟೊಂದು ಮಾತಾ ಕೇಳಾರೇ ಬಟ್ಟಾರು
ಮಾಳೂಗಿ ಒಳಗೆ ನೆಡsದಾರೆ
ಮಾಳೂಗಿ ಒಳಗೆ ನೆಡದಾರೆ ಒಬ್ಬರು
ಕಟ್ಟೀನ್ನೊತ್ತಗಿಯಾ ಬಿಡಸಾರೆ
ಕಟ್ಟೀನೊತ್ತಗಿಯಾ ಬಿಡಸಾರೆ ಬಟ್ಟರು
ವಾಲೆ ಹೊತ್ತಗಿಯಾ ತರೋವಾರೆ
ವಾಲೆ ಹೊತ್ತಗಿಯಾ ತರುವಾರು ಬಟ್ಟರು
ಚಕ್ರಪಡಿಹೊಯ್ದೇ[೩೧] ಕುಲsತಾರೆ
ಚಕ್ರಪಡಿಹೊಯ್ದೆ ಕುಳತಾರೆ ಬಟ್ಟರು
ವಾಲೆ ಹೊತ್ತಗಿಯಾ ಬಿಡsಸೋದೆ
ವಾಲೆ ಹೊತ್ತಗಿಯಾ ಬಿಡಸೋದಿ ಬಟ್ಟರು
ಆಗೊಂದು ಮಾತಾ ನುಡೀದಾರೆ
ಆಗೊಂದು ಮಾತಾ ಏನಂದಿ ನುಡಿದಾರೆ
ಮಾದೇವಿ ನಾರೆಣ್‌ದ್ಯೆವಾ ವರಣಕ್ಕೋ
ಮಾದೇವಿ ನಾರೇಣದ್ಯೆವ ವರಣಕ್ಕು ಕೌಲಿಂದ್ರ

೩೧. ಪದ್ಮಾಸನ ಹಾಕಿ

ಸವ್‌ಬದ್ರಿ ನಿನಗೆ ವರಣಿಲ್ಲ
ಅಷ್ಟೊಂದು ಮಾತಾ ಕೇಳಾನೆ ನಾರೆಣದ್ಯೆವಾ
ಆಗೊಂದು ಮಾತಾ ನುಡೀಽದಾನೆ
ಮಾತ ತಪ್ಪದರು ನೀತಿಗ್ ತಪ್ಪುವನಲ್ಲ
ಮತ್ತೊಂದ್ವೊಲೀಯ ಮಗಚೋದಿ[೩೨]
ಮತ್ತೊಂದ್ವೊಲಿಯ ಮಗಚೋದಿ ಅಂಬದ್ನು
ಮತ್ತೊಂದ್ವೊಲೀಯ ತೆಗಽದೋದೆ
ಮತ್ತೊಂದ್ವೊಲಿಯ ತೆಗದೋದಿ ಬಟ್ಟರು
ಆಗೊಂದು ಮಾತಾ ನುಡೀದಾರೆ
ಆಗೊಂದು ಮಾತಾ ಏನಂದಿ ನುಡಿದಾರೆ
ನಾರೇಣದ್ಯೆವಗೆ ಮಾದೇವಿ ವರಽಣಕ್ಕೊ
ನಾರೇಣದ್ಯೆವಗೆ ಮಾದೇವಿ ವರಣಕ್ಕು ಕಪ್ಲಿಂದ್ರ
ಸವ್ಬದ್ರಿ ನಿನಗೆ ವರಽಣಿಲ್ಲ
ಅಷ್ಟೊಂದು ಮಾತಾ ಕೇಳಾನೆ ನಾರೆಣದ್ಯೆವಾ
ಸಿಟ್ಟೊ ಕ್ವೊಪದಲಿ ನುಡೀದಾನೆ
ಮಳ್ಳೊ ಬಟ್ಟರಗೆ ಎಟ್ಟೊ ಸಲ ಹೇಳ್ಬೇಕೆ
ಮತ್ತೊಂದ್ವೊತ್ತಗಿಯಾ ಬಿಡಽಸೋದಿ
ಮತ್ತೊಂದ್ವೊತ್ತಗಿಯಾ ಬಿಡಸೋದಿ ಅಂದ್ಹೇಳಿ
ಕಣ್ಣು ಸನ್ನದಲಿ[೩೩] ನುಡೀದಾನೆ
ಕಣ್ಣು ಸನ್ನದಲಿ ನುಡುವದ್ನು ಬಟ್ಟರು
ಮತ್ತೊಂದ್ವೊಲೀಯಾ ಬಿಡಸೋದೆ
ಮತ್ತೊಂದ್ವೊಲೀಯ ಬಿಡಸೋದಿ ಬಟ್ಟರು
ಮಾದೇವಿ ನಾರೆಣ್‌ದ್ಯೆವ್ಗೆ ವರಣಕ್ಕೊ
ಮಾದೇವಿ ನಾರೆಣ್‌ದ್ಯೆವ್ಗೆ ವರಣಕ್ಕು ಕೌಲಿಂದ್ರ
ಸವ್ಬದ್ರಿ ನಿನಗೆ ವರಣಕ್ಕೊ
ಸವ್ಬದ್ರಿ ನಿನಗೆ ವರಣಕ್ಕು ಅಂದೇಳಿ
ಉಸವಂತ ಬಟ್ಟರು ನುಡೀಽದಾರೆ
ಉಸವಂತ ಬಟ್ಟರು ನುಡುವದ್ನು ನಾರೆಣದ್ಯೆವಾ
ಬಟ್ಟರಿಗೆ ಹೊನ್ನ ಕೊಡಽವಾನೆ
ಬಟ್ಟರಿಗೆ ಹೊನ್ನ ಕೊಡವದ್ನು ಬಟ್ಟರು
ಎರಡು ಕಯ್ಯೊಡ್ಡಿ ತಡಽದಾರೆ
ಎರಡು ಕಯ್ಯೊಡ್ಡಿ ತಡವದ್ನು ಬಾವಾನೆಂಟಾ

೩೨. ತಿರುಗಿ ಓದಿ ೩೩. ಕಣ್ಣು ಸನ್ನೆಯಲ್ಲಿ

ಕುಳತಾ ಗದ್ದಗಿಯಾ ಜಡದೆದ್ದಿ
ಕುಳತಾ ಗದ್ದಗಿಯಾ ಜಡದೆದ್ದಿ ಬಾವಾನೆಂಟಾ
ಮಾಳಗ್ಗಿಂದ್ಹೆರಗೆ ಬರꞈವಾರೆ
ಮಾಳಗ್ಗಿಂದ್ಹೆರಗೆ ಬರುವರು ಬಾವಾನೆಂಟಾ
ರಾಜಂಗಳ ಮೆಟ್ಟ ಇಳꞈವಾರೆ
ರಾಜಂಗ್ಲ ಮೆಟ್ಟ ಇಳದಾರವರಿಬ್ಬರು
ಬೆಳ್ಳಿಯ ರತವಾ ನೆಗꞈದ್ಹತ್ತೆ
ಬೆಳ್ಳಿಯ ರತವಾ ನೆಗದ್ಹತ್ತವರಿಬ್ಬರು
ರಾಜೋಮಾರ್ಗದಲೆ ಬರꞈವಾರೆ
ರಾಜಮಾರ್ಗದಲೆ ಬರವಾರವರಿಬ್ಬರು
ಕಪ್ಲಿಂದ್ರನರಮನಗೆ ಬರꞈವಾರೆ
ಕಪ್ಲಿಂದ್ರನರಮನಗೆ ಬರವಾರವರಿಬ್ಬರು
ಹೋಗಿ ರಾಜಂಗ್ಳ ನೆಗದ್ಹತ್ತೆ
ಹೋಗಿ ರಾಜಂಗ್ಳ ನೆಗದ್ಹತ್ತೇ ಅವರಿಬ್ಬರು
ರತಗಿಂದೇ ಕೆಳಗೆ ಇಳꞈದಾರೆ
ರತಗಿಂದೇ ಕೆಳಗೆ ಇಳದಾರವರಿಬ್ಬರು
ಮಾಳೂಗಿ ಒಳಗೆ ನೆಡꞈದಾರೆ
ಮಾಳೂಗಿ ಒಳಗೆ ನೆಡವದ್ನು ನಾರೆಣದ್ಯೆವ
ಪಟ್ಟೆಮಂಚದಲೆ ಕುಳꞈತಾನೆ
ಪಟ್ಟೆಮಂಚದಲಿ ಕುಳುವದ್ನು ಕಪ್ಲಿಂದ್ರ
ತನ್ನ ತಾಯವ್ವಿಯ ಕರꞈದಾನೆ
ತನ್ನ ತಾಯವ್ವಿ ಕರವದ್ನು ತಾಯವ್ವಿ
ಓಯೆಂದೇ ಹೆರಗೆ ಬರꞈವಾಳೆ
ಓಯೆಂದಿ ಹೆರಗೆ ಬರವಾಳು ಕಪ್ಲಿಂದ್ರನ ತಾಯಿ
ಏನು ಕಾರಣಲಿ ಕರದೀಯೋ
ಏನು ಕಾರಣಲಿ ಕರದೀಯೋ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಬ್ರಿಸ್ತಾರ ಬಿದಗೀಯೇ ಶುಕ್ರಾರ ತದಗೀಯೇ
ಸಣಿಯಾರ ಮಾದೇವಿಯಾ ಮದꞈವಿಯೇ
ಸಣಿಯಾರ ಮದೇವಿಯಾ ಮದವಿ ತಾಯೇ ಕೇಳೇ
ಮದವಿ ಮಂಗಲಕೆ ಅನೂꞈಕೊಳ್ಳೆ
ಮದವಿ ಮಂಗಲಕೆ ಅನುಕೊಳ್ಳೆ ತಾಯಿನ್ನು
ಮಂಗಲಕರವೊಂದ ಮುಗದೇಬತ್ತೆ

ಮಂಗಲಕರವೊಂದ ಮುಗದ್ಬತ್ತೇ ಅಂದೇಳಿ
ಹಣ್ಣಡಕೆ ಬೆಳಿಯೆಲಿಯಾ ತಡಽದಾನೆ
ಕಣ್ಣಡಕೆ ಬೆಲಿಯೆಲಿಯಾ ತಡದಾನೆ ಕಪ್ಲಿಂದ್ರ
ಮಾಳಗ್ಗಿಂಡ್ಹೆರಗೆ ಬರಽವಾನೆ
ಮಾಳಗ್ಗಿಂಡ್ಹೆರಗೆ ಬರವಾನೆ ಕಪ್ಲಿಂದ್ರ
ರಾಜಂಗ್ಳ ಮೆಟ್ಳ ಇಳಽದಾನೆ
ರಾಜಂಗ್ಳ ಮೆಟ್ಳ ಇಳದಾನೆ ಕಪ್ಲಿಂದ್ರ
ಮಾರಯ್ರ ಕೇರಿಗಾಗಿ ನೆಡಽದಾನೆ
ಮಾರಯ್ರ ಕೇರಿಗಾಗಿ ನೆಡದಾನೆ ಕಪ್ಲಿಂದ್ರ
ಹೋಗಿ ಬಾಗಲ್ಲೇ ನಿಲಽವಾನೆ
ಹೋಗಿ ಬಾಗಲ್ಲೇ ನಿಲವಾನೆ ಕಪ್ಲಿಂದ್ರ
ಮಾರಯ್ರೀಗೊಂದೀಳ್ಯಾ ಕೊಡಽವಾನೆ
ಬ್ರಿಸ್ತಾರ ಬಿದಗಿಯೋ ಶುಕ್ರಾರ ತದಗೀಯೋ
ಸಣಿಯಾರ ಮಾದೇವಿ ಮದಽವಿಯೋ
ಸಣಿಯಾರ ಮಾದೇವಿ ಮದವೀಯೋ ಮಾರಾಯ್ರೆ
ಚಪ್ಪರಿಕ್ವದಕೆ ಬರಽಬೇಕೆ
ಚಪ್ಪರಿಕ್ವದಕೆ ಬರಬೇಕು ಅಂದೇಳಿ
ಅಲ್ಲೀಗಿಂದ್ ಮುಂದೆ ನೆಡಽದಾನೆ
ಅಲ್ಲೀಗಿಂದ್ ಮುಂದೆ ನೆಡದಾನೆ ಕಪ್ಲಿಂದ್ರ
ನಾರ‍್ಯರ ಕೇರಿಗಾಗೇ ಬರಽವಾನೆ
ನಾರ‍್ಯರ ಕೇರಿಗಾಗೇ ಬರವಾನೆ ಕಪ್ಲಿಂದ್ರ
ಬಂದೀ ಬಾಗಲ್ಲೀ ನಿಲಽವಾನೆ
ಬಂದೀ ಬಾಗಲ್ಲೀ ನಿಲವಾನೆ ಕಪ್ಲಿಂದ್ರ
ನಾರೀಯರೀಗೊಂದೀಳ್ಯ ಕೊಡಽವಾನೆ
ಬ್ರಿಸ್ತಾರ ಬಿದಗೀಯೇ ಶುಕ್ರಾರ ತದಗೀಯೇ
ಸಣಿಯಾರ ಮಾದೇವಿ ಮದಽವಿಯೇ
ಸಣಿಯಾರ ಮಾದೇವಿ ಮದವೀಯೇ ನಾರ‍್ಯೋರೇ
ಅಕ್ಕೀಗೇರ‍್ವದಕೆ ಬರಽಬೇಕೇ
ಅಕ್ಕೀಗೇರ‍್ವದಕೆ ಬರಬೇಕು ಅಂದೇಳಿ
ನಿಸ್ತ್ರಿಯರೀಗೊಂದೀಳ್ಯ ಕೊಡಽವಾನೆ
ನಿಸ್ತ್ರೀಯರೀಗೊಂದೀಳ್ಯ ಏನಂದಿ ಕೊಡವಾನೆ
ನಾಳೆ ನಮ್ಮನೆಗೆ ಬರಽಬೇಕೆ
ಬ್ರಿಸ್ತಾರ ಬಿದಗೀಯೇ ಶುಕ್ರಾರ ತದಗೀಯೇ

ಸಣಿಯಾರ ಮಾದೇವಿ ಮದಽವಿಯೇ
ಸಣಿಯಾರ ಮಾದೇವಿ ಮದವೀಯೇ ನಿಸ್ತ್ರಿಯರೆ
ಸೇಡಿ ಬರವದಕೆ ಬರಽಬೇಕೆ
ಕಿಲಸಿ ಕುಂಬರ ಮತ್ತೆ ಅಸಗರಂವ್ಗೆ
ಒಟ್ಟಾಂಗೋದೀಳ್ಯ ಕೊಡಽವಾನೆ
ಕುಂಬುಕುಂಬಾಗೆಯ್ಯೊ ಕುಂಬನ ಮುಚ್ಚಳಗೆಯ್ಯೊ
ಅದಕೊಪ್ಪುದೆರಡು ರತಿಯಾಗೆಯ್ಯೊ
ಅದಕೊಪ್ಪುದೆರಡಾ ರತಿಯಾ ಗೆಯ್ಯೊ ಕುಂಬಾರ
ತಂದಿರಸೋ ನಮ್ಮಾ ಜಗಽಲ್ಯಲ್ಲೇ
ತಂದಿರಸೋ ನಮ್ಮಾ ಜಗಲ್ಯಲ್ಲೇ ಅಂದೇಳಿ
ಜಪ್ಪಿ ಅಂಗಡಿಗೆ ನೆಡಽದಾನೆ
ಜಪ್ಪಿ ಅಂಗಡಿಗೆ ನೆಡದಾನೆ ಕಪ್ಲಿಂದ್ರ
ಹೋಗಿ ಬಾಗಲ್ಲೆ ನಿಲಽವಾನೆ
ಹೋಗಿ ಬಾಗಲ್ಲೇ ನಿಲವಾನೆ ಕಪ್ಲಿಂದ್ರ
ಅಂಗಡಿ ಸೆಟ್ಟಿಯಂದೆ ದೆನೀಽದೋರೆ
ಒಂದ ಕರವಿಗೆ ಬಂದನೆ ಅಂಗಡಿಸೆಟ್ಟಿ
ನಿಂದನೆ ಕಪ್ಲಿಂದ್ರನ ಒಡ್ಽನಲ್ಲೆ
ನಿಂದನೆ ಕಪ್ಲಿಂದ್ರನ ಒಡನಲ್ಲಿ ಅಂಗಡಿಸೆಟ್ಟಿ
ಏನು ಕಾರಣದಿ ಕರಽದೀಯೋ
ಬ್ರಿಸ್ತಾರ ಬಿದಗಿಯೋ ಶುಕ್ರಾರ ತದಗೀಯೋ
ಸಣಿಯಾರ ಮಾದೇವಿ ಮದಽವಿಯೋ
ಸಣಿಯಾರ ಮಾದೇವಿ ಮದವೀಯೋ ಅಂಗಡಿಸೆಟ್ಟಿ
ಜವಳೀಯಾ ದಿಂಡಾ ಕೊಡಽಬೇಕೋ
ಅಷ್ಟೊಂದು ಮಾತಾ ಕೇಳಾನಂಗಡಿಶೆಟ್ಟಿ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡದಾನಂಗಡಿಸೆಟ್ಟಿ
ಜವಳೀಯ ದಿಂಡಾ ತರಽವಾನೆ
ಜವಳೀಯ ದಿಂಡಾ ತರವಾನಂಗಡಿಶೆಟ್ಟಿ
ಕಪ್ಲಿಂದ್ರನ ಬಲಗಯ್ಲಿ ಕೊಡಽವಾನೆ
ಕಪ್ಲಿಂದ್ರನ ಬಲಗಯ್ಲಿ ಕೊಡವದ್ನು ಕಪ್ಲಿಂದ್ರ
ಎರಡೂ ಕಯ್ಯೊಡ್ಡಿ ತಡಽದಾನೆ
ಎರಡೂ ಕಯ್ಯೊಡ್ಡಿ ತಡದಾನೆ ಕಪ್ಲಿಂದ್ರ
ಅದಕಲ್ಲೆ ಹಣವಾ ಸಲಽಸಾನೆ

ಅದಕಲ್ಲೆ ಹಣವಾ ಸಲಸಾನೆ ಕಪ್ಲಿಂದ್ರ
ಚಿನವರನರ[೩೪]ಮನಗೆ ನೆಡsದಾನೆ
ಚಿನವರನರಮನಗೆ ನೆಡದಾನೆ ಕಪ್ಲಿಂದ್ರ
ಹೋಗಿ ಬಾಗಲ್ಲೇ ನಿಲsವಾನೆ
ಹೋಗಿ ಬಾಗಲ್ಲೇ ನಿಲವದ್ನು ಒಳಗಿದ್ದ
ಚಿನವಾರ ಹೆರಗೆ ಬರsವಾನೆ
ಚಿನವರ ಹೆರಗೆ ಬರsವಾನೆ ಕಪ್ಲಿಂದ್ರ
ಆಗೊಂದು ಮಾತಾ ನುಡೀದಾನೆ
ಇಂದ್ರಲೋಕ ಚಿನವಾರ ಇಂದೇ ಗದ್ದಗಿ ಹೂಡೋ
ಬಂದಿ ಮಣಿಸರವ ಗೆಯೀಕೊಡೋ
ಬಂದೀ ಮಣಿಸರವ ಗೆಯಿಕೊಡೋ ನಮ್ಮನಿಯಾ
ಮುದ್ದೂ ಮಾದೇವಿಯಾ ಮದsವಿಯೋ
ನಾಗ್‌ಲೋಕದ ಚಿನವಾರ ಈಗೇ ಗದ್ದಗಿ ಹೂಡೋ
ತೋಳ್ಬಳೆ ಚಿಂತಕವ ಗೆಯೀಕೊಡೋ
ತೋಳ್ಬಳೆ ಚಿಂತಕವಾ ಗೆಯೀಕೊಡೋ ನಮ್ಮನಿಯಾ
ಮುದ್ದೂ ಮಾದೇವಿಯಾ ಮದsವಿಗೆ
ಅಷ್ಟೊಂದು ಮಾತಾ ಕೇಳಾನೇ ಚಿನವಾರ
ಮಾಳೂಗಿ ಒಳಗೆ ನೆಡsದಾನೆ
ಇಂದ್ರಲೋಕ ಚಿನವಾರ ಇಂದೇ ಗದ್ದಗಿ ಹೂಡೇ
ಬಂದೀ ಮಣಿಸರವ ಗೆಯೀದಾನೆ
ನಾಗ್‌ಲೋಕದ ಚಿನವಾರ ಈಗೇ ಗದ್ದಗಿ ಹೂಡೇ
ತೋಳ್ಬಳೆ ಚಿಂತಕವಾ ಗೆಯೀsದಾನೆ
ತೋಳ್ಬಳೆ ಚಿಂತಕವಾ ಗೆಯಿದಾನೆ ಚಿನವಾರ
ಮಾಳುಗ್ಗಿಂದ್ಹೆರಗೆ ಬರsವಾನೆ
ಮಾಳುಗ್ಗಿಂದ್ಹೆರಗೆ ಬರನಾನೆ ಚಿನವಾರ
ಕಪ್ಲಿಂದ್ರನ ಬಲಗಯ್ಲಿ ಕೊಡವಾನೆ
ಕಪ್ಲಿಂದ್ರನ ಬಲಗಯ್ಲಿ ಕೊಡವದ್ನು ಕಪ್ಲಿಂದ್ರ
ಎರಡೂ ಕೈಯೊಡ್ಡಿ ತಡsದಾನೆ
ಎರಡೂ ಕೈಯೊಡ್ಡಿ ತಡದಾನೆ ಕಪ್ಲಿಂದ್ರ
ಅದಕಲ್ಲೆ ಹಣವಾ ಸಲsಸಾನೆ
ಅದಕಲ್ಲೆ ಹಣವಾ ಸಲಸಾನೆ ಕಪ್ಲಿಂದ್ರ
ತನ್ನಲರಮನಗೆ ಬರsವಾನೆ
ತನ್ನಲರಮನಗೆ ಬರವಾನೆ ಕಪ್ಲಿಂದ್ರ

---

೩೪. ಅಕ್ಕಸಾಲಿ

ಬಂದೀ ಬಾಗಲ್ಲೇ ನಿಲsವಾನೆ
ಬಂದೀ ಬಾಗಲ್ಲೇ ನಿಲವದ್ನು ತಾಯವ್ವಿ
ತಡದಳೆ ಚಂಬಗಲಿ ಉದಕವ
ತಾಯೀ ಕೊಟ್ಟುದಕವ ತಟ್ಟನೆ ತಡದಾನೆ
ಕಾಲು ಸಿರಿಮೊಕವ ತೊಳsದಾನೆ
ಕಾಲು ಸಿರಿಮೊಕವ ತೊಳದಾನೆ ಕಪ್ಲಿಂದ್ರ
ಮಾಳೂಗಿ ಒಳಗೆ ನೆಡsದಾನೆ
ಮಾಳೂಗಿ ಒಳಗೆ ನೆಡದಾನೆ ಕಪ್ಲಿಂದ್ರ
ಜಪ್ಪೀಯಾ ದಿಂಡಾ ಮಡsಗಾನೆ
ಜಪ್ಪೀಯಾ ದಿಂಡಾ ಮಡಗ್ವದ್ನು ಕಪ್ಲಿಂದ್ರನ ಮಲ್ಲೆ
ಮಾರಯ್ಯರು ಬಂದೆ ನೆರsದಾರೆ
ಮಾರಯ್ಯರು ಬಂದೆ ನೆರದಾರೆ ಮಾರಯ್ರು
ಮುತ್ತನ ಚಪ್ಪರವ ಇಡsವಾರೆ
ಮುತ್ತನ ಚಪ್ಪರವ ಇಡವಾರು ಮಾರಯ್ರು
ಮಾಯ್ನೆಲಿ ತ್ವೊರಣವ ಗೆಯೀದಾರೆ
ಮಾಯ್ನೆಲಿ ತ್ವೊರಣವ ಗೆಯಿದಾರೆ ಮಾರಯ್ರು
ಮೂಡಣ ಬಾಗ್ಲಲ್ಲಿ ನಿಲಸಾರೆ
ಮೂಡ್ಲಣ ಬಾಗ್ಲಲ್ಲಿ ನಿಲಸ್ವದ್ನು ಕಪ್ಲಿಂದ್ರನ್ ಮಲ್ಲಿ
ನಾರಿಯರು ಬಂದೆ ನೆರsದಾರೆ
ನಾರಿಯರು ಬಂದೆ ನೆರವದ್ನು ಕಪ್ಲಿಂದ್ರ
ಮಾಳೂಗಿ ಒಳಗೆ ನೆಡsದಾನೆ
ಚಪ್ಪರಿಕ್ಕದ ಮನೆ ಚೆಂದ ತಾಯೀತಂದೆ
ಅಂಗಳಕು ಒಳಗೂ ತಿರsಗಾಡೆ
ಅಂಗಳಕು ಒಳಗೂ ತಿರಗಾಡೆ ಕಪ್ಲಿಂದ್ರ
ಸೆಣ್ಣಕ್ಕಿ ಮುಡಿಯಾ ಸೊರsಗಾನೆ
ಎತ್ವರೆತ್ತೀರೆ ಗೇರ್ವರು ಗೇರೀರೆ
ಮಿಕ್ಕಿದ್ದರುದ್ದಾ ಒಡೀಯಾರೆ
ಮಿಕ್ಕಿದ್ದರುದ್ದಾ ಒಡಿಯಾರೆ ನಮ್ಮನಿಯಾ
ಮುದ್ದೂ ಮಾದೇವಿಯಾ ಮದsವಿಗೆ
ಎತ್ವರೆತ್ತಾರೆ ಗೇರ್ವರು ಗೇರಾರೆ
ಮಿಕ್ಕಿದ್ದರುದ್ದಾ ಒಡದಾರೆ
ಮಿಕ್ಕಿದ್ದರುದ್ದಾ ಒಡವದ್ನು ಕಪ್ಲಿಂದ್ರನಮಲ್ಲಿ
ನಿಸ್ತ್ರಿಯರು ಬಂದೆ ನೆರsದಾರೆ

ಸೇಡಿ ಬಟ್ಟುವ ರೂಡಿ ತಾ ತಡಕಂಡೆ
ಮೂಡನ ದೊಡ್ಡೊಳಗೆ ನೆಡಽದಾರೆ
ಮೂಡನ ಗ್ವೊಡೆ ಸೂಸ್ತ್ರ ತಡಽದಾರೆ
ಮೂಡಣ ಗ್ವೊಡೆ ಸೂಸ್ತ್ರ ತಡದಾರೆ ನಿಸ್ತ್ರಿಯರು
ಮುತ್ತೀನ್ಹಸಗರವಾ ಬರಽದಾರೆ
ಚವಕವ ತುಂಬಿ ಮಲಕೀನ ಕೊರಳೋರೆ
ಸೊಲಿಹಲ್ಲು[೩೫] ಸ್ವೊಗೀ ನೆರೀಯೋರೆ
ಸೊಲಿಹಲ್ಲು ಸ್ವೊಗೀ ನೆರಿಯೋರೆ ಕಾಜೀನ
ಬಳಿಯೋರೆ ತುಂಬೀ ಚವಕವಾ
ಮುತ್ತೀನ್ಹಸಗರವ ಕುಸಲದಿದ್ ಬರವರೆ
ಸುತ್ತೇ ಸೂಲ್ಯಮ್ಮನ[೩೬] ಪವಳೀಯೇ
ಸುತ್ತೇ ಸೂಲ್ಯಮ್ಮನ ಪವಳೀ[೩೭] ಮಂಟಪಸಾಲೆ
ಕುಸಲದ್ಹಸಗರವ ಬರಽದಾರೆ
ಕುಸಲದ್ಹಸಗರವ ಬರದಾರೆ ನಿಸ್ತ್ರೀಯರು
ಮಾಳಗ್ಗಿಂದ್ಹೆರಗೆ ಬರಽವಾರೆ
ಕುಂಬು ಕುಂಬಾಗಿದ ಕುಂಬನ ಮುಚ್ಚಳ ಗೆಯ್ದು
ಅದಕ್ಕೊಪ್ಪುದೆಯ್ದು ರತಿಯಾ ಗೆಯ್ದು
ಅದಕ್ಕೊಪ್ಪುದೆಯ್ದು ರತಿಗೆಯ್ದಾ ಕುಂಬಾರ
ತಂದಿಟ್ಟ ಅವರಾ ಜಗಽಲ್ಯಲ್ಲೇ
ತಂದಿಟ್ಟ ಅವರಾ ಜಗಲ್ಯಲ್ಲೇ ಅಸಗರಂವ[೩೮]
ಬಂದೀ ಬಾಗಲಲ್ಲೇ ನಿಲಽವಾನೆ
ಬಂದೀ ಬಾಗಲ್ಲೇ ನಿಲವಾನೆ ಅಸಗಾರಂವ
ಮುತ್ತನ ಮೇಲ್ಗಟ್ಟ ಬಿಡಽಸಾನೆ
ಮುತ್ತನ ಚಪ್ಪರ ಮುನ್ನೂರುಗಾವುದ್ದ
ಮುತ್ತನ ಸರಜಲ್ಲಿ ಬಿಡಽಸಾನೆ
ಹವಳದಾ ಚಪ್ಪರ ಹನ್ನೆರಡು ಗಾವುದ್ದ
ಹವಳದ ಸರಜಲ್ಲೀ ಬಿಡಽಸಾನೆ
ಮೇಲ್ಗಟ್ಟ ಕಟ್ಟಾನೆ ಮ್ಯೆನ್ ಹೂಂಗ ಬಿಡಸಾನೆ
ಅಲ್ಲೇ ರಂಗೋಲಿಯಾ ಬರಽದಾರೆ
ಅಲ್ಲೇ ರಂಗೋಲಿಯ ಬರದಾರೆ ಕಪ್ಲಿಂದ್ರನಮಲ್ಲೆ
ಬಿನ್ನಾಣಿಬಂದೆ ನೆರದಾನೆ
ಬಂದ ಬಿನ್ನಣಿಯ ಚಂದದಿಂದುಪಚರಿಸಿ

೩೫. ಹೊಳೆಯುವ ಹಲ್ಲು ೩೬. ಸೂರ್ಯ ೩೭. ಜಗಲಿ ೩೮. ಮಡಿವಾಳ

ಚಂದಣದ ಮಣಿಯಾ ಕುಳsಕೊಟ್ಟೇ
ಚಂದಣದ ಮಣಿಯಾ ಕುಳಕೊಟ್ಟೀ ಬಿನ್ನಣಿಗೆ
ರನ್ನದೊಂದೀಳ್ಯ ಮೆಲsಕೊಟ್ಟೇ
ಕೆಂದೀಯಾ ಸಗಣೀಯ ಅಂಗಯ್ಲಿ ತಡಕಂಡಿ
ಅಂದ ಚಂದದಲೆ ನೆಲsನುದ್ದೇ
ಅಂದ ಚಂದದಲೆ ನೆಲನುದ್ದೀ ತಾಯವ್ವಿ
ಅಂಕಣದಲಿ ಸೇಡಿ ಬರsದಾಳೆ
ಸಗಣೀ ಸಾರೀಸೇ ಸೇಡಿಯಾ ಹಲಿಹುಯ್ಯೇ
ತಾಯೇ ತಂದಿರಸೇ ತಳsಗಿಯೇ
ತಾಯೇ ತಂದಿರಸೇ ತಳಗೀಯ ತಿಂಗೀನಾ
ಕಾಯಾ ತಂದಿರಸೇ ಪಲದುಸ್ತ
ಸಗಣೀ ಸಾರೀಸೇ ಸೇಡೀಯಾ ಹಲಿಹುಯ್ಯೇ
ಅಕ್ಕಾ ತಂದಿರಸೇ ಚವsಕಾವೇ
ಅಕ್ಕಾ ತಂದಿರಸೇ ಚವಕದ ಮಣಿಯಾಮ್ಯೆನೆ
ಬಂದೀ ಕುಳತಾಳೆ ದೊರೆsಮಗಳೆ
ದೊಡ್ಡಕ್ಕೀ ಸೈಸೇ ಒಡ್ಡುವಿಲ್ಲವಂದಿ
ತಾಯಿ ತನಕಯ್ಯಾ ಸೆರಮುತ್ತೇ
ತಾಯಿ ತನಕಯ್ಯಾ ಸೆರಮುತ್ತ ಸೈಸಿಯ ಮಾಡೇ
ತುಂಬಂದಳೆ ತನ್ನಾ ಬಳಗಾವೇ
ಬಟಕಳ ಮಲ್ಲೂಗೇ ಚೊಟ್ಟೆಲ್ಲ ಪರಿಮಳ
ಪಟ್ಟೀಯನ್ವಾಸಿ ಕೊಯೀತಂದೇ
ಪಟ್ಟೀಯನ್ವಾಸಿ ಕೊಯಿತಂದಕ್ಕಾದೀರು
ಮುತ್ತೀನ ಗುಂಡಿಟ್ಟಿ ಅರsದಾರೆ
ಮುತ್ತನ ಗುಂಡಿಟ್ಟು ಅರದಾರೆ ಮಾದೇವಿಯಾ
ಮುತ್ನಂತ ಮಯ್ಗೆ ಚಿಗೂರೆಣ್ಣೆ
ಜಿಗರುದ್ದೀದ ಮಯ್ ಅಗರೀತೇ ಬೇಗರೀತೆ
ಎಳನಾಗನ್ಹೆಡಿಯೇ ಇಳsಗೀತೆ
ಎಳನಾಗನ್ಹೆಡಿಯೇ ಇಳಗೀತೆ ಮಾದೇವಿಯಾ
ಚಿಗರು ನೂರೊರುಸೇ ತಿರವಾಲೆ
ಮಂಟಪ ಕಟ್ಟೂಕೆ ನೆಂಟನ ಬರವೇಳಿ
ಎಂಟೂ ಚವಕದಲಿ ಮನೇಮಾಡೆ
ಎಂಟು ಚವಕದಲಿ ಮನೆಮಾಡ ಮಂಟಪ್ಪೂಡೇ
ನೆಡಗೆ ತಿದ್ದರಿಯೇ ಕಳಸವೇ

ಅಯ್ವರು ಬಾವದೀರು ತಾಳಿ ಬಂದಿಯ ನಿಟ್ಟೇ
ಜೋಡಿಲಿ ಕೊಡಪನವ ತಡಽದಾರೆ
ಜೋಡಿಲಿ ಕೊಡಪನ ತಡದಾರೆ ಬಾವಾದೀರು
ಮೂಡಣ್ಣೆಗ್ಗರಿಗೆ ನೆಡಽದಾರೆ
ಮೂಡಣ್ಣೆಗ್ಗರಿಗೆ ನೆಡದಾರೆ ಬಾವಾದೀರು
ಹೆಗ್ಗರಿ ತೊಡಿಯಲ್ಲೇ ನಿಲಽವಾರೆ
ಒಂದಡಕೊಂದೆಲೆ ಒಂದೂ ಏಳಿದ ಪಟ್ಟೀ
ಒಪ್ಪಿತ ಗಂಗಾತಾಯೆ ನಿನಽಚೇಚೆ[೩೯]
ಒಪ್ಪಿತ ಗಂಗಾತಾಯೆ ನಿನ ಚೇಜು ನಮಗೊಳ್ಳ
ತುಂಬೀಕೊಡೆ ಚಂಬೂ ಕೊಡಪನ
ತುಂಬೀ ಕೊಡೆ ಚಂಬೂ ಕೊಡಪನ ನಾವಿನ್ನು
ತುಂಬಿತೋ ಕೇಲು[೪೦] ಕಳಽಸಕೆ
ತುಂಬಿತೋ ಕೇಲು ಕಳಸಕೆ ಮಿಕ್ಕಿದ ನೀರು
ಹಾಲಿ ಸಸಿಗ್ಹೊಯ್ದೇ[೪೧] ಸಲಽಗೂವೊ[೪೨]
ಹಳ್ಳದ ತಡಿಯಲ್ಲಿ ನಿತ್ತೀ ಇರುವಾ ಗಂಗೆ
ಪುತ್ತೂಳಿ ಕೆಮಿಯಾ ಶಿಮಗಂಗೆ
ಪುತ್ತೂಲಿ ಕೆಮಿಯಾ ಶಿಮಗಂಗೆ ನೀ ಕೇಳೆ
ತುಂಬೀ ಕೊಡೆ ಚೆಂಬು ಕೊಡಽಪಾನ
ತುಂಬೀ ಕೊಡೆ ಚೆಂಬು ಕೊಡಪನ ನಾವಿನ್ನು
ತುಂಬೀತೋ ಕೇಲು ಕಳಽಸಕೆ
ತುಂಬೀತೋ ಕೇಲು ಕಳಸಕೆ ಮಿಕ್ಕಿದ ನೀರ
ಹಾಲೀ ಸಸಿಗ್ಹೊಯ್ದು ಸಲಽಗೂವೊ
ಹಳ್ಳದ ತಡಿಯಲ್ಲಿ ಹುಟ್ಟಿತೊ ಹಾಲಿ ಸೆಸಿ
ಕಂಡ್‌ಬನ್ನಿ ಮಾರಯ್ರೆ ನೆನಸೇ ಬನ್ನಿ
ಕಂಡ್‌ಬನ್ನಿ ಮಾರಯ್ರೆ ನೆನಸ್‌ಬನ್ನಿ ಅದಕೊಪ್ಪು
ಪಟ್ಟೀ ನುಗಲೊಂದ ತೊಡಸೇಽ ಬನ್ನಿ
ಹಾಲೀ ಸೆಸಿ ಬಂದೊ ಹೀಲಿ ಸತ್ತಗ ಬಂದೊ
ಆಯಾ ಬಾಗದಲೆ ಕೊಡೀಽ ಬಂದೇ
ಆಯಾ ಬಾಗದಲೆ ಕೊಡಿ ಬಂದಾಲೀಸೆಸಿಯಾ
ಮುತ್ತನ ಮಂಟಪಲೆ ನೆಡಽವಾರೆ
ತಾಳೀ ಬಂದೀಯಾ ತಾಯೀ ತಾ ತಡಕಂಡೇ
ಸುತ್ತನ ದೇವರಿಗು ಸರಽಣಂದೇ

೩೯. ಹಕ್ಕಿನ ಮರ್ಯಾದೆ   ೪೦. ಪಾತ್ರೆ   ೪೧. ಹಾಲುಗಿಡಕ್ಕೆ ಹೊಯ್ದು   ೪೨. ಸಲಹುವೆವು

ಸುತ್ತನ ದೇವರಿಗು ಸರಣಂದೇ ಮಾದೇವಿಯಾ
ತಾಯ್ ಬಂದಿ ಕಳಸ್ ನಿಡಗೇ ಅರsಗಾಳೆ
ಆಕಾಸದ್ವಣಿ ನೀರು ಭೂಮಿಯಾ ತಲನೀರೇ
ಆಕಿ ತಾಯವ್ವಿಯಾ ಕಳಸಾನೀರ ಮಿಂದಿನ್ನು
ಗ್ವೊಪಾಳರ ಸಿಸುವೇ ಬಳsದಾಳೆ
ಕಡಗಲ್ಲು ಕಡಗಲ್ಲು ಮಿಟಗಲ್ಲು ಪಾಸೀಣ
ನಿತ್ತೀ ಮೀವ್‌ಕಲ್ಲು ಪದಮಾಗಲ್ಲೇ
ನಿತ್ತೀ ಮೀವ್‌ಕಲ್ಲು ಪದಮಾಲ್ಲನ ಮ್ಯನೇ
ಉತ್ತುಮ್ಮರ ಮಗಳಾ ಜಳsಕಾವೇ
ಕುಪ್ಪರಗೀ ನೀರು ಉಕ್ಕೆದ್ದೀ ಕಾವಂಗೇ
ಈಳ್ಯವ ಇಟ್ಟೀ ಹದs ಮಾಡೆ
ಈಳ್ಯವ ಇಟ್ಟೀ ಹದಮಾಡ್ ಬಿರಸದ ನೀರ
ಮುದ್ದೂ ಮಾದೇವಿಯಾ ಜಳಕಾವೇ
ಬಳಮಿಂದ್ ಮಾದೇವಿಗೆ ಬಂದಿದೆ ಜವಳೀ ದಿಂಡೇ
ಮೂಡಣರಜಿಣರ ಜವಳೀಯೇ
ಮೂಡಣರಜಿಣರ ಜವಳೀ ದಿಂಡೀನಲ್ಲೇ
ಮಿಯ್ಯ ಚಳಿಯುದ್ದೇ ನೆರsದುಡಸೇ
ಹರವಣದಲ್ಲೇ ಹರಗೀ ಬಿದ್ದವೆ ಚಿನ್ನ
ಅರವತ್ತಕ್ಕೊಂದೂ ಕೊಳsಕೀಯೇ
ಅರವತ್ತಕ್ಕೊಂದು ಕೊಳಕೀ ಪಾವನಸರವ
ಅದನಿಡರೇ ದೊರಿಯಾ ಮಗಳೀಗೆ
ಅದ ನೀಡಿ ಇದ ನಿಡಿ ಮುಗಲು ಮುತ್ತನ ಸರವ
ಎಂಟೂ ಬಗತಲಿಯಾ ಪದsಕಾವೇ
ಎಂಟೂ ಬಗತಲಿಯಾ ಪದಕಾ ಪಾವನಸರವಾ
ಅದನಿಡರೇ ದೊರಿಯಾ ಮಗsಳಿಗೆ
ಉದಾಕಾ ಮಿಂದಳೆ ಪದಕಾವ ಇಟ್ಟಾಳೇ
ಪದಕಾನೀಯೆಂಬಾ ಕುದsರೀಯೇ
ಪದಕಾನೀಯೆಂಬಾ ಕುದರೀ ಹತ್ತೀಗಂಡೇ
ಬಂದೀ ಬಾಗಲ್ಲೇ ನಿಲsವಾಳೆ
ಹಿಂಗಾರಾ ಹೂಂಗನಟ್ ಸುಂಗಾರಾವಾಗಾಳೆ
ಉಂಗೀಲ ತುಂಬಿದಳೆ ಬೆರಳೀಗೆ
ಉಂಗೀಲ ತಂಬಿದಳೆ ಬೆರಳೀಗೆ ಮಾದೇವಿ
ಬಂದೀ ಬಾಗಲ್ಲೇ ನಿಲsವಾಳೆ

ಹಿಟ್ಟೀನಾರುತಿ ಪಟ್ಟೇ ಮೇಲುಗಟ್ಟೇ
ಇಪ್ಪತ್ತಂಕಣದ ಅರsಮನೆ
ಇಪ್ಪತ್ತಂಕಣದ ಅರಮನಿ ಮಾಳಗಿಲಿರುವಾ
ನಾರ್ಯರಾರತಿಯಾ ತರsವಾರೆ
ಹರವಾಣದಲ್ಲೇ ಹವಳಾರತಿ ಮಾಡೇ
ಹಾರೂವರ ಮಗಳೆ ಇದsನ್ನೊಡೆ
ಹಾರೂವರ ಮಗಳೆ ಇದನ್ನೊಡೆ ನಿರ್ಮಲತಾಯಿ
ಹಾರೂತಿರ್ ಗೆರಿಯಾ ಬರsದಾಳೆ
ಹರವಾಣದಲ್ಲೇ ಪುಟ್ಟೂ ಆರತಿ ಮಾಡೇ
ಸಿಟ್ಟೀಯರ ಮಗಳೆ ಇದsನ್ನೊಡೆ
ಸಿಟ್ಟಿಯರ ಮಗಳೆ ಇದನ್ನೊಡೆ ನಿರ್ಮಲತಾಯಿ
ಸಿಟ್ಟೂತಿರ ಗೆರಿಯಾ ಬರsದಾಳೆ
ಸಿಟ್ಟೂತಿರ ಗೆರಿಯಾ ಬರದಾಳೆ ಮಾದೇವಿ
ಆರೂತಿಗೊಮ್ಮೆ ಸರsಣಂದೆ
ಆರೂತಿಗೊಮ್ಮೆ ಸರಣಂದೇ ಮಾದೇವಿ
ತುಳಚೀ ಮುಂದ್ಹೋಗೆ ನಿಲsವಾಳೆ
ತುಳಚೀ ಮುಂದ್ಹೋಗಿ ನಿಲವದ್ನು ಕಪ್ಲಿಂದ್ರ
ದೇವರ ಪೂಜ್ಯಕೆ ಕುಳsತಾನೆ
ದೇವರ ಪೂಜ್ಯಕೆ ಕುಳವದ್ನು ಕಪ್ಲಿಂದ್ರ
ಹಣ್ಣೂ ಈಳ್ಯವ ಹರsಗಾನೆ
ಹಣ್ಣೂ ಈಳ್ಯವ ಹರಗಾನೆ ಕಪ್ಲಿಂದ್ರ
ದೂಪದೀಪೆಲ್ಲ ಕಸೀದಾನೆ
ದೂಪದೀಪೆಲ್ಲಾ ಕಸಿದಾನೆ ಕಪ್ಲಿಂದ್ರ
ಕಾಯೊಡದೇ ಕಯ್ಯ್ಯಾ ಮುಗೀsದಾನೆ
ಕಾಯೊಡದೇ ಕಯ್ಯ್ಯಾ ಮುಗದಾನೆ ಕಪ್ಲಿಂದ್ರ
ದೇವರಗಾರತಿಯಾ ಬೆಳsಗಾನೆ
ದೇವರಗಾರತಿಯಾ ಬೆಳಗಾನೆ ಕಪ್ಲಿಂದ್ರ
ಚೊಳಚೀ ತೀರತವ ಕುಡೀsದಾನೆ
ಚೊಳಚೀ ತೀರತವ ಕುಡಿದಾನೆ ಮಾದೇವಿ
ಚೊಳಚೀ ತೀರತವಾ ಕುಡೀsದಾಳೆ
ಚೊಳಚೀ ತೀರತವಾ ಕುಡಿದಾಳೆ ಮಾದೇವಿ
ಚೊಳಚಿ ಪರಸದವಾ ಮುಡೀದಾಳೆ
ಮಾಳಗಿ ಒಳಗೇ ಹಸಗಾರದ್ದಸಿಯಲ್ಲೇ

ಹಸರೂ ನೀಲದಾ ಮಣೀಯಿಟ್ಟೇ
ಹಸರೂ ನೀಲದಾ ಮಣಿಯಿಟ್ಟೇ ಮಾದೇವಿ
ಮಾಳೂಗಿ ಒಳಗೆ ನೆಡsದಾಳೆ
ಮಾಳೂಗಿ ಒಳಗೆ ನೆಡದಾಳೆ ಮಾದೇವಿ
ಮಣಿಯಾ ಮೈನೋಗಿ ಕುಳsತಾಳೆ
ಮಣಿಯಾ ಮೈನೋಗಿ ಕುಳವದ್ನು ತಾಯವ್ವಿ
ಮಾದೇವಿಗೆ ಸೈಸೀ ಇಡವಾಳೆ
ಸೈಸೀ ತಂಬ್ವರು ಜ್ವೊಕ್ಯಲ್ಲೇ ತುಂಬೀರೆ
ನೀವಿಟ್ ಹಸ್ತ್‌ಕಡಗಾ ಜತsನವೇ
ನೀವಿಟ್ ಹಸ್ತ್‌ಕಡಗಾ ಜತನವ ಹತ್ತೂಬೆರಳು
ಹಸನಾಗಿ ಬರಲೇನೊಸsಲಿಗೆ
ಹಸನಾಗಿ ಬರಲೇ ನೊಸಲೀಗೆ ಕಪ್ಲಿಂದ್ರನ ಮಲ್ಲೆ
ಕಾವಣದೊಂದು ಕಸವಾ ತೆಗsದಾರೆ
ಕಾವಣದೊಂದು ಕಸವಾ ತೆಗದಾರೆ ಮಾರಯ್ರು
ಕಾವಣ ತುಂಬೆ ಎಡೆsಮಾಡೆ
ಕಾವಣ ತುಂಬಿ ಎಡೆಮಾಡಡಗೀ ಬಡಸೇ
ಉಂಡೆದ್ದ ರೊಂದೂಗಳsಗ್ಯಲ್ಲೇ
ಉಂಡೆದ್ದ ರೊಂದುಗಳಗ್ಯಲ್ಲಿ ಕಪ್ಲೀಂದ್ರ
ಉಂಡೋರೀಗೀಳ್ಯ ಕೊಡsವಾನೆ
ಉಂಡೋರೀಗೀಳ್ಯ ಕೊಡವಾನೆ ಕಪ್ಲಿಂದ್ರ
ನಾರೆಣದೈವಗೀಳ್ಯ ಕೊಡವಾನೆ
ನಾರೆಣದೈವಗೀಳ್ಯ ಕೊಡವಾನೆ ಕಪ್ಲಿಂದ್ರ
ತಾನೊಂದೀಳ್ಯವ ಮೆಲsವಾನೆ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಆಗೊಂದು ಮಾತಾ ನುಡೀsದಾನೆ
ಊರಿಗರಸೂ ಅಂಬೆ ಕೇರಿಗೆ ದೊರಿಯೇ ಅಂಬೆ
ಹಕ್‌ಪಕ್ಷಿಗ್ ಪಡಿಯಾ ಅಳsವಂತ
ಹಕ್‌ಪಕ್ಷಿಗ್ ಪಡಿಯಾ ಅಳವಂತ ದೊರೆತಾನು ಅಂಬೆ
ದಿಬ್ಬಣಕೊಬ್ಬನೆ ಬರsವೀಯೋ
ದಿಬ್ಬಣಕೊಬ್ಬನೆ ಬರವಿಯೋ ಬಾವಾ ಕೇಳೋ
ಬಾವಾದೀರಿಲವಾ ನಿನಗಂದೇ
ಬಾವಾದೀರಿಲವಾ ನನಗಂದೇ ಬಾವಾ ಕೇಳೋ
ದಿಬ್ಬಣಕೊಬ್ಬನೆ ಬರsವೀಯೋ

ಊರೀಗರಸೂ ಅಂಬೆ ಕೇರಿಗೇ ದೊರಿಯೇ ಅಂಬೆ
ಮನಸ್‌ಮಕ್ಕಳಿಗ್ ಪಡಿಯಾ ಅಳsವಂತ
ಮನಸ್‌ಮಕ್ಕಳಿಗ್ ಪಡಿಯಾ ಅಳವಂತ ದೊರೆ ತಾನು ಅಂಬೆ
ದಿಬ್ಬಣಕೊಬ್ಬನೆ ಬರsವೀಯೋ
ದಿಬ್ಬಣಕೊಬ್ಬನೆ ಬರವೀಯೋ ಬಾವಾ ಕೇಳೋ
ತಂಗೀದೀರಿಲವಾ ನಿನsಗೊಮ್ಮೆ
ಹೆಣ್ಣ್‌ಕೊಟ್ಟಲಳಿದೀರಿಲ್ವ ತಂಗಿಕೊಟ್ ಬಾವ್ದೀರಿಲ್ವ
ದಿಬ್ಬಣಕೊಬ್ಬನೆ ಬರುವೀಯೋ
ದಿಬ್ಬಣಕೊಬ್ಬನೆ ಬರುವಿಯೋ ಬಾವಾ ಕೇಳೋ
ನಿನ ರೀತಿ ನಿನಗೆ ಬಲs ಚೆಂದ
ಅಷ್ಟೊಂದು ಮಾತಾ ಕೇಳಾನೆ ನಾರೆಣದ್ಯೆವ
ಆಗೊಂದು ಮನಸಾ ನೆನsಸಾನೆ
ಒಂದೊಂದು ಮಾತಾ ಹೇಮೀಸ್ ಹೇಳುದಕೇಳಿ
ಚಪ್ಪರದಿಂದ್ಹೆರಗೆ ಬರsವಾನೆ
ಚಪ್ಪರದಿಂದ್ಹೆರಗೆ ಬರವಾನೆ ನಾರೆಣದ್ಯೆವಾ
ದ್ಯೆವಾಬೆತ್ತವಾ ತಿರsಗ್ಸಾನೆ
ದ್ಯೆವಾಬೆತ್ತವ ತಿರಗ್ಸವದ್ನು ನಾರೆಣದ್ಯೆವ್ನ
ದೇವ್‌ಲೋಕದ ಮಂದಿ ನೆರsದಾರೆ
ದೇವ್‌ಲೋಕದ ಮಂದಿ ನೆರವದ್ನು ನಾರೆಣದ್ಯೆವಾ
ನಾಗಬೆತ್ತವಾ ತಿರsಗ್ಸಾನೆ
ನಾಗಾಬೆತ್ತವ ತಿರಗ್ಸವದ್ನು ನಾರೆಣದ್ಯೆವ್ನ
ನಾಗ್‌ಲೋಕದ ಮಂದೀ ನೆರsದಾರೆ
ನಾಗಾಲೋಕದ ಮಂದೀ ನೆರದಾರೆ ನಾರೇಣದ್ಯೆವ್ನಾ
ತಂಗೀ ಸೂಬದ್ರಿ ಬರsವಾಳೆ
ತಂಗೀ ಸೂಬದ್ರಿ ಬರವದ್ನು ದೇವತ್‌ಗೋಳು
ನಾರೆಣದ್ಯೆವಗ್ ಪಟ್ಟಿ ಉಡsಸಾರೆ
ನಾರೆಣದ್ಯೆವಗ್ ಪಟ್ಟಿ ಉಡಸಾರೆ ದೇವತಗೋಳು
ಸಾಲೆ ಹಚ್ಚಡವಾ ಹೊಗsಲಿಗೆ
ಸಾಲೆ ಹಚ್ಚಡವಾ ಹೊಗಲೀಗೆ ದೇವತಗೋಳು
ಚಿನ್ನದುಂಗಿಲವಾ ಇಡsವಾರೆ
ಚಿನ್ನದುಂಗಿಲವಾ ಇಡವಾರು ದೇವತಗೋಳು
ಮುತ್ತನ ಬಾಸಿಂಗವ ಮುಡೀsಸಾರೆ
ಬಾಸಿಂಗ ಮುಡಿಸೀರೆ ಈಸ್ರಪತಿರಾಯಗೇ

ಸೀತೆದೇವ್ ಪಡೆದ ಕೊಮsರಾಗೆ
ಸೀತೆದೇವ್ ಪಡೆದ ಕೊಮರಾಗೆ ಬಾಲಯ್ಯಗೆ
ಬಾಸಿಂಗ ಮುಡಿಸಿದರೆ ಸುಬದಿಂದೆ
ಅರಸ್ಗೋಳ ಮದವಿಗೆ ಬಿರಸು ಬಾಣಬೇಕೆ
ಸರಸಪತಿಯೆಂಬಾ ಬಿಳಿಯೆಲೆ
ಸರಸಪತಿಯೆಂಬಾ ಬಿಳಿಯೆಲೆ ಬೆಳ್ಳೀಬಾಕ
ಕೊಡಸಾರೆ ನಾರೆಣದ್ಯೆವ್ನ ಬಲsಗೈಲೆ
ಬದ್ರೀಯ ಬಗತಾಲೆ ಉದ್ದನ ಸ್ವೊಡಗಿಯಂತೆ
ಹಸಗನ ಮನೆಯಾ ಮಡೀsಯಂತೆ
ಹಸಗನ ಮನೆಯಾ ಮಡಿಯಂತೆ ನಾರೆಣದ್ಯೆವ್ನ
ತಂಗಿ ಬಾಗಿದಳೆ ಕಳsಸಕೆ
ಹಸಿಯಳ ಬಗತಾಲೆ ಹೆಸರ ಸ್ವೊಡಗಿಯಂತೆ
ಹಸಗನ ಮನೆಯ ಮಡೀsಯಂತೆ
ಹಸಗನ ಮನೆಯ ಮಡಿಯಂತೆ ನಾರೆಣದ್ಯೆವ್ನ
ತಂಗೀ ಬಾಗಿದಳೆ ಕಳsಸಕೆ
ಯಾರೇ ಅಕ್ಕಾದೀರು ಯಾರೇ ತಂಗೀದೀರು
ಯಾರೇ ಈ ಮನಗೆ ಹೆರಿsಯೋರೆ
ಯಾರೇ ಈ ಮನಗೆ ಹೆರಿಯೋರಾಗಿದ್ದೋರು
ಕಳಸಾ ಕಯ್ಯೆತ್ತೇ ಕೊಡsಬೇಕೆ
ಒಡಹುಟ್ಟಿದ ತಂಗಿ ಒಡನೆ ಬಂದ್ ನಿಲುವಂಗೇ
ಒಡಹುಟ್ಟದಣ್ಣಗೆ ಮುಗುಳsನೆಗ್ಗೆ
ಒಡನೆ ಹುಟ್ಟಿದಿಯಾ ಕಿರದಂಗಿ
ಒಡನೆ ಹುಟ್ಟಿದಿಯಾ ಕಿರದಂಗಿ ನನ್ನಲತಾಯಿ
ಕಳಸಕಂದಿ ನಿನ್ನಾ ಪಡsದಾಳೆ
ಕೂಡುಟ್ಟಿದ ತಂಗಿ ಕೂಡೇ ಬಂದ್ ನಿಲುವಂತೆ
ಕೂಡುಟ್ಟಿದಣ್ಣಗೆ ಮುಗುಳsನೆಗ್ಗೆ
ಕೂಡುಟ್ಟಿದಣ್ಣಗೆ ಏನಂದಿ ಮುಗುಳ್‌ನೆಗ್ಗೆ
ಕೂಡೇ ಹುಟ್ಟಿದೆಯಾ ಕಿರಿsದಂಗಿ
ಕೂಡ್ ಹುಟ್ಟಿದೆಯಾ ಕಿರದಂಗಿ ನನ್ನಲತಾಯಿ
ಕಳಸಕಂದ್‌ನಿನ್ನ ಪಡsದಾಳೆ
ತಂಗೀ ಮುತ್ತ ಮುಡಿಯೆ ತಂಗೀಪಟ್ಟೆ ಉಡೆ
ತಂಗೀ ಮಾಣಿಕದಾ ಮುಗಳಿಡೆ
ತಂಗೀ ಮಾಣಿಕದಾ ಮುಗಳಿಡೆ ತಂಗೀಕೇಳೇ

ಬಾರೆ ಸತ್ತಗಿಯಾ ನೆಳಽಲಾಗೆ
ಬಾರೆ ಸತ್ತಗಿಯಾ ನೆಳಲಾಗೆ ಸೂಬದ್ರಿ
ಬಂದ್‌ನಿಂದಳೆ ನಾರೆಣದೈವ್ನ ಒಡಽನಲ್ಲಿ[೪೩]
ಆಕೆಯ್ಗಿೀಕಯ್ಗೆ ಹಸರು ನೀಲದ ಬಳೆ
ತಾ ತಂಗಿ ಕಯ್ಯಾ ಕಪಽರಾವೇ[೪೪]
ತಾ ತಂಗಿ ಕಯ್ಯಾ ಕಪರಾದೀಳ್ಯಾಹಿಡದೇ
ಬಾ ತಂಗ್ ಸತ್ತಗಿಯಾ ನೆಳಲಿಗೆ
ಕಂಬು[೪೫] ಚಂದಕದಿಂದೆ ಸರ್ವವಾದ್ಯದಿಂದೆ
ನಾರೆಣದೈವನ ದಿಬ್ಬಣವೆ ಸವಽನದೆ
ನಾರೆಣದೈವನ ದಿಬ್ಬಣವೆ ಸವ್ನಿ ಸುಂಗಾರಾಗಿ
ಬಂದಿ ಬಾಗಲ್ಲೇ ನಿಲಽವಾರೆ
ಬಂದೀ ಬಾಗಲ್ಲೇ ನಿಲವದ್ನು ಕವ್ಲಿಂದ್ರ
ಪನ್ನೀ ಮರಿಯಲ್ಲಿ ಮುಗುಳುನೆಗ್ಗಿ
ಪನ್ನೀ ಮರಿಯಲ್ಲಿ ಮುಗುಳ್‌ನೆಗ್ಗಿ ಆಡೀತೆ
ಮಾಳೂಗಿ ಒಳಗೆ ನೆಡಽದಾನೆ
ಹಿಟ್ಟೀನಾರುತಿ ಪಟ್ಟೇ ಮೇಲೂಗಟ್ಟೇ
ಇಪ್ಪತ್ತಂಕಣದಾ ಅರಽಮನೆ
ಇಪ್ಪತ್ತಂಕಣದ ಅರಮನಿ ಮಾಳಗಿಲಿರುವ
ಅತ್ತೇ ಆರತಿಯಾ ತರಽವಾಳೆ
ಅತ್ತೆ ತಂದಳೆ ಅಚ್ಚಮಣಿಯಾರತಿಯಾ
ಅಚ್ಚ ಪಲ್ಲಯ್ಸೆ ಹೆಡೆಽತಿದ್ದೆ
ಅಚ್ಚ ಪಲ್ಲಯ್ಸೆ ಹೆಡೆತಿದ್ದೆ ಗೋಕುಲದಾ
ಕೃಷ್ಣಗಾರುತಿಯಾ ಬೆಳಽಗಾರೆ
ಆಚೆಕತ್ತೂ[೪೬] ದೀಪ ಈಚೆ ಕೂಡದ ಮಂದಿ
ಸೀತಿಯರ ಕಯ್ಯಾ ಸಿಸಬಾಲೆ
ಸೀತಿಯರ ಕಯ್ಯ ಸಿಸಬಾಲ ಸಿವಲದ ಮಲ್ಲೆ[೪೭]
ಮೆಲ್ಲನೆ ನಿನ್ನಾ ಬಲಽಗಾಲ
ಮೆಲ್ಲನೆ ನಿನ್ನಾ ಬಲಗಾಲ ಮುಂದಿಟ್ಟಿ
ದಾರೆ ಮಂಟಪಕೆ ಜಯಽವನ್ನು
ಆಚೆ ಬಾವಾದೀರು ಈಚೆ ಅಣ್ಣಾದೀರು
ಮೊಡದಾ ಬಾಸಿಂಗ ಒಲೀಯಾತೇ[೪೮]

---

೪೩. ಹೆಗಲಿಗೆ ೪೪. ಕರ್ಪೂರ ೪೫. ಕೊಂಬು ೪೬. ಉರಿಯುವ ೪೭. ಮಂಗಳ ಮನೆಯಲ್ಲಿ
೪೮. ತೂಗಾಡಿಸುತ್ತ

ಮೊಡದಾ ಬಾಸಿಂಗ ಒಲಿಯಾತೇ ಸೂಬದ್ರಿ
ಮಾಳೂಗಿ ಒಳಗೆ ನೆಡಽದಾಳೆ
ಮಾಳೂಗಿ ಒಳಗೆ ನೆಡದಾಳೆ ಸೂಬದ್ರಿ
ಮಾದೇವಿಗೆ ಪಟ್ಟೀ ಉಡಽಸಾಳೆ
ಮಾದೇವಿಗೆ ಪಟ್ಟೀ ಉಡಸಾಳೆ ಸೂಬದ್ರಿ
ಮಾದೇವಿಗೆ ಚಿನ್ನಾ ಇಡಽವಾಳೆ
ಮಾದೇವಿಗೆ ಚಿನ್ನಾ ಇಡವಾಳೆ ಸೂಬದ್ರಿ
ಮುತ್ತನ ತೊಂಡಲವ ಮುಡೀಽಸಾಳೆ
ತೊಂಡಲ ಮುಡಿಸೀರೇ ಚಂದ್ರಮ್ಮ ದೇವೀಗೇ
ಗಂಗೇದೇವ್ ಪಡೆದ ಕೊಮಽರೀಯೇ
ಗಂಗೇದೇವ್ ಪಡೆದ ಕೊಮರಿ ತಂಗವ್ವಿಗೆ
ತೊಂಡಲ ಮುಡಿಸಿರೆ ಸುಬಽದಿಂದ
ತೊಂಡಲ ಮುಡಿಸಿದರೆ ಸುಬದಿಂದ ಕವ್ಲಿಂದ್ರ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡದಾನೆ ಕವ್ಲಿಂದ್ರ
ಮಾದೇವಿಯೆತ್ತೇ ಹೊಗಽಲಿಗೆ
ಮಾದೇವಿಯೆತ್ತೇ ಹೊಗಲೀಗಾಯಿ ಕಂಡೆ
ಮಾಲಗ್ಗಿಂದ್ಹೆರಗೆ ಬರಽವಾನೆ
ಸಾಲೀಯಾ ಸೀರಿಯಾ ಆಯದಲೆ ನೆರದಂಡೆ
ಮುತ್ತನ ತೊಂಡಲಕೆ ತಲೆಽಬಾಗೇ
ಮುತ್ತನ ತೊಂಡಲಕೆ ತಲೆಬಾಗೇ ಮಾದೇವಿ
ದಾರೀ ಮಂಟಪಕೆ ಜಯಽವೆಂದೇ
ಸೆಣ್ಣಕಾಲಗ ತಕ್ಕ ಚಿನ್ನದಾವಗಿ ಮೆಟ್ಟು
ಬಣ್ಣದ ನೆರಿಯೇ ಒಲೀಯಾತೇ
ಬಣ್ಣದ ನೆರಿಯೇ ಒಲಿಯಾತೇ ಈ ಮನಿಯಾ
ಸೆಣ್ಣಳು ಕಯ್ದಾರಿಗೆ ಬರಽತದೆ
ಸೆಣ್ಣಳು ಕಯ್ದಾರಿಗೆ ಬರತದೆ ನಾರೆಣದ್ಯೆವಾ
ಇಂಬುಂಟಾ ನಿನ್ನಾ ಒಡಽನಲ್ಲೆ
ಇಂಬುಂಟೊಡನಲ್ಲೆ ರಂಬೆಮಾಣಿಕದ್ಹರಳೆ
ಬಾ ಕೂಡೇ ತನ್ನಾ ಎಡಽನಲ್ಲೆ
ಬಾ ಕೂಡೆ ತನ್ನಾ ಎಡನಲ್ಲಿ ಬೆಳ್ಳೀಯಾ
ಬಾಕುಂಟೆ ತನ್ನಾ ಬಲಽಗಯ್ಲ್ಲೆ
ಬಾಕುಂಟೆ ತನ್ನ ಬಲಗಯ್ಲ್ಲಿ ಮಾವನಮಗಳೆ

ಬಾಕೂಡೆ ನನ್ನಾ ಎಡsನಲ್ಲೆ
ಪಟ್ಟೀ ಸೀರೀಯುಟ್ಟಿ ಮುತ್ನ ತೊಂಡ್ಲ ಮುಡದಿ
ಯಾರ ಮಗನೊಡನೆ ಕುಳsತೀಯೇ
ಯಾರ ಮಗನೊಡನೆ ಕುಳತೀಯೇ ಸ್ವೊದರದಾ
ಅತ್ತೀಮಗನೊಡನೆ ಕುಳsತೀಯಾ
ಪಟ್ಟೆ ಜೋತರುಟ್ಟೆ ಮುತ್ತನ ಬಾಸಿಂಗ ಮುಡದೆ
ಯಾರ ಮಗಳೊಡನೆ ಕುಳsತೀಯೋ
ಯಾರ ಮಗಳೊಡನೆ ಕುಳತೀಯೋ ಸ್ವೊದರದಾ
ಮಾವನ ಮಗಳೊಡನೆ ಕುಳsತೀಯಾ
ಕಡಲೊಳಗನ ಬೊಂಬಿ ಮಡಲ ಸೇರಿಸಿದಂತೆ
ಇನ್ನರಸರಾಯಾ ಮನಸೀಲೆ
ಇನ್ನರಸರಾಯಾ ಮನಸೀಲಿ ಮಾವನಮಗಳು
ಬಂದೀ ಸೇರಿದಳೊ ಒಡsನಲ್ಲೆ
ಆಚೆಕತ್ತೂ ದೀಪ ಈಚೆ ಕೂಡದ ಮಂದಿ
ಸಾಲೀಯಾ ಸೆರಗ ಮರೀsಯಲ್ಲೆ
ಸಾಲೀಯಾ ಸೆರಗ ಮರಿಯಲ್ಲಿ ಮಾದೇವಿ
ನಲ್ಲನ ಸೇರಿದಳೆ ಗಳsಗ್ಯಲ್ಲೆ
ಈಚೆಕತ್ತೂ ದೀಪ ಆಚೆಕೂಡದ ಮಂದಿ
ಪಟ್ಟೀಯಾ ಸೆರಗ ಮರೀsಯಲ್ಲೆ
ಪಟ್ಟೀಯಾ ಸೆರಗ ಮರಿಯಲ್ಲಿ ನಾರೇಣದ್ಯೆವಾ
ನಾರೀ ಸೇರಿದನೆ ಗಳsಗ್ಯಲ್ಲೆ
ಆಚೆಕತ್ತೂ ದೀಪ ಈಚೆ ಕೂಡದ ಮಂದಿ
ಜೋತರದ ಸೆರಗ ಇಳsಲಿಟ್ಟೀ
ಜೋತರದ ಸೆರಗ ಇಳಲಿಟ್ಟಿ ನಾರೇಣದ್ಯೆವಾ
ನಾರೀ ಸೇರಿದನೆ ಗಳsಗ್ಯಲ್ಲೆ
ಚಲಕೆ ತುಂಬೀ ಹೂಂಗೇ ಕುಲಕೇ ಚೊಳಚೀ ಕದರೇ
ಕೆಂದೀಯಾ ಕರದೇ ನೊರೆsಹಾಲೇ
ಕೆಂದೀಯಾ ಕರದೇ ನೊರೆಹಾಲ್ ಗಿಂಡೀ ತುಂಬೇ
ಚೊಳಚೀಯ ಮ್ಯೆನೆ ಮಡsಗಾನೆ
ಚೊಳಚೀ ಮ್ಯೆನೆ ಮಡಗಾನೆ ಕಪ್ಲಿಂದ್ರ
ಸುತ್ತನ ದ್ಯೆವರಿಗೂ ಸರsಣಂದೇ
ಸುತ್ತನ ದ್ಯೆವರಿಗು ಸರಣಂದೇ ಕಪ್ಲಿಂದ್ರ
ಹೊತ್ತನಿಯೇ ಹೊನ್ನ ಮುಡಿಯಾಮ್ಯೆನೆ

ಹೊತ್ತನಿಯೇ ಹೊನ್ನ ಮುಡಿಮ್ಯೆನೆ ಹೊತ್ತಿಗಂಡೇ
ದಾರೆ ಮಂಟಪಕೆ ಬರಽವಾನೆ
ಬಲಕನ ತೊಡಿಮ್ಯೆನೆ ಬಾವಾ ಎಡಕನ ತೊಡಿಮ್ಯೆನೆ ತಂಗಿ
ಸಿರಿಗಂಗೆ ಗೌರಿ ತೊಡಿಯಾಽ ಮ್ಯೆನೆ
ಸಿರಿಗಂಗೆ ಗೌರಿ ತೊಡಿಮ್ಯೆನೆ ಕೂರಿಸಿಗಂಡಿ
ಜೈವಂದೇ ದಾರೀ ಎರಽದಾನೆ
ಹುಟ್ಟದ ಮಗಳೀಗೆ ಏನೆಲ್ಲಾ ಬಳವರಿ
ಹಾಲಾಕಾಸಲಿಕೆ ಕಿರಽನಳ್ಳಿ[೪೯]
ಹಾಲಾಕಾಸುಕೆ ಕಿರನಳ್ಳಿ ಕಂಚೀನ್ನುಟ್ಟು[೫೦]
ಹುಟ್ಟಿದ ಮಗಳಿಗೆ ಬಳಽವರಿ
ಹುಟ್ಟಿದ ಮಗಳೀಗೆ ಏನೆಲ್ಲಾ ಬಳವರಿ
ತುಪ್ಪಾ ಕರಗಲಿಕೆ ಕಿರನಳ್ಳಿ
ತುಪ್ಪಾ ಕರಗೂಕೆ ಕಿರನಳ್ಳಿ ಕಂಚೀನುಟ್ಟು
ಹುಟ್ಟಿದ ತಂಗೀಗೆ ಬಳಽವರಿ
ಕೊಡುವಟ್ ಬಳುವರಿಯಾ ಕೊಟ್ಟೀದೆ ಬಾವಾ ಕೇಳೋ
ಏನ್ ತಂದೀ ನೀನು ಬಳಽವರಿ
ಏನ್‌ತಂದಿ ನೀನು ಬಳವರಿ ಅಂದ್ಹೇಳಿ
ನನತಂಗ್ಯ ನೀನು ಜರಿಯಾಽ ಬ್ಯೆಡಾ
ಬಳವರಿ ಕೊಟ್ಟರೆ ನಿನತಂಗಿ ಬೆಳಗುಂಬಳೊ
ಹೇಳದೇ ನಾನು ಇರಽವನ
ಹೇಳದೆ ನಾನೂ ಇರವನ ಅಂದೇಳಿ
ಮಾದೇವಿ ದಿಬ್ಬಣ ಸವಽನಿಸೆ
ಮಾದೇವಿ ದಿಬ್ಬಣ ಸವನೀ ಸುಂಗಾರಾಗಿ
ಚಪ್ಪರಗಿಂದ್ಹೆರಗೆ ಬರಽವಾರೆ
ಚಪ್ಪರಗಿಂದ್ಹೆರಗೆ ಬರವಾರು ನಾರೆಣದ್ಯೆವಾ
ದ್ಯೆವಾಬೆತ್ತವ ಮಗಽಚಾನೆ[೫೧]
ದ್ಯೆವಾಬೆತ್ತವ ಮಗಚ್ವದ್ನು ನಾರೆಣದ್ಯೆವ್ನ
ದೇವ್‌ಲೋಕದ ಮಂದೀ ನೆಡಽದಾರೆ
ದೇವ್‌ಲೋಕದ ಮಂದೀ ನೆಡದಾರೆ ನಾರೆಣದ್ಯೆವಾ
ನಾಗಬೆತ್ತವಾ ಮರಽಚಾನೆ
ನಾಗಬೆತ್ತವ ಮರಚ್ವದ್ನು ನಾರೆಣದ್ಯೆವ್ನ
ನಾಗಬೆತ್ತವಾ ಮರಽಚಾನೆ

೪೯. ಸಣ್ಣ ಮಡಿಕೆ   ೫೦. ಕಂಚಿನ ಸಟ್ಟುಗ   ೫೧. ತಿರುಗಿಸುತ್ತಾನೆ

ನಾಗಬೆತ್ತವ ಮರಚ್ವದ್ನು ನಾರೆಣದ್ಯೆವ್ನ
ನಾಗ್‌ಲೋಕದ ಮಂದೀ ನೆಡಽದಾರೆ
ನಾಗ್‌ಲೋಕದ ಮಂದಿ ನೆಡವದ್ನು ನಾರೆಣದ್ಯೆವಾ
ಬೆಳ್ಳೀಯಾ ರತವಾ ನೆಗಽದ್ಹತ್ತೇ
ಬೆಳ್ಳೀಯಾ ರತವಾ ನೆಗದ್ಹತ್ತೇ ಮಾದೇವಿ
ಬೆಳ್ಳೀಯಾ ರತವಾ ನೆಗಽದ್ಹತ್ತಿ
ಬೆಳೀಯಾ ರತವಾ ನೆಗದ್ಹತ್ತಿ ನಾರೇಣದ್ಯೆವಾ
ರತದಾ ಕೀಲ್ಗಳ ತಿರಽಗ್ಸಾನೆ
ರತದಾ ಕೀಲ್ಗಳ ತಿರಗ್ಸಾನೆ ನಾರೆಣದ್ಯೆವಾ
ತನ್ನಲರಮನೆಗೆ ನೆಡಽದಾನೆ
ತನ್ನಲರಮನೆಗೆ ನೆಡದಾನೆ ನಾರೆಣದ್ಯೆವಾ
ಹೋಗಿ ಬಾಗಲ್ಲೇ ನಿಲಽವಾನೆ
ಹೋಗಿ ಬಾಗಲ್ಲೇ ನಿಲವದ್ನು ಅವ್ರಿಬ್ಬರು
ರತಗಿಂದು ಕೆಳಗೆ ಇಳಽದಾರೆ
ರತಗಿಂದು ಕೆಳಗೆ ಇಳವಾರೆ ಅವ್ರಿಬ್ಬರು
ಬಂದೀ ಬಾಗಲ್ಲೇ ನಿಲಽವಾರೆ
ಬಂದೀ ಬಾಗಲ್ಲೇ ನಿಲವದ್ನು ಸೂಬದ್ರಿ
ತಡೆದಳೆ ಚಂಬಗಲಿ ಉದಽಕವಾ
ತಡೆದಳೆ ಚಂಬಗಲಿ ಉದಕವಾ ನಾರೆಣದ್ಯೆವಾ
ಕಾಲೂ ಸಿರಿಮೊಕವಾ ತೊಳಽದಾನೆ
ಹಿಟ್ಟೇನಾರುತಿ ಪಟ್ಟೆ ಮೇಲೂಗಟ್ಟೇ
ಇಪ್ಪತ್ತಂಕಣದಾ ಅರಽಮನೆ
ಇಪ್ಪತ್ತಂಕಣದಾ ಅರಮನಿ ಮಾಳಗಿಲಿರುವಾ
ತಂಗೀ ಆರತಿಯಾ ತರಽವಾಳೆ
ತಂಗೀ ಆರತಿಯಾ ತರವಾಳೆ ತಂಗವ್ವಿ
ಅಣ್ಣಗಾರತಿಯಾ ಬೆಳಽಗಾಳೆ
ಅಣ್ಣಗಾರತಿಯಾ ಬೆಳಗಾಳೆ ಸೂಬದ್ರಿ
ಮಾದೇವಿಗಾರತಿಯಾ ಬೆಳಗಾಳೆ
ಮಾದೇವಿಗಾರತಿಯಾ ಬೆಳಗ್ವದ್ನು ಅವ್ರಿಬ್ಬರು
ಆರೂತಿಗೊಮ್ಮೆ ಸರಽಣಂದೆ
ಆರೂತಿಗೊಮ್ಮೆ ಸರಣಂದೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡಽದಾನೆ
ಮಾಳೂಗಿ ಒಳಗೆ ನೆಡವದ್ನು ಮಾದೇವಿ

ಮಾಳೂಗಿ ಒಳಗೆ ನೆಡಽದಾಳೆ
ಮಾಳೂಗಿ ಒಳಗೆ ನೆಡದಾರೆ ಅವ್ರಿಬ್ಬರು
ಚೊಳಚೀ ಮುಂದೋಗೆ ನಿಲವದ್ನು ನಾರೆಣದ್ಯೆವ್ನಾ
ಮುತ್ತನ ಬಾಸಿಂಗವ ಸೆಡಽಲಿಸೆ
ಮುತ್ತನ ಬಾಸಿಂಗವ ಸೆಡಲಿಸಿ ಮಾದೇವಿಯಾ
ಮುತ್ತನ ತೊಂಡಲವಾ ಸೆಡಽಲಿಸೆ
ಮುತ್ತನ ತೊಂಡಲವಾ ಸೆಡಲಿಸಿ ಅವ್ರಿಬ್ಬರು
ದೇವರಿಗೆ ಕಯ್ಯಾ ಮುಗೀದಾರೆ
ದೇವರಿಗೆ ಕಯ್ಯಾ ಮುಗದಾರವ್ರಿಬ್ಬರು
ಹಾಸನ ಮ್ಯೆನೋಗೇ ಕುಳಽತಾರೆ
ಹಾಸನ ಮ್ಯೆನೋಗಿ ಕುಳವದ್ನು ನಾರೆಣದ್ಯೆವಾ
ಉಗ್ರಣದರಮನಗೆ ನೆಡಽದಾನೆ
ಉಗ್ರಣದ ಮನಗೆ ನೆಡದಾನೆ ನಾರೆಣದ್ಯೆವಾ
ಉಗ್ರಣದ ಬಾಗಿಲವಾ ತೆಗಽದಾನೆ
ಉಗ್ರಾಣದ ಬಾಗಿಲವಾ ತೆಗದಾನೆ ನಾರೆಣದ್ಯೆವಾ
ಹಕ್ಪಕ್ಷಿಗೆ ಪಡಿಯಾ ಅಳಽದಾನೆ
ಹಕ್ಪಕ್ಷಿಗೆ ಪಡಿಯಾ ಅಳದಾನೆ ನಾರೆಣದ್ಯೆವಾ
ಮನ್ಸ್‌ಮಕ್ಕಳಿಗೆ ಪಡಿಯಾ ಅಳಽದಾನೆ
ಮನ್ಸ್‌ಮಕ್ಕಳಿಗೆ ಪಡಿಯಾ ಅಳದಾನೆ ನಾರೆಣದ್ಯೆವಾ
ಉಗ್ರಣದ ಬಾಗಿಲವಾ ಇಡಽವಾನೆ
ಉಗ್ರಣದ ಬಾಗಿಲವಾ ಇಡವಾನೆ ನಾರೆಣದ್ಯೆವಾ
ತನ್ನಲರಮನಗೆ ಬರಽವಾನೆ
ತನ್ನಲರಮನಗೆ ಬರವದ್ನು ನಾರೆಣದ್ಯೆವಾ
ಅವ್ರು ಹದಳಾಗೇ[೫೨] ಇರವಾರೇ
ಈ ಹಾಡ ಹೇಳ್ದರಿಗು ಸೆರದನಿ ತಂದರಗು[೫೩]
ಹಾದೀ ಗ್ವೊಕನದಾ ಸಿಂವಗಂಗೆ
ಹಾದೀ ಗ್ವೊಕನದಾ[೫೪] ಸಿಂವಗಂಗಿ ತೇರತವಾ[೫೫]
ಹೋಗಿ ಮಿಂದುಟ್ಟು[೫೬] ಪಲವುಂಟು

* * *

೫೨. ಕ್ಷೇಮದಿಂದ ೫೩. ಜೋಡಿಗೆ ಹಾಡಿದವರಿಗು ೫೪. ಗೋಕರ್ಣದ ೫೫. ಶಿವಗಂಗೆ ತೀರ್ಥವನ್ನು ೫೬. ಸ್ನಾನ ಮಾಡಿದಷ್ಟು

ರುಗುಮಿಣಿ (ರುಕ್ಮಿಣಿ)

ನಿಚ್ಚ ಬೆಳಗೂದು ಇಪ್ಪತ್‌ಕಟ್ ದೀವುಗೆ
ಚಕ್ರದ ಕಯ್ಯರ ಮಡದೀಯೇ
ಚಕ್ರದ ಕಯ್ಯರ ಮಡದೀ ಅಂದ್ ರುಗುಮಿಣಿ[೧]
ತಾನೇಳು ಮಣಿಮಾಡಾ ಕರುಣೀಸಿ
ತಾನೇಳು ಮಣಿಮಾಡಾ ಕರುಣಿಸಿ ರುಗುಮಿಣಿ
ಮಾಳಗ್ಗಿಂದೆರಗೇ ಬರೂವಾಳೇ ।
ತನ್ನಾ ಮನಿಕೂಸ್ನಾ ದೆನಿದೂರೇ
ಕರ್ದಂಬ್ ಕಾರ್‍ಯಕೇ ಬಂದಾನೆ ಮನಿಕೂಸಾ
ನಿಂದಾನೆ ರುಗುಮಿಣಿಯ ಒಡನಲ್ಲಿ । ರುಗುಮಿಣಿ
ಆಗೊಂದು ಮಾತಾ ನುಡೀದಾಳೆ
ಆಗೊಂದು ಮಾತಾ ಏನಂದಿ ನುಡಿದಾಳೆ
ಹೋಗ್‌ಬಾರೋ ದೇವಿಯಾ ಅರುಮನಗೇ । ಮನಿಕೂಸಾ
ಹೋಗೀ ದೇವಿಯರಾ ಕರತಾರೋ
ಅಟ್ಟಂಬಾ ಮಾತಾ ಕೇಳಾನೆ ಮನಿಕೂಸಾ
ದೇವ್ಯಯರರಮನಗೇ ನೆಡದಾನೆ । ಮನಿಕೂಸಾ
ಹೋಗೀ ಬಾಗಲ್ಲೇ ನಿಲೋವಾನೇ
ಹೋಗೀ ಬಾಗಲ್ಲೇ ನಿಲುವದ್ನು ದೇವಿಯರು
ಅರಗೀ ನೋಡಿದರೇ ಹೆರಗೊಮ್ಮೆ
ಯಾವಾಗ್ ಬಂದ್ಯೊ ಅಕ್ಕನ ಮನಿಲಿದ್ ಮನಿಕೂಸಾ
ಏನ್‌ಬಂದ್ಯೋ ತನ್ನಾ ಅರಮನಗೆ । ಅಂಬುದ್ನು
ನಿಮ್ಮಕ್ಕ ನಿಮ್ಕೂಡೇ ಬರೋಬೇಕೋ
ನಿಮ್ಮಕ್ಕ ನಿಮ್ಕೂಡೇ ಬರಬೇಕು ಅಂದೇಳೇ
ಕರಿಯಲಿಕೆ ನನ್ನಾ ಕಳಗಾರೆ
ಮಗಳಾ ಮೊದವೀಯೋ[೨] ಮಗನಾ ಚೊಳಂಗೀಯೋ
ನಾರೇ ಮಯ್ನೆರದಾ ಒಸಕೀಯೋ[೩]

---

೧. ರುಕ್ಮಿಣಿ ೨. ಮದುವೆಯೋ ೩. ಒಸಗೆ

ನಾರಿ ಮನ್ನೆರೆದಾ ಹೊಸಕಿ ಮನಿಕೂಸಾ
ನನ್ನಾನೇ ಕರದಾ ಬಗೆಯೇನೋ
ಹೆಣ್ ಹೆರಗೇ ಕೊಡತರಿಯೋ ಹೆಣ್‌ಹೆರಗಂದ್ ತರತರಿಯೋ
ಮಾಣೀಗೇ ನುಗ್ಲಾ[೪] ಇಡರಿಯೋ
ಹೆಣ್ಣೆರಗೆ ಕೊಡುದಿಲ್ಲ ಹೆಣ್‌ಹೆರ್ಗಂದ್ ತರುವಾದಿಲ್ಲ
ಮಾಣೀಗೇ ನುಗ್ಲಾ ಇಡುವಾದಿಲ್ಲ । ದೇವಿಯರೆ
ನಿಮ್ಮಕ್ಕಾ ನಿಮ್ಮೊಡೆ ಬರೋಬೇಕೆ
ನಿಮ್ಮಕ್ಕಾ ನಿಮ್ಮೊಡೆ ಬರಬೇಕೇಲಂದ್ಹೇಳೇ
ಕರಿಯಲಿಕೆ ನನ್ನಾ ಕಳಗಾರೆ ।
ಅಷ್ಟಂಬಾ ಮಾತಾ ಕೇಳಿದಳೆ ದೇವಿಯರು
ಮಾಳೂಗೀ ಒಳಗೇ ನೆಡದಾಳೆ । ದೇವಿಯರು
ತನ್ನಾ ಪಟ್ಟೀಯಾ ನೆರದುಟ್ಟೇ । ದೇವಿಯರು
ತನ್ನಾ ಚಿನ್ನೆಲ್ಲ ಇಡೋವಾರು
ತನ್ನಾ ಚಿನ್ನೆಲ್ಲಾ ಇಡುವರು ದೇವಿಯರು
ಮಾಳಗ್ಗಿಂದೆರಗೇ ಬರೋವಾರೇ
ಮಾಳಗ್ಗಿಂದೆರಗೆ ಬರುವರು ಮನಿಕೂಸಾ ದೇವಿಯರು
ರುಕ್ಮಿಣಿ ಅರಮನಗೇ ನೆಡದಾರೆ । ದೇವಿಯರು
ಹೋಗಿ ಬಾಗಲ್ಲೇ ನಿಲೋವಾರು
ಹೋಗಿ ಬಾಗಲ್ಲಿ ನಿಲವದ್ನು ರುಗುಮಿಣಿ
ತಡದಾಳೆ ಚಂಬಗಲೇ ಉದಕಾವೇ
ತಡದಳೆ ಚಂಬಗಲೆ ಉದಕಾವ ರುಗುಮಿಣಿ
ದೇವಿಯರುಗ್ದುದಕಾ ಕೊಡೋವಾಳೇ
ಅಕ್ಕಾ ಕೊಟ್ಟುದಕಾ ಬ್ಯೆಗಾದಲ್ ತಕ್ಕಂಡೀ
ಕಾಲೂ ಸಿರಿಮೊಕವಾ ತೊಳದಾರೆ । ದೇವಿಯರು
ತೂಗುಮಂಚಲ್ಲೇ ಕುಳತಾರೆ
ತೂಗು ಮಂಚಲ್ಲೇ ಕುಳುವದ್ನು ರುಕುಮಿಣಿ
ದೇವಿಯರಿಗೊಂದೀಳ್ಯ ಕೊಡೂವಾಳು
ಅಕ್ಕಾ ಕೊಟ್ಟೀಳ್ಯ ಬೆಗಾದಲ್ ತಡಕಂಡಿ
ಆಯಾಕೊಂದೀಳ್ಯ ಮಲೋವಾರೇ
ಎಲಿಯೊಂದ್ ತಿಂದಾರೆ ರಜ್ವಲ್ಲೆ ಉಗ್ಗಾರೆ
ಆಗೊಂದು ಮಾತಾ ನುಡೀದಾರೆ
ಮಗಳಾ ಮೊದವೀಯೋ ಮಗನಾ ಚೊಳಂಗೀಯೋ

೪. ನೂಲು

ನಾರೇ ಮಯ್ನರದಾ ಒಸಕೀಯೋ
ನಾರೆ ಮಯ್ನರೆದಾ ಒಸಕಿ ಅಕ್ಕಾಕೇಳೇ
ನನ್ನಾ ನೀ ಕರದಾ ತೆರಣೇನೆ
ಹೆಣ್ಣೆರಗೇ ಕೊಡತೀಯೋ ಹೆಣ್ಣೊಂದಾ ತರ್ತೀಯೋ
ಮಾಣೀಗೇ ನುಗ್ಲ ಇಡತೀಯೋ । ಅಕ್ಕಾಕೇಳೇ
ನನ್ನಾನೆ ಕರದಾ ತೆರಣೇನೆ
ಹೆಣ್ಣೆರ್ಥಗಂದ್ ತರುವಾದಿಲ್ಲ ಹೆಣ್ ಹೆರಗೆ ಕೊಡುವದಿಲ್ಲ
ಮಾಣೀಗೇ ನುಗ್ಲಾ ಇಡೂದಿಲ್ಲ । ತಂಗಿ
ಹೂಂಗಾ ಮುಡುವದಕೆ ಕರದೀದೆ
ಮಗಳಾ ಮದವ್ಯಲ್ಲಾ ಮಗ್ನಾ ಚೊಳಿಂಗಲ್ಲ
ನಾರೇ ಮಿಯ್ನರದಾ ಒಸಕ್ಯಲ್ಲ । ದೇವಿಯರೆ
ಹೂಂಗಾ ಮುಡುವದಕೆ ಕರದೀದೆ । ಅಂದ್ ರುಗುಮಿಣಿ
ಹೂಂಗೀನಾ ಚಬ್ಬೀ ಬಲಗಯ್ಲಿ । ತಡಕಂಡೇ
ಹೂಂಗೀನಕ್ಕಲಗೇ ನೆಡದಾಳೆ । ರುಕುಮಿಣಿ
ಮಲ್ಲೂಗಯ್ದೂಂಗಾ ಕೊಯೀದಾಳೆ
ಸಂಪೂಗಯ್ದೂಂಗಾ ಕೊಯೀದಾಳೆ
ಸಂಪೂಗಯ್ದೂಂಗಾ ಕೊಯ್ದೀ ದಂಡೀ ಮಾಡೀ
ಹೂಗ್ನ ಚೊಬ್ಯಲ್ಲೇ ಮಡೂಗಾಳೇ
ಹೂಗ್ನ ಚೊಬ್ಯಲ್ಲೇ ಮಡಗಾಳೆ ರುಗುಮಿಣಿ
ತನ್ನಲರುಮನಗೇ ಬರೂವಾಳೇ । ರುಗುಮಿಣಿ
ದೇವ್ಯರೊಡನೋಗೇ ನಿಲೂವಾಳೇ
ಕಟ್ಟಿದ ಮಂಡೀಯ ಬಿಚ್ಚಬಾರಲಕ್ಕ
ದಂಡೀ ಮೆನ್ ದಂಡೀ ಮುಡೀಸೋಗೇ
ಕಟ್ಟೀದ ಮಂಡೀಯ ಬಿಚ್ಚಬಾರಲಕ್ಕಾ
ಹೂಂಗ್ನ ಮೆನೂಂಗಾ ಮುಡೀಸೋಗೇ
ಅಟ್ಟಂದಾ ಮಾತಾ ಕೇಳಾಳೆ ರುಕುಮಿಣಿ
ದಂಡೀ ಮೆನ್ ದಂಡೀ ಮುಡೀಸಾಳೆ । ರುಗುಮಿಣಿ
ಹೂಂಗ್ನ ಮ್ಯೆನೂಂಗಾ ಮುಡೀಸಾಳೆ
ಹೂಂಗ್ನ ಮ್ಯೆನೂಂಗಾ ಮುಡಿಸ್ವದ್ನು ದೇವಿಯರು
ಕುಳ್ತಾ ಮಂಚವಾ ಜಡೋದೆದ್ದೇ
ಕುಳ್ತಾ ಮಂಚವಾ ಜಡದೆದ್ದಿ ದೇವಿಯರು
ರಾಜಬಿದಿಗಾಗೇ ನೆಡದಾರೆ
ರಾಜಬಿದಿಗಾಗೇ ಬರುವದನ್ನು ದೇವರು

ದೇವಿಯರಿಗೆದುರಾಗಿ ಬರುವರು
ದೇವಿಯರ್ ಬರುವಂಗೆ ದೆವರ್ ಎದ್ರ ಬಂದೀ
ತಲಗಾರೆ ಸಂಪುಗಿಯಾ ಬನದಲ್ಲ । ದೇವಿಯರ್ಗೆ
ಸುವರ್ನದ ಮುಳ್ಳೋ ಸುರೀದಾವೆ
ದೇವಿಯರ್ ಬರುವಂಗೆ ದೆವರ್ ಎದ್ರಬಂದೀ
ತಲಗಾರೆ ಕೆದಗಿಯಾ ಬನದಲ್ಲಿ । ದೇವಿಯರ್ಗೆ
ಸುವರ್ನದ ಮುಳ್ಳೋ ಸುರೀದಾವೇ
ಮುಳ್ಳಾ ತೆಗವಕೆ ಇಲ್ಲೆರು ಬಲ್ಲರೆ
ಬಲ್ಲಂತಾ ರಾಜ್ಯಾ ಬಟಕಳ । ಹೆಣ್ಣಾಮಕ್ಳು
ಸೆಳ್ಳುಗುರಲ್ ಮುಳ್ಳಾ ತೆಗೀವಾರೆ
ಸೆಳ್ಳುಗುರಲ್ ಮುಳ್ಳಾ ತೆಗವರಂದ್ ದೆವರು
ಬೀಸಿ ಬೆನ್ನಟ್ಟಿ ಬರುವಾರು । ದೆವರು
ರುಗುಮಿಣಿ ಅರಮನಗೇ ಬರೋವಾರು
ದೆವರಾ ಬರವಾ ಅಟುದೂರೇ ಕಂಡಾಳೆ
ಕಂಚೀನಾ ಕದವಾ ಇಡೋವಾಳು
ಕಂಚೀನಾ ಕದವಾ ಇಡ್ವದ್ನು ದೆವರು
ಹೋಗೀ ಬಾಗಲ್ಲೇ ನಿಲೋವಾರೇ
ತಾನೂ ಬರೂರೊಟ್ಗೆ ಹಿಂತಿರ್ಗಿ ಮನಿಗೋಯ್ತು
ತಾ ಬರೂರೊಟ್ಗೆ ನಿತ್ತದ್ದುಂಟಾದಾರೆ
ಗಕ್ಕಾನೆ ಅದ್ರಾ ತೊಳಿಯಾತಿದ್ದೆ
ಗಕ್ಕಾನೆ ತೊಳ್ದಾರೆ ಅಕ್ಕೀಗೂ ಆ ಮಣ್ಣು
ಇಕ್ಕೀ ಮಾಡಿಸಿದಾ ಹುಡಿಮಣ್ಣು । ಇಕ್ಕೇರಿಯ
ಕುಂಬಾರಗೆ ತಾ ಕದವಾ ತೆಗೀಯಲಾ
ಕುಂಬಾರಂವನಲ್ಲ ಕಾಣೋ ಎಂಬಪ್ಪ ಸ್ವಾಮಿಯೋ
ಬಂದೋಗಿ ವನುದಾ ವನಜಾಜೀ
ಬಂದೋಗಿ ವನುದಾ ವನಜಾಜಿ ನೇರೀಲ
ಹಕ್‌ಪಕ್ಷಿಗೊಡೆಯ ಕದಾತೆಗಿಯೇ
ಅಟ್ಟಂಬಾ ಮಾತಾ ಕೇಳಾದೇ ರುಗುಮಿಣಿ
ಬೋರೀನೇ ಕದವಾ ತೆಗದಾಳೆ
ಬೋರೀನೇ ಕದವಾ ತೆಗ್ವದ್ನು ದೆವರು
ತೂಗು ಮಂಚದಲಿ ಕುಳತಾರೆ
ತೂಗು ಮಂಚದಲಿ ಕುಳುವದ್ನು ರುಗುಮಿಣಿ
ದೆವರ ಸಿರಿಪಾದಕೆ ಸರಣಂದೇ

ಯಾರೋ ಅಂಬುದ ಬಲ್ಲೆ ದೇವರಂಬೂದರಿಯ
ದೆವರು ತನಮ್ಯೆನೆ ಮುನಿವರು
ದ್ಯೆವರು ತನಮ್ಯೆನೆ ಮುನಿವರಂದ್ ರುಗುಮಿಣಿ
ಅರಗೋಗಿ ಪಾದಾ ಹಿಡೀದಾಳೆ
ಅರಗದ ಸಿರಿಮೊಕಾ ತಡದೆತ್ತಿ ನೋಡಾರೆ
ಮೋವಾದ ಸೆರಗಿಟ್ಟಾ ಮಡದೀಯ
ಮೋವಾದ ಸೆರಗಿಟ್ಟ ಮಡದೀ ರುಗುಮಿಣಿ
ನಾನೂ ನೀನಿರುವಾ ಒಡನಲ್ಲಿ
ಹಿತ್ತಲ ಕಣಕೇ ತೆಂಗುಬಾಳಿಯೆಲ್ಲ
ಸೆಣ್ಣಿರುವಂಗೆ ತಂದಾ ಮಡೋದಿಗೆ
ಸೆಣ್ಣಿರುವಂಗೆ ತಂದಾ ಮಡದೀಗಾಗಲಂದೇ
ಬೆಳ್ಳೀ ಸಾದನವಾ[೫] ಬರದಾರೆ
ಮಾಳೂಗೀ ಒಳಗಿರುವಾ ಕಂಚು ತಾಂಬರವೆಲ್ಲ
ಚಿಕ್ಕಿರುವಂಗೆ ತಂದಾ ಮಡೋದಿಗೆ
ಚಿಕ್ಕಿರುವಂಗೆ ತಂದಾ ಮಡದೀಗಾಗಾಲಂದೀ
ಕಂಚೀನ ಸಾದನವಾ ಬರದಾರೆ

* * *

೫. ಶಾಸನವನ್ನು

ಅರ್ಜುನ

ಹೊತ್ತರ ಮುಂಚೆದ್ದಿ ಹಿತ್ತಲ್ಲೇ ಒಲಿಬಂದಿ[೧]
ಎತ್ತು ನಾಲುಗಿಯಾ ಚೊಳೋಚಿಯೇ
ಎತ್ತು ನಾಲುಗಿಯಾ ಚೋಳ್ಚೀಯ ಕೊಯ್ತಂದಿ
ಎತ್ತೂವೋ ಹಾಡಾ ಬುಡೋತಂಕೇ

ಹೊತ್ತರ ಮುಂಚೆದ್ದಿ ಹಿತ್ತಲ್ಲೇ ಒಲಿಬಂದಿ
ಹೋರಿ[೨] ನಾಲುಗಿಯಾ ಚೊಲಚೀಯೇ । ಕೊಯ್ತಂದಿ
ಹೇಳೂವೊ ಈ ಹಾಡ ತುದೀತಂಕೇ ।

ಕರದಾ ಕಾರ್ಯವಿಲ್ಲಾ ಕಿರಿದು ಬೆಸರಿಲ್ಲಾ
ಹೋಗ್ ಬನ್ನಿ ರೋಪತಿಯಾ ಅರಮನೆಗೆ । ಗಿಳಿಗೋಳೆ
ಕರ್ತನ್ನಿ ತನ್ನಾ ಮಡದೀಯಾ ।

ಹಾಲಾ ಕುಡಿಬೇಕಿದ್ರೆ ಹಣ್ಣಾ ತಿನ್ಬೇಕಿದ್ರೆ
ಬತ್ತೇನಂಬ್ ಜುತ್ವಾ[೩] ನುಡೀದಾರೆ । ಗಿಳಿಗೋಳೆ
ಹಾಲ್‌ಕುಡ್ಡಿ ಮನಗೆ ಬರೋಬೇಕೇ ।

ಅಟ್ಟಂಬಾ ಮಾತಾ ಕೇಳಾರೇ ಗಿಳಿಗೋಳು
ಹಾರಿದವರಂಬರಕೇ ಸೆರಿಯಾಗಿ । ಗಿಳಿಗೋಳು
ಅರಜೀಣ ಪುರವಾ ಗಳೀದಾವೇ । ಗಿಳಿಗೋಳು
ರೋಪತಿ ಪುರಕೇ ಅರಗಾರೆ[೪] ಗಿಳಿಗೋಳು
ಹೋಗಿ ಮಿಳಿಮನೆ ಕುಳತಾರೆ

ಹೋಗಿ ಮಿಳಿಮನೆನೆ ಕುಳುವದ್ನು ರೋಪತಿ
ಮಾಳಗ್ಗಿಂದೆರಗೇ ಬರ್‍ವಾಳೆ । ರೋಪತಿ
ಹಾಲ್ತಟ್ಟೀಲ್ ಹಾಲಾ ಎರದಾಳೆ । ರೋಪತಿ
ಬಾಳೀ ಹಣ್ಣೇಳಾ ಸುಲೀದಾಳೆ । ರೋಪತಿ
ಈಳಿ ಹಣ್ಣೇಳಾ ಸುಲೀದಾಳೆ । ರೋಪತಿ
ಹಾಲೊಳಗಣ್ಣ ಇಡೋವಾಳು । ರೋಪತಿ
ಗಿಳಿಗೋಳೊಡನೋಗಿ ನಿಲೂವಾಳು ।

---

೧. ಪ್ರದಕ್ಷಿಣೆ ಹಾಕಿ, ಸುತ್ತು ಹಾಕಿ? ೨. ಬೀಜ ಒಡೆಯದ ಎತ್ತು ೩. ಸತ್ಯ, ಋಜು ೪. ಇಳಿದವು

ಗಿಳಿಗೋಳೊಡನೋಗಿ ನಿಲುವದ್ನು ಗಿಳಿಗೋಳು
ಲಾಗೊಂದು ಮಾತಾ ನುಡೀದಾವೆ ।
ಹಾಲಾ ಕುಡಿಬೇಕಿದ್ರೆ ಹಣ್ಣ ತಿನಬೇಕಿದ್ರೆ
ಬತ್ತೇನಂಬು ಜುತ್ವಾ ನುಡಿಬೇಕು ।

ನಾನು ಬರುವಂಗೆ ಮೂರು ವರುಸಿನ ಬಾಲಿ
ಅರಜಿಣಗೆ ಕಯ್ದಾರಿ ಎರದಾರೆ ।
ಕಾನಾಗೆ[೫] ಮನೆಕಟ್ಟಿ ಉಳಿದಾರೆ ಅರಜೀಣ
ನಾಗಾಣಿ[೬]ಯೊಡನೆ ಅಡಗೂಟ । ಗಿಳಿಗೋಳೆ
ಏನ್ ಹೇಳ್ಳಿ ನನ್ನಾ ಒಡಲುರಿ । ಮಡಲುರಿ
ಗೋಳ್ಹೋಗಿ[೭] ನಾಗಾಣಿಗೆ ಅರಗಲೋ[೮] । ಗಿಳಿಗೋಳೆ

ಬತ್ತೆನಂಬ್ ಜುತವಾ ನುಡೀಹೋಗಿ । ಅಂದೇಳಿ
ಹೂಂಗಿನ ಚಬ್ಬಿ ಬಲಗಯ್ಲಿ ತಡಕಂಡಿ
ಹೂಂಗ್ನ ಹಕ್ಕಲ್ಲೇ ನೆಡದಾಳೆ । ರೋಪತಿ
ಹೂಂಗಂಬು ಹೂಂಗೆಲ್ಲ ಕೋಯಿದಾಳೆ,
ಹೂಂಗಂಬು ಹೂಂಗೆಲ್ಲ ಕೊಯ್ದಿ ದಂಡೀಕಟ್ಟಿ

ಕೆನ್ನೀಗಿಂಬಾಗೇ ಮುಡೀದಾಳೆ । ರೋಪತಿ
ತನ್ನಾ ಪಟ್ಟೀಯಾ ನೆರ್ದುಟ್ಟಿ । ರೋಪತಿ
ತನ್ಡ ಚಿನ್ನೆಲ್ಲಾ ಕೆಮಿದುಂಬಿ ರೋಪತಿ
ರಾಜಂಗ್ಳ ಮೆಟ್ಟ ಇಳೀದಾಳೆ । ರೋಪತಿ
ಬಂದೀ ಬಾಗ್ಲಲ್ಲೇ ನಿಲೋವಾಳು । ರೋಪತಿ

ಮಾಳೂಗಿ ಒಳುಗೆ ನೆಡದಾಳೆ । ರೋಪತಿ
ಸುತ್ತೇಳು ಮಾಳುಗ್ಗಿಯ ಅರಸಾಳೆ । ರೋಪತಿ
ಅರ್ಜಣ್ಣಾ ಹೊಳಲ್[೯] ತನಗಿಲ್ಲ । ಅಂದೇಳೇ
ಮಾಲಗ್ಗಿಂದೆರಗೇ ಬರೋವಾಳೇ ।

ಬರುವಾದಿಲ್ಲಂದಾರು ವಾಲಿಯ[೧೦] ಕಳಗಾರೆ
ಜೂತರ್[೧೧] ತಾವೆತ್ತ ನೆಡದಾರೆ । ಅಂದೇಳೇ
ಸಿಟ್ಟಿನಲ್ಲೆದ್ದೇ ಮನೆಗೋಯ್ತೇ ।
ಸಿಟ್ಟಿನಲ್ಲೆದ್ದೇ ಮನಗೋಗ್ವದ್ನು ನಾಗಾಣಿ
ಅರ್ಜಣ್ಗೆ ಸಾಪಾ ಇಡೋವಾಳೆ । ಏನಂದಿ

---

೫. ಅಡವಿಯಲ್ಲಿ ೬. ನಾಗಕನ್ನೆ, ನಾಗಿಣಿ ೭. ನೋವುಹೋಗಿ ೮. ತಟ್ಟಲಿ ೯. ಹೊಳವು, ಸುಳಿವು
೧೦. ಓಲೆ ೧೧. ಸತ್ಯವಂತರು,

ಅರ್ಜಿಣ್ಣ ಸುಮ ನಿದ್ರಿ[೧೨] ಹುರಿಯಲಿ[೧೩] । ಅಂಬುದ್ನ
ಅರ್ಜೀಣ ಮಯ್ಮುರದೇ ಕುಳತಾನೆ । ಅರ್ಜೀಣ
ಪಟ್ಟೀ ನೆರಿಹೊಯ್ದೇ ಉಡೋವಾರೆ ।

ಪಟ್ಟೀಗೆರಿಹೊಯ್ದೇ ಉಡುವಾನೇ ಅರ್ಜೀಣ
ಬೆರಳೀಗುಂಗಲವ ಇಡೋವಾನೆ । ಅರ್ಜಿಣ
ಮುತ್ನ ಮುಂಡಾಸ್ನ ತಲಗ್‌ಸುತ್ತಿ । ಅರ್ಜೀಣ
ಮಾಳಗ್ಗಿಂದ್ಹೆರಗೇ ಬರೋವಾನೆ । ಅರ್ಜೀಣ
ನಾಗಾಣಿಗೆ ಸಾಪಾ ಇಡೋವಾನೆ ।
ನಾಗಾಣಿಗೆ ಸಾಪಾಏನಂದಿ ಇಡುವಾನೇ
ಹಗಲಂಬುದ ದಾತ್ರೇ ನೆನಸಾನೆ । ಅರ್ಜೀಣ
ನಾಗಾಣಿಗ್ ಸುಮನಿದ್ರಿ ಕಮೀಯಾಲಿ ।
ನಾಗಾಣಿಗ್ ಸುಮನಿದ್ರಿ ಕಮಿಯಾಲಿ ಅಂದೇಳಿ

ರಾಜಮಾರ್ಗಲ್ಲೇ ನೆಡದಾನೆ. । ಅರ್ಜೀಣ
ಬಂದೀ ಬೀದ್ಯಲ್ಲಿ ನಿಲೋವಾನೆ । ಅರ್ಜೀಣ
ನಾಗಾಣಿಗ್ ಸಾಪಾ ಇಡೋವಾನೆ । ಏನಂದಿ
ನಾಗಾಣಿಗ್ ಸುಮ್‌ನಿದ್ರಿ ಹುರಿಯಾಲಿ । ಅಂಬುದ್ನು
ನಾಗಾಣಿ ಮಯ್ಮುರಿದೆದ್ದು ಕುಳತಾಳೆ । ನಾಗಾಣಿ
ಸುತ್ತೇಳು ಮಾಳುಗಿಯ ಅರಸಾಳೆ । ನಾಗಾಣಿ
ಅರ್ಜಿಣ್ಣ ಹೊಳಲು ತನಗಿಲ್ಲ । ಅಂದೇಳಿ
ಬಿದ್ದ ಮಾರಿಗವ ಹಿಡೀದಾಳೆ । ನಾಗಾಣಿ
ಅರಜಿಣ್ಗೆ ಎದರಾಗೇ ನಿಲೋವಾಳೆ ।

ಕೊಮ್ಮಣೀ[೧೪] ಗಂಡಾಗೇ ಇನ್ನೆಟ್ಟು ಕೊಮ್ಮಾಣಿ
ಅಂದೇಳಿ ಗಂಡನಾ ಹಿಡಕಂತೇ । ನಾಗಾಣಿ
ಬೆರಳೀ ನುಂಗಲವ ಕಸಗಂತೇ[೧೫] । ನಾಗಾಣಿ
ಉಟ್ಟ ಪಟ್ಟೀಯ ಕಸಗಂತೇ । ನಾಗಾಣಿ
ಜೀವತಾನೊಂದು ಉಳಸದೆ । ನಾಗಾಣಿ
ತನ್ನಲರಮನಗೇ ಬರೋವಾಳೇ ।

ತನ್ನಲರಮನಗೇ ಬರುವದ್ನು ಅರಜೀಣ
ತನ್ನ ಮನಿಕೂಸ್ನ ಕರದಾನೆ ।

---

೧೨. ಹೂನಿದ್ದೆ   ೧೩. ಹೋಗಲಿ, ತಿಳಿಯಾಗಲಿ,   ೧೪. ರಸಿಕ   ೧೫. ಕಸಿದುಕೊಂಡಳು

ಕರದಾಕಾರೀಕೇ ಬಂದಾನೇ ಮನಿಕೂಸಾ
ನಿಂದಾನೇ ಅರ್ಜಿಣ್ಣ ಒಡನಲ್ಲಿ ।
ಏನು ಕರೆದಿರಿ ಸೊಮಿ ಎಂತು ಕರೆದಿರಿಸೊಮಿ
ಕರದಾ ಬೆಸನವಾ[೧೬] ತನಗೇಳಿ ।

ಇದ್ದದ ಬಿದ್ದದ ನಾಗಾಣ್ಣೊಯ್ಕಂಡೋಯ್ತು[೧೭]
ಜೀವ ತಾನೊಂದು ಉಳದದೆ । ಮನಿಕೂಸಾ
ಹೋಗ್ ಬಾರೋ ಕುಸುಮಾಲಿ ಅರಮನಗೆ ।

ಅಟ್ಟಂಬು ಮಾತಾನೇ ಕೇಳಾನೆ ಮನಿಕೂಸಾ
ಕುಸುಮಾಲಿ ಅರಮನಿಗೆ ನೆಡದಾನೆ । ಮನಿಕೂಸಾ
ಹೋಗಿ ಬಾಗ್ಲಲ್ಲೇ ನಿಲೋವಾನೆ ।
ಹೋಗಿ ಬಾಗ್ಲಲ್ಲೇ ನಿಲ್ವದ್ನು ಕುಸುಮಾಲಿ

ಯಾವಾಗು ಅರ್ಜಿಣರಾ ಅರ್ಮಲ್ಲಿರು ಮನಿಕೂಸಾ
ಏನ್‌ಬಂದ್ಯೋ ನನ್ನಾ ಒಡ್ನಲ್ಲಿ ।

ಅಟ್ಟಂಬು ಮಾತಾನೇ ಕೇಳಾನೇ ಮನಿಕೂಸಾ
ಆಗೊಂದು ಮಾತಾ ನುಡೀದಾನೆ ।
ಇದ್ದೆದ ಬಿದ್ದದ ನಾಗಾಣ್ಣೊಯ್ಕೊಂಡೋಯ್ತು
ಜೀವತಾನೊಂದು ಉಳದದೆ । ಕುಸುಮಾಲಿ
ದೇವರ ಮಸ್ತವಡವೀಯಾ ಕೊಡಬೇಕೇ ।

ಕುಸ್ಮಾಲಿ ಮುಂದಾಗಿ ಮನಿಕೂಸಾ ಹಿಂದಾಗಿ
ನಾಗಾಣಿ ಅರಮನಗೇ ನಡದಾರೆ । ಕುಸುಮಾಲಿ
ಹೋಗಿ ಬಾಗಲ್ಲೇ ನಿಲ್ವಾಳೇ । ಕುಸ್ಮಾಲಿ
ಆಗೊಂದು ಮಾತಾ ನುಡೀದಾಳೇ

ಯಾವೂರ್ಗೆ ಹೋಗಿದೆಯೇ ಯಾಹೂಂಗಾ ಮುಡದದಿಯೇ
ಯಾರ ಕಯ್ಯೊಡವಿ ಕಸದದಿಯೇ । ನಾಗಾಣಿ

ತಂದೊಡವಿ ಬ್ಯೆಗೇ ಕೊಡಬೇಕೇ ।
ತಂದೊಡವೀ ಬ್ಯೆಗೇ ಕೊಡದೇಯಿದ್ದಾರೆ
ಮುಂಗುರಿ[೧೮] ಕೂಡ್ ನಿನ್ನಾ ಮುರಿಸೂವೆ । ನಾಗಾಣಿ
ಗಿಡಗನ ಕೂಡ್ ನಿನ್ನಾ ಒದೀಸುವೆ ।

---

೧೬. ಕಾರ್ಯವನ್ನು, ಕಾರಣವನ್ನು   ೧೭. ನಾಗಕನ್ನೆ ಒಯ್ದಳು   ೧೮. ಮುಂಗುಸಿ

ಅಟ್ಟಂಬು ಮಾತಾ ಕೇಳಾಳೇ ನಾಗಾಣಿ
ತಂದೊಡವಿ ಬೈಗೇ ತರೋವಾಳು । ನಾಗಾಣಿ
ಕುಸುಮಾಲಿ ಬಲಗಯ್ಲಿ ಕೊಡೋವಾಳು ।

ಕುಸುಮಾಲಿ ಬಲಗಯ್ಲಿ ಕೊಡುವದ್ನು ಕುಸುಮಾಲಿ
ಎಯ್ಡು ಕಯ್ಯೊಡ್ಡೆ ತಡದಾಳಿ । ಕುಸ್ಮಾಲಿ
ಮನಿಕೂಸ್ನ ಬಲಗಯ್ಲೇ ಕೊಡೋವಾಳೇ ।

ಕೊಟ್ಟ ಒಡವೀಯ ತಟ್ಟನೇ ತಡಕಂಡೇ
ಗಾಡಾಗೇ[೧೯] ಓಡೇ ಬರೋವಾನೇ । ಮನಿಕೂಸಾ
ಅರ್ಜಿಣ್ನ ಸಾಯ್ತಿ[೨೦] ಕೊಡೋವಾನೇ ।
ಅರ್ಜಿಣ್ನ ಸಾಯ್ತಿ ಕೊಡ್ವದ್ನು ಅರ್ಜೀಣ

ತಮ್ಮಾ ವಸ್ತದಿಯಾ[೨೧] ಇಡೋವಾನೆ । ಅರ್ಜೀಣ
ರೋಪತಿ ಅರಮನ್ಗೆ ಬರೋವಾನೆ । ಅರ್ಜೀಣ
ಬಂದೀ ಬಾಗಲ್ಲೇ ನಿಲೋವಾನೇ ।
ಬಂದೀ ಬಾಗಲ್ಲೆ ನಿಲುವದ್ನು ರೋಪತಿ
ತಡ್ಡಳೇ ಚಂಬಗಲೇ ಉದಕವ.

ಮಡದೀ ಕೊಟ್ಟುದಕಾ ಬೆಗಾದಲ್ ತಡ್ದಾನೆ
ಕಾಲು ಸಿರಿಮೊಕವಾ ತೊಳದಾನೆ । ಅರ್ಜೀಣ
ಮಾಳೂಗಿ ಒಳಗೆ ನೆಡದಾನೆ । ಅರ್ಜೀಣ
ತೂಗುಮಂಚದ ಮೆ–ನೇ ಕುಳತಾನೆ ।
ತೂಗು ಮಂಚದ ಮೆ–ನೆ ಕುಳುವದ್ನು ರೋಪತಿ
ಬೆಳ್ಳಿ ಸಂಬಳಗಿ ಬೆಳಿಯೆಲೆ । ಅಡಕೀಬಾಗ
ಹಾಲಿನಲಿಬೆಂದ ತೆನಿಸುಣ್ಣ । ತಡಕಂಡಿ
ನಲ್ಲಗೊಂದೀಳ್ಯ ಕೊಡೋವಾಳೆ ।

ಎಲಿಯೊಂದ ತಿಂದಾನೇ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡಿದಾನೆ । ಮಡದೀಕೇಳೇ
ಅಡಗೀಲೂಟಕೆ ಅನುಮಾಡೇ ।

ಅಟ್ಟಂಬ ಮಾತಾ ಕೇಳಾಳೇ ರೋಪತಿ
ಹಾಲ್ಗಂಜಿಲೂಟಕೇ ಅನುಮಾಡಿ । ರೋಪತಿ
ಸಣ್ಣ ಗಿಂಡ್ಯಲ್ಲಿ ಉದಕವ ತಡಕಂಡೇ
ಗಂಡನೊಡನೋಗಿ ನಿಲೋವಾಳೆ । ರೋಪತಿ
ಗಂಡಗೆ ಉದಕಾ ಕೋಡೋವಾಳೆ ।

---

೧೮. ಮುಂಗುಸಿ ೧೯. ಜೋರಾಗಿ ೨೦. ಸಾಮಗ್ರಿ ೨೧. ವಸ್ತು ಒಡವೆ

ಮಡದೀ ಕೊಟ್ಟುದಕಾ ತಟ್ಟಾನೇ ತಡದಾನೆ
ಕಾಲು ಸಿರಿಮೊಕವಾ ತೊಳದಾನೆ । ಅರ್ಜೀಣ
ಊಟಕರೆ ಹೋಗಿ ಕುಳತಾನೆ ।

ಬೆಳ್ಳಿ ಹರವಳ ಬೆಳಗಿರಸಿ[೨೧] ರೋಪತಿ
ಹಾಲೂ ಗಂಜೀಯಾ ಬಡಸಾಳೆ । ರೋಪತಿ
ತುಪ್ಪಾ ಸಕ್ಕರಿಯಾ ಎರದಾಳೆ ।
ತುಪ್ಪಾ ಸಕ್ಕರೆಯಾ ಎರ್ದಿ ತಿರಗುರೊಟ್ಗೆ
ಉಂಡೆದ್ದನೊಂದು ಗಳಗ್ಯಲ್ಲೇ ।

ಉಂಡನೂಟವೇ ತೊಳ್ದಾನೇ ಚಂದ್ರಸ್ತವೇ[೨೩]
ತೂಗು ಮಂಚದ ಮೇನೇ ಕುಳತಾನೆ ।
ತೂಗು ಮಂಚದ ಮೆ–ನೇ ಕುಳುವದ್ನು ರೋಪತಿ
ತನ್ನೂಟಕೆ ತಾನು ಎಡಮಾಡೇ । ರೋಪತಿ
ಉಂಡೆದ್ದಳೊಂದು ಗಳಗ್ಯಲ್ಲಿ ।

ಉಂದಾಳೂಟವ ತೊಳದಾಳೇ ಚಂದ್ರಸ್ತವ
ಎಂಜಲ ಮಯ್ಲುಗಿಯ ಬಳಗಾಳೆ[೨೪] । ರೋಪತಿ
ಬೆಳ್ಳಿ ಸಂಬಳಗಿ ಬೆಳಿಯೆಲೆ । ಅಡಕೀಬಾಗಾ
ಹಾಲಿನಲಿ ಬೆಂದ ತೆನೆಸುಣ್ಣಾ । ತಡಕಂಡಿ
ನಲ್ಲಗೊಂದೀಳ್ಯ ಕೊಡೋವಾಳು ।

ಎಲಿಯೊಂದು ತಿಂದಾನೇ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡವಾನೆ ।
ಆಗೊಂದು ಮಾತಾ ಏನಂದಿ ನುಡದಾನೆ
ಮಂಚಕೆ ಹಾಸಾ ಬಿಡಸೋಗು ।

ಅಟೊಂದು ಮಾತಾ ಕೇಳಾಳೇ ರೋಪತಿ
ಮಂಚಕೆ ಹಾಸಾ ಬಿಡಸಾಲೆ ।
ಮಂಚಕೆ ಹಾಸಾ ಬಿಡಸುದ್ನು ಅರ್ಜೀಣ
ಹಾಸನ ಮೆ–ನೋಗಿ ಒರಗಾನೆ ।
ಹಾಸನ ಮೆ–ನೋಗಿ ಒರಗ್ವದ್ನು ನಾಗಾಣಿಗೆ
ಅಲ್ಲಿದ್ದೇ ಸಪನ[೨೫] ಬೀಳ್ವದು ।

---

೨೧. ತೊಳೆದಿಟ್ಟು   ೨೩. ಚಂದ್ರ ಹಸ್ತವನ್ನು   ೨೪. ತೆಗೆದಾಳೆ   ೨೫. ಸ್ವಪ್ನ

ಅಲ್ಲಿದ್ದೇ ಸಪನ[೨೫] ಬೀಳ್ವದ್ನು ನಾಗಾಣಿ
ಬಿದ್ದ ಮಾರ್ಗವ ಹಿಡದಾಳೆ । ನಾಗಾಣಿ
ರೋಪತಿದ್ದರಮನಗೇ ಬರೋವಾಳೆ ।

ಬಾಗ್ಲದೇ ಹೋದರೆ ಬಾಗ್ಲ ಹಿಡಿಯಾ ಅಂದಿ
ಹತ್ತಿ ಮಣಿಮಾಡಾ ಇಳದಾಳೆ । ನಾಗಾಣಿ
ಹಾಸಾಮೆನೋಗೇ ಕುಳತಾಳೆ । ನಾಗಾಣಿ
ಅರ್ಜಿಣನ ಮುಸಕಾ ತೆಗದಾಳೆ । ನಾಗಾಣಿ
ತನ್ನ ಮುತ್ತಯ್ತನ್ಹೋಕಂದಿ[೨೬] । ನಾಗಾಣಿ
ಅರ್ಜಿಣ್ನ ಮುಸಕಾ ಮಡಗಾಳೆ । ನಾಗಾಣಿ
ರೋಪತಿ ಮುಸಕಾ ತೆಗ್ದಾಳೆ । ನಾಗಾಣಿ
ರೋಪತಿಗಿಟ್ ಇಸವಾ ಉಗಳಿಕ್ಕಿ । ನಾಗಾಣಿ
ಹತ್ತಿ ಮಣಿಮಾಡಾ ಇಳದಾಳೆ । ನಾಗಾಣಿ
ತನ್ನಲರಮನಗೇ ಬರೋವಾಳೆ ।

ತನ್ನಲರಮನಗೇ ಬರ್ವದ್ನು ಅರ್ಜೀಣ
ಮೆಯ್ಯ ಮುರದೆದ್ದಿ ಕುಳತಾನೆ । ಅರ್ಜೀಣ
ಪನ್ನೀರ ಗಿಂಡೀ ಬಲಗಯ್ಲಿ । ತಡಕಂಡಿ
ಪನ್ನೀರಲಿ ಮೊಕವಾ ತೊಳದಾನೆ । ಅರ್ಜೀಣ
ಆಗೊಂದು ಮಾತಾ ನುಡದಾನೆ ।

ಕೂಡನ್ ಗರತೀರು ಎಸರೆತ್ ಮಸರಾ ಕಡದೇ
ಜೋಡಲ ಕೊಡಪನವ ತಡದಾರೆ । ನಮ್ಮನಿಯಾ
ನಿದ್ಗೇಡಿಗ್[೨೭] ನಿದರೀ[೨೮] ಹುರೀಲಿಲ್ಲ । ಅದೇಳೇ
ಮಡದೀಯ ಮುಸಕಾ ತೆಗದಾನೆ ।
ಮಡದೀಯ ಮುಸಕಾ ತೆಗದರೆ ರೋಪತಿಗೆ
ಅಲ್ಲೇ ಜೀವದಲೆ ಮರಣಾವೇ । ಅರ್ಜೀಣ
ಆಗೊಂದು ಮಾತಾನುಡದಾನೆ ।

ಕಾನಾನ್ಹೆಣ್ಣಕ್ಳು[೨೮] ಕಾನಾಗೇ ಇರುತಿದ್ರು
ನಾಬಂದ್ ಗೊ–ಬೀಗೇ[೨೯] ಗುರಿಯಾದೆ ।
ಬೆಟ್ಟಾದ್ಹೆಣ್ಮಕ್ಳು ಬೆಟ್ದಲ್ಲೇ ಇರುತೀರು
ನಾಬಂದ್ ಗೊ–ಬೀಗೇ ಗುರಿಯಾದೆ ।

---

೨೬. ಹೋಗುತ್ತದೆಂದು ೨೭. ನಿದ್ದೆಬಾಕಳಿಗೆ ೨೮. ನಿದ್ದೆ ೨೮. ಅಡಿಹೆಣ್ಣು ಮಕ್ಕಳು ೨೯. ಕಷ್ಟಕ್ಕೆ

ನಾಬಂದ್ ಗೊ–ಬೀಗೇ ಗುರಿಯಾದೆ ಅಂದ್ ಅರ್ಜೇಣ
ಬಿದ್ದ ಬಿದ್ದಲ್ಲೇ ಮರಗಾನೆ । ಅರ್ಜೇಣ
ತನ್ನಾ ಮನಿಕೂಸ್ನಾ ದೆನಿದೂರೇ ।

ಕರದಾಕಾರೀಕೇ ಬಂದಾನೇ ಮನಿಕೂಸಾ
ನಿಂದಾನೇ ಅರ್ಜೆಣ್ನಾ ಒಡನಲ್ಲಿ ।
ಏನು ಕರದಿರಿ ಸೊಮಿ ಎಂತು ಕರದಿರಿ ಸೊಮಿ
ಕರದಾ ಬೆ–ಸನವಾ ತನಗೇಳಿ ।

ಕರದಾ ಕಾರಿಲ್ಲ ಕಿರಿದು ಬೆಸರಿಲ್ಲ
ಹೋಗ್‌ಬಾರೋ ಕುಸ್ಮಾಲಿ ಅರಮನೆಗೆ । ಮನಿಕೂಸಾ
ಕುಸ್ಮಾಲಿ ಇಲ್ಲಿಗೆ ಬರೋಬೇಕೇ ।

ಕುಸ್ಮಾಲಿ ಇಲ್ಲಿಗೆ ಬರ್ಬೇಕೋ ಅಂಬುದ್ನು ಮನಿಕೂಸಾ
ಕುಸ್ಮಾಲಿ ಅರ್ಮನಗೇ ನೆಡದಾನೆ ।
ಕುಸ್ಮಾಲಿ ಅರ್ಮನಗೇ ನೆಡ್ವದ್ನು ಕುಸ್ಮಾಲಿ
ಏನು ಕಾರಣಲಿ ಬರವೀಯೋ ಅಂಬುದ್ನು
ಮನಿಕೂಸ ಒಂದ್ ಮಾತಾ ನುಡದಾನೆ ।
ಮನಿಕೂಸ ಒಂದ್ ಮಾತಾ ಏನಂದಿ ನುಡದಾನೆ
ನಾಗಾಣಿ ಇಸ್ವಾ ಎರದ್ ಬಂದು । ರೋಪತಿಗೆ
ಅರ್ಜೇಣ ದುಕ್ಕಾದಲ್ಲೇ ಇರೋವಾನೆ । ಅಂದೇಳಿ
ನಿನ್ನಾ ಕರವಕೆ ಕಳಗಾರೆ ।
ಅಟ್ಟಂಬಾ ಮಾತಾ ಕೇಳಾಳೇ ಕುಸ್ಮಾಲಿ
ನಾಗಾಣಿ ಅರಮನೆಗೆ ನೆಡದಾಳೆ ।
ಯಾವೂರಿಗ್ ಹೋಗಿದೆ ಯಾಹೂಂಗಾ ಮುಡದಿದಿಯೇ
ಯಾರಿಗೆ ಇಸವಾ ಉಗಳದಿಯೇ । ನಾಗಾಣಿ
ನೀನಿಟ್ಟ ಇಸವಾ ತೆಗೆ ಬೆ–ಗೆ ।
ನೀನಿಟ್ಟ ಇಸವಾ ತೆಗೆಯದೆ ಇದ್ದರೆ
ಗಿಡಗನ ಕೂಡ್ ನಿನ್ನಾ ಒದಿಸೂವೊ ।

ನಾಗಾಣಿ ಮುಂದಾಗಿ ಕುಸ್ಮಾಲಿ ಹಿಂದಾಗಿ
ರೋಪತಿ ಅರಮನಗೇ ಬರೋವಾರೆ ।
ರೋಪತಿ ಅರಮನ್ಗೆ ಬರುವದ್ನು ಕುಸ್ಮಾಲಿ
ಹೋಗಿ ಬಾಗಲೇ ನಿಲುವಾಳೇ । ಕುಸ್ಮಾಲಿ
ತೂಗು ಮಂಚದ್ಲೇ ಕುಳತಾಳೆ ।
ತೂಗು ಮಂಚದ್ಲೇ ಕುಳುವದ್ನು ನಾಗಾಣಿ
ಹತ್ತಿ ಮಣಿ ಮಾಡ ಇಳದಾಳೆ । ನಾಗಾಣಿ

ತಾನಿಟ್ಟ ಇಸವಾ ತೆಗದಾಳೆ । ನಾಗಾಣಿ
ಹತ್ತಿ ಮಣಿ ಮಾಡ ಇಳದಾಳೆ । ನಾಗಾಣಿ
ಮಾಳಗ್ಗಿಂದೆರಗೇ ಬರುವಾಳೇ ।

ಮಾಳಗ್ಗಿಂದ್ದೆರಗೇ ಬರುವದ್ನು ರೋಪತಿ
ಮಿಯ್ಯಾ ಮುರದೆದ್ದೇ ಕುಳತಾಳೇ । ರೋಪತಿ
ಕಯ್ಕಾಲು ಸಿರಿ ಮೊಕವಾ ತೊಳದಾಳೆ । ರೋಪತಿ
ಅಕ್ಕಾನೊಡನೋಗೇ ಕುಳತಾಳೆ ।
ಅಕ್ಕಾನೊಡನೋಗೆ ಕುಳವದ್ನು ಕುಸ್ಮಾಲಿ
ತಂಗೀಗೊಂದೀಳ್ಯ ಕೋಡೋವಾಳೆ ।

ಅಕ್ಕ ಕೊಟ್ಟೀಳ್ಯ ಬೆ–ಗಾದಲ್ ತಡಕಂಡೇ
ಅಕ್ಕನ ಸಿರಿಪಾದಕೇ ಸರಣಂದೇ ರೋಪತಿ
ಬಿದ್ದ ಬಿದ್ದಲ್ಲೇ ಮರೂಗ್ವಾಳೇ ।
ಬಿದ್ದ ಬಿದ್ದಲ್ಲೇ ಏನಂದೀ ಮರುಗ್ವಾಳೇ
ಹೊಟ್ಟೆಲಿ ಹೆಣ್ಣೊಂದು ಹುಟ್ಟೀರೆ । ಅಕ್ಕಾ ಕೇಳೆ
ನಿನ್ಹೆಸ್ರು ಅದಕೆ ಇಡತೀದೆ ।
ನಿನ್ಹೆಸ್ರು ಅದಕೆ ಇಡತೀದೆ ಅಕ್ಕಾ ಕೇಳು
ಹೆಣ್ಣ ಸಂತನವೇ ಮೊದಲಿಲ್ಲ ।

ಸುಭದ್ರೆ

ಹನ್ನೆಯ್ಡುವರಸೀನಾ ಸೆಣ್ಣವಳು ಸೂಭದ್ರೆ
ಮತ್ತೆ ಮಂಗಲಕೆ ನೆರದಾಳೆ ।
ಮತ್ತೆ ಮಂಗಲಕೆ ನೆರದಾಳೆಂದ್ ಮಾದೇವಿ
ಹೂಂಗೀನ ಚಬ್ಬೀ ತಡದಾಳೆ । ಮಾದೇವಿ
ಮಾಳಗ್ಗಿಂದೆರಗೇ ಬರೋವಾಳೆ । ಮಾದೇವಿ
ರಾಜಂಗ್ಳ ಮೆಟ್ಟಾ ಇಳೀದಾಳೆ । ಮಾದೇವಿ
ರಾಜೂಬಿದಿಗಾಗೇ ನೆಡೂದಾಳೆ । ಮಾದೇವಿ
ಹೂಂಗೀನಕ್ಕಲಗೇ[೧] ನೆಡದಾಳೆ । ಮಾದೇವಿ
ಹೂಂಗೀನಕ್ಲ್ ಬೇಲಿ ತೆಗದಾಳೆ । ಮಾದೇವಿ
ಹೂಂಗೀನಕ್ಲೊಳಗೇ ನೆಡದಾಳೆ । ಮಾದೇವಿ
ಎಳಿಯಾ ಸಿಂಗರವಾ ಒಗದಾಳೆ । ಮಾದೇವಿ
ಹೂಂಗಂಬು ಹೂಂಗೆಲ್ಲಾ ಕೊಯೀದಾಳೆ

ಹೂಂಗಂಬು ಹೂಂಗೆಲ್ಲಾ ಕೊಯ್ದೀದಂಡೀ ಕಟ್ಟೀ
ಹೂಂಗ್ನ ಚಬ್ಬೀಲೇ ಮಡೂಗಾಳೆ[೨] । ಮಾದೇವಿ
ಹೂಂಗ್ನಕ್ಕಲೆರಗೇ ಬರೋವಾಳೆ । ಮಾದೇವಿ
ಬಂದೀ ರಾಜಂಗ್ಳಾ ನೆಗದತ್ತೀ । ಮಾದೇವಿ
ಮಾಳೂಗೀ ಒಳಗೇ ನೆಡದಾಳೆ । ಮಾದೇವಿ
ಹೂಂಗೀನಾ ಚಬ್ಬೀ ಮಡಗಾಳೆ । ಮಾದೇವಿ
ಸಿಕ್ಕದಾ ಕಣ್ಣಾ ಸೆಡೂಲೀಸಿ । ಮಾದೇವಿ
ನೆತ್ತೀ ತುಂಬೆಣ್ಣೀ ಎರದಾಳೆ । ಮಾದೇವಿ

ಬಣ್ಣದ ಬಾಚಣಗೀ ಬಲಗಯ್ಲಿ । ತಡಕಂಡೇ[೩]
ಮಾಳಗ್ಗಿಂದೆರಗೇ ಬರೋವಾಳೆ । ಮಾದೇವಿ
ತೂಗೂ ಮಂಚದಲೇ ಕುಳತಾಳೆ । ಮಾದೇವಿ
ಕೆನ್ನೀಯಾ ನೆಗ್ರಾ[೪] ಎಡ್ಕೊತ್ತೇ ಬಲ್ಕೊತ್ತೇ
ಬಲ್ಲಾಳಾರಂಬಾ ಬಗತಲೆ । ತೆಗದಿನ್ನೇ

೧. ತೋಟಕ್ಕೆ ೨. ತುಂಬಿದಳು ೩. ತೆಗೆದುಕೊಂಡು ೪. ಕೂದಲು

ಇಕ್ಕೀ[೫] ಕಟ್ಟಿದಳೇ ಸೆರುಮುಡಿಯೇ[೬] । ಮಾದೇವಿ
ಎಳಿಯಾ ಸಿಂಗರವಾ ಮುಡೀದಾಳೇ । ಮಾದೇವಿ ಮಾದೇವಿ
ಹೂಂಗಂಬು ಹೂಂಗೆಲ್ಲಾ ಮುಡಿದಾಳೇ । ಮಾದೇವಿ
ಕೂತಾ ಮಂಚವ ಜಡದೆದ್ದೇ । ಮಾದೇವಿ
ಮಾಳೂಗೀ ಒಳಗೆ ನೆಡದಾಳೇ । ಮಾದೇವಿ
ಬಣ್ಣದ ಬಾಚಣಗೀ ಮಡೂಗಾಳೇ । ಮಾದೇವಿ

ಅಟ್ಟತ್ತಿ ಪೆಟ್ಟುಗಿಯಾ ತೆಗದಾಳೆ । ಮಾದೇವಿ
ಪೆಟ್ಟೂಗೀ ಬೀಗವಾ ಕರೀದಾಳೆ । ಮಾದೇವಿ
ತನ್ನಾ ಪಟ್ಟೀಯಾ ನೆರದುಟ್ಟೇ । ಮಾದೇವಿ
ತನ್ನಾ ಚಿನ್ನೆಲ್ಲಾ ಕೆಮೀ[೭]ದುಂಬೇ । ಮಾದೇವಿ
ನೊಸಲಿಗೆ ಸಿರಿಗಂದಾ ಇಡೋವಾಳೇ । ಮಾದೇವಿ

ಹಸ್ತಕಡ್ಗ ಜೋಡೆಯ್ಡಾ ಮಡಲಲ್ಲೇ । ಲ್ಲೀ । ಟ್ಟೀಗಂಡೆ
ಪೆಟ್ಟೂಗೀ ಬಾಯಲ್ಲೇ ಮಡೂಗದೆ । ಮಾದೇವಿ
ಮಾಳಗ್ಗಿಂದೆರಗೇ ಬರೋವಾಳೆ । ಮಾದೇವಿ
ರಾಜಂಗ್ಳ ಮೆಟ್ಟಾ ಇಳೀದಾಳೇ । ಮಾದೇವಿ
ರಾಜ ಬಿದಿಗಾಗೇ ನೆಡದಾಳೇ । ಮಾದೇವಿ
ಅತ್ತಗೀ ಅರಮನಗೇ ನೆಡದಾಳೇ । ಮಾದೇವಿ
ಹೋಗೀ ಬಾಗಲ್ಲೇ ನಿಲೋವಾಳೇ

ಅತ್ತಗಬರುಬರವಾ ಅಟದೂರೇ ನೋಡಾಳೆ
ಮಾಳೂಗೀ ಒಳಗೇ ನೆಡದಾಳೆ । ಸೂಬದ್ರೆ
ತನ್ನಾ ಗವ್ಡೇರಾ ದೆನಿದೂರೇ
ಇಂದೂ ಕರದಮಲ್ಲ ಬಂದಾರೆ । ಗವ್‌ಡೇರು
ನಿಂದಾರೆ ಸೂಬದ್ರಿ ಒಡನಲ್ಲಿ । ಲ್। ನಿಂದೀಕಂಡೇ
"ಏನು ಕಾರಣಲೆ ಕರದೀಯೇ"

"ಕರದಂ ಕಾರ್‍ಯವಿಲ್ಲಾ ಕಿರಿದಂಬೆಸರಸಯ್ಯೆ
ಅತ್ತಗ್ ಬರು ಬರವೇ ಹೊಸಪರಿ । ಗವ್ಡೀಯೋರೆ[೮]
ತಡದೀರೆ ಚಂಬಗಲೆ ಉದಕವ.
ಪಾದಾ ತೊಳಿಯೀರೆ ಪಾವುಡದಲ್ಲುದ್ದೀರೆ

ಹೊನ್ನು ಹರಳ್ಳೊಯ್ದೇ ಸರಣನ್ನೀ । ಗವ್ಡಿಯೋರೆ
ತೂಗು ಮಂಚದಲೆ ಕುಳುವೇಳಿ"

---

೫. ಬಾಚಿ   ೬. ಸೋರ್ಮುಡಿ   ೭. ಕಿವಿ   ೮. ದಾಸಿಯರೆ

ಅಟ್ಟಂಬಾ ಮಾತಾ ಕೇಳಾರೆ ಗವ್ಡೀಯೋರು
ತಡದರೆ ಚಂಬಗಲೆ ಉದಕವೆ
ಪಾದಾ ತೊಳ್ದಾರೆ ಪಾವುಡದಲ್ಲುದ್ದಾರೆ
ಮುತ್ತೂ ಹರಳ್ದೊಯ್ದೇ ಸರಣಂದೀ । ಗವ್ಡೀಯೋರೆ
ತೂಗು ಮಂಚದಲೆ ಕುಳುವೇಳಿ.

ಇಪ್ಪತ್‌ವರ್ಸನ ಚಿಕ್ಕೋಳು ಸೂಬದ್ರೆ
ಚಿನ್ನದ ಮಣಿಮಾಡಾ ಇಳದಾಳೆ । ಸೂಬದ್ರೆ
ಮಾಳೂಗೀ ಒಳಗೆ ನೆಡದಾಳೆ.
ಆಯೊಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣ । ತಡಕಂಡಿ
ಮಾಳಗ್ಗಿಂದರೆಗೇ ಬರೋವಾಳೆ । ಸೂಬದ್ರೆ
ಅತ್ತೂಗೀ ಒಡನೋಗೇ ನಿಲೋವಾಳೆ । ಮಾದೇವಿ
ಅತ್ತಗ್ಗೊಂದೀಳ್ಯಾ ಕೊಡೋವಾಳೇ
ಅತ್ತಗ್ ಕೊಟ್ಟೀಳ್ಯಾ ತಟ್ಟಾನೆ ತಡ್ದಾಳೆ
ಹಿಡಿದಾಳೆ ಬಳಿಯಾ ನಳಿತೋಳಾ । ಮಾದೇವಿ
ಇಟ್ಟಾಳೇ ಹಸ್ತ ಕಡಗವ

"ನಾ ನಿನ್ನಣ್ಣಗೇ ವರ್ನಾಗಿ ಬಂದಿದ್ದೇ
ನೀ ನನ್ನಣ್ಣಗೆ ವರನಾಗೇ" । ಗೂ । ಅಂದೇಳೇ
ಇಟ್ಟಳೇ ಹಸ್ತ ಕಡಗವೇ
"ಅತ್ತೂಗೀ ಹೇಳಿದ ಮಾತು ಕತ್ತಿಲಿ ಕಡದಂತೆ
ಸತ್ತೆಲಿ ಪಾಂಡವರ ಕೊಮರಾಗೆ
ಸತ್ತೆಲಿ ಪಾಂಡವರ ಕೊಮರಗಲ್ಲದೆ
ಮಿಕ್ಕೀ ಸೆಟ್ಟುಗವ ತಡವಲಾರೆ"

"ನಾಚೂಕಿ ಇಲ್ಲದ ಹೆಣ್ಣೆ ಆಡಿದ್ಯ ಮರುಮಾತಾ
ಈಚೆ ಕೂತೊಂದು ನೆರ್ಗ್[೯] ಮಾಡೆ"
ಈಚೆ ಕೂತೊಂದು ಯಾತಕೆ ನೆಗೆಮಾಡ್ಲೆ
ಸಾಸಟಗಿ ತೋಳು ಹೆರಿಯಣ್ಣ । ಕೇಳಿದರೆ
ನೆಗ್ಯಾಡ್ದೋರ್ಗೆ ಸಿಕ್ಸಾ[೧೦] ಕೊಡೋವಾನೆ"

ಅಟ್ಟಂಬಾ ಮಾತಾ ಕೇಳಾಳೆ ಮಾದೇವಿ
ಸಿಟ್ಟಿನಲ್ಲೆದ್ದೇ ನೆಡದಾಳೆ । ಮಾದೇವಿ

---

೯. ನಗೆ ೧೦. ಶಿಕ್ಷೆ

ರಾಜಂಗ್ನ ಮೆಟ್ಟಾ ಇಳೀದಾಳೆ
ದೇವಾ ದೇವತ್‌ಗೋಳು ಕೂಟಾ ಕೂಡಾಡ್ವಲ್ಲಿ
ಅಲ್ಲಿಗೆ ಮಾದೇವಿ ನೆಡದಾಳೆ । ಮಾದೇವಿ
ಹೋಗ್ತಾನೆ ಗಂಡಾಗೆ ಜರದಾಳೆ ।
ಅಲ್ಲಾ ಗೆಟ್ ಗಂಡಾನೆ ದಂಡಾ ತಕ್ಕಂಬ್ ದೊರೆಯಿಲ್ಲ
ಸೂಬದ್ರಿ ಮಂಗಲಕೆ ನೆರದಾಳೆ

ದಂಡಾ ತಕ್ಕಂಬೋಕೆ ಬಂಡಾರ ಕಳಲಿಲ್ಲಾ
ಗಂಡುಳ್ಳೋರಾಕಿ ಎಳಿಯಾಲಿಲ್ಲಾ । ಮಾದೇವಿ
ನೀನೋಗ್ ಮಂಗಿಲಕೆ ಅನುಮಾಡು"
ಅಟ್ಟಂಬಾ ಮಾತಾ ಕೇಳಾಳೆ ಮಾದೇವಿ
ತನ್ನಲರುಮನಗೇ ನೆಡದಾಳೆ । ಮಾದೇವಿ
ಮಾಳೂಗೀ ಒಳಗೆ ನೆಡದಾಳೆ । ಮಾದೇವಿ
ತನ್ನಾ ಗವಡ್ಯೋರಾ ದೆನೀದೂರೇ
ಎಂದೂ ಕರದಮಲ್ಲಾ ಬಂದಾರೆ ಗವ್ಡೀಯೋರು
ನಿಂದಾರೆ ಮಾದೇವಿ ಒಡನಲ್ಲಿ । ನಿಂದೀಕಂಡೇ
ಏನುಕಾರಣಲೆ ಕರದೀಯೇ

ಕರದಂಕಾರ್ಯವಿಲ್ಲ ಕಿರಿದಂಬೆಸರ ಸಯ್ಯೆ
ಸಣಿಯಾರಾ ಸೂಬದ್ರೀ ಮದವೀಯೇ.
ಕಿತ್‌ದಲ್ಲ್ ಮಿತ್ತೀರೇ ಮಿತ್‌ದಲ್ ಸಾರ್ಸೀರೇ
ಸಾರ್ಸದಲ್ ಸೇಡೀ[೧೧] ಬರೀಯಾರೇ
ಗೇರ್ವರ್ ಗೇರೀರೇ ತಳಸ್ವರ್ ತಳ್ಸೀರೇ

ಮಿಕ್ಕಿದ್ದೋರುದ್ದಾ ಒಡೀಯಾರೇ । ಗವ್ಡೀಯೋರೆ
ಸಣಿಯಾರಾ ಸೂಬದ್ರೀ ಮದವೀಯೇ । ಅಂದ್ ಮಾದೇವಿ
ಕವ್ಲಿಂದ್ರ ನರಮನಗೇ ನೆಡದಾಳೆ ।
ಕವ್ಲಿಂದ್ರನರಮನಗೇ ನೆಡವದ್ನು ನಾರ್ಣದೆವಾ
ಕೈದೂಗೀ ಬನವಾ ಇಳೀದಾನೆ । ನಾರ್ಣದೆವಾ
ಕೈದೂಗೊಂದೊಲಿ ಒಗದಾನೆ ।

"ಚಂಬಗ ತುಂಬಿದ ತುಪ್ಪಾ ನಾವಯ್ವುರುಂಡೀದೊ
ಇಂದೀಗೆ ಏಳೋ ದಿನದಲ್ಲಿ । ಬಾವನಕಯ್ಲೇ

---

೧೧. ರಂಗೋಲಿ

ತೊಂಡಲ ಬಾಸಿಂಗಾ ಒಲದಾಡೇ
ತೊಂಡಲ ಬಾಸಿಂಗಾ ಒಲದಾಡದಿದ್ದರೆ
ಕೂಸು ಹೋಯ್ತದೆ ಪರರೀಗೆ
ಕೂಸು ಹೋಯ್ತದೆ ಪರರೀಗಂದ್ ನಾರ್ಣದೆವಾ
ಸೆಳ್ಳುಗರೀಲೊಲೀ ಬರದಾನೆ । ನಾರ್ಣದೆವಾ
ತನ್ನಾ ಗಿಳಿಗೋಳಾ ದೆನಿದೂರಿ.

ಇಂದೂ ಕರದಮಲ್ಲಾ ಬಂದಾರೆ ಗಿಳಿಗೋಳು
ನಿಂದಾರೆ ನಾರ್ಣದೆವ್ನಾ ಒಡನಲ್ಲೇ । ಲ್। ನಿಂದೀಕಂಡೇ
"ಏನುಕಾರಣಲೆ ಕರದೀಯೋ"
ಕರದಂಕಾರ್‍ಯವಿಲ್ಲಾ ಕಿರಿದಂಬೈಸರ ಸಯ್ಯೆ.
ಹೋಗ್‌ಬನ್ನಿ ಬಾವನ ಅರಮನ್ಗೆ

"ಗಿಂಡೀ ತುಂಬಿದ ತುಪ್ಪಾ ನಾವಯ್ವರುಂಡೀದೊ
ಇಂದೀಗೆ ಏಳೋ ದಿನದಲ್ಲಿ । ಬಾವನ ಕಯ್ಲೆ
ತೊಂಡಲ ಬಾಸಿಂಗ ಒಲದಾಡೇ
ತೊಂಡಲ ಬಾಸಿಂಗ ಒಲದಾಡದಿದ್ದರೆ
ಕೂಸು ಹೋಯ್ತದೆ ಪರರಿಗೆ ।
ಕೂಸು ಹೋಯ್ತದೆ ಪರರೀಗಂದ್ ನಾರ್ಣದೆವಾ
ಕೊಟ್ಟಾನೆ ಕಯ್ಯಾ ಬರದೊಲೆ

ಕೊಟ್ಟಾ ವಾಲೀಯಾ ರಟ್ಟೆಯಲಡಗಸಗಂಡೆ
ಹಾರೀದವಂಬರಕೇ ಸೆರಿಯಾಗೇ । ಗಿಳಿಗೋಳ ।
ಅರಜುಣ್ಣರ ಮನಗೇ ನೆಡದಾವೆ । ಗಿಳಿಗೋಳು
ಹೋಗಿ ಮಿಳಿಮೆನೆ ಕುಳತಾವೆ । ಗಿಳಿಗೋಳು
ಅರಗೀ ನೋಡಿದರೆ ಒಳಗೊಮ್ಮೆ । ಗಿಳಿಗೋಳು
ಆಗೊಂದು ಮಾತಾ ನುಡೀದಾವೆ
"ಮಾಳೂಗೀ ಒಳಗೆ ಹಾಲೋಗರುಂಬರಜೀಣಾ[೧೨]
ಕೇಳೀ ಬಾರೊಂದು ಹೊಸ ಸುದ್ದೇ । ಅಂಬುದ್ನು ಅರ್ಜಿಣ್ಣಾ
ಉಣತಾ ಕುಳತವ್ನೆ ಕುಡಗೆದ್ದೇ । ಅರಜಿಣಾ
ಮಾಳಗ್ಗಿಂದೆರಗೇ ಬರೋವಾನೇ । ಅರಜಿಣಾ
ಪನ್ನೀರಲಿ ಮೊಕವಾ ತೊಳದಾನೆ । ಅರಜಿಣಾ
ಗಿಳಿಗೋಳೊಡನೋಗೇ ನಿಲೋವಾನೆ.

---

೧೨. ಹಾಲು ಅನ್ನ ಉಣ್ಣುವ ಅರ್ಜುನನು

ಗಿಳಿಗೋಳೊಡನೋಗೇ ನಿಲ್ವದ್ನು ಗಿಳಿಗೋಳು
ಕೊಟ್ಟಾವೆ ಕಯ್ಯಾ ಬರದೊಲೆ.

"ಚಂಬಗ್ ತುಂಬಿದ ತುಪ್ಪಾ ನಾವಯ್ವರುಂಡೀದೊ
ಇಂದೀಗೆ ಏಳೋ ದಿನದಲ್ಲಿ । ಬಾವನ ಕಯ್ಲೆ
ಗೊಂಡೆ ಬಾಸಿಂಗಾ ಒಲದಾಡೇ ।ಡ। ದಿದ್ದರೆ
ಕೂಸು ಹೋಯ್ತುದೆ ಪರರೀಗೆ ।ಗ್। ಂದ್ ನಾರ್ಣದೆವಾ
ಕೊಟ್ಟಾನಿಯೇ ಕಯ್ಯಾ ಬರದೊಲೆ.

ಕೊಟ್ಟ್ವಾಲೀಯಾ ದುಟ್ಟೆಸ್[೧೩] ನೋಡಾನೆ
ಮಾಳೂಗೀ ಒಳಗೆ ನೆಡದಾನೆ । ಅರಜೀಣಾ
ತನ್ನಾ ನಾರ್ಯೋರಾ ದೆನಿದೂರೇ.
ಎಂದೂ ಕರದಮಲ್ಲಾ ಬಂದಾರೆ ನಾರ್ಯೋರು
ನಿಂದಾರೆ ಅರಜಿಣನಾ ಒಡನಲ್ಲೇ ।ಲ್। ನಿಂದೀಕಂಡೆ
ಏನು ಕಾರಣಲೆ ಕರದೀಯೋ.

ಕರದಂ ಕಾರ್ಯವಿಲ್ಲಾ ಕಿರಿದುಂಬೆಸರ ಸಯ್ಯೆ
ಹಾಲ್ ತಟ್ಟೀಲ್ಲಾಲಾ ಎರ ಕೊಡಿ
ಆದಾ ಹಾಲೆಲ್ಲಾ ಓದುಂಬ್[೧೪] ಮಾಣುಂಡಾ
ಮಿಕ್ಕಿದ್ದ್ ಹಾಲಗೆ ನೆರಗೊಟ್ಟೆ । ಅರಜಿಣಗೆ
ಹಾದೀಲ್ ಹೋಗ್ವರಿಗೆ ಅವದಾನಾ । ಅಂದ್ ನಾರ್ಯೋರು

ಮಾಳಗ್ಗಿಂದೆರಗೇ ಬರೂವಾರೇ । ನಾರ್ಯೋರು
ಗಿಳಿಗೋಳೊಡನೋಗೇ ನಿಲೂವಾರೇ । ನಾರ್ಯೋರು
ಆಗೊಂದು ಮಾತಾ ನುಡೀದಾರೆ
ಆಗೊಂದು ಮಾತಾ ಏನಂದಿ ನುಡೀದಾರೆ
ಹುಸ್[೧೫] ಮಾತಾತಂದೇ ಒರದೀರೋ । ಅಂಬುದ್ನು ಗಿಳಿಗೋಳು
ಆಗೊಂದು ಮಾತಾ ನುಡೀದಾರೋ
ಹುಸಿಯಾದ್ರ ಅಪ್ಪಾನಾಣಿ ಹುಸಿಯಾದ್ರ ಅವ್ವಿಯಾಣಿ
ಹುಸಿಯಾದ್ರ ನಾವ್ ಕೊಂಬು ಎರೀ[೧೬] ಆಣೀ । ಅಮ್ಮಾನೋರೆ
ಹುಸ್ಮಾತಾ ತಂದೀ ಒರಿಯಾಲಿಲ್ಲಾ । ಅಮ್ಮಾನೋರೆ
ನೀವುಟ್ಟಾ ಹೂಬಣ್ಣಾದಾಣೀ ಹುಸಿ ಇಲ್ಲಾ । ಅಮ್ಮಾನೋರೆ

ಯಾವೂರ ಹಕ್ಕಿಯೇ ನೀವು ಯಾವೂರ ಪಕ್ಷಿಯೇ ನೀವು
ಯಾವಲ್ಲೋ ನಿಮ್ಮಾ ಮನೆಮಟಾ

---

೧೩. ದೃಷ್ಟಿಸಿ   ೧೪. ಓದಿ ಉಣ್ಣುವ   ೧೫. ಸುಳ್ಳು   ೧೬. ಆಹಾರ

"ಗೂಡುಂಟಾ ಹಕ್ಕಿಗೆ ಗೂಡುಂಟಾ ಪಕ್ಷಿಗೆ
ಕೋಡುಂಟಾ ಕಾಡಾ ಮಿಗವೀಗೆ । ಅಮ್ಮಾನೋರೆ
ಹೊದಲ್ಲೇ ನಮ್ಮಾ ಮನೆಮಟಾ

ಅಟ್ಟಂಬಾ ಮಾತಾ ಕೇಳಾರೆ ನಾರ್‍ಯೋರು
ಮಾಳೂಗೀ ಒಳಗೆ ನೆಡದಾರೆ । ನಾರ್‍ಯೋರು
ಹಾಲ್ತಟ್ಟೀಲ್ಹಾಲಾ ಎರದಾರೆ । ನಾರ್‍ಯೋರು
ಅರ್ಜಿಣ್ಣಾ ಬಲಗಯ್ಲೆ ಕೊಡೋವಾರೆ
ಅರ್ಜಿಣ್ಣ ಬಲಗಯ್ಲೆ ಕೊಡುವದ್ನು ಅರ್ಜೀಣಾ

ಎಯ್ದು ಕಯ್ಯೊಡ್ಡೇ ತಡದಾನೆ । ಅರ್ಜಿಣ್ಣಾ
ಬಾಳೀ ಹಣ್ಣೀಳಾ ಸೊಲೀದಾನೆ । ಅರ್ಜಿಣ್ಣಾ
ಇಳ್ಳೀ ಹಣ್ಣೀಳಾ ಸೊಲೀದಾನೆ । ಅರ್ಜಿಣ್ಣಾ
ಹಾಲೊಳಗಣ್ಣಾ ನುರೀದಾನೆ । ಅರ್ಜಿಣ್ಣಾ
ಮಾಳಗ್ಗಿಂದೆರಗೇ ಬರೋವಾನೇ । ಅರ್ಜಿಣ್ಣಾ

ಗಿಳಿಗೋಳೊಡನೋಗೇ ನಿಲೋವಾನೇ । ಅರ್ಜಿಣ್ಣಾ
ಗಿಳಿಗೋಳೀಗ್ ಹಾಲಾ ಕೊಡೋವಾನೇ
ಗಿಳಿಗೋಳೀಗ್ ಹಾಲಾ ಕೊಡುವದ್ನು ಗಿಳಿಗೋಳು
ರಟ್ಟೀ ಅಲ್ಲಾಡೇ ಕುಡೀದಾವೋ
ಹಾಲಾಕುಡ್ದವೋ ಗಿಳಿಯೇ ಹಣ್ಣಾತಿಂದವೋ ಗಿಳಿಯೋ
ಹಾರಿದವಂಬರಕೇ ಸೆರಿಯಾಗಿ[೧೭] । ಅರಜೀಣಾ
ಮಾಳೂಗೀ ಒಳಗೇ ನೆಡದಾನೆ । ಅರಜೀಣಾ
ತೂಗು ಮಂಚಲ್ಲೇ ಕುಳತಾನೆ । ಅರಜೀಣಾ
ತನ್ನಾ ನಾರ್‍ಯೋರಾ ದೆನಿದೂರೇ । ನಾರ್‍ಯೋರು
ಓಯ್ಗುಂಡೆ । ಒಡನೇ ಬರೋವಾರೇ

ಓಯ್ಗುಂಡೇ ಒಡನೇ ಬಂದೀ ಏನಂಬಾರೇ
ಏನು ಕಾರಣಲೆ ಕರದೀಯೋ
"ಹಾಗ್ಲ ಕಾಯಿಗೆ ಹಾಲಾಬೆರಸೀದಂತೆ
ಹಾಲ್ನಂತಾ ಮನಸೋ ಹಲವಾದೋ । ನಾರಿಯೋರೆ.
ಹಾಲ್ಗಂಜಗ ಊಟಕೇ ಅನೂಮಾಡಿ"

ಅಟ್ಟಂಬಾ ಮಾತಾ ಕೇಳಾರೇ ನಾರಿಯೋರು
ಮಾಳೂಗೀ ಒಳಗೆ ನೆಡದಾರೆ

---

೧೭. ಸರಿಯಾಗಿ

ಅಟ್ದ ಮೆನನಾ ಜೀರಗ್ ಸಾಲಕ್ಕೀಯಾ
ಅನ್ನಾಮೆಗರಕೇ[೧೮] ಅನುಮಾಡೇ
ಹಿತ್ಲ ಕಣಕೀನಾ ಬುಟ್ಟೊ ಕೆಂಬರಗೀಯಾ
ಬುಟ್ಟೆಣ್ಣಿ ಕಿಟ್ಟೇ ಮೆಣಸಿಟ್ಟೇ

ಬೇಲೀಮೆನನಾ ದಾರೆ ಹೀರೇ ಕಾಯಾ
ದಾರಿಯನರದೇ ಮಿಣಸಿಟ್ಟೇ
ಹರ್ದಬ್ಬು ಹಾಗೀಲಾ ಮುರ್ದಬ್ಬು ತೊಂಡೀಯಾ
ಪಲಬರು ಸೊಪ್ಪು ಬಸಳೀಯಾ । ಕೂಡಿಟ್ಟು
ತುಪ್ಪಾದಲ್ಲದರಾ ಬೇಯಿೀಸಿ

ಎಲ್ಲಾ ಕಲ್ಲಿಕಾಯಿ ಎಲ್ಲಾ ಗುಳ್ಳೀಕಾಯಿ
ಕಲ್ಲೊಡದೇ ಬರುವಾ ಕಣಲೀಯಾ[೧೯] । ಸೂಸಕವ
ಅನುಮಾಡಿದರೊಂದು ಗಳಗ್ಯಲ್ಲೆ । ನಾರ್‍ಯೋರು.

ಸೆಣ್ಣ ಗಿಂಡ್ಯಲೇ ಉದಕವೇ ।ವ। ತಡಕಂಡೀ
ಮಾಳಗ್ಗಿಂದೆರಗೇ ಬರೋವಾರೇ । ನಾರೀಯೋರು
ಅರಜಿಣನೊಡನೋಗೇ ನಿಲೋವಾರೇ
ನಾರ್‍ಯೋರ್ ಕೊಟ್ಟುದಕಾ ತಟ್ಟಾನೆ ತಡದಾನೆ
ಕಾಲೂಸಿರಿಮೊಕವಾ ತೊಳದಾನೆ । ಅರಜೀಣಾ
ಮಾಳೂಗೀ ಒಳಗೆ ನೆಡದಾನೆ
ಮಾಳೂಗೀ ಒಳಗೆ ನೆಡ್ವದ್ನು ನಾರಿಯೋರು
ಮಾಳೂಗೀ ಒಳಗೆ ನೆಡದಾರೆ । ನಾರಿಯೋರು
ಹೊಸ್ಮಣಿಯೊಂದಾ ಮಡುಗಾರೆ

ಹೊಸ್ಮಣಿಯೊಂದಾ ಮಡಗ್ವದ್ನು ಅರ್ಜಿಣ್ಣಾ
ಮಣಿಯಾ ಮೆನೋಗೇ ಕುಳಿತಾನೆ
ಮಣಿಯಾ ಮೆನೋಗೇ ಕುಳ್ವದ್ನು ನಾರಿಯೋರು

ಕಿರಳ ಬಾಳೆಲಿಯಾ ತೊಳದಾಸೇ । ನಾರಿಯೋರು
ಅನ್ನಾ ಮೆಗರವಾ ಬಡಸಾರೆ । ನಾರಿಯೋರು
ತುಪ್ಪಾ ಸಕ್ಕರೆಯಾ ಎರದಾರೆ
ತುಪ್ಪಾ ಸಕ್ಕರೆಯಾ ಎರ್ದೀತಿರ್‍ರೂಗ್ರೊಟ್ಗೆ
ಉಂಡೆದ್ದನೊಂದು ಗಳಗ್ಯಲ್ಲೆ ।
ಉಂಡಾನೂಟವಾ ತೊಳ್ದಾನೆಂಜಲಮೊಕವಾ

೧೮. ಮೇಲೋಗರ   ೧೯. ಕಳಲೆ

ತೂಗು ಮಂಚದಲೆ ಕುಳತಾನೆ । ನಾರಿಯೋರು
ಎಂಜಲ ಮಯ್ಲುಗೀಯಾ ತೆಗದಾರೆ । ನಾರಿಯೋರು
ತಮ್ಮೂಟಕೆ ತಾವೂ ಎಡಮಾಡೇ । ಬಡಸೀಗಂಡೇ
ಉಂಡೆದ್ದರೊಂದು ಗಳಗ್ಯಲ್ಲೆ ।
ಉಂಡಾರೂಟವಾ ತೊಳ್ದಾರೆಂಜಲಮೊಕವಾ
ಎಂಜಲ ಮಯ್ಲುಗೀಯಾ ತೆಗೆದಾರೆ । ನಾರೀಯೋರು
ಮಾಳೂಗಿ ಒಳಗೆ ನೆಡದಾರೆ
ಆಯೊಳ್ಳ ಹಣ್ಣಡಕೆ ಸೋಯಿಸಿದ ಬೆಳಿ ಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡೇ
ಮಾಳಗ್ಗಿಂದೆರಗೇ ಬರೋವಾರೇ । ನಾರಿಯೋರು
ಅರ್ಜಿಣ್ಣನೊಡನೋಗೇ ಕುಳತಾರೆ । ನಾರಿಯೋರು

ಅರ್ಜಿಣ್ಣಾ ಗೊಂದೀಳ್ಯಾ ಕೊಡೋವಾರೇ
ನಾರ್‍ಯೋರ್ ಕೊಟ್ಟೀಳ್ಯಾ ತಟ್ಟಾನೆ ತಡ್ದಾನೆ
ಆಯಾಕೊಂದೀಳ್ಯಾ ಮೆಲೋವಾನೇ । ನಾರ್‍ಯೋರು
ತಾವೊಂದೀಳ್ಯಾ ಮೆಲೋವಾರು.
ಎಲಿಯೊಂದ್ ತಿಂದಾನೆ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡೀದಾನೆ
"ಅಂದಿಗಿಂದಿಗೆ ಹಿಂಗೆ[೨೦] ಇರಲುಬಾರಾ

ಗಂಗೀಗೇ ಹೋಗೇ ಬರಬೇಕೇ । ನಾರ್‍ಯೋರೆ
ಮಂಚಕೇ ಹಾಸಾ ಬಿಡಸಂದೇ

ಗಂಗೀಗೋಗ್ವಕೆ ಬಂದದ್ದು ಮತ್ತೆನೆ
ಕೆಂದೀ ಅವದಾನಾ[೨೧] ಕೊಡಸೂವೋ । ದೆವ್ರಗೆ

ಬಂದಾ ಕಂಟಕವೇ ಪರಿಹಾರಾ
ಏನೂ ಹೇಳದ್ರೂ ಕೇಳಾನೇ ಅರಜೂಣಾ
ಮಾಳಗ್ಗೇ ಹಾಸಾ ಬಿಡಸಂದೇ । ನಾರ್‍ಯೋರು
ಮಾಳಗ್ಗಿಂದೊಳಗೇ ನೆಡದಾರೇ । ನಾರ್‍ಯೋರು

ಮಾಳಗ್ಲೆ ಹಾಸಾ ಬಿಡಸಾರೆ । ಅಜೀಣಾ
ಹಾಸನ ಮೆನೋಗೇ ಒರೂಗಾನೆ । ನಾರಿಯೋರು.
ಹಾಸನ ಮೆನೋಗೇ ಒರೂಗಾರೆ । ಅರಜೀಣಾ
ನಾರ್‍ಯೋರಾ ಕೇಸಾ ಉಗರಾಡೇ । ಅರಜೀಣಾ
ನಾರ್‍ಯೋರ್ಗೆ ಸಾಪಾ ಇಡೋವಾನೇ

೨೦. ಹೀಗೆ ೨೧. ಗೋದಾನ

ನಾರ್ಯೋರ್ಗೆ ಸಾಪಾ ಏನಂದಿ ಇಡೋವಾನೇ
ನಾರಿಯೋರ್ಗೆ ನಿದ್ದೂರೀ ಕಮೀಯಾಲೆ ।ಲ್। ಂದ್ ಅರಜೀಣಾ
ನಾರಿಯರ್ಗೆ ಸಾಪಾ ಇಡೋವಾನೇ । ಅರಜೀಣಾ.
ಮಿಯ್ಯಾ ಮುರುದೆದ್ದೇ ಕುಳೂತಾನೆ । ಅರಜೀಣಾ
ಪನ್ನೀರಾ ಗಿಂಡೀ ಬಲಗಯ್ಲೀ । ತಡಕಂಡಿ
ಪನ್ನೀರಲಿಮೊಕವಾ ತೊಳದಾನೆ । ಅರಜೀಣಾ
ಮಾಳೂಗೀ ಒಳಗೆ ನೆಡದಾನೆ । ಅರಜೀಣ
ಪನ್ನೀರಾ ಗಿಂಡೀ ಮಡಗಾನೆ । ಅರಜೀಣ
ತೂಗೂ ಮಂಚದಲೆ ಕುಳೋತಾನೆ । ಅರಜೀಣ
ತನ್ನಾ ಕಯ್ಚಂಚೀ[೨೨] ಬಡಸಾನೆ । ಅರಜೀಣ
ಎಲೆತಿಂದೀ ತಂಬಳವಾ ಉಗದಾನೆ । ಅರಜೀಣ
ಕೂತಾ ಮಂಚವಾ ಜಡದೆದ್ದೇ । ಅರಜೀಣ
ಮಾಳೂಗೀ ಒಳಗೆ ನೆಡದಾನೆ । ಅರಜೀನಾ
ಅಟ್ಟತ್ತಿ ಪೆಟ್ಟಗೀಯಾ ತೆಗದಾನೆ । ಅರಜೀಣ
ಮೆಟ್ಟೀ ಬೀಗವಾ ಕರೀದಾನೆ । ಅರಜೀಣ
ಮುಚ್ಚೀಲಾ ತಗದೇ ಕಡಗಿಟ್ಟೀ । ಅರಜೀಣ
ಪಟ್ಟೆ ಜೋತರವಾ ಹೊಗಲೀಗೆ । ಹಾಯಿಕಂಡಿ
ಸೇರನ ಬಳಿಎಯ್ದಾ ಕಯ್ಯಾಗಿಟ್ಟೇ । ಅರಜೀಣಾ
ಮುದ್ರೇದುಂಗಲವಾ ಬೆರಳ್‌ದುಂಬೇ

ಮುದ್ರೇದುಂಗಲವಾ ಬೆರಳ್ತುಂಬ್ ಹಾಯಿಕಂಡೆ
ಮತ್ನ ಬಾಸಿಂಗಾ ತಡದಾನೆ । ಅರಜೀಣಾ
ಮತ್ತನ ತಂಡಲವಾ ತಡದಾನೆ । ಅರಜೀಣಾ
ಅದು ಎಲ್ಲಾ ಸೆಳ್ಳುಗುರಲ್ ಮಡಗಾನೆ
ಅದುವೆಲ್ಲಾ ಸೆಳ್ಳುಗುರಲ್ ಅಡಗೀಸೀ ಅರಜೀಣಾ
ಸೆಣ್ಣಾ ಗಂಬುಳಿಯಾ ಹೊಗಲೀಗೆ ।
ಸೆಣ್ಣಗಂಬುಳಿಯಾ ಹೊಗಲೀಗೆ ಹಾಯಿಕಂಡಿ

ತನ್ನಾ ಕಯ್ಚಂಚೀ ತಡದಾನೆ । ಅರ್ಜೀಣಾ
ಪೆಟ್ಟೂಗೀ ಬಾಯಲ್ಲೇ ಮಡೂಗಾನೆ । ಅರಜೀಣಾ
ಮಾಳಗ್ಗಿಂದೆರಗೇ ಬರೋವಾನೇ । ಅರಜೀಣಾ
ಹಿತ್ಲ ಕಣಕನ ಬಾಗ್ಲದಾಗೇ ನೆಡದಾನೆ । ಅರಜೀಣಾ
ತನ್ನಾ ಮನಿಕೂಸ್ನಾ ದೆನೀದೂರೇ[೨೩] ।

೨೨. ಕೈಚೀಲ ೨೩. ಕರೆದು

ಹೋಗ್ವಾಕಾರು ತಿಂಗ್ಳ ಬರುವಾಕಾರು ತಿಂಗ್ಳಾ
ಬರುವಾಕ್ ಹನ್ನೆಯ್ಡು ತಿಂಗ್ಳ ತಡವುಂಟು । ಮನಿಕೂಸಾ
ನಾರ್‍ಯೋರೀಗ್ ನಾ ಹ್ವೊದ್ ಸುದ್ದೀ ಒರೀಬೆಡೀ । ಅಂದೇಳಿ
ಹಿತ್ಲ ಕಣಕ್ನ[೨೪] ಬಾಗಲ್ಲೇ ಹೆರೋಟಾನೆ[೨೫] । ಅರಜೀಣಾ
ಕಲ್‌ದಣಪೀಗಾಗೇ ನೆಡದಾನೆ । ಅರಜೀಣ
ತಾರೀ ಹೊಳಿಯಲ್ಲೇ ನಿಲೋವಾನೇ । ಅರಜೀಣ
ಅಲ್ಲೊಂದ್ ಹಣ್ಣಡಕೀ ಒಡದಾನೇ । ಅರಜೀಣ
ಎಲೆ ತಿಂದ್ ತಂಬಳವಾ ಉಗದಾನೆ । ಅರಜೀಣ

ತಾರೀ ಕೂಸ್ನಂದೇ ದೆನೀದೂರೇ । ತಾರೀಕೂಸಾ
ಓಯ್ಗುಂಡೇ ಒಡನೇ ಬರೋವಾನೇ
ಓಯ್ಗುಂಡೇ ಒಡ್ನೇ ಬಂದೀ ಏನಂಬಾನೆ
ಏನು ಕಾರಣಲಿ ಕರದೀಯೋ
ಕರದಂ ಕಾರ್‍ಯವಿಲ್ಲ ಕಿರಿದಂಬೆಸರ ಸಯ್ಯೆ
ಮುತ್ತೀನಾ ದೋಣೀ ಹೊಳಿಗೆಳಿಯೋ ।
ಮುತ್ತೀನ ದೋಣಿ ಹೊಳಿಗಿಳಿಯೋ ಅಂಬುದ್ನು

ಚಿನ್ನದ ಹುಟ್ಟಾ ತಡದಾನೆ ।
ಚಿನ್ನದ ಹುಟ್ಟಾ ತಡ್ವದ್ನು ಅರಜೀಣಾ
ಮುತ್ತೀನಾ ದೋಣೀ ನೆಗದತ್ತೇ । ತಾರೀಕೂಸಾ
ಚಿನ್ನಾದುಟ್ನಲ್ಲಿ ಬಳಗಾನೆ
ಚಿನ್ನಾ ದುಟ್ನಲ್ಲಿ ಬಳಗ್ವದ್ನು ತಾರೀಕೂಸ್ನಾ

ಮುತ್ತೀನಾದೋಣೀ ತೆರೆತಾಡಿ
ಮುತ್ತೀನಾ ದೋಣಿ ತೆರತಾಡ್ವದ್ನು ಅರಜೀಣಾ

ದೋಣಿಗಿಂದ್ ಕೆಳಗೆ ಇಳದಾನೆ । ಅರಜೀಣಾ
ತಾರೀಕೂಸ್ಗೆ ಬುದ್ದೀ ಒರದಾನೆ
ತಾರೀಕೂಸ್ಗೆ ಬುದ್ದೀ ಏನಂದಿ ಒರದಾನೆ
ತನ್‌ನಾರ್‍ಯೋರಿಗ್ ತಾಬಂದಾ ಸುದ್ದೀ ಒರೀಬೆಡಾ
ಗಂಡ್ನ ಕೆಳ್ಗ್ನ ಹಿಂಡರ್‌ಗೆ ಅತ್ತೀ ಕೆಳ್ಗ್ನ ಸೊಸದಿರಗೆ

ನಿಮಗೆ ನಾದೋಣಿ ತರುವಾದಿಲ್ಲಾ । ಅಮ್ಮಾನೋರೆ
ಬಿಟಮಂಡೀ ಕಟ್ಟೀ ಮನಗೋಗಿ । ಅಂದೇಳಿ
ತಾರೀ ಕೂಸ್ಗೆ ಬುದ್ದೀ ಒರದಾನೆ । ಅರಜೀಣಾ
ಹೋಗಾಲದ ಕಟ್ಟೀ ನೆಗದಾನೆ

೨೪. ಕಡೆಗಿನ ೨೫. ಹೊರಟನು

ಹೋಗಾಲದ ಕಟ್ಟೇ ನೆಗದತ್ತೇ ಅರಜೀಣಾ
ಸೆಣ್ಣಾಗಂಬಳಿಯಾ ಮಡದಾಸೇ । ಅರಜೀಣ
ಚಕ್ರಾಪಳಿ[೨೬] ಹೊಯ್ದೇ ಕುಳತಾನೆ । ಅರಜೀಣ
ನಾರಿಯೋರ್ಗಿಟ್ ಸಾಪಾ ಬಿಡೋವಾನೆ
ನಾರ್ಯೋರ್ಗಿಟ್ ಸಾಪಾ ಏನಂದಿ ಬಿಡೋವಾನೇ

ನಾರ್ಯೋರಿಗ್ ನಿದ್ದೂರೀ ಹುರಿಯಾಲೇ । ಅಂಬುದ್ನು
ನಾರ್ಯೋರ್ ಮಿಯ್ಮುರುದೆದ್ದೇ ಕುಳತಾರೆ । ನಾರ್ಯೋರು
ಅರ್ಜಿನಾನೊಳಲು[೨೭] ಹೊಳುವಾದಿಲ್ಲ । ನಾರ್ಯೋರು
ಮಾಳಗ್ಗಿಂದೆರಗೇ ಬರೋವಾರೇ
ದೆವಾರೀ ಹೊಳಿಯಾ ಗಳಿಯಾಲಿಲ್ಲಾ । ಅಮ್ಮಾನೋರೆ
ಬಿಟಮಂಡೀ ಕಟ್ಟೇ ಮನಗೋಗಿ

"ಕಂಡೀ ಇರುವದಕಿಂತಾ ಕಾಣಾದೆ ಇರಲಕ್ಕು
ಕಂಡೀ ಮತ್ತೊಮ್ಮೆ ಅಗಲಾಬಾರಾ
ಕಂಡೀ ಮತ್ತೊಮ್ಮೆ ಅಗಲಿದರಕ್ಕಾ ಕೇಳೇ
ಕಂಡಗದಾ ಮೆಣಸಾ ಕುಡೀದಂತೆ.
ಕೂಡಿ ಇರುವದಕಿಂದು ಕೂಡದೇ ಇರಲಕ್ಕು
ಕೂಡೀ ಮತ್ತೊಮ್ಮೆ ಅಗಲಬಾರಾ

ಕೂಡಿ ಮತ್ತೊಮ್ಮೆ ಅಗಲದರಕ್ಕಾ ಕೇಳೇ
ಗೂಡಿನಾ ಉಪ್ಪಾ ಕುಡಿದಂತೆ! ಅಕ್ಕಾ ಕೇಳೇ
ನಾವ್‌ಹೋಪೋ ನಮ್ಮಾ ಅರಮನಗೆ
ನಾವ್ ಹೋಪೋ ನಮ್ಮರಮನೆಗಂದ್ ನಾರ್ಯೋರು
ಬಿಟಮಂಡೀ ಕಟ್ಟೇ ಮನಗೋಗೇ
ಬಿಟಮಂಡಿ ಕಟ್ಟೆ ಮನಗೋಗುತ್ನು ಅರಜೀಣಾ.
ಆಗೊಂದು ಮಾತಾಟ ನುಡೀದಾನೆ.

ಹಿಂದ್ನ ಕಾಲ್ದಲ್ಲೇ ತಾರೀ ಉಕ್ಕಲ ಬತ್ತಾ
ಈಗ್ನ ಕಾಲ್ದಲ್ಲೇ ನಾಕೋಸಿದ್ದಿ । ಕಂಬ್ಳಿಚಪ್ಪೆ
ಮನೆಮನೆ ತಪ್ಪದೆ ತಿರೂಗುಣ್ಣೊ । ಅಂದ್ ಅರ್ಜೀಣಾ
ತಾರೀ ಕೂಸಗ್ ಸಾವಿರವಾ ಉರೂಸಾರೆ । ಅರಜೀಣಾ
ಆಗೊಂದು ಮಾತಾ ನುಡೀದಾನೆ.

---

೨೬. ಪದ್ಮಾಸನ ೨೭. ಸುಳಿವು

ಇಟ್ಟಕ್ ಬಂದವರು ಇಟ್ಟೂ ಮರಗುತಾರೋ
ತನ ಮಾವನ ಮಗಳೆಟ್ಟಾ ಮರಗೂಗೇ । ತನಗಿನ್ನು
ಮಾವನಮಗ್ಳಗ್ವೊಬೆ[೨೮] ಒಳೂತಲ್ಲ.
ಇಟ್ಟಕ್ ಬಂದವರು ಇಟ್ಟೂ ಮರಗುತಾರೋ
ತನತ್ತೀಮಗಳೆಟ್ಟಾ ಮರಗೂಗೇ[೨೯] । ತನಗಿನ್ನು

ತನತ್ತೀ ಮಗಳ್ ಗ್ವೊಬೀ ಒಳೂತಲ್ಲಾ[೩೦]
ಬಾಳಿಹುಟ್ಟುವಂಗೆ ನಾರೀ ತಾ ಹುಟ್ಟೀತು
ಬಾಳುಟ್ಟೇ ತಾನೂ ಪಲಾಬಂದೇ
ನಿಂಬೀ ಹುಟ್ಟುವಂಗೆ ರಂಬಿತಾ ಹುಟ್ಟೀತು
ನಿಂಬುಟ್ಟಿ ತಾನು ಪಲಾಬಂದೀ । ತನಗಿನ್ನು

ಮಾವ್ನ ಮಗಳ್ ಗ್ವೊಬೆ ತರವಲ್ಲ । ಅಂದ್ ಅರಜೂಣಾ
ಬಿಚ್ಚೀದಾ ಮಂಡೀ ಬೆಟ್ಟಾಕೀಡಾಡುತೆ
ಸೀರಿ ಸಿರಿಪಾದಾಕಲಿಯುತೆ । ನಾರ್‍ಯೋರು
ಹಿತ್ಲಕಣಕ್ನ ಬಾಗಲ್ಲೇ ನೆಡದಾರೆ ।"
ತಮ್ಮಾ ಮನಿಕೂಸ್ನಾ ದೆನಿದೂರೇ
ಎಂದೂ ಕರದಮಲ್ಲ ಬಂದಾನೇ ಮನಿಕೂಸಾ
ನಿಂದಾನೇ ನಾರ್‍ಯೋರಾ ಒಡನಲ್ಲೇ ।ಲ್। ನಿಂದೀಕಂಡೇ.

"ಏನು ಕಾರಣಲೆ ಕರದಾರೆ"
"ಕರದು ಕಾರಣಿಲ್ಲ ಕಿರಿದುಂಬೆಸರ ಸಯ್ಯೆ
ದೆವರೆಟ್ಟಿರುಳೇ ನೆಡದಾರಿಯೇ,"
"ದೆವರ ನಾಕಾಣಾಲಿಲ್ಲ ದೆವರ ನಾನೋಡಾಲಿಲ್ಲಾ
ದೆವರ್ ಎಟ್ಟಿರುಳೇ ನೆಡದಾರ್‍ಯೋ.

ಅಟ್ಟಂಬಾ ಮಾತಾ ಕೇಳಾರೆ ನಾರ್‍ಯೋರು
ಹಿತ್ಲಕಣಕನ ಬಾಗಲ್ಲೇ ನೆಡದಾರೆ
ಬಿಚ್ಚೀದಾ ಮಂಡೀ ಬೆಟ್ಟಾಕೀಡಾಡೂತೆ
ಸೀರೀ ಸಿರಿ ಪಾದಾಕಲಿಯುತೆ । ನಾರ್‍ಯೋರು
ಕಲ್ಲಾದಣಪೀಗಾಗೇ ನೆಡದಾರೆ । ನಾರ್‍ಯೋರು
ತಾರೀ ಹೊಳಿಯಲ್ಲೇ ನಿಲೊವಾರೇ । ನಾರ್‍ಯೋರು
'ತಾರೀಕೂಸಾ' ನಂದೇ ದೆನಿದೂರೇ । ತಾರೀಕೂಸಾ
ಓಯ್ಗುಂಡೇ ಬಡನೇ ಬರೋವಾನೇ

೨೮. ಸಂಕಷ್ಟ ೨೯. ದುಃಖಿಸುವಳು ೩೦. ಒಳ್ಳೇದಲ್ಲ

ಓಯ್ಗುಂಡೇ ಒಡನೇ ಬಂದೀ ಏನಂಬಾನೆ.
ಏನು ಕಾರಣಲಿ ಕರದೀರೇ
ಕರದಂ ಕಾರ್ಯವಿಲ್ಲ ಕಿರಿದುಂಬೆಸರ ಸಯ್ಯೆ

ಮುತ್ತೀನಾ ದೋಣಿ ಹೊಳೀಗೆಳಿಯೋ । ತಾರೀಕೂಸಾ
ಚಿನ್ನಾ ದುಟ್ನಲ್ಲೇ ಬಳೂಗೀಸೊ ।
ಇಲ್ಲೆರು ಬಂದೀರ್ರೋ ಇಲ್ಲೆರು ನಿಂದೀರ್ರೋ
ಇಲ್ಲೆರು ತಂಬಿಲವ ಉಗದೀರ್ರೋ । ತಾರೀಕೂಸಾ
ದೇವರೀ ಹೊಳಿಯಾ ಗೆಳದಾರಿಯಾ

"ತಾರಿಗೆ ಬರುವವ್ರು ಸಕಲಾ ಸಾವಿರ ಮಂದಿ
ಎಲತಿಂದ್ ತಂಬಲವಾ ಉಗದಾರೆ । ಅಮ್ಮಾನೋರೆ
ಅದು ಎಲ್ಲಾ ನಿಮ್ಮಾ ಪುರಿಸಾರಾ? ।"
ಸೆಣ್ಣಾ ಗಂಬಳಿಯಾ ಕುಡೋಗೆದ್ದೇ । ಅರಜೀಣಾ
ಸೆಣ್ಣಾಗಂಬಳಿಯಾ ಹೊಗುಲೀಗೆ । ಹಾಯೀ ಕಂಡೇ
ಅರ್ಜಣ ನಂಬೆಸರು ಇಲ್ಲಿಂದಿತ್ತಾಗಿರಲೇ
ಬಡ್ಮಾಣಿ ಅಂಬೆಸರು ನೆಡೀಯಾಲೇ ।ಲ್।ಂದ್
ಬಡಮಾಣಿ ಅಂಬೆಸರು ನೆಡಿಯಾಲಂದ ಬಡಮಾಣಿ
ಆಲ್ದ್ ಕಟ್ಟಿಕೆಳಗೆ ಇಳದಾನೆ.
ಉದ್ದು ಕರಿಉದ್ದು ಉದ್ದು ಮಡಿ ಉದ್ದು
ಉದ್ದನೇ ತೊಳದೇ ಹಣಿನೀರಾ । ಕೊಂಬಲೆ ಬರೂವಾ
ತುಂಬಿಹಕ್ಕಿ ನಮಗೇಲೆ ಸಕೂಣವೇ
ಹೆಸರು ಕರಿಉದ್ದು ಹೆಸರು ಮಡಿ ಉದ್ದು
ಹೆಸರನೇ ತೊಳದೇ ಹಣೀನೀರಾ । ಕೊಂಬಲೆಬರೂವಾ
ಹಕ್ಕೀ ನಮಗೇಳೇ ಸಕೂಣವೇ
ಸಕಣಾ ಕೇಳಿತಾ ಸೆರಗಿಲಿ ಗೆಂಟೀಡಿತಾ
ಹದಿನಾರು ಮೆಟ್ಟಾ ನೆಡಿಯುತ್ತೆ । ಬಡಮಾಣಿ
ಹದಿನಾರು ಕಯ್ದೂರೀ ತನಗಂದೇ
ಬಾಳಿಮೆನಿರುವಾ ಏಳ್ನೂರು ಪಾಂಡ್ವಳಾ
ದೇವರ ತಂಗೀ ನನ್ನಾ ನೆನಿಯಾತದಿಯಾ[೩೧] ।

"ದೇವ್ರಾತಂಗಿಗೂ ನಿಮಗೂ ಯಾತರ ಸಂಭಂದಾ
ದೇವರ ತಂಗೀ ನಿಮ್ಮಾ ನೆನುವಾದಿಲ್ಲಾ । ಅಂಬುದ್ನು

---

೩೧. ನೆನೆಯುತ್ತಾಳೆಯೇ?

ಪಾಂಡ್‌ವಳ್ಗೆ ಸಾಪಾ ಇಡೋವಾನೇ
ಪಾಂಡವಳ್ಗೆ ಸಾಪಾ ಏನಂದಿ ಇಡೋವಾನೇ
“ನೀ ಕೂತಾ ರಾಜ್ಯ ಸುಬನಿಲ್ಲಾ[೩೨]
ಮಕ್ಕೀ ಗದ್ದೀಲಿ ಜೆಬ್ಬೆಕ್ಕು[೩೩] ಕೂಗೀಲಾ[೩೪]
ದೆವರ ತಂಗೀ ನಮ್ಮಾ ನೆನಿಯಾತದಿಯಾ? ।

“ದೆವರ ತಂಗಿಗೂ ನಿಮಗೂ ಯಾತರ ಸಂಬಂದಾ
ದೆವ್ರ್‌ತಂಗೀ ನಿಮ್ಮಾ ನೆನುವಾದಿಲ್ಲಾ । ಅಂಬುದ್ನು
ಕೂಗಿಲಗೆ ಸಾಪಾ ಇಡೋವಾನೇ
ಕೂಗಿಲಗೆ ಸಾಪಾ ಏನಂದಿ ಇಡೋವಾನ
ನೀ ಕಚ್ಚೀದೆರೆ ನಿನಗಿಲ್ಲಾ । ಕೂಗೀಲಾ
ನಿನ್ ನೆಡ್‌ನಾಲಗೆ ಕುಂದೇ ಒರಗಾಲೋ । ಅಂದೇಳೇ
ಕೂಗಿಲಗೆ ಸಾಪಾ ಇಡೋವಾನೇ.

ಸಕಣಾ ಕೇಳೀತಾ ಸೆರಗಿಲಿ ಕೆಂಟಿಡಿಯಿತೆ
ಹದ್ನಾರು ಮೆಟ್ಟಾ ನೆಡೆಯೂತೆ । ಬಡಮಾಣಿ
ಹದ್ನಾರು ಕಯ್ದಾರಿ ತನಗಂದೇ.

ಬಾಳೀ ಮೆನಿರುವಾ ಏಳ್ನೂರು ಗಿಳಿಗೋಳೆ
ದೆವರ ತಂಗೀ ನನ್ನಾ ನೆನಿಯಾತದಿಯಾ
“ಮೀಯ್ತದೆ ಒಗಿತದೆ ಮಿಂದೀ ಮಡಿಉಡ್ತದೆ
ಮಿಂದೀ ಹಾಸಗಲೇ ಒರ್‍ಗತದೆ । ದೆವಾರೆ
ನಿಮ್ಮಾ ಜಾನದಲೇ[೩೫] ಇರೋವಾಳು । ಅಂಬುದ್ನು
ಗಿಳಿಗೋಳಿಗ್ ಸಾವರವಾ ಒರಸಾನೆ.[೩೬]
ಗಿಳಿಗೋಳಿಗ್ ಸಾವರವಾ ಏನಂದಿ ಒರಸಾನೆ.

ನೀ ಕಚ್ಚಿದೆರೆ ಹುಸಿಯಿಲ್ಲಾ । ಗಿಳಿಗೋಳೇ
ನೀವ್ ಕೂತಾ ರಾಜ್ಯಾ ಸುಬನಾವೋ”
ಸಕಣಾ ಕೇಳೀತಾ ಸೆರಗಿಲಿ ಗೆಂಟಿಡಿಯಿತೆ
ಹದ್ನಾರು ಮೆಟ್ಟಾ ನೆಡೆಯೂತೆ । ಬಡಮಾಣಿ
ಹದ್ನಾರು ಕಯ್ದಾರಿ ತನಗಂದೇ
“ಕೆಯ್ಯಾ ಗೆದ್ದೀಲ ಜೆಬ್ಬೊಕ್ಕು ಕೊಕ್ಕನೇ[೩೭]
ದೆವರ ತಂಗೀ ನನ್ನಾ ನೆನಿಯಾತದಿಯಾ,
ಮೀಯ್ತದೊಗಿತದೆ ಮಿಂದೀ ಮಡೀ ಉಡ್ತದೆ.

---

೩೨. ಅಮಂಗಳ ೩೩. ಸಣ್ಣಮೀನು ಹೆಕ್ಕುವ ೩೪. ಕೋಗಿಲೆ ೩೫. ಧ್ಯಾನದಲ್ಲಿ ೩೬. ಹರಸಿದನು
೩೭. ಕುಕ್ಕನಹಕ್ಕಿ

ಮಿಂದೀ ಹಾಸಗಲೇ ಒರಗತದೆ । ದೆವಾರೆ
ನಿಮ್ಮಾ ಜಾನದಲೇ ಇರೋವಾಳು । ಅಂಬುದ್ನು
ಕುಕ್ಕಗ್ ಸಾವರವಾ ಒರಸಾನೆ.

ನೀಉಟ್ಟಾ ಪಟ್ಟೀ ಮಾಸಾದೇ ಇರಬೇಕು
ನೀ ಕಚ್ಚೀದೆರೆ ಹುಸಿಯಿಲ್ಲ । ಅಂದೇಳೆ ।
ಕುಕ್ಕಗ್[೩೭] ಸಾವರವಾ ಒರಸಾನೆ.
ಸಕಣಾ ಕೇಳೀತೆ ಸೆರಗಿಲಿ ಗೆಂಟಿಡೀತೆ
ಹದ್ನಾರು ಮೆಟ್ಟು ನೆಡೀಯೂತೆ । ಬಡಮಾಣಿ
ಹದ್ನಾರು ಕಯ್ದಾರಿ ತನಗಂದೇ
ಕೆಯ್ಯ್ಯಾ ಗದ್ದೀಲಿ ಒತ್‌ಹೆಕ್ಕೂ ಕೋಳಿಯೆ
ದೆವ್ರ್‌ತಂಗೀ ನನ್ನಾ ನೆನಿಯಾತದಿಯಾ ?
ಮೀಯ್ತದೊಗಿತದೆ ಮಿಂದ್ ಮಡಿ ಉಡ್ತದೆ
ಮಿಂದೀ ಹಾಸಗಲೇ ಒರ್ಗತದೆ । ದೆವರೆ
ನಿಮ್ಮಾ ಜಾನದಲೇ ಇರೋವಾಳೇ । ಅಂಬುದ್ನು

ಕೋಳೀಗೆ ಸಾವರವಾ ಹರೂಸಾನೆ
ಕಾಲನ ಬಳ್ಳೀ ಕಾಲಗೆ ಸುತ್ತೂ ತಂಕೇ
ಕಾಡದೂ ಬಂಟಾ ಸರಗೆಯ್ಯೋ! ನಿನ್ನಾಲಾ
ನೆತ್ತೀ ಮೆನ್ ಜುಟ್ಟಾ ಬೆಳಿಯಲಿ । ಅಂದೇಳಿ
ಕೋಳಿ ಹುಂಜ್ಗ್ ಸಾವರವಾ ಹರೂಸಾನೆ
ಸಕಣಾ ಕೇಳೀತೆ ಸೆರಗಿಲಿ ಗಂಟಿಡೀಯಿತೆ
ಹದ್ನಾರು ಮೆಟ್ಟಾ ನೆಡೀಯೂತೆ । ಬಡಮಾಣಿ
ಹದ್ನಾರು ಕಯ್ದಾರಿ ತನಗಂದಾ.

ಹತ್ಯಾಣಪುರದಲ್ಲೇ ಇತ್‌ಬರುಮಯ್ಲೊಗಿ
ನಾರಾಯಣ ಪುರದಾ ಹಸುಗುತ್ತೇ[೩೮] ।ತ್ತೀ। ನೀಕೇಳೇ
ನಾಉಟ್ ಜೋತರವಾ ಒಗದ್ ಕೊಡೇ
ದೆವರ ಮನಿಯಾ ಕನ್ನೆಣ್ಣಕ್ಳುಗವಣದಲ್ಲಿ[೩೯]

ಗಂಡ್ಗೋಳ್ ಮಯ್ಲುಗೀಯಾ ಬೆರಸ್‌ಬಾರಾ । ಬಡಮಾಣಿ
ಮುಂದೀನಳ್ಳದಲ್ಲೇ ಒಗದೂಡೋ ।
ನಾಉಟ್ ಜೋತರವಾ ನಾಉಗದೀ ಉಡುವಾಕೆ
ನಿನ್ನಪ್ಪಣೆಕೇ ಹಸಗುತೀ । ನೀಕೇಳೆ ।
ಹಾಸೀ ಮಾತಾಡೀ ಮನಗೋಗೇ.

---

೩೮. ಮಡಿವಾಳಗಿತ್ತಿ   ೩೯. ಒಗೆಯುವಲ್ಲಿ

ಹಾಸೀ ಮಾತಾಡೂಕೇ ದೆಸಾದವಳಲ್ಲ[೪೦]
ದೇಸಕೆ ಒಂದು ಒಡೆಯರು । ಕೇಳಿದ್ರೆ
ಕೊಲ್ಲಂಬ್ರೊ ನಿನ್ನಾ ಬಯ್ಯಂಬ್ರೋ । ಅಂಬುದ್ನು
ಹಸಗುತ್ತೀ ಮನಿಯಾ ಹಸಗಾನೇ । ಅಲ್ಲೇ ಬರೋವಾನೇ.

ಹೆಣ್ಣಾಹೆಂಗ್ಸೂ ಕಯ್ಲೆ ಬಂಡಾ ಮಾಡುವಂವ್ಗೆ
ಚಬ್ಕಾ ತಂದೆಯ್ದಾ ಒಗೀಯಲೆ । ಅಂಬುದ್ನು
ಹಸಗೆಗೆ[೪೧] ಸಾಪಾ ಇಡೋವಾನೇ
ಹಸಗೆಗೆ ಸಾಪಾ ಏನಂದೀ ಇಡೋವಾನೇ
ಒಗ್ವಾ ಹಳ್ಳೆಲ್ಲಾ ಕೊಣುಕಾಲೆ [೪೨] । ಹಸಗನಾ.
ಉಂಬಾ ಗಂಜೆಲ್ಲಾ ಮರಿಯಾಲಿ । ಹಸಗನಾ
ಕಟ್ದಾ ಗೂಡೆಲ್ಲಾ ಹೋಗೀಯಾಲೇ ।

ಹೊನ್ನಾ ಮಾಣಿಕದಾ ಕೀಲುಂಬಸಗಾನಾ
ಕೀಲೂ ಗೂಡೆಲ್ಲಾ ಹೊಗಿಯಾಲಿ
ಕಿಲೂಗೂಡೆಲ್ಲಾ ಹೊಗಿಯಾಗುತ್ನು ಅಸಗಾನು
ನಾರ್ಣದೆವ್ನರಮನಗೇ ನೆಡದಾನೆ । ಅಸಗಾನು
ಹೋಗೀ ಬಾಗಲ್ಲೇ ನಿಲೋವಾನೇ.
ಹೋಗೀ ಬಾಗಲ್ಲೇ ನಿಲುವದ್ನು ನಾರ್ಣದೆವಾ

ವಾಲಗ್ಗುಂಡಾನೆ ಹಸಿಯಲ್ಲಿ । ನಾರ್ಣದೆವಾ
ಆಗೊಂದು ಮಾತಾ ನುಡೀದಾನೆ.
"ಎಣ್ಣೆ ದೀವೂಗೀ ಕಣ್ಣೀಗೆ ಹೊಗೆಯಂದಿ
ಹೊನ್ನು ಮಾಣಿಕದ ಬೆಳಕೀಲಿ ।ಲು। ೦ಬೂ ಹಸಗಾನೆ
ಏನ್‌ಬಂದ್ಯೋ ನನ್ನಾ ಅರಮನಗೆ."

"ಯಾವೂರ ಸಂನ್ಯಾಸ್ಯೋ ಯಾವೂರ ಬಡಮಾಣ್ಯೋ.
ನಮ್ಮೂರ್ಗೆ ರತವೇರೇ ಬರೂತಾನೋ । ದೆವಾರೆ
ತಾಉಟ್ಟಾ ಜೋತರವಾ ಒಗದೇ ಕೊಡೋ । ಅಂಬುದ್ನು
ದೆವರ ಮನಿಯಾ ಕನ್ನೆಣ್ಮಕ್ಳ ಬಣದಲಿ
ಗಂಡ್ಗೋಳಾಮಯ್ಲುಗಿಯಾ ಬೆರಸ್ಬಾರ ।

ಗಂಡ್ಗೋಳಾ ಮಯ್ಲುಗೀಯಾ ಬೆರಸ್‌ಬಾರಾ ಬಡಮಾಣಿ
ಮುಂದೀನಳ್ದಲ್ಲಿ ಒಗದುಡು । ಅಂಬುದ್ನು ನಮ್ಮನೆಯಾ
ಉಂಬಾಗಂಜೆಲ್ಲಾ ಮರಿಯಾದೋ । ನಮ್ಮನೆಯಾ.

---

೪೦. ಬೀದಿಯವಳಲ್ಲ ೪೧. ಮಡಿವಾಳನಿಗೆ ೪೨. ಗರಡಲಿ

ಕಟ್ಟ್ದ ಗೂಡೆಲ್ಲಾ ಹೊಗೆಯಾದೋ । ನಮ್ಮನೆಯಾ
ಒಗುವಾ ಹಳ್ಳೆಲ್ಲಾ ಕೊಣುಕಾದೋ । ನಮ್ಮನೆಯಾ
ಹೊನಮಾಣಿಕದ ಬೆಳಕು ಮಸಕಾದೊ"

"ಅಂವ ಸನ್ಯಾಸಿಯಲ್ಲಾ ಅಂವ ಬಡಮಾಣ್ಯಲ್ಲ
ಅಂವ ಸೂಬದ್ರೀ ಪುರೀಸಾನೋ । ಅಸಗನೆ
ತಡವಿಲ್ದೆ ಮಡಿಯಾ ಉಗದ್‌ಕೊಡೋ."

ಅಟ್ಟಂಬಾ ಮಾತಾ ಕೇಳಾನೆ ಅಸಗನು
ತನ್ನಾ ಅರಮನಗೆ ಬರೋವಾನೇ । ಅಸಗನು
ಬಡಮಾಣಿ ಒಡನೋಗಿ ನಿಲೋವಾನೇ.

'ಜೀ' ಅಂದೇ ಕರವಾ ಮುಗೀದಾನೋ
'ಅಯ್ಯೋ ದೇವರೇ ನೀವಂಬುದ ತಾನರಿಯೆ
ತಡವಿಲ್ದೆ ಮಡಿಯಾ ಒಗದೇ ಕೊಡ್ದೆ
ಊರಿಗಿಲ್ಲದ ಬಗೆ ನಿನುಗೇ ಬಂದೇನೋ
ಮನಸೀ ರಂಬದನೂ ಅರಿಯೇನೋ । ಬಡಮಾಣಿ
ಮುಂದೀನಳ್ಳಕೆ ನೆಡದಾನೆ

ಹರ್ವಾ ಮಣಿನಾಗಾನಾ ಹೆಡೆ ಹಿಡ್ದಿ ಎಳ್ತಂದೀ
ಹೆಡಿಯಾ ಮೆನೇ ಹೆಡಿಯಾ ಮಡದ್ಹಾಸೇ । ಬಡಮಾಣಿ
ತಾನುಟ್ಟ ಜೋತರವಾ ಒಗದುಟ್ಟೇ ।
ಮಣಿನಾಗನ ತೆಗದೇ ಗುಡಿ । ಗ । ಹಣದೇ
ಈಗ್ ನೋಡೂ ನನ್ನಾ ಸಮರತಾ । ಅಂದೇಳೇ
ಹಳ್ಳಾ ಕಿಂದಾಚೆ ನೆಡದಾನೆ ।
ಹಳ್ಳಾಕಿಂದಾಚೆ ನೆಡದಾನೆ ಬಡಮಾಣಿ

ಹಸಗಾಗಿಟ್ ಸಾಪಾ ಬಿಡೋವಾನೇ
ಹಸ್ಗಾಗಿಟ್ ಸಾಪಾ ಏನಂದಿ ಬಿಡೋವಾನೇ
ಒಗುವಾ ಹಳ್ಳೆಲ್ಲಾ ಹಣೀಯಾಲೇ[೪೩] । ಅಸಗಾನಾ
ಕಟ್ಟೀದ ಗೂಡೆಲ್ಲಾ ಹದೂಳಾಲೇ । ಅಸಗಾನಾ
ಉಂಬಾ ಗಂಜೆಲ್ಲಾ ಹದೂಳಾಲೇ[೪೪] । ಅಸಗಾನಾ
ಹೊನ ಮಾಣಿಕದ ಬೆಳಕು ಹದೂಳಾಲೇ

---

೪೩. ತಿಳಿಯಾಗಲಿ ೪೪. ಒಳ್ಳೇದಾಗಲಿ

ಬಡಮಾಣಿ ಅಂಬೆಸ್ರು ಇಲ್ಲಂದಿತ್ತಾಗಿರ್ಲೇ
ಸನ್ಯಾಸಿ ಅಂಬೆಸ್ರು ನೆಡಿಯಾಲಿ
ಸನ್ಯಾಸಿ ಅಂಬೆಸ್ರು ನೆಡಿಯಾಲಿಂದ್ ಸನ್ಯಾಸಿ
ನಾರ್ಣದೆವ್ನರ ಮನಗೇ ನೆಡದಾನೆ । ಸನ್ಯಾಸಿ
ಹಿತ್ಲ ಕಣ್ಕ್ ಬಾಗಲ್ಲೇ ನಿಲೋವಾನೇ । ಸನ್ಯಾಸಿ
ಲಾಗೊಂದು ಮಾತಾ ನುಡೀದಾನೆ

ಕಿತ್‌ದಲ್ ಮೆತ್ವಾರೆ ಮೆತ್ತದಲ್ ಸಾರ್ಸವಾರೆ
ಸಾರ್ಸದಲ್ ಸೇಡೀ ಬರೂವಾರೇ । ಗವ್ಡೀಯೋರೆ
ಮೊನ್ನಾಗ್ ಸತ್ತೋರಾ ಹೊಲೆಯೇನೆ ?"
"ಮೊನ್ನೆಗ್ ಸತ್ತೋರಲ್ಲಾ ನಿನ್ನಾಗ್ ಬರ್‍ವೋರಲ್ಲಾ
ಸೂಬದ್ರೀ ಮದ್ವೀ ಸಣೀಯಾರಾ । ಸನ್ಯಾಸಿ
ನಾಳ್ ಬಂದ್ ಒಂದ್ ತುತ್ತಾ ಮಲಲಕ್ಕೋ"

"ಗೇರ್ವರ್ ಗೇರೀರೇ ತಳಸ್ವರ್ ತಳ್ಸೀರೇ
ಮಿಕ್ಕೀದೋರುದ್ದಾ ಒಡವಾರೇ । ಗವ್ಡೀಯೋರೆ
ಮನ್ನೇ ಸತ್ತೋರಾ ಹೊಲೆಯೇನೆ ?"
'ಮನ್ನೇ ಸತ್ತೋರಲ್ಲಾ ನಿನ್ನಾಗ ಸತ್ತೋರಲ್ಲಾ
ಸಣಿಯಾರಾ ಸೂಬದ್ರೀ ಮೊದವೀಯೋ[೪೫] । ಸಂನ್ಯಾಸಿ
ನಾಳ್‌ಬಂದ್ ಒಂದ್ ತುತ್ತಾ ಮೆಲಲಕ್ಕೋ
ಅಡಗಡಗ್ ಬರ್ವೀಯೋ ಗೊಡವೀ ಮಾತಾಡ್ಡೀಯೋ
ಮನಗೊಂದ್ ತರೂವಿಯೋ ಹಗರಣಾ"

"ಹಗೆ ನಿನ್ನಪ್ಪಗೆ ಹಗೆ ನಿನ್ನವ್ವಿಗೆ
ಹಗೆ ನಿನ್ ನಾಳ್ ಬರ್‍ವಾ ಕವ್ಲೋರಿಗೆ । ಅಂದೇಳೇ
ಮುಂದನ ಬಾಗಲ್ಲೇ ನೆಡದಾನೆ । ಸಂನ್ಯಾಸಿ
ಹೋಗೀ ಬಾಗಲ್ಲೇ ನಿಲೋವಾನೆ । ಸಂನ್ಯಾಸಿ
ಆಗೊಂದು ಮಾತಾ ನುಡೀದಾನೆ
"ಹನ್ನೆಯ್ಡು ಬಾಳೆ ಹಣ್ಣಾ ಬಣ್ಣೀಸಿ ಮೆದ್ದೀದೆ[೪೬]
ಸುಣ್ಣವ ಮೆದ್ದೇ ಇರಲಾರೆ । ಬಾವಾ ಕೇಳೋ
ನನ್ನೊಟ್ಟೆ ಬಾಳೂ ಹಸೀದಾವೋ"
"ನಿನ್ನೊಟ್ಟೆ ಹಸಿದರೆ ಇಲ್ಲೆಲ್ಲಿ ಅನುವಕ್ಕೋ
ತಂಗೀ ಅರಮನ್ನೆ ಕಡೂದೂರೇ । ಬಾವಾಕೇಳೋ
ಅಲ್ಲೋದರೆ ನಿನಗೆ ಅನುವಕ್ಕೋ.

೪೫. ಮದುವೆ ೪೬. ತಿಂದಿದ್ದೆ

ತಂಗೀ ಅರಮನೆ ಎತ್ತಂದು ನಾನರಿಯೇ
ಹಾದೀಯಾ ಗುರುತಾ ತನಗಿಲ್ಲಾ
ಹಾದೀ ಬಲ್ಲಾದೀರೆ ಸಾದೇವ್ನಾ ಕಳಗೂತೆ
ನೀ ಹೋಗೋ ತಂಗೀ ಅರಮನ್ಗೆ । ಅಂದ್‌ನಾರ್ಣದೇವಾ
ತಮ್ಮಾ ಸಾದೆವ್ನಾ ದೆನೀದೂರೇ

ಎಂದೂ ಕರದಮಲ್ಲಾ ಬಂದಾನೇ ಸಾದೇವಾ
ನಿಂದಾನೇ ನಾರ್ಣದೆವ್ನಾ ಒಡನಲ್ಲೆ । ನಿಂದೀ ಕಂಡೇ
ಏನು ಕಾರಣಲೆ ಕರದೀಯೋ.
“ಕರದಂ ಕಾರ್ಯವಿಲ್ಲಾ ಕಿರಿದಂಬೆಸರಸಯ್ಯೆ.

ಹೋಗ್ಬಾರೋ ತಂಗೀ ಅರಮನ್ಗೆ.
ಅಟ್ಟಂಬಾ ಮಾತಾ ಕೇಳಾನೆ ಸಾದೆವಾ
ರಾಜಂಗ್ಳ ಮೆಟ್ಟಾ ಇಳೀದಾನೆ.
ಸಾದೇವಾ ಮುಂದಾಗೇ ಸಂನ್ಯಾಸೇ ಹಿಂದಾಗೇ
ರಾಜೋಬಿದಿಗಾಗೇ ನೆಡದಾರೆ.

ರಾಜೋ ಬಿದಿಗಾಗೇ ನೆಡ್ವದ್ನು ಸಂನ್ಯಾಸಿ
ಆಗೊಂದು ಮಾತಾ ನುಡೀದಾನೆ.

ಹಿಂದೀಕೊಂದ್ ಪೆಟೆ[೪೭] ಈ ಹಾದೀಲ್ ಬಂದಿದೆ.
ಈದಾರೀ ಗುರ್ತಾ ತನಗುಂಟೋ । ಬಾವಾಕೇಳೋ
ಇನ್ನಾದಿ ಬಲೆಬಾವಾ[೪೮] ಮನಗೋಗೋ । ಅಂಬುತ್ನು ಸಾದೆವಾ
ಹಿಂದಕೆ ತಿರ್ಗೇ ಬರೋವಾನೇ
ಹಿಂದಕೆ ತಿರ್ಗೇ ಬರ್ವದ್ನು ಸಂನ್ಯಾಸಿ

ಹೂವ್ನಕ್ಲ ಬೇಲೀ ತೆಗದಾನೆ । ಸಂನ್ಯಾಸಿ
ಹೂವ್ನಕ್ಲೊಳಗೇ ನೆಡದಾನೆ । ಸಂನ್ಯಾಸಿ
ಸಂಪೂಗಯ್ದ್ಲೂಂಗಾ ಕೊಯೀದಾನೆ । ಸಂನ್ಯಾಸಿ
ಮಲ್ಲೂ ಗಯ್ದ್ಲೂಂಗಾ ಕೊಯೀದಾನೆ । ಸಂನ್ಯಾಸಿ
ಜುಟ್ಟಾಕಿಂಬಾಗೇ ಮುಡೀದಾನೆ.
ಜುಟ್ಟಾಕಿಂಬಾಗೇ ಮುಡ್ದೀ ಏನಂಬಾನೆ

ಹೂಂಗೆ ನೀಬಾಡಾದಿರಬೇಕೇ । ಕು । ಅಂದೇಳೇ
ಹೂಂವ್ನಕ್ಕಲೆರಗೇ ಬರೋವಾನೇ । ಸಂನ್ಯಾಸಿ
ರಾಜಬಿದಿಗಾಗೇ ನೆಡದಾನೆ. । ಸಂನ್ಯಾಸಿ

---

೪೭. ಸಲ ೪೮. ಬಲ್ಲೆಭಾವಾ

ಸುಬದ್ರೀ ಅರಮನಗೇ ಬರೋವಾನೇ । ಸಂನ್ಯಾಸಿ
ಹೋಗೀ ಬಾಗಲ್ಲೇ ನಿಲೋವಾನೆ.

ಹಣ್ಣಡಕೀ ಅಂತಾ ರನ್ನಾದಾ ಓಕುಳಿ
ಕಸವಿಲ್ಲಾ ಸುರನಾರಿ ಅರಮಲ್ಲೇ । ಸನ್ಯಾಸಿ
ಸೆಣ್ಣಾಗಂಬಳಿಯಾ ಮಡದಾಸೇ । ಸಂನ್ಯಾಸಿ
ಚಕ್ರಪಡಿ ಹೊಯ್ದೇ ಕುಳೂತಾನೇ

ಚಕ್ರಪಡಿ ಹೊಯ್ದೇ ಕುಳುವದ್ನು ಸೂಬದ್ರಿ
ಅರಗೀ ನೋಡಿದಳೇ ಹೊರಗೊಮ್ಮೆ । ಸೂಬದ್ರಿ
ಮಾಳೂಗೀ ಒಳಗೆ ನೆಡದಾಳೆ । ಸೂಬದ್ರಿ
ಹಿತ್ತಲಕಣಕ್ನ ಬಾಗಲ್ಗೇ ನೆಡದಾಳೆ । ಸೂಬದ್ರಿ
ತನ್ನಾ ಗವ್‌ಡ್ಯೋರಾ ದೇನೀದೂರೇ ।
ತನ್ನಾಗವ್‌ಡ್ಯೋರಾ ದೆನಿದೋರಿ ಕರ್ವದ್ನು ಗವ್ಡೀಯೋರು

ಓಯ್ಗುಂಡೇ ಒಡನೇ ಬರೋವಾರೇ.
ಓಯ್ಗುಂಡೇ ಒಡನೇ ಬಂದೇನಂಬಾರೆ
"ಏನು ಕಾರಣಲೆ ಕರದೀಯೇ"
ಎಂದೂ ಬಾರಾದ ಇಂದೊಬ್ ಸಂನ್ಯಾಸೀ ಬಂದಾ
ಸಂನ್ಯಾಸೀ ದುಟ್ಟಿ[೪೯] ಹೆರದಕ್ಕು । ಗವ್ಡೀಯೋರೆ
ಪಡಿಯಾ ಕೊಟ್ಟವನಾ ಕಳಗೀರೆ

ಅಟ್ಟಂಬಾ ಮಾತಾ ಕೇಳಾರೆ ದಾದೀಯೋರು
ದೊಡ್ಡಾ ಹಚ್ಚಗೀಯಾ ತಡದಾರೆ
ದೊಡ್ಡಾ ಹಚ್ಚಗ್ಲೇ ದೊಡ್ಡಕ್ಕೀಹೊಯ್ಕಂಡೀ
ತೆಂಗೀನಾ ಕಾಯಾ ಪಲದೊಸ್ತಾ । ತಡಕಂಡೇ
ಮಾಳಗ್ಗಿಂದೆರಗೇ ಬರೋವಾರೇ । ದಾದಿಯೋರು
ಬಂದೀ ಬಾಗಲ್ಲೇ ನಿಲೋವಾರೇ । ದಾದಿಯೋರು
ಇಕ್ಕೊಳ್ಳೋ ಜೋಗೀ ಪಡೀದಾನಾ

"ನಿಮ್ಮಾ ಕಯ್ಪಡಿಯಾ ಮುಟ್ಟೊ ಜೋಗೀ ಅಲ್ಲಾ
ನಿಮ್ಮಕ್ಕನ ಕಯ್ಪಡಿಯೇ ಬರೋಬೇಕೆ"
ನಮ್ಮಾ ಅಕ್ಕಾನು ನಿಮ್ಮಂತೋರಿಗ್ ಪಡಿಕೊಡಾ
ಮಟ್ಟಾದಲ್ಲಿರುವಾ[೫೦] ಹೆರಿಗುರುವೇ
ಮಟ್ಟಾದಲ್ಲಿರುವಾ ಹೆರಿಗುರುಗಲ್ಲದೆ

೪೯. ದೃಷ್ಟಿ   ೫೦. ಮಠದಲ್ಲಿರುವ

ಮಿಕ್ಕಿದ್ದೋರಿಗ್ ಪಡಿಯಾ ಕೊಡುವಾದಿಲ್ಲ
ಮಟ್ಟಾದಲ್ಲಿರುವಾ ಹೆರಿಗುರು ತಾನೇ ಸಯ್ಯೆ
ನಿಮ್ಮಕ್ಕನ ಕಯ್ಪಡಿಯೇ ಬರೋಬೇಕೆ
ಅಟ್ಟಂಬಾ ಮಾತಾ ಕೇಳಾರೆ ಗಷ್ಡೀಯೋರು
ಬಂದ್ ತಮ್ಮಕ್ಕಾಗೇ ಒರದಾರೆ । ವದ್ನು । ಸೂಬದ್ರಿ
ಸೆಣ್ಣ ಹಚ್ಚಗಿಯಾ ತಡದಾಳೆ

ಸೆಣ್ಣ ಹಚ್ಚಗ್ಲೇ ಸೆಣ್ಣಕ್ಕೀ ಹೊಯ್ಕಂಡೇ
ತೆಂಗೀನಾ ಕಾಯಾ ಪಲದೊಸ್ತಾ । ತಡಕಂಡೇ
ಮಾಳಗ್ಗಿಂದೆರಗೇ ಬರೂವಾಳು । ಸೂಬದ್ರಿ
ಇಕ್ಕೊಳೋ ಸಂನ್ಯಾಸಿ ಪಡೀದಾನಾ
ಪಡಿಯಾ ತಕ್ಕಾಂಡ್ಹೋಕೆ ಜೋಳುಗಿ ತರಲಿಲ್ಲಾ
ಅಕ್ಕೀ ಕೂಡಕ್ಕಿ ತೊಳದೆತ್ತು

ಅಕ್ಕೀ ಕೂಡಕ್ಕೀ ತೊಳದೆತ್ತಕೆ ತಾಯಿಲ್ಲಾ ತಂದಿಲ್ಲಾ
ಸೆಣ್ಣಂದ್ ತಾಳೀದಾ[೫೨] ಹೆರಿಯಣ್ಣಾ । ಮಲ್ಲಿಲ್ಲಾ
ನೀಲೋಗೋ ಮಟ್ಟದಾ ಜಗೋಲಿಗೆ
ಮಟವಾ ನಾನೋಡ್ಲಿಲ್ಲಾ ಮನಿಯಾ ನಾನೋಡ್ಲಿಲ್ಲಾ
ಹಾದೀಯಾ ಗುರ್ತಾ ತನಗಿಲ್ಲಾ

ಹಾದೀ ಬಲ್ಲಾದೀರೆ ದಾದಿಯೋರ್ ಕಳಗೀತೆ
ನೀಲೋಗೋ ಮಟದಾ ಜಗೋಲೀಗೋ.
ನಿನ್ನಾ ದಾದೀಯೋರೆ ಒಳ್ಳೊಳ್ಳಾ ಜಂವ್ತೀರು[೫೩]
ಕಲ್ಲಲ್ಲೇ ತನ್ನಾ ಎಳವರು । ಎಲೆಣ್ಣೆ
ಅಕ್ಕೀ ಕೂಡಕ್ಕೀ ತೊಳದೆತ್ತೆ

ಹಾದೀ ಬಲ್ಲಾದೀರೆ ದಾದ್ಯೋರಾ ಕಳಗೂತೆ
ನೀಹೋಗೋ ಮಟದಾ ಜಗೋಲೀಗೋ
ನಿನ್ನಾ ಗಷ್ಡೀಯೋರು ಒಳ್ಳೊಳ್ಳಾ ಜಂವ್ತೀರು.
ಮುಳ್ಳಲ್ಲೇ ತನ್ನಾ ಎಳವರೇ । ರು । ಎಲೆಣ್ಣೆ.
ಅಕ್ಕೀ ಕೂಡಕ್ಕೀ ತೊಳದೆತ್ತೆ

ಏನೂ ಹೇಳದ್ರೂ ಕೇಳಾನಂದ್ ಸೂಬದ್ರಿ
ಮಾಳೂಗೀ ಒಳಗೆ ನೆಡದಾಳೆ । ಸೂಬದ್ರಿ
ತನ್ನಾ ಗವಡೇರಾ ದೆನೀದೊರೇ.
ಎಂದೂ ಕರದವರಲ್ಲಾ ಬಂದಾರೆ ಗವಡೇರು.

೫೧. ಹಿರಿಗುರು ೫೨. ಜೊತೆಗಿದ್ದ ೫೩. ಯುವತಿಯರು

ನಿಂದಾರೆ ಸೂಬದ್ರಿ ಒಡನಲ್ಲಿ.
ಕರದಂಬ ಕಾರ್‍ಯವಿಲ್ಲಾ ಕಿರಿದುಂಬೆಸರ ಸಯ್ಯೆ
ಹೋಗ್ಬನ್ನಿ ಅಣ್ಣನಾ ಅರಮನಗೆ

'ಎಂದೂ ಬಾರದಾ ಇಂದೊಬ್ ಸಂನ್ಯಾಸಿ ಬಂದಾ.
ಸಂನ್ಯಾಸಿ ದೂಟಿ ಹೆರದಕ್ಕೆ । ಅಕ್ಕನಕೂಡೇ
ಅಡಗೀಯಾ ಮಾಡೇ ಬಡಸಂದೇ । ಅಂದೇಳಿ
ಹೋಗ್‌ಬನ್ನಿ ಅಣ್ಣನಾ ಅರಮನಗೆ.

ಮೂರು ಮಂದ್ ಗವಡೇರು ಹೋಗ್ವಾರಣ್ಣನಮನಗೆ ।
ಹೋಗೀ ಬಾಗಲ್ಲೇ ನಿಲೋವಾರು
ಹೋಗೀ ಬಾಗಲ್ಲೇ ನಿಲ್ವದ್ನು ನಾರ್ಣದೆವಾ
ವಾಲೆಗುಂಡಾನೆ ಹಸೀಯಲ್ಲಿ

ಯಾವಾಗೂ ತಂಗೀಯಾ ಅರ್ಮಲ್ಲಿರು ಗವಡ್ಯೋರೆ ।
ಏನ್‌ಬಂದ್ರೆ ನನ್ನಾ ಅರಮನೆಗೆ.
"ಎಂದೂ ಬಾರಾದೆ ಇಂದೊಬ್ ಸಂನ್ಯಾಸ್‌ಬಂದಾ
ಸಂನಾಸೀ ದೂಟೀ ಹೆರದಕ್ಕೇ । ಅಕ್ಕನ ಕೂಡೆ
ಅಡಗೀಯಾ ಮಾಡೇ ಬಡಸಂದಾ"

"ಒಂದು ದಿನ ಬಂದೇ ನಿಂದುಂಬು ಸಂನ್ಯಾಸಿಗೇ
ದಂದುಗ್[೫೪] ಮಾಡ್ಬೇಡಾ ಕಿರೂದಂಗಿ
ದಂದುಗ್ ಬಿಡ್ಬೆಡಾ ಕಿರ್ದಂಗಿ ಕೂಡಿನ್ನು
ಅಡಗೀಯಾ ಮಾಡೇ ಬಡಸಂದೇ
ಅಟ್ಟಂಬಾ ಮಾತಾ ಕೇಳಾರೇಗವ್ಡೀಯೋರು

ಹಿಂದಕ್ಕೆ ತಿರುಗೇ ಬರೂವಾರೇ । ಗವ್ಡೀಯೋರು
ಬಂದ್ ತಮ್ಮಕ್ಕಾಗೇ ಒರದಾರೇ
ಬಂದ್ ತಮ್ಮಕ್ಕಾಗೇ ಒರ್ವದ್ನು ಸೂಬದ್ರಿ
ಹಳ್ಳದ ನೀರ್ತಂದೇ ಎಸೂರಿತ್ತೇ । ಸೂಬದ್ರಿ
ಹಳ್ಳನಕ್ಕೀ ತೊಳ್ದೀ ಹೊಯೀದಾಳೇ । ಸೂಬದ್ರಿ
ಇನ್ನೇಳು ಸಂನ್ಯಾಸೀ ಅನೂವದೆ

"ಹಳ್ಳದ್ನೀರುಂಬುಕೇ ನನ್ನೂರು ಸುಬನವೇ
ನಿನ್ನಣ್ಣಾ ನಾರ್ಣದೆವಾ ಹದೂಳವೇ । ಎಲೆಣ್ಣೆ
ಕೆರಿಯಾ ನೀರ್ತಂದೀ ಎಸರಿತ್ತೇ । ಸೂಬದ್ರಿ
ನೀನುಂಬು ಸೆಣ್ಣಕ್ಕಿ ತೊಳದಿತ್ತೇ

೫೪. ತೊಂದರೆ, ಕಷ್ಟ

ಅಟ್ಟಂಬಾ ಮಾತಾ ಕೇಳಾಳೆ ಸೂಬದ್ರಿ
ತನ್ನಾ ದಾದ್ಯೋರಾ ದೇನೀದೂರೇ
ತನ್ನಾ ದಾದ್ಯೋರಾ ದೇನಿದೂರ್ವದ್ನು ದಾದಿಯೋಯ
ಓಯ್ಗುಂಡೇ ಒಡೂನೇ ಬರೂವಾರೇ
ಓಯ್ಗುಂಡೇ ಒಡ್ನೆ ಬಂದೀ ಏನಂಬಾರೆ
ಏನು ಕಾರಣಲೆ ಕರದಿಯೇ

ಕರದಂ ಕಾರ್ಯಾವಿಲ್ಲ ಕಿರಿದುಬೆಸರಸಯ್ಯೆ
ನೀ ಹೋಗು ಅಣ್ಣನಾ ಅರಮನಗೇ । ಅಕ್ಕನಕೂಡೆ
ಕೆರೆಯಾ ನೀರ್ತಂದಿ ಎಸರಿತ್ತೇ । ಸೂಬದ್ರಿ
ನೀನುಂಬು ಸೆಣ್ಣಕ್ಕೀ ತೊಳದಿತ್ತೇ
ನೀನುಂಬು ಸೆಣ್ಣಕ್ಕಿ ತೊಳ್ದಿತ್ತು ಅಂದೇಳಿ
ಹೋಗ್ಬನ್ನಿ ಅಣ್ಣನಾ ಅರಮನಗೇ.

ಮುರ್ ಮಂದಿಗವಡ್ಯೇರು ಹೋಗ್ವಾರಣ್ಣನಮನಗೆ
ಹೋಗೀ ಬಾಗಲ್ಲೇ ನಿಲೋವಾರು
ಹೋಗಿ ಬಾಗಲ್ಲೆ । ನಿಲ್ವದ್ನು ನಾರ್ಣದೇವಾ
ಒಲಗ್ಗುಂಡಾನೆ ಹಸೆಯಲ್ಲಿ । ನಾರ್ಣದೇವಾ.
ಲಾಗೊಂದು ಮಾತಾ ನುಡೀದಾನೆ.

ಯಾವಾಗೂ ತಂಗೀ ಅರ್ಮಲ್ಲಿರು ಗವಡೇರು
ಏನ್‌ಬಂದ್ರೀ ತನ್ನಾ ಅರಮನಗೆ.
"ಎಂದೂ ಬಾರದೆ ಇಂದೊಬ್ ಸಂನ್ಯಾಸಿ ಬಂದಾ
ಸಂನ್ಯಾಸಿ ದೂಟೀ ಹೆರದಕ್ಕು । ಅಕ್ಕನಕೂಡೆ
ಕೆರಿಯನ್ನೀರ್ತಂದೇ ಎಸರಿತ್ತೇ ।"

ತಾನುಂಬಾ ಸೆಣ್ಣಕ್ಕಿ ತೊಳದೆತ್ತೇ ।
"ಒಂದುದಿನ ಬಂದಿ ನಿಂದುಂಬು ಸಂನ್ಯಾಸಿ
ದಂದುಗ ಬಿಡಬೆಡಾ ಕಿರುದಂಗಿ । ಕೂಡಿನ್ನು
ಅಡಗೀಯಾ ಮಾಡೇ ಬಡಸನ್ನು

ಅಟ್ಟಂಬಾ ಮಾತಾ ಕೇಳಾರೆ ಗವ್ಡೀಯೋರು
ಹಿಂದಕ್ಕೆ ತಿರ್ಗೇ ಬರೋವಾರೆ । ಗವ್ಡೀಯೋರು

ಬಂದ್ ತಮ್ಮಕ್ಕಗೇ ಒರದಾರೆ.
ಒಂದು ದಿನಬಂದೀ ನಿಂದುಂಬ ಸಂನ್ಯಾಸಿಗೆ
ದಂದುಗ ಬಿಡಬೆಡಾ ಕಿರೂದಂಗಿ । ಕೂಡಿನ್ನು
ಅಡಗೀಯಾ ಮಾಡೇ ಬಡಸಂದೇ.

ಅಟ್ಟಂಬಾ ಮಾತಾ ಕೇಳಾಳೇ ಸವ್‌ಬದ್ರಿ
ಕೆರಿಯನ ನೀರ್ತಂದೇ ಎಸರಿತ್ತೆ । ಸೂಬದ್ರಿ
ತಾನುಂಬಾ ಸೆಣ್ಣಕ್ಕಿ ತೊಳದೆತ್ತೇ ।"
"ಇನ್ನೇಳು ಸಂನ್ಯಾಸಿ ಅನುವದೆ."[೫೫]

"ಕೆರಿನೀರುಂಬುಕೇ ನನ್ನೂರು ಸುಬನವೇ
ನಿನ್ನಣ್ಣ ನಾರ್ಣದೆವಾ ಹದೂಳವೆ । ಎಲೆಣ್ಣೆ
ಬಚ್ಚಲಗೇ ನೀರಾ ಎರೆಹೋಗೆ । ಸೂಬದ್ರಿ
ಬಚ್ಚಲಗೇ ಕಿಚ್ಚಾ ಉರೀ ಹೋಗೇ ।"
ನೀನುದ್ದು ಕಮ್ಮೆಣ್ಣಿ[೫೬] ತನಗುದ್ದೇ.

ಅಟ್ಟಂಬಾ ಮಾತಾ ಕೇಳಾರೆ ಸೂಬದ್ರಿ
ತನ್ನಾ ಗವಡ್ಯೋರಾ ದೆನೀದೂರೇ
ತನ್ನಾ ಗವ್‌ಡ್ಯೋರಾ ದೆನಿದೂರ್ವದ್ನು ಗವ್ಡೀಯೋರು
ಓಯ್ಗುಂಡೇ ಒಡೂನೆ ಬರೂವಾರೇ

ಎಂದೂ ಕರದಮ್ಮಲ್ಲ ಬಂದಾರೆ ಗವ್ಡೀಯೋರು
ನಿಂದಾರೆ ಸೂಬದ್ರಿ ಒಡನಲ್ಲಿ । ಲ್ಲೇ । ನಿಂದೀಕಂಡೇ
ಏನು ಕಾರಣಲೆ ಕರದೀಯೇ.
ಕರ್ದಂ ಕಾರ‍್ಯವಿಲ್ಲ ಕಿರಿದುಂಬೆಸರಸಯ್ಯೆ
ಹೋಗ್ಬನ್ನೀ ಅಣ್ಣನಾ ಅರಮನಗೆ

"ಎಂದೂ ಬಾರದೆ ಇಂದೊಬ್ ಸಂನ್ಯಾಸೀ ಬಂದಾ
ಸಂನ್ಯಾಸೀ ದೋಟೀ ಹೆರದಕ್ಕೇ । ಅಕ್ಕನಕೂಡೆ
ಕಾಸಂದಾ ನೀರಾ ಬೆರಸಂದಾ ।"
ತಾನುದ್ದು ಕಮ್ಮೆಣ್ಣೀ ತನಗುದ್ದು । ಅಂದೇಳಿ
ಹೋಗ್ಬನ್ನಿ ಅಣ್ಣನ ಅರಮನ್ಗೆ । ಅಂಬುದ್ನು ಗವ್‌ಡೇರು
ಹೋಗೀ ಬಾಗಲ್ಲೇ ನಿಲೋವಾರೇ.

'ಕೆಟ್ಟಾಗವ್ಡೇರಿಗ್ ಎಟ್ಟೂ ಬಾರೇಳಲೆ[೫೭]
ಚಬಕಾ ತಂದೆಯ್ಡಾ ಬಿಗಿಯಾಲೆ । ಅಂದೇಳೇನಾರ್ಣದೆವಾ
ಚಬಕಾ ತಂದೆಯ್ಡಾ ಬಿಗೀದಾನೇ.
ಕೆಟ್ಟಾ ಗವ್ಡೇರಿಗ್ ಎಟ್ಟೂ ಬಾರೇಳಲೆ.
ಬಡರಾ[೫೮] ತಂದೆಯ್ಡಾ ಒಗೀಯಾಲೇ.
ಬಡರಾ ತಂದೆಯ್ಡಾ ಒಗ್ವದ್ನು ಗವ್ಡೀಯೋರು

೫೫. ಸಿದ್ಧವಿದೆ ೫೬. ಸುವಾಸನೆ ಎಣ್ಣೆ ೫೭. ಎಷ್ಟು ಸಲ ಹೇಳಲಿ ೫೮. ಬಡಿಗೆ

ಉದ್ದೀ ಕಂಡೋಡೇ ಬರೂವಾರೇ । ಗಿಡ್ಡೀಯೋರು
ಬಂದ್ ತಮ್ಮಕ್ಕಗೇ ಒರೂವಾರೇ
ಕಂತೆ ಕಪ್ಪಡವಿಲ್ಲಾ ಎಂಟೂ ಜೋಳೂಗಿಲ್ಲಾ
ಮಂಚಕೊಪ್ಪುವಾ ಬೆಳಿಎಲೆ । ತಡ್ಡಬಂದಾನೆ
ಅಕ್ಕಾನಿನ್ನಾಟಾತರವಲ್ಲಾ.

ಕಂತೆಕಪ್ಪಡನೂ ಎಂಟೂ ಜೋಳೂಗೀನೂ
ಸೆಟ್ಟಿ ಅರಮಲ್ಲೆ ಮಡಗೀದೆ । ಗಿಡ್ಡೀಯೋರೆ
ಸೆಟ್ಟೀಯೋರ್ ಮದವೀತರನಲ್ಲೆ । ಆಗುವಂಗೆ
ಅಲ್ಲೇ ನೀಡಿದರೆ ಬೆಳಿಎಲೆ

ಕಂತೆ ಕಪ್ಪಡನು ಎಂಟೂಜೋಳಗಿನು.
ಹಾರೂ ಅರಮಲ್ಲೆ ಮಡಗಿದೆ । ಗಿಡ್ಡೀಯೋರೆ
ಹಾರೂವರ ಮದವೀ ತರನಲ್ಲೆ । ಆಗುವಂಗೆ
ಅಲ್ಲೆ ನೀಡಿದರೆ ಬೆಳಿಎಲೆ

ಅಟ್ಟಂಬಾ ಮಾತಾ ಕೇಳಾಳೆ ಸೂಬದ್ರಿ
ಬಚ್ಚಲಗೆ ನೀರಾ ಎರದಾಳೆ । ಸೂಬದ್ರಿ
ಬಚ್ಚಲಗೆ ಕಿಚ್ಚಾ ಉರೀಸಾಳೆ । ಸೂಬದ್ರಿ
ಸೀಗೆ ಬಾಗವಾ ಅರದಾಳೆ । ಸೂಬದ್ರಿ
ಕಮ್ಮನ ಕರಿಇಟ್ಟೇ ಹೊಡೀಮಾಡೇ । ಸೂಬದ್ರಿ

ಮಾಳೂಗೀ ಒಳಗೆ ನೆಡದಾಳೆ.
ಮಾಳುಗಿ ಒಳಗೆ ನೆಡ್ವದ್ನು ಸಂನ್ಯಾಸಿ
ಆಗೊಂದು ಮಾತಾ ನುಡೀದಾನೆ
ಗಿಡ್ಡೀಗಿಡ್ಡೀಯೋರಾ ಜೋಡಸ್ ಬೀಗನಾಕೇ

ನೀ ಬಂದೀ ಎಣ್ಣೀ ಉಗೂರಾಡೇ[೫೯]
ಗಿಡ್ಡೀಗಿಡ್ಡೀಯೋರಾ ಜೋಡಸ್ ಬೀಗನಾಕೇ
ಮಾಳೂಗೀ ಒಳಗೇ ನೆಡದಾಳೇ
ದಾದೀದಾದೀಯೋರೆಲ್ಲಾ ಜೋಡಸ್ ಬೀಗನಾಕೇ
ನೀ ಬಂದೀ ಎಣ್ಣೀ ಉಗರಾಡೇ
ದಾದಿದಾದಿಯೋರೆಲ್ಲಾ ಜೋಡಸ್ ಬೀಗನಾಕೇ

೫೯. ತಿಕ್ಕೇ

ಮಾಳೂಗಿ ಒಳಗೇ ನೆಡದಾಳೇ । ಸೂಬದ್ರಿ
ಹೊನ್ನಾ ಮಣೆಯೊಂದಾ ತಡದಾಳೆ । ಸೂಬದ್ರಿ
ಎಣ್ಣೀಯ ಗಿಂಡೀ ಬಲಗಯ್ಲೆ । ಯ್ಲಿ । ತಡಕಂಡಿ
ಮಾಳಗ್ಗಿಂದೆರಗೇ ಬರೂವಾಳೇ । ಸೂಬದ್ರಿ
ಸಂನ್ಯಾಸಿ ಒಡನೋಗೆ ನಿಲೂವಾಳೇ
ಸಂನ್ಯಾಸಿ ಒಡ್ನೋಗೇ ನಿಲ್ವದ್ನು ಸೂಬದ್ರಿ

ಹೊನ್ನಾ ಮಣೆಯೊಂದಾ ಮಡಗಾಳೆ
ಹೊನ್ನಾ ಮಣಿಯೊಂದಾ ಮಡಗ್ವದ್ನು ಸಂನ್ಯಾಸಿ
ಮಣೆಯಾ ಮೆನೋಗೇ ಕುಳೂತಾನೆ
ಮಣೆಯಾ ಮೆನೋಗೇ ಕುಳುವದ್ನು ಸೂಬದ್ರಿ

ತಾಂಬದೀ ಎಣ್ಣೀ ಉಗೂರಾಡೇ
ಆಕಯ್ಯ ಅಂಕಣವಾ ಮಾಕಯ್ಲೇ ತಿದ್ದೀತೇ
ಇದು ಯಾರೇ ತೊಡುಸೀದಾ ತೊಡುಗೀಯೇ । ಎಲೆಣ್ಣೆ
ಕವ್ಲರು ತೊಡಸೀದ ತೊಡೂಗೀಯಾ?”

ಯಾವೂರ ಸಂನ್ಯಾಸೀ ನೀನು ಯಾವೂರ ಬಡಮಾಣಿ ನೀನೋ
ಯಾವಲ್ಲೋ ನಿನ್ನಾ ಮನೆಮಟಾ । ಕೇಳ್ವದ್ನು

ಹತ್ಯಣ್ಣಪುರ[೬೦] ತನ್ನಾ ಅರಮನೆ
“ಹತ್ಯಣ್ಣ ಪುರದಲ್ಲಿ ಅತ್‌ಮಾವ್ನ ಮಕ್ಕಳು
ಅವರಯ್ವರು ಹದೂಳಾವ್ರೋ?
ಸಾದೇವ ಸಕುಲರು ಧರ್ಮಾಭೀಮಾರು
ಅವರಯ್ವರು ಹದೂಳಾವ್ರೋ”

“ಅಯ್ವರಿದ್ದಲೀ ನಾಲ್ವರೆಸರೇಳಿದೆ
ಇನ್ನೊಬ್ಬನೆಸರಾ ಮರತೆಯಾ?”
“ಸೆಣ್ಣಲ್ಲೇ ತಾಯಿತಂದೆ ಕೊಡತೇನಂದೇಳಿರು
ಹೆಸರಾ ಹೇಳ್ವದಕೆ ಅಳಕಿದೆ”
ಕಮ್ಮಣಿಯನಿಟ್ಟು ಕಮ್ಮಣಿ ಎಣ್ಣೀ ಉಗುರಾಡೇ

ಸುಮ್ಮನೇ ಎಣ್ಣೀ ಉಗೂರಾಡೇ । ಸಂನ್ಯಾಸೀಯಾ
ಎಣ್ಣೀಯಾ ಜಳಕಾ ಹುರದಾವೇ । ಸಂನ್ಯಾಸೀ
ಬಚ್ಚಲರ ಮನಗೆ ನೆಡದಾನೆ
ಬಚ್ಚಲರ ಮನಗೇ ನೆಡ್ವದ್ನು ಸೂಬದ್ರಿ
ಬಚ್ಚಲರಮನಗೇ ನೆಡದಾಳೆ.

೬೦. ಹಸ್ತಿನಾಪುರ

ಕಾಮನ ಗುಂಡಿಯ ನೀರಾ ಭೀಮನಗುಂಡಿಗೆ ತಿರಗೇ
ಅರ್ಜನ ಗುಂಡ್ಯಲೇ ಹದಮಾಡೇ । ಸಂನ್ಯಾಸಿ
ಬಚ್ಚಲ ಕಲ್‌ಮೆನೇ ಕುಳತಾನೇ । ಸೂಬದ್ರೆ
ಮುತ್ತೀನಾಯರದಾ ಮಣಿತೆಂಗಾ । ತಡಕಂಡೇ
ಅರ್ಜುನನ ಕೇಸಿಗೆ[೬೨] ನೀರಾಎರದಾಳೇ
ಕೇಸಾ ಬಿಡಸದ್ರೇ ಚಲ್ಲದವೇ ಮಲ್ಲಿಗೇ

ಗಂಗೀಲಿದ್ದೇಳು ಗಿಳಿಬಂದೇ । ಸಂನ್ಯಾಸೀಯಾ
ಚಲ್ಲದ ಮಲ್ಲಗೀಯಾ ಕುಸುಮಕ್ಕೇ
ಚಂಡಾ ಬಿಡಸದ್ರೇ ಚಲ್ಲದವೇ ಮಲ್ಲಿಗೇ
ದೇಸಾದಲ್ಲಿದ್ದೇಳು ಗಿಳಿಬಂದೆ. । ಸಂನ್ಯಾಸಿಯಾ
ಚಲ್ಲದ ಮಲ್ಲಿಗೀಯಾ ಕುಸುಮಕ್ಕೆ । ಸೂಬದ್ರಿ

ಸೀಗೆ ಬಾಗವಾ ತಲಗುದ್ದೆ । ಸೂಬದ್ರಿ
ಕಮ್ಮನ ಕರಿಯಿಟ್ಟಾ ಮಯೀಗುದ್ದೆ । ಸೂಬದ್ರಿ
ಸಂನ್ಯಾಸೀ ಕೇಸಿಗೆ ನೀರಾ ಎರದಾಳೇ
ಸಂನ್ಯಾಸೀ ಕೇಸಿಗೆ ನೀರಾ ಎರ‍್ವದ್ನು ಸಂನ್ಯಾಸಿ
ಮಿಂದೊಗದಾನೊಂದು ಗಳಗ್ಯಲ್ಲೇ

ಸಂನ್ಯಾಸಿ ಅಂಬೆಸರು ಇಲ್ಲಿಗಿಂದಾತ್ತಾಗಿರಲೇ
ಅರಜುಣ ನಂಬೆಸರು ನೆಡಿಯಾಲಿ । ಅಂದ್ ಅರಜೂಣಾ

ಸೆಣ್ಣಾ ಗಿಂಡ್ಯಲ್ಲೇ ಉದಕವೇ । ವ । ತಡಕಂಡೇ.
ಮಾಳೂಗೀ ಒಳಗೆ ನೆಡದಾನೆ । ಅರಜೀಣಾ
ದೆವ್ರ ಬುಡಕೋಗೆ ಕುಳತಾನೆ । ಅರಜೀಣಾ
ತೇದೀ ಗಂದಾವಾ ಇಡೋವಾನೆ । ಅರಜೀಣಾ
ಚೊಳಚೀ ಸುತ್ತೊಂದಾ ತಿರಗಾನೆ । ಅರಜೀಣಾ
ಚೊಳಚೀ ತೀರುತವಾ ಕುಡೀದಾನೆ । ಅರಜೀಣಾ

ಮಾಳುಗೀ ಒಳಗೆ ನೆಡದಾನೆ.
ಮಾಳೂಗೀ ಒಳಗೆ ನೆಡ್ವದ್ನು ಸೂಬದ್ರಿ
ಮಾಳೂಗೀ ಒಳಗೆ ನೆಡದಾಳೆ
ಮಾಳೂಗೀ ಒಳಗೆ ನೆಡ್ವದ್ನು ಸೂಬದ್ರಿ
ಒಂದೋ ಹೊಸ್ಮಣೀಯಾ ಮಡಗಾಳೆ.
ಒಂದೋ ಹೊಸ್ಮಣಿಯಾ ಮಡಗ್ವದ್ನು ಅರ್ಜೀಣಾ
ಮಣೆಯಾ ಮೆನೋಗೇ ಕುಳತಾನೆ.

೬೧. ಮುಗಿಯಿತು   ೬೨. ಕೂದಲಿಗೆ

ಮಣೆಯಾ ಮೆನೋಗೇ ಕುಳುವದ್ನು ಸೂಬದ್ರಿ
ಕಿರಳು ಬಾಳೆಲಿಯಾ ತೊಳದಾಸೇ । ಸೂಬದ್ರಿ
ಅನ್ನಾ ಮೆಗರವಾ ಬಡೂಸಾಳೆ । ಸೂಬದ್ರಿ
ಹಾಲೂ ಪಾಯಸವಾ ಬಡೂಸಾಳೆ । ಸೂಬದ್ರಿ
ತುಪ್ಪಾ ಸಕ್ಕರೆಯಾ ಎರದಾಳೆ
ತುಪ್ಪಾ ಸಕ್ಕರೆಯಾ ಎರ್ದ್ದೀ ತಿರ್ರೂಗ್ರೊಟಗೇ
ಹಿಡ್ದಾನೆ ಬಳಿಯಾ ನಳೀತೋಳಾ

"ಅನ್ನಾ ಬಡಸ್ವಂಗೆ ಯಾರೆಲ್ಲಾ ನೆನಸೀದೆ
ಅನ್ನಾಗೋಳು ತನಗೆ ಮಿಗೋಲಾದೋ । ಎಲೆಣ್ಣೆ
ನಾನು ನೀನುಂಬೋ ಒಡನೂಟಾ.
ತುಪ್ಪಾ ಬಡಸ್ವಂಗೆ ಯಾರೆಲ್ಲಾ ನೆನುಸೀದೆ
ತುಪ್ಪಾಗಳು ತನಗೆ ಮಿಗೂಲಾದೋ । ಎಲೆಣ್ಣೆ
ನಾನೂ ನೀನುಂಬೋ ಒಡನೂಟಾ । ಅಂದೇಳೀ
ಹಿಡ್ದಾನೆ ಬಳಿಯಾ ನಳೀತೋಳಾ

"ಬಡಸ್ವಾಕೆ ಬಡಸೀದೆ ನೂರೊಂದಾ ಬಡಸೀದೆ
ಉಪ್ಪಾ ಬಡಸ್ವದಕೆ ಮರತೀದೆ"

ಹಿಡಿದಾ ನಳಿತೋಳಾ ಒಪ್ಪಾದಲ್ ತಪ್ಪಸಗಂಡೇ
ಉಪ್ಪೀಗಂದೇಳೀ ನೆಡದಾಳೆ । ಸೂಬದ್ರಿ
ಹಿತ್ಲ ಕಣಕನ ಬಾಗ್ಲಾಗೇ ನೆಡದಾಳೇ । ಸೂಬದ್ರಿ
ಬಾವೀಯಾ ಹಗ್ಗಾ ಮಡೂಲಲ್ಲೇ ।
ಬಾವೀಯ ಹಗ್ಗಾ ಮಡುಲಲ್ಲಿಟ್ಟೀ ಕಂಡೇ

ಬಾಳೀಯಾ ಬನವಾ ಇಳೂದಾಳೇ । ಸೂಬದ್ರಿ
ಬಾಳೀ ಮರಕಗ್ಗಾ ಇಡೋವಾಳೇ
ಬಾಳೀ ಮರಕಗ್ಗಾ ಇಡ್ವದ್ನು ಆ ಬಾಳೀ
ಪಾಪಕೆ ತಾನು ಒಳವಲ್ಲ[೬೩] । ಅಂಬುದ್ನು

ಇಳ್ಳೀಯಾ ಬನವಾ ಇಳೀದಾಳೇ । ಸೂಬದ್ರಿ
ಕಂಚೀ ಮರಕಗ್ಗಾ ಇಡೋವಾಳೇ
ಕಂಚೀ ಮರಕಗ್ಗಾ ಇಡ್ವದ್ನು ಆಕಂಚೀ
ಆ ಪಾಪಕ್ ತಾನೂ ಒಳವಲ್ಲ । ಅಂಬುದ್ನು

---

೬೩. ಹೊಣೆಯಲ್ಲ

ಮಾಯೀನಾ ಬನವಾ ಇಳದಾಳೆ । ಸೂಬದ್ರಿ
ಮಾಯೀನಾ ಮರಕಗ್ಗಾ ಇಡೋವಾಳೇ
ಮಾಯೀನಾ ಮರಕಗ್ಗಾ ಇಡ್ವದ್ನು ಆ ಮಾಯಿನ್ಮರ
ಆ ಪಾಪಕ್ ತಾನು ಒಳವಪ್ಪೆ । ಅಂಬುದ್ನು

ಕೆದೂಗೀ ಬನವಾ ಇಳೂದಾಳೇ । ಸೂಬದ್ರಿ
ಕೆದೂಗೊಂದೊಲಿ ಒಗದಾಳೇ । ಸೂಬದ್ರಿ
ಸೆಳ್ಳುಗರೀಲೊಲೀ ಬರದಾಳೇ
ಪಾಪದ ಪಲಗುಣಾ[೬೪] ಪುಣ್ಯಾದಲೆಡತಂದಾ[೬೫]

ಸೆಣ್ಣದಿಲತಿ ತಾಳೀದಾ ಹೆರಿಯಣ್ಣಾ । ಣ್ಣ । ನ ಕಣ್ಣಿಗೆ
ಇಂಗಾಳಿ ಹಬ್ಬ ತೊಡಗಾಲೇ । ಅಂದ್ ಸೂಬದ್ರಿ
ಸೆಳ್ಳುಗರೀಲೊಲೀ ಬರದಾಳೇ । ಸೂಬದ್ರಿ
ತನ್ನಾ ಗಿಳಿಗೋಳಾ ದೆನಿದೂರೇ

ಎಂದೂ ಕರದಮಲ್ಲಾ ಬಂದಾರೇ ಗಿಳಿಗೋಳು
ಬಂದಾರೆ ಸೂಬದ್ರಿ ಒಡನಲ್ಲಿ । ನಿಂದೀಕಂಡೇ
ಏನು ಕಾರಣಲೆ ಕರದೀಯೇ
ಪಾಪದ ಪಲಗೂಣಾ ಪುಣ್ಯದಲೆಡತಂದಾ

ಸೆಣ್ಣದಿಲತೀ ತಾಳೀತಾ ಹೆರಿಯಣ್ಣಾ । ಣ್ಣ । ನ ಕಣ್ಣೀಗೆ
ಇಂಗಾಳಿ ಹಬ್ಬ ತೊಡಗಾಲೇ । ಅಂದೆಸೂಬದ್ರಿ
ಕೊಟ್ಟಾಳೆ ಕಯ್ಯಾಬರದೊಲೆ । ಸೂಬದ್ರಿ
ಮಾಯೀನಾ ಮರಕಗ್ಗಾ ಇಡೋವಾಳೇ । ಸೂಬದ್ರಿ
ಹಗ್ಗಾದಲ್ ಪರಣವಾ ಕಳಕಂತೇ.
ಹಗ್ಗಾದಲ್ ಪರಣವಾ ಕಳ್ಕಂಡದ್ ಕಂಡಾರೆ

ಹಾರಿದವಂಬರಕೇ ಸೆರಿಯಾಗಿ । ಗಿಳಿಗೋಳು.
ಅರಜಿಣ ಅರಮನಗೇ ಬರೂವವು । ಗಿಳಿಗೋಳು
ಹೋಗೀ ಮಿಳಿಮೆನೇ ಕುಳತಾರೆ । ಗಿಳಿಗೋಳು
ಅರಗೀ ನೋಡಿದರೆ ಒಳಗೊಮ್ಮೆ
'ಮಾಳೂಗಿ ಒಳಗೆ ತುಪ್ಪೋಗರುಂಬರಜೀಣಾ[೬೬]
ಕೇಳೀಬಾರೊಂದು ಹೊಸಸುದ್ದೆ । ನಿನ್ನಾಲುಮಡ್ಡಿ

---

೬೪. ಅರ್ಜುನ   ೬೫. ಪುಣ್ಯವಿಲ್ಲದವು   ೬೬. ತುಪ್ಪನ್ನವುಣ್ಣುವ

ಹಗ್ಗಾದಲ್ ಪರಣವಾ ಕಳಕಂತು.
ಅಟ್ಟಂಬಾ ಮಾತಾ ಕೇಳಾನೇ ಅರಜೀಣಾ
ಉಣತಾ ಕಯ್ಯಲೇ ಕುಡಗೆದ್ದೇ । ಅರಜೀಣಾ
ಪನ್ನೀರಲಿ ಮೊಕವಾ ತೊಳದಾನೆ । ಅರಜೀಣಾ
ಮಾಳೂಗೀ ಒಳಗೆ ನೆಡದಾನೇ । ಅರಜೀಣಾ
ಮಾಳೂಗೀ ಒಳಗೆ ನೆಡದಾನೆ । ಅರಜೀಣಾ
ಪನ್ನೀರಾ ಗಿಂಡೀ ಮಡೂಗಾನೆ । ಅರಜೀಣಾ

ಗಿಳಿಗೋಳಾ ಒಡ್ನೋಗೇ ನಿಲೋವಾನೆ
ಗಿಳಿಗೋಳೊಡನೋಗೇ ನಿಲ್ವದ್ನು ಗಿಳಿಗೋಳು
ಕೊಟ್ಟಾರೆ ಕಯ್ಯಾ ಬರದೊಲೆ.
ಕೊಟ್ಟಾ ವಾಲೀಯಾ ದುಟ್ಟೆತ್ತಿ[೬೭] ನೋಡಾನೆ
ಪನ್ನಿ ಮರಿಯಲ್ಲೆ ಮುಗುಳೋ ನೆಗ್ಗೆ । ಗಿ । ಆಡೀತಾ

ಮಾಳೂಗೀ ಒಳಗೆ ನೆಡದಾನೆ । ಅರಜೀಣಾ
ತಟ್ಟೀಲ್ ಹಾಲಾ ಎರದಾನೆ । ಅರಜೀಣ
ಬಾಳೀ ಹಣ್ಣೇಳಾಸುಲೀದಾನೆ । ಅರಜೀಣ
ಇಳ್ಳೀ ಹಣ್ಣೇಳಾ ಸುಲೀದಾನೆ । ಅರಜೀಣ
ಹಾಲೊಳಗಣ್ಣಾ ಸುಲೀದಾನೆ । ಅರಜೀಣ
ಮಾಳಗ್ಗಿಂದೆರಗೇ ಬರೂವಾನೆ । ಅರಜೀಣ

ಗಿಳಿಗೋಳೊಡನೋಗೇ ನಿಲುವಾನೇ
ಗಿಳಿಗೋಳೊಡನೋಗೇ ನಿಲ್ವದ್ನು ಅರಜೀಣಾ
ಗಿಳಿಗೋಳಿಗ್ಹಾಲಾ ಕೊಡೋವಾನೇ
ಹಾಲಾ ಕುಡ್ದವೆ ಗಿಳಿಯೋ ಹಣ್ಣಾ ಮೆದ್ದವೆ ಗಿಳಿಯೋ
ಹಾರಿದವಂಬರಕೆ ಸರಿಯಾಗಿ
ಹಾರಿದವಂಬರಕೆ ಸರಿಯಾಗ್ವದ್ನು ಅರಜೀಣ
ಮಾಳೂಗೀ ಒಳಗೆ ನೆಡದಾನೆ
ಮಾಳೂಗಿ ಒಳಗೆ ನಡೆದಾನೆ ಅರಜೀಣ

ನಾಗಾಬೆತ್ತವಾ ತಡದಾನೆ । ಅರಜೀಣಾ
ಅಮರತದಾ ಗಿಂಡೀ ತಡದಾನೆ । ಅರಜೀಣ
ಮಾಳಗ್ಗಿಂದೆರಗೇ ಬರೋವಾನೇ । ಅರಜೀಣ
ಹಿತ್ಲ ಕಣಕ್ಕ ಬಾಗಲ್ಲೇ ಹೆರೋಟಾನೆ । ಅರಜೀಣ

---

೬೭. ದೃಷ್ಟಿಹಾಯಿಸಿ

ಬಾಳೀಯಾ ಬನವಾ ಇಳೀದಾನೆ । ಅರಜೀಣ
ಇಳ್ಳೀಯಾ ಬನವಾ ಇಳೀದಾನೆ । ಅರಜೀಣ
ಕಂಚೀಯಾ ಬನವಾ ಇಳೀದಾನೆ । ಅರಜೀಣ
ಮಾಯೀನ ಮರಕೆ ನೆಡದಾನೆ ।

ಮಾಯೀನಾ ಬನಕೇ ನೆಡದಾನೆ ಅರಜೀಣ
ಸುಬದ್ರೀ ಒಡನೋಗೇ ನಿಲೋವಾನೆ
"ಉಪ್ಪೀಗೋದೆಣ್ಣೆ ಉಪ್ಪರಗೀ ನೆಗದಿದಿಯೋ
ಮತ್ತೆ ಸಾಗರಕೆ ಇಳದೀಯೋ । ಅಂದೇಳೇ
ಇಳ್ಳೀಯಾ ಎಲಿಯಾ ಕೊಯೀತಂದೇ । ಅರಜೀಣಾ
ಎಲಿಯಾ ಮೆನೆಲಿಯಾ ಮಡದಾಸೇ । ಸೂಬದ್ರಿ
ಕೊಳ್ಳನ ಹಗ್ಗಾ ಸೆಡೂಲೀಸೆ

ಕೊಳ್ಳನ ಹಗ್ಗಾ ಸೆಡೂಲೀಸಿ । ಅರಜೀಣಾ
ಎಲಿಯಾ ಮೆನದ್ರ ಒರಗೀಸೇ । ಅರಜೀಣ
ಅದಕಿಟ್[೬೮] ಅಮರತವಾ ತಳದಾನೇ । ಅರಜೀಣ
ನಾಗಾ ಬೆತ್ತವಾ ಎಳದಾನೇ
ನಾಗಾ ಬೆತ್ತವಾ ಎಳ್ವದ್ನು ಸೂಬದ್ರೀ

ಮಿಯ್ಯಾ ಮುರುದೆದ್ದೇ ಕುಳತಾಳೇ
ಮಿಯ್ಯಾ ಮುರುದೆದ್ದೇ ಕುಳ್ವದ್ನು ಅರಜೀಣಾ
ಆಗೊಂದು ಮಾತಾ ನುಡೀದಾನೇ
ಮಾವನ ಮಗತಾನು ತಡಕೊಂಡೋಗು[೬೯] ಸೋದರ ತಾನು

ಹೆರುಗೇ ಸೊದರವಾ ಅರಸೀದಿಯೋ । ಅಂದೇಳಿ
ಆಗೇ ತೋರಾನಿಯೇ ನಿಜರೂಪಾ
ಮಾವನ ಮಗನೆ ತಡಕಂಡೋಗು ಸೊದರದವ್ನೆ
ಇಟ್ ನನ್ ಗೋಳೆಕೆ ಹೊಯಿಕಂಡೇ
ಅತ್ತೀಮಗನೆ ತಡಕಂಡೋಗು ಸೊದರದವ್ನೆ
ಇಟ್ ನನ್ ಗೋಳೆಕೆ ಹೊಯೀಕಂಡೆ । ಅಂದ್ ಸೂಬದ್ರಿ

ಬೂಮಗ್ ಸೆರಿಯಾಗೆ[೭೦] ತಲಬಾಗೇ
ಬೂಮಗ್ ಸೆರಿಯಾಗೇ ತಲಬಾಗ್ವದ್ನು ಅರಜೀಣಾ
ಕೆದೂಗೀ ಬನವಾ ಇಳದಾನೆ । ಅರಜೀಣಾ
ಕೆದೂಗೊಂದೊಲೀ ಒಗದಾನೆ । ಅರಜೀಣಾ

---

೬೮. ಅದಕ್ಕಿಷ್ಟು   ೬೯. ಕರೆದುಕೊಂಡು ಹೋಗುವ   ೭೦. ಸರಿಯಾಗಿ

ಸೆಳ್ಳುಗರೀಲೊಲೀ ಬರದಾನೆ । ಅರಜೀಣಾ
ತನ್ನಾ ಗಿಳಿಗೋಳಾ ದೆನೀದೂರೇ

ಇಂದೂ ಕರದಮಲ ಬಂದಾರೆ ಗಿಳಿಗೋಳು
ನಿಂದಾರೆ ಅರ್ಜುನ್ನಾ ಒಡನಲ್ಲೇ
ಈ ಕೂಸು ಜೀಂವಾ ಈ ಮಾಣಿಕಯ್ಲುದೆ[೭೧]
ಈ ಮಾಣಿಗ್ ದಾರೀ ಎರದೋಗು । ಅಂದೇಳೆ
ಕೊಟ್ಟಾನೆ ಕಯ್ಯಾ ಬರದೊಲೆ
ಕೊಟ್ಟಾ ವಾಲೀಯಾ ರಟ್ಟೆಯಲಡಗಸಗಂಡೇ
ಹಾರಿದವಂಬರಕೇ ಸೆರಿಯಾಗೇ । ಗಿಳಿಗೋಳು
ನಾರ್ಣದೆವ್ನರಮನಗೇ ನೆಡದಾವೆ

ನಾರ್ಣದೆವ್ನರ ಮನಗೇ ನೆಡದಾವೇ । ಗಿಳಿಗೋಳು
ಹೋಗೀ ಗಿಳಿಗೋಳು ಅರಗಾರೆ । ಗಿಳಿಗೋಳು
ಹೋಗೀ ಮಿಳಿಮೆನೆ ಕುಳತಾರೆ
ಹೋಗೀ ಮಿಳಿಮೆನೆ ಕುಳುವದ್ನು ಗಿಳಿಗೋಳು
ಅರಗೀ ನೋಡಿದರೆ ಒಳಗೊಮ್ಮೆ । ನಾರ್ಣದೆವಾ
ವಾಲಗ್ಗುಂಡಾನೆ ಹಸೆಯಲ್ಲಿ

ಈ ಕೂಸು ಜೀಂವಾ[೭೨] ಈ ಮಾಣಿ ಕಯ್ಲುದೆ
ಈ ಮಾಣಿಗ್ ದಾರೀ ಎರದೋಗು । ಅಂದೇಳೆ
ಕೊಟ್ಟಾರಿಯೇ ಕಯ್ಯಾ ಬರದೋಲೆ । ನಾರ್ಣದೆವ್ನಾ
ತೊಡಿಯಾ ಮೆನೊಲಿ ಮಡಗಾರೆ
ತೊಡಿಯಾ ಮೆನನೊಲಿ ತಡದೆತ್ತಿ ನೋಡಾನೆ
ಪನ್ನಿ ಮರಿಯಲ್ಲೆ ಮುಗುಳುನೆಗ್ಗಿ
ಪನ್ನಿ ಮರಿಯಲ್ಲೆ ಮಗುಳ್ನೆಗ್ಗಿ ಆಡೀತಾ

ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ಹಾಲ್ದಟ್ಟೀಲ್ದಾಹಾ ಎರದಾನೆ । ನಾರ್ಣದೆವಾ
ಬಾಳೀ ಹಣ್ಣೀಳಾ ಸೊಲಿದಾನೆ. । ನಾರ್ಣದೆವಾ
ಇಳ್ಳೀ ಹಣ್ಣೀಳಾ ಸೊಲೀದಾನೆ. । ನಾರ್ಣದೆವಾ
ಹಾಲೊಳಗಣ್ಣಾ ನುಳೀದಾನೆ.[೭೩] । ನಾರ್ಣದೆವಾ
ಮಾಳಗ್ಗಿಂದೆರಗೇ ಬರೋವಾನೆ । ನಾರ್ಣದೆವಾ
ಗಿಳಿಗೋಳೊಡನೋಗೇ ನಿಲೋವಾನೇ । ನಾರ್ಣದೆವಾ

೭೧. ಈ ಮಾಣಿಯ ಕೈಯಲ್ಲಿದೆ
೭೨. ಜೀವ
೭೩. ನುರಿದನು

ಗಿಳಿಗೋಳಿಗ್ ಹಾಲಾ ಕೊಡೋವಾನೇ
ಗಿಳಿಗೋಳಿಗ್ಹಾಲ ಕೊಡುವದ್ನು ಗಿಳಿಗೋಳು
ರಟ್ಟೆ ಅಲ್ಲಾಡೇ ಕುಡೀದಾವೇ.
ಹಾಲಾ ಕುಡ್ದವೇ ಗಿಳಿಯೋ ಹಣ್ಣಾಮೆದ್ದವೇ ಗಿಳಿಯೋ
ಹಾರಿದವಂಬರಕೇ ಸೆರೀಯಾಗೇ
ಹಾರಿದವಂಬರಕೇ ಸೆರಿಯಾಗುತ್ನು ನಾರ್ಣದೇವಾ

ಮಾಳೂಗೀ ಒಳಗೆ ನೆಡದಾನೆ । ನಾರ್ಣದೇವಾ
ಅಟ್ಟತ್ತಿ ಪೆಟ್ಟಗೀಯಾ ತೆಗದಾನೆ. । ನಾರ್ಣದೇವಾ
ಮೆಟ್ಟೀ ಬೀಗವಾ ಕರೀದಾನೆ.
ಮೆಟ್ಟಿ ಬೀಗವಾ ಕರ್ವದ್ನು ನಾರ್ಣದೇವ
ಮುಚ್ಚಲ ತಗದೇ ಕಡಗಿಟ್ಟೇ । ನಾರ್ಣದೇವಾ
ಪಟ್ಟೆ ಜೋತುರವಾ ನೆರದುಟ್ಟೇ । ನಾರ್ಣದೇವಾ
ಮುತ್ತನ ಮುಂಡಸನಾ ತಲಗೇಸುತ್ತೇ । ನಾರ್ಣದೇವಾ

ಪಟ್ಟೆ ಹಚ್ಚಡವಾ ಹೊಗುಲೀಗೆ । ಹಾಯೀಕಂಡೇ
ಮುರು ಬಗ್ಸ[೭೩] ಹಣವಾ ಮೊಗದಾನೆ । ನಾರ್ಣದೇವಾ
ಜೋತುರ ಸೆರುಗಿಲೇ ಬಿಗೂದಾನೆ । ನಾರ್ಣದೇವಾ
ಪೆಟ್ಟೂಗೀ ಬಾಯಲ್ಲೇ ಮಡೂಗಾನೆ । ನಾರ್ಣದೇವಾ
ಸಣ್ಣಾಕಯ್ ಹಡ್ಪಾ ಹೊಗಲೀಗೆ । ಹಾಯೀಕಂಡೇ

ಮಾಳಗ್ಗಿಂದೆರಗೇ ಬರೋವಾನೇ । ನಾರ್ಣದೇವಾ
ರಾಜಂಗ್ಳಮೆಟ್ಟಾ ಇಳೀದಾನೆ । ನಾರ್ಣದೇವಾ
ನಾರ್ಯ್ಯೋರಾ ಕೇರಿಗಾಗೇ ನೆಡದಾನೆ । ನಾರ್ಣದೇವಾ
ಹೋಗೀ ಬಾಗಲ್ಲೇ ನಿಲೋವಾನೇ । ನಾರ್ಣದೇವಾ
ನಾರ್ಯ್ಯೊರಿಗ್ ಒಂದೀಳ್ಯಾ ಕೊಡೋವಾನೆ

ಸುಕ್ರರ ತದಗಿಯೋ ಬ್ರಸ್ತರ ಬಿದಗಿಯೋ
ಸಣಿಯರ ಸೂಬದ್ರೀ ಮುದವಿಯೋ । ನಾರೀಯೋರೆ
ನೀವು ನಮ್ಮನಗೇ ಬರೋಬೇಕೆ । ಸುಬದ್ರಿ ಮನಿಯಾ
ಮೂಡನ ಹಸಗರವಾ ಬರಿಯಾಬೇಕೇ । ಅಂದೇಳೇ
ನಾರ್ಯ್ಯೋರಿಗ್ ಒಂದೀಳ್ಯಾ ಕೊಡೋವಾನೇ । ನಾರ್ಣದೇವಾ
ನಿಸ್ತ್ರೋರ್[೭೪] ಕೇರಿಗಾಗೇ ನೆಡದಾನೇ । ನಾರ್ಣದೇವಾ
ಹೋಗೀ ಬಾಗಲ್ಲೇ ನಿಲೋವಾನೇ

---

೭೩. ಬೊಗಸೆ   ೭೪. ಸ್ತ್ರೀಯರ,

ಸುಕ್ರರ ತದಗಿಯೋ ಬ್ರಸ್ತರ ಬಿದಗಿಯೋ
ಸಣಿಯರ ಸೂಬದ್ರಿ ಮದವೀಯೋ । ನಾರಿಯೋರೆ
ನೀವು ನಮ್ಮನಗೇ ಬರೋಬೇಕೆ । ನಮ್ಮನಿಯಾ
ಅಂಕಣದಲ್ ಅಯ್ದ್ ಸೇಡೀ ಬರೆಬೇಕೆ
ಅಂಕಣದಲ್ಲಯ್ದ್ ಸೇಡಿ ಬರಿಬೇಕು ಅಂದೇಳಿ

ನಿಸ್ತ್ರೇರಿಗ್ ಒಂದೀಳ್ಯಾ ಕೊಡೋವಾನೇ । ನಾರ್ಣದೇವಾ
ಕುಂಬರ ನರಮನಗೇ ನೆಡದಾನೆ । ನಾರ್ಣದೇವಾ
ಹೋಗೀ ಬಾಗಲ್ಲೇ ನಿಲೋವಾನೆ । ನಾರ್ಣದೇವಾ
ಕುಂಬರಗೊಂದೀಳ್ಯಾ ಕೊಡೋವಾನೇ

ಸುಕ್ರರ ತದಗಿಯೋ ಬ್ರಸ್ತರ ಬಿದಗಿಯೋ
ಸಣಿಯರ ಸೂಬದ್ರೀ ಮದವೀಯೋ ।
ಕೊಂಬು[೭೫] ಕೊಂಬೂ ಗೆಯ್ಯೋ ಕೊಂಬಗೆ ಮುಚ್ಚಳಗೆಯ್ಯೋ
ಅದಕ್ಕೊಪ್ಪುದೆರಡು ಆರತಿ ಗೆಯ್ಯೋ । ಕುಂಬಾರಾ
ತಂದಿರ್‍ಸ್ಲೊ ನಮ್ಮಾ ಜಗಲ್ಯಲ್ಲೇ । ಅಂದೇಳಿ
ಕುಂಬರ ಗೊಂದೀಳ್ಯಾ ಕೊಡೋವಾನೇ । ನಾರ್ಣದೇವಾ
ಆಚಾರಿ ಅರ್ಮನಗೇ ನೆಡದಾನೆ । ನಾರ್ಣದೇವಾ
ಹೋಗೀ ಬಾಗಲ್ಲೇ ನಿಲೋವಾನೇ ।

ಬ್ರಸರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಸೂಬದ್ರೀ ಮದವೀಯೋ । ಆಚಾರಿ
ನೀನು ನಮ್ಮನಗೇ ಬರೋಬೇಕೋ । ನಮ್ಮನಿಯಾ
ಬಾಗಲ ತೊರಣವಾ ಗೆಯೀಬೇಕೋ । ಅಂದೇಳಿ
ಆಚಾರಿ ಗೊಂದೀಳ್ಯಾ ಕೊಡೋವಾನೇ । ನಾರ್ಣದೇವಾ
ಬಿನ್ನಾಣಿ[೭೬] ಅರಮನಗೇ ನೆಡದಾನೆ । ನಾರ್ಣದೇವಾ
ಹೋಗೀ ಬಾಗಲ್ಲೇ ನಿಲೋವಾನೆ ।

ಸುಕ್ರರ ತದಗಿಯೋ ಬ್ರಸ್ತರ ಬಿದಗಿಯೊ ।
ಸಣಿಯರ ಸೂಬದ್ರೀ ಮದವೀಯೋ । ಬಿನ್ನಾಣಿ
ನೀನು ನಮ್ಮನಗೇ ಬರೋಬೇಕೆ । ಬಿನ್ನಾಣಿ
ಸೂಬದ್ರಿ ಸಿರ್ಪನ್ನಿ[೭೭] ಗೆಯಬೇಕೋ । ಅಂದೇಳೇ

ಬಿನ್ನಾಣಿ ಗೊಂದೀಳ್ಯಾ ಕೊಡೋವಾನೇ । ನಾರ್ಣದೇವಾ
ಇಂದ್ರಾಲೊಕಕ್ಕಾಗೇ ನೆಡದಾನೆ । ನಾರ್ಣದೇವಾ
ಇಂದ್ರಲೋಕ್ದಂಗಡೀ ತೆಣಿಮೆನೇ[೭೮] ಕುಳೀತಾನೆ, । ನಾರ್ಣದೇವಾ

೭೫. ಕುಂಭ ೭೬. ಕೆಲಸಿ ೭೭. ಮದುವೆಯ ಪನ್ನೆಯ ಶಾಸ್ತ್ರ ೭೮. ತಜಗುಲಿಯ ಮೇಲೆ

ಇಂದ್ರಾ ಸೆಟ್ಟೀ ಅಂದೇ ದೆನೀದೂರೇ.
ಇಂದ್ರಾಸೆಟ್ಟೀ ಅಂದೇ ದೆನಿದೂರ್‍ವದ್ನು ಇಂದ್ರಾಸೆಟ್ಟಿ
ಓಯ್ಗುಂಡೇ ಒಡುನೇ ಬರೂವಾನೇ
ಓಯ್ಗುಂಡೇ ಒಡ್ನೇ ಬಂದೀ ಏನಂಬಾನೆ.

ಏನು ಕಾರಣಲೆ ಕರದೀಯೆ
ಕರದಂ ಕಾರ್‍ಯಾವಿಲ್ಲಾ ಸಿರಿದುಂಬೆಸರಸಯ್ಯೆ
ಇಂದ್ರಾ ಪಟ್ಟೀ ನೋಡೇ ತೆಗತಾರೋ ! ಅಂಬುದ್ನು
ಮಾಳೂಗೀ ಒಳಗೆ ನೆಡದಾನೆ । ಇಂದ್ರಾಸೆಟ್ಟಿ
ಜವಳೀಯಾ ದಿಂಡಾ ಬಿಡಸಾನೆ । ಇಂದ್ರಾಸೆಟ್ಟಿ
ಮಾಳಗ್ಗಿಂದೆರಗೇ ಬರವಾನೇ । ಇಂದ್ರಾಸೆಟ್ಟಿ

ನಾರ್ಣದೆವ್ನ ಬಲಗಯ್ಲ್ಲಿ ಕೊಡೋವಾನೇ
ನಾರ್ಣದೆವ್ನಾ ಬಲಗಯ್ಲ್ಲಿ ಕೊಡ್ವದ್ನು ನಾರ್ಣದೆವಾ
ಅಚಗಯ್ಯಾ್ನ[೭೯] ಪಟ್ಟೀ ಇಚಮಗ್ನೀ । ನೋಡಾನೆ
ಬಣ್ಣಾ ಸಾಕಿದರಾ ಬೆಲೆ ಹೇಳೋ.
ದೆಡಿಗೆ ಸಾವರವಂದಾ ಮೊಳಕೆ ಸಾವರವಂದಾ

ಅದಕೆ ಸಾವಿರದಾ ಹಣವಂದಾ । ಅಂಬುದ್ನು ನಾರ್ಣದೆವಾ
ಅದಕಲ್ಲೇ ಹಣವಾ ಸಲಸಾನೆ! ನಾರ್ಣದೆವಾ
ಪಟ್ಟೀ ದಟ್ಟಿಯಲೆ ಬಿಗೀದಾನೆ । ನಾರ್ಣದೆವಾ
ರಾಜಬಿದಿಗಾಗೇ ನೆಡದಾನೆ, । ನಾರ್ಣದೆವಾ
ಚಿನವರ[೮೦]ನರಮನಗೇ ನೆಡದಾನೆ । ನಾರ್ಣದೆವಾ
ಹೋಗೀ ಬಾಗಲ್ಲೇ ನಿಲೋವಾನೆ । ನಾರ್ಣದೆವಾ

ಚಿನವರನಂದೇ ದೆನಿದೂರೇ
ಇಂದೂ ಕರದಮಲ್ಲಾ ಬಂದಾನೆ ಚಿನವರ.
ನಿಂದಾನೆ ನಾರ್ಣದೆವ್ನಾ ಒಡನಲ್ಲಿ । ನಿಂದೀಕಂಡೇ
ಏನು ಕಾರಣಲೆ ಕರದೀಯೋ.
ಇಂದ್ರ್‍ಲೊಕ್ದ್ ಸೊನ್ಗಾರಾ[೮೧] ಇಂದೇ ಗದ್ದಗೀ ಹೂಡೋ
ಕಟ್ಟಣಿ ಮಣಿಸರ್‍ನಾ ಗೆಯೀಕೊಡೋ.
ಇಂದ್ರಾಲೊಕ್ದ್ ಸೊನ್ಗಾರಾ. ಇಂದೇಗದ್ದಗಿ ಹೂಡೋ
ತೊಳ್‌ಬಳಿ ಮಣಿಸರ್‍ನಾ ಗೆಯೀಕೊಡೋ
ಇಂದ್ರಾಲೋಕ್ದ್ ಸೊನ್ಗಾರಾ ಇಂದೇ ಗದ್ದಗೀ ಹೂಡೇ

೭೯.
೮೦. ಅಕ್ಕಸಾಲಿ
೮೧. ಅಕ್ಕಸಾಲಿ

ತೊಳ್ ಬಿಳಿ ಮಣಿ ಸರ್ರ್ನಾ ಗೆಯೀದಾನೆ
ಇಂದ್ರಾಲೊಕ್ದ್ ಸೊನ್ಗಾರಾ ಇಂದೇ ಗದ್ದಗೀ ಹೂಡೇ
ಕಟ್ಟಣಿ ಮಣಿಸರ್ನಾ ಗೆಯೀದಾನೇ । ಚಿನವರಾ
ನಾರ್ಣದೆವ್ನ ಬಲಗಯ್ಲೆ ಕೊಡೋವಾನೇ
ನಾರ್ಣದೆವ್ನ ಬಲಗಯ್ಲೆ ಕೊಡ್ವದ್ನು ನಾರ್ಣದೆವಾ

ಅದಕಲ್ಲೇ ಹಣವಾ ಸಲೀಸಾನೆ । ನಾರ್ಣದೆವಾ
ಹಚ್ಡ ಸೆರ್ಗಿಲೇ ಬಿಗೂದಾನೆ । ನಾರ್ಣದೆವಾ
ತನ್ನಾ ಅರ್ಮನಗೇ ಬರೋವಾನೇ । ನಾರ್ಣದೆವಾ
ಬಂದೀ ರಾಜಂಗ್ಳಾ ನೆಗದತ್ತೇ । ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ನಾಗಾಬೆತ್ತವಾ ತಡದಾನೆ । ನಾರ್ಣದೆವಾ
ನಾಗಾಬೆತ್ತವಾ ತಿರಸಾನೆ । ನಾರ್ಣದೆವಾ
ನಾಗಾಲೊಕ್ದ್ ಮಂದೀ ನೆರದದೆ । ನಾರ್ಣದೆವ್ನ ಮನಿಯಾ

ಮುತ್ತೀನಾ ಚಪ್ಪರವಾ ಇಡೋವಾರೆ
ಮುತ್ತೀನಾ ಚಪ್ಪರಾ ಮುನ್ನೂರುಗಾವುದ್ದಾ
ಮುತ್ತೀನಾ ಸರಜಲ್ಲಿ ಬಿಡಸಾರೆ । ತನ್ನಾಲೋ
ಮುದ್ದನ ತಂಗೀಯಾ ಮೊದವೀಗೆ । ಗ್ । ಂದ್ ನಾರ್ಣದೆವ್ನಾ
ಚಪ್ಪರದಾ ಕೆಲಸಾ ಮುಗೀದಾವೆ.
ಚಪ್ಪರ್ದಾ ಕೆಲ್ಸಾ ಮುಗ್ವದ್ನು ನಾರ್ಣದೆವ್ನಮನಿಗೆ
ನಾರಿಯೋರು ಬಂದೇ ನೆರದಾರೆ !
ನಾರಿಯೋರು ಬಂದೆ ನೆರದಾರೆ ನಾರ್ಣದೆವ್ನ ಮನಿಯಾ

ಮೂಡಣಸಗರವಾ ತೊಳದಾರೆ । ನಾರ್ಣದೆವ್ನಮನಿಯಾ
ಮೂಡಣ ಸಗರವಾ ಬರದಾರೆ
ಮೂಡಣ ಸಗರವಾ ಬರ್ವದ್ನು ನಾರ್ಣದೆವ್ನ ಮನಿಗೇ
ಕುಂಬಾರಾ ಬಂದೇ ನೆರದಾನೆ
ಕುಂಬು ಕುಂಬು ಗೆಯ್ದೆ ? ಕುಂಬಗ ಮುಚ್ಚಳ ಗೆಯ್ದೇ
ಆರತೀಯೆಯ್ದಾ ಗೆಯೀದಾನೆ । ಕುಂಬಾರಾ

ತಂದಿರಸಾನೆ ದೊಡ್ಡಾ ಜಗೋಲ್ಯಲ್ಲೇ[೮೨] । ನಾರ್ಣದೆವ್ನ ಮನಿಗೆ
ಬಿನ್ನಾಣಿ ಬಂದೇ ನೆರದಾನೆ.
ಬಂದಾ ಬಿನ್ನಾಣಿಯಾ ಚಂದದಿಂದುಪಚರಿಸೇ

೮೨. ಜಗಲಿಯಲ್ಲಿ

ಹೊನ್ನಾ ಮಣೆಯೊಂದಾ ಮಡಗಾನೆ
ಹೊನ್ನಾ ಮಣೆಯೊಂದಾ ಕುಳುವರ್ಕ್‌ಕೊಟ್ ಬಿನ್ನಾಣಿಗೆ

ರನ್ನದೊಂದೀಳ್ಯಾ ಮೆಲಕೊಟ್ಟೇ
ರನ್ನದೊಂದೀಳ್ಯಾ ಮೆಲಕೊಡ್ವದ್ನು ನಾರ್ಣದೆವ್ನ ಮನಿಗೆ
ಆಚಾರೀ ಬಂದೇ ನೆರದಾನೆ ।
ಆಚಾರಿ ಬಂದೆ ನೆರದಾನೆ ನಾರ್ಣದೆವ್ನಮನಿಯಾ

ಬಾಗ್ಲ ತೊರಣವಾ ಗೆಯೀದಾನೆ
ಬಾಗ್ಲ ತೊರಣವಾ ಗೆಯ್ವದ್ನು ನಾರ್ಣದೆವ್ನ ಮನಿಗೇ
ಆಚಾರೀ ಬಂದೇ ನೆರದಾನೆ । ನಾರ್ಣದೆವ್ನ ಮನಿಯೂ
ಬಾಗ್ಲ ತೊರಣವಾ ಗೆಯೀದಾನೆ
ಬಾಗ್ಲ ತೊರಣವಾ ಗೆಯ್ವದ್ನು ನಾರ್ಣದೆವ್ನಮನಿಗೇ
ಅಸಗನು ಬಂದೇ ನೆರದಾನೆ ।

ಅಸಗಾನು ಬಂದೇ ನೆರದಾನೆ ನಾರ್ಣದೆವ್ನಮನಿಯಾ
ಮುತ್ತನ ನೆಲಗಟ್ಟಾ ಗಯೀದಾನೆ.
ಮುತ್ತನ ನೆಲಗಟ್ಟಾ ಗೆಯ್ವದ್ನು ನಾರ್ಣದೆವಾ
ರಾಜಂಗ್ಳ ಮೆಟ್ಟಾ ಇಳೀದಾನೆ । ನಾರ್ಣದೆವಾ
ಬಾಳೀಯಾ ಬನವಾ ಇಳೀದಾನೆ ।
ಬಾಳಿ ಬನವಾ ಇಳೀದಾನೆ । ನಾರ್ಣದೆವಾ

ಕಂಚೀಯಾ ಬನವಾ ಇಳೀದಾನೆ । ನಾರ್ಣದೆವಾ
ಇಳ್ಳೀಯಾ ಬನವಾ ಇಳೀದಾನೆ । ನಾರ್ಣದೆವಾ
ಮಾಯೀನಾ ಬನಕೇ ನೆಡದಾನೆ । ನಾರ್ಣದೆವಾ
ಸೂಬದ್ರಿ ಅರ್ಜಿನ್ನಾ ಕರ್ಕಂಡ ಬರೋವಾನೇ ।
ತನ್ನಾ ಅರ್ಮನಗೇ ಬರೋವಾನೆ । ನಾರ್ಣದೆವಾ
ರಾಜಂಗ್ಳಲ್ ತಂದೇ ಕುಳಸಾನೆ । ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ಅಕ್ಸತಿ ಬಟ್ಟಲವಾ ತಡದಾನೆ । ನಾರ್ಣದೆವಾ
ಹೊನ್ನಾ ಮಣೆಯೊಂದಾ ತಡದಾನೆ ।
ಹೊನ್ನಾಮಣಿಯೊಂದ ತಡದಾನೆ ನಾರ್ಣದೆವಾ

ಎಣ್ಣೀಯಾ ಗಿಂಡೀ ಬಲಗಯ್ಲಿ । ತಡಕಂಡೀ
ಮಾಳಗ್ಗಿಂದೆರಗೇ ಬರೋವಾನೆ
ಹೊನ್ನಾ ಮಣೆಯೊಂದಾ ಮಡಗಾನೆ ನಾರ್ಣದೆವಾ

ಮಣೆಯಾ ಮೆನೋಗೇ ಕುಳಿತಾನೆ
ಮಣೆಯಾ ಮೆನೋಗೇ ಕುಳವದ್ನು ನಾರ್ಣದೆವಾ

ಬಾವಾಗಕ್ಸತವಾ[೮೩] ಇಡೋವಾನೆ । ನಾರ್ಣದೆವಾ
ಬಾವಾಗೇ ಚಿಗರಾ[೮೪] ಉಗೋರಾಡೇ[೮೫]
ಬಾವಾಗೇ ಚಿಗರಾ ಉಗುರ್ವದ್ನು ಅಗರೀತು ಚಿಗರೀತು
ಎಳನಾಗಾನೆಡಿಯಾ ಇಳಗೀತೇ । ಅರ್ಜುನ್ನಾ
ಚಿಗ್ರೂನೂರ್ ವರ್ಸೇ ತಿರವಾಲಿ.

ಬಾವಗೆ ಚಿಗುರಾಡುತ್ನು ಬಿನ್ನಾಣಿ
ತಾಮುಂದೆ ಬಂದೇ ಕುಳತಾನೆ । ಬಿನ್ನಾಣಿ
ಅರ್ಜುನ್ನಾ ಸಿರ್ಪನ್ನೀ ಗೆಯೀದಾನೆ
ಗುಬ್ಬಿ ಗುಬ್ಬಿ ಚಂದಾ ಗುಬ್ಬೀಯಾ ಮರ್ಚೆಂದಾ
ಗುಬ್ಬೀ ನೀರುಂಬಾ ಕೆರೆಚಂದಾ । ಅರ್ಜುಣ್ಣಾ

ಪನ್ನೀ ಮಾಡಿದ್ರೇ ಮೊಕಚೆಂದಾ । ಅರ್ಜುಣ್ಣಾ
ಪನ್ನೀಯಾ ಕೆಲಸಾ ಮುಗೀದಾವೇ
ಪನ್ನೀಯಾ ಕೆಲ್ಸಾ ಮುಗ್ವುದ್ನು ಅರಜೂಣಾ
ತಾನೊಂದು ಗೊಟೆ ನಿಲೋವಾನೇ
ತಾನೊಂದೂ ಗೊಟೆ ನಿಲ್ವದ್ನು ನಾರ್ಣದೆವಾ
ಸೂಬದ್ರಿ ಕರ್ಕಂಡೇ ಬರೋವಾನೇ । ನಾರ್ಣದೆವಾ
ತಂದೀ ಮಣಿ ಮೆನೆ ಕುಳೋಸಾನೆ

ತಂದೀ ಮಣಿ ಮೆನೆ ಕುಳುವದ್ನು ನಾರ್ಣದೆವಾ
ತಂಗೀಗೆ ಸೆಸೀ ಇಡೋವಾನೇ । ನಾರ್ಣದೆವಾ
ತಂಗೀಗೆ ಚಿಗರಾ ಉಗೋರಾಡೇ
ತಂಗೀಗೆ ಚಿಗ್ರಾ ಉಗುರಾಡುತ್ನು ಬಿನ್ನಾಣಿ
ತಾ ಮುಂದೇ ಬಂದೇ ಕುಳೋತಾನೆ
ತಾ ಮುಂದೇ ಬಂದೆ ಕುಳುವದ್ನು ಬಿನ್ನಾಣಿ
ಸೂಬದ್ರಿ ಸಿರ್ಪನ್ನಿ ಗೆಯೀದಾನೇ
ಸೂಬದ್ರಿ ಸಿರ್ಪನ್ನಿ ಗೆಯ್ವುದ್ನು ಸೂಬದ್ರಿ
ಪನ್ನೀಯಾ ಕೆಲಸಾ ಮುಗೀದಾವೇ

ಗುಬ್ಬೀ ಗುಬ್ಬೀ ಚಂದಾ ಗುಬ್ಬಿಯಾ ಮರಿಚಂದಾ
ಗುಬ್ಬೀ ನೀರುಂಬಾ ಕೆರೆ ಚೆಂದಾ । ಸೂಬದ್ರೀಯಾ

---

೮೩. ಅಕ್ಷತೆಯನ್ನು   ೮೪. ಸುಗಂಧದ ಎಣ್ಣೆ   ೮೫. ತಿಕ್ಕಿ, ಉದ್ದಿ

ಹುಬ್ಬಾ ತಿದ್ದದ್ರೇ ಮೊಕ ಚೆಂದಾ । ಸೂಬದ್ರೀಯಾ
ಪನ್ನೀಯಾ ಕೆಲಸಾ ಮುಗೀದಾವೇ
ಪನ್ನೀಯಾ ಕೆಲ್ಸಾ ಮುಗ್ವದ್ನು ಸೂಬದ್ರಿ
ತಾನೊಂದು ಗೊಟೆ ನೀಲೊವಾಳೆ
ತಾನೊಂದು ಗೊಟೆ ನಿಲ್ವದ್ನು ನಾರ್ಣದೆವಾ
ಮಂಟಪೂಡ್ವದಕೇ ನೆಡದಾನೆ
ಮಂಟಪೂಡ್ವದಕೆ ನೆಂಟರಿಗೆ ಬರುವೇಳಿ

ಎಂಟೂ ಚಪ್ಕದಲೇ ಮನೀಮಾಡೇ । ಮಂಟಪೂಡೇ
ನೆಡ್ಗೇ ತಿದ್ದಾರೆ ಕಳಸವೇ
ಅಯ್ದಾ ಮಂದ್ ಬಾವಾದೀರು ಅಯ್ದುಬಂದಿಯನಿಟ್ಟೇ
ಜೋಡಲೆ ಕೊಡಪನವಾ ತಡದಾರೆ । ಬಾವಾದೀರು
ಮೂಡನ ಕೇರಿಗೆ ನೆಡದಾರೆ ಬಾವಾದೀರು
ಹೆಗ್ಗರಿ ತಡಿಯಲ್ಲೇ ನಿಲೋವಾರೇ
ಒಂದು ಸಿಂಗರಸಿ[೮೬] ಒಂದೂ ಈಳ್ಯಾಪಟ್ಟೇ
ಒಪ್ಪಿತೆ ಗಂಗಾತಾಯ್ ನಿನಚಾಜಾ । ನಮಗೇ
ತುಂಬಿಕೊಡೇ ಚಂಬೂ[೮೭] ಕೊಡಪಾನ ।
ತುಂಬಿಕೊಡೆ ಚಂಬು ಕೊಡಪಾನ ನಾವಿನ್ನು

ತುಂಬೂವೊ ಕೇಳೇ ಕಲಸಕೆ । ಮಿಕ್ಕಿದ ನೀರಾ
ಹಾಲೀಸಸಿಗ್ಹೊಯ್ದೇ ಸಲಗೂವೋ । ಅಂದ್ ನಾರ್ಣದೆಯಾ
ಮಾಳಗೀ ಒಳಗೆ ನೆಡದಾನೆ । ನಾರ್ಣದೆವಾ
ಅಕ್ಸತ್ ಬಟ್ಟಲವಾ ತಡದಾನೆ । ನಾರ್ಣದೆವಾ
ಎಣ್ಣೀಯಾ ಗಿಂಡೀ ತಡದಾನೆ ।
ಸೂಬದ್ರಿ ಅರ್ಜಿಣ್ಣ ಕರ್ಕಂಡೇ ಬರೋವಾನೇ
ಸೂಬದ್ರಿ ಅರ್ಜಿಣ್ಣ ಕರ್ಕಂಡೇ ಬರ್ವದ್ನು ಅರ್ಜಿಣ್ಣಾ

ಹೊನ್ನಾಮಣಿ ಮೆನೇ ಕುಳತಾನೇ
ಹೊನ್ನಾ ಮಣಿ ಮೆನೇ ಕುಳುವದ್ನ ನಾರ್ಣದೆವಾ
ಬಾವಾಗಕ್ಸತವಾ ಇಡೋವಾನೇ । ನಾರ್ಣದೆವಾ
ಬಾವಾಗೇ ಚಿಗರಾ ಉಗೋರಾಡೇ
ತಾಳೀ ಬಂದೀಯಾ ಬಾವಾ ತಾ ತಡಕಂಡೇ
ಸುತ್ತಣ ದೆವ್ರೀಗೂ ಸರಣಂದೇ । ಅರ್ಜಿಣ್ಣ
ಬಾವ್‌ಬಂದೀ ಕಳಸ್ ನೀರಿಗ್ ಅರಗಾನೆ

೮೬. ಸಿಂಗಾರದ ಎಸಳು ೮೭. ತಂಬಿಗೆ

ಆಕಾಸ್ದಣನೀರು ಬೂಮಿಯಾ ತಳನೀರು
ಆಕೆ ಬಾವನಾ ಕಳಸ್ ನೀರು ।
ಆಕೆ ಭಾವನಾ ಕಳಸನೀರನೆ ಮಿಂದೆ
ಗೊಪಳರ ಸಿಸುವೇ ಬಳದಾನೆ । ನಾರಿಯೋರು
ಸೂಬದ್ರಿ ಕರ್ಕಂಡೇ ಬರೋವಾರೇ । ನಾರಿಯೋರು
ತಂದೀ ಮಣಿಮೆನೇ ಕುಳಸಾರೆ
ತಂದೀ ಮಣಿಮೆನೇ ಕುಳಸ್ವದ್ನು ನಾರ್ಣದೆವಾ

ತಂಗೀಗೇ ಸೆಸೀ ಇಡೋವಾನೇ ನಾರ್ಣದೆವಾ
ತಂಗೀಗೇ ಚಿಗರಾ ಉಗೋರಾಡೇ
ತಾಳೀ ಬಂದೀಯಾ ಅಣ್ಣಾ ತಾ ತಡಕಂಡೇ
ಸುತ್ತಣ ದೆವ್ರೀಗೇ ಸರಣಂದೇ । ಸೂಬದ್ರೀಯಾ
ಅಣ್‌ಬಂದೀ ಕಳಸ್ ನೀರಿಗ್ ಅರುಗಾನೆ

ಆಕಾಸ್ದಣನೀರು ಬೂಮೀಯಾ ತಳನೀರು
ಆಕೇ ಅಣ್ಣನಾ ಕಳಸ್ ನೀರೆ । ರ । ನೇಮಿಂದೇ
ಗೊಪಳರ ಸಿಸುವೇ ಬಳದಾನೆ । ನಾರಿಯೋರು
ಕಾಮನ ಗುಂಡಿಯ ನಿರಾಬೀಮನ ಗುಂಡಿಗೆ ತಿರಗೇ
ಅರ್ಜುನ ಗುಂಡ್ಯಲ್ಲೇ ಹದ ಮಾಡೇ । ನಾರ್ಣದೆವಾ
ಮುತ್ತೀನಾಯರದಾ ಮಣಿತೆಂಗಾ । ತಡಕಂಡೇ
ಅರ್ಜಿಣ್ಣಾ ಕೇಸಿಗೆ ನೀರಾ ಎರದಾನೇ

ಬಳ್ದ್ ಮಿಂದ್ ಅರ್ಜಿಣ್ಗೆ ಬಂದವೇ ಜವಳಿ ದಿಂಡು
ತೆಂಕನರ್ಜಿಣ್ರಾ ಜವಳೀ ಯೇ
ತೆಂಕನರ್ಜಿಣ್ರಾ ಜವಳೀಯ ದಿಂಡಿನಲ್ಲೇ
ಪಾದಾ ಚಳಿಉದ್ದೇ ಮಡಗಾರೆ । ನೆ । ನಾರ್ಣದೆವಾ
ಪಟ್ಟೀ ಜೋತುರವಾ ಉಡಸಾನೆ । ನಾರ್ಣದೆವಾ
ಮುತ್ತಿನ ಮುಂಡಸ್ನಾ ತಲಸುತ್ತೇ ।
ಮುತ್ತಿನ ಮುಂಡಾಸ್ನಾ ತಲಸುತ್ತೇ ನಾರ್ಣದೆವಾ

ಪಟ್ಟೀ ಜೋತುರವಾ ಹೊಗಲೀಗೆ । ಹಾಯೀಕಂಡೇ
ಹಾಲೂಗಾಯೊಂದಾ[೮೮] ಕೊಡಸಾನೆ ನಾರ್ಣದೆವಾ
ಮುತ್ತನ ಬಾಸಿಂಗಾ ಮುಡಸಾನೆ
ಮುತ್ತನ ಬಾಸಿಂಗಾ ಮುಡಸ್ವದ್ನು ನಾರೀಯೋರು
ಸೂಬದ್ರಿ ಕರ್ಕಂಡೇ[೮೯] ನೆಡದಾರೆ । ನಾರೀಯೋರು
ಸೂಬದ್ರೀಗ್ ನೀರಾ ಎರದಾರೆ

೮೮. ತೆಂಗಿನಕಾಯಿ   ೮೯. ಕರೆದುಕೊಂಡು

ಬಳ್ಡ್‌ಮಿಂದ್ ಸೂಬದ್ರೀಗೆ ಬಂದವೇ ಜಫೀ ದಿಂಡು
ತೆಂಕಣರಜಿಣರಾ ಜವಳೀ (ಯೇ) ಯ । ದಿಂಡೀನಲ್ಲೇ
ಪಾದಾ ಚಳಿ ಉದ್ದೇ ಮಡಗಾರೆ । ನಾರೀಯೋರು
ಪಟ್ಟೇ ನೆರಿಹೊಯ್ದೇ ಉಡಸಾರೆ । ನಾರೀಯೋರು
ಸೂಬದ್ರಿಗೆ ಚಿನ್ನಾ ಇಡೋವಾರೆ । ನಾರೀಯೋರು
ಸೂಬದ್ರಿ ಸೆರ್ಮುಡಿ ಸೆಳ್ದೇ ಕಟ್ಟೆ । ನಾರೀಯೋರು
ಎಳಿಯಾ ಸಿಂಗರವಾ ಮುಡೀಸಾರೆ । ನಾರೀಯೋರು
ಮುತ್ತನ ತೊಂಡಲವಾ ಮುಡೀಸಾರೆ । ನಾರೀಯೋರು

ರನ್ನದೊಂದೀಳ್ಯಾ ಕೊಡೋವಾರೇ
ರನ್ನಾದೊಂಡೀಳ್ಯಾ ಕೊಡ್ವದ್ನು ಸೂಬದ್ರಿ ಅರ್ಜೀಣಾ
ಬಂದೀ ಬಾಗಲ್ಲೇ ನಿಲೋವಾರೆ
ಬಂದೀ ಬಾಗಲ್ಲೇ ನಿಲ್ವದ್ನು ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ
ಆರಂಕಣದರಮನೆ ಮೂರಂಕಣ ಮುಚ್ಚೀಲ
ಹನ್ನೆಯ್ಡಂಕಣದಾ ಅರಮನೆ । ಲಿಂದೇ
ಬಾವಾಗಾರತಿಯಾ ತರುವಾನೇ ನಾರ್ಣದೆವಾ
ಅರ್ಜುನಗೊಂದಾರತಿಯಾ ಬೆಳುಗಾನೆ

ಅರ್ಜುನಗೊಂದಾರತಿಯಾ ಬೆಳಗ್ವದ್ನು ಸೂಬದ್ರಿ
ಆರುತಿಗೊಮ್ಮೆ ಸರುಣಂದೇ । ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ಎತ್ತೀದಾರುತಿಯಾ ಮಡೂಗಾನೆ । ನಾರ್ಣದೆವಾ
ಮಾಳಗ್ಗಿಂದೆರಗೆ ಬರೋವಾನೆ । ನಾರ್ಣದೆವಾ
ದೆವರ ಪೂಜ್ಯಕೆ ನೆಡದಾನೆ
ದೆವರ ಪೂಜ್ಯಕೆ ನೆಡ್ವದ್ನು ಸೊಬದ್ರಿಅರ್ಜೂಣಾ
ದೆವರೊಡನೋಗೇ ನಿಲೋವಾರೆ

ದೆವರೊಡನೋಗೇ ನಿಲ್ವದ್ನು ನಾರ್ಣದೆವಾ
ತೇದೀಗಂದಾವಾ ಇಡೋವಾನೇ । ನಾರ್ಣದೆವಾ
ದೀಪಾದೂಪೆಲ್ಲಾ ಕಸೀದಾನೆ । ನಾರ್ಣದೆವಾ
ತೆಂಗೀನೆಳಗಾಯಾ ಒಡದಾನೆ । ನಾರ್ಣದೆವಾ
ಕಪ್ಪುರದಾರತೀಯಾ ಬೆಳೂಗಾನೆ । ನಾರ್ಣದೆವಾ
ತಂಗೀಗೆ ಬಾವ್ಗೊಂದು ಪರ್ಸದವ್ನ[೯೦] ಕೊಡೋವಾನೆ ।

೯೦. ಪ್ರಸಾದವನ್ನು

ಸೂಬದ್ರಿ ಅರ್ಜಿಣ್ಣ ತಂದೀ ಮಂಟಪಲೇ ಕುಳಿಸಾನೆ. । ನಾರ್ಣದೇವಾ
ಮಾಳೂಗೀ ಒಳಗೆ ನೆಡದಾನೆ

ಚಲಕೇ ಚೊಳ್ಜೀಕದ್ರು ಕುಲಕೇ ತುಂಬೀಹೂಂಗು
ಕೆಂದೀಯಾ ಕರದೇ ನೊರಿಹಾಲು । ಲಾ । ಗಿಂಡಿಯಾತುಂಬೀ
ತೊಳಚೀಯಾ ಮೆನೇ ಮಡೂಗಾನೆ । ಹೆಣ್ಣೀನಣ್ಣಾ.
ಹೊತ್ತಾನಿಯೇ ಹೊನ್ನಾ ಮುಡಿಮೆನೆ । ಹೆಣ್ಣಿನಣ್ಣಾ
ಮಂಟದಲ್ಲೇ ನಿಲೋವಾನೇ
ಎಡದಾ ತೊಡಿಮೆನೆ ಬಾವ ಬಾಲದ ತೊಡಿಮೆನೆ ತಂಗಿ
ಸಿರಿಗಂಗೆ ಗವರೀ ತೊಡೀಮೆನೇ. । ಕೂರಸಿಕಂಡಿ
ಎರದಾನೇ ಸಾಸನದಾ ಕಯ್ದಾರಿ

ಕಾವಣದಲ್ಲೇ[೯೧] ಹತ್ತೂ ತರದಾ ಕಂಬು
ಹತ್ತಕೆ ಹತ್ತು ಗುರೂಗೋಳು । ಬಟ್ಟಕ್ಕೋಳು.
ಹೊತ್ತಾ ನೋಡ್ ದಾರೀ ಎರದಾರೆ.
ದಾರೀ ಎರದಣ್ಣಾ ಮಾಳಗ್ಗೆ ಹೋಗಾನೆ
ತಂಗಿಗೆ ಬಳುವರಿಯಾ ಕೊಡೋವಾನೆ.
ಮಾಳೂಗೀ ಒಳಗೆ ಹತ್ತೂ ತರದಾಸಿಕ್ಕಾ[೯೨]
ಹತ್ತಕ್ಕೆ ಹತ್ತೂ ಕಿರೂನಳ್ಳಿ[೯೩] । ಕಂಚೀನುಟ್ಟು
ತಂಗಿದೆ ಬಳುವರಿಯಾ ಕೊಡೋವಾನೇ

ಮಾಳೂಗೀ ಒಳಗೆ ಆರುತರದಾಸಿಕ್ಕಾ
ಆರಕ್ಕೆ ಆರು ಕಿರೂನಳ್ಳಿ । ಕಂಚೀನುಟ್ಟು
ತಂಗಿಗೆ ಬಳುವರಿಯಾ ಕೊಡೋವಾನೇ.
ಕೊಟ್ಟೂಗೀ ಒಳಗೀನಾ ಗಟ್ಟು ಮಣಕೆಮ್ಮೀಯಾ
ಬಾಲಕೆ ಸುವರ್ಣಾ ಗಳಸೀದಾ । ಎಮ್ಮೀಯಾ
ತಂಗೀಗೆ ಬಳುವರಿಯಾ ಕೊಡೋವಾನೇ
ಕೊಂಬು ಸಂದಕದಿಂದೆ ಸರ್ವವಾದೀದಿಂದೆ[೯೪]

ಸೂಬದ್ರಿ ದಿಬ್ಬಣವೆ ಸವನದೆ
ಕೊಂಬು ಸಂದಕದಿಂದೆ ಸರ್ವವಾದಿ । ದಿಂದೆ
ಅರಜಿಣ್ಣ ದಿಬ್ಬಣವೆ ಸವನದೆ.
ಅರಜಿಣ್ಣ ದಿಬ್ಬಣವೆ ಸವನೀ ಸುಂಗಾರಾಗಿ
ಒಟ್ಟಾಗೊಂದಾನೀ ನೆಗದತ್ತೇ । ಸೂಬದ್ರಿ ಅರಜೀಣ.

---

೯೧. ಚಪ್ಪರದಲ್ಲಿ ೯ ಪಾತ್ರೆ ತೂಗಿಡುವ ನೆಲವು ೯೨. ಕಿರುಮಡಿಕೆ ೯೪. ವಾದ್ಯದಿಂದ

ತಮ್ಮ ಅರಮನಗೇ ನೆಡದಾರೆ । ಅಲ್ಲಿನ್ನು
ಕವ್ಲರ ದಿಬ್ಬಣವೇ ಎದೂರಾಗೇ ।
ಕವ್ಲರ ದಿಬ್ಬಣವೇ ಎದುರಾಗುತ್ನು ಕವ್ಲರು
ಆಗೊಂದು ಮಾತಾ ನುಡೀದಾರೆ
ಆಗೊಂದು ಮಾತಾ ಏನಂದಿ ನುಡಿದಾರೆ

ಯಾವಲ್ಲೇ ಹೋಗಿದ್ಯೋ ಯಾವೂಂಗಾ ಮುಡದಿದ್ಯೋ
ಇದು ಎಲ್ಲೇ ತಂದ್ಯೋ ಎಳಗೂಸೇ
ಗೊವೀಗೆ ಹೋಗಿದ್ದೆ ಗೊವೀ ತೀರುತ ಮಿಂದೀದೆ
ಗೊವೀಯ ದಂಡಿ ಹದಿನಾರು । ಮುಡಿಯಲು ಕೊಟ್ರು
ಬೆಡಂದ್ರೂ ಕೊಟ್ರೂ ಎಳಗೂಸಾ
ಗುತ್ತೀಗೆ ಹೋಗಿದ್ದೆ ಗುತ್ತೀ ತೀರುತ ಮಿಂದೀದೆ

ಗುತ್ತೀಯ ದಂಡೀ ಹದಿನಾರು । ಮುಡಿಯಲು ಕೊಟ್ರು
ಬೆಡಂದ್ರೂ ಕೊಟ್ರು ಎಳಗೂಸೇ । ಅಂದೇಳಿ
ಆನೀಗಿಂದ್ ಕೆಳಗೆ ಇಳೀದಾನೆ
ಆನೀಗಿಂದ್ ಕೆಳಗೆ ಇಳ್ವದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ

ಮದುಮಕ್ಕಳಂಬೋರು ಮೂರು ದಿನ್ಕೆ ದೆವರು
ದೆವರಂಬೋರಾ ಕೊಲುಬಾರಾ । ಅಂದೇಳಿ
ಅರ್ಜುನಗೆದುರಾಗಿ ನಿಲ್ಲೋವಾಳೇ
ಅರ್ಜುನಗೆದುರಾಗಿ ನಿಲ್ವದ್ನು ಅರ್ಜುನಾ
ಕವ್ಲಿಂದ್ರೂ ಮಾದೇವೀನೂ ಬಿಡೋವಾನೇ । ಅರ್ಜುನಾ
ಮತ್ತೂ ಕವ್ಲರು ಪಾಪಾ ಮರೆಲಿಲ್ವೋ । ಅಂದೇಳಿ

ಬೋರೀನೇ ಆನೀ ನೆಗದಾರೆ
ಬೋರೀನೇ ಆನೀ ನೆಗದತ್ತೇ ಆರ್ಜೀಣಾ
ತಮ್ಮ ಅರಮನಗೇ ನೆಡುದರೇ । ಅರಜೀಣಾ ಸೂಬದ್ರಿ
ಬೋರೀನೇ ಆನೀ ಇಳದಾರೇ । ಅರಜೀಣಾ ಸೂಬದ್ರಿ
ಹೋಗೀ ಬಾಗಲ್ಲೇ ನಿಲ್ಲೋವಾರೇ । ನಾರಿಯೋರು
ತಡ್ಡಾರೆ ಚಂಬಗಲೇ ಉದಕವೇ
ನಾರಿಯೋರ್ ಕೊಟ್ಟುದಕಾ ತಟ್ಟನೇ ತಡದಾನೇ

ಕಾಲುಸಿರಿಮೊಕವಾ ತೊಳದಾನೆ । ಅರ್ಜೀಣಾ ಸೂಬದ್ರಿ
ತೂಗುಮಂಚದಲೇ ಕುಳತಾರೆ ।

ತೂಗು ಮಂಚದಲೆ ಕುಳುವದ್ನು ನಾರಿಯೋರು
ಮುತ್ನ ಬಾಸಿಂಗಾ ಸೆಡೋಲೀಸೇ । ನಾರೀಯೋರು
ಸೂಬದ್ರೀ ಗೊಂದಾಸಾ[೯೫] ಬಿಡೋಸಾರೆ
ಸೂಬದ್ರೀ ಗೊಂದಾಸಾ ಬಿಡಸ್ವದ್ನು ಸೂಬದ್ರಿ
ಹಾಸನ ಮೆನೋಗೇ ಕುಳತಾಳೆ
ಹಾಸನ ಮೆನೋಗೇ ಕುಳ್ವದ್ನು ನಾರಿಯೋರು

ತಡ್ದಾರೆ ಚಂಬಗಲೇ ಉದಕವೇ
ನಾರ್ಯೋರ್ ಕೊಟ್ಟುದಕಾ ತಟ್ಟಾನೆ ತಡ್ದಾನೆ
ಕಾಲೂಸಿರಿಮೊಕವಾ ತೊಳದಾರೇ ಅರ್ಜೂಣ ಸೂಬದ್ರಿ
ತೂಗುಮಂಚದಲೇ ಕುಳತಾರೇ ।

ತೂಗು ಮಂಚದಲೇ ಕುಳುವದ್ನು ನಾರಿಯೋರು
ಮುತ್ತನ ಬಾಸಿಂಗಾ ಸೆಡೂಲೀಸೇ । ನಾರಿಯೋರು
ಸೂಬದ್ರಿ ಗೊಂದಾಸಾ ಬಿಡೂಸಾರೆ
ಸೂಬದ್ರಿ ಗೊಂದಾಸಾ ಬಿಡುಸ್ವದ್ನು ಸೂಬದ್ರಿ
ಹಾಸನ ಮೆನೋಗೇ ಕುಳತಾಳೆ
ಹಾಸನ ಮೆನೋಗೇ ಕುಲವದ್ನು ನಾರಿಯೋರು
ಮಾಳೂಗೀ ಒಳಗೆ ನೆಡದಾರೇ

ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡೇ
ಮಾಳಗ್ಗಿಂದೆರಗೇ ಬರೂವಾರೇ । ನಾರೀಯೋರು
ಸೂಬದ್ರಿಗೊಂದೀಳ್ಯಾ ಕೊಡೋವಾರೇ । ನಾರೀಯೋರು
ತಾವೊಂದೀಳ್ಯಾ ಮೆಲೋವಾರೇ । ನಾರೀಯೋರು
ಅರ್ಜೂನಗೊಂದೀಳ್ಯಾ ಕೊಡೋವಾರೇ

ಕೊಟ್ಟ ಈಳ್ಯವ ತಟ್ಟಾನೆ ತಡದಾನೆ
ಆಯಾಕೊಂದೀಳ್ಯ ಮೆಲೋವಾನೇ
ಎಲಿಯನೇ ತಿಂದಾನೇ ರಜವಲ್ಲೇ ಉಗಳಾನೆ
ಆಗೊಂದು ಮಾತಾ ನುಡೀದಾನೆ

ಹಸೆಹಾಕೆ ದೇವ್ಗನ್ನೆ[೯೬] ಕಸತೆಗ್ಯೆ ಇಂದ್ರ್ಗನ್ನೆ
ದೆವ್ರ್ ತಂಗೀಗೂ ತನಗೂ ಸೆಳಮಂಚ”

---

೯೫. ಒಂದು ಹಾಸಿಗೆಯನ್ನು ೯೬. ದೇವಕನ್ನೆ

"ನಮ್ಮ ಹೋಲುವರು ಬೂಮೀಲೊಕ್ದ್‌ಲಿಲ್ಲಾ
ನಮಗಿಂದೂ ಚೆಲುವೆ ದೇವರ್ ತಂಗೀ । ಅಕ್ಕಾ ಕೇಳೆ
ನಾವೊಂದ್ ಹಾದಗಲೇ ಇರೋವಾನೆ

ನಮ್ಮಾ ಒಲುವರು[೯೭] ಬೂಮೀ ತೂಕ್ದ್‌ಲ್ಲಿಲ್ಲಾ
ನಮಗಿಂದು ಚಲುವೆ ದೆವರ್‌ತಂಗೀ । ತಂಗೀಕೇಳೇ
ನಾವೊಂದ್ ಹಾದಗಲೇ[೯೮] ಇರೋವಾನೆ । ಅಂದೇಳೀ
ಅವ್ರೊಂದ್ ಹಾದಗಲೇ ಇರೋವಾರೆ । ಸೂಬದ್ರಿಅರ್ಜೀಣಾ
ತಾವೂ ಚಂದದಲೇ ಇರೋವಾರೇ

ಈ ಹಾಡ್ ಹೇಳ್ದೋರ್ಗೆ ಸೆರ್ದನೀ[೯೯] ತಂದೋರ್ಗೆ
ಎತ್ತೂಡಲೆ[೧೦೦] ಬತ್ತಾ ಬೆಳೀಯಲೆ । ಈ ಹಾಡಾ
ಆಲೀಸೀ ಕೇಳ್ದೋರು ಕಲೀಯಾಲೆ

ಈ ಹಾಡ್ ಹೇಳ್ದೋರ್ಗೆ ಆಲೀಸೀ ಕೇಳ್ದೋರ್ಗೆ
ದನ ಕರೆಯಲೆ ದಾನ್ಯಾ ಬೆಳೀಯಲೆ । ಈ ಹಾಡಾ
ಚಿತ್ತಯ್ಸೀ ಕೇಳ್ದೋರು ಕಲೀಯಾಲೆ

ಈ ಹಾಡ್ ಹೇಳ್ದೋರ್ಗೆ ಸೆರ್ದನೀ ಕೊಟ್ಟೋರ್ಗೆ
ಹಾದಿಗೊಕನದಾ ಸಿವಗಂಗೆ । ತೀರುತವಾ
ಹೋಗೀ ಮಿಂದಟ್ಟೋ ಪಲಉಂಟೋ

ಗಿಂಡೀ ಗಿಂಡೀ ತುಂಬೇ ಗಿಂಡೀಲುದ್ಕಾ ತುಂಬೇ
ಗಿಂಡೀ ಬಾಯೀಗೇ ತರಳ ತುಂಬೆ । ಬೀ । ದಂತೆ
ತುಂಬಿರಲೇ ನಮ್ಮ ಮನದಲ್ಲೇ । ಈ ಹಾಡು
ಬರತಿರಲೇ ಹಬ್ಬ ಮೊದವೀಗೆ

ಚಂಬು ಚಂಬೂ ತುಂಬೇ ಚಂಬೀಲುದಕಾ ತುಂಬೇ
ಚಂಬೀನ ಬಾಯಿಗೆ ತರಳ ತುಂಬೇ । ಬೀ । ದಂತೆ
ತುಂಬಿರಲೇ ನಮ್ಮ ಮನದಲ್ಲೇ । ಈ ಹಾಡು
ಬರತಿರಲೇ ಹಬ್ಬ ಮೊದವೀಗೆ

೯೭. ಹೋಲುವವರು ೯೮. ಬಗೆಯಲ್ಲಿ ೯೯. ಜೊತೆಗಾರ ೧೦೦. ಎತ್ತುಹೊಂಡಲಿ

ಲಕ್ಷ್ಮಣ

ಜಲದಿಯಲ್ ಹುಟ್ಟೀತೇ ಜಂಬೂದೀಪದ ಕಲ್ಲು
ತಿಂಗಳಕೆ ಮೂರೋ ಕದರವೇ । ಲಕಮಣನ
ಸುಂಗಾರದ ಕತೆಯಾ ತೊಡಗುವೊ ।
ಸುಂಗಾರದ ಕತಿಯಾ ತೊಡಗುವೊರಿಂದ್ ಇಸರರು

ಕೂತ ಮಂಚವ ಜಡದೆದ್ದೇ । ಇಸರರು
ಮಾಳೂಗಿ ಒಳಗೆ ನೆಡದಾರೆ । ಇಸರರು
ಅಟ್ಟತ್ತಿ ಪೆಟ್ಟುಗಿಯ ತೆಗದಾರೇ । ಇಸರರು
ಮೆಟ್ಟಿ ಬೀಗವ ಕರೀ–ದಾರೆ । ಇಸರರು
ಮುಚ್ಚಿಲ ತಗದಿ ಕಡ–ಗಿಟ್ಟಿ । ಇಸರರು
ಪಟ್ಟೆ ಜೋತುರವ ನೆರ ದುಟ್ಟೇ । ಇಸರರು
ಮುತ್ತಿನ ಮುಂಡಸನ ತಲ್ಗೇ ಸುತ್ತಿ । ಇಸರರು
ಪಟ್ಟೆ ಜೋತುರವ ಹೊಗಲಿಗೇ ।
ಪಟ್ಟೆ ಜೋತರವ ಹೊಗಲಿಗೆ ಹಾಯಿಕಂಡಿ

ಬಣ್ಣದೆಲವಸ್ತ್ರ ಬಲಗಯ್ಲೀ । ತಡಕಂಡಿ
ಚಿನ್ನದುಂಗಿಲವ ಬೆರಳ್‌ದುಂಬಿ । ಇಸರರು
ಪೆಟ್ಟುಗಿ ಬಾಯಲ್ಲಿ ಮಡಗರೆ । ಇಸರರು
ಮಾಳಗ್ಗಿಂದೆರಗೆ ಬರೋವಾರೆ । ಇಸರರು
ರಾಜಂಗ್ಳ ಮೆಟ್ಟಾ ಇಳದಾರೆ । ಇಸರರು
ರಾಜಬಿದಿಗಾಗೇ ನೆಡದಾರೆ । ಇಸರರು
ಕಲ್ಲದಣ್ಪಿಯಲ್ಲೇ ನಿಲೋವಾರೆ । ಇಸರರು
ಕಲ್ಲದಣ್ಪಿಯಲ್ಲಿ ನಿಲವಾರೆ ಇಸರರು

ಆಗೊಂದು ಮಾತಾ ನುಡಿದಾರೆ
ಆಲದೆಲೆ ಸಾಕ್ಷಿ ಮತ್ತೆ ಗೋಳಿ ಸಾಕ್ಷಿ
ನಿತ್ತ ಕಲ್‌ದಣ್ಪೆ ಜಲಸಾಕ್ಷಿ । ಮಾಡಿನ್ನು
ಕವ್ಲರರಮನಗೇ ನೆಡದಾರೆ । ಇಸರರು
ಹೋಗಿ ಬಾಗಲ್ಲೇ ನಿಲೋವಾರೆ

ಹೋಗಿ ಬಾಗಲ್ಲಿ ನಿಲುವದ್ನು ಕವ್ಲರು
ಚಂಬಗಲೆ ಉದಕವ ತಡದಾರೆ
ಕವ್ಲರು ಕೊಟ್ಟುದಕಾ ತಟ್ಟನೇ ತಡದಾರೆ
ಕಾಲಾ ಸಿರಿಮೊಕವಾ ತೊಳದಾರೆ । ಇಸರರು
ಮಾಳೂಗಿ ಒಳಗೆ ನೆಡದಾರೆ । ಇಸರರು
ತೂಗು ಮಂಚದ್ಲೆ ಕುಳತಾರೆ । ಇಸರರು
ತೂಗು ಮಂಚದ್ಲೆ ಕುಳುವದ್ನು ಕವ್ಲರು

ಮಾಳೂಗಿ ಒಳಗೆ ನೆಡುದಾರೆ.
ಆಯುಳ್ಳ ಬೆಳಿಎಲೆ ಸೋಯಿಸಿದ ಹಣ್ಣಡಕೆ
ಹಾಲಿನಲಿ ಬೆಂದ ತೆನೆಸುಣ್ಣ । ತಡಕಂಡಿ
ಮಾಳಗ್ಗಿಂದೆರಗೆ ಬರೋವಾರೆ । ಕವ್ಲರು
ಇಸರರನೊಡನೋಗಿ ನಿಲುವಾರು । ಕವ್ಲರು
ಇಸರರಿಗೊಂದೀಳ್ಯ ಕೊಡೊವಾರು ।
ಕವ್ಲರ್ ಕೊಟ್ಟೀಳ್ಯ ತಟ್ಟನೆ ತಡ್ದಾರೆ

ಆಯಾಕೊಂದೀಳ್ಯ ಮೆಲುವಾರು
ಎಲಿಯೊಂದ್ ತಿಂದಾರೆ ರಜವಲ್ಲೆ ಉಗಳಾರೆ
ಮಂಗಲದ ಮಾತಾ ತೊಡಗಾರೆ
"ನಮ್ಮಲ್ ಹೆಣ್ಣದೆ ನಿಮ್ಮಲ್ ಗಂಡದೆ
ಮಾಡ್ವಾನಾ ಮುದ್ದೊ ಮೊದವೀಯ । ಕವ್ಲರೇ
ನೋಡ್ವಾನಾ ಒಂದೊ ಅರ್ತ್ಯವೇ"[೧]

"ನಮ್ಮಲ್ ಗಂಡದೆ ನಿಮ್ಮಲ್ ಹೆಣ್ಣದೆ
ಮಾಡ್ವನೆ ಮುದ್ದೊ ಮೊದವೀಯ । ಇಸರರೆ
ನೋಡುವೊ ಒಂದೊ. ಅರ್ತ್ಯವೇ" । ಅಂದೇಳಿ
ಮಂಗಲದಾ ಮಾತಾ ತೊಡಗಾರೆ
ಮಂಗಲದಾ ಮಾತಾ ತೊಡಗ್ವದ್ನು ಕವ್ಲರು
ಆಗೊಂದು ಮಾತಾ ನುಡಿದಾರೆ.
ಪಂಜರದಲ್ಲಾಡು ಅರಮನೆ ಗಿಳಿಗೋಳೆ

"ಈ ಮಾತಾ ಲಕುಮಣಗೆ ಒರಿಯಾ ಬೆಡಿ[೨]
ಬಾಳಿಹಣ್ಣ ಕೊಡ್ತೆ ಬಾಯ್ತುಂಬ ಹೊನ್ನ ಕೊಡ್ತೆ
ಈ ಸುದ್ದಿ ಲಕಮಣಗೆ ಒರಿಯಾಬೆಡಿ"

೧. ಪ್ರೀತಿಯನ್ನು ೨. ಹೇಳಬೇಡಿರಿ

ಬಾಳಿಹಣ್ಣುಬೆಡ ಬಾಯ್ತುಂಬ ಹೊನ್ನು ಬೆಡ
ಈ ಸುದ್ದಿ ಲಕಮಣಗೆ ಒರಿಯಾಬೇಕು" । ಅಂದೇಳಿ
ಹಾರಿದವಂಬರಕೆ ಸರಿಯಾಗಿ । ಗಿಳಿಗೋಳು
ಲಕಮಣನ ಮನಗೇ ನೆಡದಾರೆ । ಗಿಳಿಗೋಳು
ಹೋಗಿ ಮಿಳಿಮೆನೆ ಕುಳತಾರೆ । ಗಿಳಿಗೋಳು
ಅರಗಿ ನೋಡಿದರೆ ಒಳಗೊಮ್ಮೆ । ಗಿಳಿಗೋಳು

ಲಾಗೊಂದು ಮಾತಾ ನುಡೀದಾರೆ
"ಮಾಳೂಗಿ ಒಳಗೆ ಹಾಲೋಗರುಂಬು ಲಕ್ಮಣ
ಕೇಳಿ ಬಾರೊಂದು ಹೊಸಸುದ್ದೆ । ನಿನ್ನಾಲು
ಮಾವನ ಮಗಳ್ಬೆರಗೆ ಕೊಡತಾರೆ

ಮಾಳೂಗಿ ಒಳಗೆ ಹಾಲ್ಗಾರುಂಬು ಲಕ್ಮಣ್ಣ
ಕೇಳೀ ಬಾರೊಂದು ಹೊಸಸುದ್ದೇ । ನಿನ್ನಾಲ
ಅತ್ತೀ ಮಗಳ್ಬೆರಗೆ ಕೊಡತಾರೆ.

ಅಟ್ಟಂಬ ಮಾತಾ ಕೇಳಾನೆ ಲಕ್ಮಣ್ಣ
ಉಣತಾ ಕಯ್ಯಲ್ಲೇ ಕುಡಗೆದ್ದೇ । ಲಕ್ಮಣ್ಣ
ಪನ್ನೀರಲಿ ಮೊಕವಾ ತೊಳದಾನೆ । ಲಕ್ಮಣ್ಣ
ಗಿಳಿಗಳೊಡನೋಗೆ ನಿಲೋವಾನೆ ।
ಆಗೊಂದು ಮಾತಾ ನುಡೀದಾನೆ.
"ಹುಸಿಯೇನರಗಿಳಿಯೆ ಹುಸಿಯೇನೆಬನಗಿಳಿಯೆ
ಹುಸ್ಮಾತಾ[೩] ತಂದಿ ಒರ್ದೀರಾ?"

"ಹುಸಿಯಾದ್ರ ಅಪ್ಪನಾಣಿ ಹುಸಿಯಾದ್ರ ಅವ್ವನಾಣಿ
ಹುಸಿಯಾದ್ರ ನಾವ್ ಕೊಂಬು[೪] ಎರಿಆಣಿ[೫] । ದೇವಾರೆ
ಹುಸ್ಮಾತಾ ತಂದೀ ಒರಿಯಾಲಿಲ್ಲ । ನಿನ್ನಾಲು
ಮಾವ್ನ ಮಗ್ಳೆರಗೇ ಕೊಡತಾರೆ

ಹುಸಿಯಾದ್ರ ಅಪ್ಪನಾಣಿ ಹುಸಿಯಾದ್ರ ಅವ್ವನಾಣಿ
ಹುಸಿಯಾದ್ರ ನಾವ್‌ಕೊಂಬು ಎರಿಆಣಿ । ದೆವಾರೆ
ಹುಸ್ಮಾತಾ ತಂದೀ ಒರಿಯಾಲಿಲ್ಲ । ನಿನ್ನಾಲು
ಅತ್ತೀ ಮಗ್ಳೆರಗೇ ಕೊಡತಾರೆ"

ಅಟ್ಟಂಬ ಮಾತಾ ಕೇಳಾನೆ ಲಕಮಣ್ಣ
ಮಾಳೂಗಿ ಒಳಗೆ ನೆಡದಾನೆ । ಲಕಮಣ್ಣ

---

೩. ಸುಳುಮಾತು ೪. ಕೊಳ್ಳುವ, ತಿನ್ನುವ ೫. ಆಹಾರದ ಆಣೆ

ತಟ್ಟಿಲ್ ಹಾಲಾ ಎರದಾನೆ । ಲಕಮಣ್ಣ
ಬಾಳೀ ಹಣ್ಣೇಳ ಸೊಲಿದಾನೆ । ಲಕಮಣ್ಣ
ಇಳ್ಳೀ ಹಣ್ಣೇಳ ಸೊಲದಾನೆ । ಲಕಮಣ್ಣ
ಹಾಲೊಳಗಣ್ಣ ನುಲೀದಾನೆ । ಲಕಮಣ್ಣ
ಮಾಳಗ್ಗಿಂದೆರಗೇ ಬರೋವಾನೆ । ಲಕಮಣ್ಣ

ಗಿಳಿಗೋಳೊಡನೋಗೆ ನಿಲೋವಾನೆ
ಗಿಳಿಗೋಳೊಡನೋಗೆ ನಿಲುವದ್ನು ಗಿಳಿಗೋಳು
ರಟ್ಟೀ ಅಲ್ಲಾಡೇ ಕುಡೀದಾವೆ
ಹಾಲಾ ಕುಡ್ದವೇ ಗಿಳಿಗೋಳು ಹಣ್ಣ ಮೆದ್ದವೆ ಗಿಳಿಗೋಳು
ಹಾರಿದವೇ ಅಂಬರಕೆ ಸೆರಿಯಾಗಿ । ಲಕ್ಮಣ

ಮಾಳೂಗಿ ಒಳಗೆ ನೆಡದಾನೆ । ಲಕ್ಮಣ್ಣ
ಅಟ್ಟತ್ತಿ ಪೆಟ್ಟಗಿಯ ತೆಗದಾನೆ । ಲಕ್ಮಣ್ಣ
ಮೆಟ್ಟಿ ಬೀಗವ ಕರಿದಾನೆ[೬] । ಲಕ್ಮಣ್ಣ
ಮುಚ್ಚೀಲ ತಗ್ದೀ ಕಡಗಿಟ್ಟೇ । ಲಕ್ಮಣ್ಣ
ಪಟ್ಟೆ ಜೋತರವ ನೆರದುಟ್ಟೇ । ಲಕ್ಮಣ್ಣ
ಮುತ್ತನ ಮುಂಡಸನ ತಲಗ್ಸುತ್ತೇ । ಲಕ್ಮಣ್ಣ
ಪಟ್ಟೆ ಹಚ್ಚಡವ ಹೊಗಲೀಗೆ । ಲಕ್ಮಣ್ಣ
ಚಿನ್ನ ದುಂಗಿಲವ ಬೆರಳ್ದುಂಬೇ । ಲಕ್ಮಣ್ಣ

ಬಣ್ಣದಲ ವಸ್ತ್ರ ಬಲಗಯ್ಲಿ । ತಡಕಂಡಿ
ಪೆಟ್ಟುಗಿ ಬಾಯಲ್ಲಿ ಮಡುಗಾನೆ । ಲಕ್ಮಣ
ಮಾಳಗ್ಗಿಂದೆರಗೇ ಬರುವಾನೆ । ಲಕ್ಮಣ
ಬಂದೀ ಬಾಗಲ್ಲಿ ನಿಲುವಾನೆ
ಬಂದೀ ಬಾಗಲ್ಲಿ ನಿಲುವದ್ನು ತಾಯವ್ವಿ
ಆಗೊಂದು ಮಾತಾ ನುಡಿದಾಳೆ

"ಒಳ್ಳದುಟ್ಟೆ[೭] ಮಗನೆ ಒಳ್ಳಾದುತೊಟ್ಟೆ ಮಗನೆ
ಎಲ್ಲಿಗೋ ಮಗನೆ ಸವನೀದೆ[೮]
ಅರಸುಗೋಳುಡಗಿ ಉಟ್ಟೆ ಅರ್ಸುಗೋಳ್ ತೊಡಗಿ ತೊಟ್ಟೆ
ಎಲ್ಲಿಗೋ ಮಗನೆ ಸವನೀದೆ"
"ಅರ್ಸುಗೋಳೆಲ್ಲ ನಿಚ್ಚಾಗಳು[೯] ಇಡುವಾರೆ
ನಾ ಒಂದಿನುಟ್ಟೆ ಅಸಬಾಲಿ[೧೦] । ಅವ್ವಾಕೇಳೆ

೬. ತೆಗೆದನು ೭. ಒಳ್ಳೆಯದನ್ನು ಉಟ್ಟೆ ೮. ಹೊರಟೆ ೯. ಯಾವಾಗಲು ೧೦. ಎಳೆಬಾಲ

ನನ್ನುಡಗಿ ನನಗೆ ಹೊರಿಯೇನೆ
ನನ್ನುಡಗಿ ನನಗೆ ಹೊರಿಯೆ । ನಂದೇಳ್ ಲಕ್ಮಣ

ರಾಜಂಗ್ಳ ಮೆಟ್ಟ ಇಳೀದಾನೆ । ಲಕ್ಮಣ
ರಾಜಬಿದಿಗಾಗೇ ನೆಡದಾನೆ । ಲಕ್ಮಣ
ಮಾವ್ನರಮನಗೇ ನೆಡದಾನೆ । ಲಕ್ಮಣ
ಹೋಗಿ ರಾಜಂಗ್ಳ ನೆಗದತ್ತೇ । ಲಕ್ಮಣ
ಮಾಳೂಗಿ ಒಳಗೆ ನೆಡದಾನೆ । ಲಕ್ಮಣ
ತೂಗುಮಂಚದಲೆ ಕುಳತಾನೆ । ಲಕ್ಮಣ
ಆಗೊಂದು ಮಾತಾ ನುಡೀದಾನೆ
"ಮಾಳುಗಿ ಒಳಗೆ ಹವ್ಳಾ ಸುರು ಅತ್ಯಮ್ಮ
ಮಾವಾನೋರೆತ್ತ ನೆಡದಾರ್ಯೆ"

"ನೆರ್ಮನಿಗೋಗ್ವರಲ್ಲ ಹೊರಮನಿಗೋಗ್ವರಲ್ಲ
ಅಂಗ್ಳದ ಸುತ್ತೇ ಇರೋವಾರೋ । ಲಕ್ಮಣ್ಣ
ಇನ್ನೊಂದರಗಳಗ್ಲೆ ಬರೂವಾರೋ"
"ಮೆತ್ತೀನ ಒಳಗೆ ಮುತ್ತಾ ಸುರು ಅತ್ಯಮ್ಮ
ಮಾವ್ನಾನೋರೆತ್ತಾ ನೆಡದಾರ್ಯೇ"
"ನೆರ್ಮನಿಗೋಗ್ವರಲ್ಲ ಹೊರಮನಿಗೋಗ್ವರಲ್ಲ
ಅಂಗ್ಳದ ಸುತ್ತೇ ಇರೋವಾರೋ । ಲಕ್ಮಣ್ಣ
ಇನ್ನೊಂದರಗಳಗ್ಲೇ ಬರೋವಾರೋ"

ಅಟ್ಟಂಬ ಮಾತಾ ಕೇಳಾನೆ ಲಕಮಣ್ಣ
ಮಾದೇವಿಗಾಣಿ ಇಡೂವಾನೆ
"ಆಣಿ ಕಾಮನಾಣಿ ಆಣಿ ಬೀಮಾನಾಣಿ
ಆಣೀ ಅತ್ತೀಯ ಮೊಗಳೀಗೆ । ಗ್ । ಅಂದ್ ಲಕ್ಮಣ
ಮಾದೇವಿಗಾಣಿ ಇಡೋವಾನೆ । ಲಕ್ಮಣ
ಮಾದೇವಿಗಾಣಿ ಇಡೋವಾನೆ । ಲಕ್ಮಣ
ಕೂತ ಮಂಚವ ಜಡದೆದ್ದೇ । ಲಕ್ಮಣ
ರಾಜಂಗ್ಳ ಮೆಟ್ಟಾ ಇಳೀದಾನೆ । ಲಕ್ಮಣ
ಸಣ[೧೧] ಮಾವ್ನರ ಮನಗೇ ನೆಡದಾನೆ । ಲಕ್ಮಣ

ಹೋಗಿ ಬಾಗಲ್ಲೇ ನಿಲೋವಾನೆ
ಹೋಗಿ ಬಾಗಲ್ಲೆ ನಿಲುವದ್ನು ಪರಮಿಂದ್ರರು
ತಡದರೆ ಚಂಬಗಲೆ ಉದಕವೆ

೧೧. ಸಣ್ಣ

ಮಾವಾ ಕೊಟ್ಟುದಕಾ ತಟ್ಟನೇ ತಡದಾನೆ
ಕಾಲು ಸಿರಿಮೊಕವಾ ತೊಳದಾನೆ । ಲಕುಮಣ್ಣ
ಮಾಳೂಗಿ ಒಳಗೆ ನೆಡದಾನೆ । ಲಕುಮಣ್ಣ
ತೂಗು ಮಂಚದಲೆ ಕುಳತಾನೆ
ತೂಗು ಮಂಚದಲೆ ಕುಳುವದನು ಪರಮಿಂದ್ರರು

ಮಾಳೂಗಿ ಒಳಗೆ ನೆಡದಾರೆ
ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೇಯಿಸಿದ ತೆನೆಸುಣ್ಣ । ತಡಕಂಡೆ
ಮಾಳಗ್ಗಿಂದೆರಗೆ ಬರೋವಾರೆ । ಪರಮಿಂದ್ರರು
ಲಕ್ಮಣ್ಣಗೊಂದೀಳ್ಯ ಕೊಡೋವಾರೇ
ಮಾವಾ ಕೊಟ್ಟೀಳ್ಯ ತಟ್ಟನೆ ತಡದಾನೆ
ಆಯಾಕೊಂದೀಳ್ಯ ಮೆಲೋವಾನೆ

ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಆಗೊಂದು ಮಾತು ನುಡದಾನೆ
"ಮಾವನ ಮಗಳು ನಾತರಬೇಕಂತಿದ್ದೆ
ನನ್ ಬಿಟ್ಟಿ ಹೆರುಗೆ ಕೊಡುತಾರೆ
ಅತ್ತೀಯ ಮಗ್ಳು ನಾತರ್ಬೇಕು ಅಂತಿದ್ದೆ
ನನ್ ಬಿಟ್ಟಿ ಹೆರುಗೆ ಕೊಡುತಾರೆ"

"ನಾವು ನೀ ಇದ್ದಿ ಮತ್ತೆ ಪರೋರಿದ್ದಿ
ನಿಂಗ್ಹೆರಗ್ನ[೧೨] ಹೆಣ್ಣ ತರೋವಾನಿ । ಲಕ್ಮಣ
ಮಾಡ್ವಾನೋ ಮುದ್ದೋ ಮೊದವೀಯ।"
ನೋಡ್ವೊನೋ ಒಂದೋ ಅರತ್ಯವ
ದೂರಿದ್ದೇ ಕಾಂಬೋ ಅರತ್ಯವ"

ಅಟ್ಟಂಬ ಮಾತಾ ಕೇಳಾನೆ ಲಕಮಣ್ಣ
ಸಿಟ್ಟಿನಲ್ಲೆದ್ದೇ ಬರೋವಾನೆ । ಲಕಮಣ್ಣ
ರಾಜಂಗ್ಳ ಮೆಟ್ಟ ಇಳೋವಾನೆ । ಲಕಮಣ್ಣ
ರಾಜಬಿದಿಗಾಗೇ ನೆಡದಾನೆ । ಲಕಮಣ್ಣ

ತೂಗುಮಂಚದಲೆ ಕುಳೋತಾನೆ
ತೂಗು ಮಂಚದಲೆ ಕುಳುವದ್ನು ತಾಯವ್ವಿ
ಊಟಕ್ ಬಾರಂದೇ ಕರದಾಳೆ

---

೧೨. ನಿನಗೆ ಹೊರಗಿನ

"ಮಾವನ ಮಗಳು ಲಗ್ಗನಾಗೂತಂಕೆ[೧೩]
ಊಟದ ಗೊಡವೆ ತನಗಿಲ್ಲ
ಅತ್ತೀಯ ಮಗಳು ಲಗ್ಗನಾಗೂ ತಂಕೆ
ಊಟದ ಗೊಡನೆ ತನಗಿಲ್ಲ" ಅಂದ್ ಲಕಮಣ್ಣ
ಮುಚ್ಚು ಮೂಡಾಕೆ[೧೪] ಮನಗಾನೆ

ಮಂಗಲ್ದ ಮಾತಾ ತೊಡಗಾರೆ ಇಸರರು
ಲಾಗೊಂದು ಮಾತಾ ನುಡದಾರೆ
"ಸುಕ್ರರ ತದಗಿಯೋ ಬ್ರಸ್ತರ ಬಿದಗಿಯೋ
ಸಣಿಯರ ಮಾದೇವಿ ಮುದವಿಯೋ
ಕಂಬು ಸಂದಕದಿಂದೆ ಸರ್ವ ವಾದೀದಿಂದೆ
ಕವ್ಲರ ದಿಬ್ಬಣವೇ ಸವನಲೆ
ಕವ್ಲರ ದಿಬ್ಬಣವೇ ಸವ್ನೀ ಸುಂಗಾರಾಗಿ
ಆನಗಲ್ಲ ದಾರಿಗಾಗೇ ಬರೋಬೇಕೆ ।

ಆನಗಲ್ಲ ದಾರಿಗಾಗೇ ಬರೋಬೇಕೆ । ಕವ್ಲರು
ಬಾಳಿ ಬನದಲ್ಲಿ ನಿಲಬೇಕೋ । ಕು । ಅಂದೇಳಿ
ಮಂಗಲ್ದ ಮಾತಾ ಮುಗೀಸಾರೆ । ಇಸರರು
ಕೂತ ಮಂಚವ ಜಡದೆದ್ದೇ । ಇಸರರು
ರಾಜಂಗ್ಳ ಮೆಟ್ಟ ಇಳೀದಾರೆ । ಇಸರರು
ತಮ್ಮ ಅರಮನಗೆ ಬರೋವಾರೆ । ಇಸರರು

ಬಂದೀ ಬಾಗಲ್ಲೆ ನಿಲೋವಾರೆ
ಬಂದೀ ಬಾಗಲ್ಲೆ ನಿಲುವದ್ನು ಇಸರರ ಮಡದಿ
ಹಣ್ಣೆಲಿ ಅಂತೆ ಬಳಕೀತೆ । ಬಾಡೀತೆ
ಇಸರರ್‍ಗೆ ಉದಕಾ ಕೊಡೋವಾಳೇ
ಮಡದಿ ಕೊಟ್ಟುದಕಾ ತಟ್ಟನೆ ತಡದಾರೆ
ಕಾಲಾ ಸಿರಿಮೊಕವಾ ತೊಳದಾರೆ । ಇಸರರು
ಆಗೊಂದು ಮಾತಾ ನುಡೀದಾರೆ

"ಅತ್ತೆ ಏನ್ ಬಯ್ದೀತೋ[೧೫] ಮಾವೇನ ಬಯ್ದನೋ
ಮನದಾದಿಯೋ[೧೬]ರ್ ಕುಂದಾ ನುಡದಾರಿಯೋ?"
"ಅತ್ತೆ ಏನ್ ಬಯ್ಲಿಲ್ಲ ಮಾವೇನ ಬಯ್ಲಿಲ್ಲ
ಮನದಾದಿಯೋರ್ ಕುಂದಾ ನುಡಿಯಾಲಿಲ್ಲ । ಸೊದರದಾ
ಲಕಮಣ ಮಾದೇವಿಯ ತಡದೊದಾ"

---

೧೩. ಲಗ್ನವಾಗುವವರೆಗೆ ೧೪. ಮುಖಮುಸುಕು ಹಾಕಿ ೧೫. ಬಯ್ದಳೊ ೧೬. ಮನೆದಾಸಿಯರು

"ಆಗಳ್ ಬಂದವನೆ ಆಗಳೆ ಹೋಗನಿಯ
ಮತ್ತೊಂದರಗಳಗೇ ನಿಲಲಿಲ್ಲ
ಮತ್ತೊಂದರಗಳಗೇ ನಿತ್ತದುಂಟಾದರೆ
ಮುಂದಲಿ ತಟ್ಟೀ ಎಳಿಯಾತಿದ್ದೆ । ಅವನಾಲೋ
ಹೆತ್ತಮ್ಮನೊಡಲೋ ಉರೋವಂಗೆ[೧೭] । ಅಂದೇಳೆ
ಕಾಲೂ ಸಿರಿಮೊಕವಾ ತೊಳದಾರೆ । ಇಸರರು
ತೂಗು ಮಂಚದಲೆ ಕುಳತಾರೆ
ತೂಗು ಮಂಚದಲೆ ಕುಳುವದನು ಇಸರರ ಮಡದಿ

ಮಾಳೂಗಿ ಒಳಗೆ ನೆಡುದಾಳೆ
ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದ ತೆನೆಸುಣ್ಣ । ತಡಕಂಡಿ
ಮಾಳಗ್ಗಿಂದೆರಗೆ ಬರೋವಾಳೆ । ಇಸರರ ಮಡದಿ
ಗಂಡಗೊಂದೀಳ್ಯ ಕೊಡೋವಾಳೆ
ಮಡದಿ ಕೊಟ್ಟೀಳ್ಯ ತಟ್ಟನೆ ತಡದಾರೆ
ಆಯಾ ಕೊಂದೀಳ್ಯ ಮೆಲೋವಾರೇ
ಎಲಿಯೊಂದ್ ತಿಂದಾರೆ ರಜವಲ್ಲೆ ಉಗಳಾರೆ

ಮಾಳೂಗಿ ಒಳಗೆ ನೆಡದಾರೆ । ಇಸರರು
ಸೆಣ್ಣ ಕಯ್‌ಹಡ್ಪಾ ತಡದಾರೆ । ಇಸರರು
ಹಣ್ಣಡಕೆ ಬೆಳಿಎಲಿಯಾ ಹಡಪಕೆ । ಹಾಯಿಕಂಡೇ
ಹಡಪವ ಎತ್ತೇ ಹೊಗಲಿಗೇ । ಇಸರರು
ಮಾಳಗ್ಗಿಂದೆರಗೇ ಬರೋವಾರೇ । ಇಸರರು
ರಾಜಂಗ್ಣ ಮೆಟ್ಟ ಇಳೀದಾರೆ । ಇಸರರು
ನಾರಿಯರ್ ಕೇರಿಗಾಗೆ ನೆಡದಾರೆ । ಇಸರರು
ಹೋಗಿ ಬಾಗಲ್ಲೇ ನಿಲೋವಾರೇ । ಇಸರರು
ನಾರಿಯರಿಗೊಂದೀಳ್ಯ ಕೊಡೋವಾರೆ । ಇಸರರು

"ಬ್ರಸ್ತರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಮಾದೇವಿ ಮೊದವಿಯೋ । ನಾರಿಯೋರೆ
ನೀವು ನಮ್ಮನಗೆ ಬರೋಬೇಕೆ. । ನಮ್ಮನಿಯಾ
ಮೂಡಣಸಗರವಾ ತೊಳಿಯಾಬೇಕೆ"
ಮೂಡಣಸಗರವಾ ತೊಳಿಯಾ ಬೇಕಂದೇಳಿ

---

೧೭. ಉರಿಯುವಂತೆ

ನಿಸ್ತ್ರಿಯರ ಕೇರಿಗಾಗೆ ನೆಡದಾರೆ ।
ನಿಸ್ತ್ರಿಯರ ಕೇರಿಗಾಗೆ ನೆಡದಾರೆ ಇಸರರು
ನಸ್ತ್ರಿಯರ ಕೇರಿಗಾಗಿ ನೆಡದಾರೆ ಇಸರರು
"ಬ್ರಸ್ತರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಮಾದೇವಿ ಮೊದವಿಯೋ । ನಿಸ್ತ್ರಿಯೋರೆ
ನೀನು ನಮ್ಮನಗೇ ಬರಬೇಕೆ" । ಕು । ಅಂದೇಳಿ
ಬಿನ್ನಾಣಿ ಅರಮನಗೇ ನೆಡದಾರೆ । ಇಸರರು
ಬಿನ್ನಾಣಿಗೊಂದೀಳ್ಯ ಕೊಡುವಾರೆ

"ಬ್ರಸ್ತರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಮಾದೇವಿ ಮೊದವಿಯೋ । ಬಿನ್ನಾಣಿ
ನೀನು ನಮ್ಮನಗೇ ಬರಬೇಕೋ । ನಮ್ಮನಿಯ
ಮಾದೇವಿ ಸಿರಪನ್ನೀ ಗೆಯಬೇಕೋ । ಕು । ಅಂದೇಳಿ
ಆಚಾರಿ ಅರಮನಗೇ ನೆಡದಾರೆ । ಇಸರರು
ಹೋಗಿ ಬಾಗಲ್ಲೆ ನಿಲೂವಾರು । ಇಸರರು
ಆಚಾರಿಗೊಂದೀಳ್ಯ ಕೊಡುವಾರು

ಬ್ರಸ್ತರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಮಾದೇವಿ ಮೊದವಿಯೋ । ಆಚಾರಿ
ನೀನು ನಮ್ಮನಿಗೆ ಬರಬೇಕೋ । ಕು । ನಮ್ಮನಿಯ
ಬಾಗಲ ತೊರಣವಾ ಗೆಯಿಬೇಕೋ । ಅಂದೇಳಿ
ಕುಂಬರನರಮನಗೇ ನೆಡದಾರೇ । ಇಸರರು
ಕುಂಬರಗೊಂದೀಳ್ಯ ಕೊಡೋವಾರೇ

ಬ್ರಸ್ತರ ಬಿದಗಿಯೋ ಸುಕ್ರರ ತದಗಿಯೋ
ಸಣಿಯರ ಮಾದೇವಿ ಮೊದವಿಯೋ
ಕೊಂಬು ಕೊಂಬು ಗೆಯ್ಯೋ ಕುಂಬಗೆ ಮುಚ್ಚಳ ಗೆಯ್ಯೋ
ಅದಕೊಪ್ಪುದೆಯ್ಡು ರತಿಗೆಯ್ಯೋ । ಕುಂಬಾರ

ತಂದಿರಸೋ ನಮ್ಮಾ ಜಗಲ್ಯಲ್ಲೋ । ಅಂದೇಳಿ
ಇಂದ್ರಾಲೋಕಕೆ ನೆಡದಾರೆ । ಇಸರರು
ಅಂಗ್ಡೀ ತೆಣೆಮೆನೆ ಕುಳತಾರೆ ।
ಅಂಗ್ಡೀ ತೆಣೆಮೆನೆ ಕುಳತಾರೆ ಇಸರರು

"ಅಂಗ್ಡೀ ಸೆಟ್ಟಿ" ಅಂದೇ ದೆನಿದೂರೇ
ಇಂದೂ ಕರ್ದಂವಲ್ಲ ಬಂದನೇ ಅಂಗ್ಡೀಸೆಟ್ಟಿ

ನಿಂದನೇ ಇಸರರಾ ಒಡನಲ್ಲೇ । ನಿಂದೀಕಂಡೇ
"ಏನು ಕಾರಣಲೆ ಕರದಿಯೋ"
"ಕರದಂಕಾರಣವಿಲ್ಲ ಕಿರಿದಂಬೆಸಾರಿಲ್ಲ
ಇಂದ್ರ ಪಟ್ಟಿ ನೋಡೇ ತೆಗತಾರೋ"

ಅಟ್ಟಂಬಮಾತಾ ಕೇಳಾನೆ ಇಂದ್ರಸೆಟ್ಟಿ.
ಜವಳಿಯ ದಿಂಡಾ ಬಿಡಸಾನೆ । ಅಂಗ್ಡಿಸೆಟ್ಟಿ
ಇಂದ್ರಾ ಪಟ್ಟಿ ನೋಡೇ ತೆಗುದಾನೆ. । ಅಂಗ್ಡಿಸೆಟ್ಟಿ
ಮಾಳಗ್ಗಿಂದೆರಗೇ ನೆಡದಾನೆ । ಇಂದ್ರಾಸೆಟ್ಟಿ.
ಇಸರರ ಬಲಗಯ್ಲೀ ಕೊಡೋವಾನೆ.
ಅಚಗಯ್ನ ಸರ್ಗ್ಗಾ[೧೮] ಇಚಮಗ್ಗ್ಚಿ[೧೯] ನೋಡಾರೆ

"ಬಣ್ಣ ಸಾಕಿದರ ಬೆಲೆಹೇಳೋ"
ದೆಡಿಗೆ ಸಾವರವಂದ ಮೊಳಕೆ ಸಾವರವಂದಾ
ಅದಕೇಳುಸಾವರದಾ ಹಣವಂದಾ
ಅದಕೇಳಸಾವರದಾ ಹಣವಂಬದ್ನು ಇಸರರು
ಅದಕಲ್ಲೆ ಹಣವಾ ಸಲಸಾರೆ । ಇಸರರು
ಪಟ್ಟಿದಟ್ಟಿಯಲ್ಲೆ ಬಿಗಿದಾರೆ । ಇಸರರು

ಅಂಗ್ಡಿ ತೆಣಿಗಿಂದು ಕೆಳಗೆ ಇಳದಾರೆ । ಇಸರರು.
ಚಿನವರನರಮನಗೇ ನೆಡದಾರೆ । ಇಸರರು
ಹೋಗಿ ಬಾಗಲ್ಲೆ ನಿಲೋವಾರೆ । ಇಸರರು
ಆಗೊಂದು ಮಾತಾ ನುಡಿದಾರೆ
"ಇಂದ್ರಲೋಕ್ದ ಸೊನಗಾರಾ ಇಂದೇ ಗದ್ದಗಿಹೂಡೋ
ತೊಳ್ಬಳಿ ಮಣಿ ಸರ್ನಾ ಗೆಯಿಕೊಡೋ
ಇಂದ್ರ ಲೋಕ್ದ ಸೊನಗಾರಾ ಇಂದೇ ಗದ್ದಗಿ ಹೂಡೋ
ಕಟ್ಟಾಣಿ ಮಣಿಸರ್ನ ಗೆಯಿಕೊಡೋ"

ಇಂದ್ರ ಲೋಕ್ದ ಸೊನಗಾರಾ ಇಂದೇ ಗದ್ದಗಿ ಹೂಡೆ
ತೊಳ್ಬಳಿ ಮಣಿ ಸರ್ನಾ ಗೆಯಿದಾನೆ । ಚಿನವರಾ
ಕಟ್ಟಾಣಿ ಮಣಿ ಸರ್ನಾ ಗೆಯಿದಾನೆ । ಚಿನವಾರ
ಇಸರರ ಬಲಗಯ್ಲಿ ಕೊಡೋವಾನೆ
ಇಸರರ ಬಲಗಯ್ಲಿ ಕೊಡುವದ್ನು ಇಸರರು

---

೧೮. ಸೆರಗನ್ನು   ೧೯. ಈಚೆತಿರುವಿ

ಎಯ್ದು ಕಯ್ಯೊಡ್ಡೇ ತಡದಾರೆ । ಇಸರರು
ಚಿನ್ನದಟ್ಟಿಯಲ್ಲೇ ಬಿಗಿದಾರೆ । ಇಸರರು
ಅದಕಲ್ಲೇ ಹಣವಾ ಸಲಿಸಾರೆ । ಇಸರರು
ಅಂಗ್ಡಿ ತೆಣೆಗಿಂದು ಕೆಳಗೆ ಇಳದಾರೆ । ಇಸರರು
ತಮ್ಮ ಅರಮನಗೇ ಬರೋವಾರೆ । ಇಸರರು
ಬಂದೀ ರಾಜಂಗ್ಳ ನೆಗದತ್ತೇ । ಇಸರರು
ಮಾಳೂಗಿ ಒಳಗೆ ನೆಡದಾರೆ । ಇಸರರು
ಹಡಪವ ಇತ್ತೇ ಇಳೂಗಾರೆ । ಇಸರರು
ತೂಗು ಮಂಚಲ್ಲೆ ಕುಳೋವಾರೆ

ಮಾವನ ಮಗಳು ಲಗ್ಗನಾಗುತಂಕೆ
ಊಟದ ಗೊಡನೆ ತನಗಿಲ್ಲ । ಅಂದೇಳೆ
ಮಾಳೂಗಿ ಒಳಗೆ ನೆಡದಾನೆ । ಲಕಮಣ
ಅಟ್ಟತ್ತಿ ಪೆಟ್ಟಗಿಯ ತೆಗದಾನೆ । ಲಕಮಣ
ಮೆಟ್ಟಿ ಬೀಗವ ಕರದಾನೆ । ಲಕಮಣ
ಮುಚ್ಚೀಲ ತಗದೇ ಕಡಗಿಟ್ಟೇ

ಮೂರು ಬೊಕ್ಸ ಹಣವಾ ಮೊಗದಾನೆ । ಲಕಮಣ
ಹಚ್ಚಡ ಸೆರಗಿಲಿ ಬಿಗಿದಾನೆ । ಲಕಮಣ್ಣ
ಪೆಟ್ಟೂಗಿ ಬಾಯಲ್ಲಿ ಮಡುಗಾನೆ । ಲಕಮಣ್ಣ
ಮಾಳಗ್ಗಿಂದೆರಗೇ ಬರುವಾನೆ । ಲಕಮಣ್ಣ

ರಾಜಂಗ್ಳ ಮೆಟ್ಟ ಇಳೀದಾನೆ । ಲಕಮಣ್ಣ
ರಾಜಬಿದಿಗಾಗೇ ನೆಡದಾನೆ । ಲಕಮಣ್ಣ
ಜೊನಗನರ[೨೦] ಮನಗೇ ನೆಡದಾನೆ । ಲಕಮಣ್ಣ
ಹೋಗಿ ಬಾಗಲ್ಲೇ ನಿಲೋವಾನೆ । ಲಕಮಣ್ಣ
'ಜೊನಗನೆ' ಅಂದೇ ಕರದಾನೆ

ಇಂದೂ ಕರ್ದಂವಲ್ಲ ಬಂದನೇ ಜೊನಿಗ
ನಿಂದನೇ ಲಕಮಣ್ಣ ಒಡನಲ್ಲೆ । ಲ್ । ನಿಂತೀಗಂಡಿ[೨೧]

"ಏನು ಕಾರಣಲೆ ಕರದಿಯೋ"
"ಕರದಂ ಕಾರ್ಯವಿಲ್ಲ ಕಿರಿದಂಬೆಸರವಿಲ್ಲ
ಅಂಗೀಯ ಹೊಲಬಲ್ಯೋ ಜೋಳುಗಿ ಹೊಲಬಲ್ಯೋ[೨೨]
ಹೆಣ್ಣ ಮಕ್ಕಳಿಗೆ ರವಕೀಯ । ಹೊಲಬಲ್ಯೋ
ನನಗೊಂದ್ ಜೋಳಗಿಯ ಹೊಲಕೊಡೋ"

೨೦. ಸಿಂಪಿ ೨೧. ನಿತ್ತುಕೊಂಡು ೨೨. ಹೊಲೆಯ ಬಲ್ಲೆಯೋ

"ಅಂಗೀಯ ಹೊಲಬಲ್ಲೆ ಜೋಳುಗಿ ಹೊಲ್ಬಲ್ಲೆ
ಹೆಣ್ಣ ಮಕ್ಕಳಿಗೆ ರವಕೀಯ । ಹೊಲಬಲ್ಲೆ
ನಿಂಗೊಂದ್ ಜೋಳಗಿಯ ಹೊಲಬಲ್ಲೆ । ಅಂದೇಳಿ
ಉಕ್ಕೀನ ಚೂರಿ ನುಗಲುಂಡಿ[೨೩] । ತಡಕಂಡಿ
ಅಂವ್ಗೊಂದ್ ಜೋಳಗಿಯ ಹೊಲದಾನೆ । ಜೊನಗ

ಲಕಮಣನ ಬಲಗಯ್ಲಿ ಕೊಡೋವಾನೆ
ಲಕಮಣನ ಬಲಗಯ್ಲಿ ಕೊಡುವದ್ನು ಲಕಮಣ
ಅದಕಲ್ಲೇ ಹಣವಾ ಸಲೀಸಾನೆ । ಲಕಮಣ್ಣ
ಗುಡಗಾರ ಮನಗೇ ನೆಡದಾನೆ । ಲಕಮಣ್ಣ
ಹೋಗಿ ಬಾಗಲ್ಲೆ ನಿಲೋವಾನೆ । ಲಕಮಣ್ಣ

ಲಾಗೊಂದು ಮಾತಾ ನುಡದಾನೆ
ಆಗೊಂದು ಮಾತಾ ಏನಂದಿ ನುಡದಾನೆ
"ಮುತ್ತಿನ ಬಾಸಿಂಗ ಗೆಯಿಕೊಡೋ" । ಗುಡಗಾರಣ್ಣ
ಮುತ್ತಿನ ತೊಂಡಲ ಗೆಯಿಕೊಡೋ ಗುಡಗಾರಣ್ಣ
ಅಟ್ಟಂಬು ಮಾತಾ ಕೇಳಾನೆ ಗುಡಗಾರಾ
ಮುತ್ತಿನ ಬಾಸಿಂಗ ಗೆಯೀದಾನೆ

ಮುತ್ತಿನ ಬಾಸಿಂಗ ಗೆಯಿದಾನೆ ಗುಡಗಾರಾ
ಮುತ್ತಿನ ತೊಂಡಲ ಗೆಯಿದಾನೆ । ಗುಡಗಾರಾ
ಲಕಮಣನ ಬಲಗಯ್ಲಿ ಕೊಡೋವಾನೆ
ಲಕಮಣನ ಬಲಗಯ್ಲಿ ಕೊಡುವದನ್ನು ಲಕಮಣ್ಣ
ಎಯ್ಡು ಕಯ್ಯೊಡ್ಡೇ ತಡದಾನೆ । ಲಕಮಣ್ಣ

ಅದಕಲ್ಲೆ ಹಣವಾ ಸಲಸಾನೆ । ಲಕಮಣ್ಣ
ತೊಂಡಲ ಜೋಳಗಲಿ ಮಡಗಾನೆ । ಲಕಮಣ್ಣ
ನಾಗಾಲೋಕಕೆ ನೆಡದಾನೆ । ಲಕಮಣ್ಣ
ಅಂಗ್ಡೀ ತೆಣಿಮೆನೆ ಕುಳತಾನೆ । ಲಕಮಣ್ಣ
"ಅಂಗ್ಡಿ ಸೆಟ್ಟಿ" ಅಂದೇ ದೆನಿದೂರೇ
ಇಂದೂ ಕರ್ದಂವಲ್ಲ ಬಂದನೇ ಅಂಗ್ಡಿ ಸೆಟ್ಟಿ
ನಿಂದನೇ ಲಕಮಣ್ಣ ಒಡನಲ್ಲ । ನಿಂದಿ ಕಂಡಿ
"ಏನು ಕಾರಣಲೆ ಕರದಿಯೋ"
ಕರದಂ ಕಾರಣವಿಲ್ಲ ಕಿರಿದೆಂಬೆಸರಸಯ್ಯೆ

೨೩. ನೂಲುಂಡಿ

ನಾಗಾ ಪಟ್ಟಿ ನೋಡೇ ತೆಗತಾರೋ"
ಅಟ್ಟಂಬ ಮಾತಾ ಕೇಳಾನೆ ನಾಗಾ ಸೆಟ್ಟಿ

ಮಾಳೂಗಿ ಒಳಗೆ ನೆಡದಾನೆ । ನಾಗಾ ಸೆಟ್ಟಿ
ಜವಳಿಯ ದಿಂಡ ಬಿಡಸಾನೆ । ನಾಗಾ ಸೆಟ್ಟಿ
ನಾಗಾಪಟ್ಟಿ ನೋಡೇ ತೆಗದಾನೆ । ನಾಗಾಸೆಟ್ಟಿ
ಮಾಳಗ್ಗಿಂದೆರಗೇ ಬರೋವಾನೆ । ನಾಗಾಸೆಟ್ಟಿ
ಲಕಮಣ್ಣ ಬಲಗಯ್ಲಿ ಕೊಡೋವಾನೆ
ಅಚಗಯ್ನ ಸೆರ್ಗಾಗಿ ಇಚಮುಗ್ಚಿ ನೋಡಾನೆ
"ಬಣ್ಣ ಸಾಕಿದರಾ ಬೆಲೆ ಹೇಳೋ"

"ದೆಡಿಗೆ ಸಾವರವಂದಾ ಮೊಳಕೆ ಸಾವರವಂದಾ
ಅದಕೇಳು ಸಾವರದಾ ಹಣವಂದಾ"
ಅದಕೇಳು ಸಾವರದಾ ಹಣವಂಬದ್ನು ಲಕ್ಮಣ
ಅದಕಲ್ಲೆ ಹಣವ ಸಲಸಾನೆ । ಲಕ್ಮಣ
ಜೋಳಗಲಿ ಪಟ್ಟೆ ಮಡಗಾನೆ । ಲಕ್ಮಣ
ತೆಣೆಗಿಂದು ಕೆಳಗೆ ಇಳದಾನೆ । ಲಕ್ಮಣ
ಚಿನವರನರಮನಗೇ ನೆಡದಾನೆ । ಲಕ್ಮಣ
ಹೋಗಿ ಬಾಗಲ್ಲೆ ನಿಲೋವಾನೆ । ಲಕ್ಮಣ
ಆಗೊಂದು ಮಾತಾ ನುಡದಾನೆ

"ನಾಗಾಲೊಕ್ದ ಸೊನಗಾರಾ ಇಂದೇ ಗದ್ದಗಿ ಹೂಡೋ
ತೊಳ್ಬಳಿ ಮಣಿ ಸರ್ನಾ ಗೆಯಿಕೊಡೋ
ನಾಗಾಲೊಕ್ದ ಸೊನಗಾರಾ ಇಂದೇ ಗದ್ದಗಿ ಹುಡೋ
ತೊಳ್ಬಳಿ ಮಣಿ ಸರ್ನಾ ಗೆಯಿಕೊಡೋ"

ನಾಗಾಲೊಕ್ದ ಸೊನಗಾರಾ ಇಂದೇ ಗದ್ಗಿ ಹೂಡೇ
ತೊಳ್ಬಳಿ ಮಣಿಸರ್ನಾ ಗೆಯಿದಾನೆ । ಚಿನವರಾ
ಕಟ್ವಾಣಿ ಮಣಿಸರ್ನಾ ಗೆಯಿದಾನೆ । ಚಿನವರ
ಲಕ್ಮಣ್ಣಾ ಬಲಗಯ್ಲಿ ಕೊಡೋವಾನೆ
ಲಕ್ಮಣ್ಣಾ ಬಲಗಯ್ಲಿ ಕೊಡುವದ್ನು ಲಕಮಣ್ಣಾ

ಎಯ್ಡೊ ಕಯ್ಯೊಡ್ಡೇ ತಡದಾನೆ । ಲಕಮಣ್ಣಾ
ಜೋಳಗಲಿ ಅದ್ರಾ ಮಡಗಾನೆ । ಲಕಮಣ್ಣ
ಅದಕಲ್ಲೆ ಹಣವಾ ಸಲಸಾನೆ । ಲಕಮಣ್ಣ
ತೆಣೆಗಿಂದು ಕೆಳಗೆ ಇಳದಾನೆ । ಲಕಮಣ್ಣ
ತನ್ನಲರ ಮನಗೇ ಬರೋವಾನೆ । ಲಕಮಣ್ಣ

ಬಂದಿ ರಾಜಂಗ್ಳಾ ನೆಗದತ್ತೇ । ಲಕಮಣ್ಣ
ಮಾಳೂಗಿ ಒಳಗೇ ನೆಡದಾನೆ । ಲಕಮಣ್ಣ
ತೂಗು ಮಂಚಲ್ಲೆ ಕುಳತಾನೆ । ಲಕಮಣ್ಣ
ಪಟ್ಟೀ ತಗದಿ ಕೊಡೋವಾನೆ
ತಾಯಿ ಸೆರಗ್ ತಡ್ದೀ ನಾರಿಯೋರ್ ನೆರಿಯಾ ಹೊಯ್ದಿ
ಪಟ್ಟೀ ಜೋಳಗಲೆ ಮಡಗಾರೆ
ಪಟ್ಟೀ ಜೋಳಗಲೆ ಮಡಗ್ವದ್ನು ಲಕಮಣ್ಣಾ
ಜೋಳಗಿಯ ಎತ್ತೇ ಹೊಗಲೀಗೆ । ಹಾಯಿಕಂಡೇ
ದೇವರ ಬುಡಕೋಗೇ ನಿಲೋವಾನೆ । ಲಕ್ಮಣ್ಣಾ
ದೇವರಿಗೆ ಕಯ್ಯಾ ಮುಗೋವಾನೆ

ಲಕ್ಮಣನಂಬೆಸ್ರು ಇಲ್ಲಿಂದಿತ್ತಾಗಿರ್ಲೆ
ಜೋಗಿ ಅಂಬೆಸ್ರು ನಡೀಯಾಲೆ । ಲ । ಂದೇಳಿ
ರಾಜಂಗ್ಳ ಮೆಟ್ಟ ಇಳೀದಾನೆ । ಜೋಗಿಯೋ
ರಾಜಬಿದಿಗಾಗೆ ನೆಡದಾನೆ । ಜೋಗಿಯೋ
ನಾರಿಯರ ಕೇರಿಗಾಗೆ ನೆಡದಾನೆ
ಆಗೊಂದು ಮಾತಾ ನುಡೀದಾನೆ

"ಮೆನ್ನಕೇರಿ ಅಕ್‌ದಿರ್‍ಯಾ ಕೆಳಗ್ನ ಕೇರಿ ತಂಗ್‌ದಿರ್‍ಯಾ
ಮದ್ವಿಮನಿಗೋಪಾ ಬರೂವಿರೇ"
"ಗಂಡ್ನ ಕೆಳ್ಗ್ನ ಹೆಂಡರು ಅತ್ತೀ ಕೆಳಗ್ನ ಸೊಸ್ದಿರು
ಜೋಗಿ ಬೆನ್ನತ್ತಿ ಬರೂದಿಲ್ಲ" । ಅಂಬದ್ನು
ಪನ್ನೀ ಮರಿಯಲ್ಲಿ ಮುಗುಳುನೆಗ್ಗಿ । ಆಡೀತಾ

ಇಸರರ ಮನಗೇ ನೆಡದಾನೆ । ಜೋಗಿಯೋ
ಹೋಗಿ ಬಾಗಲ್ಲೇ ನಿಲೋವಾನೆ । ಜೋಗಿಯೋ
ಅಂಗಳದಲ್ಲೇ ಕುಳೋವಾನೆ
ಅಂಗಳದಲ್ಲೆ ಕುಳುವದನು ಇಸರರು
ಮಾಳೂಗಿ ಒಳಗೆ ನೆಡದಾರೆ । ಇಸರರು
ಮುತ್ತಿನ ಚಪ್ಪರಾ ಇಡೋವಾರೋ
ಮುತ್ತಿನ ಚಪ್ಪರ ಇಡುವದ್ನು ಜೋಗಿಯು
ಆಗೊಂದು ಮಾತಾ ನುಡೀದಾನೆ

ಹುಟ್‌ದಲ್ ಅಣತಮ್‌ದಿರಿಲ್ವೊ[೨೪] ಕೊಟ್ಟಲ್ ಅಳಿದಿರ್‌ಇಲ್ವೊ
ನೀವೊಬ್ಬರ್ ಚಪ್ಪರವ ಇಡೋವಾರಿ । ಅಂದೇಳಿ

೨೪. ಅಣ್ಣತಮ್ಮಂದಿರಿಲ್ಲ

ತಾಬಂದು ಸೆರಗಾ ತಡದಾನೆ
ಮುತ್ತೀನಾ ಚಪ್ಪರಾ ಮುನ್ನೂರುಗಾವುದ್ದಾ
ಮುತ್ತೀನಾ ಸರಜಲ್ಲಿ ಬಿಡಸಾರೆ । ತನ್ನಾಲೋ
ಮುದ್ದೀನಾ ಮಗಳಾ ಮೊದವೀಗೆ
ಹಗಳದ ಚಪ್ಪರ ಹನ್ನೆಯ್ಡು ಗಾವುದ್ದಾ
ಹಗ್ಗದ ಸರಜಲ್ಲಿ ಬಿಡಸಾರೆ । ತನ್ನಾಲೋ

ಮುದ್ದೀನಾ ಮಗಳಾ ಮೊದವೀಗೆ । ಇಸರರಾ
ಚಪ್ಪರ್ದ ಕೆಲ್ಸಾ ಮುಗೀದಾವೇ
ಚಪ್ಪರ್ದ ಕೆಲ್ಸಾ ಮುಗುವದ್ನು ಇಸ್ರರ ಮನ್ಗೆ
ಆಚಾರಿ ಬಂದಿ ನೆರದಾನೆ । ಇಸ್ರರ ಮನ್ಗೆ
ಬಾಗಲ ತೊರಣವಾ ಇಡೋವಾನೆ । ಇಸರರ ಮನ್ಗೆ
ಬಿನ್ನಾಣಿ ಬಂದಿ ನೆರದಾನೆ
ಬಿನ್ನಾಣಿ ಬಂದಿ ನೆರವದ್ನು ಇಸ್ರರು

ಹೊನ್ನಾ ಮಣಿಯೊಂದಾ ಮಡಗಾರೆ
ಹೊನ್ನಾ ಮಣಿಯೊಂದಾ ಮಡಗ್ವದ್ನು ಬಿನ್ನಾಣಿ
ಹೊನ್ನಾ ಮಣಿಮೆನೇ ಕುಳತಾನೆ
ಹೊನ್ನಾ ಮಣಿ ಮೆನೇ ಕುಳುವದ್ನು ಇಸ್ರರ ಮನಗೆ
ಕುಂಬರ ಬಂದೇ ನೆರದಾನೆ
ಕುಂಬಾ ಕುಂಬಾ ಗೆಯ್ದೇ ಕುಂಬಗೆ ಮುಚ್ಚಳ ಗೆಯ್ದೇ
ತಂದಿರಸನಿಯೇ ದೊಡ್ಡಾ ಜಗಲ್ಯಲ್ಲೇ । ಇಸರರ ಮನಗೆ

ಹಸಗನು ಬಂದೆ ನೆರದಾನಿಯೇ । ಇಸರರ ಮನಗೆ
ಮುತ್ತೀನ ಮೇಲ್ಗಟ್ಟಾ ಇಡೋವಾನೆ । ಇಸರರ ಮನಗೆ
ನಾರಿಯೋರು ಬಂದೆ ನೆರದಾರಿಯೇ । ಇಸರರ ಮನಗೆ
ನಿಸ್ತ್ರಿಯೋರು ಬಂದೆ ನೆರದಾರೆ । ಇಸರರ ಮನಿಯಾ

ಮೂಡನಸಗರವಾ[೨೫] ತೊಳದಾರೆ । ನಾರಿಯೋರು
ಮೂಡನಸಗರವಾ ಬರದಾರೆ
ಮೂಡನಸಗರವಾ ಬರ್ವದ್ನು ಇಸರರ ಮಡದಿ
ಅಂಕನ ಸೇಡಿಯಾ ಬರದಾಳೆ
ಅಂಕನ ಸೇಡಿಯಾ ಬರ್ವದ್ನು ಇಸರರು
ಮಂಟಪೂಡ್ವದಕೆ ನೆಡದಾರೆ

೨೫. ಪೂರ್ವದಿಕ್ಕಿನ ಹಸಗರದ ಗೋಡೆಯನ್ನು

ಮಂಟಪೂಡ್ವದಕೆ ನೆಂಟರಿಗೆ ಬರವೇಳಿ
ಎಂಟು ಚಕ್ಕದಲೆ ಮನೆ ಮಾಡೇ । ಮಂಟಪ ಹೂಡೇ
ನೆಡ್ಗೇ[೨೬] ತಿದ್ದರಿಯೇ ಕಳಸಾವೇ । ಇಸರರ ಮಡದಿ
ಮಾಳೂಗಿ ಒಳಗೆ ನೆಡದಾಳೆ । ಇಸರರ ಮಡದಿ
ಎಣ್ಣೀಯ ಗಿಂಡೀ ಬಲಗಯ್ಲೀ । ತಡಕಂಡಿ
ಹೊನ್ನಾಮಣೆಯೊಂದಾ ತಡದಾಳೆ ।

ಹೊನ್ನಾ ಮಣೆಯೊಂದಾ ತಡದಾಳೆ । ಇಸರರ ಮಡದಿ
ಅಕ್ಷತಿ ಬಟ್ಟಲವಾ ತಡೋದಾಳೆ । ಇಸರರ ಮಡದಿ
ಮಾಳಗ್ಗಿಂದೆರಗೇ ಬರೋವಾಳೆ । ಇಸರರ ಮಡದಿ
ಮಂಟಪದಲ್ಲೇ ಮಡೋಗಾಳೆ । ಇಸರರ ಮಡದಿ
ಹೊನ್ನಾ ಮಣೆಯೊಂದಾ ಮಡೋಗಾಳೆ
ಹೊನ್ನಾ ಮಣೆಯೊಂದಾ ಮಡಗ್ವದ್ನು ಮಾದೇವಿ

ಮಣೆಯ ಮೆನೋಗೇ ಕುಳತಾಳೆ
ಮಣೆಯ ಮೆನೋಗೇ ಕುಳುವದ್ನು ಮಾದೇವಿ ತಾಯಿ
ಮಾದೇವಿಗೆ ಸೆಸೀ[೨೭] ಇಡೋವಾಳೆ
ಮಾದೇವಿಗೆ ಸೆಸೀ ಇಡುವದ್ನು ಜೋಗಿಯ
ತಾನೆಯ್ದು ಸೆಸೀ ತಳಕಂಡಿ । ನಾರಿಯೋರು
ಆಗೊಂದು ಮಾತಾ ನುಡದಾರೆ

“ನಮ್ಮಾ ಮಾದೇವಿಯ ಮೂರ್ತಕೆ ತಂದಾ ಸೆಸೀ
ನೀ ಎಂತಕೆ ಜೋಗೀ ತಳಕಂಡ್ಯೋ.”
ಸೆಸೀಯ ಕಾಣದೆ ಹನ್ನೆಯ್ದು ವರಸಾದೊ
ಕಂಡಲ್ಲೆಯ್ದು ಸೆಸೀ ತಳಕಂಡ್ನೇ । ಅಂಬುದ್ನು
ಮಾದೇವಿತಾಯಿ ಮಾದೇವಿಗೆ ಚಿಗರಾ ಉಗರಾಡೇ
ಮಾದೇವಿಗೆ ಚಿಗರಾ[೨೮] ಉಗರಾಡ್ವದ್ನು ಜೋಗಿಯು
ತಾನಿಟ್ಟು ಚಿಗರಾ ಉಗರಾಡಿ । ನಾರಿಯೋರು
ಆಗೊಂದು ಮಾತಾ ನುಡದಾರೆ

“ನಮ್ಮ ಮಾದೇವಿಯ ಮೂರ್ತಕೆ ತಂದಾಚಿಗರಾ
ನೀ ಎಂತಕೆ[೨೯] ಜೋಗಿ ಉಗರಾಡದ್ಯೋ”[೩೦]
ಚಿಗ್ರಾಕಾಣದೆ ಹನ್ನೆಯ್ದು ವರಸಾದೊ
ಕಂಡಲ್ಲಿಟ್ಟುಚಿಗ್ರಾ ತಳಕಂಡೆ । ಅಂಬದ್ನು ಬಿನ್ನಾಣಿ
ತಾ ಮುಂದೆ ಬಂದೇ ಕುಳತಾನೆ । ಬಿನ್ನಾಣಿ

೨೬. ನಡುವೆ ೨೭. ಸೇಸಕ್ಕಿ ೨೮. ಸುಗಂಧದಎಣ್ಣೆ ೨೯. ಏತಕ್ಕೆ ೩೦. ಉದ್ದಿಕೊಂಡೆ?

ಮಾದೇವಿ ಸಿರ್ವನ್ನಿ ಗೆಯಿದಾನೆ.
ಮಾದೇವಿ ಸಿರ್ವನ್ನಿ ಗೆಯ್ವದ್ನು ಜೋಗಿಯು
ತಾನಿಟ್ಟು ಪನ್ನೀ ಗೆಯೀಕಂಡೇ । ನಾರಿಯೋರು
ಆಗೊಂದು ಮಾತಾ ನುಡೀದಾರೆ.

"ನಮ್ಮ ಮಾದೇವಿ ಮೂರ್ತಕೆ ತಂದಾ ಬಿನ್ನಾಣಿ
ನೀ ಎಂತಕೆ ಪನ್ನೀ ಗೆಯೀಕಂಡ್ಯೋ"
"ಪನ್ನೀ ಕಾಣದೆ ಹನ್ನೆಯ್ಡು ವರಸಾದೊ
ಕಂಡಲ್ಲಟ್ಟು ಪನ್ನೀ ಗೆಯೀಕಂಡನೇ । ಅಂಬುದನು
ಪನ್ನೀಯ ಕೆಲಸಾ ಮುಗೀದಾವೆ
ಅಯ್ದುಮಂದ್ ಬಾವ್‌ದಿರು ಅಯ್ದು ಬಂದಿಯನಿಟ್ಟೇ
ಜೋಡಲಿ ಕೊಡಪನವಾ ತಡದರಿಯೇ । ಬಾವಾದಿರು
ರನ್ನದೊಂದೀಳ್ಯ ತಡದಾರಿಯೇ । ಬಾವಾದಿರು
ಮೂಡನೆಗ್ಗರಿಗೇ ನೆಡದರಿಯೇ । ಬಾವಾದಿರು
ಹೆಗ್ಗೆರೆ ತಡಿಯಲ್ಲಿ ನಿಲೂವಾರೇ

"ಒಂದು ಸಿಂಗಾರುಸಿ ಒಂದು ಈಳ್ಯದ ಪಟ್ಟಿ
ಒಪ್ಪಿತೆ ಗಂಗಾತಾಯೆ ನಿನ್ನಾ ಚಾಜಾ । ಗಂಗಾತಾಯೆ
ತುಂಬಿಕೊಡೆ ಚಂಬೂ ಕೊಡಪಾನಾ । ನಾವಿನ್ನು
ತುಂಬುವೊ ಕೀಲು ಕಳಸಾಕೆ । ಮಿಕ್ಕಿದನೀರಾ
ಹಾಲಿಸಸಿಗೊಯ್ದೇ ಸಲಗೂವೊ."
ಹಾಲಿಯಾ ಸಸಿಬಂದೊ ಈಲಿಯಾ ಮಣೆಬಂದೊ
ಅಂದಾಚಂದದಲೆ ಮಣೆಬಂದೊ । ಮಾದೇವಿ

ಏಳ್ಯಾ ಮೂರುತವೇ ಒದಗೇಬಂದೊ
ಎಳ್ಯಾಮೂರುತವೇ ಒದಗೇಬಂದೊ ಮಾದೇವಿತಾಯಿ
ತಾಳೀ ಬಂದೀಯ ತಡಕಂಡೇ
ಸುತ್ತಣದೇವರಿಗೂ ಸರಣಂದೇ । ಮಾದೇವಿತಾಯಿ
ಬಂದೇ ಕಳ್ಸ್ ನೀರಿಗೆ ಅರಗಾಳೆ
ಬಂದೇ ಕಳ್ಸ್‌ನೀರಿಗೆ ಅರಗ್ವದ್ನು ಜೋಗಿಯು
ತಾನಿಟ್ಟು ಕಳ್ಸ್‌ನೀರಾ ತಳಕಂಡೇ । ತಾಯಿಯು
"ನಮ್ಮಮಾದೇವಿ ಮೂರ್ತಕ್ ತಂದಾ ಕಳ್ಸ್‌ನೀರಾ
ಜೋಗಿ ನೀ ಎಂತಕೆ ತಳಕಂಡ್ಯೋ"

"ಕಳ್ಸ್‌ನೀರಾ ಕಾಣದೇ ಹನ್ನೆಯ್ಡುವರಸಾದೊ
ಕಂಡಲ್ ನಿತ್ ಕಳ್ಸ್ ನೀರಾ ತಳಕಂಡ್ನೇ । ಅಂಬುದ್ನು ನಾರಿಯೋರು

ಮಾದೇವಿಯ ಕರಕಂಡೇ ನೆಡದಾರೆ । ನಾರಿಯೋರು
ಮಾದೇವಿಗೆ ನೀರಾ ಎರದಾರೆ
ಮಾದೇವಿಗೆ ನೀರಾ ಎರ್ವದ್ನು ಜೋಗಿಯು
ತಾನಿಟ್ಟು ನೀರಾ ಎರಕಂಡೆ । ನಾರಿಯೋರು
ನಮ್ಮ ಮಾದೇವಿಯ ಮೂರ್ತದಾ ನೀರಾ
ನೀ ಎಂತಕೆ ಜೋಗಿ ಎರಕಂಡ್ಯೋ" । ಅಂಬುದ್ನು

"ಮೂರ್ತ್ ನೀರ ಕಾಣದೆ ಹನ್ನೆಯ್ದು ವರಸಾದೊ
ಕಂಡಲ್ ಇಟ್ ಮೂರ್ತ ನೀರಾ ಎರಕಂಡ್ನೇ"
ಬಳ್ದಿಮಿಂದ ಮಾದೇವಿಗೆ ಬಂದವೇ ಜಫ್ಪೀದಿಂಡು
ಮೂಡಣರಜಿಣರಾ ಜವಳಿಯೋ
ಮೂಡಣರ ಜಿಣರಾ ಜವಳಿ ದಿಂಡಿನ ಮೆನೇ

ಪಾದಾ ಚಳಿ ಉದ್ದೇ ಮಡಗಿರಸೇ । ನಾರಿಯೋರು
ಪಟ್ಟೀ ನೆರಿ ಹೊಯ್ದೇ ಉಡಸರಿಯೇ । ನಾರಿಯೋರು
ಮಾದೇವಿ ಸಿರ್ಮುಡಿಯಾ ಸೆಳ್ದ ಕಟ್ಟೇ । ನಾರಿಯೋರು
ಎಳಿಯಾ ಸಿಂಗರವಾ ಮುಡಿಸರಿಯೇ । ನಾರಿಯೋರು
ನುಸಲಿಗೆ ಸಿರಿಗಂದಾ ಇಡೋವಾರೆ । ನಾರಿಯೋರು
ಮಾದೇವಿ ಕರಕಂಡೇ ಬರೋವಾರೆ । ಮಾದೇವಿ
ಬಂದೀ ಬಾಗಲ್ಲೇ ನಿಲೋವಾಳೆ

ಆರಂಕಣ ಅರಮನೆ ಮೂರಂಕಣ ಮುಚ್ಚೀಲಾ
ಹನ್ನೆಯ್ದಂಕಣದಾ ಅರಮನೆ । ಒಳಗಿದ್ದೆ
ತಾಯವ್ವಾರತೀಯಾ ತರೋವಾಳೆ
ತಾಯವ್ವಾರತಿಯಾ ತರುವದ್ನು ಮಾದೇವಿ
ಆರತಿಗೊಮ್ಮೆ ಸರಣಂದೇ । ಮಾದೇವಿ
ಮಾಳೂಗಿ ಒಳಗೆ ನೆಡದಾಳೆ । ಮಾದೇವಿ
ದೇವರ ಬುಡಕೋಗೇ ನಿಲೋವಾಳೇ

"ಒಳಗಿದ್ದಪ್ಪಯ್ಯ ಒಳಗೇನ ಮಾಡೂತೀ
ಹಣ್ಣು ಈಳ್ಯವ ತೆಗತಾರೋ । ನಿನ್ನಾಲುಮಗಳು
ದೆವರ ಸೆವ್ಯಕೆ ಬರೂತದೆ.
ಒಳಗಿದ್ದಪ್ಪಯ್ಯ ಒಳಗೇನ ಮಾಡೂತೀ
ಕಾಯಾ ಕತ್ತೀಯ ತೆಗತಾರೋ । ನಿನ್ನಾಲುಮಗಳು
ದೆವರ ಸೆಯಕೆ[೩೧] ಬರೂತದೆ" ಅಂಬುದ್ನು ಇಸ್ರರು

೩೧. ಸೇವೆಗೆ

ತೇದಿ ಗಂದವಾ ಇಡವಾರೇ । ಇಸರರು
ಹಣ್ಣು ಈಳ್ಯವಾ ಹೊರುಗಾರೆ । ಇಸರರು
ದೀಪ ದೂಪೆಲ್ಲಾ ಕಸೀದಾರೆ । ಇಸರರು
ತೆಂಗಿನೆಳಗಾಯಾ ಒಡದಾರೆ । ಇಸರರು
ಕಪರದಾರತೀಯಾ[೩೨] ಬೆಳಗಾರೆ
ಕಪರದಾರತಿಯಾ ಬೆಳಗ್ವದ್ನು ಮಾದೇವಿ
ದೆವರಿಗೆ ಕಯ್ಯಾ ಮುಗುದಾಳೆ
ದೆವರಿಗೆ ಕಯ್ಯಾ ಮುಗುವದ್ನು ಜೋಗಿಯು
ದೆವರಿಗೆ ಕಯ್ಯಾ ಮುಗುದಾನೆ.

ದೆವರಿಗೆ ಕಯ್ಯಾ ಮುಗುವದ್ನು ಇಸ್ರರು
ಮಾದೇವಿಗೆ ಪರ್ಸದಾ[೩೩] ಕೊಡೋವಾರೆ.
ಮಾದೇವಿಗೆ ಪರ್ಸದಾ ಕೊಡುವದ್ನು ಮಾದೇವಿ
ಮಾಳೂಗಿ ಒಳಗೆ ನೆಡದಾಳೆ । ಮಾದೇವಿ
ಹಸಗರದಲ್ಲೇ ಕುಳತಾಳೆ
ಹಸಗರದಲ್ಲೇ ಕುಳುವದ್ನು ಕವ್ಲರದಿಬ್ಣಾ
ಬಾಳಿಬನದಲ್ಲೆ ಬರೋವಾದೆ ।
ಬಾಳಿಬನದಲ್ಲೆಬರುವಾದೆ ಕವ್ಲರದಿಬ್ಣಾ

ಬಂದೀ ಬಾಗಲ್ಲೆ ನಿಲೋವಾದೆ
ಬಂದೀ ಬಾಗಲ್ಲೆ ನಿಲುವದ್ನು ಇಸ್ರರು
ಓಡಾಡೇ ನೀರಾ ಹೊರುವರು
ಓಡಾಡೇ ನೀರಾ ಹೊರುವದ್ನು ಜೋಗಿಯು
ಆಗೊಂದು ಮಾತಾ ನುಡೀದಾನೆ
"ಹುಟ್‌ದಲ್[೩೪] ಅಣತಮ್‌ದಿರಿಲ್ಲ್ವೋ[೩೫] ಕೊಟ್ಟಲ್ ಅಳಿಯಾದಿರಿಲ್ಲ್ವೊ

ನೀವೊಬ್ಬರೇ ನೀರಾ ಹೊರವರಿ । ಅಂದೇಳಿ
ಓಡಾಡೇ ನೀರಾ ತರೋವಾನೆ.
"ಕರಾಗೆದ್ದಿಲಿ ಬಂದೀ ಕಾಲುಕೆಸರಾಗದೆ
ಚಂದಾಗೇ ಕಾಲಾ ತೊಳಕಣಿ" । ಅಂದೇಳಿ
ಓಡಾಡೇ ನೀರಾ ಹೊಯೀದಾನೆ
ಓಡಾಡೇ ನೀರಾ ಹೊಯ್ವದ್ನು ಕವ್ಲರು
ಬಂದೀ ಬಾಗಲ್ಲೇ ನಿಲುವಾರು
ಬಂದೀ ಬಾಗಲ್ಲೇ ನಿಲುವದ್ನು । ಇಸ್ರರ ಮಡದೀ

೩೨. ಕರ್ಪೂರದಾರತಿಯನ್ನು ೩೩. ಪ್ರಸಾದ ೩೪. ಹುಟ್ಟಿದಲಿ ೩೫. ಅಣ್ಣತಮ್ಮಂದಿರಿಲ್ಲವೆ

ಆರತಿ ತೆಕ್ಕಂಡೀ ಬರೂವಾಳೇ
ಆರತಿ ತೆಕ್ಕಂಡೀ ಬರುವದ್ನು ಕವ್ಲರು
ಆರತಿಗೊಮ್ಮೆ ಸರಣಂದಿ । ಕವ್ಲರು
ಮಾಳೂಗಿ ಒಳಗೆ ನೆಡದಾರೆ । ಕವ್ಲರು
ಮಂಟಪದಲ್ಲೇ ಕುಳತಾರೆ । ಕವ್ಲರು
ಪಟ್ಟೀಯ ಸೀರಿ ತೆಗದಾರೆ
ಪಟ್ಟೀಯ ಸೀರಿ ತೆಗ್ವದ್ನು ಕವ್ಲರ

ಪಟ್ಟೆಲ್ಲ ಕುಂಕುಮದ ಹೊಡಿಯಾಗೆ[೩೬]
ಪಟ್ಟೆಲ್ಲ ಕುಂಕುಮದ ಹೊಡಿಯಾಗುತ್ನು ಕವ್ಲರು
ಚಿನ್ನದ ಕಯ್ದುಗಿಯ ತೆಗದಾರೆ । ಕವ್ಲರು
ಚಿನ್ನೆಲ್ಲ ಸಾಸಮಿಯ ಹೊಡಿಯಾಗೆ । ಕವ್ಲರು
ಎಳಿಯ ಸಿಂಗರವ ತೆಗದಾರ
ಹೂಂಗೆಲ್ಲ ಸಾಸಮಿಯ ಹೊಡಿಯಾಗೇ । ಕವ್ಲರು
ಬೂಮಗೆ ಸೆರಿಯಾಗೆ[೩೭] ತಲಬಾಗೇ
ಬೂಮಿಗೆ ಸೆರಿಯಾಗೆ ತಲ್ಬಾಗುತ್ನು ಜೋಗಿಯು
ಆಗೊಂದು ಮಾತಾ ನುಡೀದಾನೆ

"ಅದು ಏನು ಕವ್ಲರೆ ತಲಬಾಗೇ ಕೂತಿರಿ
ನನ್ನ ಕೂಡದೆ ಬಡಪಟ್ಟಿ । ಕವ್ಲರೆ
ಉಡ್‌ಸ್‌ಬೇಕಾರ್ ದಾರೀ ಎರಕಣಿ[೩೮] ।" ಅಂದೇಳಿ
ತನ್‌ಕಯ್ನಾ ಪಟ್ಟೀ ಕೊಡೋವಾನೆ
"ಅದು ಏನು ಕವ್ಲರೆ ತಲಬಾಗೇ ಕೂತಿರಿ
ನನ್ನಾ ಕೂಡದೆ ಬಡಚಿನ್ನಾ । ಕವ್ಲರೆ

ಇಟ್ಕಾಬೇಕಾರ್ ದಾರೀ ಎರಕಣಿ" । ಅಂದೇಳಿ
ಜೋಗಿ ಕಯ್ನಚಿನ್ನಾ ಕೊಡೋವಾನೆ
ಅದು ಏನು ಕವ್ಲರೆ ತಲಬಾಗೇ ಕೂತಿರಿ
ನನ್ನಾ ಕೂಡದೆ ಬಡಾಹೂಂಗು । ಕವ್ಲರೆ.
ಮುಡಿಸ್ಕಾಬೇಕಾರೆ ದಾರೀ ಎರಕಣಿ" । ಅಂದೇಳಿ
ತನ್‌ಕೂಡ್ನ[೩೮] ಹೂಂಗಾ ಕೊಡೋವಾನೆ
"ಅದು ಏನು ಕವ್ಲರೆ ತಲಬಾಗಿ ಕೂತಿರಿ
ನನ್ನಾ ಕೂಡದೆ ಬಡಾತೊಂಡ್ಲಾ । ಕವ್ಲರೆ
ಇಟ್ಕ ಬೇಕಾರೆ ದಾರೀ ಎರಕಣಿ" । ಅಂದೇಳಿ

೩೬. ಹುಡಿಯಾಗಿದೆ ೩೭. ಸರಿಯಾಗಿ ತಿಳಿಧಾರೆಯೆರೆದುಕೊಳ್ಳಿ ೩೮. ತನ್ನ ಹತ್ತಿರದ

ತನ್‌ಕಯ್ನ ತೊಂಡ್ಲಾ ಕೊಡೋವಾನೆ
ಮುತ್ತನ ತೊಂಡಲಾ ಕೊಡುವದ್ನು ಕವ್ಲರು
ಮಾಳೂಗಿ ಒಳಗೆ ನೆಡದಾರೆ । ಕವ್ಲರು
ಮಾದೇವಿಗೆ ಪಟ್ಟೀ ಉಡಸಾರೆ । ಕವ್ಲರು
ಮಾದೇವಿಗೆ ಚಿನ್ನಾ ಇಡೋವಾರೆ । ಕವ್ಲರು
ಮಾದೇವಿಗೆ ಹೂಂಗಾ ಮುಡಸ್ವಾರೆ । ಕವ್ಲರು
ಮಾದೇವಿಗೆ ತೊಂಡಲ ಇಡೋವಾರೆ । ಕವ್ಲರು
ಲಾಗೊಂದು ಮಾತಾ ನುಡೀದಾರೆ

“ದಾರಿಎರ್ವಂಗೆ ಜೋಗಿ ಇಟ್‌ಕಣಬಾರಾ
ಪಡಿಯಾ ಕೊಟ್ಟವ್ನಾ ಕಳಗೀರಿ"
ಅಟ್ಟಂಬ ಮಾತಾ ಕೇಳಾರೆ ಇಸರರು
ಪಡಿಯಾ ತಕ್ಕಂಡೇ ಬರೋವಾರೆ । ಇಸರರು
“ಇಕ್ಕೊಳ್ಳೊ ಜೋಗೀ ಪಡೀದಾನಾ"
“ನಿಮ್ಮಾ ಕಯ್‌ಪಡಿಯಾ ಮುಟ್ಟು ಜೋಗಿಯಲ್ಲ
ಮಾದೇವಿ ಕಯ್‌ಪಡಿಯೇ ಬರಬೇಕೆ"

ಮಾದೇವಿ ಕಯ್‌ಪಡಿಯೇ ಬಂದದ್ದುಂಟಾದಾರೆ
ತೆಕ್ಕಂಡಿ ತನ್‌ಮಟಕೆ ನೆಡೀತೀನೋ ।
ಏನೂ ಹೇಳದ್ರೂ ಕೇಳ್‌ನಂದ್ ಇಸ್ರರು
ಮಾದೇವಿ ಕಯ್ಲ್ ಪಡಿಯಾ ಕೊಡೋವಾರೇ
ಮಾದೇವಿ ಕಯ್ಲ್ ಪಡಿಯಾ ಕೊಡುವದ್ನು ಮಾದೇವಿ
ಬಂದೀ ಬಾಗಲ್ಲೇ ನಿಲೋವಾಳೇ । ಮಾದೇವಿ
ಇಕ್ಕೊಳ್ಳೊ ಜೋಗಿ ಪಡೀದಾನಾ । ಅಂಬುದ್ನು
ಹಗಲಂಬುದಿರುಳಾ ನೆನಸಾನೆ ।

ಹಗಲಂಬುದಿರುಳಾ ನೆನಸಾನೆ ಜೋಗಿಯು
ಮಾದೇವಿ ನೆಕ್ಕಂಡೇ ನೆಡದಾನೆ । ಜೋಗಿಯು
ಬಾಳೀ ಬನದಲ್ಲೇ ಇರೋವಾನೆ.
ಬಾಳೀ ಬನದಲ್ಲೆ ಇರ್ವದ್ನು ಕವ್ಲರು
ಬೂಮಿಗೆ ಸರಿಯಾಗೇ ತಲಬಾಗೇ.
ಬೂಮಿಗೆ ಸೆರಿಯಾಗಿ ತಲಬಾಗುತ್ನು ಇಸರರು
ಆಗೊಂದು ಮಾತಾ ನುಡೀದಾರೆ

---

೩೯. ಮಾಯೆಯಲ್ಲ

"ಅವ್ವಾ ಮಾಯ್ಕವಲ್ಲ[೩೯] ಇವ್ವಾ ಮಾಯ್ಕವಲ್ಲ
ಲಕ್ಮಣನ ಮಾಯಕವೇ ಹಿರಿದಾದೊ । ಅಂದೇಳಿ
ಆಡೂಕೊದ್ ಪಾರ್ವತಿಯ ದೆನಿದೂರೇ । ಇಸ್ರರು
ಕಾಲುಗ್ರು ಮುರಿಲಿಲ್ಲಾ ಕಯ್ಯುಗ್ರು ಮುರಿಲಿಲ್ಲಾ
ಯಾವ ಸಾಯಿತ್ರೂ[೪೦] ನಮಗಿಲ್ಲ । ಪಾರ್ವತಿಯ

ಗೋಳೋಗೇ ಲಕ್ಮಣ್ಗೇ ಅರಗಲಿ । ಅಂದೇಳಿ
ತಂದೀ ಮಂಟಪಲೆ ಕುಳೂಸಾರೆ
ಚಲಕೇ ಚೊಳಚೀಕದ್ರು ಕುಲಕೇ ತುಂಬಿಹೂಂಗು
ಕೆಂದೀಯಾ ಕರ್ದೀ ನೊರಿಹಾಲು । ಲಾ । ಗಿಂಡೀತುಂಬೀ
ಚೊಳಚೀಯಾ ಮೆನೇ ಮಡಗಾರೆ । ಹೆಣ್ಣಿನಪ್ಪಾ
ಹೊತ್ತಾನೆ ಹೊನ್ನಾ ಮುಡಿಮೆನೆ ।
ಹೊತ್ತಾನೆ ಹೊನ್ನ ಮುಡಿಮೆನೆ ಹೆಣ್ಣೀನಪ್ಪ

ಕಾವಣದಲ್ಲೇ ನಿಲೋವಾನೇ
ಎಡದಾ ತೊಡಿಮನೆಮೆ ಅಳಿಯಾ ಬಲದಾ ತೊಡಿಮೆನೆ ಮಗಳು
ಸಿರಿಗಂಗೀಗೌರಿ ತೊಡಿಯಾ ಮೆನೆ । ಕುಳ್ಳಿಸಿಕಂಡಿ
ಜಯ್‌ವಂದೇ ದಾರೀ ಎರದಾನೆ
ದಾರೀ ಎರ್ದಪ್ಪಾ ಮಾಳಗ್ಗೆ ಹೋಗಾನೆ
ಆನಂದದ ಗೆರೆ ಇರಳೀಯೇ । ಕಾಮನ ಬಯ್ಲಾ

ತೋರಿ ಉಂಬಳಿಯಾ ಕೊಡೋವಾನೇ
ಮಾಳೂಗಿ ಒಳಗೆ ಹತ್ತು ತಂದಾ ಸಿಕ್ಕಾ
ಹತ್ತಕ್ಕೆ ಹತ್ತು ಕಿರುನಳ್ಳಿ । ಕಂಚೇನುಟ್ಟು[೪೦]
ಮಗಳೀಗೆ ಬಲವರಿಯಾ ಕೊಡೋವಾನೆ
ಮಾಳೂಗಿ ಒಳಗೆ ಅರುತಂದಾ ಸಿಕ್ಕಾ
ಆರಕ್ಕೆ ಆರು ಕಿರುನಳ್ಳಿ । ಕಂಚೇನುಟ್ಟು
ಮಗಳಿಗೆ ಬಳವರಿಯಾ ಕೊಡೋವಾನೆ
ಮಾಳೂಗಿ ಒಳಗೆ ಅಡ್ಡಾಗೊಡಿಯ ಮೆನೆ

ಮುದ್ದಕ್ಕನಂಬಾ ಹರಿವಾಳ
ಕಂಬು ಸಂದಕದಿಂದೆ ಸರ್ವವಾದೀದಿಂದೆ
ಕವ್ಲರ ದಿಬ್ಬಣವೇ ಸವನದೆ
ಕಂಬು ಸಂದಕದಿಂದೆ ಸರ್ವವಾದೀದಿಂದೆ

---

೪೦. ಶಾಸ್ತ್ರವೂ   ೪೦. ಕಂಚಿನ ಸವಟು

ಪಾರ್ವತಿ ದಿಬ್ಬಣವೆ ಸವನದೆ
ಪಾರ್ವತಿ ದಿಬ್ಬಣವೆ ಸವ್ನಿ ಸುಂಗಾರಾಗಿ

ಒಟ್ಟಾಗ್ ಬಂದಾನಿ ನೆಗದಾರೆ । ಕವ್ಲರದಿಬ್ಣಾ
ತಮ್ಮಾ ಅರಮನಗೇ ನೆಡದಾರೆ.
ತಮ್ಮಾ ಅರಮನಗೇ ನೆಡ್ವದ್ನು ಜೋಗಿಯು
ಕೆದೂರಿ ಬನವಾ ಇಳೀದಾನೆ । ಜೋಗಿಯು
ಆಗೊಂದು ಮಾತಾ ನುಡೀದಾನೆ.
"ಜೋಗಿ ಅಂಬೆಸ್ರು ಇಲ್‌ಗಿಂದ್ ಇತ್ತಾಗಿರ್ಲೆ
ಲಕ್ಮಣನಂಬೆಸ್ರು ನೆಡಿಯಾಲೆ ।
ಲಕ್ಮಣನಂಬೆಸ್ರು ನೆಡಿಯಾಲಂದ್ ಲಕ್ಮಣ್ಣಾ
ಕೆದೂಗಿ ಬನ್ವಾ ಇಳೀದಾನೆ । ಲಕ್ಮಣ್ಣಾ
ಕೆದೂಗೊಂದೊಲಿ ಒಗದಾನೆ । ಲಕ್ಮಣ್ಣಾ
ಸೆಳ್ಳುಗರೀಲೊಲಿ ಬರದಾನೆ

"ಜೀವಕೆ ರೊಗಾದ್ರೆ[೪೧] ಬಾಯೇನೆಡಿಯಾವೊ
ಬಾಡಿ ಹೋಗುವಾ ಎಳಿಎಲೆ । ಹಣ್ಣಡಕೀಯಾ
ನೀಡುವಾಕೇನು ಎಡಿಯಾವ್ರೋ[೪೨] । ಮಾವನೆ
ದಾರೀ ಅಂಬೂದಾ ಎರದೋಗೊ" ಅಂದ್
ಸೆಳ್ಳುಗರೀಲೊಲಿ ಬರದಾನೆ । ಲಕ್ಮಣ್ಣಾ
ತನ್ನಾ ಗಿಳಿಗೋಳಾ ದೆನಿದೂರೇ ।

ಇಂದೂ ಕರ್ದಂವಲ್ಲ ಬಂದಾವೇ ಗಿಳಿಗೋಳು
ನಿಂದವೇ ಲಕ್ಮಣ್ಣಾ ಒಡನಲ್ಲೇ । ಮಾವನ ಕಯ್ಲಿ
ದಾರೀ ಅಂಬೂದಾ ಎರದೋಗೋ" । ಅಂದ್
ಕೊಟ್ಟಾನೆ ಕಯ್ಯಾ ಬರದೊಲೆ
ಕೊಟ್ಟ ವಾಲೀಯಾ ರಟ್ಟಿಯಲ್ ಅಡಗಸಕಂಡೇ

ಹಾರಿದವಂಬರಕೇ ಸೆರಿಯಾಗಿ । ಗಿಳಿಗೋಳು
ಇಸ್ರರರ ಮನಗೇ ನೆಡದಾವೇ । ಗಿಳಿಗೋಳು
ಬಂದೀ ಮಿಳಿಮೆನೇ ಕುಳತಾವೇ । ಇಸರರು
ವಾಲಗ್ಗುಂಡಾರೆ ಹಸಿಯಲ್ಲೆ । ಗಿಳಿಗೋಳು
ಆಗೊಂದು ಮಾತಾ ನುಡೀದಾರೆ ।

---

೪೧. ರೋಗವಾದರೆ   ೪೨. ತೊಂದರೆ ?

"ಜೀವಂಕೆ ರೋಗಾದ್ರೆ ಬಾಯೇನೆಡಿಯಾವೋ
ಬಾಡಿಹೋಗುವಾ ಎಳಿಎಲೆ । ಹಣ್ಣಡಕೀಯಾ
ನೀಡುವಾಕೇನು ಎಡಿಯಾವೋ । ಮಾವನೆ
ದಾರೀ ಅಂಬೂದಾ ಎರ್ದೋಗೋ । ಅಂದೇಳಿ

ಕೊಟ್ಟಾರೆ ಕಯ್ಯಾ ಬರದೊಲೆ
ಕೊಟ್ಟಾ ಒಲೀಯಾ ತಟ್ಟಾನೆ ತಡ್ದಾರೆ
ಕೊಟ್ಟಾ ವಾಲೀಯಾ ದುಟ್ಟೆತ್ತಿ ನೋಡಾರೆ
ಪನ್ನೀ ಮರಿಯಲ್ಲೇ ಮುಗುಳು ನೆಗ್ಗೆ । ಆಡೀತಾ

ಮಾಳೂಗಿ ಒಳಗೇ ನೆಡದಾರೆ । ಇಸರರು
ಹಾಲ್ತಟ್ಟೀಲ್ಹಾಲಾ ಎರದಾರೆ । ಇಸರರು
ಬಾಳೀ ಹಣ್ಣೇಳಾ ಸೊಲೀದಾರೆ । ಇಸರರು
ಹಾಲೊಳಗಣ್ಣಾ ನುರೀದಾರೆ । ಇಸರರು
ಮಾಳಗ್ಗಿಂದೆರಗೇ ಬರೋವಾರೆ । ಇಸರರು
ಗಿಳಿಗೋಳೊಡನೋಗೆ ನಿಲೋವಾರೆ ।
ಗಿಳಿಗೋಳೊಡನೋಗಿ ನಿಲುವಾರೆ ಇಸರರು

ಗಿಳಿಗೋಳಿಗ್ ಹಾಲಾ ಕೊಡೋವಾರೆ
ಗಿಳಿಗೋಳಿಗ್ ಹಾಲಾ ಕೊಡುವದ್ನು ಗಿಳಿಗೋಳು
ರಟ್ಟೆ ಅಲ್ಲಾಡೇ ಕುಡೀದಾವೇ
ಹಾಲಾ ಕುಡ್ದವೇ ಗಿಳಿಗೋಳು ಹಣ್ಣಾ ಮೆದ್ದವೇ ಗಿಳಿಗೋಳು
ಇಸರರ ರಾಜ್ಯಾ ಗಳೀದಾವೇ
ಇಸರರ ರಾಜ್ಯಾ ಗಳವದ್ನು ಇಸ್ರರು
ಮಾಳೂಗಿ ಒಳಗೇ ನೆಡದಾರೆ ।

ಮಾಳೂಗಿ ಒಳಗೆ ನೆಡದಾರೆ ಇಸರರು
ಮೆಟ್ಟಿ ಬೀಗವಾ ಕರೀದಾರೆ । ಇಸ್ರರು
ಮುಚ್ಚೀಲ ತಗದೇ ಕಡಗಿಕ್ಕೆ । ಇಸರರು
ಮುತ್ನ ಮುಂಡಸ್ನಾ ತಲಗ್‌ಸುತ್ತೇ । ಇಸರರು
ಪಟ್ಟೆ ಜೋತರವಾ ನೆರದುಟ್ಟೇ । ಇಸರರು
ಕೋಲು ನೆವಳವಾ ಇಳಬಿಟ್ಟೇ । ಇಸರರು
ಪಟ್ಟೆ ಹಚ್ಚಡವಾ ಹೊಗಲೀಗೆ
ಪಟ್ಟೆ ಹಚ್ಚಡವಾ ಹೊಗಲಿಗೆ ಹಾಯಿಕಂಡೆ

ಮಾಳಗ್ಗಿಂದೆರಗೇ ನೆಡದಾರೆ । ಇಸ್ರರು
ರಾಜಂಗ್ಯ ಮೆಟ್ಟಾ ಇಳದಾರೆ । ಇಸರರು
ಬಾಳೀಯ ಬನವಾ ಇಳದಾರೆ । ಇಸರರು
ಲಕ್ಮಣ್ಣಾ ಒಡನೋಗೇ ನಿಲೋವಾರೆ
ಲಕ್ಮಣ್ಣಾ ಒಡನೋಗೇ ನಿಲುವದ್ನು ಲಕ್ಮಣ್ಣಾ
ಮುತ್ತೀನಾ ಬಾಸಿಂಗಾ ಮುಡೀದಾನೆ । ಇಸ್ರರು

ಲಕ್ಮಣ್ಣಾ ಕರ್ಕಂಡೇ ಬರೋವಾರೇ । ಇಸ್ರರು
ಮಾದೇವಿ ಕರ್ಕಂಡೇ ಬರೋವಾರೆ । ಇಸರರು
ಬಂದೀ ಮಂಟಪಲೆ ಕುಳಸಾರೆ
ಚಲಕೇ ತೊಳ್ಚಿ ಕದ್ರು ಕುಲ್ಕೇ ತುಂಬೀ ಹೂಂಗು
ಕೇಂದಿಯಾ ಕರ್ದೇ ನೊರಿ ಹಾಲು । ಲ । ಗಿಂಡೀತುಂಬಿ
ಚೊಳಚೀಯಾ ಮೆನೇ ಮಡೂಗಾರೆ । ಇಸ್ರರು
ಹೊತ್ತಾರೆ ಹೊನ್ನಾ ಮುಡಿಮೆನೆ

ಎಡದ ತೊಡಿಮೆನೆ ಅಳಿಯಾ ಬಲದಾ ತೊಡಿಮೆನೆಮಗಳು
ಸಿರಿಗಂಗೀ ಗವರೀ ತೊಡಿಯಾಮೆನೆ । ಕೂರಿಸಿಕಂಡಿ
ಜಯ್‌ವಂದೇ ದಾರೀ ಎರದಾರೆ
ಚಪ್ಪರದಲ್ಲೇ ಹತ್ತು ತರದಾ ಕಂಬೋ
ಹತ್ತಕ್ಕೆ ಹತ್ತು ಗುರುಗೋಳು । ಬಟ್ಟಕ್ಕೋಳು
ಹೊತ್ತಾ ನೋಡ್ ದಾರೀ ಎರದಾರೆ
ಕಾವಾಣದಲ್ಲೆ ಆರು ತರದಾ ಕಂಬೋ

ಆರಕ್ಕೆ ಆರು ಗುರುಗೋಳು । ಬಟ್ಟಕ್ಕೋಳು
ಎಳೀ ನೋಡ್ ದಾರೀ ಎರದಾರೆ
ಮಾಳೂಗಿ ಒಳಗೆ ಹತ್ತು ತರದಾ ಸಿಕ್ಕಾ
ಹತ್ತಕ್ಕೆ ಹತ್ತು ಕಿರುನಳ್ಳಿ । ಕಂಚೀನುಟ್ಟು
ಮಗಳಿಗೆ ಬಳವರಿಯಾ ಕೊಡೋವಾರೆ
ಮಾಳೂಗಿ ಒಳಗೆ ಆರುತರದಾ ಸಿಕ್ಕಾ
ಆರಕ್ಕೆ ಆರು ಕಿರುನಳ್ಳಿ । ಕಂಚೀನುಟ್ಟು
ಮಗಳಿಗೆ ಬಳವರಿಯಾ ಕೊಡೋವಾರೇ
ಕೊಟ್ಟೊಗಿ ಒಳಗನ ಕಟ್ಟು[೪೩] ಮಣುಕೆಮ್ಮಿಯಾ[೪೪]
ಬಾಲಕೆ ಸವರ್ಣ ಗಳಸೀದಾ । ಎಮ್ಮಿಯಾ

೪೩. ಗಟ್ಟಿ   ೪೪. ಕರುಹಾಕದ ಎಳೆಯ ಎಮ್ಮೆ

ಮಗಳಿಗೆ ಬಳವರಿಯಾ ಕೊಡೊವಾರೇ
ಕೊಂಬು ಸಂದಕದಿಂದೆ ಸರ್ವವಾದೀದಿಂದೆ
ಮಾದೇವಿ ದಿಬ್ಬಣವೇ ಸವನದೆ[೪೫]
ಕೊಂಬು ಸಂದಕದಿಂದೆ ಸರ್ವವಾದೀದಿಂದೆ
ಲಕ್ಮಣ್ಣ ದಿಬ್ಬಣವೇ ಸವನದೆ
ಲಕ್ಮಣ್ಣ ದಿಬ್ಬಣವೇ ಸಿವ್ನೀ ಸುಂಗಾರಾಗಿ

ಒಟ್ಟಾಗೊಂದಾನೀ ನೆಗದತ್ತೀ । ಮಾದೇವಿ ಲಕ್ಮಣ್ಣಾ
ತಮ್ಮ ಅರಮನೆಗೇ ನೆಡದಾರೆ.
ಈ ಹಾಡಾ ಹೇಳೋರ್ಗೆ ಆಲಿಸಿ ಕೇಳ್ದೋರ್ಗೆ
ದನ ಕರೆಯಲೆ ದಾನ್ಯ ಬೆಳಿಯಲೆ । ಈ ಹಾಡಾ
ಚಿತ್ತಯ್ಲೀ ಕೇಳ್ದೋರು ಕಲಿಯಾಲೆ

ಈ ಹಾಡಾ ಹೇಳೋರ್ಗೆ ಸೆರ ದೆನಿ ಕೊಟ್ಟೋರ್ಗೆ
ಹಾದಿ ಗೊಕನದಾ ಸಿಣಗಂಗೆ । ತೀರುತವಾ
ಹೋಗಿ ಮಿಂದಟ್ಟೋ ಪಲಾಉಂಟೇ

ಗಿಂಡೀ ಗಿಂಡೀ ತುಂಬೇ ಗಿಂಡೀಲುದ್ಕಾ ತುಂಬೇ
ಗಿಂಡೀ ಬಾಯೀಗೆ ತರಳಾ ತುಂಬೇ । ಬೀ । ದಂತೆ
ತುಂಬಿರಲೆ ನಮ್ಮಾ ಮನಾದಲ್ಲೇ[೪೬] । ಈ ಹಾಡು
ಬರತಿರಲೇ ಹಬ್ಬಾ ಮೊದವೀಗೆ

ಚಂಬು ಚಂಬು ತುಂಬೇ ಚಂಬೀಲುದ್ಕಾ ತುಂಬೇ
ಚಂಬೀನಾ ಬಾಯೀಗೇ ತರಳಾ ತುಂಬೇ । ಬೀ । ದಂತೆ
ತುಂಬಿರಲೆ ನಮ್ಮಾ ಮನಾದಲ್ಲೇ । ಈ ಹಾಡು
ಬರತಿರಲೆ ಹಬ್ಬಾ ಮೊದವೀಗೆ

೪೫. ಹೊರಟದೆ   ೪೬. ಮನಸ್ಸಿನಲ್ಲಿ

ಕುಸುಮಾಲಿ

ಮಾಳೂಗಿ ಒಳಗೆ ಪಟ್ಟೆ ಮಂಚದ ಮೇನೆ
ಕಟ್ಟು ಕವಳಗೆಯ ಬೆಳಿ ಎಲೆ
ಕಟ್ಟು ಕವಳಗೆಯ ಬೆಳಿಎಲೆ ಮೆಲುವಂಗೆ
ದಳವಳ[೧] ಕಯ್ತಪ್ಪಿ ಉದೂರೀತೆ
ದಳವಳ ಕಯ್ತಪ್ಪಿ ಉದುರ್ವದ್ನು ದರ್ಮರ ಮಡದಿ
ಲಾಗೊಂದು ಮಾತಾ ನುಡೀದಾಳೆ
ಲಾಗೊಂದು ಮಾತಾ ಏನಂದಿ ನುಡಿದಾಳೆ

"ಯಾವ್ ನಾರಿ ಅಂದವೆ ಯಾವ್ ನಾರಿ ಚಂದವೆ
ಯಾವ್ ನಾರಿ ಮೆನೆ ಕಡುಮೋಹಾ"
"ಅಂದಕೆ ರೋಪತಿ ಚಂದಕೆ ಕುಸುಮಾಲಿ
ಕುಸ್ಮಾಲಿ ಮೆನೆ ಕಡುಮೋಹಾ"

"ತೊಟಾದಲ್ಲಿರುವಾ ತಾಟಗತಿ[೨] ಕುಸುಮಾಲಿ
ಜೋಗೀ ಜಂಗಮರಾ ಒಲುಮೆಯೆ"
ಅಟ್ಟಂಬಾ ಮಾತಾ ಕೇಳಾನೆ ಅರ್ಜೀಣಾ
ಕೂತಾ ಮಂಚವಾ ಜಡೋದೆದ್ದಿ
ಕೂತಾ ಮಂಚವಾ ಜಡ್ದೆದ್ದಿ ಅರ್ಜೂಣಾ
ಮಾಳೂಗಿ ಒಳಗೆ ನೆಡದಾನೆ

ಮಾಳೂಗಿ ಒಳಗೆ ನೆಡ್ದಾನೆ ಅರ್ಜೂಣಾ
ಅಟ್ಟಕೆ ಏಣೀ ಇಡೋವಾನೆ
ಅಟ್ಟಕೆ ಏಣೀ ಇಡ್ವಾನೆ ಅರ್ಜೂಣಾ
ಅಟ್ಟದ ಪೆಟ್ಟುಗಿಯ ತೆಗುವಾನೆ
ಅಟ್ಟದ ಪೆಟ್ಟುಗಿಯ ತೆಗ್ವಾನೆ ಅರ್ಜೂಣಾ
ಮೆಟ್ಟಿ ಬೀಗವ ಕರೀದಾನೆ

ಮೆಟ್ಟೀ ಬೀಗವ ಕರಿದಾನೆ ಅರ್ಜೂಣಾ
ಮುಚ್ಚೀಲಾ ತಗದಿ ಕಡಗಿಟ್ಟೆ

---

೧. ತಾಂಬೂಲ   ೨. ತಾಟಕಿಯಂದವಳು

ಮುಚ್ಚೀಲಾ ತಗದಿ ಕಡಗಿಟ್ಟಿ ಅರ್ಜುಣಾ
ಕಂತೆ ಜೋತರವಾ ನೆರದುಟ್ಟಿ
ಕಂತೆ ಜೋತರವಾ ನೆರದುಟ್ಟಿ ಅರ್ಜುಣಾ

ಕಂತೆ ನೆರಿಯಂಗಿ ಬುಜಕಿಟ್ಟಿ
ಕಂತೆ ನೆರಿಯಂಗಿ ಬುಜಕಿಟ್ಟಿ ಅರ್ಜುಣಾ
ಕಂತೆ ಮುಂಡೆಸಾ ತಲೆಸುತ್ತಿ
ಕಂತೆ ಮುಂಡೆಸಾ ತಲೆಸುತ್ತಿ ಅರ್ಜುಣಾ

ಸಣ್ಣ ಗಂಬಳಿಯಾ ಹೊಗಲೀಗಾ
ಸಣ್ಣ ಗಂಬಳಿಯಾ ಹೊಗಲೀಗಾಯಿಕಂಡಿ
ತನ್ನಾ ಕಯ್ಚುಂಚೀ ತಡದಾನೆ
ತನ್ನಾ ಕಯ್ಚುಂಚೀ ತಡ್ದಾನೆ ಅರ್ಜುಣಾ

ಈಬತ್ತಿ[1] ಉಂಡೀ ತಡದಾನೆ
ಈಬತ್ತಿ ಉಂಡೀ ತಡ್ದಾನೆ ಅರ್ಜುಣಾ
ರಾಗದ ಚೆನ್ನುಡಿಯಾ ತಡದಾನೆ
ರಾಗದ ಚೆನ್ನುಡಿಯಾ ತಡ್ದಾನೆ ಅರ್ಜುಣಾ

ಪೆಟ್ಟುಗಿ ಬಾಯಲ್ಲೇ ಮಡೂಗಾನೆ
ಪೆಟ್ಟುಗಿ ಬಾಯಲ್ಲೇ ಮಡುಗಾನೆ ಅರ್ಜುಣಾ
ಮಾಳಗ್ಗಿಂದೆರಗೇ ಬರೋವಾನೆ
ಮಾಳಗ್ಗಿಂದೆರಗೆ ಬರ್ವಾನೆ ಅರ್ಜುಣಾ

ರಾಜಂಗ್ಳ ಮೆಟ್ಟ್ಲಾ ಇಳೀದಾನೆ
ರಾಜಂಗ್ಳ ಮೆಟ್ಟ್ಲಾ ಇಳ್ದಾನೆ ಅರ್ಜುಣಾ
ಅಲ್ಲೊಂದು ಕೊಣತಾ ಕುಣದಾನೆ
ಕೊಣಿಯುತ ಕೊಣಿಯುತ ಮೆಣಕಾಲ ಜೆಜ್ಜರಿಯೂತ[2]

ರಾಗದ ಚೆನ್ನುಡಿ ದೆನಿಮಾಡಿ
ಅರ್ಜುಣ ನಂಬೆಸ್ರು ಇದರ್ಕಿಂದಿತ್ತಾಗಿರಲಿ
ಜೋಗಿ ಅಂಬೆಸ್ರು ನೆಡಿಯಾಲಿ
ಜೋಗಿ ಅಂಬೆಸ್ರು ನೆಡಿಯಾಲಿ ಅಂದೇಳಿ

ತಾಯ್ ಕುಂತಿ ಅರಮನಗೆ ನೆಡದಾನೆ
ತಾಯ್ ಕುಂತಿ ಅರಮನಗೇ ನೆಡ್ದಾನೆ ಆ ಜೋಗಿ

೧. ವಿಭೂತಿ ೨. ಕುಣಿಸುತ್ತ

ಹೋಗಿ ಬಾಗಲ್ಲೇ ನಿಲೋೀವಾನೆ
ಹೋಗಿ ಬಾಗಲ್ಲೆ ನಿಲ್ವಾನೆ ಆ ಜೋಗಿ

ಅಲ್ಲೊಂದು ಕೊಣತಾ[೩] ಕೊಣದಾನೆ[೪]
ಅಲ್ಲೊಂದು ಕೊಣತಾ ಕೊಣ್ದಾನೆ ಆ ಜೋಗಿ
ರಾಗದ ಚೆನ್ನುಡಿಯಾ ದೆನಿಮಾಡಿ
ರಾಗದ ಚೆನ್ನುಡಿಯಾ ದೆನಿ ಮಾಡ್ವದ್ನು ಒಳಗಿದ್ದ

ತಾಯ್ ಕುಂತೀ ಹೆರುಗೆ ಬರುವಾಳು
"ಕೊಣ್ತವ ಕಂಡರೆ ಹುಟ್ಟಿದ ಮಗ್ನ ಹೋಲುಮೆ[೫]
ಎತ್ತನ ರಾಜ್ಯವಾ ತಿರ್ಗಬಂದೆ?"

"ಎತ್ತನ ಕೋಡಲ್ವಾ ಒಡಹುಟ್ಟಿದ ಮಗತಾ ಸಯ್ಅಲ್ವ
ಸುತ್ತನ ರಾಜ್ಯವಾ ತಿರ್ಗಬಂದೆ
ಸುತ್ತನ ರಾಜ್ಯವಾ ತಿರ್ಗಬಂದೆ ತಾಯೆಕೇಳೆ
ಒಡಹುಟ್ದ ಮಗನಂದು ನೆನಸ್ವಾಳೆ"

ಅಟ್ಟಂಬಾ ಮಾತಾ ಕೇಳಾನೆ ಆ ಜೋಗಿ
ರಾಜಂಗ್ಳ ಮೆಟ್ಟಾ ಇಳೂದಾನೆ
ರಾಜಂಗ್ಳ ಮೆಟ್ಟಾ ಇಳ್ದಾನೆ ಆ ಜೋಗಿ
ಅಣ್ ದರ್ಮರರ ಮನಗೇ ನೆಡದಾನೆ
ಅಣ್ ದರ್ಮರರ ಮನಗೇ ನೆಡ್ದಾನೆ ಆ ಜೋಗಿ

ಹೋಗಿ ಬಾಗಲ್ಲೇ ನಿಲೋೀವಾನೆ
ಕೊಣಿಯುತ ಕೊಣಿಯುತ ಮೊಣಕಾಲ್ ಜೆಜ್ಜರಿಯೂತ
ರಾಗದ ಚೆನ್ನುಡಿಯಾ ದೆನಿಮಾಡಿ
ರಾಗದ ಚೆನ್ನುಡಿಯಾ ದೆನಿಮಾಡ್ವದ್ನು ಒಳಗಿದ್ದಾ
ಅಣ್ ದರ್ಮಾರೆರಗೇ ಬರೂವಾರು

"ಕೊಣ್ತವ ಕಂಡರೆ ಒಡಹುಟ್ಟಿದ ತಮ್ಮನೋಲುಮೆ
ಎತ್ತರ(ನ) ರಾಜ್ಯವಾ ತಿರ್ಗಬಂದೆ"

"ಹೋರಿ ಕೋಡಲ್ವ ಒಡಹುಟ್ದ ತಮ್ತಾ ಸಾಯ್ಅಲ್ವ
ಸುತ್ತನ ರಾಜ್ಯವಾ ತಿರಗ್ ಬಂದೆ
ಸುತ್ತನ ರಾಜ್ಯವಾ ತಿರಗ್ ಬಂದೆ ಅಣ್ಣಾ ಕೇಳೋ
ಒಡಹುಟ್ದ ತಮ್ಮಂದೇ ನೆನಸ್ವಾನೋ"

೩. ಕುಣಿತ ೪. ಕುಣಿದನು ೫. ಹೋಲಿಕೆ

ಅಟ್ಟಂಬಾ ಮಾತಾ ಕೇಳಾನೆ ಆ ಜೋಗಿ
ರಾಜಂಗ್ಳ ಮೆಟ್ಟಾ ಇಳದಾನೆ
ರಾಜಂಗ್ಳ ಮೆಟ್ಟಾ ಇಳದಾನೆ ಆ ಜೋಗಿ
ರಾಜಾ ಮಾರ್ಗದಲೇ ನೆಡದಾನೆ

ರಾಜಾ ಮಾರ್ಗದಲೇ ನೆಡುವದ್ನು ಕುಸುಮಾಲಿ
ಹೂಂಗನಕ್ಕಲಗೇ ನೆಡದದೆ
ಹೂಂಗ್ನಕ್ಕಲಗೇ ನೆಡ್ದಾಳೆ ಕುಸುಮಾಲಿ

ಹೂಂಗ್ನಕ್ಕಲ ಬೇಲೀ ತೆಗದಾಳೆ
ಹೂಂಗ್ನಕ್ಕಲ ಬೇಲಿ ತೆಗದಾಳೆ ಕುಸುಮಾಲಿ
ಮೊಟ್ಟೆ ಮಲ್ಲ್ಗಾಗಿ ಕೊಯೀದಾಳೇ
ಮೊಟ್ಟೆ ಮಲ್ಲುಗಿಯಾ ಚೊಟ್ಟೆಣಿಸಿ[೬] ಕೊವ್ವೆಣ್ಣು

ಬಪ್ಪ ಬಯ್‌ರಂಗ್ನಾ[೭] ಬರೂನೋಡಿ
ಬಪ್ಪ ಬಯರಂಗ್ನಾ ಬರುನೋಡಿ ಕುಸ್ಮಾಲಿ
ಕೆಟ್ಟೆನಂದ್ ಬಾಯಿ ಬಿಡೂವಾಳು
ಕೆಟ್ಟೆನಂದ್ ಬಾಯಿ ಬಿಡ್ವಾಳು ಕುಸ್ಮಾಲಿ

ಹೂಂಗ್ನಕ್ಲ ತಿರುಗೇ ಬರೂವಾಳು
ಚೊಬ್ಬೆ[೮] ತುಂಬ್ದೂಂಗಾ ಬೀಸೀಬೀದಿಗಿಟ್ಟಿ
ಬಾಗ್ಲೋರರ್[೯] ಮನಗೇ ನೆಡೂದಾಳೆ
ಬಾಗ್ಲೋರರಮನಗೆ ನೆಡುದಾಳೆ ಕುಸ್ಮಾಲಿ

"ಬಾಗಾಲೋರಂದಿ ದೆನಿಮಾಡಿ
ಬಾಗಾಲೋರಂದಿ ದೆನಿ ಮಾಡ್‌ಕಡ್ವದ್ನು ಬಾಗ್ಲೋರು
ಓಯ್ಗುಂಡಿ ಒಡನೆ ಬರುವಾರು
ಓಯ್ಗುಂಡಿ ಒಡನೆ ಬರುವಾರು ಬಾಗಿಲೋರು

ನಿಂದಾರೆ ಕುಸುಮಾಲಿಯಾ ಒಡ್ನಲ್ಲಿ
ನಿಂದಾರೆ ಕುಸುಮಾಲಿಯಾ ಒಡ್ನಲ್ಲಿ ಬಾಗಿಲೋರು
"ಏನು ಕಾರಣ್ಲೆ ಕರದೀಯೇ
ಏನು ಕಾರಣ್ಲೆ ಕರದಿಯೆ ಅಕ್ಕಾ ಕೇಳು
ಕರ್ದಾ ಕಾರಣ್ವಾ ತಿಳ್ದೇಳಿ"

---

೬. ದೇಟೆಣಿಸಿ   ೭. ಬೈರಾಗಿಯ   ೮. ಬುಟ್ಟಿ   ೯. ಕಾವಲುಗಾರರ

"ಎಂದೂ ಇಲ್ಲದ ಜೋಗಿ ಇಂದೊಂದ್ ಜೋಗೀಬರ್ತಾ
ಜೋಗಿಯಾ ಲೂಟೀ ಹೆರುದಕ್ಕು
ಜೋಗಿಯಾ ಲೂಟಿ ಹೆರ್ದಕ್ಕು ಬಾಗೀಲೋರೆ
ತಡ್ದಾ ಬಾಗಿಲವಾ ಬಿಡಬಾರಾ"

ಅಟ್ಟಂಬಾ ಮಾತಾ ಹೇಳಾದೆ ಕುಸುಮಾಲಿ
ಮುಂದೀನಾ ಬಾಗಲ್ಗೆ ನೆಡದಾಳೆ
ಮುಂದೀನಾ ಬಾಗಲ್ಗೆ ನೆಡ್ದಾಳೆ ಕುಸುಮಾಲಿ
ಬಾಗೀಲೋರಂದೀ ದೆನಿಮಾಡಿ

ಬಾಗೀಲೋರಂದೀ ದೆನಿಮಾಡಿ ಕರ್ವದ್ನು
ಓಯ್ಗುಂಡೇ ಒಡುನೇ ಬರುವಾರು
ಒಯ್ಗುಂಡೇ ಒಡುನೇ ಬರುವಾರು ಬಾಗಿಲೋರು
ನಿಂದಾರೆ ಕುಸ್ಮಾಲ್ಯಾ ಒಡ್ನಲ್ಲಿ
ನಿಂದಾರೆ ಕುಸ್ಮಾಲ್ಯಾ ಒಡ್ನಲ್ಲಿ ಬಾಗೀಲೋರು

"ಏನೂ ಕಾರಣಲಿ ಕರದೀಯೇ
ಏನೂ ಕಾರಣಲೀ ಕರದಿಯೇ ಅಕ್ಕಾ ಕೇಳು
ಕರ್ದಾ ಕಾರಣವಾ ತಿಳದೇಳು"

"ಎಂದೂ ಇಲ್ಲದ ಜೋಗಿ ಇಂದೊಂದ್ ಜೋಗೀಬರ್ತಾ
ಜೋಗಿಯಾ ಲೂಟಿ ಹೆರದಕ್ಕು
ಜೋಗೀಯಾ ಲೂಟಿ ಹೆರ್ದಕ್ಕು ಬಾಗೀಲೋರೆ
ತಡ್ದಾ ಬಾಗಲವಾ ಬಿಡಬಾರಾ"

ಅಟ್ಟಂಬಾ ಮಾತಾ ಕೇಳಾದೆ ಕುಸುಮಾಲಿ
ಮಾಳಗಿಯ ಒಳಗೇ ನೆಡದಾಳೆ
ಮಾಳುಗೀ ಒಳಗೇ ನೆಡ್ವದ್ನು ಆಜೋಗಿ

ಹೂಂಗ್ನಕ್ಲಕಾಗೇ ನೆಡದಾನೆ
ಹೂಂಗ್ನಕ್ಲಕಾಗೇ ನೆಡ್ದಾನೆ ಆಜೋಗಿ
ಹೂಂಗಂಬೂ ಹೂಂಗೆಲ್ಲಾ ಕೊಯೀದಾನೆ
ಹೂಂಗಂಬು ಹೂಂಗೆಲ್ಲಾ ಕೊಯ್ದಿ ದಂಡೀಕಟ್ಟೀ

ಜುಟ್ಟಕ್ಕಿಂಬಾಗಿ ಮುಡಿದಾನೆ
ಜುಟ್ಟಕ್ಕಿಂಬಾಗಿ ಮುಡ್ದಾನೆ ಆಜೋಗಿ
ಹೂಂಗ್ನಕ್ಕಲೆರುಗೇ ಬರುವಾನೇ
ಹೂಂಗ್ನಕ್ಕಲೆರುಗೇ ಬರುವಾನೆ ಆಜೋಗಿ

ಕುಸ್ಮಾಲಿ ಅರಮನೆಗೇ ನೆಡುದಾನೆ.
ಕುಸ್ಮಾಲಿ ಅರುಮನಗೇ ನೆಡ್ದಾನೆ ಆ ಜೋಗಿ
ಹೋಗೀ ಬಾಗಲ್ಲೇ ನಿಲೋವಾನೆ
ಹೋಗೀ ಬಾಗಲ್ಲೆ ನಿಲ್ವಾನೇ ಆ ಜೋಗಿ

"ತಡ್ದಾ ಬಾಗಲವಾ ಬಿಡೋಬೇಕು"
"ಬಾಗಲ ಬಿಡುವಾಕೆ ಅಮ್ಮನಪ್ಪಣೆ ಬೇಕು
ಬಂದವರಿಲ್ಲೇ ನಿಲೋಬೇಕು"
"ನಿಮಗೂ ನಾಕರ್ತಾ[೧೦] ನಿಮ್ಮಮ್ಮಗೂ ನಾಕರ್ತಾ
ನಿಮ್‌ಗ್ ಕೊಡು ಸಂಬಳಕೂ ನಾಕರ್ತಾ

ಅಟ್ಟಂಬಾ ಮಾತಾ ಹೇಳಾನೆ ಆ ಜೋಗಿ
ಲೂಟಿ ಮಾಡೊಳಗೇ ನೆಡುದಾನೆ
ಲೂಟಿ ಮಾಡೊಳಗೇ ನೆಡುವದ್ನು ಬಾಗಿಲೋರು
ತೊಟ್ಟಾ ಬೆತ್ತದಲ್ಲೇ ಒಗುದಾರೆ[೧೧]

ತೊಟ್ಟಾ ಬೆತ್ತದಲ್ಲೇ ಒಗ್ವವದ್ನು ಆ ಜೋಗಿ
ಉದ್ದ್‌ಕಂತಾ[೧೨] ಮನಗೇ ನೆಡದಾನೆ
ಉದ್ದ್‌ಕಂತಾ ಮನಗೇ ನೆಡ್ದಾನೆ ಆ ಜೋಗಿ
ಹೋಗೀ ಬಾಗಲ್ಲೇ ನಿಲೋವಾನೆ

ಕುಸ್ಮಾಲಿ ಅರಮನೆ ಹನ್ನೆಯ್ಡುಗಾವುದ್ದಾ
ಕಸ್ಟಿಲ್ಲಾ[೧೩] ಕುಸ್ಮಾಲಿ ಅರಮಲ್ಲಿ
ಕಸ್ಟಿಲ್ಲಾ ಕುಸ್ಮಾಲಿ ಅರ್ಮಲ್ಲಿ ಅಂದೇಳಿ

ಸಣ್ಣ ಕಂಬಳಿಯಾ ಕುಡಗ್‌ಹಾಸಿ
ಸಣ್ಣ ಕಂಬಳಿಯಾ ಕುಡ್ಗಾಸಿ ಆ ಜೋಗಿ

ಚಕ್ರಪಡಿ ಹೊಯ್ದಿ ಕುಳತಾನೆ
ಚಕ್ರಪಡಿ ಹೊಯ್ದಿ ಕುಳುವದ್ನು ಕುಸ್ಮಾಲಿ
ಹಿತ್ಲಕಣ ಬಾಗಲ್ಲೇ ಬರೋವಾಳೇ
ಹಿತ್ಲಕಣ ಬಾಗಲ್ಲೇ ಬರ್ವಾಳೇ ಕುಸ್ಮಾಲಿ

ಗವ್ಡಿಯೋರ್ ದೆನಿಮಾಡಿ ಕರೆವಾಳು
ಗವ್ಡಿಯೋರ್ ದೆನಿಮಾಡಿ ಕರ್ವದ್ನು ಗವ್ಡಿಯೋರು

---

೧೦. ಒಡೆಯಾ ೧೧. ಹೊಡೆದರು ೧೨. ಉದ್ದಿಕೊಳ್ಳುತ್ತ ೧೩. ಕಷ್ಟವಿಲ್ಲ

ಓಯ್ಗುಂಡೇ ಒಡುನೇ ಬರೂವಾರೇ
ಒಯ್ಗುಂಡೇ ಒಡ್ನೇ ಬರುವಾರು ಗವ್ಡೀಯೋರು

ನಿಂದಾರೆ ಕುಸ್ಮಾಲೀ ಒಡನಲ್ಲಿ
ನಿಂದಾರೆ ಕುಸ್ಮಾಲಿ ಒಡ್ನಲ್ಲಿ ಗವ್ಡಿಯೋರು
“ಏನು ಕಾರಣಲೆ ಕರೆದಿಯೇ
ಏನು ಕಾರಣಲೆ ಕರದಿಯೆ ಅಕ್ಕಾಕೇಳು
ಕರ್ದಾ ಕಾರಣವಾ ತಿಳದೇಳು”

“ಎಂದೂ ಇಲ್ಲದ ಜೋಗಿ ಇಂದೊಂದ್ ಜೋಗಿಬಂದ
ಜೋಗೀಯಾ ಲೂಟೀ ಹೆರಿದಕ್ಕು
ಜೋಗೀಯಾ ಲೂಟಿ ಹೆರಿದಕ್ಕು ಗವ್ಡಿಯೋರೆ
ಪಡಿಯಾ ಕೊಟ್ಟವನಾ ಕಳುಗೀಸಿ”

ಅಟ್ಟಂಬ ಮಾತಾ ಕೇಳಾರೆ ಗವ್ಡೀಯೋರು
ಮಾಳೂಗೀ ಒಳುಗೆ ನೆಡುದಾರೆ
ದೊಡ್ಡಾ ಹಚ್ಚಗಲೀ ದೊಡ್ಡಕ್ಕೀ ಹೊಯ್ಕಂಡೀ
ಮೊದಲ[೧೪] ಕಾಯಾ ಪಲದೋಸ್ತಾ

ಮೊದಲ ಕಾಯಾ ಪಲದೋಸ್ತಾ ತಡಕಂಡಿ
ಮಾಳಗ್ಗಿಂದೆರಗೇ ಬರೋವಾರೇ
ಮಾಳಗ್ಗಿಂದೆರಗೇ ಬರುವಾರು ಗವ್ಡೀಯೋರು
“ಇಕ್ಕೊಳ್ಳೊ ಜೋಗೀ ಪಡಿದಾನಾ”

“ನಿಮ್ಮಾ ಕಯ್ಪಡಿಯಾ ಕಿಟ್ಟುವ ಜೋಗೀಯಲ್ಲಾ
ನಿಮ್ಮಕ್ನ ಕಯ್ಪಡಿಯೇ ಬರೋಬೇಕು”
“ನಮ್ಮಕಾನು ನಿಮ್ಮಂತೋರಿಗ್ ಪಡಿಕೊಡಾ
ಮಟ್ಟಾದಲ್ಲಿರುವಾ[೧೫] ಹೆರಿಗುರು
ಮಟ್ಟಾದಲ್ಲಿರುವಾ ಹೆರಿಗುರುಗಲ್ಲದೆ[೧೬]
ಮಿಕ್ಕೋರಿಗ್ ಪಡಿಯಾ ಅಳೂದಿಲ್ಲ”

“ಮಟ್ಟಾದಲ್ಲಿರುವಾ ಹೆರಿಗುರು ತಾನೇ ಸರಿಯೆ
ನಿಮ್ಮಕ್ಕನ ಕಯ್ಪಡಿಯೇ ಬರೋಬೇಕು
ಅಟ್ಟಂಬಾ ಮಾತಾ ಕೇಳಾರೆ ಗವ್ಡೀಯೋರು
ಮಾಳೂಗೀ ಒಳಗೇ ನೆಡದಾರೆ

೧೪. ಮಾತುಲಂಗ ೧೫. ಮಠದಲ್ಲಿರುವ ೧೬. ಹಿರಿಯ ಗುರಿವಿಗಲ್ಲದೆ

ಮಾಳೂಗೀ ಒಳಗೇ ನೆಡ್ದಾರೆ ಗವ್ಡೀಯೋರು
ಹೋಗೀ ತಮ್ಮಕ್ಕಾಗೇ ಒರದಾರೇ

"ನಿಮ್ಮ ಕಯ್ಡಡಿಯಾ ಕಿಟ್ಟೂವ ಜೋಗಿಯಲ್ಲ
ನಿಮ್ಮಕ್ಕನ ಕಯ್ಪುಡಿಯೇ ಬರೋಬೇಕು
ನಮ್ಮಾ ಅಕ್ಕಾನು ನಿಮ್ಮಂತೋರಿಗ್ ಪಡಿಕೊಡಾ
ಮಟ್ಟಾದಲ್ಲಿರುವಾ ಹೆರಿಗುರು
ಮಟ್ಟಾದಲ್ಲಿರುವಾ ಹೆರಿಗುರುಗಲ್ಲದೆ
ಮಿಕ್ಕೋರಿಗ್ ಪಡಿಯಾ ಅಳುವಾದಿಲ್ಲ"

"ಮಟ್ಟಾದಲ್ಲಿರುವಾ ಹೆರಿಗುರು ತಾನೇ ಸರಿಯೇ
ನಿಮ್ಮಕ್ಕನ ಕಯ್ಪುಡಿಯೇ ಬರೋಬೇಕು"
ಅಟ್ಟಂಬಾ ಮಾತಾ ಕೇಳಾದೆ ಕುಸುಮಾಲಿ
ಮುತ್ತೀನಾ ಕಣ್ಣೀರಾ ಸೆಡಿದಾಳೆ
ಮುತ್ತೀನಾ ಕಣ್ಣೀರಾ ಸೆಡಿದಾಳೆ ಕುಸ್ಮಾಲಿ

ತನ್ನಾ ದಾದ್ಯೋರಾ ದೆನಿದೂರಿ
ತನ್ನಾ ದಾದ್ಯೋರಾ ದೆನಿದೂರಿ ಕರ್‍ವದ್ನು
ಓಯ್ಗುಂಡೇ ಒಡನೇ ಬರುವಾರು
ಓಯ್ಗುಂಡೇ ಒಡನೇ ಬರುವಾರು ದಾದಿಯೋರು

ನಿಂದಾರೆ ಕುಸ್ಮಾಲಿ ಒಡ್ನಲ್ಲಿ
ನಿಂದಾರೆ ಕುಸ್ಮಾಲಿ ಒಡ್ನಲ್ಲಿ ದಾದಿಯೋರು
ಏನು ಕಾರಣ್ಣೆ ಕರದೀಯೇ
ಏನು ಕಾರಣ್ಣೆ ಕರ್ದೀಯೇ ಅಕ್ಕಾ ಕೇಳು

ಕರ್ದಾ ಕಾರಣವಾ ತಿಳದೇಳು
ಎಂದೂ ಇಲ್ಲದ ಜೋಗಿ ಇಂದೊಂದ್ ಜೋಗೀಬರ್ತಾ
ಜೋಗೀಯಾ ಲೂಟೀ ಹೆರೀದಕ್ಕು
ಜೋಗಿಯಾ ಲೂಟೀ ಹೆರ್ದಕ್ಕು ದಾದಿಯೋರೆ

ಪಡಿಯಾ ಕೊಟ್ಟವನಾ ಕಳುಗೀಸಿ
ಅಟ್ಟಂಬಾ ಮಾತಾ ಕೇಳಾರೆ ದಾದಿಯೋರು
ಮಾಳೂಗೀ ಒಳುಗೆ ನೆಡುದಾರೆ
ಸಣ್ಣ ಹಚ್ಚುಗಲಿ[೨] ಸೆಣ್ಣಕ್ಕಿ ಹೊಯ್ಕಂಡಿ

೧೭. ಅಕ್ಕಿತುಂಬಲು ಹಾಗೂ ತೊಳೆಯಲು ಉಪಯೋಗಿಸುವ ಬಿದಿರಿನ ಬುಟ್ಟಿ.

ತೆಂಗೀನಾ ಕಾಯೀ ಪಲಾದೊಸ್ತಾ
ತೆಂಗೀನಾ ಕಾಯಿ ಪಲದೊಸ್ತಾ ತಡಕಂಡಿ
ಮಾಳಗ್ಗಿಂದೆರಗೇ ಬರೋವಾರು
ಮಾಳಗ್ಗಿಂದೆರಗೇ ಬರುವಾರು ದಾದಿಯೋರು

"ಇಕ್ಕೊಳ್ಳೊ ಜೋಗೀ ಪಡಿದಾನಾ"
"ನಿಮ್ಮಾ ಕಯ್ಪಡಿಯಾ ಕಿಟ್ಟೊ ಜೋಗೀಯಲ್ಲಾ
ನಿಮ್ಮಮ್ಮನ ಕಯ್ಪಡಿಯೇ ಬರೋಬೇಕು"
ನಮ್ಮಾ ಅಮ್ಮನು ನಿಮ್ಮಂತೋರಿಗ್ ಪಡಿಅಳಿಯಾ

ಮಟ್ಟಾದಲ್ಲಿರುವಾ ಹೆರಿಗುರು
ಮಟ್ಟಾದಲ್ಲಿರುವಾ ಹೆರಿಗುರುಗಲ್ಲದೆ
ಮಿಕ್ಕೀದೋರಿಗ್ ಪಡಿಯಾ ಅಳೂದಿಲ್ಲಾ

"ಮಟ್ಟಾದಲ್ಲಿರುವಾ ಹೆರಿಗುರು ತಾನೇ ಸರಿಯೆ
ನಿಮ್ಮಮ್ಮನ ಕಯ್ಪಡಿಯೇ ಬರೋಬೇಕು"
ಅಟ್ಟಂಬಾ ಮಾತಾ ಕೇಳಾರೆ ದಾದೀಯೋರು
ಮಾಳೂಗೀ ಒಳಗೇ ನೆಡದಾರೆ

ಮಾಳೂಗೀ ಒಳಗೇ ನಡೆದಾರೆ ದಾದಿಯೋರು
ಸೆಣ್ಣಾ ಹಚ್ಚಗಿಯಾ ಮಡಗಾರೆ
ಸೆಣ್ಣಾ ಹಚ್ಚಗಿಯಾ ಮಡಗಾರೆ ದಾದಿಯೋರು
ಹೋಗೀ ತಮ್ಮಕ್ಕಗೇ ಒರದಾರೆ

"ನಿಮ್ಮಾ ಕಯ್ಪಡಿಯಾ ಕಿಟ್ಟೊ ಜೋಗಿಯಲ್ಲಾ
ನಿಮ್ಮಕ್ಕನ ಕಯ್ಪಡಿಯೇ ಬರೋಬೇಕು"
ನಮ್ಮಾ ಅಕ್ಕಾನು ನಿಮ್ಮಂತೋರಿಗ್ ಪಡಿಕೊಡಾ
ಮಟ್ಟಾದಲ್ಲಿರುವಾ ಹೆರಿಗುರು
ಮಟ್ಟಾದಲ್ಲಿರುವಾ ಹೆರಿಗುರುಗಲ್ಲದೆ

ಮಿಕ್ಕೀದೋರಿಗ್ ಪಡಿಯಾ ಅಳುವಾದಿಲ್ಲ
"ಮಟ್ಟಾದಲ್ಲಿರುವಾ ಹೆರಿಗುರು ತಾನೇ ಸಯ್ಯೆ
ನಿಮ್ಮಕ್ಕನ ಕಯ್ಪಡಿಯೇ ಬರೋಬೇಕು"
ಅಟ್ಟಂಬಾ ಮಾತಾ ಕೇಳಾದೆ ಕುಸುಮಾಲಿ

ಮುತ್ತೀನಾ ಕಣ್ಣೀರಾ ಸೆಡದಾಳೆ
ಮುತ್ತೀನಾ ಕಣ್ಣೀರಾ ಸೆಡದಾಳೆ ಕುಸ್ಮಾಲಿ
ಮಾಳೂಗೀ ಒಳಗೇ ನೆಡದಾಳೆ

ಆ ಪಟ್ಟೀ ಉಟ್ಟರೆ ಆ ಜೋಗೀ ಮರಳಾಗ್ವಾನಂದಿ
ಆ ಪಟ್ಟೀ ಬಿಚ್ಚೀ ಬದ್ಲಾ ಉಟ್ಟಿ
ಆ ರವ್ಕೀ[೧೮] ಇಟ್ಟಾರೆ ಆ ಜೋಗಿ ಮರಳಾಗ್ವಾನಂದಿ
ಆ ರವ್ಕೀ ತಗದೀ ಬದಲಿಕ್ಕಿ

ಆ ಮಂಡೀ ಕಟ್ಟರೆ ಆ ಜೋಗಿ ಮರಳಾಗ್ವಾನಂದಿ
ಆ ಮಂಡೀ ಬಿಚ್ಚೀ ಬದ್ಲಕಟ್ಟಿ
ಆ ವಾಲೀ ಇಟ್ಟಾರೆ ಆ ಜೋಗಿ ಮರಳಾಗ್ವಾನಂದಿ
ಆ ವಾಲೀ ತಗದೀ ಬದ್ಲಾ ಇಕ್ಕಿ

ಆ ಮುಗುಳಿಟ್ಟಾರೆ ಆ ಜೋಗಿ ಮರಳಾಗ್ವಾನಂದಿ
ಆ ಮುಗುಳಾ ತಗದಿ ಬದ್ಲಾ ಇಕ್ಕಿ
ಆ ಉಂಗೂಲಿಟ್ಟಾರೆ ಆ ಜೋಗಿ ಮರಳಾಗ್ವಾನಂದಿ
ಆ ಉಂಗೀಲಾ ತಗದಿ ಬದ್ಲಾ ಇಕ್ಕಿ

ಆ ಉಂಗೀಲಾ ತಗ್ದಿ ಬದ್ಲಿಕ್ಕಿ ಕುಸ್ಮಾಲಿ
ಮಾಳೂಗೀ ಒಳಗೆ ನೆಡದಾಳೆ
ದೊಡ್ಡಾ ಹಚ್ಚಗಲಿ ದೊಡ್ಡಕ್ಕಿ ಯೊಯ್ಕಂಡಿ

ಮೊದಲಕಾಯಾ ಪಲದೊಸ್ತಾ
ಮೊದಲಕಾಯಾ ಪಲದೊಸ್ತಾ ತಡಕಂಡಿ
ಮಾಳಗ್ಗಿಂದೆರಗೇ ಬರೋವಾಳು
ಮಾಳಗ್ಗಿಂದೆರಗೇ ಬರುವಾಳು ಕುಸುಮಾಲಿ

"ಇಕ್ಕೊಳ್ಳೊ ಜೋಗೀ ಪಡಿದಾನಾ"
ಅಲ್ಲಿಂದ್ ಕೊಟ್ಟಾರೆ ಪುಣ್ಣಿಲ್ಲಾ ಪಲವಿಲ್ಲಾ
ಮತ್ತೊಂದು ಮೆಟ್ಟಾ ಇಳ್ದೇಬಂದೀ
ಮತ್ತೊಂದು ಮೆಟ್ಟಾ ಇಳ್ದಬಂದೀ ಕೊಟ್ಟಾರೆ
ನಿನ್ ಮುತ್ತಯ್ದು ತನಕೆ ಹರಸೂವೆ

"ಮುತ್ತಯ್ದ ತನಕೆ ನೀ ಏನಾ ಹರಸುವೆ ಜೋಗಿ
ಮಾವಾನೋರ್ ಮಗನೆ ಸುಕಾಬಾಳಿ
ಮಾವಾನೋರ್ ಮಗನೆ ಸುಕ್ಬಾಳಿ ಇದ್ದಾರೆ
ಮುತ್ತಯ್ದೆ ತನಕೆ ತೆರಣಿಲ್ಲ"[೧೯]

---

೧೮. ಕುಪ್ಪಸ   ೧೯. ಕೊರತೆಯಿಲ್ಲ

ಅಟ್ಟಂಬಾ ಮಾತಾ ಹೇಳಾದೆ ಕುಸ್ಮಾಲಿ
ಮತ್ತೊಂದು ಮೆಟ್ಟಾ ಇಳದದೆ
ಮತ್ತೊಂದು ಮೆಟ್ಟಾ ಇಳದದೆ ಕುಸ್ಮಾಲಿ
"ಇಕ್ಕೊಳ್ಳೊ ಜೋಗೀ ಪಡೀದಾನಾ"

"ಅಲ್ಲಿಂದ್ ಕೊಟ್ಟಾರೆ ಪಣ್ಣಿಲ್ಲ ಪಲವಿಲ್ಲ
ಮತ್ತೊಂದಾ ಮೆಟ್ಟಾ ಇಳ್ದೇಬಂದಿ
ಮತ್ತೊಂದಾ ಮೆಟ್ಟಾ ಇಳ್ದ ಬಂದೀ ಕೊಟ್ಟಾರೆ
ನಿನ್ ಪುತ್ರ ಸಂತಾನ್ಕೆ ಹರಸೂವೆ

"ಪುತ್ರ ಸಂತಾನಕೆ ನೀಯೇನ ಹರಸುವೆ ಜೋಗಿ
ಅತ್ತಿಯೋರಾ ಮಗನೆ ಸುಕಬಾಳಿ
ಅತ್ತಿಯೋರ್ ಮಗನೆ ಸುಕಬಾಳಿ ಇದ್ದರೆ
ಪುತ್ರ ಸಂತಾನ್ಕೆ ತೆರಣಿಲ್ಲ
ಪುತ್ರ ಸಂತಾನ್ಕೆ ತೆರಣಿಲ್ಲ ಅಂದೇಳಿ

ಮತ್ತೊಂದು ಮೆಟ್ಟಾ ಇಕದಾಳೆ
ಮತ್ತೊಂದು ಮೆಟ್ಟಾ ಇಳ್ದಾಳೆ ಕುಸ್ಮಾಲಿ
"ಇಕ್ಕೊಳ್ಳೊ ಜೋಗೀ ಪಡೀದಾನಾ"
"ಪಡಿಯಾ ತಕ್ಕಂಬೂಕೆ ಜೋಳುಗಿ ತರಲಿಲ್ಲ
ಅಕ್ಕೀ ಕೂಡಕ್ಕಿ ತೊಳದೆತ್ತು"

"ಅಕ್ಕೀ ಎತ್ತೂವಕೆ ಅತ್ತಿಲ್ಲ ಮಾವಿಲ್ಲ
ಕಯ್ತೆಡ್ದಾ ಪುರಿಸರು ಮನಿಲಿಲ್ಲ
ಕಯ್ತೆಡ್ದಾ ಪುರಿಸರು ಮನಿಲಿಲ್ಲ ಎಲೆಜೋಗಿ
ನೀ ಹೋಗೋ ಮಟ್ಟದಾ ಜಗುಲೀಗೆ"

"ನಿನ್ನಾ ಮಟ್ಟವೆ ಎತ್ತಗಂದ್ ಅರಿಯಾನೆ
ಅಕ್ಕೀ ಕೂಡಕ್ಕಿ ತೊಳದೆತ್ತು"
"ದಾರಿ ಗೊತ್ತಿಲ್ಲಾರೆ ದಾದಿಯೋರ್ ಕಳಗೂತೆ
ನೀಹೋಗೋ ಮಟ್ಟದಾ ಜಗುಲೀಗೆ"

"ನಿನ್ನಾ ದಾದಿಯೋರು ಜುಳ್ಳುಳಿ[೨೦] ಜಿಂವ್ತೀರು[೨೧]
ಮುಳ್ಳೊಳಗೆ ನನ್ನಾ ಎಳೆವಾರು

೨೦. ಹೊಳೆಯುವ ೨೧. ಯುವತಿಯರು

ಮುಳ್ಳೊಳಗೆ ನನ್ನಾ ಎಳೆವಾರು ಎಲೆಣ್ಣೆ
ಅಕ್ಕೀ ಕೂಡಕ್ಕೀ ತೊಳದೆತ್ತು."

"ಅಕ್ಕೀ ಎತ್ತೂವಾಕೆ ಅತ್ತಿಲ್ಲ ಮಾವಿಲ್ಲ
ಕಯ್ತುಡ್ದ ಪುರಿಸರು ಮನಿಲಿಲ್ಲ
ಕಯ್ದುಡ್ದ ಪುರಿಸರು ಮನಿಲಿಲ್ಲ ಎಲ್ಹೋಗೀ
ನೀ ಹೋಗೋ ಮಟ್ಟದಾ ಜಗೂಲೀಗೆ"

ಕಟ್ಟಾ ಮನೀಯಾರೀದೆ[22] ಹೂಡಿದ ಒಲೀಯಾರೀದೆ
ಕುರ್ದುಂಬು ಎಮ್ಮಿ ಯಾರಾ ಬಳವರಿ"
"ಕಟ್ದಮನಿ ಮಾವಂದು ಹೂಡೀದೊಲತ್ತೀದು
ಕರ್ದುಂಬು ಎಮ್ಮಿ ನನ್ಬಳವರೀ"

"ಕಟ್ಟಾ ಮನಿಯಾರೀದೆ ಹೂಡೀದೊಲಿಯಾರೀದೆ
ಬೆಳಗುಂಬು ಹರಿವಾಣ ಯಾರಾ ಬಳವರಿಯೆ !"
ಕಟ್ಟಾ ಮನೆ ಮಾವಂದು ಹೂಡೀದೊಲತ್ತೀದು
ಬೆಳ್ಗುಂಬೂ ಹರ್ವಾಣ ನನ್ಬ್ಳವರೀ
ಬೆಳ್ಗುಂಬೂ ಹರ್ವಾಣಾ ನನ್ಬಳವರಿ ಎಲ್ಹೋಗಿ

ನಿನ್ಹೊಟ್ಟೀಲೆಕೆ[23] ಉರದಾವೂ
ನಿನ್ಹೊಟ್ಟೀಲೆಕೆ ಉರ್ದಾವೂ ಎಲ್ಹೋಗಿ
ನೀನೋಗೋ ಮಟ್ಟದಾ ಜಗುಲೀಗೆ"
"ಗೊವಿಗೆ ಹೋಗ್ವಾ ಬತ್ಯಾ[24] ಗೊವೀತೀರತಮೀವಾ
ಗೊವೀಯಾ ದಂಡೀ ಹದಿನಾರಾ
ಗೋವೀಯಾ ದಂಡೀ ಹದ್ನಾರ್ ತೆಗಿಸಿ ಕೊಡ್ತೆ
ಬತ್ತೀಯಾ ಹೆಣ್ಣೆ ಒಡ್ನಲ್ಲಿ?"

"ಗೊವೀ ಗೋಗ್ವಕ್ಕೆ ಗೊವೀತೀರ್ತ ಮೀವಕ್ಕೆ[25]
ಮಾವಾನೋರ್ ಮಗ್ನೆ ಸುಕಬಾಳ
ಮಾವಾನೋರ್ ಮಗ್ನೆ ಸುಕಬಾಳಿ ಇದ್ದಾರೆ
ಗೊವೀ ದಂಡೀಗೆಕೆ ಬರಾಬಂತು?"[26]

ಗುತ್ತೀಗೋಗ್ವಾ ಬತ್ಯಾ ಗುತ್ತೀ ತೀರುತಮೀವಾ
ಗುತ್ತಿಯಾ ದಂಡೆ ಹದಿನಾರು
ಗುತ್ತೀಯಾ ದಂಡೆ ಹದ್ನಾರ್ ತಗ್ಸೀ ಕೊಡ್ತೆ
ಬತ್ತೀಯಾ ಹೆಣ್ಣೆ ಒಡನಲ್ಲಿ"

---

೨೨. ಯಾರದು? ೨೩. ನಿನ್ನ ಹೊಟ್ಟೆಯೇಕೆ ೨೪. ಬರುತ್ತೀಯಾ ೨೫. ಸ್ನಾನಕ್ಕೆ ೨೬. ಕೊರತೆಬಂತು?

ಗುತ್ತೀಗ್ ಹೋಗ್ವಕ್ಕೆ ಗುತ್ತೀ ತೀರುತ ಮೀವಕ್ಕೆ
ಅತ್ತೀಯೋರ್ ಮಗನೆ ಸುಕಬಾಳಿ
ಅತ್ತಿಯೋರ್ ಮಗನೆ ಸುಕಬಾಳಿ ಇದ್ದಾರೆ
ಗುತ್ತಿದಂಡೀಗೆಕೆ ಬರಾಬಂತು

ಆಡಾಡ್ದಾ ಮಾತೀಗೆ ಸೆಲ್ಲುಗುರೀಲಿ ಗೆದ್ದೀಯೆ
ಹಳ್ಳಾದಾಟ್ವಲ್ಲಿ ನೆನಕಂಬ್ಯೇ
ಹಳ್ಳಾದಾಟ್ವಲ್ಲಿ ಅತ್ತೀನೆನುವಾನೋ ಮಾವನ ನೆನುವಾನೋ
ಕಯ್ತಡ್ದಾ ಪುರಿಸಾರ ನೆನುವಾನೋ
ಕಯ್ತಡ್ದಾ ಪುರಿಸಾರಾ ನೆನುವಾನೋ ಎಲ್ಹೋಗಿ

ನಿನ್ನೆರು ನೆನುವಾರೋ ಸೊರಿ ಬುಯ್ಡೀಯ"
ಅಟ್ಟಂಬಾ ಮಾತಾ ಹೇಳಾದೆ ಕುಸುಮಾಲಿ
ಮಾಳೂಗಿ ಒಳಗೆ ನೆಡುದಾದೆ
ಮಾಳೂಗಿ ಒಳಗೆ ನೆಡ್ದಾಳೆ ಕುಸುಮಾಲಿ
ದೊಡ್ಡ ಹಚ್ಚಗೀಯಾ ಮಡಗಾಳೆ
ದೊಡ್ಡ ಹಚ್ಚಗಿಯಾ ಮಡಗಾಳೆ ಕುಸ್ಮಾಲಿ
ಅಮೃತ ಗಿಂಡಿಯಾ ತಡದಾಳೆ
ಅಮೃತ ಗಿಂಡೀಯಾ ತಡ್ದಾಳೆ ಕುಸ್ಮಾಲಿ

ಮಾಳಗ್ಗಿಂದೆರುಗೇ ಬರೂವಾಳು
ಮಾಳಗ್ಗಿಂದೆರುಗೇ ಬರುವಾಳು ಕುಸ್ಮಾಲಿ
ಜೋಗೀಗ್ ಅಮರೂತ ತೊಳುದಾಳೆ
ಜೋಗೀಗ್ ಅಮರೂತ ತೊಳ್ವದ್ನು ಜೋಗಿಗೆ
ಸಮ್‌ನಿದ್ರಿ ಬಂದೀ ಕಮೀದಾವೆ
ಸಮ್‌ನಿದ್ರಿ ಬಂದೀ ಕಮುವದ್ನು ಕುಸುಮಾಲಿ
ಮಾಳೂಗೀ ಒಳಗೆ ನೆಡದಾಳೆ
ಮಾಳೂಗೀ ಒಳುಗೆ ನೆಡದಾಳೆ ಕುಸುಮಾಲಿ

ಅಮರುತದಾ ಗಿಂಡೀ ಮಡೂಗಾಳೆ
ಅಮರುತದಾ ಗಿಂಡೀ ಮಡೂಗಾಳೆ ಕುಸುಮಾಲಿ
ಹಿತ್ಲ ಕಣ್ನ ಬಾಗಲ್ಲೇ ಹೊರೂಟಾಳೆ
ಹಿತ್ಲ ಕಣ್ನ ಬಾಗಲ್ಲೇ ಹೊರಟಾಳೆ ಕುಸುಮಾಲಿ
ಅತ್ ಕುಂತೀಯೋರ್ ಅರ್ಮನಗೇ ನೆಡದಾಳೆ
ಅತ್ ಕುಂತೀ ಅರ್ಮನಗೇ ನೆಡದಾಳೆ ಕುಸ್ಮಾಲಿ

ಹೋಗೀ ರಾಜಂಗ್ಳಾ ನೆಗದತ್ತೀ
ಹೋಗೀ ರಾಜಂಗ್ಳಾ ನೆಗದತ್ತೀ ಕುಸ್ಮಾಲಿ
ಮಾಳೂಗೀ ಒಳಗೇ ನೆಡವಾಳು
ಮಾಳೂಗೀ ಒಳಗೆ ನೆಡವಾಳು ಕುಸ್ಮಾಲಿ
ತೂಗು ಮಂಚದಲೇ ಕುಳುವಾಳು
ತೂಗು ಮಂಚದ್ಲೆ ಕುಳುವದ್ನು ಒಳಗಿದ್ದ
ಅತ್ ಕುಂತೀ ಹೆರುಗೇ ಬರುವಾಳು

"ಯಾವಾಗ್ಗು ತನ್ನಾ ಅರಮಲ್ಲಿ ಇರುವಾಳು
ಏನ್ ಬಂದೆ ತನ್ನಾ ಅರಮನ್ಗೆ"
ಎಂದೂ ಇಲ್ಲದ ಜೋಗೀ ಇಂದೊಂದ್ ಜೋಗಿ ಬಂದಾ
ಜೋಗೀಯಾ ಲೂಟಿ ಹೆರ್ದಾಯ್ತು
ಜೋಗೀಯಾ ಲೂಟಿ ಹೆರ್ದಾಯ್ತು
ಜೋಗೀಯಾ ಲೂಟಿ ಹೆರ್ದಾಯ್ತು ಅತ್ತಿಯೋರೆ
ಏನಾ ಮಾಡವ್ನಾ ಕಳಗಲಿ ಅತ್ತಿಯೋರೆ

ಹೊಡ್ದೀ ಬಡ್ದವ್ನಾ ಕಳಗಾಲೋ
"ಹೊಡ್ದೀ ಬಡ್ದವ್ನಾ ಕಳ್ಗದ್ದುಂಟಾದರೆ ನಿನ್ನಾ
ಸೂಲೀ ಸುಕ್ರಮ್ಗೆ ಕುಂದೂ ಬರುವಾದು
ಸೂಲೀ ಸುಕ್ರಮ್ಗೆ ಕುಂದು ಬರುವಾದು ಕುಸ್ಮಾಲಿ
ಅಡಗೀಯಾ ಮಾಡೀ ಬಡಸಂದೀ"
ಅಟ್ಟೊಂದು ಮಾತಾ ಕೇಳಾದೆ ಕುಸುಮಾಲಿ
ಆಗೊಂದು ಮಾತಾ ನುಡದಾಳೆ

"ಹಿಂಡ್ರ ಬಾಳ್ಸವವ್ರು ಪುಂಡತನ್ಕೀಗಳ್ಸವವ್ರು[೨೭]
ಗಂಡೂ ರೂಪ್ದಲ್ಲಿ ಚಲುವಂವ
ಗಂಡೂ ರೂಪ್ದಲ್ಲಿ ಚಲುವಂವ ಅತ್ತಿಯೋರೆ
ನಿಮ್ಮಾಲಮಗ ಹಿಂಡ್ರ ಬಳ್ಸೂವ ಅಸ್ಮಾನಾ[೨೮]
ಹಿಂಡ್ರ ಬಾಳ್ಸೂವಾ ಅಸ್ಮಾನಾ ಅಂದೇಳಿ ಕುಸ್ಮಾಲಿ
ಸಿಟ್ಟಿನಲ್ಲೆದ್ದೇ ಬರುವಾಳೆ
ಸಿಟ್ಟಿನಲ್ಲೆದ್ದೇ ಬರುವಾಳೆ ಕುಸ್ಮಾಲಿ

---

೨೭. ಪುಂಡುತನಗಳಿಸುವವರು ೨೮. ಅಸಮಾನವಾಗಿ

ಬಾವ್ ದರ್ಮ್ರರ ಮನಗೇ ಬರೋವಾಳೆ
ಬಾವ್ ದರ್ಮ್ರರ ಮನಗೇ ಬರುವಾಳೇ ಕುಸ್ಮಾಲಿ
ಹೋಗೀ ರಾಜಂಗ್ಭ ನೆಗದತ್ತೀ
ಹೋಗೀ ರಾಜಂಗ್ಭಾ ನೆಗದತ್ತೀ ಕುಸ್ಮಾಲಿ
ತೂಗುಮಂಚದ್ಲೆ ಕುಳತಾಳೆ
ತೂಗುಮಂಚದ್ಲೆ ಕುಳುವದ್ನು ಬಳಗಿದ್ದಾ
ಬಾವ್‌ದರ್ಮ್ರೆರಗೇ ಬರುವಾರು

"ಯಾವಾಗು ಅರ್ಮ್ಲ್ಲಿ ಇರ್ವಳು ಕುಸುಮಾಲಿ
ಏನ್ ಬಂದೆ ನನ್ನಾ ಅರ್ಮ್ಜುನ್ಗೆ"

ಬಚ್ಚಲರಮನಗೆ ನೆಡದಾನೆ.
ಬಚ್ಚಲರಮನಗೆ ನೆಡ್ದಾನೆ ಸೂಲಿಸುಕ್ರಾ
ಮಿಂದೊಗ್ದಾನೊಂದು ಗಳಗ್ಯಲಿ
ಮಿಂದೊಗ್ದಾನೊಂದು ಗಳಗ್ಯಲಿ ಸೂಲಿಸುಕ್ರಾ
ಮಿಂದೀಸೆಳಗೆಂಟಾ ಇಡೋವಾನೇ
ಮಿಂದೀ ಸೆಳಗೆಂಟಾ ಇಡ್ವಾನೇ ಸೂಲಿಸುಕ್ರಾ

ತಮ್ಮಾಲರಮನಗೇ ಬರೋವಾನೇ
ತಮ್ಮಾಲರಮನಗೇ ಬರೋವಾನೇ ಸೂಲಿಸುಕ್ರಾ
ದೇವರ ಮುಂದೇ ನಿಲೋವಾನೇ.
ದೇವರ ಮುಂದೋಗಿ ನಿಲ್ವಾನೇ ಸೂಲಿಸುಕ್ರಾ
ದೇವರ ಪೂಜೀಯಾ ಮಾಡುವಾರೆ
ದೇವರ ಪೂಜಿಯಾ ಮಾಡಾರೆ ಸೂಲಿಸುಕ್ರಾ

ಹೂಂಗರಗೆ[೩೮] ಕಯ್ಯಾ ಮುಗದಾರೆ.
ಹೂಂಗರಗೆ ಕಯ್ಯಾಮುಗ್ದಾನೆ ಸೂಲೀಸುಕ್ರಾ
ಕಾಯೊಡದೇ ಕಯ್ಯಾ ಮುಗಿದಾನೆ
ಕಾಯೊಡದೇ ಕಯ್ಯಾ ಮುಗಿದಾನೆ ಸೂಲಿಸುಕ್ರಾ
ನೊಸಲಿಗೆ ಸಿರಿಗಂದಾ ಇಡೋವಾನೆ.
ನೊಸಲಿಗೆ ಸಿರಿಗಂದಾ ಇಡ್ವಾನೆ ಸೂಲಿಸುಕ್ರಾ

ಮಾಳೂಗೀ ಒಳಗೆ ನೆಡದಾನೆ.
ಮಾಳುಗೀ ಒಳಗೆ ನೆಡ್ವದ್ನು ತಾಯವ್ವಿ
ಹೊನ್ನಾಮಣಿ ಎಯ್ದಾ ಮಡಗಾಳೆ
ಹೊನ್ನಾಮಣಿ ಎಯ್ದಾ ಮಡಗ್ವದ್ನು ಅವ್ರಣ್ಣಾತಮ್ಮಾ

---

೩೮. ಹೂಹರವಿ

ಮಣಿಯಾ ಮೆನೋಗೀ ಕುಳತಾರೆ
ಮಣಿಯಾ ಮೆನೋಗಿ ಕುಳುವದ್ನು ತಾಯವ್ವಿ

ಕಿರುಳು ಬಾಳೆಲಿಯಾ ತೊಳದಾಸಿ
ಕಿರ್ಳು ಬಾಲೆಲಿಯಾ ತೊಳ್ದಾಸಿ ತಾಯವ್ವಿ
ಅನ್ನಾ ಮೆಗ್ರವಾ ಬಡಸಾಳೆ
ಅನ್ನಾ ಮೆಗ್ರವಾ ಬಡಸಾಳೆ ತಾಯವ್ವಿ

ತುಪ್ಪಾ ಸಕ್ಕರೆಯಾ ಎರವಾಳೆ
ತುಪ್ಪಾ ಸಕ್ಕರೆಯಾ ಎರ್ದೀ ತಿರ್ಗ್ಗರೊಟ್ಗೆ
ಉಂಡೆದ್ದರೊಂದು ಗಳಗ್ಯಲ್ಲಿ
ಉಂಡೆದ್ದರೊಂದು ಗಳಗ್ಯಲ್ಲಿ ಸೂಲಿಸುಕ್ರಾ
ಪನ್ನೀರಲಿ ಮೊಕವಾ ತೊಳದಾನೆ
ಪನ್ನೀರಲಿ ಮೊಕವಾ ತೊಳ್ದಾನೆ ಸೂಲಿಸುಕ್ರಾ

ತೂಗೂ ಮಂಚಲ್ಲೆ ಕುಳೋವಾನೆ
ತೂಗೂ ಮಂಚಲ್ಲೆ ಕುಳ್ವಾನೆ ಸೂಲಿಸುಕ್ರಾ
ಕೂತಾ ಗದ್ದಗಿಯಾ ಜಡೋದೆದ್ದಿ
ಕೂತಾ ಗದ್ದಗಿಯಾ ಜಡದೆದ್ದಿ ಸೂಲಿಸುಕ್ರಾ
ಮಾಳೂಗೀ ಒಳಗೆ ನೆಡದಾನೆ
ಮಾಳೂಗೀ ಒಳಗೆ ನೆಡ್ದಾನೆ ಸೂಲಿಸುಕ್ರಾ

ಅಟ್ಟಕೆ ಏಣೀ ಇಡೊವಾನೆ
ಅಟ್ಟಕೆ ಏಣೀ ಇಡ್ವಾನೆ ಸೂಲಿಸುಕ್ರಾ
ಅಟ್ಟದ ಪೆಟ್ಟಗಿಯಾ ತಗದಾನೆ
ಅಟ್ಟದ ಪೆಟ್ಟಗಿಯಾ ತಗದಾನೆ ಸೂಲಿಸುಕ್ರಾ
ತನ್ನಾ ನೆರಿಯಂಗಿ ಬುಜಕಿಟ್ಟಿ
ತನ್ನಾ ನೆರಿಯಂಗಿ ಬುಜಕಿಟ್ಟಿ ಸೂಲಿಸುಕ್ರಾ

ಕೋಲು ನೆವಳವಾ ಇಳಲಿಟ್ಟಿ[೩೯]
ಕೋಲು ನೆವಳವಾ ಇಳಲಿಟ್ಟಿ ಸೂಲಿಸುಕ್ರಾ
ಉಂಗೀಲಾ ದುಂಬಾನೆ ಬೆರಳೀಗೆ
ಉಂಗೀಲಾ ದುಂಬಾನೆ ಬೆರಳೀಗೆ ಸೂಲಿಸುಕ್ರಾ
ಬೆಳ್ಳಿಯ ಬಾಂಕಾ[೪೦] ತಡತಾನೆ
ಬೆಳ್ಳಿಯ ಬಾಂಕಾ ತಡ್ದಾನೆ ಸೂಲಿಸುಕ್ರಾ

೩೯. ಇಳಿಬಿಟ್ಟು ೪೦. ಕತ್ತಿ

ಮಾಳಗ್ಗಿಂದೆರಗೇ ಬರೋವಾನೆ.
ಮಾಳಗ್ಗಿಂದೆರಗೇ ಬರೋವಾನೆ ಸೂಲೀಸುಕ್ರಾ
ಬೋರೀನೇ ಆನೀ ನೆಗದತ್ತಿ
ಬೋರೀನೇ ಆನೀ ನೆಗ್ದತ್ತಿ ಸೂಲಿಸುಕ್ರಾ

ರಾಜಮಾರ್ಗದಲೇ ನೆಡದಾನೆ.
ರಾಜಮಾರ್ಗದಲೆ ನೆಡ್ದಾನೆ ಸೂಲಿಸುಕ್ರಾ
ಗೊವೀನಾಡ್ ಮೆನೇ ಹೊಡದಾನೆ.
ಗೋವೀನಾಡ್ ಮೆನೇ ಹೊಡುವದ್ನು ಸೂಲಿಸುಕ್ರಾ
ಗೋವೀನಾಡ್ ಗೋಳಿ[೪೧] ತಿರಗದೆ.
ಗೋವೀನಾಡ್ ಗೋಳಿ ನೀವೆಕೆ ಬತ್ತೀರಿ.

ಪಾಲ್ಗುಣನಾ ಮೆನೆ ಕತನಕೆ[೪೨]
ಪಾಲ್ಗುಣ್ನಾ ಮೆನೇ ಕತ್ನಾಕೋಗಿಬಿತ್ತೆ[೪೩]
ಇದ್ದೋರಿದ್ದಲ್ಲೇ ಇರೋಬೇಕು.
ಇದ್ದೊರಿದ್ದಲ್ಲೇ ಇರ್ಬೇಕು ಅಂದೇಳಿ
ಗುತ್ತೀನಾಡ್ ಮೆನೇ ಹೊಡದಾನೇ
ಗುತ್ತಿನಾಡ್ ಮೆನೇ ಹೊಡುವದ್ನು ಸೂಲಿಸುಕ್ರಾ

ಗುತ್ತಿನಾಡ್ ಗೋಳಿ ತಿರಗದೆ.
ಗುತ್ತಿನಾಡ್ ಗೋಳಿ ನೀವೆಕೆ ಬತ್ತಿರಿ
ಪಾಲ್ಗುಣನಾ ಮೆನೆ ಕತನಕೆ
ಪಾಲ್ಗುಣ್ನ ಮೆನೇ ಕತ್ನಾ ಕೋಗಿಬತ್ತೆ
ಇದ್ದೋರು ಇಲ್ಲೇ ಇರಬೇಕು.
ಇದ್ದೋರು ಇಲ್ಲೇ ಇರ್ಬೇಕು ಅಂದೇಳಿ

ತನ್ನಾ ರಾಜ್ಯವಾ ಗಳೀದಾನೆ.
ತನ್ನಾರಾಜ್ಯವಾ ಗಳಿದಾನೆ ಸೂಲಿಸುಕ್ರಾ
ತಂಗೀರಾಜ್ಯಕೆ ನೆಡದಾನೆ.
ತಂಗೀರಾಜ್ಯಕೆ ನೆಡುವದ್ನು ಕುಸುಮಾಲಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗೀ ಒಳಗೆ ನೆಡ್ದಾಳೆ ಕುಸ್ಮಾಲಿ

ಪನ್ನಿರಾಗಿಂಡೀ ತಡಗಾಳೆ
ಪನ್ನೀರಾಗಿಂಡೀ ತಡ್ದಾಳೆ ಕುಸ್ಮಾಲಿ

೪೧. ಗುಂಪು, ಸಮೂಹ ೪೨. ಜಗಳ ೪೩. ಕಾಳಗಕ್ಕೆ ಹೋಗಿ ಬರುತ್ತೇನೆ

ಮಾಳಗ್ಗಿಂದೆರಗೇ ಬರುವಾಳೆ
ಮಾಳಗ್ಗಿಂದೆರಗೇ ಬರ್‍ವಾಳೆ ಕುಸ್ಮಾಲಿ

ಜೋಗೀಗಮೃತ ತಳದಾಳೆ
ಜೋಗೀಗ್‌ಅಮೃತಾ ತಳ್ವದ್ನು ಜೋಗಿಯು
ಮಿಯ್ಯಾ ಮುರುದೆದ್ದಿ ಕುಳತಾನೆ
ಮಿಯ್ಯಾ ಮುರುದೆದ್ದಿ ಕುಳ್ತಾನೆ ಜೋಗಿಯು
ಹಳ್ಳಕೆ ಆಗಿ ನೆಡದಾನೆ
ಹಳ್ಳಕೆ ಆಗೀ ನೆಡ್ದಾನೆ ಜೋಗಿಯು

ಹಳ್ಳ ತಡಿಮೆನೇ ಕುಳತಾನೆ
ಹಳ್ಳ ತಡಿಮೆನೆ ಕುಳ್ತಾನೆ ಜೋಗಿಯು
ಕಂತೆ ಜೋತರವಾ ಬಳಕೊಟ್ಟಿ
ಕಂತೆ ಜೋತ್ರವಾ ಬಳ್ಕೊಟ್ಟಿ ಜೋಗಿಯು
ಕಂತೆ ನೆರಿಯಂಗಿ ಬಳಕೊಟ್ಟಿ[೪೪]
ಕಂತೆ ನೆರಿಯಂತಿ ಬಳಕೊಟ್ಟಿ ಜೋಗಿಯು

ಕಂತೆ ಜೋಳಗಿಯಾ ಬಳಕೊಟ್ಟಿ
ಕಂತೆ ಜೋಳಗಿಯ ಬಳ್ಕೊಟ್ಟಿ ಜೋಗಿಯು
ರಾಗದ ಚೆನ್ನುಡಿಯಾ ಬಳಕೊಟ್ಟಿ
ರಾಗದ ಚೆನ್ನುಡಿಯಾ ಬಳ್ಕೊಟ್ಟಿ ಜೋಗಿಯು
ಈಬತ್ತಿ ಉಂಡೀ ಬಳಕೊಟ್ಟಿ
ಈಬತ್ತಿ ಉಂಡೀ ಬಳ್ಕೊಟ್ಟಿ ಜೋಗಿಯು

ತನ್ನಾ ಕಯ್ಚಂಚೀ ಬಳಕೊಟ್ಟಿ
ತನ್ನಾರಾಜ್ಯವಾ ಗಳಿದಾನೆ ಸೂಲಿಸುಕ್ರಾ
ಸಣ್ಣಾ ಗಂಬಳಿಯಾ ಬಳಕೊಟ್ಟಿ
ಸಣ್ಣಾ ಗಂಬಳಿಯಾ ಬಳ್ಕೊಟ್ಟಿ ಜೋಗಿಯು
ಮೂರೊತ್ತರಲಗೆ[೪೫] ಮುಳುಕೆದ್ದಿ
ಮೂರೊತ್ತರಲ್ಗೆ ಮುಳುಕೆದ್ದಿ ಆ ಜೋಗಿ

ಆಗೊಂದು ಮಾತಾ ನುಡೀದಾನೆ
"ಜೋಗೀ ಅಂಬೆಸ್ರು ಇದರ್ಕಿಂದಿತ್ತಾಗಿರಲಿ
ಅರ್ಜೀನಾ ನಂಬೆಸ್ರು ನೆಡಿಯಾಲಿ
ಅರ್ಜೀನಾ ನಂಬೆಸ್ರು ನೆಡಿಯಾಲ್‌ಂದರ್ಜೀನಾ

೪೪. ಹರಿಯಬಿಟ್ಟ ೪೫ ಮೂರುಸಲವಲ್ಲಿ

ಹುಟ್ದ ರೂಪ್ದಲ್ಲೇ ಬರೋವಾನೆ
ಹುಟ್ದ ರೂಪ್ದಲ್ಲೇ ಬರುವದ್ನು ಕುಸ್ಮಾಲಿ
ಹೀತರ್ಕೆ ಪಟ್ಟೀ ಒಗುದಾಳೆ
ಹೀತರ್ಕೆ ಪಟ್ಟೀ ಒಗ್ವದ್ನು ಅರ್ಜೀಣಾ
ಬಂದೀ ಬಾಗಲ್ಲೇ ನಿಲೋವಾನೆ
ಬಂದೀ ಬಾಗಲ್ಲಿ ನಿಲ್ವದ್ನು ಸೂಲಿಸುಕ್ರಾ

ಆಗೊಂದು ಮಾತಾ ನುಡೀದಾನೆ
"ಹಿಂಡ್ರ ಬಾಳ್ವೂವವ್ರು ಪುಂಡ್‌ತನ್ಕೀಗಳ್‌ಸ್ವವ್ರು
ಗಂಡು ರೂಪ್ದಲ್ಲಿ ಚಲುವಂವ
ಗಂಡುರೂಪ್ದಲ್ಲಿ ಚಲುವವ ಬಾವಾಕೇಳು
ಬೆಡಾರ್ ನನ್ನಂಗೀ ಬಿಡೋಬವ್ಡು
ಬೆಡಾರ್‌ನನ್ನಂಗೀ ಬಿಡಬವ್ಡು ಅಂಬುದ್ನು ಅರ್ಜುಣಾ

ಆಗೊಂದು ಮಾತಾ ನುಡೀದಾನೆ.
"ಬಾವಾ ನಿನ್ನೆಣ್ತೆ ನೀ ನಿಟ್ಟದ್ದುಂಟಾದಾರೆ
ನಿನ್‌ತಂಗೀ ನಾನು ಬಿಡೋತೀನೋ.
ನಿನ್‌ತಂಗಿ ನಾನು ಬಿಡ್ತೀನೋ ಅಂಬುದ್ನು ಸೂಲಿಸುಕ್ರಾ
ಬೆಳ್ಳಿಯಾ ಬಾಂಕಾ ತಡದಾನೆ.
ಬೆಳ್ಳೀಯಾ ಬಾಂಕಾ ತಡ್ವದ್ನು ಕುಸ್ಮಾಲಿ

ಸೂಲಿಸುಕ್ರನೆದ್ರೋಗಿ ನಿಲೋವಾಳೇ
"ಸಿಟ್ಟೀನಾ ಅಣ್ಣಾ ಹುಟ್ಟಿದ ಬುಲೋಕಾಗೆ
ಸಿಟ್ಟ ಸಯರಿಸೋ ಮನದಲ್ಲಿ
ಸಿಟ್ಟ ಸಯ್‌ರೀಸೋ ಮನ್ದಲ್ಲಿ ನನ್ನಾಲಾ
ಮುತ್ತಯ್ತನವೊಂದು ಉಳೀದಾವೋ"
ಮುತ್ತಯ್ತನವೊಂದು ಉಳಿದಾವೋ ಅಂಬುದ್ನು ಸೂಲಿಸುಕ್ರಾ

ಅಗೊಂದು ಮಾತಾ ನುಡೀದಾನೆ.
"ಹೆಣ್ಮಕ್ಕಮಲ್ಲಿ ಹೇಳೂರು ಕೇಳುರು
ಹೊತ್ತಿಗನ್ನೆರಡಾ ನೆನಸೂರು
ಹೊತ್ತಿಗನ್ನೆರಡಾ ನೆನಸೂರು ಅಂದೇಳಿ

ಆಗೇ ನನ್ನಮ್ಮಾ ನುಡದೀತು
ಆಗೇ ನನ್ನಮ್ಮಾ ಏನಂದಿ ನುಡದೀತು
ಹೆಣ್ಣಕ್ಳ ಮಾತಾ ಹೊರಬಾರಾ"
"ಮುಂದೆ ಮಾಡಿದ ಬಾಂಕಾ ಹಿಂದೇ ಮಡಿಬಾರಂದಿ[೪೬]
ಆಲ್ದ ಮರ್ನ ಕಡ್ಡಿ ಕೆಡಗಾನೆ.
ಆಲ್ದಮರ್ನ ಕಡ್ಡಿ ಕೆಡಗ್ವದ್ನು ಕುಸ್ಮಾಲಿ

ಮಾಳೂಗೀ ಒಳಗೆ ನೆಡದಾಳೆ.
ಮುತ್ತನೇ ಕುಟ್ಟಿ ಹುಡಮಾಡಿ ಪುಡಮಾಡಿ
ಹಗಳದಾರತಿಯಾ[೪೭] ಗೆಯೀದಾಳೇ
ಹಗಳದಾರತಿಯಾ ಗೆಯ್ದಳೇ ಕುಸ್ಮಾಲಿ
ಮಾಳಗ್ಗಿಂದೆರಗೇ ಬರೋವಾಳೇ.
ಮಾಳಗ್ಗಿಂದೆರಗೇ ಬರ್‍ವಾಳೆ ಕುಸ್ಮಾಲಿ

(ಗ?)ದಂಡಗ್ಗಾರತಿಯಾ ಬೆಳಗಾಳೆ.
ದಂಡಗ್ಗಾರತಿಯಾ ಬೆಳಗ್ವದ್ನು ಸೂಲಿಸುಕ್ರನ
ಬಂದ್‌ದಂಡು ಹಿಂದೇ ತಿರಗದೆ.
ಬಂದ್‌ದಂಡು ಹಿಂದೆ ತಿರುಗ್ವದ್ನು ಅರ್ಜೀಣ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡ್ದಾನೆ ಅರ್ಜೀಣ

ದೇವರ ಮುಂದೋಗಿ ನಿಲೋವಾನೆ
ದೇವರ ಮುಂದೋಗಿ ನಿಲ್ವಾನೆ ಅರ್ಜೀಣ
ದೇವರ ಪೂಜ್ಯವ ಮಾಡೋವಾನೆ
ದೇವರ ಪೂಜ್ಯವ ಮಾಡ್ವಾನೆ ಅರ್ಜೀಣ
ದೇವರ್ಗೆ ಕಯ್ಯಾ ಮುಗದಾನೆ
ದೇವರ್ಗೆ ಕಯ್ಯಾ ಮುಗ್ದಾನೆ ಅರ್ಜೀಣಾ

ತೂಗುಮಂಚದ ಮೆನೆ ಕುಳೋವಾನೆ
ತೂಗುಮಂಚದ ಮೆನೆ ಕುಳುವದ್ನು ಕುಸುಮಾಲಿ
ಮಾಳೂಗೀ ಒಳಗೆ ನೆಡದಾಳೆ
ಅಟ್ಟದ ಮೆನನ ಹಾಲೂ ಹಳ್ಗನಕ್ಕಿ
ಹಾಲೂ ಪಾಯ್ಸಕೆ ಅನುಮಾಡಿ

೪೬. ತಿರುಗಿಸಬಾರದೆಂದು ೪೭. ಹವಳ

ಅಟ್ಟದ ಮೆನನ ಪುಟ್ಟುಳ್ಳ ಸಣ್ಣಕ್ಕಿ
ಅನ್ನಾ ಮೆಗರಕೆ ಅನೂಮಾಡಿ
ಹರ್ದುಟ್ಟು ಹಾಗೀಲಾ ಮುರ್ದುಟ್ಟು ತೊಂಡೀಲಾ
ಪಲಬರು ಸೊಪ್ಪು ಬಸಳೀಯಾ
ಪಲಬರು ಸೊಪ್ಪು ಬಸಳೀಯಾ ಕೂಡಿಟ್ಟಿ
ತುಪ್ಪಾದಲ್ಲದರಾ ಬೆಗೂರಿಸಿ
ತುಪ್ಪಾದಲ್ಲದರಾ ಬೆಗುರಿಸಿ ಕುಸ್ಮಾಲಿ

ಅನುಮಾಡಿದಳೊಂದು ಗಳಗ್ಯಲಿ
ಅನುಮಾಡಿದಳೊಂದು ಗಳಗ್ಯಲಿ ಕುಸುಮಾಲಿ
ಹೊನ್ನಾ ಮಣಿ ಒಂದಾ ಮಡಗಾಳೆ
ಹೊನ್ನಾ ಮಣಿ ಒಂದಾ ಮಡಗ್ವದ್ನು ಅರ್ಜೀಣಾ
ಮಣಿಯಾ ಮೆನೋಗಿ ಕುಳತಾನೆ
ಮಣಿಯಾ ಮೆನೋಗಿ ಕುಳ್ತಾನೆ ಅರ್ಜೀಣಾ

ಆಗೊಂದು ಮಾತಾ ನುಡೀದಾನೆ
"ಅನ್ನಾ ಬಡಸ್ವಂಗೆ ಯಾರೆಲ್ಲಾ ನೆನಸೀದೆ
ಅನ್ನಗಳು ನನಗೆ ಮಿಗಿಲಾದೊ
ಅನ್ನಗಳು ನನಗೆ ಮಿಗಿಲಾದೊ ಕುಸುಮಾಲಿ
ನಾನೂ ನೀನುಂಬೊ ಒಡನಲ್ಲಿ

ತುಪ್ಪಾ ಬಡಸ್ವಂಗೆ ಯಾರೆಲ್ಲಾ ನೆನಸೀದೆ
ತುಪ್ಪಗಳು ನನಗೆ ಮಿಗಿಲಾದೊ
ತುಪ್ಪಗಳು ನನಗೆ ಮಿಗಿಲಾದೊ ಅಂದೇ ಅರ್ಜೀಣಾ
ಹಿಡ್ದಾನೇ ಬಳಿಯಾ ನಳಿತೋಳಾ

"ಬಡಸ್ವಾಕೆ ಬಡಸೀದೆ ನೂರೊಂದಾ ಬಡಸೀದೆ
ಉಪ್ಪಾ ಬಡಸ್ವದಕೆ ಮರತೀದೆ
ಉಪ್ಪಾ ಬಡಸ್ವದಕೆ ಮರತೀದೆ ಅಂದ್‌ಕುಸ್ಮಾಲಿ
ಉಪ್ಪಾಯ್‌ದಲ್[೪೮] ತೊಳಾಬಿಡಸ್ಕಂಡಿ
ಉಪಪಾಯ್ದಲ್ ತೋಳಾ ಬಿಡಸ್ಕಂಡೀ ಕುಸ್ಮಾಲಿ
ಹಿತ್ಲಕಣ್ಣ ಬಾಗಲ್ಲೇ ನೆಡದಾಳೆ
ಹಿತ್ಲಕಣ್ಣ ಬಾಗಲ್ಲೇ ನೆಡ್ದಾಳೆ ಕುಸ್ಮಾಲಿ

---

೪೮. ಉಪಾಯದಿಂದ

ಹಣ್ಣು ಈಳ್ಯಾವಾ ತಡದಾಳೆ.
ಹೆಣ್ಣು ಈಳ್ಯವಾ ತಡ್ದಾಳೆ ಕುಸ್ಮಾಲಿ
ದೀಪದೂಪೆಲ್ಲಾ ತಡದಾಳೆ
ದೀಪದೂಪೆಲ್ಲಾ ತಡದಾಳೆ ಕುಸ್ಮಾಲಿ
ಬಸ್ತೀ ಅರಮನೆಗೇ ನೆಡದಾಳೆ
ಬಸ್ತಿ ಅರಮನಗೇ ನೆಡ್ದಾಳೆ ಕುಸ್ಮಾಲಿ

ಹಣ್ಣು ಈಳ್ಯವ ಅರಗಾಳೆ
ಹಣ್ಣು ಈಳ್ಯವ ಅರ್ಗ್ಗಳೆ ಕುಸ್ಮಾಲಿ
ದೀಪ ದೂಪೆಲ್ಲಾ ಕಸೀದಾಳೆ[೪೯]
ದೀಪದೂಪೆಲ್ಲಾ ಕಸಿದಾಳೆ ಕುಸ್ಮಾಲಿ
ತೆಂಗಿನೆಳಗಾಯಿ ಒಡದಾಳೆ.
ಕಾಯೊಡದೇ ಕಯ್ಯ್ಯಾ ಮುಗ್ದಾಳೆ ಕುಸ್ಮಾಲಿ

ನಾಬತ್ತೆ ಬಸ್ತಿ ಒಡನಲ್ಲಿ
ಬಸ್ತಿ ಹತ್ತದಮೆನೆ ಬಲಗೂಳ್[೫೦] ತಿಂದಮೆನೆ
ಬಸ್ತಿಕಿಂದ ಕೆಳಗೆ ಇಳೀಬಾರಾ
ಬಸ್ತಿಕಿಂದ್ ಕೆಳಗೆ ಇಳಿಬಾರಾ ಕುಸುಮಾಲಿ
ನೀನೋಗೇ ನಿನ್ನಾ ಅರಮನಗೆ"

"ಬಸ್ತಿ ಹತ್ತರ ಮೆನೆ ಬಲಗೂಳ್ ತಿಂದರ ಮೆನೆ
ಬಸ್ತಿಕಿಂದ್ ಕೆಳಗೆ ಇಳುವಾದಿಲ್ಲ
ಬಸ್ತಿಕಿಂದ್ ಕೆಳಗೆ ಇಳೂದಿಲ್ಲ ಬಸ್ತಿಕೇಳೆ
ನಾಬತ್ತೆ ನಿನ್ನಾ ಒಡನಲ್ಲ"

"ನಿನ್ನಾ ಮನಿಯಲ್ಲಿ ಅತ್ತಿರ್ಗುí ಮಾವಿರ್ಗುí
ಕಯ್ತುಡ್ದಾ ಪುರಿಸರು ಮನಿಲಿರ್ಗುí
ಕಯ್ತುಡ್ದಾ ಪುರಿಸರು ಮನಿಲಿರ್ಗುí ಕುಸುಮಾಲಿ
ನೀ ಹೋಗೇ ನಿನ್ನಾ ಅರಮನೆಗೆ".

"ನನ್ನಾ ಮನಿಯಲ್ಲಿ ಅತ್ತಿಲ್ಲ ಮಾವಿಲ್ಲ
ಕಯ್ತುಡ್ಡಾ ಪುರಿಸರು ಮನಿಲಿಲ್ಲ
ಕಯ್ತುಡ್ಡಾ ಪುರಿಸರು ಮನಿಲಿಲ್ಲ ಬಸ್ತಿಕೇಳೆ

೪೯. ಹಚ್ಚಿದಳು ೫೦. ಬಲಿಕೊಳ

ನಾಬತ್ತೆ ನಿನ್ನಾ ಒಡನಲ್ಲೀ
ನಾಬತ್ತೆ ನಿನ್ನಾ ಒಡ್ನಲ್ಲಿ ಅಂದೇಳಿಕುಸ್ಮಾಲಿ
ಬಸ್ತಿಯ ಕಲ್ಲಾ ನೆಗದಾಳೆ
ಬಸ್ತಿಯ ಕಲ್ಲಾ ನೆಗ್ಗದ್ನು ಗಿಳಿಗೋಳು
ಹಾರೀದವಂಬರಕೇ ಸೆರಿಯಾಗಿ.

"ಮಾಳೂಗೀ ಒಳಗೆ ಹಾಲೋಗರುಂಬರ್ಜೀಣಾ
ಕೇಳಿ ಬಾರೊಂದು ಹೊಸಸುದ್ದಿ
ಕೇಳಿಬಾರೊಂದು ಹೊಸಸುದ್ದಿ ಕುಸುಮಾಲಿ
ಬಸ್ತಿಯ ಕಲ್ಲಾ ನೆಗದಾಳೆ"
"ಉಪ್ಪಿಗೇಗೋದೆಣ್ಣೆ ಉಪ್ಪರಗಿ ನೆಗದೀಯ.
ಮತ್ತೆ ಸಾಗರವಾ ಇಳದೀಯಾ"
ಮತ್ತೆಸಾಗರವಾ ಇಳದಿಯಾ ಅಂದೇಳ್ ಅರ್ಜೀಣಾ

ಉಣುವಾ ಕಯ್ಯಲ್ಲೆ ಕುಡೋಗೆದ್ದಿ[೫೧]
ಉಣುವಾ ಕಯ್ಯಲ್ಲೆ ಕುಡ್ಗೆದ್ದಿ ಅರ್ಜೀಣಾ
ಪನ್ನೀರಲೆ ಮೊಕವಾ ತೊಳದಾನೆ
ಪನ್ನೀರಲೆ ಮೊಕವಾ ತಳದಾನೆ ಅರ್ಜೀಣಾ
ಬಸ್ತಿ ಅರಮನಗೇ ನೆಡದಾನೆ.
ಬಸ್ತಿ ಅರ್ಮನಗೇ ನೆಡ್ದಾನೆ ಅರ್ಜೀಣಾ
ಬಸ್ತೀಗೇ ಕಯ್ಯಾ ಮುಗದಾನೆ

"ಕುಸ್ಮಾಲಿ ಮಿಯ್ಯೊರಣಾ[೫೨] ಈಳೀ ಹಣ್ಣೀನೊರಣಾ
ಮಿಯ್ಯೊಸಾಜೊಂದೂ ಕಲೀಇಲ್ಲ
ಮಿಯ್ಯೊಸಾಜೊಂದು ಕಲಿಇಲ್ಲ ಕುಸ್ಮಾಲಿ
ಹಿಂಗಿರುವೆ ಅಂದೀ ಅರಿಯಾವೇ
ಹಿಂಗಿರುವೆ ಅಂದೀ ಅರಿಯಾವೇ ಕುಸುಮಾಲಿ
ಈಗರು ಬಾಮನಿಗೋಪಾ[೫೩]

ಕುಸ್ಮಾಲಿ ಮಿಯ್ಯೊರಣಾ ನಿಂಬೀ ಹಣ್ಣೀನೊರಣಾ
ಮಿಯ್ಯೊ ಸಾಜೊಂದು ಕಲಿಇಲ್ಲ
ಮಿಯ್ಯೊ ಸಾಜೊಂದು ಕಲಿಇಲ್ಲ ಕುಸುಮಾಲಿ

---

೫೧. ಕೊಡವಿಎದ್ದು   ೫೨. ಮೈಬಣ್ಣ   ೫೩ ಹೋಗುವಾ

ಹಿಂಗಿರುವೆನಂದಿ ಅರಿಯಾವೆ.
ಹಿಂಗಿರುವೆನಂದಿ ಅರಿಯಾವೆ ಕುಸುಮಾಲಿ
ಈಗರು ಬಾ ಮನಿಗೋಪಾ"

"ಬಸ್ತಿಹತ್ತದ ಮನೆ ಬಳಗೂಳ್ ತಿಂದರಮನೆ
ಬಸ್ತಿಕಿಂದ್ ಕೆಳಗೆ ಇಳೂದಿಲ್ಲ
ಬಸ್ತಿಕಿಂದ್ ಕೆಳಗೆ ಇಳೂದಿಲ್ಲ ದೆವಾರೆ
ನಿವ್ಹೋಗಿ ನಿಮ್ಮಾ ಅರಮನಗೆ.

ಕಟ್ದ ಮನದೆ ಹೂಡೀದೊಲದೆ[೫೪]
ಕೂಡಾಡ್ವರವ್ರೆ ಒಡನಲ್ಲಿ
ಕೂಡಾಡ್ವರವ್ರೆ ಒಡನಲ್ಲಿ ದೆವರೆ
ನೀವ್ಹೋಗಿ ನಿಮ್ಮ ಅರಮನಗೆ"

"ಕುಸ್ಮಾಲಿ ಮಿಯ್ಯೊರಣಾ ಬಾಳೀ ಹಣ್ಣೀನೊರಣಾ
ಮಿಯ್ಯೂಸಾಜೊಂದು ಕಲೆಯಿಲ್ಲ
ಮಿಯ್ಯೂಸಾಜೊಂದು ಕಲೆಯಿಲ್ಲ ಕುಸುಮಾಲಿ
ಹಿಂಗಿರುವೆ ನಂದೀ ಅರಿಯಾವೆ
ಹಿಂಗಿರುವೆ ನಂದೀ ಅರಿಯಾವೆ ಕುಸುಮಾಲಿ

ಈಗರೂ[೫೫] ಬಾರೆ ಮನಿಗೋಪಾ
ಈಗರು ಬಾರೆ ಮನಿಗೋಪಾ ಅಂದೇಳಿ
ರಟ್ಟೀಯಾ ತಟ್ಟೇ ಎಳದಾರೆ
ರಟ್ಟೀಯಾ ತಟ್ಟೇ ಎಳ್ವದ್ನು ಕುಸುಮಾಲಿ
ಅರ್ಶೀಣೆಲಿಯಾಗಿ[೫೬] ಹುಸದ್ ಬಂದಿ[೫೭]
ಅರ್ಶೀಣೆಲಿಯಾಗಿ ಹುಸದ್ ಬರ್ವದ್ನು ಅರ್ಜೀಣಾ

ಜುಟ್ಟವ ತಟ್ಟೇ ಎಳದಾನೆ
ಜುಟ್ಟವ ತಟ್ಟೆ ಎಳ್ವದ್ನು ಕುಸುಮಾಲಿ
ದುರ್ವಿ[೫೮] ಜಡ್ಡಾಗಿ ಹುಸದ್ ಬಂದಿ
ದುರ್ವಿ ಜಡ್ಡಾಗಿ ಹುಸದ್ ಬರ್ವದ್ನು ಕುಸುಮಾಲಿ
ಆಗೊಂದು ಮಾತಾ ನುಡೀದಾಳೆ

೫೪. ಹೂಡಿದ ಬೆಲೆಯಿದೆ ೫೫. ಈಗಾದರೂ ೫೬. ಅರಿಸಿನ ಎಲೆಯಾಗಿ ೫೭. ಹರಿದು ೫೮. ಗರಿಕೆ

"ವರ್ಸಾಕೊಂದ್ ಬಾರೀಯ ಸೂಲ್ಯಮ್ ಉದ್ಯಪ್ಪಾಗೆ[೫೯]
ಸುರ್ಗಿ ಹೂಂಗಾಗಿ ಬರತೇನೆ
ನಾರಿಯೋರ್ ಕಟ್ಟಿದ ಸರಮುಡಿಯಾ ಸೆಳಗಂಟ್ನ ಮೇಲಲಿಯತೆ
ಕಂಡೇ ಸಂತಸವಾ ಬಿಡಲಕ್ಕಿ
ಕಂಡೆ ಸಂತಸವಾ ಬಿಡಲಕ್ಕಿ ದೆವಾರೇ

ನೀವ್ಹೋಗೀ ನಿಮ್ಮಾ ಅರಮನಗೆ
ನೀವ್ಹೋಗಿ ನಿಮ್ಮಾ ಅರ್ಮನಗೆ ಅಂಬದ್ನು
ತನ್ನ ಅರಮನಗೆ ಬರವನೆ

೫೯. ಮೂಡುವಾಗ

ನಾಲ್ವರು ಹೆಂಡಿರು

ಹಾಸೋ ಹಾಸಿನ ಮೆನೇ ಹಾಸಿದಳೆ ಗದ್ದಿಗೆಯ
ಲೇಸಾ ಮಾಡಿದಳೆ ತಲೆದಿಂಬಾ
ಲೇಸಾ ಮಾಡಿದಳೆ ತಲೆದಿಂಬಾ ರೋಪತಿ[೧]
ತಾನೂ ದೊಡ್ಡವರಾ ಮಗಳಂದಿ
ತಾನೂ ದೊಡ್ಡವರಾ ಮಗಳಂದಿ ರೋಪತಿ
ಹಾಸನ ಮೆನೋಗಿ ಒರೂಗಳೆ
ಹಾಸನ ಮೆನೋಗಿ ಒರುಗಾಳೆ ರೋಪತಿ

ಕಂಡಳೆ ಸಂಗ್ರಮದಾ ಕನಸೊಂದು
ಕನಸಾ ಕಂಡಾಳೆ ಮನಸಿಲಿ ನೆನಸಿಟ್ಟಾಳೆ
ಮಯ್ಯಾ ಮುರುದೆದ್ದಿ ಕುಳೂತಾಳೆ
ಮಯ್ಯಾ ಮುರುದೆದ್ದಿ ಕುಳುತಾಳೆ ರೋಪತಿ
ಮಾಳಗ್ಗಿಂದೆರಗೆ ಬರೋವಾಳೆ
ಮಾಳಗ್ಗಿಂದೆರಗೆ ಬರುವಾಳು ರೋಪತಿ

ಪನ್ನೀರಲಿ ಮೊಕವಾ ತೊಳದಾಳೆ
ಪನ್ನೀರಲಿ ಮೊಕವಾ ತೊಳದಾಳೆ ರೋಪತಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ರೋಪತಿ
ಪನ್ನೀರಾ ಗಿಂಡೀ ಮಡೋಗಾಳೆ
ಪನ್ನೀರಾ ಗಿಂಡಿ ಮಡಗಾಳೆ ರೋಪತಿ

ಹಿಂದಿನ ಬಾಗಿಲಾಗೇ ನೆಡದಾಳೆ
ಹಿಂದಿನ ಬಾಗಿಲಾಗೆ ನೆಡದಾಳೆ ರೋಪತಿ
ಅತ್ತಿಯರ ಮನಗೇ ನೆಡದಾಳೆ
ಅತ್ತಿಯರ ಮನಗೇ ನೆಡದಾಳೆ ರೋಪತಿ

---

೧. ದ್ರೌಪದಿ ೨. ಅತ್ತೆಕುಂತಿ

ಹೋಗಿ ಬಾಗಲ್ಲಿ ನಿಲೂವಾಳು
ಹೋಗಿ ಬಾಗಲ್ಲಿ ನಿಲುವದ್ನು ಅತ್‌ಕುಂತಿ[೨]
ಮಾಳಗ್ಗಿಂದೆರಗೇ ಬರೋವಾಳೆ
ಮಾಳಗ್ಗಿಂದೆರಗೇ ಬರವದ್ನು ರೋಪತಿ
ತೂಗು ಮಂಚದಲೆ ಕುಳತಾಳೆ
ತೂಗು ಮಂಚದಲೆ ಕುಳತಾಳೆ ರೋಪತಿ
ಲಾಗೊಂದು[೩] ಮಾತಾ ನುಡದಾಳೆ

"ನಾಕು ಕಳಸಾ ಕಂಡೆ ನಾಕು ಕನ್ನುಡಿ ಕಂಡೆ
ನೀಲಾನಂಬು ಚೇಜೀ[೪] ಇರಳೆ ಕಂಡೆ
ನೀಲಾನಂಬು ಚೇಜಿ ಇರಳೆ[೫] ಕಂಡೆ ಅತ್ತಿಯರೆ
ನಾ ಕಂಡಾ ಕನಸಾ ಒರಿಯಾ–ಬಂದೆ"[೬]

"ನಾಕು ಕಳಸಂಬದು ನಾಕು ತಂಗೀದೀರೇ
ನೀಲಾನಂಬ ಚೇಜೀ ಪುರೀಸಾನೆ
ನೀಲಾನಂಬ ಚೇಜೀ ಪುರಿಸಾನೆ ರೋಪತಿ
ನೀ ಕಂಡ ಕನಸು ಹುಸಿಯಲ್ಲಾ"
"ತಂದಾ ಹೆಂಡಾರು ತಂದಾಂಗೇ ಇರ್ತಲಾಗಿ
ಮತ್ ನಿಮ್ಮಗ್ಗಿಂತಾ[೭] ಮದವೀಯೇ"

"ಮಾತ ಕಲ್ತರಜಿಣ್ಣಾ ಹತ್ತೆಣ್ಣಾ ತರುವಾನೇ
ಮತ್ತೆ ಅರ್ಜಿಣ್ಗೆ ಹಳುವಿಲ್ಲಾ"[೮]
ಅಟ್ಟಂಬಾ ಮಾತಾ ಕೇಳಾಳೆ ರೋಪತಿ
ಬಾವಾನರ ಮನಗೇ ನೆಡದಾಳೇ
ಬಾವಾನರ ಮನಗೇ ನೆಡದಾಳೆ ರೋಪತಿ
ಹೋಗಿ ಬಾಗಲ್ಲೆ ನಿಲೋವಾಳು
ಹೋಗಿ ಬಾಗಲ್ಲೆ ನಿಲುವನ್ನು ಒಳಗಿದ್ದಾ

ಬಾವಾನು ಹೆರುಗೇ ಬರೋವಾನೆ
ಬಾವಾನು ಹೆರುಗೇ ಬರುವದ್ನು ರೋಪತಿ
ಆಗೊಂದು ಮಾತಾ ನುಡೀದಾಳೆ
"ನಾಕು ಕಳಸಾ ಕಂಡೆ ನಾಕು ಕನ್ನುಡಿ ಕಂಡೆ
ನೀಲಾನಂಬ ಚೇಜಿ ಇರುಳೆ ಕಂಡೆ

೨. ಅತ್ತೆಕುಂತಿ ೩. ಆಗೊಂದು ೪. ಕುದುರೆ ೫. ರಾತ್ರಿ ೬. ಹೇಳಬಂದೆ ೭. ನಿಮ್ಮ ಮಗನಿಗೆಂಥ ೮. ಕುಂದು ಇಲ್ಲ.

ನೀಲಾನಂಬು ಚೇಜಿ ಇರುಳೆ ಕಂಡೆ ಬಾವಾನೋರೆ
ನಾ ಕಂಡಾ ಕನಸಾ ಒರಿಯಾ–ಬಂದೆ"
ನಾಕು ಕೆಲಸಬಂದು ನಾಲ್ವರು ತಂಗೀದೀರೆ
ನೀಲಾನಂಬ ಚೇಜಿ ಪುರಿಸನೆ
ನೀಲಾನಂಬ ಚೇಜಿ ಪುರಿಸನೆ ರೋಪತಿ
ನೀ ಕಂಡ ಕನಸು ಹುಸಿಯಿಲ್ಲ

ಅಟ್ಟಂಬಾ ಮಾತಾ ಕೇಳಿದಳೆ ರೋಪತಿ
ಸಿಟ್ಟಿನಲ್ಲೆದ್ದಿ ಬರೋವಳೆ
ದಿಡದಿಡನಸೀತೇ ನೆಲವೇ ಜಂತರಸೀತೆ
ಎಡಗೀದಾ[೯] ಬೆರಳು ಅರಿಯಾವೇ
ಎಡಗೀದಾ ಬೆರಳು ಅರಿಯಾವೇ ರೋಪತಿ
ತನ್ನಲರಮನಗೇ ಬರೋವಾಳು
ತನ್ನಲರಮನಗೇ ಬರೋವಾಳೇ ರೋಪತಿ

ಸಾದೇವನೊಡನೋಗಿ ನಿಲೋವಾಳೆ
ಸಾದೇವನೊಡನೋಗಿ ನಿಲುವಾಳು ರೋಪತಿ
ಆಗೊಂದು ಮಾತಾ ನುಡೀಡಾಳೆ
"ಕಾಲು ಮೊರಿಯ ತೊಳಿಯೋ ಹಾಲುಗಂಜಿಯನುಣ್ಣೋ"
ಬೂಮು ದೇವತಗೆ ಸರಣನ್ನೋ ಸಾದೇವಾ
ಓಲೆ ಒತ್ತಗೀಯಾ[೧೦] ಬಿಡಿಸೋದೋ"

ಕಾಲುಮೊರಿಯ ತೊಳದಾ ಹಾಲುಗಂಜಿಯನುಂಡಾ
ಬೂಮುದೇವತಗೆ ಸರಣಂದಾ.
ಬೂಮುದೇವತಗೆ ಸರಣಂದಾ ಸಾದೇವಾ
ಓಲೆ ಒತ್ತಗಿಯಾ ಬಿಡಸಾನೆ
ಓಲೆ ಓದುತೆ ಅತ್ತಗಿಮೊರಿನೋಡುತೆ
ಪನ್ನೀ ಮರಿಯಲ್ಲೆ ಮುಗುಳುನೆಗ್ಗಿ
ಪನ್ನೀ ಮರಿಯಲ್ಲೆ ಮುಗುಳುನೆಗ್ಗಿ ಆಡೀತಾ

ಅತ್ತುಗಿಗೆ ಬುದ್ದೀ ಒರದಾನೆ.
ಅತ್ತುಗಿಗೆ ಬುದ್ದೀ ಏನಂದೀ ಒರುದಾನೆ

"ಅಣ್ಣಾನಾಲ್ವರಾ ತರೋತಾನೆ
ಬೆಟ್ಟದ ನೆಲ್ಲಿಕಾಯಾ ಹೊರೂಸ್[೧೧]–ಹೋಗೇ

---

೯. ಎಡವಿದ ೧೦. ಪುಸ್ತಕ ೧೧. ಹೊರಿಸು

ಬೆಟ್ಟದ ನೆಲ್ಲಿಕಾಯಾ ಹೊರ್‍ರ್ಸೋಗೇ ಅತ್ತೀಗೆ
ಚಪ್ಪರಕೊಪ್ಪಾಗಿ ಹರಗೀಸೆ.
ಅಟ್ಟಂಬಾ ಮಾತಾ ಕೇಳಾನೆ ಅರಜಿಣಾ

ಕೂತ ಮಂಚವ ಜಡೂದೆದ್ದೇ.
ಕೂತ ಮಂಚವ ಜಡೂದೆದ್ದೇ ಅರಜೀಣಾ
ಮಾಳುಗಿ ಒಳಗೆ ನೆಡದಾನೆ.
ಮಾಳುಗತಿ ಒಳಗೆ ನೆಡದಾನೆ ಅರಜೀಣಾ
ಪೆಟ್ಟೂಗೀ ಬಾಯಾ ತೆಗದಾನೆ
ಪೆಟ್ಟೂಗೀ ಬಾಯಾ ತೆಗೆದಾನೆ ಅರಜೀಣಾ

ಮುಚ್ಚೀಲ ತಗದಿ ಕಡಗಿರುಸೀ
ಮುಚ್ಚೀಲಾ ತಗದಿ ಕಡಗಿರುಸಿ ಅರಜೀಣಾ
ಪಟ್ಟೆ ಜೋತುರವಾ ನೆರದುಟ್ಟೀ
ಪಟ್ಟೆ ಜೋತುರವಾ ನೆರದುಟ್ಟೀ ಅರಜೀಣಾ
ಕೋಲು ನೆವಳವಾ ಇಳಲಿಟ್ಟಿ
ಕೋಲು ನೆವಳವಾ ಇಳಲಿಟ್ಟಿ ಅರಜೀಣಾ

ಮುತ್ತನ ಮುಂಡಸನಾ ತಲಗ್ ಸುತ್ತಿ
ಮುತ್ತನ ಮುಂಡಸನಾ ತಲಗ್ ಸುತ್ತಿ ಅರಜೀಣಾ
ಬೆರಳೀಗುಂಗಲವಾ ಇಡೋವಾನೆ
ಬೆರಳೀ ಗುಂಗಲವಾ ಇಡೊವಾನೆ ಅರಜೀಣಾ
ಬಾಸಿಂಗಾ ಒಂದಾ ತಡೀದಾನೆ
ಬಾಸಿಂಗಾ ಒಂದಾ ತಡಿದಾನೆ ಅರಜೀಣಾ

ನಾಕು ತಂಡಲವಾ[೧೨] ತಡೀದಾನೆ
ನಾಕು ತಂಡಲವಾ ತಡಿದಾನೆ ಅರಜೀಣಾ
ನಾಕು ತಳಿಬಂದೀ[೧೩] ತಡೀದಾನೆ
ನಾಕು ತಳಿಬಂದೀ ತಡಿದಾನೆ ಅರಜೀಣಾ
ಅದು ಎಲ್ಲಾ ಸೆಳ್ಳುಗರೀಲಡಗೀಸಿ
ಅದು ಎಲ್ಲಾ ಸೆಳ್ಳುಗರೀಲಡಗಿಸಿ ಅರಜೀಣಾ

ಪೆಟ್ಟುಗಿ ಬಾಯಾ ಮಡಗಾನೆ
ಪೆಟ್ಟುಗಿ ಬಾಯಾ ಮಡಗಾನೆ ಅರಜೀಣಾ
ಮಾಳಗ್ಗಿಂದೆರಗೇ ಬರೋವಾನೆ

೧೨. ತೊಂಡಿಲು ೧೩. ತಾಳಿ

ಮಾಳಗ್ಗಿಂದೆರಗೇ ಬರೋವಾನೆ ಅರಜೀಣಾ
ರಾಜಂಗಳ ಮೆಟ್ಟ್ವಾ ಇಳಿದಾನೆ
ರಾಜಂಗಳ ಮೆಟ್ಟ್ವಾ ಇಳಿದಾನೆ ಅರಜೀಣಾ

ಬೋರೀನೇ ರತವಾ ನೆಗದತ್ತೀ
ಬೋರೀನೇ ರತವಾ ನೆಗದತ್ತೀ ಅರಜೀಣಾ
ತನ್ನಾ ರಾಜ್ಯಾನೇ ಗಳೀದಾನೆ
ತನ್ನಾ ರಾಜ್ಯಾನೇ ಗಳೀದಾನೆ
ತನ್ನಾ ರಾಜ್ಯಾನೇ ಗಳೀದಾನೆ ಅರಜೀಣಾ
ಮೂಡನ ರಾಜೀಕೇ ನೆಡದಾನೆ
ಮೂಡನ ರಾಜೀಕೇ ನೆಡದಾನೆ ಅರಜೀಣಾ

ಬೋರೀನೇ ರತವಾ ಇಳೀದಾನೆ
ಮೂಡನ ರಾಜೀಕೋಗಿ ಮೂಡನ ತೀರಿತಾ ಮಿಂದೀ
ಮೂಡನರ ಬಾಸೀ[೧೪] ಕಲೀತಾನೆ
ಮೂಡನರ ಬಾಸೀ ಕಲಿತಾನೆ ಅರಜೀಣಾ
ಮೂಡನ ಪಪ್ಪಳಿಯಾ[೧೫] ದರೂಸಾನೆ[೧೬]
ಮೂಡನ ಪಪ್ಪಳಿಯಾ ದರಸ್ವದ್ನು ಅರಜಿಣಗೆ

ಮೂಡಣರಜಿಣರು ಮಗಳಾ ಕೊಡುತೇ
ಮೂಡಣರಜಿಣರು ಮಗಳಾ ಕೊಡುತೆ ಅಂಬುದುನು
ಅಲ್ಲೊಂದ್ ತಾಳೀಬಂದೀ ಕೊಡೋವಾನೇ
ಅಲ್ಲೊಂದ್ ತಳಿಬಂದೀ ಕೊಡೋವಾನೇ ಅರಜೀಣಾ
ಅಲ್ಲೊಂದಾ ಪಟ್ಟೀ ಕೊಡೋವಾನೇ
ಅಲ್ಲೊಂದ್ ಪಟ್ಟೀ ಕೊಡೋವಾನೇ ಅರಜೀಣಾ

ಅಲ್ಲೊಂದ್ ತಂಡಲವಾ ಕೊಡೋವಾನೇ.
ಅಲ್ಲೊಂದ್ ತಂಡಲಬಾ ಕೊಡೋವಾನೇ ಅರಜೀಣಾ
ಅಲ್ಲೊಂದು ಕನ್ನೀ ಕಯದಾರಿ
ಅಲ್ಲೊಂದು ಕನ್ನೀ ಕಯ್ದಾರಿ ಅರಜೀಣಾ

ತೆಂಕಣ ರಾಜೀಕೇ ನೆಡದಾನೇ.
ತೆಂಕಣ ರಾಜೀಕೋಗಿ ತೆಂಕನ ತೀರುತಾ[೧೭] ಮಿಂದೀ
ತೆಂಕನರ[೧೮] ಬಾಸೀ ಕಲೂತಾನೇ
ತೆಂಕನರ ಬಾಸೀ ಕಲತಾನೆ ಅರಜಿಣಗೆ

---

೧೪. ಭಾಷೆ ೧೫. ಉಡುಗೆ ೧೬. ಧರಿಸಿದನು ೧೭. ತೀರ್ಥ ೧೮. ದಕ್ಷಿಣದವರ

ತೆಂಕಣರಜಿಣರು ಮಗಳಾ ಕೊಡುತೇ
ತೆಂಕಣರಜಿಣರು ಮಗಳಾ ಕೊಡುತೆ ಅಂಬದನು

ಅಲ್ಲೊಂದು ಪಟ್ಟೀ ಕೊಡೋವಾನೇ
ಅಲ್ಲೊಂದು ಪಟ್ಟೀ ಕೊಡೋವಾನೇ ಅರಜೀಣಾ
ಅಲ್ಲೊಂದು ತಳಿ ಕೊಡೋವಾನೇ
ಅಲ್ಲೊಂದು ತಳಿ ಕೊಡೋವಾನೇ ಅರಜೀಣಾ
ಮುತ್ತಿನ ತಂಡಲವಾ ಕೊಡೋವಾನೇ
ಮುತ್ತಿನ ತಂಡಲವಾ ಕೊಡೋವಾನೇ, ಅರಜಿಣಗೇ

ಅಲ್ಲೊಂದು ಕನ್ನೀ ಕಯದಾರಿ
ಅಲ್ಲೊಂದು ಕನ್ನೀ ಕಯ್ದಾರಿ ಅರಜೀಣಾ
ಬಡಗನ ರಾಜೀಕೇ ನೆಡದಾನೆ
ಬಡಗನ ರಾಜೀಕೋಗಿ ಬಡಗನ ತೀರುತಾಮಿಂದೀ
ಬಡಗನರ ಬಾಸೀ ಕಲೋತಾನೆ
ಬಡಗನರ ಬಾಸೀ ಕಲೋತಾನೆ ಅರಜಿಣಗೆ

ಬಡಗನರಜಿಣರು ಮಗಳಾ ಕೊಡುತೆ
ಬಡಗನಜಿಣರು ಮಗಳಾ ಕೊಡುತೆ ಅಂಬದನು
ಅಲ್ಲೊಂದು ಪಟ್ಟೀ ಕೊಡೋವಾನೇ
ಅಲ್ಲೊಂದು ಪಟ್ಟೀ ಕೊಡೀವಾನೇ ಅರಜೀಣಾ
ಅಲ್ಲೊಂದು ತಳಿಬಂದೀ ಕೊಡೋವಾನೇ
ಅಲ್ಲೊಂದು ತಳಿಬಂದೀ ಕೊಡೋವಾನೇ ಅರಜೀಣಾ

ಅಲ್ಲೊಂದು ತಂಡಲವಾ ಕೊಡೋವಾನೇ
ಅಲ್ಲೊಂದು ತಂಡಲವಾ ಕೊಡೋವಾನೆ ಅರಜಿಣಗೆ
ಅಲ್ಲೊಂದು ಕನ್ನಿ ಕಯದಾರಿ
ಅಲ್ಲೊಂದು ಕನ್ನೀ ಕಯ್ದಾರಿ ಅರಜೀಣಾ

ಪಡುಗನ[೧೯] ರಾಜೀಕೇ ನೆಡದಾನೆ
ಪಡುಗನ ರಾಜೀಕೋಗಿ ಪಡುಗನ ತೀರುತಾಮಿಂದೀ
ಪಡುಗನರ ಬಾಸೀ ಕಲೋತಾನೆ
ಪಡುಗನರ ಬಾಸೀ ಕಲೋತಾನೆ ಅರಜೀಣಾ
ಪಡುಗನರ ಪಪ್ಪಾಳಿಯ ದರೂಸಾನೆ
ಪಡುಗನರ ಪಪ್ಪಾಳಿಯ ದರುಸಾನೆ ಅರಜಿಣಗೆ

---

೧೯. ಪಶ್ಚಿಮದ

ಪಡುಗನರಜಿಣರು ಮಗಳಾ ಕೊಡುತೆ
ಪಡುಗನರಜಿಣರು ಮಗಳಾ ಕೊಡುತೆ ಅಂಬದ್ನು

ಅಲ್ಲೊಂದು ಸಾಲೀ ಕೊಡೊವಾನೇ
ಅಲ್ಲೊಂದು ಸಾಲೀ ಕೊಡೋವಾನೇ ಅರಜೀಣಾ
ಅಲ್ಲೊಂದು ತಂಡಲವಾ ಕೊಡೋವಾನೇ
ಅಲ್ಲೊಂದು ತಂಡಲವಾ ಕೊಡೋವಾನೇ ಅರಜೀಣಾ
ಅಲ್ಲೊಂದು ತಳಿಬಂದೀ ಕೊಡೋವಾನೇ
ಅಲ್ಲೊಂದು ತಳಬಂದೀ ಕೊಡುವಾನೇ ಅರಜಿಣಗೆ
ಅಲ್ಲೊಂದು ಕನ್ನೀ ಕಯೋದಾರಿ

ನಾಕು ರಾಜೀಕೋಗಿ ನಾಕು ತೀರುತಾಮಿಂದೀ
ನಾಕೂರಾಬಾಸೀ ಕಲತಾನೆ
ನಾಕೂರ ಬಾಸೀ ಕಲತಾನೆ ಅರಜೀಣಾ
ನಾಕೂರಾಕನ್ನೀ ಒಡಗುಂಡೀ[೨೦]

ಆಊರಕ್ಕಿ ಕೊಂಡಾ ಆಊರ್‌ಬೆಲ್ಲಾ ಕೊಂಡಾ
ರಾಜಮಾರ್ಗದಲ್ಲೇ ಒಲೀಹೂಡೇ
ರಾಜ ಮಾರ್ಗಲ್ಲೆ ಒಲೀಹೂಡೇ
ರಾಜ ಮಾರ್ಗಲ್ಲೆ ಒಲಿಹೂಡವರಯ್ವರ್‍ರು
ಅಡಗೀಮಾಡುಂಡಾರೊಂದು ಗಳಗ್ಯಲ್ಲೆ
ಅಡಗೀಮಾಡುಂಡಾರೊಂದು ಗಳಗ್ಯಲವರಯ್ವರ್‍ರು

ಬೋರೀನೇ ರತವಾ ನೆಗದತ್ತೇ
ಬೋರೀನೇ ರತವಾ ನೆಗದತ್ತೇ ಅವರಯ್ವರ್‍ರು
ರಾಜಾಬಿದಿಗಾಗೇ ಬರೋವಾರೇ
ರಾಜಾಬಿದಿಗಾಗೇ ಬರುವಾರೇ ಅವರಯ್ವರು

ತಮ್ಮಾಲರಮನಗೇ ಬರೋವಾರೇ
ತಮ್ಮಾಲರ ಮನಗೇ ಬರುವಾರೇ ಅರಜಿಣಾ
ಈಳ್ಳೀಯಾ ಬನಕೇ ಬರೋವಾನೇ
ಈಳ್ಳೀಯ ಬನದಲ್ಲಿ ಇಳ್ಳಿಯ ನಿಲ್ಲಸಗಿ[೨೧]
ಈಳ್ಳೀ ಹಣ್ಣೇಳಾ ಮೆಲ ಕೊಟ್ಟೇ

ಬಾಳಿಯ ಬನದಲ್ಲಿ ಬಾಮಿಯ[೨೨] ನಿಲ್ಲಸಗೀ
ಬಾಳೀ ಹಣ್ಣೀಳಾ ಮೆಲಕೋಟ್ಟೇ

---

೨೦. ಕೂಡಿಕೊಂಡು   ೨೧. ನಿಲ್ಲಿಸಿ   ೨೨. ಭಾಮೆಯ, ನಲ್ಲೆಯ

ಕಂಚೀ ಬನದಲ್ಲಿ ಕೆಂಚಿಯ[೨೩] ನಿಲ್ಲಸಗೀ
ಕಂಚೀ ಹಣ್ಣೇಳಾ ಮೆಲಕೊಟ್ಟೀ
ನಿಂಬಿ ಬನದಲ್ಲಿ ರಂಬಿಯ ನಿಲ್ಲಸಗಿ
ನಿಂಬೀ ಹಣ್ಣೇಳಾ ಮೆಲಕೊಟ್ಟೀ.[೨೪]
ನಿಂಬೀ ಹಣ್ಣೇಳಾ ಮೆಲಕೊಟ್ಟೀ ಅರಜೀಣಾ
ಬಂದೀ ಬಾಗಲ್ಲೇ ನಿಲೋವಾನೇ

"ಯಾರೇ ಅಕ್ಕದೀರು ಯಾರೇ ತಂಗಾದೀರು
ಯಾರೇ ಈಮನಗೆ ಹಿರಿಯೋಳು.
ಯಾರೇ ಈಮನಗೆ ಹಿರಿಯೋಳು ರೋಪತಿ
ತಾರೇ ಒಂದಚಂಬ[೨೫] ಉದಕವಾ"
"ಒಂದು ಚಂಬುದಕಾ ಇಲ್ಲೆರು ಕೊಡುವಾರು
ಕೊಡುವಾರು ಬಾಳೀ ಬನದಲ್ಲಿ
ಕೊಡವಾರು ಬಾಳೀ ಬನದಲ್ಲಿ ಹೋದಾರೇ

ಅಲ್ಲೊಂದ್ ಚಂಬುದಕಾ ಕೊಡುವಾರು
ಒಂಚು ಚಂಬುದಕಾ ಇಲ್ಲೆರು ಕೊಡುವಾರು
ಕೊಡುವಾರು ಈಳೀ ಬನದಲ್ಲಿ
ಕೊಡುವಾರು ಈಳೀ ಬನದಲ್ಲಿ ಹೋದಾರೇ
ಅಲ್ಲೊಂದ್ ಚಂಬುದಕಾ ಕೊಡುವಾರು.
ಒಂದು ಚಂಬುದಕಾ ಇಲ್ಲೆರು ಕೊಡುವಾರು

ಕೊಡುವಾರು ಕಂಚಿಬನದಲ್ಲಿ
ಕೊಡುವಾರು ಕಂಚಿ ಬನದಲ್ಲಿ ಹೋದಾರೇ
ಅಲ್ಲೊಂದ್ ಚಂಬುದಕಾ ಕೊಡುವಾರು.
ಒಂದು ಚಂಬುದಕಾ ಇಲ್ಲೆರು ಕೊಡುವಾರು
ಕೊಡುವಾರು ನಿಂಬೀ ಬನದಲ್ಲಿ
ಕೊಡುವಾರು ನಿಂಬೀಬನದಲ್ಲಿ ಹೋದಾರೆ
ಅಲ್ಲೊಂದ್ ಚಂಬುದಕಾ ಕೊಡೋವಾರು"
ಅಟ್ಟಂಬಾ ಮಾತಾ ಕೇಳಾನೆ ಅರಜೀಣಾ

ಕವ್ಲೀ ಕೊಟ್ಟಗ್ಗೇ[೨೬] ನೆಡದಾನೆ
ಕವ್ಲೀ ಕೊಟ್ಟಗ್ಗೇ ನೆಡದಾನೆ ಅರಜೀಣಾ
ಕವ್ಲಿಯಾ ಬಿಟ್ಟೀ ಹೊಡದಾನೆ

---

೨೩. ಕೆಂಪಿಯ ೨೪. ತಿನ್ನಲುಕೊಟ್ಟು ೨೫. ಒಂದು ತಂಬಿಗೆ ೨೬. ಕೊಟ್ಟಗೆಗೆ

ಕವ್ಲಿಯಾ ಬಿಟ್ಟೀ ಹೊಡದಾನೆ ಅರಜೀಣಾ
ಹೂಂಗಿನಕ್ಕಲಗೇ[೨೭] ಹೊಡದಾನೆ
ಹೂಂಗಿನಕ್ಕಲಗೇ ಹೊಡದಾನೆ ಅರಜೀಣಾ
ಆಗೊಂದು ಮಾತಾ ನುಡೀದಾನೆ

"ಯಾರೇ ಅಕ್ಕಾದೀರು ಯಾರೇ ತಂಗಾದೀರು
ಯಾರೇ ಈ ಮನಗೇ ಹೆರಿಯೋಳು
ಯಾರೇ ಈ ಮನಗೇ ಹೆರಿಯೋಳು ರೋಪತಿಯಾ
ಹೂಂವಿಗೀನಕ್ಲೆಲ್ಲಾ ದನ ಮಿಂತು"
ಅಟ್ಟಂಬಾ ಮಾತಾ ಕೇಳಾಳೆ ರೋಪತಿ
ಮಾಳಗ್ಗಿಂದೆರಗೇ ಬರೋವಾಳೆ
ಮಾಳಗ್ಗಿಂದೆರಗೇ ಬರೋವಾಳು ರೋಪತಿ

ಕವ್ಲೀಯ ಕೊಟ್ಟಗ್ಗೇ ಹೊಡದಾಳೆ
ಕವ್ಲೀಯ ಕೊಟ್ಟಗ್ಗೇ ಹೊಡದಾಳೆ ರೋಪತಿ
ಮಾಳೂಗಿ ಒಳಗೇ ನೆಡದಾಳೆ
ಮಾಳೂಗಿ ಒಳಗೆ ನೆಡವದ್ನು ಅರಜೀಣಾ
ಬಾಳೀಯಾ ಬನಕೇ ನೆಡದಾನೆ
ಬಾಳೀಯ ವನದಲ್ಲಿ ಭಾಮಿಯ ಕರಕಂಡಿ

ಕಂಚೀಯ ವನಕೆ ನೆಡದಾನೆ
ಕಂಚೀಯ ವನದಲ್ಲಿ ಕೆಂಚಿಯ ಕರಕಂಡೀ
ಈಳೀಯ ವನಕೆ ನಡೆದಾನೆ
ಈಳೀಯ ವನದಲ್ಲಿ ಈಳೀಯ ಕರಕಂಡಿ

ನಿಂಬಿಯ ವನಕೆ ನೆಡದಾನೆ
ನಿಂಬಿಯ ವನದಲ್ಲಿ ರಂಬೆಯ ಕರಕಂಡಿ
ಬಂದೀ ಬಾಗಲ್ಲೇ ನಿಲೋವಾನೇ
ಬಂದೀ ಬಾಗಲ್ಲೇ ನಿಲುವದ್ನು ರೋಪತಿ
ಒಂದು ಚಂಬುದಕಾ ತರೋವಾಳೇ
ಒಂದು ಚಂಬುದಕಾ ತರೋವಾಳೇ ರೋಪತಿ

ಅರಜಿಣಗೆ ಉದಕಾ ಕೊಡೋವಾಳು
ಅರಜಿಣಗೆ ಉದಕಾ ಕೊಡುವದ್ನು ಅವರಯ್ವರು
ಕಾಲಾ ಸಿರಿಮೊಕವಾ ತೊಳದಾರೆ

೨೭. ಹೂವಿನ ತೋಟಕ್ಕೆ

ಕಾಲಾ ಸಿರಿಮೊಕವಾ ತೊಳದಾರೆ ಅವರಯ್ವರು
ಮಾಳೂಗಿ ಒಳಗೆ ನಡದಾರೆ
ಮಾಳೂಗಿ ಒಳಗೆ ನೆಡವದ್ನು ರೋಪತಿ

ಹಸವೀಗ್ ಹಾಲ್ಗಂಜಿ ಬಡಸಾಳೆ
ಹಸವೀಗ್ ಹಾಲ್ಗಂಜಿ ಬಡಸ್ವದ್ನು ಅರಜೀಣಾ
ಊಟಕೆ ಹೋಗಿ ಕುಳತಾನೆ
ಊಟಕೆ ಹೋಗಿ ಕುಳತಾನೆ ಅರಜೀಣಾ
ಉಂಡೆದ್ದನೊಂದು ಗಳಗ್ಯಲ್ಲಿ
ಉಡೆಂದ್ದನೊಂದು ಗಳಗ್ಯಲ್ಲಿ ಅರಜೀಣಾ

ಪನ್ನೀರಲಿ ಮೊಕವಾ ತೊಳದಾನೆ
ಪನ್ನೀರಲಿ ಮೊಕವಾ ತೊಳದಾನೆ ಅರಜೀಣಾ
ತೂಗುಮಂಚದಲಿ ಕುಳತಾನೆ
ತೂಗುಮಂಚದಲಿ ಕುಳತಾನೆ ಅರಜೀಣಾ
ರನ್ನದೊಂದೀಳ್ಯಾ ಮೆಲೋವಾನೇ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಆಗೊಂದು ಮಾತಾ ನುಡೀದಾನೆ

"ನೀವಯ್ವರು ಒಟ್ಟೀಳ್ಯ[೨೮] ಮೆಲುವಂಗೆ
ನಾನೊಬ್ಬನಾದೆ ಬಡವಂವ್[೨೯]
ತಂದಾ ಹೆಂಡೀರು ತಂದಂಗೆ ಇರದೀರೆ
ಬಾಗಲ ಸದಿನಾರು[೩೦] ತೆಗಿಯಾರಿ"

ಬಾಗ್ಲಲ್ನ ಸದಿತೆಗುವಕೆ ನಾವ್ ಬಡವರ ಮಕ್ಕಳಲ್ಲ
ಬಡಗಣರಜಣರಾ ಮಗಳ್‌ದೀರು
ಬಡಗಣರಜಣರಾ ಮಗಳ್‌ದೀರು ಸಲ್ಲದೀರೆ[೩೧]
ಬಿಟ್ಟೀ ಬಿಡಿ ನಮ್ಮಾ ತಗರೀಗೆ"[೩೨]
"ತಂದಾ ಹೆಂಡೀರು ತಂದಂಗೇ ಇರದೀರೆ[೩೩]
ಕೊಟ್ಟಗಿ ಸಗಣಿಯಾರು ತೆಗಿಯಾರಿ"

"ಕೊಟ್ಟಗಿ ಸಗಣಿ ತೆಗವಾಕೆ ನಾವ್ ಬಡವರ ಮಕ್ಕಳಲ್ಲ
ತೆಂಗಣರಜಣರಾ ಮಗಳ್‌ದೀರು
ತೆಂಕಣರಜಣರಾ ಮಗಳ್‌ದಿರು ಸಲ್ಲದೀರೇ

---

೨೮. ಒಟ್ಟಿಗೆ ತಾಂಬೂಲ ೨೯. ಬಡವನು ೩೦ ಕಸವನ್ನು ೩೧. ಬೇಡದಿದ್ದರೆ ೩೨. ತವರಿಗೆ
೩೩. ಇರದಿದ್ದರೆ

ಬಿಟ್ಟಿ ಬಿಡಿ ನಮ್ಮಾ ತಗರೀಗೆ”
“ತಂದಾ ಹೆಂಡೀರು ತಂದಂಗೆ ಇರದೀರೆ
ಒಸ್ತಲ[೩೪] ಕಸನಾರು ಗುಡಿಸೀರೆ”

“ಒಸ್ತಲ ಕಸಗುಡಸ್ವಕೆ ಬಡವರ ಮಕ್ಕಳಲ್ಲ
ಮೂಡಣರಜಿಣರಾ ಮಗಳ್‌ದೀರು
ಮೂಡಣರಜಿಣರಾ ಮಗಳ್‌ದಿರು ಸಲ್ಲದೀರೆ
ಬಿಟ್ಟಿ ಬಿಡಿ ನಮ್ಮಾ ತಗರೀಗೆ”
“ತಂದಾ ಹೆಂಡೀರು ತಂದಂಗಿರದೀರೆ
ಒಳಗನ್ ಪಾತ್ರಾನಾರು ತೊಳಿಯಿರೆ”

“ಒಳಗನ ಪಾತ್ರಾ ತೊಳವಕ್ಕೆ ನಾವ್ ಬಡವರ ಮಕ್ಕಳಲ್ಲ
ಪಡವಣರಜಿಣರಾ ಮಗಳ್‌ದಿರು
ಪಡವಣರಜಿಣರಾ ಮಗಳ್‌ದಿರು ಸಲ್ಲದೀರೆ
ಬಿಟ್ಟಿ ಬಿಡಿ ನಮ್ಮಾ ತಗರೀಗೆ

---

೩೪. ಹೊಸ್ತಿಲ

ಧರ್ಮರು

ಸಂಬು ಸಂಕರಗೆ[೧] ಎಂಬತ್ತು ಬಾಗಲದೇ
ತುಂಬೀ ಕೆದಗೀಯಾ ಅರಗೂವ್ರೋ[೨] । ನಮಗೊಳ್ಳಾ[೩]
ತುಂಬಿದ್ದ ಪದನಾ[೪] ಬರೋಬೇಕೆ

ಸಂಬು ಸಂಕರಗೆ ನಾಲ್ವತ್ತು ಬಾಗಲಗೋಗಿ
ಮಲ್ಲಗೀ ಅರಳಾ ಅರಗೂವ್ರೊ । ನಮಗೊಳ್ಳಾ
ತುಂಬಿದ್ದಾ ಪದನಾ ಬರೋಬೇಕೇ

ಅಂಬರ ಮೆನನಾ[೫] ನಿಂಬೀ ಹಣ್ಣೇ ಬಾರೇ
ರಂಬೇರಂಜಿಸುವಾ ಗಿಳೀ ಬಾರೇ । ಸಿಂಗಾರಾದಾ
ಕೊನೆಯೊಡದೇ ಬಾರೇ ಕಳಸಕೆ

ಅಂಬರ ಮೆನನಾ ನಿಂಬೀ ಹಣ್ಣೇ ಬಾರೇ
ರಂಬೇರಾಡಿಸುವಾ ಗಿಳೀ ಬಾರೇ । ಕೆದಗೀಯಾ
ಕೊನೆಯೊಲದೇ ಬಾರೇ ಕಳಸಕೆ

ಕೆಸಕ್ಕಿ ಕೆಂದೊಳಾ[೬] ರಾಸಾಗುಡದಾ[೭] ಬೆಲ್ಲಾ
ಉದ್ದಾ ಉಂಡಾಳಿಯಾ ಹುರೋಗಡಲೆ[೮] । ಹರವರ್ಳ[೯] ತುಂಬೇ
ಮತಿಅಕ್ಕನ ಬಳಿಗೆ ಕಳಗೂವ್ರೋ
ಮತಿಅಕ್ಕನ ಬಳಿಗೆ ಏನೇಳಿ ಕಳಗೂವ್ರೋ
ನನ್ನಾಡಿಗೆ ಮತಿಯಾ ಕೊಡೋಬೇಕೇ

ಹಾಡಿಗೆ ಮತಿ ಕೊಡುಕೆ ನಾನೊಬ್ಬಳಲ್ಲವೇ
ನನ್ನಮ್ಮಾದೇವಿ ಸರಸ್ವತಿ । ಅಲ್ಲೋದರೆ
ನಿನ್ನಾಡಿಗೆ ಮತಿಯಾ ಕೊಡೋವಾಳೇ

ಎಲ್ಲವರ ಮಾತಿಗೆ ನಿಲ್ಲಳೆ ಸರಸತಿ
ತೆನಿಯಾ ಕದರಂತೆ ಬಳಕೀತೆ[೧೦] । ಬಾಡೀತೇ
ನನ್ನಾಡಿಗೆ ಮತಿಯಾ ಕೊಡೋವಾಳೇ

---

೧. ಶಿವಶಂಕರನಿಗೆ ೨. ಅರ್ಪಿಸುವೆವು ೩. ನಮಗೆ ಒಳ್ಳೆಯ ೪. ಪದ ೫. ಮೇಲಿನ ೬. ಕೆಂಪಕ್ಕಿ ಕೆಂದೂಳು ೭. ರಸವೊರಸುವ ೮. ಹುರಿಗಡಲೆ ೯. ಹರಿವಾಣ ೧೦. ಬಳುಕುತ್ತ

ಇಂದೀಗೇಳಿದ[೧೧] ಹಾಡು ಎಂದೀಗೆ ತೀರಿಗೆ[೧೨]
ಅಂಗಳ್ಳೇ[೧೩] ಬೂಮೀ ಮಣೆ ಇರಸೇ । ಕರದಾರೇ
ಪಂಚ ಪಾಂಡವ್ರ ಕತೆ ಹಾಡೇ

ಇಂದೀಗೇಳಿದ ಹಾಡು ಎಂದೀಗೇ ತೀರಿಗೇ
ಆದಗಲೇ ಬೂಮೀ ಮಣೆ ಇರಸೇ । ಕರದಾರೇ
ಪಂಚ ಪಾಂಡವ್ರ ಕತೆ ಹಾಡೇ

ಸಿಂಗನ ನೆನವನೇ ಸಿರಹರೀ ನೆನವನೇ
ತಿಂಗಳಕೇ ಮೂರೋ ಕದೋರಾಗೇ[೧೪] । ಪಾಂಡೋರಾ
ಸುಂಗಾರದ ಕತಿಯಾ ತೊಡಗೂವೋ

ಅರಸೂ ನೆನವನೆ ಅರಸೂತೀ ನೆನವನೆ
ಉರಸೀಗೆ ಏಳೋ ಕದೋರಾಗೇ । ಪಾಂಡೋರಾ
ಅರಸೀಯಾ ಮೊದಲೇ ನೆನವನೇ

ಅರಸೂ ನೆನವನೆ ಅರಸೂತಿ ನೆನವನೇ
ವರಸೀಗೆ ಎಯ್ಡೋ ಕದೋರಾಗೇ । ಪಾಂಡೋರಾ
ಅರಸೀಯಾ ಮೊದಲೇ ನೆನವನೆ

ಕಡದಾ ಕಲ್ಲಾಮೆನೇ ಮಡದೀ ಮಂಡಲ ಬರದೆ
ಇಡಲೂಗೀ[೧೫] ನೆರಿಯೂ ಅಸೋರೀಸೇ[೧೬] । ಪಾಂಡೋರಾ
ಅರಸೀಯಾ ಮೊದಲೇ ನೆನವನೇ

ಕಡದಾ ಕಲ್ಲಾಮೆನೇ ಮಡದೀ ಮಂಡಲಬರದೆ
ಸೋಗೀಯಾ[೧೭] ನೆರಿಯಾ ಅಸೋರೀಸೇ । ಪಾಂಡೋರಾ
ಅರಸೀಯಾ ಮೊದಲೇ ನೆನವನೇ.

ದರ್ಮರಾಸಗ್ಗೇ[೧೮] ಅರಗು ಮಲ್ಲಗಿ ಹಾಸೇ
ತರದಲ್ ದೀವಗೀಯಾ ಕಸೋದಿಟ್ಟೇ[೧೯] । ದರ್ಮರು
ಹಾಸನ ಮೆನೋಗೇ ಒರೂಗಾರೇ[೨೦]

ದರ್ಮರಾಸಗ್ಗೇ ತುಂಬೀ ಮಲ್ಲುಗೀ ಹಾಸೇ
ತಾಣಾ ದೀವಗಿಯಾ ಕಸೋದಿಟ್ಟೇ । ದರ್ಮರು
ಹಾಸನ ಮೆನೋಗೇ ಒರಗಾರೆ

---

೧೧. ಈ ಹೊತ್ತು ಹೇಳಿದ ೧೨. ತೀರುವುದು ೧೩. ತಿಂಗಳದಲ್ಲಿ ೧೪. ತೆನೆಯಾಗಿ ೧೫. ಒಂದು ಬಗೆಯ ನೆರಿಗೆ ೧೬. ಪಸರಿಸಿ ೧೭. ನವಿಲು ೧೮. ಧರ್ಮರಾಜನ ಹಾಸಿಗೆಗೆ ೧೯. ಹಚ್ಚಿಟ್ಟು ೨೦. ಹಾಸಿಗೆಯ ಮೇಲೆ ಹೋಗಿ ಮಲಗಿದರು

ಹಾಸನ ಮೆನೋಗೇ ಒರಗ್ವದ್ನು ರೋಪತಿ
ತಾನೊಡನೋಗೇ ಒರೂಗಾಳೆ । ರೋಪತಿ
ಕಂಡಳೆ ಸಂಗ್ರಮದ[೨೧] ಕನಸನೆ.

ಕನಸಾ ಕಂಡಾಳೆ ಮನಸಿಲಿ ನೆನಸಿಟ್ಟಾಳೆ
ಮೆಯ್ಯಾ ಮುರುದೆದ್ದೇ ಕುಳೋತಾಳೇ[೨೨] । ರೋಪತಿ[೨೩]
ಪನ್ನೀರಾ ಗಿಂಡೀ ಬಲಗಯ್ಲೀ । ತಡಕಂಡೆ[೨೪]

ಮಾಳಗ್ಗಿಂದೆರಗೇ ಬರೋವಾಳೇ । ರೋಪತಿ
ಕಾಲೋಸಿರಿಮೊಕವಾ ತೊಳದಾಳೇ
ಕಾಲೋಸಿರಿ ಮೊಕವಾ ತೊಳದಳೆ ರೋಪತಿ

ಮೊಳಕಾಲಾ ಮೆನೇ ಸಿರಿನಿಂದೇ ।
ಮೊಳಕಾಲ ಮೇನೆ ಸಿರಿನಿಂದದ ಕಂಡಾಳೆ
ಮಾಳುಗೀ ಒಳಗೆ ನೆಡದಾಳೆ । ರೋಪತಿ

ಪನ್ನೀರಾ ಗಿಂಡಿ ಮಡೋಗಾಳೆ ।
ಪನ್ನೀರ ಗಿಂಡಿ ಮಡಗಾಳೆ ರೋಪತಿ
ದರ್ಮರ ಸಾಯಕದಾ ಹರಳಾಮುಟ್ಟೇ

ದರ್ಮರ ಸಾಯಕದ ಹರಳ್ಮುಟ್ಟೀಳ್ಯವಾ
ಆಯಾ ಕೊಂದೀಳ್ಯಾ ಮೆಲೋವಾಳೇ
ಎಲಿಯೊಂದ್ ತಿಂದಾಳೆ ರಜವಲ್ಲೇ ಉಗಳಾಳೆ

ರಾಜಂಗ್ಳ ಮೆಟ್ಟಾ ಇಳದಾಳೆ । ರೋಪತಿ
ರಾಜಬಿದಿಗಾಗೇ ನೆಡದಾಳೆ । ರೋಪತಿ
ಅತ್‌ಕುಂತೀ[೨೫] ಅರ್ಮನಗೇ ನೆಡದಾಳೆ

ಅತ್‌ಕುಂತೀ ಅರ್ಮನಗೆ ನೆಡ್ವದ್ನು ಅತ್‌ಕುಂತೀ
ಅರಗೀ ನೋಡಿದಳೆ ಹೆರಗೊಮ್ಮೆ
ಆಳೀಗಾಳಿಲ್ಲಾ ಮುಡಿಗೆ ಸತ್ತೂಗಿಲ್ಲಾ

ರೋಪತ್ ಬರುಬರವೇ ಹೊಸಪರಿ[೨೬] ಅಂದೇಳಿ
ಮಾಳುಗೀ ಒಳಗೆ ನೆಡದಾಳೆ
"ಪಾಂಡೋರ್ ಕ್ವೊಪಾ ಮಿಕ್ಕತೊ ಮೀರಿತೊ ಏನೋ

---

೨೧. ಸಂಭ್ರಮದ ೨೨. ಕುಳಿತಳು ೨೩. ದ್ರೌಪದಿ ೨೪. ತೆಗೆದುಕೊಂಡು ೨೫. ಲತ್ತೆ ಕುಂತಿ ೨೬. ಹೊಸರೀತಿ

ಏನಾತಪ್ಪಿದಳೊ ನಿಜನಾರಿ । ಅಂದೇಳೇ ಅತ್‌ಕುಂತೀ
ಮಾಳುಗೀ ಒಳಗೆ ನೆಡದಾಳೆ । ಅತ್‌ಕುಂತೀ
ತನ್ನಾ ಗವ್ಡೇರಾ ದೆನಿದೋರೇ[೨೭]

ತನ್ನಾ ಗವ್ಡೇರ ದೆನಿದೋರಿ ಕರೆವದ್ನು ಒಡ್ನಲ್ಲಿ ।
ನಿಂದಾರೆ ಅತ್‌ಕುಂತೀ ಒಡನಲ್ಲಿ
ಅತ್‌ಕುಂತಿ ಒಡ್ನಲ್ಲೀ ನಿಂದೀಕಂಡೇ
ಏನು ಕಾರಣಲೆ ಕರದೀಯೆ ।

ಕರದಂ ಕಾರ್ಯವಿಲ್ಲಾ ಕಿರಿದುಂಬೆಸರ ಸಯ್ಯೆ
ರೋಪತ್ ಬರುಬರವೇ ಹೊಸಪರಿಗವ್ಡೀಯೋರ
ತಡಿಯಿರೆ ಚಂಬಗಲೆ[೨೯] ಉದಕವೆ

ಪಾದಾತೊಳಿಯಿರೆ ಪಾವಡ ದಲ್ಲುದ್ದೀರೆ
ಹೊನ್ನು ಹರಳೊಯ್ದೇ ಸರಣನ್ನೀ । ಗವ್ಡೀಯೋರೆ[೩೦]
ತೂಗು ಮಂಚದಲೆ ಕುಳೋವೇಳಿ

ಅಟ್ಟಂಬಾ ಮಾತಾ ಕೇಳಾರೆ ಗವ್ಡೀಯೋರು
ತಡದಾರೆ ಚಂಬಗಲೇ ಉದಕವೇ । ರೋಪತಿ
ಬಂದೀ ಬಾಗಲ್ಲೇ ನಿಲೋವಾಳೆ.

ಪಾದಾ ತೊಳ್ದರೇ ಪಾವಡದಲ್ಲುದ್ದಾರೆ
ಮುತ್ತು ಹರಳೊಯ್ದೇ ಸರಣಂದೇ

ಪಾದಾ ತೊಳ್ದಾರೆ ಪಾವಡದಲ್ಲುದ್ದಾರೆ
ಹೊನ್ನು ಹರಳ್ಳೊಯ್ದೇ ಸರಣಂದೇ । ಗವ್ಡೀಯೋರು
ತೂಗುಮಂಚದಲೆ ಕುಳೋವೇಳಿ ।
ತೂಗುಮಂಚಲೆ ಕುಳವೇಳುದ್ನು ಒಳಗಿದ್ದ
ಅತಕುಂತೀ ಹೆರುಗೇ ಬರೋವಾಳು.

ಆಯೊಳ್ಳ[೩೧] ಹಣಡಕೆ ಸೋಯಿಸಿದ[೩೨] ಬೆಲಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡಿ[೩೩]
ಮಾಳಗ್ಗಿಮದೆರಗೇ ಬರೋವಾಳು । ಅತಕುಂತೀ
ರೋಪತಿ ಒಡನೋಗಿ ನಿಲೋವಾಳು ।
ರೋಪತಿ ಒಡನೋಗಿ ನಿಲುವದ್ನು ಅತಕುಂತೀ
ರೋಪತಿಗೊಂದೀಳ್ಯಾ ಕೊಡೋವಾಳು

೨೭. ಕರೆದಳು ೨೮. ಹಿಡಿಯಿರಿ ೨೯. ತಂಬಿಗೆಯಲ್ಲಿ ೩೦ ದಾಸಿಯರೆ ೩೧. ಹದವಾದ ೩೨. ಆಯ್ಕೆಮಾಡಿದ ೩೩. ತೆಗೆದುಕೊಂಡು

ಅತ್ತೆ ಕೊಟ್ಟೀಳ್ಯ ತಟ್ಟಾನೆ ತಡದಾಳೆ.
ಅತ್ತೀಸಿರಿ ಪಾದಕೆ ಸರಣಂದೇ
ಅತ್ತೀಸಿರಿ ಪಾದಕೆ ಸರಣಂಬುದ್ನು ಆತ್‌ಕುಂತೀ
ಆಗೊಂದು ಮಾತಾ ನುಡೀದಾಳೆ.

"ಆಯ್ಸುವಂತಳಾಗೆ ಆಯ್ಸಬಲಿದವಳಾಗೇ
ನೀನಿಡು ಚಿನ್ನೊಲೆ ತಿರವಾಲಿ[೩೪]
ಆಯ್ಸುವಂತಳಾಗೆ ಆಯಸ ಬಲಿದವಳಾಗೇ
ನೀನಿಡು ಹೊನ್ನೊಲೆ ತಿರವಾಲಿ"

"ನಾನಿಡು ಹೊನ್ನೊಲಿಗೆ ಎಲ್ಲರು ಹರಸಾರೆ ಅತ್ತೆ
ಅರಸಾಗಳು ಅಯ್ವರು ಮಗದಿರಗೆ । ಅತ್ತೀಯೋರೆ
ಕಂಡ್‌ಕನ್ಸ್[೩೫] ಅತ್ಯೋರ್ಗೆ ಒರಿಯಾಬಂದೆ

ಸತ್ಯಾ ಕುಲದರು ನಮ್ಮಾ ತತ್ತಗ್[೩೬] ಬಂದಾಡ್ವಂಗೆ
ಸತ್ಯುಳ್ ದರ್ಮರಾ ತಲಿಯಾ ಸೋಲೇ।ಲ।ಂದೇ
ಗುರ್‍ರಾಯಾ[೩೭] ನೆನಸೇ ಬರದಾನೆ । ಅತ್ತೀಯೋರೆ
ಕಂಡ್‌ಕನ್ಸ್ ಅತ್ತಿಯೋರ್ಗೆ ಒರಿಯಾಬಂದೆ"

"ಕಂಡಾ ಕನಸೀಗೆ ಮಾಳೂಗೀಗ್ ಹೋಗ್‌ಬೈಗೆ
ಹೇಳೂಗೀ[೩೮] ತಂದೇ ಹೆರೂಗಿರಸೇ[೩೯]
ಕಂಡ್ ಕನಸೀಗೆ ಅಟ್ಟಕೆ ಹೋಗ್‌ಬೆಗೆ
ಪೆಟ್ಟೂಗೀ ತಂದೇ ಹೆರೂಗಿರಸೇ

ಬಾರ್ಕೂರತ್ತಣ[೪೦] ಬಟ್ಟರ ಕರಸೀಕಂಡೇ
ಕಳಸದ ಸತ್ತುಗಿಯಾ ನೆಳಲಾಡೇ । ಮಿಂದೀಕಂಡೇ
ಹಾರೋರ್ಗೆ[೪೧] ದಾನಾ ಕೊಡೆಹೋಗೆ

ಬಟ್ಕಳತ್ತಣ ಬಟ್ಟರ ದರಸೀ ಕಂಡೇ[೪೨]
ಕಳಸದ ಸತ್ತಗಿಯಾ ನೆಳಲಾಡೇ । ಮಿಂದೀಕಂಡೇ
ಬಟ್ಟರಿಗೆ ದಾನಾ ಕೊಡೆ ಹೋಗೆ.

ಎತ್ತಾ ದಾನಾಮಾಡೇ ತುತ್ತಾ[೪೩] ದಾನಾಮಾಡೇ
ಉಟ್ಟದ್ ದಾನವಾ ಮಿಗಲಾ ಮಾಡೇ
ಅನ್ನಾ ದಾನಾಮಾಡೇ ಸುಣ್ಣಾ ದಾನಾಮಾಡೇ
ಸುವರ್ನನ ದಾನಾ ಮಿಗಲಾಮಾಡೇ.

೩೪ ಸ್ಥಿರವಾಗಲಿ ೩೫. ಕಂಡಕನಸನ್ನು ೩೬. ಜೊತೆಗೆ ೩೭. ಕುರುರಾಯ ೩೮. ಬುಟ್ಟಿ ೩೯. ಹೊರಗಿಡು
೪೦. ಬಾರ್ಕೂರು ಕಡೆಯ ೪೧. ಬ್ರಾಹ್ಮಣರಿಗೆ ೪೨. ಕಂಡುಕೊಂಡು ೪೩. ದಾಸಿ

ಕೊಟ್ಟೊಗೀ ಒಳಗೀನಾ ಗಟ್ಟು[೪೪] ಮಣಕೆಮ್ಮೀಯಾ
ಬಾಲಕ್ ಸುವರ್ನಾ ಗಳಿಸೀದಾ । ಎಮ್ಮೀಯಾ
ಬಟ್ಟರಿಗೆ ದಾನಾ ಕೊಡೆಹೋಗೆ.

ಅಟ್ತೂಗೆ[೪೫] ಇಟ್[೪೬] ತೂಗೇ ಮುಟತುಂಬದಮಲ್ಲೂಗೇ
ಹಿಡತುಂಬೀದೆಲಿಯಾ ಅಡಕೀಯಾ।ಯ। ಈಳ್ಯವಾ
ತಂದ್ಬಚ್ಚೀ ಬಂದಾ ಹಲರೀಗೆ

ನೀಕಂಡಾ ಕನಸೀಗೆ ನೀನೇ ದಾನಾಮಾಡೇ
ಮತ್ ತನ್ ಬಾಲರಿಗೆ ಅಳವಿಲ್ಲ । ಅಂಬುದ್ನು
ರೂಪತ್ ಸಿಟ್ಟಿನಲ್ಲೆದ್ದೇ ಬರೋವಾಳೇ

ದಿಡದಿಡನಸೀತೇ[೪೭] ನೆಲವಾ ಜಂತರಸೀತೆ
ಇಡಗೀದಾ[೪೮] ಬೆರಳು ಅರೀಯದೆ । ರೂಪತಿ

ರಾಜಂಗ್ಳ ಮೆಟ್ಟಾ ಇಳೀದಾಳೆ ।
ರಾಜಂಗ್ಳ ಮಟ್ಟ ಇಳಿದಾಳೆ ರೂಪತಿ
ರಾಜಬೀದಿಗಾಗೇ ಬರೋವಾಳೇ
ರಾಜಬಿದಿಗಾಗೇ ಬರ್ವದ್ನು ಇಲ್ಲಿನ್ನು
ದರ್ಮರ ಸುಮನಿದ್ರಿ ಹುರೀದಾವೇ
ದರ್ಮರ ಸುಮನಿದ್ರಿ[೪೯] ಹುರ್ವದ್ನು ದರ್ಮರು
ಮಿಯ್ಯಾ ಮುರುದೆದ್ದೇ ಕುಳತಾರೆ

ಬಾಗಲ್ಲಿರ್ತಿತು[೫೦] ಚಂಬಗಲುದಕಾ ಕೊಡ್ತಿತ್ತು
ರೂಪತಿ ಹೊಳಲು[೫೧] ಹೊಳುವಾದಿಲ್ಲ । ಅಂದ ದರ್ಮರು
ಅಡಗೀ ಸಾಲೀಗೇ ನೆಡದಾರೆ । ದರ್ಮರು
ಸಂಬರರವಲ್ಲೆ[೫೨] ನಿಲೋವಾರೇ । ದರ್ಮರು
ಲಾಗೊಂದು ಮಾತಾ ನುಡೀದಾರೆ.

ಸಂಬರರವರೆ ಕುಂಬಳ ಕೊರವರೆ
ಒಟ್ಟಾಗೆ ಬ್ವೊನಾ[೫೩] ಸಮೆವರೇ । ಸಾಮಾನರುವರೆ

ರೋಪತಿ ಹೋದಾ ತೆರಣೇನೆ[೫೪]
ರೋಪತೀ ಹೋದಾ ತೆರಣೇತನಗೇಳಂದೇ
ಒಂದೋಂದೇ ಕಣ್ಣೋ ಕಡೋಕೆಂಡಾ । ಸೂಸೀತಾ

---

೪೪. ಗಟ್ಟಿ ೪೫. ಇಷ್ಟು ೪೬. ದಡವೆನ್ನುತ್ತ ೪೮. ಎಡವಿದ ೪೯. ಹೂನಿದ್ದೆ ೫೦. ಬಾಗಿಲಲ್ಲಿರುತ್ತಿದ್ದಳು
೫೧. ಸುಳಿವು ೫೨. ಸಂಬಾರ ಅರೆಯುವಲ್ಲಿ ೫೩. ಲನ್ನ ೫೪. ಕಾರಣವೇನು ?

ನಾರ್‍ಯೋ ರಂಜಿಸದಾ ಇಮದಿಂದೆ[೫೫] । ದರ್ಮರು
ಸಾಸಮಿ ಅರವಲ್ಲೇ ನಿಲೋವಾರೆ.

"ಸಾಸಮಿ ಅರವರೆ ಸೂಸೀಕಾ ಕೊರವರೆ
ಒಟ್ಟಾಗೇ ಬೊನಾ ಸಮೆವರೆ । ನಿಸ್ತ್ರೀಯೋರೆ
ರೋಪತೀ ಹ್ವೋದಾ ತೆರಣೇನೆ
ರೋಪತೀ ಹ್ವೋದಾ ತೆರಣೇಳಂದೇ
ಎಯ್ಡೆಯ್ಡು ಕಣ್ಣೋ ಕಡೋಕೆಂಡಾ[೫೬] । ಸೂಸೀತಾ
ನಿಸ್ತ್ರೋರಂಜಿಸದಾ ಇಮದಿಂದೆ.

"ದೆವರೆ ನಿಮ್ಮರಸೀ ಸೋವು[೫೭] ತಮಗಿಲ್ಲ
ತಾಂವ್ ಕಾಣಂಬಾರೆ ಅರಸೀಯಾ

ಅಟ್ಟಂಬಾ ಮಾತಾ ಕೇಳಾರೆ ದರುಮರು
ಹಿತ್ಲಕಣ್ಣ[೫೮] ಬಾಗಲ್ಲೇ ನೆಡದಾರೆ । ದರುಮರು
ತಮ್ಮಾ ಮನಿಕೂಸ್ನಾ ದೆನೀದೂರೇ[೫೯]
ತಮ್ಮಾ ಮನಿಕೂಸ್ನಾ ದೆನಿದೋರುದ್ನು ಮನಿಕೂಸಾ
ಓಯ್ಗುಂಡೇ ಹೆರಗೇ ಬರೋವಾನೇ
ಓಯ್ಗುಂಡೇ ಹೆರಗೇ ಬಂದೀ ಏನಂಬಾನೆ
ಏನು ಕಾರಣಲೆ ಕರದೀಯೋ
ಕರದಂಬಾಕಾರ್‍ಯವಿಲ್ಲ ಸಿರ್ದುಂಬೆಸರ ಸಯ್ಯೆ
ರೋಪತೆಟ್ಟಿರುಳೇ ನೆಡದೀತೋ

ದೆವರೆ ನಿಮ್ಮರಸೀ ಸೋವು ನಮಗಿಲ್ಲ
ತಾಕಾಣಂಬನೇ ಅರಸೀಯೇ

ಅಟ್ಟಂಬಾ ಮಾತಾ ಕೇಳಾರೆ ದರುಮರು
ಹಿತ್ಲಕಣ್ಣ ಬಾಗಲ್ಲೇ ಹೆರೋಟಾರೆ[೬೦] । ದರುಮರು
ಕಲ್ಲದಣ್ಪಿದಾಟೇ[೬೧] ನೆಡದಾರೆ ।
ಹರುನೀರ್ ತಡಿಯಲ್ಲೇ ನಿಲೋವಾರೆ

ಹರ್‌ನೀರ್ ತಡಿಯಡೇ ತಾಂವ್ ನಿಂದಾರೆ ದರುಮರು
ತಾಂವ್ ನಿಂದಾರೆ ನೀರಾ ತಡಿಯಲ್ಲಿ । ರೋಪತಿಯಾ
ಹೊನ್ನಾಲಿ ಕೆಮಿಯೇ[೬೨] ಹೊಳದಾವೇ ।
ಚಿನ್ನೊಲಿ ಕೆಮಿಯೇ ಹೊಳದಾವೇ

೫೫. ಸಿಟ್ಟಿನಿಂದ ೫೬. ಎರಡೂ ಕಣ್ಣು ಬಹಳ ಕೆಂಪು ೫೭. ಸುಳಿವು ೫೮. ಹಿತ್ತಲ ಕಡೆಗಿನ
೫೯. ಕರೆದರು ೬೦ ಹೊರಟರು ೬೧ ಕಲ್ಲಿನ ಗೇಟು(ದಣಪೆ) ೬೨. ಕಿವಿ

ಚಿನ್ನೊಲಿ ಕೆಮಿಯೇ ಹೊಳ್ವದ್ನು ದರುಮರು
ಆಗೊಂದು ಮಾತಾ ನುಡೀದಾರೆ

"ನಾರೇನಮ್ಮರಸಿ ಊರೊಪ್ಪಿ ತಿರುಗಿದೆ
(ಹಾ?) ಆದಾವೇ ಮುಳ್ಳೋ ತಳನಲ್ಲೇ । ರೋಪತಿ
ನಾನಿನ್ನ ಕಾಣದೆ ಇರೋಲಾರೆ

"ಮುಳ್ಳ ತೆಗವಕೆ ಇಲ್ಲೆರು ಬಲ್ಲರೆ
ಬಲ್ಲಂತ ರಾಜ್ಯ ಬಟಕಳ । ಹೆಣ್ಣಾಮಕ್ಳು
ಸೆಳ್ಳುಗರಲೆ ಮುಳ್ಳಾ ತೆಗವರೆ"

"ದಾಸನ ನೆಡುನೋಳು ದೇಸೊಪ್ಪಿ ಹೋಗಿದಿಯೋ
ದಾಸೀಗೂಳಕ್ಕೆ ನಿನಗೀಗೆ"

"ಒಪ್ಪಕ್ಕು ದೆವರೆ ಒಲವಕ್ಕು ದೆವರೆ
ಒಪ್ಪಂಗಳಕ್ಕು ನನಗೀಗೆ । ನಿಮ್ಮನಿಯ
ಬಡ್ಸದ್ ಕೂಳುಂಬಾ ಬಡವೋಳು । ದೆವರೆ
ಕಂಡ್ಕನ್ಸ ಅತ್ಯೋರ್ಗೆ ಒರಿಯಾಲೊದೆ

ಅಟ್ಟಂಬಾ ಮಾತಾ ಕೇಳಾರೆ ದರುಮರು
ಹರುನೀರ್ ತಡಿಯಲ್ಲೇ ನಿಲೂವಾರು

ಮಿಂದಾರೊಗದಾರೆ ಮಿಂದ್‌ಮಡಿ ಉಟ್ಟಾರೆ
ಮಿಂದೀ ಚಂಡಕೀಯಾ ಕುಡೋಗಾರೆ[64] । ದರುಮರು
ಚಂದ್ರಾ ಬೊಟ್ಟಂದಾ ಇಡೋವಾರು

ಮಿಂದರೊಗದಾರೆ ಮಿಂದ್‌ಮಡಿ ಉಟ್ಟಾರೆ
ಮಿಂದೀ[65] ಚಂಡಕೀಯಾ ಕುಡಗಾರೆ । ದರುಮರು
ಸೂಲೀ[66] ಬೊಟ್ಟೊಂದಾ ಇಡೋವಾರು । ದರುಮರು
ತಾಂವೊಂದು ಗೂಟೆ[67] ನಿಲೋವಾರು

ತಾವೊಂದು ಗೂಟೆ ನಿಲ್ವದ್ನು ರೋಪತಿ
ಹರುನೀರ್ ತಡಿಯಲ್ಲೇ ನಿಲೋವಾಳು

ಮಿಂದಳೊಗದಾಳೆ ಮಿಂದ್‌ಮಡಿ ಉಟ್ಟಾಳೆ
ಎಣ್ಣೆ ಗೆಂಟೊಂದಾ ಇಡೋವಾಳೇ । ರೋಪತಿ
ನೆಣಿಯಾ ಮಲ್ಲಗೀಯಾ ಮುಡೀದಾಳೆ । ರೋಪತಿ

---

೬೨. ಕಿವಿ. ೬೩. ಚುಚ್ಚಾವೆ ೬೪. ಕೊಡವಿದರು ೬೫. ಸ್ನಾನಮಾಡಿ ೬೬. ಸೂರ್ಯ ೬೭. ಬದಿಗೆ

ಚೊಳ್ಚೀಯಾ[೬೮] ಕದ್ರಾ[೬೯] ಮುಡೀದಾಳೆ । ರೋಪತಿ
ದರುಮಾರೋಡನೋಗೇ ನಿಲೋವಾಳು

ಬಟ್ಕಳತ್ತಣ ಬಟ್ಚರ ದರಸೀಕಂಡೇ
ಹೀಲೇ[೭೦] ಸತ್ತಿಯಾ ನೆರಳಾಗೇ
ಬಾರ್ಕೂರತ್ತಣ ಹಾವರರ ದರಸೀ ಕಂಡೇ
ಕಳಸದ ಸತ್ತಗಿಯಾ ನೆರಳಾಗೇ

ದರುಮರು ಮುಂದಾಗೆ ರೋಪತೀ ಹಿಂದಾಗೇ
ತಮ್ಮಾ ಅರ್ಮನಗೇ ಬರೋವಾರೇ । ದರುಮರು
ಬಂದೀ ರಾಜಂಗ್ಯಾ ನೆಗದತ್ತೇ । ದರುಮರು
ಮಾಳೂಗೀ ಒಳಗೆ ನೆಡದಾರೆ । ದರುಮರು
ತೂಗು ಮಂಚದಲೆ ಕುಳತಾರೆ

ಕಾಲಕ್ಕಡಗಾ ಇಟ್ಟೇ ಕೀಲು ಕೊಂಡಲಮುಡದೇ
ತೂಗುಮಂಚದಲೇ ಕುಳತಾರೆ
ತೂಗು ಮಂಚದಲೆ ಕುಳುವದ್ನು ರೋಪತಿ
ಮಾಳೂಗೀ ಒಳುಗೆ ನೆಡದಾಳೆ

ಕಂಡಾ ಕನಸೀಗೆ ಮಾಳುಗಿ ಹೊಕ್ಕಾಳೆ
ಹೇಳೂಗೀ ತಂದೇ ಹೆರೂಗಿಟ್ಟೇ
ಕಂಡಾ ಕನಸೀಗೆ ಮಾಳೂಗಿ ಹೊಕ್ಕಾಳೆ
ಪೆಟ್ಟೂಗೀ ತಂದೇ ಹೆರೂಗಿರುಸೇ[೭೧]

ಬಾರ್ಕೂರತ್ತಣ ಹಾರ್‍ವರ ದರಸೀಕಂಡೇ
ಹೀಲಿಸತ್ತಗಿಯ ನೆಳಲಾಗೇ । ನಿಂದಿಕಂಡೇ

ಹಾರೋರ್ಗೆ ದಾನಾ ಕೊಡೋವಾಳೆ ।
ಬಟ್ಕಳತ್ತಣ ಬಟ್ಚರ ದರಸೀಕಂಡೇ
ಕಳಸಾ ಸತ್ತಗೀಯಾ ನೆಳಲಾಗೇ । ನಿಂದಿ । ಕಂಡೇ
ಬಟ್ಚರ್ಗೆ ದಾನಾ ಕೊಡೋವಾಳೇ

ಎತ್ತಾ ದಾನಾಮಾಡೇ ತುತ್ತಾ ದಾನಾಮಾಡೇ
ಮುತ್ತೂ ದಾನಾವಾ ಮಿಗಲಾಮಾಡೇ । ರೋಪತಿ
ಬಟ್ಚರ್ಗೆ ದಾನಾ ಕೊಡೋವಾಳೇ

೬೮. ತುಲಸಿಯ ೬೯. ತೆನೆ ಕದಿರು ೭೦. ನವಿಲುಗರಿ ೭೧. ಹೊರಗಿಟ್ಟು

ಕೊಟ್ಟೂಗೀ ಒಳಗೀನಾ ಗಟ್ಟೂ ಮಣಕೆಮ್ಮೀಯಾ
ಬಾಲಕ್‌ಸುವರ್ಣ ಸುವರ್ಣಾ ಗಳೀಸಾಳೆ ।
ಬಾಲಕ್‌ಸುವರ್ಣ ಗಳಿಸೀದೆಮ್ಮೀಯಾ
ಹಾರೋರ್ಗೆ ದಾನಾ ಕೊಡೋವಾಳೆ

ಅಟ್‌ತೂಗೇ ಇಟ್‌ತೂಗೇ ಮುಟ್‌ತುಂಬದ ಮಲ್ಲೂಗೇ
ಹಿಡತುಂಬಿದೆಲಿಯಾ ಅಡಕೀಯಾ । ಈಳ್ಯವ
ಹಚ್ಚದಳೇ ಬಂದಾ ಅಲರೀಗೆ[೭೨]

ಅಟ್ಟಂಬಾ ಮಾತಾ ಕೇಳಾರೆ ದರ್ಮರು
ಆಗೊಂದು ಮಾತಾ ನುಡೀದಾರೆ

“ದಾನಾ ದಾನಂಗಳೊಳಗೆ ಎಲ್ಲಾ ದಾನಾವಾದೊ
ಇನ್ನೆವ ದ್ಸೊಸಾ[೭೩] ನಮಗಿಲ್ಲಾ । ಅಂದ್ ದರ್ಮಾರು
ಚಿನ್ ತೊಂಡಲ ತೂಗೆ ನೆಗಿಯಾಡಿ.

ಹೂಂವ್ನ ತೊಂಡಲ ತೂಗೇ ನೆಗಿಯಾಡೇ ನಿಲುವನಕೆ
ಬಂದಾವೇ ಗುರ್ನಾಯ್ನಾ ಬರದೊಲೆ । ಅರ್ದಿಕಾರರು[೭೪]
ಬಂದೀ ಬಾಗಲ್ಲೇ ನಿಲೋವಾಕಿ । ಅರ್ದಿಕಾರರು
ಆಗೊಂದು ಮಾತಾ ನುಡಿದಾರೆ

ಹೊಸಹೊನ್ನ ಬಾಗಲವಾ ಕಾದಿರುಬಾಗಿಲವ್ನೆ
ದರ್ಮರೊಲಗದಾ ಅಡೀಗಾರಾ[೭೫] । ಬಾಗೀಲವ್ನೆ
ತಡೀತಿಯೋ ಬಾಗಿಲವ ಬಿಡತೀಯೋ”

“ಬಾಗಿಲ ಬಿಡವಕೆ ದೇವರಪ್ಪಣೆಬೇಕು
ಬಂದವರಿಲ್ಲೆ ನಿಲೋಬೇಕು.

ಬಾಗಲಕಾದಿರುವಾ ಮನ್ನೆಯ ನಾಯಕ
ಹೊನ್ನನ ಗದ್ದಗಿಯಾ ತಡದಿರುವೆ । ಕುಳ್ತಿರುವೆ
ಬೀಮನೊಲಗದಾ ಅಡೀಗಾರಾ । ಬಾಗೀಲವ್ನೆ
ತಡೀತಿಯೋ ಬಾಗಲವಾ ಬಿಡತೀಯೋ”

“ಬಾಗಲ ಬಿಡವಕೆ ದೇವರಪ್ಪಣೆ ಬೇಕು
ಬಂದವರಿಲ್ಲೆ ನಿಲಬೇಕು”

ಬಾಗಲ ಕಾದಿರುವಾ ಮನ್ನೆಯ ನಾಯಕಾ
ಚಿನ್ನದ ಗದ್ದಗಿಯಾ ತಡದಿರುವೆ । ಕುಳ್ತಿರುವೆ

---

೭೨. ಹಲವರಿಗೆ ೭೩. ದೋಷ ೭೪. ಓಲೆಕಾರರು ೭೫. ಸೇವಕ

ಅರ್ಜನ್ನೊಲಗದಾ ಅಡೀಗಾರಾ । ಬಾಗೀಲವ್ನೆ
ತಡೀತಿಯೋ ಬಾಗಲವಾ ಬಿಡತೀಯೋ"

"ಬಾಗಲ ಬಿಡವಕೆ–ದೇವರಪ್ಪಣೆ ಬೇಕು
ಬಂದವರಿಲ್ಲೆ ನಿಲೋಬೇಕು."

"ಬಾಗಲ ಕಾದಿರುವಾ ಮನ್ನೆಯ ನಾಯಕಾ
ಮುತ್ತನ ಗದ್ದಗಿಯಾ ತಡದಿರುವೆ । ಕುಳ್ತಿರುವೆ
ಸಕ್ಲಯ್ಯಾ ಸಾದೆವ್ನೊಲಗದಾ ಅಡೀಗಾರಾ । ಬಾಗೀಲವ್ನೆ
ತಡೀತಿಯೋ ಬಾಗಲವಾ ಬಿಡತೀಯೋ

ಅಟ್ಟಂಬೋ ಮಾತಾ ಕೇಳಾನೆ ಬಾಗೀಲಂವ
ದರ್ಮರ್ತುಂಬೀದ್ದೊಲಕ್ಕೇ[೭೬] ನೆಡದಾನೆ । ಬಾಗೀಲಂವ
ಹೋಗೀ ಬಾಗಲ್ಲೇ ನಿಲೋವಾನೆ
ಹೋಗೀ ಬಾಗಲ್ಲೇ ನಿಲ್ವದ್ನು ದರ್ಮರು
ಆಗೊಂದು ಮಾತಾನುಡೀದಾರೆ

"ಯಾವಾಗೂ ನಮ್ಮಾ ಕಾದಿರು ಬಾಗೀಲವ್ನೆ
ಏನ್ಬಂದ್ಯೊ ನಮ್ಮಾ ಅರಮನಗೆ"

"ಬರವೀನೊಲೆ ಬಂದೀ ಬಾಗೀಲಲಿ ನಿಂದದೆ
ತಡೀಬೇಕೋ ಬಾಗಲವಾ ಬಿಡೋಬೇಕೋ"

"ಬರವೀನೊಲೀಯಾ ತಡವಾ ಕಾರಣಿಲ್ಲ
ತಡವಿಲ್ದೆ ಬಾಗಲವಾ ಬಿಡೋಬೇಕೋ"

ಅಟ್ಟಂಬಾ ಮಾತಾ ಕೇಳಾನೆ ಬಾಗೀಲಂವ
ಹಿಂದಕ್ಕೇ ತಿರ್ಗೇ ಬರೋವಾನೆ । ಬಾಗೀಲಂವ
ಹುರಡಾಡೇ[೭೭] ಅಡಿಯಾ ತೆಗದಾನೆ
ಹುರಡಾಡೆ ಅಡಿಯಾ ತೆಗ್ವದ್ನು ಮೂಡಾನಾ

ಬರ್ಮಾಲೊಕೆಲ್ಲಾ[೭೮] ಬೆದೂರಾವೆ । ಅರ್ದಿಕಾರ್ರು
ರಾಗಾದಿಂದೊಳಗೇ ಬರೋವಾರು

ಅತ್ತೇ ಹೋದವ್ರಾ ಇತ್ತೇ ಬರುವೇಳಿ
ಸತ್ಯಲಿ ಗಿಳಿಬರದಾ ನಿವ್ರಲೊಲೆ[೭೯] । ಗೊಕನದಾ
ದೇವುತೆಗಳಿರುವಾ ಅರಮನೆ
ಅತ್ತೆ ಹೊದವ್ರಾ ಇತ್ತೇ ಬರುವೇಳೀ
ಹಾರೂ ಗಿಳಿಬರದಾ ನಿವ್ರಲೊಲೆ । ಮಾಳೂಗೀಒಳಗೆ

೭೬. ತುಂಬಿದ ಸಭೆಗೆ ೭೭. ಹೊರಳಾಡಿ ೭೮. ಬ್ರಹ್ಮಲೋಕವೆಲ್ಲಾ ೭೯. ಕರಪತ್ರ

ದೆವ್ರ ದರುಮರು ಕುಳಿತರೆ । ಅರ್ದಿಕಾರ್‍ರು
ಹೋಗೀ ವಾಲೀಯ ಕೋಡೋವಾರು ।
ಹೋಗಿ ವಾಲೀಯ ಕೊಡುವದ್ನು ದರ್ಮರು

ತೊಡಿಯಾ ಮೆನೊಲೀ ಮಡುಗಾರೆ
ತೊಡಿಯಾ ಮೆನನೊಲಿ ತಡದೆತ್ತಿ ನೋಡಾರೆ
ತನ್ನಾ ಸಾದೆವ್ನಾ ದೆನಿದೂರೇ[೮೦]

ತನ್ನಾ ಸಾದೆವ್ನಾ ದೆನಿದೂರ್‍ವದ್ನು ಸಾದೆವಾ
ಓಯ್ಗುಂಡೇ ಒಡನೇ ಬರೋವಾನೇ
ಓಯ್ಗುಂಡೇ ಒಡ್ನೇ ಬಂದೀ ಏನಂಬಾನೆ
ಏನು ಕಾರಣಲೆ ಕರದೀಯೋ

"ಕಾಲೂ ಮೊರಿಯ ತೊಳಿಯೋ ಹಾಲೂ ಗಂಜಿಯನುಣ್ಣೋ
ಬೂಮು[೮೧] ದೇವತಗೆ ಸರಣನ್ನೋ । ಸಾದೆವಾ
ಹೆತ್ತಮ್ಮ ಕುಂತೀಗೆ ಸರಣನ್ನೋ । ಸಾದೆವಾ
ಹಿರಿಯಣ್ಣ ದರ್ಮಗೇ ಸರಣನ್ನೋ । ಸಾದೆವಾ
ವಾಲೆ ಒತ್ತಗೀಯಾ[೮೨] ಬಿಡಸೋದೋ

ಕಾಲೂ ಮೊರಿಯ[೮೩] ತೊಳಿಯೋ ಹಾಲೂ ಗಂಜಿಯನುಣ್ಣೋ
ಬೂಮು ದೇವತಗೆ ಸರಣನ್ನೋ । ಸಾದೆವಾ
ಹೆತ್ತಮ್ಮ ಕುಂತೀಗೇ ಸರಣನ್ನೋ । ಸಾದೆವಾ
ಹಿರಿಯಣ್ಣ ದರ್ಮಗೆ ಸರಣನ್ನೋ । ಸಾದೆವಾ
ಕಟ್ಟೇನೊತ್ತಗೀಯಾ ಬಿಡಸೋದೋ

ಅಟ್ಟಂಬಾ ಮಾತಾ ಕೇಳಾನೆ ಸಾದೆವಾ
ಕಾಲೂಸಿರಿಮೊಕವಾ ತೊಳದಾನೆ । ಸಾದೆವಾ
ಬೂಮು ದೇವತಗೆ ಸರಣಂದೇ । ಸಾದೆವಾ
ಹೆತ್ತಮ್ ಕುಂತೀಗೇ ಸರಣಂದೇ ಸಾದೆವಾ

ಹೆರಿಯಣ್ಣ ದರ್ಮಗೇ ಸರಣಂದೇ । ಸದೆವಾ
ಅಣ್ಣ ನೊಡನೋಗೇ ನಿಲೋವಾನೇ

ಅಣ್ಣ ನೊಡನೋಗೇ ನಿಲ್ವದ್ನು ದರ್ಮರು
ವಾಲೆ ವತ್ತಗೀಯಾ ಕೊಡೋವಾರೇ
ವಾಲೆ ವತ್ತಗೀಯಾ ಕೊಡ್ವದ್ನು ಸಾದೆವಾ
ವಾಲೆ ವತ್ತಗೀಯಾ ಬಿಡಸೋದೆ

---

೮೦. ಕರೆದು ೮೧. ಭೂಮಿ ೮೨. ಹೊತ್ತಿಗೆ ೮೩. ಮೋರೆಯ

ವಾಲೆ ಓದೀತಾ ಅಣ್ಣನ ಮೊಕ ನೋಡೀತಾ
ಮುಂಗಣ್ಣೀಲ್ ಹನಿಯಾ ಸೆಡದಾನೇ[೮೪]
ವತ್ತಗೆ ಓದೀತಾ ಅತ್ತುಗೀ ಮೊಕನೋಡೀತಾ
ಕಡಗಣ್ಣಲ್ ಕಣ್ಣೀರಾ ಸೆಡೀದಾನೆ

ಅಂಚಂಚಾ ಮೆಟ್ಗಂಡೇ ಗುಂಚೊಂದಾ ಉರಿಕಂಡೇ
ತಾಯ್ ಕುಂತೀ ಹೆರುಗೇ[೮೫] ಬರೋವಾಳೆ
ತಾಯ್‌ಕುಂತಿ ಹೆರುಗೆ ಬಂದೀ ಏನಂಬಾಳೇ
ಎಂತಪ ಮಕ್ಕಳ್ರಾ ವಾಲೀ ಹದೂಳವೇ[೮೬]?

ವಾಲೇ ಹದುಳವೆ ತಾಯೇ ಏನಾಹೇಳಲೆ ತಾಯೇ
ಪಟ್ಟೂಗೀ ಕೊಳ್ಳಾಪತೂರತಿ । ರೋಪತಿ
ಕುಸುಮ ಸಂಕದಲೇ[೮೭] ಅಸೀಯಳೆ[೮೮] ।ಳು। ಸೋಲ್ವದ
ಗುರ್ರಾಯಾ[೮೯] ನೆನಸೇ ಬರದಾನೆ

ಸತ್ಯ ಕುಲ್ದರು ನಮ್ಮಾ ತತ್ತಗ್ ಬಂದ್ ಆಡ್ವಂಗೆ
ಸತ್ಯುಳ್ಳ ದರುಮರ ತಲೆಸೋಲೇ ।ಲ।ಂದೇ
ಗುರ್ರಾಯಾ ನೆನಸೇ ಬರದಾನೆ

ಅಟ್ಟಂಬಾ ಮಾತಾ ಕೇಳಾರೆ ದರುಮರು,
ಸತ್ತಗಿಯಾ ಕಟ್ಟೇ ಮಡಗಂದೆ
ಸತ್ತಗಿಯಾ ಕಟ್ಟೇ ಮಡಗ್ವದ್ನು ಸಾದೆವಾ
ಕಟ್ಟಿ ಹೊತ್ತಗಿಯಾ ಮಡಗಾನೆ
ಕಟ್ಟಿ ಹೊತ್ತಗಿಯಾ ಮಡಗ್ವದ್ನು ದರುಮರು
ತಮ್ಮಾ ರೋಪತೀಯಾ ದೆನೀದೂರೇ
ತಮ್ಮಾ ರೋಪತಿಯಾ ದೆನಿದೂರ್ವದ್ನು ರೋಪತಿ

ಓಯ್ಗುಂಡೇ ಒಡನೇ ಬರೋವಾಳೇ ।
ಓಯ್ಗಂಡೆ ಒಡನೆ ಬರುವಾಳೆ ರೋಪತಿ
ನಿಂದಾಳೇ ದರ್ಮರಾ ಒಡನಲ್ಲಿ । ನಿಂದೀಕಂಡೇ
ಏನು ಕಾರಣಲೆ ಕರದೀರೋ

ಅಣ್ಣಾ ಕರ್ವ್ವೊಲಿ ಬೆನ್ನಗ ಮಾಡಲಬಾರಾ
ಹೋಗಬೇಕು ಅಣ್ಣನ ಅರಮನಗೆ । ರೋಪತಿ
ಹಾಲ್ಗಂಜಗಲೂಟಕೆ ಅನೋಮಾಡೇ[೯೦]

೮೪. ನುರಿಸಿದನು ೮೫. ಹೊರಗೆ ೮೬. ಕ್ಷೇಮವೇ ೮೭. ಸಂಕಲೇ? ಕೋಮಲೆ? ೮೮. ಚೆಲುವೆ
೮೯. ಕುರುರಾಯ ೯೦. ಹಾಲುಗಂಜಿ ಗಲೂಟಕ್ಕೆ ಸಿದ್ದಮಾಡು

ಅಟ್ಟಂಬಾ ಮಾತಾ ಕೇಳಾಳೇ ರೋಪತಿ
ಮಾಳೂಗೀ ಒಳಗೆ ನೆಡದಾಳೆ

ಅಟ್ಟದ ಮೆನನ ಜೀರಗ್‌ಸಾಲಕ್ಕಿಯಾ[೯೧]
ಅನ್ನಾ ಮೆಗರಕೇ[೯೨] ಅನೋಮಾಡಿ

ಅಟ್ಟದ ಮೆನನ ಪುಟ್ಟೊ ಸಣ್ಣಕ್ಕೀಯಾ
ಹಾಲೂ ಪಾಯಸಕೆ ಅನೂಮಾಡೀ

ಹಿತ್ತಲಕಣಕೀನಾ[೯೩] ಬೊಟ್ಟು ಕೆಂಬರಗೀಯಾ
ಬೊಟ್ಟೆಣ್ಣಿ ಕಿಟ್ಟೇ ಬೆಗೊರೀಸಿ[೯೪]
ಬೇಲಿಯ ಮೆನನ ದಾರೆ ಹೀರೆಯಕಾಯಾ
ದಾರೆಯನರದೇ ಮೆಣಸಿಟ್ಟೇ

ಹರ್ದಬ್ದು[೯೫] ಹಾಗೀಲಾ ಮುರ್ದಬ್ಬೂ ತೊಂಡೀಲಾ
ಪಲಬೆರಸಬ್ಬು ಬಸಳೀಯಾ । ಕೊಡಿಯಾತಂದೇ
ತುಪ್ಪಾದಲ್ಲದ್ರಾ ಬೆಗೋರೀಸೇ

ಎಲಮ್ಯೆರೆಂಬತ್[೯೬] ಬಗೆ ಕಾಯ್ ಮ್ಯೆರ್‌ತೊಂಬತ್ ಬಗೆ
ನೂರೊಂದು ಬಗೆಯ ಅಡಗೀಯಾ । ಕಜ್ಜಾಯವಾ
ಅನಮಾಡಿದಳೊಂದೋ ಗಳಗ್ಯಲ್ಲೇ । ದರ್ಮರು

ಕೂತಮಂಚವ ಜಡದೆದ್ದೇ । ದರ್ಮರು
ಆನೀಸಾಲೀಗೇ ನೆಡದಾರೆ ।

ಅಂದೊಳ್ಳೊಂದಾನೀ ಹೊಡತಂದೇ
ಅಂದೊಳ್ಳೊಂದಾನೀ ಅಂಗಳಕೇ ಹೊಡತಂದೇ
ಅಂದಾಚಂದಾದಲೇ ಹೊಡೀಉದ್ದೇ[೯೭] । ಆನೀಗೇ
ತಿಂಬೂಕಿಕ್ಕಾನೆ ಕಡಲೀಯೇ । ಅನೀಗೇ
ಬಾಲಕ್ ಬಿಗಿದಾರೆ ಚಿವಲವೇ । ಅನೀಗೇ
ಬಾಲಕ್ ಬಿಗಿದಾರೆ ಚಿವಲವೇ । ಅನೀಗೇ

ಕಾಲೀಗಿಕ್ಕಾರೆ ಉರೋಗೆಜ್ಜೆ[೯೮]
ಕಾಲಿಗಿಕ್ಕಾರೆ ಉರಗೆಜ್ಜೆ ದರ್ಮರು
ಕೊಳ್ಳೀಗ್ ಕಟ್ಟಾರೆ ಸರಗಂಟೆ । ದರ್ಮರು
ಆನೀ ಕಂಬ್ಗಾನೀ ಸೆಳ್ದೇಕಟ್ಟೇ ।ಟ್। ದರ್ಮರು
ಆನೀ ಮಾಳೂಗೀ ಒಳಗೇ ನೆಡದಾರೆ

---

೯೧. ಒಂದು ಬಗೆಯ ಅಕ್ಕಿ ೯೨. ಮೇಲೋಗರ ೯೩. ಕಡೆಗಿನ ೯೪. ಹುರಿದು ೯೫ ಹರಿದು ಹಚ್ಚುವು
೯೬. ಎಲೆಯ ಮೇಲೋಗರ ೯೭. ಹುಡಿಯುದ್ದಿ ೯೮. ಉರಿಗೆಜ್ಜೆ

ಮಾಳೂಗೀ ಒಳಗೆ ನೆಡ್ವದ್ನು ರೋಪತಿ
ಸೆಣ್ಣ ಗಿಂಡ್ಯಲ್ಲೇ ಉದಕವೇ ।ವ। ತಡಕಂಡೇ
ಮಾಳಗ್ಗಿಂದೆರಗೇ ಬರೋವಾಳೇ । ರೋಪತಿ
ಧರ್ಮರೊಡನೋಗೇ ನಿಲೋವಾಳೇ ।
ಧರ್ಮರೊಡನೋಗಿ ನಿಲುವಾಳೆ ರೋಪತಿ
ದರ್ಮರ್‍ಗೆ ಉದಕಾ ಕೊಡೋವಾಳೇ

ದರ್ಮರ್ಗೆ ಉದ್ಕಾ ಕೊಡ್ವದ್ನು ದರ್ಮರು
ತಾವಯ್ವರು ಮೊಕವಾ ತೊಳದಾರೆ ।
ತಾವಯ್ವರು ಮೊಕವಾತೊಳದಾರೆ ದರ್ಮರು
ಮಾಳುಗಿ ಒಳಗೆ ನೆಡದಾರೆ

ಮಾಳೂಗಿ ಒಳಗೆ ನೆಡ್ವದ್ನು ರೂಪತಿ
ಅಯ್ದೂ ಹೊನಮಣೆಯಾ ಮಡೋಗಾಳೆ[೯೯]
ಅಯ್ದೂ ಹೊನಮಣೆಯಾ ಮಡಗ್ವದ್ನು ದರ್ಮರು
ಮಣೆಯ ಮೆನ್ಲೋಗೇ ಕುಳತಾರೆ

ಮಣೆಯ ಮೆನ್ಲೋಗೇ ಕುಳವದ್ನು ರೂಪತಿ
ಕಿರಳು[೧೦೦] ಬಾಳೆಲಿಯೂ ತೊಳದ್ದಾಸೇ । ರೂಪತಿ
ಅನ್ನಾ ಮೆಗರವಾ ಬಡಸಾಳೆ । ರೂಪತಿ
ಹಾಲೂ ಪಾಯಸವಾ ಬಡಸಾಳೆ । ರೂಪತಿ
ತುಪ್ಪಾ ಸಕ್ಕರೆಯಾ ಎರದಾಳೆ

ತುಪ್ಪಾ ಸಕ್ಕರೆಯ ಎರ್ದೀ ತಿರ್ಗ್ಗಾ ವಲ್ಲೆ
ಉಂಡೆದ್ದರೊಂದು ಗಳಗ್ಯಲ್ಲೇ

ಉಂಡರೂಟವಾ ತೊಳ್ದರೆಂಜಲಮೊಕವಾ
ತೂಗುಮಂಚಲ್ಲೇ ಕುಳತಾರೆ
ತೂಗುಮಂಚಲ್ಲೆ ಕುಳುವದ್ನು ರೂಪತಿ

ತಮ್ಮೊಟಕೆ ತಾವು ಎಡಮಾಡೇ
ತಮ್ಮೊಟಕೆ ತಾವೆಡೆಮಾಡ್ ಬಡಸೀಗಂಡೇ
ಉಂಡೆದ್ದರೊಂದು ಗಳಗ್ಯಲ್ಲೇ
ಉಂಡಾಳೂಟವಾ ತೊಳದಾಳೆಂಜಲಮೊಕವಾ
ಎಂಜಲಮಯ್ಲುಗಿಯಾ ತೆಗದಾಳೆ । ರೂಪತಿ
ಮಾಳೂಗೀ ಒಳಗೆ ನೆಡದಾಳೆ । ರೂಪತಿ

---

೯೯. ಇಟ್ಟಳು ೧೦೦. ಎಳೆಯ

ದರ್ಮರ ಸಾಕದಾ ಹರಳೂಮುಟ್ವೇ ।ಟ್ಟೀ। ದೀಳ್ಯವಾ
ಆಯಾಕೊಂದೀಳ್ಯವಾ ತಡದಾಳೇ । ರೂಪತಿ
ಮಾಳಗ್ಗಿಂದೆರಗೇ ಬರೋವಾಳೆ ।

ದರ್ಮರೊಡನೋಗೇ ನಿಲೋವಾಳೇ ।
ದರ್ಮರೊಡನೋಗಿ ನಿಲುವಾಳೂ ರೂಪತಿ
ದರ್ಮರ ಕಯ್ಲೀಳ್ಯ ಕೊಡೋವಾಳೇ.

"ನೀವೊಂದು ತಾಯೀಗೆ ಅಯ್ವರು ಮಗದೀರು
ನೀವಯ್ವರೊಂದೀಳ್ಯ ಮೆಲಬೇಕು"

ರೂಪತಿ ಕೊಟ್ಟೀಳ್ಯ ತಟ್ಟಾನೆ ತಡ್ದಾರೆ
ಅಯ್ವರೊಂದೀಳ್ಯ ಮೆಲೋವಾರೇ
ಎಲಿಯೊಂದ್ ತಿಂದಾರೆ ರಜವಲ್ಲೇ ಉಗಳಾರೆ

ಮಾಳೂಗಿ ಒಳಗೇ ನೆಡದಾರೆ । ದರ್ಮರು
ಅಟ್ಟತ್ತಿ ಪೆಟ್ಟಗಿಯಾ ತೆಗದಾ ।
ಮೆಟ್ಟೀ ಬೀಗವ ಕರೀದಾರೆ[೧೦೧]
ಮೆಟ್ಟ ನೀಗವ ಕರಿದಾರೆ ದರ್ಮರು

ಮುಚ್ಚೀಲ ತೆಗದೇ ಕಡಗಿಟ್ಟೇ । ದರ್ಮರು
ಮುತ್ನ ಮುಂಡಾಸ್ನ ತಲಸುತ್ತೇ[೧೦೨] । ದರ್ಮರು
ಪಟ್ಟೆ ಜೋತರವ ಹೊಗಲೀಗೆ ।

ಕಾಲು ಕಡಗಾ ಇಟ್ಟೀ ಕೀಲು ತೊಂಡಲಮುಟ್ಟೀ
ತಮ್ಮಂಬು ಬಿಲ್ಲೆಲ್ಲ ತಡದಾರೆ । ದರ್ಮರು
ತಮ್ಮ ಕಯ್ಚಂಚೀ ತಡದಾರೆ । ದರ್ಮರು

ಸೆಣ್ಣಾ ಗಂಬುಳಿಯ[೧೦೩] ಹೊಗಲೀಗೇ[೧೦೪] । ಹಾಯೀಕಂಡೇ
ಹಾಲೂಗಾಯಯ್ದಾ ತಡದಾರೆ । ದರ್ಮರು
ಪೆಟ್ಟೊಗೀ ಬಾಯಲ್ಲೇ ಮಡಗಾರೆ । ದರ್ಮ

ಮಾಳಗ್ಗಿಂದೆರಗೇ ಬರೋವಾರೇ । ದರ್ಮರು
ಬಂದೀ ಬಾಗಲ್ಲೇ ನಿಲೋವಾರೆ । ದರ್ಮರು
ಹೊಸಹೊನ್‌ಬಾಗ್ಲ ಕದವಾ ತೆಗೆದಾರೆ । ದರ್ಮರು
ದೀಪಾ ದೂಪೆಲ್ಲಾ ಕಸೀದಾರೆ[೧೦೫] । ದರ್ಮರು

೧೦೧. ತೆಗೆದರು ೧೦೨. ತಲೆಗೆ ಸುತ್ತಿ ೧೦೩. ಸಣ್ಣಕಂಬಳಿ ೧೦೪. ಹೆಸಲಿಗೆ ೧೦೫. ಹಚ್ಚಿದರು

ಹೊಸ ಹೊನ್‌ಬಾಗ್ಲಕ್‌ಕಾಯಾ ಒಡದಾರೆ
ಹೊಸ ಹೊನ್ ಬಾಗ್ಲಕ್ ಕಾಯಾ ಒಡುವದ್ನು ಅರಜಿಣ[೧೦೬]
ತಾನೂ ಮುಂದಾಗೇ ಬರೋವಾನೇ

ಅಣದಿರ್ ಹೋಗುವಾಗೇ ತಮದಿರ್ ನಿಲಬಾರಂದೇ
ಬೀಮಾನು ಗಜವಾ[೧೦೭] ತಡದೆದ್ದೇ

ಅಣದಿರ್ ಹೋಗುವಾಗೇ ತಮದಿರ ನಿಲಬಾರಂದೇ
ಅರಜೀಣ ತನ್ನಂಬಾ ತಡದೆದ್ದೇ

ಅಣದಿರ್ ಹೋಗುವಾಗೇ ತಮದಿರ್ ನಿಲಬಾರಂದೇ
ಸಕಲಯ್ಯ ತನ್ನಂಬಾತಡದೆದ್ದೇ

ಅಣದಿರ್ ಹೋಗುವಾಗೇ ತಮದಿರ್ ನಿಲಬಾರಂದೇ
ಸಾದೇವಾ ತನ್ನಂಬಾ ತಡದೆದ್ದೇ । ಅವ್ರ್‌ನಾಲ್ವರು

ಅಣ್ಣಾ ನೊಡನೋಗೇ ನಿಲೋವಾರೇ
ಅಣ್ಣಾ ನೊಡನೋಗಿ ನಿಲ್ವದ್ನು ದರ್ಮರು
ಹೊಸ ಹೊನ್ ಬಾಗ್ಲಕದವಾ ಬಡದಾರೇ
ಹೊಸ ಹೊನ್ ಬಾಗ್ಲ ಕದವಾ ಬಡ್ವದ್ನು ಸಾದೆವಾ
ಆಗೊಂದು ಮಾತಾ ನುಡೀದಾನೇ

“ಕಾಯೊಂದು ಒಡದೀ ಕಡ ಕವಜೀ[೧೦೮] ಬಿದ್ದವ್ರೋ
ಕಾರ‍್ಯಂಗಳೋ ನಮಗೆ ಗೆಲವಿಲ್ಲ । ಅಣ್ಣಕೇಳೋ
ಇಂದೋಗು ಪಯ್ಣ ನಿಲೋಬೇಕು ಅಣ್ಣಾಕೇಳೋ

“ಕಾಯೊಂದ್ ಒಡ್ದಾರೇನೋ ಕಡಕವ್ಜ ಬಿದ್ದಾರೇನೋ
ಕಾರ‍್ಯಗಳು ನಮಗೆ ಗೆಲವಕ್ಕು । ಅಂದೇಳೇ

ಮರ‍್ಜೊಂದ್[೧೦೯] ಕಾಯಾ ಒಡದಾರೆ । ದರ್ಮರು
ಆನೀ ಕಂಬ್ಳಾನೀ ಸೆಳ್ದೆ ಬಿಚ್ಚೇ । ಅಯ್ವರು
ಅಂದೊಳ್ಳಾನೀಯಾ ನೆಗದತ್ತೇ । ದರ್ಮರು
ಆಯಾಕಯ್ದೆಜ್ಜೆ ಹೊಡದಾರೇ
ಆಯಾಕಯ್ದೆಜ್ಜೆ ನೆಡ್ವದ್ನು ಸಾದೇವಾ
ಆಗೊಂದು ಮಾತಾ ನುಡೀದಾನೆ

---

೧೦೬. ಅರ್ಜುನ ೧೦೭. ಗದೆ ೧೦೮. ಕಾಯಿಕಡಿ ಮಗುಚಿ ೧೦೯. ತಿರುಗೊಂದು

"ಗೂಡೊಳಗಕ್ಕಿ ಕೂಡಿದ್ದಿ ನುಡಿದಾವೆ
ಬಂದಾ ದಂಡೆಲ್ಲ ತಿರುಗಲೀ । ಅಂದೇಳಿ
ಗೂಡಿನೊಳಗಕ್ಕೀ ನುಡದಾವೆ"

ಗೂಡಿನೊಳಗಕ್ಕಿ ನುಡಿದಾರೆ ನುಡಿಯಾಲಿ
ಕಾರ್‍ಯಂಗಳು ನಮಗೆ ಗೆಲವಕ್ಕು । ಅಂದೇಳಿ
ಆಯಾ ಕಯ್ದೆಜ್ಜಿ ಹೊಡದಾರೆ

"ಕಾಕಿ[೧೧೦] ಕೆಲ್ದವಣ್ಣ ಕೆರ್‍ಯಾ ಬಲಗುಂಡಾವ್ರೋ
ಕಾರ್‍ಯಂಗಳ್ ನಮಗೆ ಗೆಲವಿಲ್ಲ । ಅಣ್ಣ
ಇಂದೋಗು ಪಯಣ ನಿಲೋಬೇಕು

ಕಾಕಿ ಕೆಲ್ದಾರೇನೋ ಕೆರ್‍ಯಾ ಬಲಗುಂಡಾರೇನೋ
ಕಾರ್‍ಯಂಗಳ್ ನಮಗೆ ಗೆಲವಕ್ಕೋ । ಅಂದೇಳೇ
ಸಾದೇವಾಸಿಂಗ ನೆಡೆಮುಂದೆ ।

ಸಾದೇವಸಿಂಗ ನೆಡೆಮುಂದೆಲಂದೇಳೀ
ಆಯಾಕಯ್ದೆಜ್ಜಿ ಹೊಡದಾರೆ । ದರ್ಮರು

ರಾಜಾಬಿದಿಗಾಗೇ ನೆಡದಾಗೇ ನೆಡದಾರೆ ।
ರಾಜ ಬಿದಿಗಾಗೇ ನೆಡದಾರೆ ದರ್ಮರು
ಗುರ್‍ರಾಯ್ನರ ಮನೆಗೇ ನೆಡದಾರೆ

ಮಾಡಾಮೆನಿದ್ದೇ[೧೧೧] ನೋಡಾನೇ ಗುರ್‍ರಾಯಾ
ಮಾಡ್ಗಿಂದೆ[೧೧೨] ಕೆಳಗೆ ಇಳದಾನೆ । ಗುರ್‍ರಾಯಾ
ಬಂದೀ ಬಾಗಲ್ಲೇ ನಿಲೋವಾನೇ

ಬಂದೀ ಬಾಗಲ್ಲೇ ನಿಲುವದ್ನು ದರ್ಮರು
ಬಂದೀ ಬಾಗಲ್ಲೇ ನಿಲೋವಾರೆ । ದರ್ಮರು
ಬೋರೀನೇ ಆನೀ ಇಳದಾರೆ ।

ಬೋರೀನೆ ಆನಿ ಇಳದಾರೆ ದರ್ಮರು
ಆನೀಕಂಬ್ದಾನೀ ಸೆಳ್ದೇ ಕಟ್ಟೇ । ದರ್ಮರು
ತಿಂಬೂಕಿಕ್ಕಾರೆ ಕಡಲೀಯೆ ।
ತಿಂಬೂಕಿಕ್ಕಾರೆ ಕಡಲೀಯ ದರ್ಮರು
ಹೋಗಿ ಬಾಗಲ್ಲೇ ನಿಲೋವಾರೇ
ಹೋಗಿ ಬಾಗಲ್ಲೇ ನಿಲುವದ್ನುಗುರ್‍ರಾಯ
ತಡ್ಡಾನೇ ಚಂಬಗಲೇ ಉದುಕಾವೇ

೧೧೦. ಕಾಗೆ ೧೧೧. ಮಾಡಿನ ಮೇಲಿಂದ. ೧೧೨. ಮಾಡಿನಿಂದ

"ಒಂದೇತಾಯಿಗೆ ಅಯ್ವರು ಮಗದೀರು
ನೀವ್ ಅಯ್ವರು ಮೊಕವಾ ತೊಳಯರೋ ।
ನೀವ್‌ಯ್ವಾರು ಮೊಕವಾ ತೊಳೆಯರಿಲಂದೇಳಿ
ದರ್ಮರ ಕಯ್ಲುದಕಾ ಕೊಡುವಾರೇ
ದರ್ಮರ ಕಯ್ಲುದಕಾ ಕೊಡುವದ್ನು ದರ್ಮರು
ಕಾಲೂ ಸಿರಿಮೊಕವಾ ತೊಳದಾರೆ । ದರ್ಮರು
ಮಾಳೂಗಿ ಒಳಗೆ ನೆಡದಾರೆ ।

ಮಾಳೂಗಿ ಒಳಗೆ ನೆಡದಾರೆ ದರ್ಮರು
ತೂಗು ಮಂಚದಲೆ ಕುಳತಾರೆ
ತೂಗು ಮಂಚದಲೆ ಕುಳುವದ್ನು ಗುರ್‍ರಾಯ
ಆಗೊಂದು ಮಾತಾ ನುಡೀದಾನೆ
ಆಗೊಂದು ಮಾತಾ ಏನಂದಿ ನುಡದಾನೆ

"ಉಂಡ್‌ಬನ್ನಿ ಅತ್ತುಗಿಯ ಅರಮಲ್ಲೆ[೧೧೩] । ಅಂಬುದ್ನು
ಅಡಗೀ ಸಾಲೀಗೇ ನೆಡದಾರೆ
ಅಡಗೀ ಸಾಲೀಗೇ ನೆಡವದ್ನು ದರ್ಮರು
ಹೋಗಿ ಬಾಗಲ್ಲೇ ನಿಲೋವಾರೇ ದರ್ಮರು

ಅತ್ತಗತ್ತಂದೇ[೧೧೪] ದೆನೀದೂರೇ
ಅತ್ತಗತ್ತಂದೇ ಹತ್ತತ್ತರದೆನಿಗುಡರು[೧೧೫]
ಓಯ್ಗುಂಡ್ ಬೊನ್ವತಿ ಒಳಗಿದ್ದೇ । ಬೊನ್ವತಿ[೧೧೬]
ಮಾಳಗ್ಗಿಂದೆರಗೇ ಬರೂವಾಳೇ
ಮಾಳಗ್ಗಿಂದೆರಗೇ ಬಂದೀ ಏನಂಬಾಳೇ

"ಏನು ಕಾರಣಲೇ ಕರದೀಯೋ"
ಕೆರದಂ ಕಾರ್‍ಯವಿಲ್ಲ ಕಿರ್‍ದುಂಬೆಸರಸಯ್ಯೆ
ಆದಲ್ ಅನ್ನಿದ್ರೆ[೧೧೭] ಎಡೆಮಾಡೆ"

"ಆದಲ್ಲನ್ನಿಲ್ಲ ಕಾದಲ್ ಪನ್ನೀರಿಲ್ಲ
ಆಗೂರೊಟ್ಗ[೧೧೮] ನೀವು ನಿಲಬೇಕು"

"ಆದಲ್ ಅನ್ನಿಲ್ಲ ಸಿಟ್‌ದಲ್[೧೧೯] ಬಾಳೆಲಿಲ್ಲ
ಆಗೂರೊಟ್ಗ ನೀವು ನೀವು ನಿಲಬೇಕು

೧೧೩. ಅರಮನೆಯಲ್ಲಿ ೧೧೪ ರಿತ್ತಿಗೆ ರಿತ್ತಿಗೆಯೆಂದು ೧೧೫. ಹತ್ತಿರ ಹತ್ತಿರ ಕರೆದರು ೧೧೬. ಕುರುರಾಯನ ಹೆಂಡತಿ ಭಾನುಮತಿ ೧೧೭. ಮಾಡಿದಲ್ಲಿ ರಿನ್ನವಿದ್ರೆ ೧೮. ಆಗುವವರೆಗೆ ೧೧೯. ದೊನ್ನೆ ಮಡಿದ

"ಆಗೂ ರೊಟ್ಗನೀವು ನಿತ್ತದ್ದುಂಟಾದರೆ
ನಿತ್ತೀ ಅಂಜಿಸುವ ಹೆರಿಯಣ್ಣ । ಅಂದೇಳೆ
ಹಿಂದಕೇ ತಿರ್ಗೇ ಬರೋವಾರೇ । ದರ್ಮರು
ಅಣ್ಣ ನೊಡನೋಗೇ ನಿಲೋವಾರೇ

"ಅದು ಏನ್ ದರ್ಮರೆ ಹಾಂಗೋಗಿ ಹಿಂಗ್ ಬಂದ್ರಿ
ಉಂಡ್ ಬಂದ್ರ್ಯೆ ಅತ್ತುಗಿಯ ಅರಮಲ್ಲಿ"

ಆದಲ್ ಅನ್ನಿಲ್ಲ ಕಾದಲ್ ಪನ್ನೀರಿಲ್ಲ
ಆಗೂರೊಡ್ಗ್ ನಾವೂ ನಿಲಲಿಲ್ಲ.
ಆಗೂರೊಟ್ಗ್ ನಾವು ನಿತ್ತದ್ದುಂಟಾದರೆ

ನಿತ್ತೀ ಅಂಜಿಸುವೆ ಹೆರಿಯಣ್ಣ । ಅಂದೇಳೇ
ಹಿಂದಕೆ ತಿರಗೇ ಬರತಿದ್ದೋ

ಆದಲ್ ಅನ್ನಿಲ್ಲ ಸಿಟ್‌ದಲ್ ಬಾಳೆಲಿಲ್ಲ
ಆಗೂರೊಟ್ಗ್ ನಾವೂ ನಿಲಲಿಲ್ಲ
ಆಗೂರೊಟ್ಗ್ ನಾವು ನಿತ್ತದ್ದುಂಟಾದರೆ
ನಿತ್ತೀ ಅಂಜಿಸುವೆ ಹೆರಿಯಣ್ಣ ಅಂದೇಳೇ
ಹಿಂದೆಕೆ ತಿರುಗೇ ಬರತಿದ್ದೋ

ಅಟ್ಟಂಬು ಮಾತಾ ಕೇಳಾನೆ ಗುರ್ರಾಯ
ಮಾಳೂಗಿ ಒಳಗೆ ನೆಡದಾನೆ

ಆಯುಳ್ಳ ಹಣ್ಣಡಕೆ ಸೋಯಿಸಿದ[೧೨೦] ಬೆಳಿಎಲೆ
ಹಾಲನಲಿ ಬೆಂದಾ ತೆನೆಸುಣ್ಣ । ತಡಂಕಂಡೇ
ಮಾಳಗ್ಗಿಂದೆರಗೇ ಬರೋವಾನೇ । ಗುರ್ರಾಯ
ದರ್ಮರೊಡನೋಗೇ ನಿಲೋವಾನೋ । ಗುರ್ರಾಯ

ಒಂದೇ ತಾಯೀಗೆ ನೀವಯ್ವರ್ ಮಗದೀರು
ಅಯ್ವರ್ ಒಂದೀಳ್ಯ ಮೆಲಲಂದೇ । ಗುರ್ರಾಯಾ

ದರ್ಮರ ಕಯ್ಲೊಂದೀಳ್ಯ ಕೊಡೋವಾನೇ
ಅಣ್ಣ ಕೊಟ್ಟೀಳ್ಯ ತಟ್ವಾನೆ ತಡ್ದಾರೆ
ಅಯ್ವರೊಂದೀಳ್ಯ ಮೆಲೋವಾರೇ
ಅಯ್ವರೊಂದೀಳ್ಯ ಮೆಲುವನ್ನು ಗುರ್ರಾಯ

---

೧೨೦. ಕಾಗೆ

ತಾನೊಂದೀಳ್ಯವಾ ಮೆಲೋವಾನೇ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಮಾಳೂಗೀ ಒಳಗೆ ನೆಡದಾನೆ ।
ಮಾಳೂಗಿಯೊಳಗೆ ನೆಡದಾನೆ ಗರ್‍ರಾಯಾ

ಹೊಸ ಹಲ್[೧೨೧] ಹೊಸ್ ಪಗ್ಡೀ ತರೋವಾನೇ । ಗುರ್‍ರಾಯಾ
ಮಾಳಗ್ಗಿಂದೆರಗೇ ಬರೋವಾನೇ । ಗುರ್‍ರಾಯಾ

ಆಟದ ಚಾವಡಗೇ ನೆಡದಾನೆ
ಆಟದ ಚಾವಡಗೇ ನೆಡ್ವದ್ನು ದರ್ಮರು
ಆಟದ ಚಾವಡಗೇ ನೆಡದಾರೆ

ಆರುಗೆರಿಯಾ ಬರದೇ ಬಂಬತ್ ತೆರಿಯಾ ಕಟ್ಟೇ
ಗುರ್‍ರಾಯಾಟಕೇ ಕುಳೂತಾನೆ

ಆರುಗೆರಿಯಾ ಬರದೇ ಹನ್ನೆಯ್ಡು ತೆರಿಯಾ ಕಟ್ಟೇ
ದರ್ಮರಾಟಕೆ ಕುಳತಾರೆ

ಒಂದಾಟಾ ಆಡಿ ದರ್ಮಾರೆ ಗೆದ್ದಾರೆ
ಗುರ್‍ರಾಯಾಗಾಟಾ ಗೆಲವಿಲ್ಲ.

ಎಯ್ಡಾಟಾ ಆಡೇ ದರ್ಮಾರೇ ಗೆದ್ದಾರೆ
ಗುರ್‍ರಾಯಾಗಾಟಾ ಗೆಲವಿಲ್ಲ

ಗುರ್‍ರಾಯಾಗಾಟಾ ಗೆಲವಿಲ್ಲಂದ್ ಗುರ್‍ರಾಯಾ
ಆಟ್‌ಮುರ್ದೀ[೧೨೨] ಗ್ವೋಟೆ[೧೨೩] ಕುಳಿತಾನೆ । ಗುರ್‍ರಾಯಾ
ಮಾಳೂಗೀ ಒಳಗೆ ನೆಡದಾನೆ । ಗುರ್‍ರಾಯಾ

ತನ್ನಾ ಗಣಿನಾಥಾಗೇ[೧೨೪] ಹರಕೀಯೇ
ಮೆಟ್ಟೂವೆ ಗಣಿನಾಥ್ನಾ ಕುಟ್ಟೂವೆ ಗಣಿನಾಥ್ನಾ
ಕಟ್ಟೀ[೧೨೫] ಸಾಗರಕೆ ಹಣೂವೆನೋ[೧೨೬]

ಈ ಸಾರೀನಾಟಾ ತಾನಾಡಿ ಗೆದ್ದಾರೆ
ಕಾಯಾ ಒಡಿಸೂವೆ ಹದಿನಾರಾ ।

ಹಣ್ಣಾಹರಗೂವೆ ಅಯ್ನೂರಾ । ಅಂದೇಳೇ
ತನ್ನಾ ಗಣಿನಾಥಾಗೆ ಹರಕೀಯೇ ।ಯ। ಮಾಡಿನ್ನು

---

೧೨೧. ಮಾಡಿನ ಮೇಲಿಂದ. ೧೨೨. ಮಾಡಿನಿಂದ ೧೨೧. ಹಲಿಗೆ ೧೨೨. ಆಟ ಮುರಿದು ೧೨೩. ಮೂಲೆಬಳಿ ೧೨೪. ಗಣಪತಿ ೧೨೫. ಕಟ್ಟಿ ೧೨೬. ಬಡಿಯುವೆ.

ಮಾಳಗ್ಗಿಂದೆರಗೇ ಬರೋವಾನೇ ।
ಮಾಳಗ್ಗಿಂದ್ಹೆರಗೆ ಬರುವಾನೆ ಗುರ್ರಾಯಾ
ಮಾಳಗ್ಗಿಂದ್ಹೆರಗೆ ಬರುವಾನೆ ಗುರ್ರಾಯಾ

ಆಟದ ಚಾವಡಗೇ ನೆಡದಾನೆ
ಆರುಗೆಯಾ ಬರದೇ ಒಂಬತ್ ತೆರಿಯಾ ಕಟ್ಟೇ
ಗುರ್ರಾಯಾಟಾಕೆ ಕುಳತಾನೆ

ಆರು ಗೆರಿಯಾ ಬರದೇ ಹನ್ನೆಯ್ಡ್ ತೆರಿಯಾ ಕಟ್ಟೇ
ದರ್ಮಾರಾಟಾಕೇ ಕುಳತಾರೆ

ಒಂದಾಟಾ ಆಡೇ ಗುರ್ರಾಯಾ ಗೆದ್ದಾನೆ
ದರ್ಮರ್ಗೆ ತಡದಾ ಕೊಡೆ ಕುಂಚಾ । ಸಯ್ವಗೇ[೧೨೭]
ಗುರ್ರಾಯಾ ಗೆದ್ದಾನೆ ಗಳಗ್ಯಲ್ಲೇ

ಎಯ್ಡಾಟಾ ಆಡೇ ಗುರ್ರಿಯಾ ಗೆದ್ದಾನೆ
ಭೀಮಯ್ಯಗೇ ತಡದಾ ಕೊಡೆ ಕುಂಚಾ । ಸಯ್ವಾಗೇ
ಗುರ್ರಾಯಾ ಗೆದ್ದಾನೆ ಗಳಗ್ಯಲ್ಲೆ,

ಮೂರಾಟಾ ಆಡೇ ಗುರ್ರಾಯಾ ಗೆದ್ದಾನೆ
ಅರ್ಜಿಣ್ಣಾ[೧೨೮] ತಡದಾ ಕೊಡೆ ಕುಂಚಾ । ಸಯ್ವಾಗೇ
ಗುರ್ರಾಯಾ ಗೆದ್ದಾನೆ ಗಳಗ್ಯಲ್ಲೇ

ನಾಕಾಟಾ ಆಡೇ ಗುರ್ರಾಯಾ ಗೆದ್ದಾನೇ
ಸಾದೇವಗೆ ತಡೆವಾ ಕೊಡೆಕುಂಚಾ । ಸಯ್ವಾಗೇ
ಗುರ್ರಾಯಾ ಗೆದ್ದಾನೆ ಗಳಗ್ಯಲ್ಲೇ ।

ಅಯ್ದಾಟಾ ಆಡೇ ಗುರ್ರಾಯಾ । ಗೆದ್ದಾನೆ
ಸಕಲಯ್ಯಗೆ[೧೨೯] ತಡೆವಾ ಕೊಡೆಕುಂಚಾ । ಸಯ್ವಾಗೇ
ಗುರ್ರಾಯಾ ಗೆದ್ದಾನೆ ಗಳಗ್ಯಲ್ಲೇ ।

ಇಂದಿನಾ ಆಟಾ ಗೆಲವಿಲ್ಲಂದ್ ದರ್ಮರು
ಬೂಮಗ್ ಸಯ್ವಾಗೇ ತಲಬಾಗೇ
ಬೂಮಗ್ ಸಯ್ವಾಗೆ ತಲೆಬಾಗುದ್ನು ಗುರ್ರಾಯಾ
ಲಾಗೊಂದು ಮಾತಾ ನುಡೀದಾನೆ

---

೧೨೭. ಸಹಿತವಾಗಿ ೧೨೮. ಅರ್ಜುನ ೧೨೯. ಸಹದೇವ

"ಅದು ಏನು ದರ್ಮರೆ ತಲೆಬಾಗಿ ಕೂತಿರ
ಕರೆತನ್ನಿ ನಿಮ್ಮ ಅರಸೀಯ"
ಅಟ್ಟಂಬಾ ಮಾತಾ ಕೇಳಾರೆ ದರ್ಮರು
ಕೂತಾ ಮಂಚವಾ ಜಡೋದೆದ್ದೇ ।ದ್ದಿ। ದರ್ಮರು
ಮಾಳೂಗೀ ಒಳುಗೆ ನೆಡದಾರೆ ।"

ತೂಗು ಮಂಚದಲೆ ಕುಳೋತಾರೆ
ತೂಗು ಮಂಚದಲೆ ಕುಳುವದ್ನು ರೂಪತಿ
ಮಾಳಗ್ಗಿಂದೆರಗೇ ಬರೋವಾಳೆ

ಆಯುಳ್ಳ ಹಣ್ಣಡಕೆ ಸೋಯಿಸಿದಾ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡಿ
ಮಾಳಗ್ಗಿಂದೆರಗೇ ಬರೋವಾಳೆ । ರೂಪತಿ
ದರ್ಮರೊಡನೋಗಿ ನಿಲೋವಾಳು ।"

ದರ್ಮಗೊಂದೀಳ್ಯ ಕೊಡೋವಾಳೇ
ಕೊಟ್ಟಾ ಈಳ್ಯವ ತಟ್ಟಾನೆ ತಡದಾರೆ
ಆಯೊಕೊಂದೀಳ್ಯ ಮೆಲೋವಾರೇ

ಆಯಾಕೊಂದೀಳ್ಯವಾ ಮೆಲುವದ್ನು ರೂಪತಿ
ತಾನೊಂದೀಳ್ಯವಾ ಮೆಲೋವಾಳೇ
ಎಲೆಯೊಂದ್ ತಿಂದಾಳೆ ರಜವಲ್ಲೇ ಉಗಳಾಳೆ
ಆಗೊಂದು ಮಾತಾ ನುಡೀದಾಳೆ

"ಯಾರತ್ತ ಸೋಲಾದೊ ಯಾರತ್ತ ಗೆಲೂವಾದೊ
ಯಾರೀಗೀ ಆಟ ಗೆಲೂವಾದೊ?"

ನಮ್ಮತ್ತ ಸೋಲಾದೊ ಅವರತ್ತ ಗೆಲೂವಾದೊ
ಅವರೀಗೀ ಆಟಾ ಗೆಲೂವಾದೊ । ರೂಪತಿ
ಗುರ್‍ರಾಯ್ ನಿನಕೈಲಿ ಬರುಬೇಕೇ

"ಮುಟ್ಟೀಲಗುಂಡಿ[೧೩೦] ಮೂರ್ ನೀರು ಸಂದ್ಲಿಲ್ಲ
ತೊಳಚೀಯಾ ಕದ್ರಾ ಮೊಡೀಲಿಲ್ಲ,[೧೩೧]
ಮುಟ್ಟೀಲ ಗುಂಡಿ ನಾಕ್‌ನೀರ್ ಸಂದಲಿಲ್ಲ[೧೩೨]

ತೊಳಚೀಯಾ ಕದ್ರಾ ಮೊಡಿಯಾಲಿಲ್ಲಾ ಅದರಿನ್ನು
ಕಿಟ್ಟದೆ[೧೩೩] ತಾನು ಬರೋಲಾರೆ

೧೩೦. ಮುಟ್ಟಾಗಿ ೧೩೧. ಮುಡಿಯಲಿಲ್ಲ ೧೩೨. ಕಳೆದಿಲ್ಲ ೧೩೩. ಮುಟ್ಟದೆ

ನಿಮ್ಮ ಮಾನಾವಾ ನೀವಿದ್ದಿ ಕೊಡಬಾರಾ
ಸುಮ್ಮನೆ ನೀವು ನೆಡಿಯಿರಿ । ಅಂಬುದ್ನು
ಕೂತಾ ಮಂಚವಾ ಜಡೋದೆದ್ದೇ । ದರ್ಮರು

ರಾಜಂಗಳ ಮೆಟ್ಟಾ ಇಳೀದಾರೆ । ದುರ್ಮರು
ರಾಜಬಿದಿಗಾಗೇ ನೆಡದಾರೆ

ಮಾಡನ ಮೆನಿದ್ದಿ[೧೩೪] ನೋಡಾನೆ ಗುರ್ರಾಯಾ
ಪಾಂಡವರರಸೀ ಬರಲಿಲ್ಲ । ಅಂದೇಳಿ
ಮಾಡ್ಗಿಂದು ಕೆಳಗೆ ಬರೋವಾನೆ.
ಮಾಡ್ಗಿಂದು ಕೆಳಗೆ ಇಳುವದ್ನು ದರ್ಮರು

ರಾಜಂಗ್ಳ ಮೆಟ್ಟಾ ನೆಗದತ್ತೀ
ರಾಜಂಗ್ಳ ಮೆಟ್ಟಾ ನೆಗದತ್ವದ್ನು ಗುರ್ರಾಯಾ
ಆಗೊಂದು ಮಾತಾ ನುಡೀದಾನೆ

ಅದು ಏನು ದರ್ಮರೆ ಹಾಂಗೋಗಿ ಹಿಂಗ್ ಬಂದ್ರಿ
ಕರ್ತಂದ್ರಾ ನಿಮ್ಮಾ ಅರಸೀಯಾ

"ಮುಟ್ಟಾಲ ಗುಂಡಿ ಮೂರ್‌ನೀರು ಸಂದಲಿಲ್ಲ
ತೊಳಚೀಯ ಕದ್ರಾ ಮುಡಿಯಾಲಿಲ್ಲ । ಅದರಿನ್ನು
ಕಿಟ್ಟಾದೆ ತಾನಿನ್ನು ಬರೋಲಾರೆ

ಮುಟ್ಟಾಲ ಗುಂಡಿ ಮೂರ್ ನೀರು ಸಂದಲ್ಲಿಲ್ಲ
ತೊಳಚೀಯಾ ಕದರಾ ಮುಡಿಯಾಲಿಲ್ಲ । ಅದರಿನ್ನು
ಮುಟ್ಟಾದೆ ನಾನು ಬರೋಲಾರೆ

ರೂಪತಿ ಬಣ್ಣಾ ತುಂಬೀ ಹೂಂಗಿನ್ಹೋರ್ಣ
ಕಾಣಸಲೊಂದು ಕಲೆಯಿಲ್ಲ । ಧರ್ಮರೆ

ಬಾಯಾ ಮಾತಾಡಿ ತೆಳದ್‌ಬಂದ್ರಾ ।ಅಂದೇಳಿ
ತನ್ನಾ ಕರ್ಣನಾ ದೆನಿದೂರಿ.

ಎಂದೂ ಕರ್ದಂವಲ್ಲಾ[೧೩೫] ಬಂದಾನೇ ಕರ್ಣನು
ನಿಂದಾನೆ ಗುರ್ರಾಯ್ನಾ ಒಡನೋಗಿ । ನಿಂದೀಕಂಡಿ
ಏನು ಕಾರಣ್ಣೆ ಕರದೀಯೋ"

೧೩೪. ಮಾಡಿನ ಮೇಲಿಂದಲೇ ೧೩೫. ಕರೆದವನಲ್ಲ

“ಕರ್ದಂಬ್ ಕಾರ್ಯವಿಲ್ಲ ಕಿರಿದುಂಬೆಸರ ಸಯ್ಯೆ
ಹೋಗೀ ರೂಪತಿಯಾ ಕರತಾರೋ

“ಆರ್ನ್[೧೩೬] ತಲಿತಾ ಅಂದ್ರತರ್ವೆ ಚೊರ್ನ್[೧೩೭] ತಲಿತಾಅಂದ್ರತರ್ವೆ
ಹೀಲಿಸತ್ತಗೀಯಾ ನೆಳಲಾಡೇಡ್ ಹೋಗ್ವನತಲಿತರ್ವೆ
ತರಲಾರೆ ಪರರಾ ಅರಸೀಯಾ.”

“ನನ್ನ ಅನ್ನಾ ಉಂಡೇ ನನ್ನಾ ಸುಣ್ಣಾತಿಂದೇ
ತಾನೇ ಹೇಳಿದ ಮಾತಾ ಸಲೀಸ್ಲಾರ್ಯಾ[೧೩೮] । ಕರ್ಣನೆ
ಕಟ್‌ಕಣೋ ಪಂಜರ್ದಾ ಅರಮನೆ

ಒಬ್ಬರ ಮಲ್ಲೆ ಇರುವದು ಅತಿಕಟ್ಟಾ
ಹೇಳಿದುಳಗವಾ[೧೩೯] ಸಲಸಬೇಕೋ
ಹೇಳಿದುಳಗವಾ ಸಲಸದೇ ಇದ್ದರೆ
ಕಟ್‌ಕಂಬೇಕೋ ಪಂಜರದ ಅರಮನೆ
ಕಟ್ಕಂಬೇಕೋ ಪಂಜರದ ಅರಮನೆ ಅಂದ್‌ಕರ್ಣ

ಮುತ್ತನ ಕಣ್ಣೀರಾ ಸೆಡೀದಾನೆ । ಕರ್ಣನು
ಮಾಳೂಗಿ ಒಳಗೆ ನೆಡದಾನೆ । ಕರ್ಣನು
ಅಟ್ಟತ್ತಿ ಪೆಟ್ಟಗಿಯಾ ತೆಗದಾನೆ । ಕರ್ಣನು
ಮೆಟ್ಟಿ ಬೀಗವಾ ಕರೀದಾನೆ । ಕರ್ಣನು

ಮುಚ್ಚೀಲ ತಗದೇ ಕಡಗಿಟ್ಟಿ । ಕರ್ಣನು
ಕರ್ದೊಂದುಟ್ಟಾನೆ[೧೪೦] ಕರ್ದೊಂದಾ ತೊಟ್ಟಾನೆ
ಕರಿಯಾ ಅರಿಗಳ[೧೪೧] ಬಿಗೀದಾನೆ । ಕರ್ಣನು
ಪೆಟ್ಟೂಗಿ ಬಾಯಲ್ಲೇ ಮಡೋಗಾನೆ । ಕರ್ಣನು

ಕರ್ದೊಂದ್ ಮುಗ್ಲಲ್ಲೇ ಹೆರೋಟಾನೆ । ಕರ್ಣನು
ಮಾಳಗ್ಗಿಂದೆರಗೇ ಬರೇವಾನೇ । ಕರ್ಣನು
ರಾಜಂಗ್ಳಮೆಟ್ಟ ಇಳೀದಾನೆ

ಹೊನ್ನಾರ ತಂಕು ಗೆರಸಪ್ಪಿ ತುದಿತಂಕು
ತನಗಲ್ಲದ ರಾಜ್ಯ ಪರ್ರಗಲ್ಲಂದ್ । ಕರ್ಣನು

ಸಂಕ ವಜ್ಜಳಸೇ ನೆಡದಾನೇ । ಕರ್ಣನು
ಅಪ್ಪೂಲಿದೆವ್ನ[೧೪೨]ರಮನಗೇ ನೆಡದಾನೆ । ಕರ್ಣನು

---

೧೩೬. ಯಾರ ೧೩೭. ಚೋರನ ೧೩೮. ನಡೆಸಿಕೊಡಲಾರೆಯಾ? ೧೩೯. ಹೇಳಿದ ಸೇವೆಯನ್ನು
೧೪೦. ಕರಿದೊಂದನ್ನುಟ್ಟನು ೧೪೧. ವಸ್ತ್ರ. ೧೪೨. ತಂದೆ ಸೂದೇವನ

ಹೋಗಿ ಬಾಗಲ್ಲೇ ನಿಲೋವಾನೆ
ಹೋಗಿ ಬಾಗಲ್ಲೇ ನಿಲುವದ್ನು ಅಪ್‌ಸೂಲೀದೆವಾ

ತಡದಾನೆ ಚಂಬಗಲೇ ಉದಕಾವೇ
ಅಪ್ಪಕೊಟ್ಟುದಕಾ ತಟ್ಟಾನೆ ತಡದಾನೆ

ಕಾಲೋ ಸಿರಿಮೊಕವಾ ತೊಳದಾನೆ । ಕರ್ಣನು
ಮಾಳೂಗಿ ಒಳಗೆ ನೆಡದಾನೆ । ಕರ್ಣನು

ತೂಗು ಮಂಚದಲೆ ಕುಳೋತಾನೆ
ತೂಗು ಮಮಚದಲೆ ಕುಳುವದ್ನು ಅಪ್‌ಸೂಲೀದೆವಾ
ಮಾಳೂಗೀ ಒಳಗೆ ನೆಡದಾನೆ.

ಆಯುಳ್ಳ ಹಣ್ಣಡಕೆ ಸೋಯಿಸಿದ ಬಿಳಿಎಲೆ
ಹಾಲಿನಲಿ ಬೆಂದಾ ತೆನೆ ಸುಣ್ಣಾ । ತಡಕಂಡಿ
ಮಾಳಗ್ಗಿಂದೆರಗೇ ಬರೋವಾನೇ

ಮಾಳಗ್ಗಿಂದೆರಗೆ ಬರ್ವದ್ನು ಅಪ್‌ಸೂಲೀದೆವಾ
ಕರ್ಣಗೊಂದೀಳ್ಯಾ ಕೊಡೋವಾನೇ
ಅಪ್ಪಾ ಕೊಟ್ಟೀಳ್ಯ ತಟ್ಟಾನೆ ತಡದಾನೆ

"ಆರ್ನ ತಲತಾಂದ್ರ ತರ್‍ವೆ ಚೊರ್ನ ತಲಿತಂದ್ರತರ್‍ವೆ
ತರ್‍ನಾರೆ ಪರರಸೀಯ । ಅಂಬುದ್ನು ಅಪ್‌ಸೂಲೀದೆವಾ.
ಆಗೊಂದು ಮಾತಾ ನುಡೀದಾನೆ.

"ಉಪ್‌ನೀರ್ ಹುಟ್ಟಲಿತಂಕು[೧೪೩] ಸೀನೀರ್ ಬೆಳವಲಿ ತಂಕು
ನಿನಗಲ್ಲದ ರಾಜ್ಯ ಪರರ್‌ಗಲ್ಲ । ಮಗನೆ ಕೇಳೋ

ಬಾಯಾ ಮಾತಾಡೇ ತೆಳದ್‌ಬಾರೋ[೧೪೪] । ಅಂಬುದ್ನು
ಕೂತಾ ಗದ್ದಗಿಯಾ ಜಡದೆದ್ದೇ । ಕರ್ಣನು
ರಾಜಂಗ್ಗ ಮೆಟ್ಟಾ ಇಳೀದಾನೆ

ಉಪ್‌ನೀರ್ ಹುಟ್ಟಲಿತಂಕು ಸೀನೀರ್ ಬೆಳವಲಿತಂಕು,
ತನಗಲ್ಲದ ರಾಜ್ಯಾ ಪರರ್‌ಗಲ್ಲ । ಅಂದೇಳೇ
ಸಂಕಾ ವಜ್ಜ ಳಸೇ[೧೪೫] ನೆಡದಾನೆ । ಕರ್ಣನು
ಇಸ್ಕನ್ನಿ[೧೪೬] ಅರ್ಮನೆಗೇ ನೆಡದಾನೆ । ಕರ್ಣನು
ಹೋಗೀ ಬಾಗಲ್ಲೇ ನಿಲೋವಾನೇ.

---

೧೪೩. ಹುಟ್ಟುವಲ್ಲಿವರೆಗೆ ೧೪೪. ತಿಳಿದು ಕೊಂಡುಬಾ ೧೪೪. ತಿಳಿದು ಕೊಂಡು ಬಾ ೧೪೫. ಸೇತುವೆದಾಟಿ
೧೪೬. ವಿಷಕನ್ನೆ

ಹೋಗಿ ಬಾಗಲ್ಲೇ ನಿಲ್ವದ್ನು ಇಸ್ಕನ್ನಿ
ತಡ್ದಳೇ ಚಂಬಗಲೇ ಉದಕವೇ
ಇಸ್ಕನ್ನೆ ಕೊಟ್ಟುದಕಾ ತಟ್ಟಾನೆ ತಡದಾನೆ

ಕಾಲೂ ಸಿರಿಮೊಕವಾ ತೊಳದಾನೆ । ಕರ್ಣನು
ಮಾಳುಗಿ ಒಳಗೆ ನೆಡದಾನೆ

ಮಾಳೂಗಿ ಒಳಗೆ ನೆಡದಾನೆ
ಹಸವೀಗ್ ಹಾಲ್ಗಂಜಿ ಬಡಸಾಳೆ
ಹಸವೀಗ್ ಹಾಲ್ಗಂಜಿ ಬಡಸ್ವದ್ನು ಕರ್ಣನು

ಉಂಡೆದ್ದನೊಂದು ಗಳಗ್ಯಲ್ಲೇ
ಉಂಡಾನೂಟವಾ ತೊಳ್ದಾನೆಂಜಲಮೊಕವಾ
ತೂಗುಮಂಚದಲೆ ಕುಳೋತಾನೆ.

ತೂಗು ಮಂಚದಲೆ ಕುಳ್ವದ್ನು ಇಸ್ಕನ್ನೆ
ಎಂಜಲಮಯ್ಲುಗೀಯಾ ತೆಗದಾಳೆ.

ಎಂಜಜಲಮಯ್ಲುಗೀಯಾ ತೆಗ್ವದ್ನು ಇಸ್ಕನ್ನೆ
ಮಾಳೂಗೀ ಒಳಗೆ ನೆಡದಾಳೆ.

ಆಯುಳ್ಳ ಹಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡೆಕಂಡೆ[೧೪೭]
ಮಾಳಗ್ಗಿಂದೆರಗೇ ಬರೋವಾಳೆ । ಇಸ್ಕನ್ನೆ
ಕರ್ಣನೊಡನೋಗೇ ನಿಲೋವಾಳೆ

ಕರ್ಣನೊಡನೋಗಿ ನಿಲ್ವದ್ನು ಇಸ್ಕನ್ನೆ
ಕರ್ಣಗೊಂದೀಳ್ಯ ಕೊಡೋವಾಳೆ.

ಇಸ್ಕನ್ನೆ ಕೊಟ್ಟೀಳ್ಯ[೧೪೮] ತಟ್ಟನೆ ತಡ್ದಾನೆ
ಆಯಾಕೊಂದೀಳ್ಯ ಮೆಲೋವಾನೇ
ಆಯಾಕೊಂದೀಳ್ಯ ಮೆಲ್ವದ್ನು ಇಸ್ಕನ್ನೆ
ತಾನೊಂದೀಳ್ಯವ ಮೆಲೋವಾಳೆ.

ಎಲಿಯೊಂದ್ ತಿಂದಾಳೆ ರಜವಲ್ಲೆ ಉಗಳಾಳೆ
ಆಗೊಂದು ಮಾತಾ ನುಡೀದಾಳೆ

೧೪೭. ತೆಗೆದುಕೊಂಡು ೧೪೮. ಕೊಟ್ಟ ವೀಳ್ಯ

ಅಂದ್ವಂತು[೧೪೯] ಆಗೀರಿ ಚಂದ್ವಂತು ಆಗೀರಿ
ಗಂಡು ರೂಪದಲೆ ಚಲುವರು । ದೇವರೇ
ನಿಮ್ಮಿಂಡರ ಪುರವಾ ಅರಿಯಾರಾ
ನಮ್ಮ ಹಿಂಡರ ಪುರ್ವಾ ನಾನೆಲ್ಲಾ ಬಲ್ಲೆನೆ ಹೆಣ್ಣೆ
ಯಾವದೇ ರೂಪತಿಯಾ ಅರಮನೆ

ಅಂದ್ವಂತು ಆಗೀರಿ ಚಂದ್ವಂತು ಆಗೀರಿ}
ಗಂಡು ರೂಪದಲೆ ಚಲುವರು । ದೆವರೆ
ನಿಮ್ತಂದೀ ಪುರ್ವಾ ಅರಿಯಾರಾ

ತಂದೀಯ ಪುರ್ವಾಬಲ್ಲೆ ಹೆಣ್ಣೆ ಕೇಳೇ
ಯಾವದ್ದೇ ರೂಪತಿಯ ಅರಮನೆ

ಅಯ್ಯೋ ದೇವಾರೇ ನೀವಿನ್ನು ಅರಿಯಾರಾ
ಇದು ಈಗ ರೂಪತಿಯ ಅರಮನೆ.

"ಬಸ್ಲಿ ನೆಟ್ಟದೆ ದೆಸಿಕ್[೧೫೦] ಕಯ್ ಬಿಟ್ಟಿದೆ.
ಸಿರಿಯೋ ಮಂಡಲವಾ ಬರದದೆ । ದೆವರೆ
ಇದು ಈಗ ರೂಪತಿಯ ಅರಮನೆ.

ಅಟ್ಹೊಂದು ಮಾತಾ ಕೇಳಾನೆ ಕರ್ಣನು
ರಾಜಂಗ್ಯ ಮೆಟ್ಟಾ ಇಳೀದಾನೆ

ಉಪ್ನೀರ ಹುಟ್ಟಲಿತಂಕು ಸಿನೀರ್ ಬೆಳವಲಿತಂಕು
ತನಗಲ್ಲದ ರಾಜ್ಯಾ ಪರರ್‍ಗಲ್ಲಾ[೧೫೧]

ಸೂಲಿಯಾ ಸುತನಾ ಹೊಳೆವ ಹೊನ್ನಾರ್ತಂಕು
ತನಗಲದ ರಾಜ್ಯಾ ಪರರ್‍ಗಲ್ಲಾ ।
ತನಗಲ್ಲದ ರಾಜ್ಯ ಪರರ್ಗಲ್ಲಾದಿದ್ ಕರ್ಣನು
ಸಂಕ ವಜ್ಜಳಸೇ ನೆಡದಾನೆ.

ಅಯ್ವರಿಗ್ಯದ್ದರಮನ್ನೆ ಅಯ್ವರಿಗಯ್ದ್ ಕೆರ್ಬಾವಿ
ಅಯ್ವರಿಗ್ ಅಯ್ದೂ ಸೆಳಮಂಚಾ । ಕಾಣೀತಾ
ಸಂಕ ವಜ್ಜಳಸೇ ನೆಡದಾನೆ

ಸಂಕ ವಜ್ಜಳಸೇ ಬರ್ವದ್ನು ರೂಪತಿ
ಅರಗಿ ನೋಡಿದಳೇ ಹೆರಗೊಮ್ಮೆ । ರೂಪತಿ
ಬರ್ವಾ[೧೫೨] ಅರ್ಜನ್ನಾ ಬರ್ವೇ ಸಯ್ಯೇ[೧೫೩] । ಅಂದಾಳೆ.

---

೧೪೯. ಸುಂದರವಂತು ೧೫೦. ದೇಶಕ್ಕೆ ೧೫೧. ಬೇರೆಯವರಿಗಲ್ಲ ೧೫೨. ಬರುವಿಕೆ ೧೫೩. ಸರಿಯೆ

ಬರ್ವಾ ಅರ್ಜಿಣ್ಣಾ ಬರ್ವಲ್ಲ । ಅಂದ್ ರೂಪತಿ
ಬಪ್ಪ ಬಾವ್ನೋರಾ ಬರ್ವೇ ಸಯ್ಯೇ । ರೂಪತಿ
ಮಾಳೂಗಿ ಒಳಗೇ ನೆಡದಾಳೆ

ಮಾಳೂಗಿ ಒಳಗೇ ನೆಡ್ವದ್ನು ಕರ್ಣನು
ಹೋಗೀ ಬಾಗಲ್ಲೇ ನಿಲೋವಾನೆ.
ಸಂಕದ ದೆನಿಯಾ ಸಂತರ್ಸ್ವಳೇ ರೂಪತಿ
ತಡದಳೆ ಚಂಬಗಲೆ ಉದಕವೇ । ರೂಪತಿ
ಕರ್ಣಗೆ ಉದಕಾ ಕೊಡೋವಾಳೆ,

ರೂಪತ್ ಕೊಟ್ಟುದಕಾ ತಟ್ವಾನೆ ತಡದಾನೆ
ಕಾಲೂ ಸಿರಿಮೊಕವಾ ತೊಳದಾನೆ । ಕರ್ಣನು
ಮಾಳೂಗೀ ಒಳಗೆ ನೆಡದಾನೆ । ಕರ್ಣನು
ತೂಗುಮಂಚದಲೆ ಕುಳತಾನೆ.

ತೂಗುಮಂಚದಲೆ ಕುಳುವದ್ನು ರೂಪತಿ
ಆಗೊಂದು ಮಾತಾ ನುಡೀದಾಳೆ.

ತನ್ನರು ಕೊಟ್ಟರು ಸೆಣ್ಕಾಲಮಂಚವ
ಇಬ್ಬರು ಕೂದಲಕು[೧೫೪] ನೆರಿಯವೆ[೧೫೫] । ಬಾವ್ನರೆ
ತರಸಲೋ ಅರಜಿಣನ ಸೆಳಮಂಚಾ"

"ತನ್ನ ತಮ್ಮದಿರು ಸೆರ್ಮನಿಲಿರುವಾಗ[೧೫೬]
ತನಗೆಂತಕ ಮಂಚಾ ಕೊಡುತೀಯೇ । ಎಲೆ ಹೆಣ್ಣೆ
ಕೊಟ್ಟದ್ದು ಒಂದು ಮಣೆಸಾಕು

ತನ್ನರು ಕೊಟ್ಟರು ಸೆಣಕಾಲಮಂಚವ
ಇಬ್ಬರು ಕೂದಲಕೂ ನೆರಿಯವೆ । ಬಾವನರೆ
ತರಸಲೋ ಬೀಮನ ಸೆಳಮಂಚ

ತನ್ನ ತಮ್ಮದಿರು ಸೆರ್ಮನಿಲಿರುವಾಗ
ತನಗೆಂತಕೆ ಸೆಳಮಂಚಾ । ಕೊಡತೀಯೇ
ಕೊಟ್ಟದ್ದು ಒಂದು ಮಣೆಸಾಕೆ

ಅಟ್ಟಂಬು ಮಾತಾ ಕೇಳಾಳೆ ರೂಪತೀ
ಮಾಳೂಗಿ ಒಳಗೆ ನೆಡದಾಳೆ ।

೧೫೪. ಕೂಡ್ರಲಿಕ್ಕೂ ೧೫೫. ಸಾಲದು ೧೫೬. ಸೆರೆಮನೆಯಲ್ಲಿರುವಾಗ

ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡೆ
ಮಾಳಗ್ಗಿಂದೆರಗೇ ಬರೋವಾಳೆ । ರೂಪತಿ
ಕರುಣಾನೊಡನೋಗೇ ಕುಳತಾಳೆ । ರೂಪತಿ
ಕರುಣಾಗೊಂದೀಳ್ಯ ಕೊಡೋವಾಳೆ

ಕರುಣಾಗೊಂದೀಳ್ಯ ಕೊಡುವದ್ನು ಕರ್ಣನು
ಆಯಾಕೊಂಡೀಳ್ಯಾ ಮೆಲೋವಾನೇ

ಆಯಾಕೊಂದೀಳ್ಯಾ ಮೆಲುವದ್ನು ರೂಪತಿ
ತಾನೊಂದು ಈಳ್ಯಾ ಮೆಲ್ಲೋವಾಳೇ
ತಾನೊಂದೀಳ್ಯವ ಮೆಲುವದ್ನೆ ರೂಪತಿ

ಅಡಕೆ ಸೊಕ್ಕಲೇ[೧೫೭] ಮಯ್ಮರತಲ್ಲೊರಗಾಳೆ
ಅಡ್ಕೆ ಸೊಕ್ಕಲೇ ಮಿಯ್ಮರತಲ್ಲೊರಗ್ವದ್ನು ಕರ್ಣನು
ಹಚ್ಚಡ ಸೆರಗೀಲೇ ತಡದಾನೆ

ಹಚ್ಚಡ ಸೆರಗೀಲೇ ತಡವದ್ನು ರೂಪತಿ
ಮೆಯ್ಯ ಮುರುದೆದ್ದೇ ಕುಳತಾಳೆ
ಮೆಯ್ಯ ಮುರುದೆದ್ದೇ ಕುಳುವದ್ನು ರೂಪತಿ
ಆಗೊಂದು ಮಾತಾ ನಡೀದಾಳೆ.

ಅದು ಏನು ಬಾವ್ನೋರೆ ಹಚ್ಚಡ ಸೆರಗಿಲಿ ತಡ್ದ್ರಿ
ಗೋವ್‌ಕಟ್ನರ್ಗು[೧೫೮] ನಿಮಗೂ ಹೊಲೆಯೇನು ?

ಬಾವಾ ಮಯ್ದನಿಯಾ ಕಿಟ್ಟಬಾರದಂದೇ[೧೫೯]
ಹಚ್ಚಡ ಸೆರ್ಗೀಲಿ ತಡದೀನೇ

ಅಟ್ಟಂಬ ಮಾತಾ ಕೇಳಾಳೆ ರೂಪತಿ
ಆಗೊಂದು ಮಾತಾ ನುಡೀದಾಳೆ.

ಯಾರತ್ತ ಗೆಲೂವಾದೋ ಯಾರತ್ತ ಸೋಲಾದೋ
ಯಾರೀಗೀ ಆಟಾ ಗೆಲೂವಾದೋ

ನಮ್ಮತ್ತ ಸೋಲಾದೊ ಅವರತ್ತ ಗೆಲೂವಾದೋ
ಅವರಿಗೀ ಆಟಾ ಗೆಲೂವಾದೊ । ರೂಪತಿ
ಗುರ್ರಾಯ್ ನಿನ್ನ ಕಯ್ಲೆ ಬರೋಬೇಕೆ
ಗುರ್ರಾಯ ನಿನಕಯ್ಲೆ ಬರಬೇಕು ಎಂದೇಳಿ
ಕರವಾ ಕಳಗನಿಯೆ ನನಕಯ್ಲೇ

೧೫೭. ಮತ್ತಿನಿಂದ ೧೫೮. ಗೋವಿನ ಬಳಿಯವರಿಗು ೧೫೯. ಮುಟ್ಟಬಾರದೆಂದು

ಬಾವಾ ಮಯ್ದಿನೀ ಒಂದಾದೀಲೋಗ್ವಂಗೆ
ಕಂಡವ್ರು ನಿಮ್ಮಾ ಸತಿಯಂಬ್ರು । ಬಾವಾನೋರೆ
ಬರುವಾದಿಲ್ಲಾ ನಿಮ್ಮಾ ಒಡನಲ್ಲೇ

ಮುಂದೋದ್ರ ತಂಗ್ಯಬ್ರು ಹಿಂದೋದ್ರ ಮಡದ್ಯಂಬ್ರು
ಬರುವದಿಲ್ಲಂತು ತನ್ನಾ ಒಡನಲ್ಲೇ । ಅಂದೇಳೇ
ಹೋಗೇ ನಿಮ್ಮಣ್ಣ,ಗೆ ಒರೆಯಂದೇ

ಅಟ್ಟಂಬಾ ಮಾತಾ ಕೇಳಾನೆ ಕರ್ಣನು
ಆಗೊಂದು ಮಾತಾ ನುಡೀದಾನೆ.

ನನಗಿಂದು ಹಿಂದೆ ದುಸುವಯ್ಯ ಬರುತಾನೆ
ಬಾಗೀಲ ಗೀಳಾನೇ[೧೬೦] ಬಿಗುದೀಡೆ । ರೂಪತಿ

ಕೋಲಾಮೆನ್ ಕೋಲಾ ಬಿಗೂದೀಡೆ । ರೂಪತಿ
ಸಿಂಗರಿಸಿ ಆನೀ ಬಿಗದೀಡೆ । ರೂಪತಿ
ನೀ ಏಳೇ ಮಾಳಗಿಯಾ ಒಳಗೀರೆ

ಅತ್ತಗತ್ತಗಂದೇ ಹೆತ್ತತ್ತಗ ದೆನಿಗುಡುವ
ಓಯ್ಗುಣ್ಣಬೆಡಾ[೧೬೧] ಒಳಗಿರು

ಓಯ್ಗುಣ್ಣದಿದ್ದರೆ ಒಳಗಿದ್ದ ಕಾಂಬಾನೆ
ಮೆಟ್ಟ ಮಣಿಮಾಡಾ ಮುರುವಾನೆ । ರೂಪತಿ
ನೀನಿದ್ದ ಒಳಗೇ ಬರೂವಾನೇ । ರೂಪತಿ

ಮೆದಲಗೀ[೧೬೨] ತೊಟ್ಟೇ ಎಳಗ್ವಾನೆ[೧೬೩] । ರೂಪತಿ
ಅಡ್ಡನೇ ಹರಿಯಾ ನೆನಕಣೇ

ಅಡ್ಡನೇ ಹರಿಯಾ ನೆನವದ್ನು ರೂಪತಿಯ
ಮೆದಲಗೇ ಅಲ್ಲೇ ತಿರುವಕ್ಕೇ

ಮೆದಲಗೇ ಅಲ್ಲೇ ತಿರುವಾದ್ದ ಕಾಂಬಾನೇ
ರಟ್ಟೀಯ ತೊಟ್ಟೇ ಎಳವನೇ । ವದ್ನು । ರೂಪತಿ
ರಾಜಂಗ್ಯಲ್ ತಂದೇ ನಿಲಸೂವ

ಅಟ್ಟಂಬಾ ಮಾತಾ ಕೇಳಾಳೆ ರೂಪತಿ
ಬಾಗೀಲಗೀಳಾನೇ ಬಿಗೂದಾಳೆ । ರೂಪತಿ
ಸಿಂಗರಸೀ ಆನೀ ಬಿಗದಾಳೆ । ರೂಪತಿ
ತಾ ಏಳ್‌ಮಾಳಗೀಯಾ ಒಳಗೋಗೇ

---

೧೬೦. ಅಗಳಿ, ಮೀಡ ೧೬೧. ಓ ಎನ್ನದಿರು ೧೬೨. ಮೇಲುದ, ಮೇಲ್ಪೆರಗು ೧೬೩. ಎಳೆಯವನು

ತಾ ಏಳ್‌ಮಾಳಗಿಯಾ ಒಳಗೋಗದ್ ಕಾಂಬಾನೇ
ಕೂತಾ ಮಂಚವ ಜಡದೆದ್ದೇ । ಕರ್ಣನು

ರಾಜಂಗ್ಳ ಮೆಟ್ಟಾ ಇಳದಾನೇ । ಕರ್ಣನು
ರಾಜೋಬಿದಿಗಾಗೇ ನೆಡದಾನೆ । ಕರ್ಣನು

ಗುರ್‍ರಾಯ್ನರಮನಗೇ ಬರೋವಾನೇ
ಮಾಳಗ್ಮೆನಿಂದೆ ನೋಡಾನೆ ಗುರ್‍ರಾಯಾ

ಪಾಂಡವರರಸೀ ಬರಲಿಲ್ಲಾ । ಅಂದೇಳೆ
ಮಾಡ್ಗಿಂದು ಕೆಳಗೆ ಇಳದಾನೆ, । ಗುರ್‍ರಾಯಾ

ಬಂದಿ ಬಾಗಲ್ಲೇ ನಿಲೋವಾನೆ । ಕರ್ಣನು
ಹೋಗಿ ರಾಜಂಗ್ಳ ನೆಗದತ್ತೇ । ಕರ್ಣನು
ಮಾಳೂಗೀ ಒಳಗೇ ನೆಡದಾನೆ । ಕರ್ಣನು
ತೂಗುಮಂಚದಲೆ ಕುಳತಾನೆ.

ತೂಗುಮಂಚದಲೆ ಕುಳುವದ್ನು ಗುರ್‍ರಾಯಾ
ಆಗೊಂದು ಮಾತಾ ನುಡೀದಾನೇ

ಅದು ಏನು ಕರ್ಣನೆ ಹಾಂಗೋಗ್ ಹಿಂಗ್ ಬಂದೆ

ತಂದ್ಯೇನೋ ಪಾಂಡೋರಾ ಅರಸಿಯ
ಮುಂದೋದ್ರ ತಂಗ್ಯಂಬ್ರು ಹಿಂದೋದ್ರ ಮಡದ್ಯಂಬ್ರು
ಬರುವಾದಿಲ್ಲಂತು ತನ್ನಾ ಒಡನಲ್ಲಿ

ಬಾವಾಮಯ್ದೀನಿ ಒಂದಾದೀಲೋಗ್ವಂಗೆ
ಕಂಡವ್ರು ತನ್ನಾ ಸತಿಯಂಬ್ರು । ಅಂದೇಳಿ

ಬರುವಾದಿಲ್ಲಂತೋ ತನ್ನಾ ಒಡನಲ್ಲಿ ।"
ಹಿಂದಕೆ ತಿರಗೇ ಬರೋತಿದ್ದೆ"

"ರೋಪತಿ ಮಿಯ್ಯಬಣ್ಣ ತುಂಬೀ ಹೂಂಗಿನ ಬಣ್ಣ
ಕಾಣಿಸಲೊಂದು ಕಲೆಯಿಲ್ಲ । ಕರ್ಣನೆ
ಬಾಯಾಮಾತಾಡಿ ಕಳ್ದ್ ಬಂದ್ಯ" । ಅಂದೇಳಿ

ತಮ್ಮಾ ದುಸುವಯ್ದನಾ ದೆನಿದೂರೇ । ರ್‍ವದ್ನು । ದುಸುವಯ್ಯ
ಓಯ್ದುಂಡೇ ಒಡನೇ ಬರುವಾನೇ

ಇಂದೂ ಕರದಂವಲ್ಲ ಬಂದಾನೇ ದುಸುವಯ್ಯ
ನಿಂದಾನೆ ಗುರುರಾಯ್ನಾ ಒಡನಲ್ಲಿ । ನಿಂದೀಕಂಡೆ
ಏನು ಕಾರಣಲಿ ಕರದೀಯೋ.

ಕರದಂ ಕಾರ್ಯವಿಲ್ಲ ಕಿರಿದುಂಬೆಸರಸಯ್ಯೆ
ಪಾಂಡ್ವರ ಸೆರ್‌ಮಲ್ಲೇ ಇಳ್ಗೇ[೧೬೪] ಬಾರೋ

ಆಟ್ಟಂಬಾ ಮಾತಾ ಕೇಳಾನೆ ದುಸುವಯ್ಯ
ಪಾಂಡೋರಾ ಕರ್ಕಂಡೇ ನೆಡದಾನೆ । ದುಸುವಯ್ಯ
ಕೆಂಡದ ಕೊಟೀಗಾಗೇ ನೆಡದಾನೆ । ದುಸುವಯ್ಯ

ಪಾಂಡೊರಾ ಸೆರಮಲ್ಲೇ ಮಡಗಾನೆ । ದುಸುವಯ್ಯ
ಮೊವದ[೧೬೫] ಸರತಟ್ಟೇ ಇಳೀದಾನೆ । ದುಸುವಯ್ಯ
ಗುರುರಾಯ್ನ ಒಡನೋಗೇ ನಿಲೋವಾನೆ,

ಗುರ್ರಾಯ್ನಾ ಒಡ್ನೋಗಿ ನಿಲ್ವದ್ನು ಗುರ್ರಾಯಾ
ಲಾಗೊಂದು[೧೬೬] ಮಾತಾ ನುಡೀದಾನೆ

ಲಾಗೊಂದು ಮಾತಾ ಏನಂದಿ ನುಡದಾನೆ
ಪಾಂಡವರರಸೀ ಕರತಾರೋ । ಅಂಬುದ್ನು ದುಸುವಯ್ಯ
ಮುರುದಾಪಿನಲ್ಲೇ[೧೬೭] ಕೊಣದಾನೇ[೧೬೮]

"ಹಿತ್ತೀಲ ಕಣಕೇ[೧೬೯] ಚವ್ತೀಯ[೧೭೦] ನೆಟ್ಟೀದೆ
ನೆಟ್ಟವರಿಗರ್ಧಾ ನೆರಗರ್ಧಾ[೧೭೧] । ಅಣ್‌ತಂದಾಮಡದಿ
ಅಣ್ಣಿಗೆ ಅರ್ಧಾ ತನಗರ್ಧಾ ।" ಅಂದೇಳೇ

ರಾಜಂಗಳ ಮೆಟ್ಟ ಇಳೀದಾನೇ । ದುಸುವಯ್ಯ
ರಾಜಬಿದಿಗಾಗೇ ನೆಡದಾನೇ । ದುಸುವಯ್ಯ

ಅತ್ತಗ್ ಅತ್ತಗ್ ಅಂದೇ ದೆನಿದೂರೇ
ಅತ್ತಗತ್ತಗಂದೇ ಹತ್ತತ್ತರ ದೆನಿದೂರೇ

ಒಯ್ಯುಗ್ಣಾ ರೂಪತಿ ಒಳಗಿದ್ದೇ।ದ್ದಾ।ಂದ್ ಕಾಂಬನೆ
ಮೆಟ್ಟಿ ಮಣಿಮಾಡಾ ಮುರದಾನೇ । ದುಸುವಯ್ಯ
ಅತ್ತೂಗಿದ್ದೊಳಗೇ ನೆಡದಾನೆ । ದುಸುವಯ್ಯ
ಮೆದಲಗೀ ತಟ್ಟೀ ಎಳದಾನೆ

ಮೆದಲಗೀ ತಟ್ಟಿ ಎಳ್ವದ್ನು ರೂಪತಿ
ಅಡ್ಡಾನೆ ಹರಿಯಾ ನೆನದಾಳೆ.

ಅಡ್ಡಾನೆ ಹರಿಯಾ ನೆನವದ್ನು ರೂಪತಿಯಾ
ಮೆದಲಗೇ ಅಲ್ಲೇ ತಿರವಾಗೇ
ಮೆದಲಗೇ ಅಲ್ಲೋ ತಿರವಾಗದ್ದ ಕಾಂಬಾನೇ

---

೧೬೪. ಇರಿಸಿ, ಇಳುಹಿ ೧೬೫. ಮೋಹದ ೧೬೬. ಆಗೊಂದು ೧೬೭. ಮೂರುದಾಪಿನಲ್ಲಿ ೧೬೮. ಕುಣಿಸನು
೧೬೯. ಹತ್ತಿರ ೧೭೦. ಸಚತೆ ೧೭೧. ನೆರೆಹೊರೆಯವರಿಗರ್ಧ

ರಟ್ವೀಯ ತಟ್ಟೇ ಎಳದಾನೇ । ದುಸುವಯ್ಯ
ರಾಜಂಬೀದಿಗ್ ತಂದೇ ನಿಲಸಾನೆ

ರಾಜಬೀದಿಗ್ ತಂದೇ ನಿಲಸ್ವದ್ನು ದುಸುವಯ್ಯ
ಆಗೊಂದು ಮಾತಾ ನುಡೀದಾನೇ

ಬಿಚ್ಚೀದ ಸೀರೆ ಉಟ್ವೀಕೊ ಅತ್ತೀಗೇ
ದಾರೀಲೋಗ್ವರಿಗೆ ಸಕೋಣಾವೇ
ಬಿಚ್ಚಿದ ಸಿರಿಮುಡಿಯಾ ಕಟ್ಟೀಕೊ ಅತ್ತಿಗೆ
ಹಾದೀಲೋಗ್ವರಿಗೆ ಸಕೂಣಾವೇ"

"ಕಳ್ಳ ದುಸುವಯ್ಯನ ಭೀಮೆದ್ದಿ ಮುರಿಯಾಲೆ
ರಕ್ತದ ಕೋಡಿಯಾಗೇ[೧೭೨] ಹರಿಯಾಲೇ । ತಾನಿನ್ನು
ಅದ್ದಸ್[೧೭೩] ದೆವಂಗಾ ನೆರ್‍ದುಡುವೇ[೧೭೪]

ಕಳ್ಳದುಸುವಯ್ನು ಭೀಮೆದ್ದಿ ಮುರಿಯಾಲೆ
ರಕ್ತದ ಕೋಡಿಯಾಗೇ ಹರಿಯಾಲೇ ತಾನಿನ್ನು
ಅದ್ದಸ್ ಸೆರ್‍ಮುಡಿಯಾ ಸೆಳ್ದೇಕಟ್ಟೇ

ದುಸುವಯ್ಯಾ ಮುಂದಾಗೇ ರೂಪತಿ ಹಿಂದಾಗೇ
ರಾಜಬೀದ್ಯಲ್ಲೇ ನೆಡದಾರೆ । ರೂಪತಿ ದುಸುವಯ್ಯ
ಗುರ್‍ನಾಯ್ನರಮನಗೇ ನೆಡದಾನೆ

ಮಾಡ್ನ ಮೆನದ್ದೇ ನೋಡಾನೆ ಗುರ್‍ರಾಯಾ
ಪಾಂಡವರರಸೀ ಬರತದೆ । ಅಂದೇಳೆ
ಮಾಡ್‌ಗಿಂದೆ ಕೆಳಗೆ ಇಳದಾನೆ । ಗುರ್‍ರಾಯಾ
ರಾಜಂಗ್ಳ ಮೆಟ್ಟಾ ಇಳದಾನೆ.

ಕಲ್ಲೆಕ್ಸಾನೆ[೧೭೫] ಮುಳ್ಳೆಲ್ಲ ಕಡಿಸಾನೆ
ಹಾದಿಗ್ ಒಪ್ಪೆಳ್ ತಳೀದಾನೆ । ರೂಪತಿ
ಅಂಚಂಚನ ಮೆನೇ ಬರೋವಾಳೆ ।

ಅಂಚಂಚನ ಮೆನೇ ಬರುವದ್ನು ಗುರ್‍ರಾಯಾ
ಆಗೊಂದು ಮಾತಾ ನುಡೀದಾನೆ

"ಅವ್ವ ನಿನ್ಮನೆಗೆ ಸೊಸ್ಬಂತೇ ರೂಪತಿ
ಸೋಸ್‌ಗೊಂದ್ ಚಂಬುದಕಾ ಕೊಡೆಹೋಗೇ
ಅವ್ವ ನಿನ್ಮನೆಗೆ ಸೊಸ್ಬಂತೇ ರೂಪತಿ

೧೭೨. ಪ್ರವಾಹ ೧೭೩. ಮುಳುಗಿಸಿ ೧೭೪. ನೆರಿಗೆಮಾಡಿ ಉಡುತ್ತೇನೆ ೧೭೫. ಕಲ್ಲು ಹೆಕ್ಕಿಸಿದನು

ಸೊಸಿಗೊಂದ್ ಹೊನಮಣೆಯಾ[೧೭೬] ಕೊಡೆಹೋಗೇ
ಅಟ್ಟಂಬಾ ಮಾತಾ ಕೇಳಾಳೆ ಬೊನ್ಪತಿ
ತಡದಳೆ ಚಂಬಗಲೆ ಉದಕವೇ

ಒಂದು ಚಂಬುದಕಾ ಇತ್ತೆಲ್ಲಿಗ್[೧೭೭] ತತ್ತೀಯೇ[೧೭೮]
ಕೊಟ್ಕೊಳ್ಳೆ ನಿನ್ನಾ ಮಗದೀರ್ಗ್ಗೆ । ಅಂದೇಳೇ

ಮಾಳುಗೀ ಒಳಗೇ ನೆಡದಾಳೇ
ಅಟ್ಟಂಭಾಮಾತಾ ಕೇಳಾಳೆ ಬೊನ್ಪತಿ
ಒಂದು ಹೊನಮಣೆಯಾ ತರೋವಾಳೇ

ಒಂದು ಹೊನಮಣೆಯಾ ಇತ್ತೆಲ್ಲಗ್ ತತ್ತೀಯೇ
ಕೊಟ್ಕೊಳ್ಳೆ ನಿನ್ನಾ ಮಗದಿರ್ಗೆ । ಅಂದೇಳೇ
ತಪ್ಪು ತಳಕೋಗೇ ಕುಳತಾಳೇ

ತಪ್ಪು ತಳಕೋಗೇ ಕುಳುವದ್ನು ಗುರ್ರಾಯಾ
ರೂಪತಿಗೊಂದೀಳ್ಯಾ ಕೊಡೋವಾನೇ

ಗುರ್ರಾಯ್ ಕೊಟ್ಟೀಳ್ಯಾ ಮುಟ್ಟೀಲೇ ಮರದಿಟ್ಟಾಳೆ
ಕರ್ಣನ ಕಯ್ಯೀಳ್ಯಾ ಮೆಲೂವಾಳೇ ।
“ಬೊನ್ಪತೀ ಬೊನ್ಹಸಿ ಬಿಡಸೀದೆ. । ರೂಪತಿ
ಒಂದಿರಳೇ ತನ್ನಾ ಒಡನಲ್ಲ”

ಬೊನ್ಪತೀ ಕೋಡ್ಡೇಳೀ ಬೊನ್‌ಹಸಿ ನೇಯ್ಸಿಕೋ
ನೀನಿದ್ದಿ ಬೊನ್ಹಸಿ ಬಿಡಸೀಕೊ । ನಿನ್ನಾಲೋ
ತಾಯಾ ತಂದೊಡನೆ । ಇರಸೀಕೊ

ಗೊವೀನಾಡ್ ಸುಣ್ಣಾ ಹಾಲ್ಗಿಂದು ಅಮರೀತಾ[೧೮೦]
ಆಳ್ನ್‌ಕೂಡೇಳಿ ತರಸೀದೆ । ರೂಪತಿ
ಎಯ್ಡಿರಳೇ ತನ್ನಾ ಒಡನಲ್ಲಿ

ಗೊವೀನಾಡ್ ಸುಣ್ಣಾ ಹಾಲ್ಗಿಂದು ಅಮರೀತಾದಾರೆ
ನಿನ್ನಾಳ್ನ್ ಕೂಡೇಳಿ ತರಸಿ।ಕೊ। ನಿನ್ನಾಲೋ
ತಂಗೀ ತಂದೊಡನೆ ಇರಸೀಕೊ

ಬೊನ್ಪತೀ ಕೂಡೇಳಿ ಬೊನಕೆಸರೆತ್ತಿಸುವೆ
ನಾನಿದ್ದೀ ಈಳ್ಯಾ ಮಡಕೊಡುವೆ । ರೂಪತಿ
ಮೂರಿರುಳೆ ತನ್ನಾ ಒಡನಲ್ಲಿ

---

೧೭೬. ಹೊನ್ನಮಣೆಯನ್ನು ೧೭೭. ಇಲ್ಲೆಲ್ಲಿಗೆ ೧೭೮. ತರುತ್ತೀಯೆ ೧೭೯. ಹೊನ್ನಹಸೆ ೧೮೦. ಅಮೃತ

ಬೊನ್ಪತೀ ಕೂಡೇಳಿ ಬೊನಕೆಸರೆತ್ತೀಸು
ನೀನಿದ್ದಿ ಈಳ್ಯಾ ಮಡಕೊಡು । ನಿನ್ನಾಲಾ
ಅಕ್ಕನ ತಂದೊಡನೆ ಇರಸೀಕೊ

ಆಡ್ಆಡ್ದ ಮಾತಿಗೆ ಜಾಣ್ತನ್ಕಿ[೧೮೧] ಕೊಡ್ತದೆ
ಉರುಬಿಸಲಲದ್ರಾ[೧೮೨] ನಿಲ್ಸೇ ಬಾರೋ
ಉರುಬಿಸಲಲ್ಲದ್ರಾ ನಿಲ್ಸಾ ಬಾರೋ । ದುಸವಯ್ಯಾ
ಹರ್ವ ಹೊಗಿಯಲ್ಲೇ ನಿಲ್ಸೇ ಬಾರೋ

ಹರ್ವ ಹೊಗಿಯಲ್ಲೇ ನಿಲ್ಸ್ ಬಾರೋ ದುಸವಯ್ಯಾ

ಒಂದೇ ಕಾಲಲ್ಲೇ ನಿಲ್ಸಬಾರೋ। ಅಂದೇಳಿ
ತನ್ನಾ ದುಸುವಯ್ನಾ ದೆನಿದೂರೇ
ತನ್ನಾ ದುಸುವಯ್ನಾ ದೆನಿದೂರ್ವದ್ನು ದುಸುವಯ್ಯಾ

ಓಯ್ಗುಂಡೇ ಒಡನೇ ಬರೂವಾನೇ
ಓಯ್ಗುಂಡೇ ಒಡ್ನೇ ಬರ್ವದ್ನು ಗುರ್ರಾಯಾ
ಲಾಗೊಂದು ಮಾತಾ ನುಡದಾನೆ

ಆಡ್ಆಡ್ದಮಾತೀಗೆ ಜಾಣ್ತನ್ಕಿ ಕೊಡ್ತದೆ
ಉರ್ಬಿಸ್ಲಲದ್ರ ನಿಲ್ಸಬಾರೋ
ಅಟ್ಟಂಬಾ ಮಾತಾ ಕೇಳಾನೆ ದುಸುವಯ್ಯಾ
ಆಗೊಂದು ಮಾತಾ ನುಡೀದಾನೆ

ಹಿತ್ತಲಕಣಕೇ ಚವ್ತೀಯ ನೆಟ್ಟೀದೆ
ನೆಟ್ಟರೀಗರ್ಧಾ ನೆರಿಗರ್ಧಾ । ಅಣ್ಣನಮಡ್ದಿ
ಅಣ್ಣಗೆ ಅರ್ದಾ ತನಗರ್ದಾ । ಅಂದೇಳೆ

ರೂಪತೀ ಕರಕಂಡೇ ನೆಡದಾನೆ । ದುಸುವಯ್ಯಾ
ರಾಜಂಗ್ಳ ಮೆಟ್ಟಾ ಇಳೀದಾನೆ । ದುಸುವಯ್ಯ
ರಾಜಬಿದಿಗಾಗಿ ನೆಡದಾನೆ । ದುಸುವಯ್ಯ

ಚಿನ್ನ್ದ ಕೊಟೀಗಾಗೇ ನೆಡದಾನೆ । ದುಸುವಯ್ಯ
ರನ್ನದ ಕೊಟಿಗಾಗೆ ನೆಡದಾನೆ ।

ಒಕ್ಕಾಲರ್ ಅದರಾ ನಿಲಸೇ ಬಂದಾ
ಸುಕ್ರಾದೆವ್ರ ಕೊಡಿಯಾಗೆ ಸೂಲಿದೆವ್ರ ನೆರಳಾಗೆ ।
ರೂಪತಿಗಲ್ಲಿ ನೆರಳಾಗ್ವದ್ನು ರೂಪತಿ

---

೧೮೧. ಜಾಣತನದ ಉತ್ತರ ೧೮೨. ಉರಿಬಿಸಿಲಲ್ಲಿ ಅವಳನ್ನು

ಕಯ್ಯಾನೆತ್ತಿದಳೇ ಕರುಣಾವೇ
ಅಯ್ವರ ಮಡ್ದೀ ಕಯ್ಸೆರೆ ಹೋಗ್ವಂಗೆ
ನೀವಯ್ವರು ನೋಡಿ ಅರತ್ಯೆವಾ[೧೮೩] । ಅಂದೇಳೇ

ಕಯ್ಯಾನೀಡಿದಳೇ ಕರುಣವೇ । ಅಂಬುದ್ನು ಭೀಮಯ್ಯ
ಮೆಟ್ಟಿ ಮಣಿಮಾಡಾ ಮುರದಾನೇ
ಮೆಟ್ಟೀ ಮಣಿಮಾಡಾ ಮುರುವದ್ನು ದರ್ಮರು
ಕೈತಟ್ಟಿ ಬೀಮನಾ ತಡದಾರೆ

ಸತ್ಯ ಕುಲದ್ಹೆಣ್ಣು ಸತ್ಯತನದಲ್ಲಿರುಗು
ಮತ್ತೊಂದು ತಾಸೇ ನೋಡಿಕಂಬೋ । ಅಂದೇಳಿ
ಬೀಮಯ್ನ ಕಯ್ತಟ್ಟೇ ನಿಲಸಾರೆ

ಬೀಮಯ್ನ ಕಯ್ತಟ್ಟೇ ನಿಲಸ್ವದ್ನುಭೀಮಯ್ಯ
ಹಿಂದಕೇ ತಿರಗೇ ಬರೋವಾನೆ.

ತನ್ನಾದುಸುವ್ಯನಾ ಕರದಾನೆ ಗುರ್ರಾಯಾ
ಆಗೊಂದು ಮಾತಾ ನುಡೀದಾನೆ
ಆಗೊಂದು ಮಾತಾ ಏನಂದಿ ನುಡಿದಾನೆ
ಹೋಗೀ ರೂಪತಿಯಾ ಕರತಾರೋ

ಅಟ್ಟಂಬು ಮಾತಾ ಕೇಳಾನೆ ದುಸುವಯ್ಯಾ
ರಾಜಂಗ್ಳ ಮೆಟ್ಟಾ ಇಳೀದಾನೆ ।

ರಾಜಬಿದಿಗಾಗೇ ನೆಡದಾನೆ । ದುಸುವಯ್ಯ
ಚಿನ್ನದ ಕೊಟಿಗಾಗೆ ನೆಡದಾನೆ । ದುಸುವಯ್ಯ

ರನ್ನದ ಕೊಟಿಗಾಗೇ ನೆಡದಾನೆ । ದುಸುವಯ್ಯ
ರೋಪತಿ ಕರ್ಕಂಡೇ ಬರೋವಾನೆ । ದುಸುವಯ್ಯ
ಗುರ್ರಾಯ್ನರಮನೆಗೆ ನೆಡದಾನೆ

ಗುರ್ರಾಯ್ನರಮನೆಗೆ ಬರ್ವದ್ನು ಗುರ್ರಾಯಾ
ಮಾಳೂಗೀ ಒಳಗೆ ನೆಡದಾನೆ ।

ಹೊಸಹಲ್ಗ್ ಹೊಸಪಗ್ಡೀ ತರೋವಾನೋ । ಗುರ್ರಾಯಾ
ಮಾಳಗ್ಗಿಂದೆರಗೇ ಬರೋವಾನೇ । ಗುರ್ರಾಯಾ
ಆಟದ ಚಾವಡಗೇ ನೆಡದಾನೆ.

೧೮೩. ಪ್ರೀತಿಯೇ ? ಚೆನ್ನಾಗಿದ್ದೀರಾ ?

ಆಟದ ಚಾವಡಗೇ ನೆಡವದ್ನು ರೂಪತಿ
ಆಟದ ಚಾವಡಗೇ ನೆಡದಾಳೆ.

ಆಟದ ಚಾವಡಗೇ ನೆಡವದ್ನು ಗುರ್‍ರಾಯಾ
ರೂಪತಿ ಕಯ್ಲ ಹಲಗೀ ಕೊಡೋವಾನೇ
ರೂಪತಿ ಕಯ್ಲ ಹಲಗೀ ಕೊಡ್ವದ್ನು ರೂಪತಿ

ಗುರ್‍ನಾಯ್ನ ಕಳ್ಳಹಲಗೀ ಕೊಟ್ಟಿ ಹುಡೀಮಾಡೇ
ಕಳ್ಳ ಹಲಗೀ ತಂದೆ ಕಳ್ಳ ಪಗಡಿ ತಂದೆ
ಎಲ್ಲವರ್‍ನೂ ಗೆದ್ದೆ ಗಳಗ್ಯಲೇ । ಗುರ್‍ನಾಯ್ನ

ಕಳ್ಳಹಲಗೀ ಕೊಟ್ಟೇ ಹೊಡಿಮಾಡೇ । ಪುಡ್ಮಾಡೇ
ಹಾದೀಗೊಪ್ಪಾಗೇ ತಳೀದಾಳೇ.

ಕಳ್ಳಹಲಗೀ ತಂದೆ ಕಳ್ಳಾ ಪಗಡೀ ತಂದೆ
ಎಲ್ಲವರ್‍ನೂ ಗೆದ್ದೆ ಗಳಗ್ಯಲ್ಲೇ । ಗುರ್‍ನಾಯ್ನ

ಕಳ್ಳಲಗೀ ಕೊಟ್ಟೇ ಪುಡಿಮಾಡೇ । ಹುದ್ಮಾಡೇ
ಬೀದಿಗೊಪ್ಪಾಗೇ ತಳದಾಳೇ । ರೂಪತಿ
ತನ್ನಾ ಕರ್ಣನಾ ದೆನಿದೂರೇ

ತನ್ನಾ ಕರ್ಣನಾ ದೆನಿದೂರ್‍ವದ್ನು ಕರ್ಣನು
ಓಯ್ಗುಂಡೇ ಒಡನೇ ಬರೂವಾನೇ
ಓಯ್ಗುಂಡೇ ಬಡ್ನೇ ಬಂದೀ ಏನಂಬಾನೆ
ಏನು ಕಾರಣಲೆ ಕರದೀಯೇ"

ಕಳ್ಳಾ ಹಲಗೀ ತಂದಾ ಕಳ್ಳಾ ಪಗಡೀ ತಂದಾ
ಎಲ್ಲವರ್‍ನೂ ಗೆದ್ದಾ ಗಳಗ್ಯಲ್ಲೇ । ಗುರ್‍ರಾಯ್ನಾ
ಕಳ್ಳಲಗೀ ಕುಟ್ಟೇ ಹುಡಮಾಡೇ । ಪುಡಮಾಡೇ ।
ಹಾದೀ ಗೊಪ್ಪಾಗೇ ತಳದೀದೆ । ಅಣ್ಣನಕಯ್ಲೆ
ಹೊಸಹಲಗ್ ಹೊಸ್ಪಗಡೀ ಕೊಡೋಬೇಕೆ ।

ಯಾರೀಗೀ ಆಟಾ ಗೆಲುವಕು ಅಂದೇಳಿ
ಹೋಗ್ಬನ್ನಿ ಅಣ್ಣನ ಅರಮನಗೇ

ಅಟ್ಟಂಬಾ ಮಾತಾ ಕೇಳ್ಯಾನೆ ಕರ್ಣನು
ರಾಜಂಗ್ಳ ಮೆಟ್ಲಾ ಇಳೀದಾನೆ । ಕರ್ಣನು
ರಾಜೋ ಬಿದಿಗಾಗೇ ನೆಡದಾನೆ । ಕರ್ಣನು
ನಾರ್ಣದೆವ್ನರ ಮನಗೇ ನೆಡದಾನೆ । ಕರ್ಣನು

ಹೋಗೀ ಬಾಗಲ್ಲೇ ನಿಲೋವಾನೆ । ಕರ್ಣನು
ಹೋಗಿ ರಾಜಂಗ್ಳ ನೆದತ್ತೆ । ಕರ್ಣನು
ಮಾಳೂಗೀ ಒಳಗೇ ನೆಡದಾನೆ – ಕರ್ಣನು

ತೂಗುಮಂಚಲ್ಲೆ ಕುಳತಾನೆ.
ತೂಗುಮಂಚಲ್ಲೆ ಕುಳುವದ್ನು ನಾರ್ಣದೇವಾ

ವಾಲಗ್ಗುಂಡಾನೆ ಹಸೆಯಲ್ಲಿ । ನಾರ್ಣದ್ಯೆವಾ
ಆಗೊಂದು ಮಾತಾ ನುಡೀದಾನೆ

ಯಾವಾಗೂ ಗುರ್ತ್ರಾಯ್ನಾ ಸಂಬ್ಳಕಿರ್ದ್‌ಕರ್ಣನೆ
ಏನ್‌ಬಂದ್ಯೊ ತನ್ನಾ ಅರಮನೆಗೆ

ಕಳ್ಳಾಹಲಗೀ ತಂದಾ ಕಳ್ಳಾಪಗಡೀ ತಂದಾ
ಎಲ್ಲವರ್ರೂ ಗೆದ್ದಾಗಳಗ್ಯಲ್ಲೇ । ಗುರ್ತ್ರಾಯಾ

ಕಳ್ಳಲಗೀ ಕುಟ್ಟೇ ಪುಡಮಾಡೇ । ಹೊಡಿಮಾಡೇ
ಹಾದಿ ಗೊಪ್ಪಾಗೇ ತಳದೀದೆ । ಅಣ್ಣನಕಯ್ಲೆ
ಹೊಸಹಲ್ಗಿ ಹೊಸ ಪಗಡೀ ಕೊಡಬೇಕೆ–

ಯಾರೀಗೀ ಆಟಾ ಗೆಲುವಕ್ಕು – ಅಂದೇಳಿ
ಹೋಗ್ಬನ್ನಿ ಅಣ್ಣನ ಅರಮನೆಗೆ । ಅಂದೇಳಿ
ನಿನ್‌ತಂಗಿ ತನ್ನಾ ಕಳಗದೆ

ಅಟ್ಟಂಬಾ ಮಾತಾ ಕೇಳಾನೆ ನಾರ್ಣದೇವಾ
ಮಾಳೂಗಿ ಒಳಗೆ ನೆಡದಾನೆ । ನಾರ್ಣದ್ಯೇವಾ
ಹೊಸ ಹಲ್ಗ ಹೊಸ್ ಪಗ್ಡೀ ತರೋವಾನೆ । ನಾರ್ಣದೆನಾ
ಕರ್ಣನ ಕಯ್ಲುದ್ರಾ ಕೊಡೋವಾನೇ

ಕಂಚಗಾರ್ನ ಮನೆಯ ಕಂಚೀನ ಕರಡಗಿ
ಎಯ್ದೊರ್ದ್ದಾ ಮುಚ್ಚಳವಾ ತೆಗದೋದಿ । ದ್ ಆಡುವಂಗೆ
ತಂಗಾಳಿ ಸುಳಗಾಳಿ ಸುಳ್ದೀ ಬೀಸೇ
ತಂಗಾಳಿ ಸುಳಗಾಳಿ ಸುಳ್ದ್ ಬೀಸುವಂಗೆ

ತಂಗೀ ಮೆದಲಗೀ ಮರಚೀಗೋ ।
ಎದಿಯಾ ಸೆಯಾಕಂಡೇ[೧೮೪] ಬದಿಯಾ ಬಾಮಾ[೧೮೫] ಕಂಡೇ
ಗುರ್ತ್ರಾಯಾಟಾವಾ ಮರೆವನೋ

೧೮೪. ಚಹರೆ ೧೮೫. ಅಂದಚೆಂದ

ಗುರ್ರಾಯಾಟಾವಾ ಮರೆವದ್ನು ಕರ್ಣದೇವಾ
ನಮತಂಗೀಗಾಟಾ ಗೆಲವಕ್ಕೋ । ಅಂದೇಳೇ
ಹರಸೀದ ಪಗಡಿ ಕೊಡುವಾನೋ

ಹರಸೀದ ಪಗಡಿ ಕೊಡುವದ್ನು ಕರ್ಣನು
ಹೊತ್ತಾನೆ ಹೊನ್ನ ಮುಡಿಯೂ ಮನೆ । ಕರ್ಣನು
ಗುರಾಯ್ನರಮನಗೇ ಬರೂವನೇ । ಕರ್ಣನು

ಬಂದೀ ರಾಜಂಗ್ಳ ನೆಗದತ್ತೇ । ಕರ್ಣನು
ಮಾಳೂಗಿ ಒಳಗೇ ನೆಡದಾನೆ । ಕರ್ಣನು

ರೂಪತಿ ಕಯ್ಲ್ ಹಲಗೀ ಕೊಡೂವಾನೇ
ಆರುಗೆರಿಯಾಬರದೇ ಹನ್ನೆಯ್ಡ ತೆರಿಯಾಕಟ್ಟೇ
ಗುರ್ರಾಯಾಟಾಕೆ ಕುಳತಾನೆ.

ಒಂದಾಟಾ ಆಡೇ ದರಮರ ಗೆದ್ದಾಳೇ
ದರುಮರಿಗೆ ತಡದಾ ಕೊಡೆಕುಂಚೋ । ಸಯ್ವಾಗೇ
ರೂಪತೇ ಗೆದ್ದಾಳೆ ಗಳಗ್ಯಲೇ

ಎಯ್ಡಾಟಾ ಆಡೇ ಭೀಮಯ್ನಾ ಗೆದ್ದಾಳೆ
ಬೀಮಯ್ಯಾ ತಡೆವ ಕೊಡೆಕುಂಚಾ । ಸಯ್ವಾಗೇ
ರೂಪತ್ ಗೆದ್ದಾಳೇ ಗಳಗ್ಯಲ್ಲೇ
ಮೂರಾಟಾ ಆಡೇ ಅರ್ಜಿಣ್ನ ಗೆದ್ದಾಳೆ

ಅರ್ಜಿಣ್ಣಾ ತಡೆವಾ ಕೊಡೆಕುಂಚಾ । ಚಯ್ವಾಗೇ
ರೂಪತ್ ಗೆದ್ದಾಳೇ ಗಳಗ್ಯಲ್ಲೇ
ನಾಕಾಟಾ ಆಡೇ ಸಕಲಯ್ನ ಗೆದ್ದಾಳೇ

ಸಕಲಯ್ಯಾ ತಡೆವಾ ಕೊಡೆ ಕುಂಚಾ । ಸಯ್ವಾಗೇ
ರೂಪತ್ ಗೆದ್ದಾಳೆ ಗಳಗ್ಯಲ್ಲೇ
ಅಯ್ದಾಟಾ ಆಡೇ ಸಾದೇವ್ನ ಗೆದ್ದಾಳೆ

ಸಾದೇವಾ ತಡೆವಾ ಕೊಡೆಕುಂಚಾ । ಸಯ್ವಾಗೇ
ರೂಪತಿ ಗೆದ್ದಳೇ ಗಳಗ್ಯಲ್ಲೇ

ಕಂಚಗಾರರ ಮನಿಯಾ ಕಂಚಿನ ಕರಡಗೀ
ಎಯ್ಡೊರ್ಡ್ ಮುಚ್ಚಳವಾ ತೆಗದೋದೆ ।ದ್। ಆಡುವಂಗೇ
ತಂಗಾಳಿ ಸುಳಿಗಾಳಿ ಸುಳ್ದೇ ಬೀಸೇ ।ಸು।ವಂಗೇ

ರೂಪತಿ ಮೆದಲಗೀ ಮರೂಚದೆ
ಎದಿಯಾಸೆಯಾ ಕಂಡೇ ಬದಿಯಾ ಬಾಮಾಕಂಡೇ

ಗುರ್ರಾಯಾಟಾವಾ ಮರತಾನೆ । ಗುರ್ರಾಯಾ
ಆಟ್ ಮುರ್ದೀ ಗೊಟೆ ಕುಳತಾನೆ
ಆಟ್ ಮುರ್ದೀ ಗೊಟೆ ಕುಳುವದ್ನು । ರೂಪತಿ

ಹೊತ್ತ ಮೆಟ್ಹೊತ್ತ ಅಳೀದಾಳೇ
ಅದು ಏನು ಬಾವ್ನೋರೆ ಆಟ್‌ಮುರ್ದೀ ಗೊಟ್ ಕುಳ್ತಿ
ಹೊತ್ತು ಮಜ್ಜನವೇ ಗಳಿಯಾಲಿಲ್ಲ

ಹೊತ್ತು ಮೀರ್ದ ಮನೆ ಹೆಂಗ್ರು ಕಯ್ಲಾಟ ಸಲ್ಲ
ಆಟಕೂ ತನಗೂ ತರಕವೆ । ಅಂದ್ ಗುರ್ರಾಯಾ
ಆಟ್‌ಮುರ್ದೀ ಗೊಟೆ ಕುಳೀತಾನೇ । ಗುರ್ರಾಯಾ
ತನ್ನಾ ದುಸುವಯ್ನಾದೆನೀದೂರೇ

ಇಂದೂ ಕರದಮಲ್ಲಾ ಬಂದಾನೇ ದುಸುವಯ್ಯಾ
ನಿಂದನೇ ಗುರ್ರಾಯ್ನಾ ಒಡನಲ್ಲೇ ।ಲ್। ನಿಂದೀಕಂಡೀ
ಏನು ಕಾರಣಲೆ ಕರದೀಯೋ...

ಕರದು ಕಾರ್ಯವಿಲ್ಲ ಕಿರಿದುಂ ಬೆಸರ ಸಯ್ಯೆ
ಪಾಂಡೋರ್ ಸೆರ್ಮನೆಯಾ ಇಳ್ಗೀಬಾರೋ । ಅಂಬುದ್ನು ದುಸ್ವಯ್ಯಾ
ಪಾಂಡೋರಿದ್ದಲ್ಲೆ ನೆಡದಾನೆ । ದುಸುವಯ್ಯಾ
ಪಾಂಡೋರಾ ಸೆರ್ಮನಿಯಾ ಇಳೋಗಾನೆ

ಪಾಂಡೋರ್ ಸೆರ್ಮನಿಯಾ ಇಳುಗ್ವದ್ನು ಪಾಂಡೋರು
ಮೊವದ ಸರ್ನ ತಟ್ಟೇ ಇಳೀದಾರೆ । ಪಾಂಡೋರು
ತಮ್ಮಂಬು ಬಿಲ್ಲೆಲ್ಲ ತಡದಾರೆ ।

ರಾಜಂಗಳ್ಕೆ ಬಂದೇ ನಿಳೋವಾರೇ
ರಾಜಂಗಳ್ಕೆ ನಿಲುವದ್ನು ಗುರ್ರಾಯಾ
ಮಾಳೂಗೀ ಒಳಗೇ ನೆಡದಾನೇ

ಆಯೊಳ್ಳ ಹಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡಿ
ಮಾಳಗ್ಗಿಂದೆರಗೇ ಬರೋವಾನೇ । ಗುರ್ರಾಯಾ
ದರ್ಮರೀಗೊಂದೀಳ್ಯ ಕೊಡೋವಾನೇ

ಒಂದೆ ತಾಯಿಗೆ ನೀವಯ್ವರು ಮಗದೀರೆ
ನೀವಯ್ವರೊಂದೀಳ್ಯ ಮೆಲಲಂದೇ ಗುರ್ರಾಯಾ
ದರ್ಮರ ಕಯ್ಲೀಳ್ಯ ಕೊಡೋವಾನೇ

ದರ್ಮರ ಕಯ್ಲೀಳ್ಯ ಕೊಡುವದ್ನು ಧರ್ಮರು
ತಾವಯ್ವರೊಂದೀಳ್ಯ ಮೆಲೋವಾರೇ
ತಾವಯ್ವರೊಂದೀಳ್ಯ ಕೊಡುವದ್ನು ಗುರ್ರಾಯಾ
ರೂಪತಿಗೊಂದೀಳ್ಯಾ ಕೊಡೋವಾನೇ

ಗುರ್ರಾಯ ಕೊಟ್ಟೀಳ್ಯ ಮುಟ್ಟಿಲೇ ಮುರದಿಟ್ಟಾಳೆ
ಕರ್ಣನ ಕಯ್ನೀಳ್ಯಾ ಮೆಲೋವಾಳೇ
ಕರ್ಣನ ಕಯ್ನೀಳ್ಯಾ ಮೆಲುವದ್ನು ಗುರ್ರಾಯಾ
ಆಗೊಂದು ಮಾತಾ ನುಡೀದಾನೆ

"ಅಂಬೀರ[೧೮೬] ಕರಣ ಕಡುಚಲುವ ಕೊಟ್ಟೀಳ್ಯ
ಇಂಬಾಗೇ ನಾರೀ ಮೆಲೋವಾಳೇ।ಳು।ಅಂದೇಳೇ
ತುಂಬದ ಸಬಿಯಲ್ಲೆ ನುಡೀದಾನೆ

ತುಂಬ್ದ ಸಭಿಯಲ್ಲೆ ನುಡುವದ್ನು ಕರಣನು
ಆಗೊಂದು ಮಾತಾ ನುಡೀದಾನೆ

"ಅಂಬೀರ್ ಅಂಬೀರ್ ಅಂದಿ ಕುಂದೊಂದಾ ನುಡಿಬೇಡಾ
ಕುಂದೂವೆ[೧೮೭] ನಿನ್ನಾ ಮೊದಲೆಲ್ಲಾ । ಅಂದೇ
ಕರ್ಣ ಕೋಪದಲೇ ಇರುವಾನೇ

ಅರ್ಜೇನರು ಇನ್ನೂರು ಕೋಟಿ ಬಿಲ್ನರು ಮುನ್ನೂರುಕೋಟಿ
ಇಂದ್ರಾಕ್ಷರ ಕೋಟೀ ಗಡಿಯಿಲ್ಲ । ಸಯ್ಯ[೧೮೮]
ಕರ್ಣನ ಬೆನ್ನತ್ತೇ ನೆಡದಾರೆ । ಗುರ್ರಾಯ್ನ
ಒಂದೇ ಕೊಡಲ್ಲಿ[೧೮೯] ಉಳದದೆ

ಒಂದೇ ಕೊಡಲ್ಲಿ ಉಳುವದ್ನು । ಒಳಗಿದ್ದಾ
ಬೊನ್ನತಿ । ಹೆರೂಗೇ ಬರೂವಾಳೇ

ಕರ್ಣಗೇನಂದಾರೋ ಕರ್ಣಗೇನ್ ಬಯ್ದಾರೋ
ಕರ್ಣಗೇನ್ ಕುಂದಾ ನುಡದೀರೋ । ನಮ್ಮನಿಯಾ

ರಾಜಂಗಳೆಲ್ಲಾ ಸುಬನಿಲ್ಲ । ಗುರ್ರಾಯ್ನಾ
ಒಂದೇ ಕೊಡಲ್ಲಿ ಉಳದದೆ ।

ಕಂದಾ ಬಲಿದನಂದೇ ತಿಂದೆ ನಿನ್ನೆಂಜಲವಾ
ಹಿಂಡೂತಿಗಿಂತೂ ಕಿರಿಯಂದ

೧೮೬. ಅಂಭಿಗರ ೧೮೭. ಕೊಲ್ಲುವೆ ೧೮೮. ಸರಿಯೆ ? ೧೮೯. ಕೊಡೆ – ಛತ್ರ

ಅರಸು ಬಲಿದವನೆಂದು ಬೆರಸಿದೆ ನಿನ್ನೆಂಜಲವಾ
ಅರಸೂತಿಗಿಂದು ಕಿರಿಯವ । ಕರ್ಣನ
ನಾಮುನಿದರೆ ನಿನಗೆ ಮುನಸೇನು ? । ಅಂದೇಳಿ
ಹೋಗ್ ತಮ್ ಕರ್ಣನಾ ತೆಳುಗಾರೆ[೧೯೦]

ಹೋಗ್ ತಮ್ ಕರ್ಣನಾ ತೆಳುಗ್ವದ್ನು ಕರ್ಣನು
ಬಂದೀ ರಾಜಂಗ್ಳಲ್ಲೇ ನಿಲೂವಾನೇ
ಬಂದೀ ರಾಜಂಗ್ಳಲ್ಲೇ ನಿಲುವದ್ನು ಗುರ್‍ರಾಯ್ನಮನೆಯಾ
ರಾಜಂಗಳೆಲ್ಲ ಸುಬನಾದೊ । ದರುಮರು
ಆಗೊಂದು ಮಾತಾ ನುಡೀದಾರೆ

ಎಣ್ಣೀದ[೧೯೧] ಮನಸೂ ಎಣ್ಣೀದಂಗಿದ್ದರೆ
ಹನ್ನೆರಡು ವರ್ಸ ವನವೇಸ । ತಿರ್‌ಗ್ತೇನಂದೇ
ಇಣ್ಣದರೇ ತಮ್ಮ ಮನಸೀಲೇ
ಎಣ್ಣೀದ ಮನಸು ಎಣ್ಣಿದಂಗಿದ್ದರೆ

ಹನ್ನೆರಡು ವರ್ಸೆ । ವನವಾಸ । ತಿರ್‌ಗೇನಂದೇ
ಎಣ್ಣಿದರೆ ತಮ್ಮ ಮನಸೀಲೇ । ಅವರಯ್ವರು
ತಮ್ಮಂಬು ಬಿಲ್ಲೆಲ್ಲ ತಡದಾರೆ । ದರ್ಮರು

ಸೆಣ್ಣಗಂಬಳಿಯೂ ಹೊಗಲೀಗೆ । ಹಾಯೀಕಂಡೇ
ರಾಜಂಗ್ಳ ಮೆಟ್ಟಾ ಇಳೀದಾರೆ । ದರುಮರು.
ರಾಜಬಿದಿಗಾಗೇ ನೆಡದಾರೆ । ದರುಮರು

ಹೋಗಾಲದ ಕಟ್ಟೆ ನೆಗದತ್ತೆ । ದರುಮರು
ಸೆಣ್ಣಗಂಬುಳಿಯ ಮಡದಾಸೇ । ದರುಮರು
ಚಕ್ರಪಡಿ ಹೊಯ್ದೇ ಕುಳತಾರೆ । ದರುಮರು
ತಮ್ಮಾ ಕಯ್ಚಂಚೇ ಬಿಡಸಾರೆ । ದರುಮರು

ಬಾಯ್ತುಂಬ ಎಳಿಎಲಿಯಾ ಮೆಲೋವಾರೇ
ಎಲಿಯೊಂದ್ ತಿಂದಾರೆ ರಜವಲ್ಲೆ ಉಗಳಾರೆ
ತಮ್ಮಾ ಸಾದೆವ್ನಾ ದೆನಿದೂರೇ

ತಮ್ಮಾ ಸಾದೆವ್ನಾ ದೆನಿದೂರ್‍ವದ್ನು ಸಾದೇವ
ಓಯ್ತುಂಡೇ ಒಡನೇ ಬರುವಾನೇ
ಓಯ್ಗುಂಡೇ ಒಡ್ನೇ ಬಂದೀ ಏನಂಬಾನೇ
ಏನು ಕಾರಣಲೆ ಕರದೀಯೋ

೧೯೦. ತಿಳಿಹೇಳಿದರು   ೧೯೧. ಯೋಚಿಸಿದ

ಕರದಂ ಕಾರ್ಯವಿಲ್ಲ ಕಿರಿದುಂಬೆಸರಸಯ್ಯ
ಆಲದಾ ಮರನಾ ನೆಗದತ್ತೋ । ಸಾದೆವಾ
ತಮ್ಮಂಬು ಬಿಲ್ಲೆಲ್ಲ ಮರನ್ಹೇರೋ

ಅಟ್ಟಂಬಾ, ಮತಾ ಕೇಳಾನೆ ಸಾದೆವಾ
ಆಲದಾ ಮರನಾ ನೆಗದತ್ತೇ । ಪಾದೆವ್ಯಾ
ತಮ್ಮಂಬು ಬಿಲ್ಲೆಲ್ಲ ಮರನ್ಹೇರೇ । ಸಾದೆವ ।
ಆಲದಾಮರನಾ ಇಳೀದಾನೆ

ಆಲದಾ ಮರನಾ ಇಳವೆದ್ನು ದರ್ಮರು
ಲಾಗೊಂದು ಮಾತಾ ನುಡೀದಾರೆ
ನಮ್ಮಂಬು ಬಿಲ್ಲೆಲ್ಲ ನರಮನಸರು ಮುಟ್ಬಾರಾ
ನರಮನಸರೀಗದು ಸಿಕ್ಬಾರಾ

ನರಸನಸರದ್ರಾ ಮುಟ್ಟದ್ದುಂಟಾದಾರೆ
ಸರ್ಪನೆ ಆಗಿ ಸಮೆಯಲಿ । ಅಂದೇಳೇ
ನರಮಸ್ರರಿಗ್ ಸಾಪಾ ಇಡೋವಾರೇ । ದರುಮರು
ಸೆಣ್ಣಗಂಬಳಿಯಾ ಕುಡೋಗೆದ್ದೇ ।

ಸೆಣ್ಣಗಂಬಳಿಯಾ ಹೊಗಲೀಗೇ । ಹಾಯೀಕಂಡೇ
ಆಲ್ದ್ ಕಟ್ಟೀ ಕೆಳಗೇ ಇಳೀದಾರೆ । ದರ್ಮರು
ರಾಜ ಬಿದಿಗಾರೇ ನೆಡದಾರೆ

ಆಗುಡಿ ಹತ್ತಾರೆ ಈ ಗುಡಿ ಇಳ್ದಾರೆ
ಮಾಗುಡಿ ಮಕ್ಲಾಗೇ ಇಳದಾರೆ.

ಎಣ್ಣೀದ ಮನಸು ಎಣ್ಣೀದಂಗೀದ್ದರೆ
ಹನ್ನೆರಡು ವರ್ಸೇ ವನವೇಸ್[೯೨] । ತಿರಗ್ತೀನಂದ
ಎಣ್ಣೀದರೆ ತಮ್ಮಾ ಮನಸೀಲಿ । ಅವ್ರಯ್ವರು

ಹನ್ದರ್ಡು ವರ್ಸಾರುಣ್ಯ ತಿರುಗಾರೆ । ದರುಮರು
ಹಿಂದಾಕೇ ತಿರುಗೇ ಬರುವಾರು । ದರುಮರು
ಒಂದಾಲದ ಕಟ್ಟಿ ನೆಗದತ್ತೇ ।”
ಒಂದಾಲದ ಕಟ್ಟಿ ನೆಗದತ್ತಿದರುಮರು

ಚೆಣ್ಣ ಗಂಬಳಿಯಾ ಮಡದ್ಹಾಸೇ । ದರ್ಮರು
ಚಕ್ರ ಪಡಿ ಹೊಯ್ದೀ ಕುಳಿತಾರೆ । ದರ್ಮರು
ಆಗೊಂದು ಮಾತಾ ನುಡಿದಾರೆ

೯೨. ವನವಾಸ

ತನ್ನ ಅಮ್ಮಗೆ ಒಂದೆಣ್ಣು ಇದ್ದರೆ
ಹೋಗೊಂದು ತುತ್ತಾ ಮೆಲೋತೀದೋ । ನನ್ನಮ್ಮಗೇ
ಹೆಣ್ಣು ಸಂತನವೇ ಮೊದಲ್ದೆಚ್ಚೇ

ಅಯ್ವರ ನೆಡಗೇ ಒಂದ್ಹೆಣ್ಣು ಇದ್ದಾರೆ
ಹೋಗೊಂದು ತುತ್ತಾ ಮೆಲೋತೀದೋ । ನನ್ನಮ್ಮಗೇ
ಹೆಣ್ಣು ಸಂತನವೇ ಮೊದಲ್ದೆಚ್ಚೋ ।ಚ್। ಅಂದ್ ದರುಮರು
ಕಡಗಣ್ಣಲ್ ಕಣ್ಣೀರ್ ಸೆಡದಾರೇ[೯೩]

ಕಡಗಣ್ಣಲ್ ಹನಿಯಾ ಸೆಡ್ವನ್ನು ರೂಪತೀ
ತನ್ನಾ ಕರ್ಣನಾ ದೆನಿದೂರೇ
ತನ್ನಾ ಕರ್ಣನಾ ದೆನಿದೂರ್ವದ್ನು ಕರ್ಣನು
ಓಯ್ಗುಂಡೇ ಒಡನೇ ಬರೂವಾನೋ

ಓಯ್ದುಂಡೇ ಒಡ್ನೇ ಬಂದೀ ಏನಂಬಾನೇ
ಏನು ಕಾರಣಲೆ ಕರದೀಯೋ

ಕರದು ಕಾರ್ಯವಿಲ್ಲ ಕಿರಿದುಂಬೆರಸರ ಸಯ್ಯೆ
ಹೋಗ್‌ಬನ್ನಿ ಅಣ್ಣನಾ ಅರಮನಗೆ

"ನನ್ನಾ ಅಮ್ಮಗೆ ಒಂದೆಣ್ಣು ಇದ್ದೀರೆ
ಹೋಗೊಂದು ತುತ್ತಾ ಮೆಲತೀದೋ । ನನ್ನಮ್ಮಗೆ

ಹೆಣ್ಣು ಸಂತನವೇ ಮೊದಲ್ದೆಚ್ಚೊ । ಅಂದೇಳೇ
ಕಡಗಣ್ಣಲ್ ಹನಿಯಾ ಸೆಡೀದಾರೆ

ಆಯ್ವರ ನೆಡಗೆ ಒಂದ್ಹೆಣ್ಣು ಇದ್ದೀರೆ
ಹೋಗೊಂದು ತುತ್ತಾ ಮೆಲತೀದೋ । ನನ್ನಮ್ಮನೆ
ಹೆಣ್ಣು ಸಂತನವೇ ಮೊದಲ್ದೆಚ್ಚೋ । ಅಂದ್ ದರುಮರು

ಸಡಗಣ್ಣಲ್ ಹನಿಯಾ ಸೆಡೀದಾರೆ । ಬಾವಾನೋರೆ
ಹೋಗ್ಬನ್ನಿ ಅಣ್ಣನ ಅರಮನೆಗೆ । ಅಣ್ಣನ ಕಯ್ಲೆ
ಬೂಮ್ ತೂಕ್ದ್ ಹಲ್ಸ ಹಣ್ಣಾ ಕೊಡೋಬೇಕೆ

ಅಟ್ಟಂಬಾ ಮಾತಾ ಕೇಳಾನೆ ಕರ್ಣನು
ಆಲ್ದ ಕಟ್ಟೀ ಕೆಳಗೇ ಇಳದಾನೇ । ಕರ್ಣನು

ರಾಜಬಿದಿಗಾಗೇ ನೆಡದಾನೇ । ಕರ್ಣನು
ನಾರ್ಣದೆವ್ನರಮನಗೇ ನೆಡದಾನೆ । ಕರ್ಣನು

೯೩. ಉದುರಿಸಿದರು

ಹೋಗೀ ಬಾಗಲ್ಲೇ ನಿಲೋವಾನೇ । ಕರ್ಣನು
ಮಾಳೂಗೀ ಒಳಗೇ ನಡದಾನೇ

ಮಾಳೂಗೀ ಒಳಗೇ ನೆಡುವದ್ನು ನಾರ್ಣದೇವಾ
ವಾಲಗ್ಗುಂಡಾನೆ ಹಸೆಯಲ್ಲಿ । ನಾರ್ಣದೆವಾ
ಆಗೊಂದು ಮಾತಾ ನುಡೀದಾನೆ

"ಗುರ್ರಾಯ್ನ ಅರ್ಮಲ್ಲಿ ಸಂಬಳಕಿದ್ ಕರ್ಣನೆ
ಏನ್ಬಂದ್ಯೋ ತನ್ನಾ ಅರಮನಗೇ"

ತನ್ನಾ ಅಮ್ಮಗೆ ಒಂದ್ಹೆಣ್ಣು ಇದ್ದಿರೆ
ಹೋಗೊಂದು ತುತ್ತಾ ಮೆಲತೀದೊ । ನನ್ನಮ್ಮಗೆ
ಹೆಂಣು ಸಂತನವೇ ಮೊದಲ್ಹೇಚ್ಚೇ ಅಂದ್‌ದರ್ಮರು
ಕಡಗಣ್ಣಲ್ ಹನಿಯಾ ಸೆಡೀದಾರೆ

ಅಯ್ವರ ನೆಡಗೇ ಒಂದ್ಹೆಣ್ಣು ಇದ್ದೀರೆ
ಹೋಗೋಂದು ತುತ್ತಾ ಮೆಲತೀದೊ । ನನ್ನಮ್ಮಗೆ
ಹೆಣ್ಣು ಸಂತನವೇ ಮೊದಲೆಚ್ಚೇ । ಅಂದಾದರ್ಮರು

ಕಡಗಣ್ಣಲ್ ಹನಿಯಾ ಸೆಡೀದಾರೆ । ಅಂದ್‌ದೇವರೇ
ನಿಮ್‌ತಂಗೀ ತನ್ನಾ ಕಳಗದೆ । ಅಣ್ಣನಕಯ್ಲೆ
ಬೂಮ್‌ತೂಕ್‌ದ್ಹಲ್ಸ್ನ ಹಣ್ಣಾ ಕೊಡ್ಲೋಬೇಕೆ"

ಅಟ್ಟಂಬಾ ಮಾತಾ ಕೇಳಾನೆ ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ಬೂಮ್‌ತೂಕ್ದಾ ಹಲ್ಸ್ನ ಹಣ್ಣಾ ಕೊಡ್ಲೋಬೇಕೆ"

ಅಟ್ಟಂಬಾ ಮಾತಾ ಕೇಳಾನೆ ನಾರ್ಣದೆವಾ
ಮಾಳೂಗೀ ಒಳಗೆ ನೆಡದಾನೆ । ನಾರ್ಣದೆವಾ
ಬೂಮ್‌ತೂಕ್ದಾ ಹಲ್ಸ್ನ ಹಣ್ಣಾ ತರೋವಾನೆ । ನಾರ್ಣದೆವಾ
ಕರ್ಣನ ಕಯ್ಲದ್ರಾ ಕೊಡೋವಾನೆ

ಕರ್ಣನ ಕಯ್ಲದರಾ ಕೊಡುವದ್ನು ಕರ್ಣನು
ಎಯ್ದೂ ಕಯ್ಯೊಡ್ಡೇ ತಡದಾನೆ । ಕರ್ಣನು

ಹೊತ್ತಾನೆ ಹೊನ್ನಾ ಮುಡಿಮೆನ । ಕರ್ಣನು
ರಾಜಂಗ್ಳ ಮೆಟ್ಟಾ ಇಳೀದಾನೆ । ಕರ್ಣನು
ರಾಜೋಬಿದಿಗಾಗೇ ಬರೋವಾನೆ । ಕರ್ಣನು
ಬಂದ್‌ಆಲ್ದ ಕಟ್ಟಿ ನೆಗದತ್ತೇ । ಕರ್ಣನು
ರೂಪತಿ ಕಯ್ಲ್ ಹಣ್ಣಾ ಕೊಡೋವಾನೇ

ರೂಪತಿ ಕಯ್ಲ್ ಹಣ್ಣಾ ಕೊಡುವದ್ನು ರೂಪತಿ
ದರುಮರಾ ಕಯ್ಲಣ್ಣಾ ಕೊಡೋವಾಳೇ
ದರುಮರಾ ಕಯ್ಲಣ್ಣಾ ಕೊಡುವದ್ನು ದರುಮರು
ಸೆಳ್ಳುಗರೀಲಣ್ಣಾ ಸಿಗೋಳೆತ್ತೇ । ದರುಮರು
ಸಾದೆವಾನೊಳಲು ಹೊಳುವಾದಿಲ್ಲಾ[೧೯೪]

ತಮ್ಮಾ ಸಾದೆವಾ ಇನ್ನೆತ್ತಾ ನೆಡ್ದಾರ್ನೆ
ಸಾದೆವಾನೊಳಲು ಹೊಳುವಾದಿಲ್ಲ । ಅಂಬುದ್ನು ಭೀಮಯ್ಯ

ಆಲ್ದ್ ಕಟ್ಟೀ ಕೆಳಗೆ ಇಳದಾನೆ । ಭೀಮಯ್ಯ
ರಾಜ ಬೀದಿಗಾಗೇ ನೆಡದಾನೆ । ಭೀಮಯ್ಯ
ಹೋಗಿ ತರಕರನ[೧೯೫] ಜಿಗಟೀ[೧೯೬] ಮಗೂಚಾನೆ

ಹೋಗಿ ತರಕನ ಜಿಗಟೀ ಮಗಚ್ವದ್ನು
ಸಾದೇವಾ ಎದ್ದೇ ಬರೂವಾನೇ

ಭೀಮಯ್ಯಾ ಮುಂದಾಗೇ ಸಾದೇವಾ ಹಿಂದಾಗೇ
ಬಂದಾಲದ ಕಟ್ಟೀ ನೆಗದಾರೆ । ಸಾದೇವಾ
ದರುಮರೊಡನೋಗಿ ಕುಳೋವಾನೇ

ದರುಮರೊಡನೋಗಿ ಕುಳುವದ್ನು ದರುಮರು
ಬೀಮಗರ್ದಣ್ಣಾ ಕೊಡೊವಾರೇ । ಇವರಿನ್ನು
ಅಯ್ವರರ್ದಣ್ಣಾ ಮೆಲೋವಾರೇ

ಅಯ್ವರರ್ದಣ್ಣಾ ಮೆಲುವದ್ನು ಭೀಮಯ್ಯ
ಆಗೊಂದು ಮಾತಾ ನುಡೀದಾನೆ
ಚೆರೆಂತು[೧೯೭] ಬಿಡುವರೋ ಗುಂಚೆಂತು ಬಿಡುವರೋ
ಎಲ್ಲನೂ ನಾನೂ ಸಲಮೆಂದೆ । ಅಣ್ಣಾಕೇಳೋ

ಅಳ್ಳೀಕಣ್ಣಿಗೂ ನೆರಿಯಾಲಿಲ್ಲ
ಅಟ್ಟಂಬಾ ಮಾತಾ ಕೇಳಾರೆ ದರುಮರು
ತಮ್ಮಾ ಸಾದೇವ್ನಾ ದೆನಿದೂರೇ

ತಮ್ಮಾ ಸಾದೇವ್ನಾ ದೆನಿದೂರ್ವದ್ನು ಸಾದೇವಾ
ಓಯ್ಗುಂಡೇ ಒಡನೇ ಬರುವಾನೇ
ಓಯ್ಗುಂಡೇ ಒಡ್ನೇ ಬಂದೀ ಏನಂಬಾನೇ
ಏನು ಕಾರಣಲೆ ಕರದೀಯೋ

---

೧೯೪. ಸಹದೇವನು ಕಾಣುವುದಿಲ್ಲ ೧೯೫. ದರಕು ೧೯೬. ರಾಶಿ ೧೯೭. ಚಾರಿ, ತೊಳೆತೆದ ಮೇಲೆ ಉಳಿದದ್ದು

ಕರದಂ ಕಾರ್‍ಯ್ಯವಿಲ್ಲ ಕಿರಿದುಂಬೆಸರ ಸಯ್ಯೆ
ಆಲದಾಮರನಾ ನೆಗದತ್ತೋ । ಸಾದೇವಾ

ಸುತ್ತನ ತೋಟವಾಮೆಲಕೇ ನೋಡೋ
ಅಟ್ಟಂಬಾ ಮಾತಾ ಕೇಳಾನೇ ಸಾದೇವಾ
ಆಲದಾ ಮರನಾ ನೆಗದತ್ತೇ । ಸಾದೇವಾ
ಸುತ್ತನ ತೊಟವಾ ಮ್ಯೇಲಕೇ ನೋಡೇ

ಆತೋಟ ಅದು ಅಲ್ಲ ಈತೋಟ ಇದುವಲ್ಲ
ಇದು ಈಗ ಗುರ್‍ರಾಯ್ನಾ ಎಳದೋಟಾ । ದಲ್ಲಿನ್ನು
ಚೂಜಿದಾರ್‍ನಂತಾ[೯೮] ಹೊಗೆಯೆದ್ದೇ । ಅಂಬುದ್ನು
ಆಲದಾಮರನಾ ಇಳೀದಾನೇ । ಸಾದೇವಾ
ತಮ್ಮಣ್ಣ ನೊಡನೋಗೇ ನಿಲೋವಾನೇ

“ಎಲ್ಲವರು ತಿಂಬರೋ ಕೆನೂಳೀ ಕೆಸುಹುಳಿಯ
ನಾವ್‌ಹೋಪೊ ನಮ್ಮಾ ಅರಮನೆಗೆ । ಅಂದ್ ದರುಮರು
ಸೆಣ್ಣಾ ಕಯ್ಚುಂಚೀ ಬಿಡಸಾರೆ । ದರುಮರು
ಬಾಯ್ತುಂಬ ಬೆಳಿಎಲಿಯಾ ಮೆಲೋವಾರೇ । ದರುಮರು
ಎಲಿಯನೇ ತಂಬುಳವಾ ಉಗದಾರೆ

ಸೆಣ್ಣ ಗಂಬಳಿಯಾ ಕೊಡೋಗೆದ್ದೇ ದರುಮರು
ಸೆಣ್ಣ ಗಂಬುಳಿಯಾ ಹೊಗಲೀಗೆ[೯೯] । ಹಾಯೀ ಕಂಡೇ
ತಮ್ಮಂಬು ಬಿಲ್ಲೆಲ್ಲಾ ತಡದಾರೆ । ದರುಮರು
ರಾಜಂಗ್ಳ ಮೆಟ್ಲಾ ಇಳದಾರೆ । ದರುಮರು

ರಾಜೋಬೀದಿಗಾಗೇ ನೆಡದಾರೆ । ಅವರ್‌ನಾಲ್ವರ್
ಗುರ್‍ರಾಯ್ನರಮನಗೇ ನೆಡದಾರೆ

ಗುರ್‍ರಾಯ್ನರಮನಗೇ ನೆಡವದ್ನು ಗುರ್‍ರಾಯಾ
ತಡದಾನೇ ಚಂಬಗಲೇ ಉದಕಾವೇ
ಗುರ್‍ರಾಯ್ ಕೊಟ್ಟುದಕಾ ತಟ್ಟಾನೆ ತಡ್ಡಾನೆ

ಕಾಲೋ ಸಿರಿಮೊಕವಾ ತೊಳದಾರೆ । ಅವರ್ ನಾಲ್ವರ್
ಮಾಳೂಗಿ ಒಳಗೆ ನೆಡದಾರೆ

ಗುರ್‍ರಾಯ್ನರಮನಗೇ ನೆಡವದ್ನು ಗುರ್‍ರಾಯಾ
ತಡದಾನೇ ಚಂಬಗಲೇ ಉದಕಾವೇ
ಗುರ್‍ರಾಯ್ ಕೊಟ್ಟುದಕಾ ತಟ್ಟಾನೆ ತಡ್ಡಾನೆ

---

೯೮. ಸೂಚಿದಾರದಂಥ   ೯೯. ಹೆಗಲಿಗೆ * ಇಲ್ಲಿ ಗುರುರಾಯನೆಂದರೆ ವಿರಾಟರಾಜ, * ಬೊನ್ವತೀ ವಿರಾಟರಾಯನ ಹೆಂಡತಿ

ಕಾಲೋ ಸಿರಿಮೊಕವಾ ತೊಳದಾರೆ । ಅವರ್‌ನಾಲ್ವರು
ಗುರ್‍ರಾಯ್ನರಮನಗೇ ನೆಡದಾರೆ

ಗುರ್‍ರಾಯ್ನರಮನಗೇ ನೆಡವದ್ನು ಗುರ್‍ರಾಯಾ
ತಡದಾನೇ ಚಂಬಗಲೇ ಉದಕಾವೇ
ಗುರ್‍ರಾಯ್ ಕೊಟ್ಟುದಕಾ ತಟ್ಟಾನೆ ತಡ್ಡಾನೆ

ಕಾಲೋ ಸಿರಿಮೊಕವಾ ತೊಳದಾರೆ । ಅವರ್ ನಾಲ್ವರು
ಮಾಳೂಗಿ ಒಳಗೆ ನೆಡದಾರೆ । ಬೊನ್ವತೀ
ಹಸವೀಗ್ ಹಾಲ್ಗಂಜೀ ಬಡಸಾಳೆ.

ಹಸವೀಗ್ ಹಾಲ್ಗಂಜೀ ಬಡಸ್ವದ್ನು ದರುಮರು
ಉಂಡೆದ್ದರೊಂದು ಗಳಗ್ಯಲ್ಲೇ
ಉಂಡಾರೂಟವಾ ತೊಳ್ದಾರೆಂಜಲಮೊಕವಾ
ತೂಗು ಮಮಚದಲೇ ಕುಳೋವಾರೇ

ತೂಗುಮಂಚದಲೇ ಕುಳುವದ್ನು ರೂಪತಿ
ಆಲ್ದ ಕಟ್ಟೀಕೆಳಗೆ ಇಳದಾಳೆ । ರೂಪತಿ

ಹಾರ್ವರ ಕೇರಿಗಾಗೇ ನೆಡದಾಳೇ
ಹಾರ್ವರ ಕೇರಿಗಾಗೇ ನೆಡ್ವದ್ನು ಹಾರವ
ರೂಪತೀ ಕಂಡೇ ಮರೂಳಾಗೇ । ಹಾರವ
ಹಣವಳದೇ ಹೊಳಿಗೇ ಹೊಯೀದಾನೇ

"ಉಟ್ಡ್ ಕುಳ್ಳು ಚಂಪೆ ಕಟ್ಟಿದ್ದು ಸೂಡುಮಂಡೆ
ಮನಸೀರಂಬುದನು[೨೦೦] ಅರಿಯೇನೋ । ಹಾರುವ
ಹಣವಳದೇ ಹೊಳಿಗೇ ಹೊಯೀಕಂಡ್ಯೋ । ಅಂದೇಳೇ
ಕುಂಬಾರ ಕೇರಿಗಾಗೆ ನೆಡದಾಳೆ

ಕುಂಬಾರಾ ಕೇರಿಗಾಗೇ ನೆಡ್ವದ್ನು ಕುಂಬಾರಾ
ಮಗುವಂದೇ ಮಣಿಯಾ ನೆಗದಾನೇ । ಕುಂಬಾರಾ
ಹೋಳ್ ಮಣಿಯಾಗ್ ಕಯ್ಯ್ಯಾ ಹರ್ದಿಕಂಡಾ

"ಉಟ್ಡ್ ಕುಳ್ಳು ಚಂಪೆ ಕಟ್ದಾ ಸೂಡುಮಂಡೆ
ಮನಸೀರಂಬುದನೂ ಅರೀಯೇನೋ । ಕುಂಬಾರಾ
ಮಗುಅಂದೇ ಮಣಿಯಾ ನೆಗದೀಯಾ । ಅಂದೇಳೇ
ಜೊನಗ್ನಾ[೨೦೧] ಕೇರಿಗಾಗೇ ನೆಡದಾಳೇ

---

೨೦೦. ಮನಷ್ಯರೆಂಬುದನ್ನು ೨೦೧. ಸಿಂಪಿ

ಜೊನಗ್ನಾ ಕೇರಿಗಾಗೆ ನೆಡ್ವದ್ನು ಜೊನಿಗ
ಚೂಜಿಯಲ್[೨೦೩] ತನಕಯ್ಯಾ ಸುರೋಕಂಡಾ
ಉಟ್ದ್ ಕುಳ್ಳೂ ಚಂಪೆ, ಕಟ್ಟಿದ್ದು ಸೂಡುಮಂಡೆ
ಮನಸೀರಂಬುದನು ಅರೀಯೇನೋ । ಜೊನಿಗ
ಜೂಜಿಯಲ್ ನಿನ್‌ಕಯ್ಯಾ ಸುರೋಕಂಡ್ಯೋ । ಅಂದೇಳೇ
ಸೆಟ್ಯೋರ್ ಕೇರಿಗಾಗೇ ನೆಡದಾಳೆ

ಸೆಟ್ಟೀಯೋರ್ ಕೇರಿಗಾಗೇ ನೆಡ್ವದ್ನು ಸೆಟ್ಟಿಯೋರು
ಅಕ್ಕೀಅಳ್ದೆ ಹೊಳಿಗೇ ಹೊಯೀದಾರೇ
ಉಟ್ದ್ ಕುಳ್ಳೂ ಚಂಪೆ ಕಟ್ದ್ ಸೂಡು ಮಂಡೆ
ಅಕ್ಕೀ ಅಳ್ದೆ ಹೊಳಿಗೇ ಹೊಯೀಕಂಡ್ಯೋ । ಅಂದೇಳೆ
ಗುರ್‍ನಾಯ್ಕ್ನರಮನಗೇ ನೆಡದಾಳೇ । ರೂಪತೀ

ಹೋಗೀ ಬಾಗಲ್ಲೇ ನಿಲೋವಾಳೇ
ಹೋಗೀ ಬಾಗಲ್ಲೇ ನಿಲ್ವದ್ನು ಬೊನ್ವತಿ
ತಡದಳೆ ಚಂಬಗಲೆ ಉದಕವೆ

ಬೊನ್ವತಿ ಕೊಟ್ಟುದಕಾ ತಟ್ಟಾನೆ ತಡದಾಳೆ
ಕಾಲೋ ಸಿರಿಮೊಕವಾ ತೊಳದಾಳೆ । ರೂಪತಿ
ಮಾಳೂಗೀ ಒಳಗೆ ನೆಡದಾಳೆ

ಮಾಳೂಗೀ ಒಳಗೆ ನೆಡ್ವದ್ನು ಬೊನ್ವತೀ
ಹಸವೀಗ್ ಹಾಲ್ಗಂಜೀ ಬಡಸಾಳೆ
ಹಸವೀಗ್ ಹಾಲ್ಗಂಜೀ ಬಡಸ್ವದ್ನು ರೂಪತಿ
ಉಂಡೆದ್ದಲೊಂದು ಗಳಗ್ಯಲ್ಲೇ

ಊಂಡಾಳೂಟವಾ ತೊಳ್ದಳೆಂಜಲಮೊಕವಾ
ತೂಗುಮಂಚದಲೆ ಕುಳೋವಾಳೇ
ತೂಗುಮಂಚದಲೆ ಕುಳುವದ್ನು ಬೀಮನು
ಆಲ್ದ್ ಕಟ್ಟ ಕೆಳಗೆ ಇಳದಾನೆ । ಬೀಮಯ್ಗೆ
ಕಡ್ಡೀ ಪನವಾರಾ[೨೦೪] ಎದೋರಾಗೇ
ಕಡ್ಡೀ ಪನ್ವಾರಾ ಎದುರಾಗ್ವದ್ನು ಬೀಮಯ್ಯ
ಆಗೊಂದು ಮಾತಾ ನುಡೀದಾನೆ

ಆಗೊಂದು ಮಾತಾ ಏನಂದಿ ನುಡೀದಾನೆ
ತನಗಿಟ್ಟು ಕಡ್ಳೀ ಕೊಡೋಬೇಕು.

೨೦೩. ಸೂಜಿಯಲ್ಲಿ ೨೦೪. ಪನಿವಾರ, ತಿಂಡಿ

"ನಿಂಗೆಕಡ್ಡೆ ಕೊಡುವದಕೆ ಬಡವನ ಬದಕಪ್ಪಾ
ನಿನಗೆನಾ ಕಡ್ಡೀಕೊಡೋಲಾರೆ । ಅಂಬುದ್ನು
ಕಡಲೀ ಮುಟ್ಟೀ[೨೦೫] ಸೊಗದೇ ಹೊಗಲೀಗೆ । ಹಾಯಿಕಂಡಿ
ಮುಕ್ಕುತಾ ಮೂರ್ಲೆಜ್ಜೀ ಗಳೀದಾನೆ । ಬೀಮಗೆ
ಗೋದೀ ಪನವರ ಎದರ್ ಬಂದೇ । ನಂದಾನೆ
ತನಗಿಟ್ಟೋ ಗೋದೀ ಕೊಡೊಬೇಕೇ

"ನಿನಗಿಟ್ ಗೋದಿ ಕೊಡುಕೆ ಬಡವನ ಬದ್ಕಪ್ಪ
ನಿನಗೆ ನಾ ಗೋದಿ ಕೊಡ್ಲಾರೆ । ಅಂಬುದ್ನು
ಗೋದೀ ಮುಟ್ಟಿ ತೆಗದೇ ಹೊಗಲೀಗೇ ।ಗ್। ಹಾಯಿಕಂಡೇ

ಮುಕ್ಕತ್ ಮೂರ್ಲೆಜ್ಜಿ ಗಳೀದಾನೇ । ಬೀಮಯ್ಯಾ
ಬಡಬಟ್ನ ಅರಮನಗೇ ನೆಡದಾನೆ । ಬೀಮಯ್ಯಾ
ಹೋಗೀ ಬಾಗಲ್ಲೇ ನಿಲೋವಾಣೆ । ಬೀಮಯ್ಯ
ಬುಡಬಟ್ಟಾನಂದೇ ಕರದಾನೇ

ಇಂದೂ ಕರದಮಲ್ಲ ಬಂದಾನೇ ಬಡಬಟ್ಟಾ
ನಿಂದಾನೇ ಬೀಮಯ್ಯಾ ಒಡನಲ್ಲೇ ಬಡಬಟ್ಟಾ

ಏನು ಕಾರಣಲೆ ಕರದೀಯೋ
ಕರದಂ ಕಾರ್‍ಯವಿಲ್ಲ ಕಿರಿದುಂಬೆಸರ ಸಯ್ಯೋ
ತನಗೇಳ್ ಮೂಡಕ್ಕಿ ಕೊಡಬೇಕೋ

ನಿನ್ಗೇಳ್ ಮೂಡಕ್ಕಿ ಕೊಡವಕ್ಕೆ ಬಡವನ ಬದಕಪ್ಪ
ನಿನಗೇಳೂ ಮೂಡಕ್ಕೀ ಕೊಡಲಾರೆ । ಅಂಬುದ್ನು
ಬಡಬಟ್ನ ಸೊಗದೇ ಹೆರಗ್ಹಣದೇ । ಬೀಮಯ್ಯ

ಮಾಳೂಗೀ ಒಳಗೇ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೆ ಬೀಮಯ್ಯ

ಮೂರ್‌ಗುಡಕಲ್ಲಾ ಒಲಿಹೂಡೇ । ಬೀಮಯ್ಯ
ಹಿರಿಯಾ ಕೊಪ್ಪರಿಗೀ ಎಸರಿತ್ತೇ । ಬೀಮಯ್ಯ
ಜೋಡಲ ಕೊಡಪನವಾ[೨೦೬] ತೆಡದಾನೆ । ಬೀಮಯ್ಯ
ಮೂಡನೆಗ್ಗರಿಗೇ ನೆಡದಾನೆ ।
ಮೂಡನೆಗ್ಗರಿಗೇ ನೆಡದಾನೆ ಬೀಮಯ್ಯ

ಕೊಡಪನದಲ್ ನೀರಾ ಮೊಗತಂದೇ । ಬೀಮಯ್ಯ
ಮಾಳೂಗೀ ಒಳಗೇ ನೆಡದಾನೇ । ಬೀಮಯ್ಯ

೨೦೫. ಬುಟ್ಟಿ ೨೦೬. ಜೋಡು ಕೊಡುವನ್ನು

ಏಳೋ ಮೂಡಕ್ಕೀ ಸೊರಗ್ಹೋಯ್ದೆ । ಬೀಮಯ್ಯ
ಅತ್ತೀಯಾ ಮರನಾ ಕಡೀದಾನೇ ।
ಅತ್ತೀಯ ಮರನಾ ಕಡಿದಾನೆ ಬೀಮಯ್ಯ

ಕಿಚ್ಚೀಗೇ ಅದರಾ ಉರೀಸಾನೇ ।
ಅತ್ತೀಯಾ ಸವ್ದೀ ಕತ್ತದೆ ಇರ್ಬೆಡಾ
ಕತ್ತೀ ಮತ್ತೊತ್ಮೆ ಮಯ್ಬೆಡಾ
ಕತ್ತೀ ಮತ್ತೊತ್ಮೆ ಮಯ್ತುದ್ದುಂಟಾದಾರೆ
ಗಕ್ಕನೇ ತೊಳವೆ ತಳನಲ್ಲೇ

ಹಳ್ಳಗನಕ್ಕೀ ಬೇಯದೆ ಇರ್ಬೆಡಾ
ಬೆಂದೀ ಮತ್ತೊತ್ಮೆ ಕರಗ್‌ಬೆಡಾ
ಬೆಂದೀ ಮತ್ತೊತ್ಮೆ ಕರಗ್‌ದ್ದುಂಟಾದರೆ
ಗಕ್ಕನೇ ತೊಳವೆ ತಳನಲ್ಲೇ । ಅಂದೇಳೇ

ಮಾಳಗ್ಗಿಂದೆರಗೇ ಬರೋವಾನೇ । ಬೀಮಯ್ಯ
ರಾಜಂಗ್ಳ ಮೆಟ್ಟಾ ಇಳದಾನೆ । ಬೀಮಯ್ಯ
ಗಾಣಗನರಮನಗೇ ನೆಡದಾನೆ । ಬೀಮಯ್ಯ
ಹೋಗೀ ಬಾಗಲ್ಲೇ ನಿಲೋವಾನೇ । ಬೀಮಯ್ಯ

ಗಾಣಗನೇ ಅಂದೇ ಕರೋವಾನೇ
ಗಾಣಗನೇ ಅಂದೇ ಕರ್ವದ್ನು ಕಾಣೀಗಾ
ಓಯ್ಗುಂಡೇ ಒಡನೇ ಬರೋವಾನೇ

ಓಯ್ಗುಂಡೇ ಒಡ್ನೇ ಬಂದೀ ಏನಂಬಾನೇ
ಏನು ಕಾರಣಲೆ ಕರದೀಯೋ

“ಕರ್ದ್ಂ ಕಾರ್ಯ ಕಾರ್‍ಯವಿಲ್ಲ ಕಿರಿದುಂಬೆಸರಸಯ್ಯೆ
ತನಗೇಳ್ ಗಾಣೆಣ್ಣೀ ಕೊಡಬೇಕೋ । ಗಾಣೀಗಾ
ತನಗೇಳ್ ಗಾಣ್ಹಿಂಡಿ ಕೊಡಬೇಕೋ

ನಮ್ಮ ಅರ್ಮಲ್ಲಿ ಬೂತಗಳು ತೋಲೋ[೨೦೭]
ಮೀಸಲದ ಹಿಂಡೀ ಕೊಡಲಾರೆ । ಅಂಬುದ್ನು
ಗಾಣಿಗನ ಸೊಣದೇ ಹೆರಗ್ಹಣದೇ । ಭೀಮಯ್ಯಾ
ಮಾಳೂಗೀ ಒಳಗೇ ನೆಡದಾನೇ ।
ಮಾಳೂಗೀ ಒಳಗೆ ನೆಡದಾನೆ ಬೀಮಯ್ಯ

೨೦೭. ಬಹಳ

ಏಳು ಗಾಣೆಂಡೀ ಮೆಲೋವಾನೇ । ಬೀಮಯ್ಯ
ಏಳು ಗಾಣೆಣ್ಣೀ ಕುಡದಾನೇ । ಬೀಮಯ್ಯ
ಮಾಳಗ್ಗಿಂದೆರಗೇ ಬರೋವಾನೇ । ಬೀಮಯ್ಯ
ರಾಜಂಗಳ ಮೆಟ್ಟಾ ಇಳೀದಾನೇ । ಬೀಮಯ್ಯ

ಬಾಳೀಯಾಬನವಾ ಇಳೀದಾನೆ । ಬೀಮಯ್ಯ
ಕಿರುಳು ಬಾಳೆಲಿಯಾ ಇಳಿದಾನೆ । ಬೀಮಯ್ಯ
ಅಲ್ಲೇ ಹಾದೀಮರಳಾ ಹಿಡದಾನೆ । ಬೀಮಯ್ಯ

ಬಡಬಟ್ನರಮನಗೇ ನೆಡದಾನೆ । ಬೀಮಯ್ಯ
ಮಾಳೂಗೀ ಒಳಗೆ ನೆಡದಾನೆ

ಹಾದೀಯಾ ಮರಳಾ ತೆಳ್ಳಗ್ ಕೊರ್ದ್ ಮೆಣಸೀಟ್ಟೇ
ಕಿರಳಾ ಬಾಳೆಲಿಯಾ ತೊಳದ್ವಾಸೇ । ಭೀಮಯ್ಯಾ
ಏಳ್ಮೂಡಕ್ಕೀ ಅನ್ನಾ ಸೊರಗಾನೆ । ಬೀಮಯ್ಯಾ
ಏಳ್ಮೂಡಕ್ಕಿ ತೆಳಿಯಾ[೨೦೮] ಕುಡೀದಾನೇ

ಏಳ್ಮೂಡಕ್ಕೀ ಅನ್ನಾ ಏಳು ಮುದ್ದೀಕಟ್ಟೇ
ಏಳುತುತ್ತೀ ನಲ್ಲೇ ಮೆಲೋವಾನೇ । ಬೀಮಯ್ಯಾ
ತೇಗೀತೇ ಹೆರಗೇ ಬರೂವಾನೇ । ಬೀಮಯ್ಯ

ರಾಜಗ್ಳ ಮೆಟ್ಟಾ ಇಳೀದಾನೇ । ಬೀಮಯ್ಯ
ರಾಜೋಬಿದಿಗಾಗೇ ಬರೋವಾನೇ । ಬೀಮಯ್ಯ
ಗುರ್ರಾಯ್ನರಮನಗೇ ನೆಡದಾನೇ । ಬೀಮಯ್ಯ

ಹೋಗಿ ಬಾಗಲ್ಲೇ ನಿಲೋವಾನೇ
ಹೋಗಿ ಬಾಗಲ್ಲೇ ನಿಲುವದ್ನು ಗುರ್ರಾಯಾ
ತಡದಾನೇ ಚಂಬಗಲೇ ಉದಕವೇ

ಅಣ್ಣಾ ಕೊಟ್ಟುದಕಾ ತಟ್ಟಾನೆ ತಡದಾನೆ
ಕಾಲೂ ಸಿರಿಮೊಕವಾ ತಡದಾನೆ । ಭೀಮಯ್ಯ
ಮಾಳೂಗೀ ಒಳಗೆ ನೆಡದಾನೆ । ಭೀಮಯ್ಯ

ತೂಗುಮಂಚದಲೆ ಕುಳೋತಾನೆ
ತೂಗು ಮಂಚದಲೆ ಕುಳುವದ್ನು ಬೊನ್ವತಿ ।
ಊಟಕ್ ಬಾರಂದೇ ಕರದಾಳೆ

ನೀವೇನಡಬಲ್ಲರಿ ಬಾಸುಳ್ಳ ಬದನೀಕಾಯಾ
ನಾನಡಲುಬಲ್ಲೆ ಹಾದೀ ಮರಳೆ ।೪। ತ್ತೀಗೆ
ತೆಳ್ಳಗೇ ಕೊರದೇ ಮೆಣಸಿಟ್ಟೇ । ಅತ್ತೀಗೆ

---

೨೦೮. ತಿಳಿಯನ್ನು

ಹುಳ್ಳಗ್ ಮುರ್ ತುತ್ತಾ ಉಂಡ್ ಬಂದೆ । ಅತ್ತೀಗೆ
ಇನ್ನೇ ಉಂಬಲಕೆ ಹಸವಿಲ್ಲ । ಅಂಬುದ್ನು ಗುರ್‍ರಾಯಾ
ಮಾಳುಗೀ ಒಳಗೆ ನೆಡದಾನೆ

ಆಯುಳ್ಳ ಹಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣ । ತಡಕಂಡೆ
ಮಾಳಗ್ಗಿಂದೆರಗೀ ಬರೋವಾನೇ । ಗುರ್‍ರಾಯಾ
ದರ್ಮರ್ಗ್ಗೊಮದೀಳ್ಯ ಕೊಡೋವಾನೇ

ಒಂದೆ ತಾಯೀಗೆ ನೀವಯ್ವರು ಮಕ್ಕಳು
ನೀವ್ಯವರೊಂದೀಳ್ಯ ಮೆಲಲಂದೇ । ಗುರ್‍ರಾಯಾ
ದರ್‍ಮರ ಕಯ್ಲೀಳ್ಯ ಕೊಡೋವಾನೇ

ದರ್‍ಮರ ಕಯ್ಲಿಳ್ಯಾ ಕೊಡ್ವದ್ನು ದರುಮರು
ಅಯ್ವರೊಂದೀಳ್ಯ ಮೆಲೋವಾರೆ

ಅಯ್ವರೊಂದೀಳ್ಯ ಮೆಲುವದ್ನು ಗುರ್‍ರಾಯಾ
ತಾನೊಂದೀಳ್ಯವಾ ಮೆಲೋವಾನೇ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೇ
ಆಗೊಂದು ಮಾತಾ ನುಡೀದಾನೆ

ಆಗೊಂದು ಮಾತಾ ಏನಂದಿ ನುಡೀದಾನೆ
ನೀವೆವ ಬದುಕೀಗೇ ಇರುತೀರೇ । ಅಂಬುದ್ನುದರ್‍ಮರು
ತಾದೇವರ ಪೂಜೀಕೇ ಇರತೀನೋ ।
ತಾದೇವರ ಪೂಜಿಕೆ ಇರಲೇನೋ ಅಂಬುದ್ನು ಸಾದೇವಾ
ನೀನ್ಯೆವಾ ಬದ್ಕೀಗೇ ಇರತೀಯೋ । ಅಂಬುದ್ನು ಸಕಲಯ್ಯ
ಗೋವಾ ಕಾವದಕೆ ಇರತೀನೋ । ಅಂಬುದ್ನು ಸಕಲಯ್ಯ

ನೀನೆವ ಬದಕೀಗೇ ಇರತಿಯೋ ।
ನೀನ್ಯೆವ ಬದಕೀಗೆ ಇರತೀಯೋ ಸಕಲಯ್ಯ
ನಾಸೊಪ್ಪಾ ಕೊವ್ವದಕೆ ಇರತಿ।ನೋ। ಅಂಬುದ್ನು ಅರಜೀಣಾ
ನೀ ಯಾವಾ ಬದುಕೀಗೇ ಇರತೀಯೋ । ಅರಜೀಣ

ನಾಮಕ್ಕಳ ಬರೆಸ್ವದಕ ಇರತೀನೋ । ಅಂಬುದ್ನು ಭೀಮಯ್ಯ
ನಾಮಕ್ಕಳ ಬರೆಸ್ವಕೆ ಇರತೀನೋ ಅಂಬುದ್ನು ಭೀಮಯ್ಯ
ನೀ ಯಾವಾ ಬದಕೀಗೇ ಇರತೀಯೋ । ಅಂಬುದ್ನು
ತಾ ಅಡಗೀ ಮಾಡ್ವದಕೆ ಇರತೀನೋ

ಒಂದೆಸರಾ ಎತ್ವರು ಒಂದೆಸರಾ ಇಳಗ್ವರು[೨೦೯]
ಒಂದಗಳಾ ಮಾಡೇ ಬಡಸ್ವರು । ಅಣ್ಣ ಕೇಲೋ

ನಾ ಒಂದೇ ಎಸರಿತ್ತೇ ಬಡಸೀತೆ । ಅಂದೇಳೆ
ಅಡಗೀ ಸಾಲೀಗೇ ನೆಡದಾನೆ । ಭೀಮಯ್ಯ
ರೂಪತಿ ನೀ ಯಾವ ಬದಕೀಗೆ ಇರತೀಯೇ ? । ಅಂಬುದ್ನು
ತಾಬೊನ್ವತಿಗೂಂಗಾ ಮುಡಸೀತೆ[೨೧೦] । ಅಂದೇಳೇ

ಹೂಂಗೀನಾ ಚೊಬ್ಬೀ ತಡದಾಳೆ । ರೂಪತಿ
ಹೂಂಗೀನಕ್ಕಲಗೇ ನೆಡದಾಳೇ । ದರುಮರುದೇವರ
ಪೂಜೀಕೇ ನೆಡದಾರೆ । ಅರಜಿಣ
ಬರವ ಸಾಲೀಗೇ ನೆಡದಾನೆ । ಸಾದೇವಾ

ಸಪ್ಪಾ ಕೊವ್ವದಕೇ ನೆಡದಾನೆ । ಸಕಲಯ್ಯ
ಗೊವಾಕಾವದಕೆ ನೆಡದಾನೆ । ಅಯ್ವರು
ಅಯ್ದು ಬದ್ಕೀನಲೇ ಇರೋವಾರೇ

೨೦೯. ಇಳಿಸುವರು ೨೧೦. ಮುಡಿಸುವೆನು

ಗಿಜಗ[೧]

ತೆಂಕನಾರತದಿಂದೆ ತೆಂಕನಬಾರತದಿಂದೆ
ಪಾಂಡವರ ದಂಡೇ ತಿರಗದೆ । ಅಂದೇಳಿ
ಗಿಜಗಾಗೇ ಕನಸು ಒಲೀದಾವ್[೨]

ಗಿಜಗಾಗೇ ಕನ್ಸು ಒಲ್ವದ್ನು ಗಿಜಗನು
ಪನ್ನೀರಲಿ ಮೊಕವಾ ತೊಳದಾನೇ । ಗಿಜಗ
ಮಾಳೂಗೀ ಒಳಗೆ ನೆಡದಾನೇ । ಗಿಜಗ
ಆಯಾಕೊಂದೀಳ್ಯ ಮೆಲೋವಾನೇ

ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಮಾಳುಗೀ ಒಳಗೆ ನೆಡದಾನೆ । ಗಿಜಗನು
ಅಟ್ಟತ್ತೀ ಪೆಟ್ಟಗೀಯಾ ತೆಗದಾನೆ । ಗಿಜಗನು

ಮೆಟ್ಟೀ ಬೀಗವಾ ಕರೀದಾನೆ । ಗಿಜಗನು
ಮುಚ್ಚೀಲ ತೆಗದೇ ಕಡ–ಗಿಟ್ಟೆ । ಗಿಜಗನು
ಪಟ್ಟೆ ಜೋತರವ ನೆರದುಟ್ಟೇ । ಗಿಜಗನು

ಮುತ್ತನ ಮುಂಡಸನಾ ತಲಗೇ ಸುತ್ತೇ । ಗಿಜಗನು
ಪಟ್ಟೆ ಜೋತರವಾ ಹೊಗಲೀಗೆ । ಇಟ್ಟೇಗಂಡೇ
ಕೋಲು ನೆವಳ ಇಳೋಲಿಟ್ಟೇ[೩] । ಗಿಜಗನು

ಬಣ್ಣದೆಲವಸ್ತ್ರ[೪] ತಡದಾನೆ । ಗಿಜಗನು
ಪೆಟ್ಟಗೀ ಬಾಯಲ್ಲೇ ಮಡಗಾನೆ । ಗಿಜಗನು
ಮಾಳಗ್ಗಿಂದೆರಗೇ ಬರೋವಾನೇ । ಗಿಜಗನು

ರಾಜಂಗ್ಳ ಮೆಟ್ಟಾ ಇಳೀದಾನೇ । ಗಿಜಗನು
ರಾಜೋ ಬಿದಿಗಾಗೇ ನೆಡದಾನೆ । ಗಿಜಗನು
ಅಕ್ಕನರ ಮನೆಗೇ ನೆಡದಾನೆ । ಗಿಜಗನು

೧. ಕೀಚಕ ೨. ಬಿದ್ದವು ೩. ಇಳಿಬಿಟ್ಟು ೪. ರುಮಾಲು

ಹೋಗಿಬಾಗಲ್ಲೇ ನಿಲೋವಾನೇ
ಹೋಗೀ ಬಾಗಲ್ಲೇ ನಿಲ್ವದ್ನು ಬೊನ್ವತೀ[೫]
ತನ್ನಾ ರೂಪತಿಯಾ ದೆನಿದೂರೇ । ನಂದಾಳೆ

"ತಡಿಯೆ ಚಂಬಗಲೆ ಉದಕಾವೇ"
"ತನ್ನಾ ಅಣ್ಣಾನಲ್ಲ ತನ್ನಾ ತಮ್ಮನಲ್ಲಾ
ನಾಯಾರೀಗಂದು[೬]ದಕಾ ಕೊಡಬೇಕೆ ।"

ನನ್ನಾ ಅಣ್ಣಾ ಉಂಡೀ[೭] ನ್ನಾ ಸುಣ್ಣಾ ತಿಂದಿ.
ತಾನೇಳಿದ ಮಾತಾ ಸಲೀಸ್‌ಲಾರ್ಯೆ ।
ತಾನೇಳಿದ ಮಾತಾ ಸಲೀಸದೆ ಇದ್ದರೆ
ಕಟ್ಕಣೆ ಪಂಜರದಾ ಅರಮನೆ । ಅಂಬುದ್ನು
ಮುತ್ನ ಕಣ್ಣೀರಾ ಸೆಡೀದಾಳೇ । ರೂಪತಿ
ತಡದಾಳೇ ಚಂಬಗಲೇ ಉದಕಾವೇ ।ವ। ರೂಪತಿ
ಗಿಜಗಾಗೇ ಉದಕಾ ಕೊಡೋವಾಳೇ । ಗಿಜಗನು
ಕಾಲು ಸಿರಿಮೊಕವಾ ತೊಳದಾನೆ । ಗಿಜಗ

ಮಾಳೂಗೀ ಒಳಗೇ ನೆಡದಾನೇ । ಗಿಜಗ
ತೂಗು ಮಂಚದಲೆ ಕುಳೋತಾನೆ
ತೂಗು ಮಂಚದಲೆ ಕುಳುವದ್ನು ಬೊನ್ವತಿ
ಮಾಳೂಗೀ ಒಳಗೆ ನೆಡದಾಳೇ

ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಎಲೆ
ಹಾಲಿನಲಿ ಬೆಂದಾ ತೆನೆಸುಣ್ಣಾ । ತಡಕಂಡೆ
ಮಾಳಗ್ಗಿಂದೆರಗೇ ಬರೋವಾಳೇ । ಬೊನ್ಮತೀ

ಗಿಜಗನೊಡನೋಗೇ ಕುಳತಾಳೆ । ಬೊನ್ವತಿ
ಗಿಜಗಗೊಂದೀಳ್ಯ ಕೊಡೋವಾಳೆ । ಬೊನ್ವತಿ
ತಾನೊಂದೀಳ್ಯವಾ ಮೆಲೋವಾಳೇ । ಬೊನ್ವತಿ
ಅಕ್ಕಾ ಕೊಟ್ಟೀಳ್ಯಾ ತಟ್ಟಾನೇ ತಡ್ದಾನೆ

ಆಯಾಕೊಂದೀಳ್ಯ ಮೆಲೋವಾನೇ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ

೫. ಸದೇಷ್ಣೆ ೬. ನಾನು ಯಾರಿಗೆಂದು ೭. ಉಂಡಿದ್ದಿ

ಮೆಯ್ಯ ಮರುದಲ್ಲೇ ಒರುಗಾನೆ
ಮೆಯ್ಯ ಮರುದಲ್ಲೇ ಒರಗ್ವದ್ನು ಬೊನ್ವತಿ
ತನ್ನಾ ರೂಪತಿಯ ದೆನಿದೂರೇ

ಎಂದೂ ಕರದಮಲ್ಲ ಬಂದಾಳೇ ರೂಪತೀ
ನಿಂದಾಳೆ ಬೊನ್ವತೀಯಾ ಒಡನಲ್ಲಿ । ನಿಂದೀಕಂಡೇ
ಏನು ಕಾರಣಲೆತಿ ಕರದೀಯೋ

ಕರದಂ ಕಾರ್ಯವಿಲ್ಲ ಕಿರಿದುಂಬೆಸರಸಯ್ಯೆ
ಹೋಗೀ ಗಿಜಗನಾ ನೆಗದ್ ಬಾರೆ
"ನನ್ನಾ ಅಣ್ಣಾನಲ್ಲಾ ನನ್ನ ತಮ್ಮನಲ್ಲ
ಯಾರಂದೀ ತಾನೂ ನೆಗಿಯಲೆ"

ನನ್ನಾ ಅನ್ನಾ ಉಂಡೀ ನನ್ನಾ ಸುಣ್ಣಾ ತಿಂದೀ
ತಾನೇಳಿದ ಮಾತಾ ಸಲೀಸ್‌ಲಾರ್ಯ[೮]
ತಾನೇಳಿದ ಮಾತಾ ಸಲೀಸದೇ ಇದ್ದರೆ
ಕಟ್ಕಣೆ ಪಂಚರ್ದಾ ಅರಮನೆ

ಒಬ್ಬರ ಮಲ್ಲಿ[೯] ಇರುವದು ಅತೀ ಕಟ್ಟ
ಹೇಳೀದೂಳಗವಾ ಸಲಸಬೇಕೆ
ಹೇಳೀದೂಳಗವಾ ಸಲಿಸಾದೆ ಇದ್ದಾರೆ
ಕಟ್ಕಂಬೇಕೆ ಪಂಜರ್ದಾ ಅರಮನೆ ! ಅಂದ್ ರೂಪತಿ

ಮುತ್ನ ಕಣ್ಣೀರಾ ಸೆಡೀದಾಳೆ ! ರೂಪತೀ
ಹೋಗೀ ಗಿಜಗನಾ ನೆಗದಾಳೆ
ಹೋಗೀ ಗಿಜಗನ ನೆಗ್ವದ್ನು ಗಿಜಗನು
ಮಿಯ್ಯಾ ಮುರುದೆದ್ದೇ ಕುಳತಾನೆ । ಗಿಜಗನು
ಆಗೊಂದು ಮಾತಾ ನುಡೀದಾನೆ

"ಅಕ್ಕಾ ನಿನ್ ಮಲ್ಲಿ ಬಾಗ್ಲ ಸದೀ ತೆಗ್ವಳು
ಸೂಳಿಯೋ ಆಕೀ ಗರತೀಯೋ । ಅಕ್ಕಾಕೇಳೇ
ಆಕೀ ಮೆನ್ ನನಗೆ ಮನಸಾದೊ । ಅಕ್ಕಾಕೇಳೇ"
ಆಕೀ ನಮ್ಮನೆಗೆ ಕಳಗೀಸೇ"

೮. ನಡೆಸೂರೆಯಾ ? ೯. ಮನೆಯಲ್ಲಿ

“ತಮ್ಮಾ ನನ್ಮಲ್ಲಿ ಬಾಗ್ಲ ಸಂದೀ[೧೦] ತೆಗ್ವಳು
ಸೂಳ್ಯಲ್ವೋ[೧೧] ಆಕೀ ಗರತೀಯೋ । ತಮ್ಮಾ ಕೇಲೋ
ಆಕೀಗಯ್ವರ‍್ರು ಪುರೀಸರೋ[೧೨] । ರು । ಕೇಳ್ದರೆ
ಕೊಚ್ವರೋ ನಿನ್ನಾ ಕಡವರೋ

ಕೊಲ್ಲದ್ರ[೧೩] ಕೊಲ್ಲಸ್‌ಗಂಬೆ ಕಡ್ದ್ರ ಕಡಿಸ್‌ಗಂಬೆ
ಹೊಡೆವ ಬಾಣಗಳ ಜಯವಂಬೆ । ಅಕ್ಕಾ ಕೇಳೇ
ಆಕೀ ನಮ್ಮನಗೇ ಕಳಗೀಸೇ । ಅಂದೇಳೇ
ಕೂತಾ ಮಂಚವಾ ಜಡದೆದ್ದೇ । ಗಿಜಗನು

ತನ್ನಾ ಅರಮನೆಗೇ ನೆಡದಾನೇ
ತನ್ನಾ ಅರಮನೆಗೇ ನೆಡವದ್ನು ಬೊನ್ವತೀ
ಆಗೊಂದು ಮಾತಾ ನುಡೀದಾಳೇ
ಆಗೊಂದು ಮಾತಾ ಏನಂದೀ ನುಡಿದಾಳೇ
ಹೋಗ್ಬಾರೇ ಗಿಜಗನಾ ಅರಮನೆಗೆ

ಪಟ್ಟಿ ಉಟ್ಕಣೆ ಮುತ್ತಿನ ಬೊಟ್ಟಿಟ್ಕಣೆ
ಗಟ್ಟೊ ಮಲ್ಲುಗಿಯಾ ಮುಡ್ಕಣೆ । ರೂಪತಿ
ಗಟ್ಟೊ ಬಟ್ಟಲವಾ ತಡಕಣೆ । ರುಪತಿ
ಹೋಗ್ಬಾರೇ ಗಿಜಗನ ಅರಮನೆಗೆ”

‘ನನ್ನಾ ಅಣ್ಣನಲ್ಲಾ ನನ್ನಾ ತಮ್ಮನಲ್ಲಾ
ನಾಯಾರಾ ಮನಿಗೇ ನೆಡಿಯಲೇ’

‘ನನ್ನಾ ಅನ್ನಾ ಉಂಡೀ ನನ್ನಾ ಸುಣ್ಣಾ ತಿಂದೀ
ತಾನೇಳಿದ ಮಾತಾ ಸಲೀಸ್‌ಲಾರ‍್ಯಾ
ತಾನೇಳಿದ ಮಾತಾ ಸಲೀಸದೇ ಇದ್ದರೆ
ಕಟ್ಕಣೆ ಪಂಜರದಾ ಅರಮನೆ । ಅಂಬುದ್ನು

ಒಬ್ಬರ ಮಲ್ಲಿ ಇರುವದು ಅತೀ ಕಟ್ಟ
ಹೇಳಿದುಳಗವಾ ಸಲಿಸಬೇಕೆ
ಹೇಳಿದುಳಗವಾ ಸಲಿಸದೇ ಇದ್ದರೆ
ಕಟ್ಕಂಬೇಕೆ ಪಂಜರದಾ ಅರಮನೆ । ಅಂದೇಳಿ

ಮುತ್ತನ ಕಣ್ಣೀರ ಸೆಡೀದಾಳೆ । ರೂಪತೀ
ಮಾಳೂಗೀ ಒಳಗೇ ನೆಡೀದಾಳೆ
ಪಟ್ಟೀ ಉಟ್ಟಾಳೆ ಮುತ್ತನ ಬಟ್ಟಿಟ್ಟಾಳೆ

೧೦. ಕಸ ೧೧. ಸೂಳೆಯಲ್ಲ ೧೨. ಗಂಡಂದಿರು ೧೩. ಕೊಂದರೆ

ಗಟ್ಟೋ ಮಲ್ಲುಗೀಯಾ ಮುಡೀದಾಳೆ । ರೂಪತಿ
ಗಟ್ಟೋ ಬಟ್ಟಲವಾತಡವಾಳೇ ರೂಪತಿ
ಮಾಳಗ್ಗಿಂದೆರಗೇ ಬರೋವಾಳೇ । ರೂಪತಿ
ರಾಜಂಗ್ಳ ಮೆಟ್ಟಾ ಇಳೀದಾಳೇ । ರೂಪತಿ
ರಾಜಬಿದಿಗಾಗೇ ನೆಡದಾಳೆ । ರೂಪತಿ

ಗೋವ್ನ ಗುಡಿಗಾಗೇ ನೆಡದಾಳೇ
ಗೋವ್ನ ಗುಡಿಮೆನೆ ಗೋವ್ ಕಾವೂ ಮಕ್ಕಳ್ರಾ
ಯಾವ್ದೋ ಗಿಜಗನಾ ಅರಮನೆ

ಅಯ್ಯೋ ನನ್ನಮ್ಮಾ ನೀವಿನ್ನು ಅರಿಯಾರಾ
ಇದುವೀಗ ಗಿಜಗನಾ ಅರಮನೆ । ಅಂದೇಳೇ
ಬಂತೋ ಗಿಜಗನಾ ಕಿರೀ ಮಡದೀ ।
ತೋಳೋ ತೊಡಿ ಹೊಯ್ದೋ ನೆಗೀಯಾಡೇ

ತೋಳೋ ತೊಡಿಹೊಯ್ದೋ ನೆಗಿಯೊಡ್ವದ್ನು ರೂಪತಿ
ಕೆಯ್ಯ ಗೆದ್ದಿಗಾಗೇ ನೆಡೇದಾಳೇ
ಕೆಯ್ಯ ಗೆದ್ದಿಲಿ ಕೆಯ್ ಕೊವ್ವ ಹೊಲಿಯರೆ
ಯಾವ್ದೋ ಗೀಜಗನಾ ಅರಮನೆ

ಅಯ್ಯೋ ನನ್ನಮ್ಮಾ ನೀವಿನ್ನು ಅರಿಯಾರಾ
ಇದುವೀಗ ಗಿಜಗನಾ ಅರಮನೆ । ಅಂದೇಳಿ
ತೋಳು ತೊಡಿ ಹೊಯ್ದೋ ನೆಗೀಯಾಡಿ
ತೋಳು ತೊಡಿ ಹೊಯ್ದಿ ನೆಗಿಯಾಡ್ವದ್ನು ರೂಪತಿ

ಹೋಗಾಳೆ ಗಿಜಗನಾ ಅರಮನೆಗೇ । ರೂಪತೀ
ಹೋಗೀ ರಾಜಂಗ್ಳಾ ನೆಗದತ್ತೇ । ರೂಪತಿ
ಹಿತ್ಲಕಣಕನ ಬಾಗಲಗೇ ನೆಡದಾಳೆ । ರೂಪತಿ

ಗಿಜಗನೊಡನೋಗೇ ನಿಲೋವಾಳೇ
ಗಿಜಗನೊಡನೋಗೇ ನಿಲ್ವದ್ನು ಗಿಜಗನು
ಆಗೊಂದು ಮಾತಾ ನುಡೀದಾನೆ

ಪೆಟ್ಟೋಗೀ ಒಳಗೆ ಬೇಕಾದ ಪಟ್ಟದೆ
ಉಟ್ಕಣೆ ರೂಪತೀ ಒಡ್ನೇ ಬಾರೇ
ಪೆಟ್ಟೊಗೀ ಒಳಗೆ ಬೇಕಾದ ಚಿನ್ನದೆ
ಇಟ್ಕಳೆ ರೂಪತಿ ಒಡ್ನೇ ಬಾರೇ । ಅಂದೇಳಿ
ಹಿಡಿದಾನೇ ಬಳಿಯಾ ನಳಿತೋಳಾ

ಹಿಡ್ದಾ ನಳೀಗೋಳಾ ಒಪ್ಪದಲಾ ತಪ್ಪಸ್‌ಗಂಡೇ[೧೪]
ಹಿತ್ಲಕಣಕ್ನ ಬಾಗ್ಲದಾಗೆ ಹೊರೋಟಾಳೇ । ರೂಪತಿ
ಗುರ್‍ತ್ರಾಯ್ನರ ಮನಗೇ ನೆಡದಾಳೇ । ರೂಪತಿ
ದರುಮರಿದ್ದಲ್ಲೇ ನೆಡದಾಳೇ । ರೂಪತಿ
ಲಾಗೊಂದು ಮಾತಾ ನುಡೀದಾಳೆ

"ಹೂಂಗಾ ಕೊವ್ವರಿ[೧೫] ದೇವರಿಗೆ ಅ (ಹ?) ರಸ್ಸವ್ವರೀ
ದೇವರ ಪೂಜ್ಯಕೇ ಇರವರಿ । ದೇವಾರೆ
ನಿಮ್ಹಿಂಡರ ಪಂತಾ ನಿಮಗಿಲ್ಲ"

"ಅಯ್ವರ್‍ತ್ರಾ ಮಡದೀ ಇಲ್ಲೆರಿಗ್ ಹೇಳೀತೆ
ಹೋಗೇಳೇ ನಿನನಲ್ಲ ಅರಜಿಣಗೇ
ಅಟ್ಟಂಬಾ ಮಾತಾ ಕೇಳಾಳೆ ರೂಪತಿ
ಮುತ್ತನ ಕಣ್ಣೀರಾ ಸೆಡೀದಾಳೇ । ರೂಪತೀ
ಬರ್‍ವಾ ಸಾಲೀಗೇ ನೆಡದಳೇ ।
ಬರ್‍ವಾ ಸಾಲೀಗೆ ನೆಡದಾಳೆ ರೂಪತಿ

ಅರ್ಜಿಣಿದ್ದಲ್ಲಗೆ[೧೬] ನೆಡದಾಳೇ
ಮಕ್ಕಳಿಗ್ ಬರೆಸ್ವರಿ ಮಕ್ಕಳಿಗ್ ಕಲಸ್ವರಿ
ಬರವಾ ಸಾಲ್ಯಲ್ಲೇ ಇರವರೀ । ದೇವಾರೆ
ನಿಮ್ಮಿಂಡರ ಪಂತಾ ನಿಮಗಿಲ್ವ

ನಮ್ಮಯ್ವರ್‍ತ್ರಾ ಮಡದೀ ಇಲ್ಲೆರಿಗ್ ಹೇಳೀತೆ
ಹೋಗ್ಹೇಳೇ ನಿನ್‌ನಲ್ಲಾ ಸಕಲಯ್ಗೆ
ಅಟ್ಟಂಬಾ ಮಾತಾ ಕೇಳಾಳೆ ರೂಪತಿ
ಮುತ್ನ ಕಣ್ಣೀರಾ ಸೇಡಿದಾಳೆ । ರೂಪತಿ
ಗೋವಾ ಕಾವಲ್ಲೇ ನೆಡದಾಳೆ
ಗೋವಾ ಕಾವ್ವರಿ ಗೋವಾನೇ ಬಿಡ್ವಾರಿ

ಗೋವಾ ಕಾವದಕೆ ಇರಾವರಿ[೧೭] । ದೇವರೆ
ನಿಮ್ಮಿಂಡರ ಪಂತಾ ನಿಮಗಿಲ್ವ

ನಮ್ಮಯ್ವರ ಮಡದೀ ಇಲ್ಲೆರಿಗ್ ಹೇಳಿತೆ
ಹೋಗೇಳೇ ನಿನನಲ್ಲ ಸೇದೇವ್ಗೆ
ಅಟ್ಟಂಬಾ ಮಾತಾ ಕೇಳಾಳೆ ರೂಪತಿ
ಮುತ್ನ ಕಣ್ಣೀರಾ ಸೆಡೀದಾಳೆ । ರೂಪತಿ

೧೩. ಕೊಂದರೆ ೧೪. ತಪ್ಪಿಸಿಕೊಂಡು ೧೫. ಕೊಯ್ಯುವಿರಿ ೧೬. ಅರ್ಜುನನಿದ್ದಲ್ಲಿ ೧೭. ಇರುವಿರಿ

ಸೊಪ್ಪ ಕೊವ್ವಲ್ಲೇ ನೆಡದಾಳೆ
ಸೊಪ್ಪಾ ಕೊವ್ವರೀ ಕೊಟ್ಟಗೇ ಇಕ್ವರಿ
ಸೊಪ್ಪ ಕೊವ್ವಲ್ಲೇ ಇರವರೀ । ದೆವಾರೆ
ನಿಮ್ಮಿಂಡರ ಪಂತಾ ನಿಮಗಿಲ್ವ

ನಮ್ಮಯ್ವರ್ರಾ ಮಡದೀ ಇಲ್ಲೆರಿಗ್ ಹೇಳೀತೆ
ಹೋಗೇಳೇ ನಿನನಲ್ಲ ಕಲೀಬೀಮ್ಗೆ । ಅಂಬುದ್ನು
ಮುತ್ನ ಕಣ್ಣೀರಾ ಸೆಡೀದಾಳೇ । ರೂಪತಿ
ಭೀಮಾ ಇದ್ದಲ್ಲೇ ನೆಡೀದಾಳೇ
ಒಂದೆಸರಾ ಎತ್ವರಿ ಒಂದೆಸ್ರಾ ಇಳಗ್ವರೀ
ಬಂದೋರಿಗ್ ಮಾಡಿ ಬಡಸ್ವರಿ । ದೇವಾರೇ
ನಿಮ್ಮಿಂಡರ ಪಂತಾ ನಿಮಗಿಲ್ವ

ಒಂದೆಸರ[೧೮] ಹೇಳಿದರೆ ನಂಬ್ಲಾರೆ ನಿನ್ಮಾತಾ
ಇನ್ನೊಂದಾ ಸಾರೋಗೀ ತೆಳದ್[೧೯] ಬಾರೇ"
ಒಂದೇ ಸಾರೋಗಿ ಬಂಗೆಟ್ಟೀ[೨೦] ಬಂದಿದೆ
ಇನ್ನೆ ನಾಚಗ್ಗೇ[೨೧] ಒಳುವಲ್ಲ । ಅಂದ್ ರೂಪತೀ
ಬಿದ್ದ ಬಿದ್ದಲ್ಲೇ ಮರೋಗಾಳೆ[೨೨]
ಬಿದ್ದ ಬಿದ್ದಲ್ಲೇ ಮರಗ್ವದ್ನು ಭೀಮಯ್ಯ
ರೂಪತಿ ಮಿಯ್ಯರಣಾ ಉದೋರಿಸೇ
ರೂಪತೀ ಎತ್ತೇ ನಿಲಸಾನೆ । ಬೀಮಯ್ಯಾ

ರೂಪತೀ ಮಿಯ್ಯ ಹುಡಿಯಾ ಉದೋರಿಸೇ । ಬೀಮಯ್ಯಾ
ರೂಪತೀ ಪಟ್ಟೀ ಉಡೋವಾನೇ । ಬೀಮಯ್ಯಾ
ರೂಪತೀ ಚಿನ್ನಾ ಇಡೋವಾನೇ । ಬೀಮಯ್ಯಾ
ನುಸಲಗ್ ಸಿರಿಗಂದಾ ಇಡೋವಾನೇ । ಬೀಮಯ್ಯಾ
ರೂಪತಿ ಬಳಿಎಯ್ಡಾ ಇಡೋವಾನೇ । ಬೀಮಯ್ಯಾ
ರೂಪತಿ ಮಿಯ್ಯಾಬರಣ[೨೩] ತೊಡೋವಾನೇ । ಬೀಮಯ್ಯಾ
ಆಗೊಂದು ಮಾತಾ ನುಡೀದಾನೇ

ಬೀಮಾ ಅಂಬೆಸರು ಇಲ್ಲಿಂದಿತ್ತಾಗಿರಲೋ
ರೂಪತಿ ಅಂಬೆಸರು ನೆಡಿಯಾಲೋ ।
ರೂಪತಿ ಅಂಬೆಸರು ನೆಡಿಯಲಂದ್ ಬೀಮನು
ಗೊವ್ನ[೨೪] ಗುಡಿಯಲ್ಲಿ ಗೊವ್ ಕಾದಾ ಮಕ್ಕಳ್ರಾ
ಯಾವದೋ ಗಿಜಗನಾ ಅರಮನೆ

---

೧೮. ಒಂದುಸಾರೆ ೧೯. ತಿಳಿದು ೨೦. ಮಾನಗೆಟ್ಟು ೨೧. ಮರ್ಯಾದೆ ೨೨. ದುಃಖಿಸಿದಳು ೨೩. ಮೈ ಆಭರಣ ೨೪. ಗೋವಿನ

"ಅಯ್ಯೋ ನನ್ನಮ್ಮಾ ನೀವಿನ್ನು ಅರಿಯಾರಾ
ಇದು ಇದೆ ಗಿಜಗನಾ ಅರಮನೆ । ಅಂದೇಳಿ
ಬಂತೋ ಗಿಜಗನಾ ಕಿರೀ ಮಡುದಿ । ..

ತೋಳು ತೊಡಿಹೊಯ್ದೋ ನೆಗಿಯಾಡೇ ರೂಪತಿ
ಕೆಯ್ ಗದ್ದಿಗಾಗೇ[೨೫] ನೆಡದಾಳೆ
ಕೆಯ್ ಗದ್ದಿಲಿ ಕೆಯ್ ಕೊವ್ವ ಹೊಲಿಯರೆ
ಯಾವ್ದೋ ಗಿಜಗನಾ ಅರಮನೆ

ಅಯ್ಯೋ ನನ್ನಮ್ಮಾ ನೀವಿನ್ನು ಅರಿಯಾರಾ
ಇದುವೀಗೆ ಗಿಜಗನಾ ಅರಮನೆ । ಅಂದೇಳಿ
ಬಂತೋ ಗಿಜಗನಾ ಕಿರೀ ಮಡದೀ । ಅಂದೇಳಿ
ತೋಳು ತೊಡಿ ಹೊಯ್ದೋ ನೆಗಿಯಾಡಿ ।
ತೋಳು ತೊಡಿ ಹೊಯ್ದೆ ನೆಗಿಯಾಡುದ್ನು ರೂಪತಿ

ಹೋಗಾಳೆ ಗಿಜಗನಾ ಅರಮನೆಗೆ । ರೂಪತೀ
ಮಾಳೂಗೀ ಒಳಗೆ ನೆಡದಾಳೇ ।

ಹಿತ್ಲಕಣಕ್ನ ಬಾಗಲ್ಲೇ ಹೆರೋಟಾಳೆ[೨೬] ।
ಹೆಡಗ್ಯನ ಬತ್ತಾ ತಿಂದೇ ಕೊಡ್ನ ನೀರಾಕುಡ್ದೆ
ತೇಗೀತೇ ಗಿಜಗಾ ಬರ‍್ಗಾನೆ[೨೭]

ತೇಗೀತೇ ಗೀಜಗಾ ಬರ‍್ಗ್ವದ್ನು ರೂಪತೀ
ಗೀಜಗನೊಡನೋಗಿ ಕುಳತಾಳೆ.

ಗೀಜಗನೊಡನೋಗಿ ಕುಳುವದ್ನು ಗೀಜಗಾ
ಆಗೊಂದು ಮಾತಾ ನುಡೀದಾನೇ
ಪೆಟ್ಟಿಗಿಒಳಗೆ ಬೇಕಾದ ಪಟ್ಟದೆ.

ಉಟ್ಕಣೆ ರೂಪತೀ ಬಡ್ನೇಬಾರೇ
ಪೆಟ್ಟೊಗೀ ಒಳಗೆ ಬೇಕಾದ ಚಿನ್ನದೆ
ಇಟ್ಕಣೆ ರೂಪತೀ ಒಡ್ನೇಬಾರೇ । ಅಂದೇಳೇ
ಹಿಡ್ದಾನೇ ಬಳಿಯೂ ನಳಿತೋಳಾ

ಆಗೇನೇ ನಿನ್ನತೋಳು ಸುವೀವರ್‍ನ ಸುಕಿವರ್‍ನಾ[೨೮]
ಈಗೇನೇ ನಿನ್‌ತೋಳು ಬಲೀದಾವೇ[೨೯]

---

೨೫. ಬತ್ತದ ಗದ್ದೆ ೨೬. ಹೊರಟಳು ೨೭. ಎಳೆದನು ೨೮. ಕೋಮಲ ೨೯. ಗಟ್ಟಿ

ನಿನ್ನಕ್ಕನಮನಿಯಾ ಕಂಡಗ ಬತ್ತವಾ
ಒಬ್ಬಳೇ ತಾನೂ ತೊಳದೀದೇ । ಗೀಜಗನೆ
ಅದಕಾಗೇ ತನ್ನತೋಳು ಬಲೀದಾವೇ.

ಯಾರೂ ಕೂತರು ಈ ಮಂಚ ಗಣಿಲನ್ನಾ
ಪಾವೂಡೀ ಕಾಲಾ ಕಲಿಭೀಮ । ಕೂತರೆ
ಈಮಂಚಾ ಗಮ್ಮೋ ಗಣೀಲನುಗು । ಅಂದೇಳೆ ।
ಹೇಳಿ ಆಚಾರೀ ಗೆಯೀದಾನೆ । ಅಂಬುದ್ನು ಬೀಮನು
ಹೇಳಿ ಆಚಾರಿ ಗೆಯ್ದಾನೆ ಅಂಬುದ್ನು ಬೀಮನು

ಸೆಳ್ಳುಗರೀಲವನಾ ಸಿಗುಳೆತ್ತೆ । ಬೀಮಯ್ಯ
ಮುರ್‌ಕವ್ರಹಾದ್ಯಲ್ಲೇ[೩೦] ನಿಲಸಾನೇ । ರೂಪತಿ
ರಗತದ[೩೧] ಬೊಟ್ಟೊಂದ್ ಇಡೋವಾಳೇ ರೂಪತಿ
ತನ್ನಾ ಅರಮನೆಗೇ ನೆಡದಾಳೇ ।
ತನ್ನಾಲರಮನಗೇ ನೆಡದಾಳೆ ರೂಪತಿ

ಹೋಗೀ ರಾಜಂಗ್ಳ ನೆಗದತ್ತೇ । ರೂಪತಿ
ಮಾಳುಗಿ ಒಳಗೇ ನೆಡದಾಳೇ । ರೂಪತಿ
ಲಾಗೊಂದು ಮಾತಾ ನುಡೀದಾಳೆ.

ರೂಪತ್ ಅಂಬೆಸರು ಇಲ್ಲಂದಿತ್ತಾಗಿರಲೇ
ಬೀಮಾ ಅಂಬೆಸ್ರು ನೆಡೀಯಾಲೇ । ಲಂದ್ ಬೀಮನು
ರೂಪತೀ ಪಟ್ಟೀ ಕೊಡೋವಾನೇ । ಬೀಮನು,
ರೂಪತೀ ಆಭರಣಾ ಕೊಡೊವಾನೇ ।

ರೂಪತಿ ಚಿನ್ನಾ ಕೊಡೋವಾನೇ । ಬೀಮನು
ರೂಪತಿಬೀಮಾ ಚಂದದಲೇ ಇರೋವಾರೇ
ಇಂದಿಗೆ ಹರಹರ ಇಂದಿಗೆ ಸಿವಾಸಿವಾ
ಇಂದೀಗೆ ಈ ಹಾಡು ಮುಗತಾಯ

ಈ ಹಾಡಾ ಹೇಳ್ದಗ್ಗೂರ್ ಸೆರ್‌ದನೀತಂದಗ್ಗೂರ್[೩೨]
ಎತ್ತೂಡಲೇ[೩೩] ಬತ್ತಾ ಬೆಳಿಯಲೆ । ಈ ಹಾಡಾ
ಚಿತ್ತಯ್ಸೆ ಕೇಳ್ದರು ಕಲೀಯಲಿ ।

---

೩೦. ಮೂರು ಹಾದಿಕೂಡಿದಲ್ಲಿ ೩೧. ರಕ್ತದ ೩೨. ಜೊತೆ ಧ್ವನಿ ಕೂಡಿಸಿದವರಿಗು ೩೩. ಎತ್ತು ಹೂಡಲಿ

ಈ ಹಾಡಾ ಹೇಳ್ದರ್ಗ್ರೂ ಸೆರ್‌ದನಿ ತಂದರ್ಗ್ರೂ
ದನ ಕರಯಲೆ ಧಾನ್ಯಾ ಬೆಳೀಯಲೆ । ಈ ಹಾಡಾ
ಚಿತ್ತಯ್ಸೆ ಕೇಳ್ದರು ಕಲಿಯಲೆ

ಚಂಬುಚಂಬು ತುಂಬೆ ಚಂಬನ ಮುಚ್ಚಳ ತುಂಬೆ ।
ಚಂಬನ ಬಾಯೀಗೇ ತರಳಾ[೩೪]ತುಂಬೇ । ಬೀ । ದಂತೆ
ತುಂಬಿರಲೆ ನಮ್ಮಾ ಮನದಲ್ಲೆ । ಈ ಹಾಡು
ಬರತಿರಲಿ ಹಬ್ಬಾ ಮೊದವೀಗೇ

ಈ ಹಾಡಾ ಹೇಳ್ದರ್ಗೆ ಸೆರ್ದನೀ ತಂದರ್ಗೆ
ಹಾದೀ ಗೊಕನದಾ ಸಿಮಗಂಗೆ । ತೀರುತವಾ
ಹೋಗೀ ಮಿಂದಟ್ಟು ಪಲವುಂಟೆ

ಗಿಂಡೀ ಗಿಂಡೀ ತುಂಬೇ ಗಿಂಡೀಉದ್ಕಾ ತುಂಬೇ
ಗಿಂಡೀ ಬಾಯೀಗೇ ತರಳಾ ತುಂಬೇ । ಬಿ । ದಂತೆ
ತುಂಬಿರಲೆನಮ್ಮಾ ಮನದಲ್ಲೆ । ಈ ಹಾಡು
ಬರತಿರಲೆ ಹಬ್ಬಾ ಮೊದವೀಗೆ

೩೪. ತಳಿರು

ಅತ್ತಗ್ ಮೈದ್ನಿ

ಅತ್ತಗ ಮಯ್ದುನಿ ಒಟ್ಟಗ ಮಜ್ಜಲಗುಂಡೇ
ಸೀಗೆ[೧] ಬಾಗ್ಯವ ಹರದಾರೆ । ಅತ್ತಗ ಮಯ್ದ್ನಿ
ಮೂಡಣ ಗಂಗೀಗೇ ನೆಡದಾರೆ । ಅತ್ತಗ ಮಯ್ದ್ನಿ
ಗಂಗೆ ತಡಿಯಲ್ಲೇ ನಿಲೋೀವಾರೆ । ಅತ್ತಗಮಯ್ದಿ
ಕಟ್ಟದ ಸೆರಮುಡಿಯಾ ಸೆಡೋೀಲಿಸಿ । ಅತ್ತಗಮಯ್ದ್ನಿ
ಸೇಗೆ ಬಾಗ್ಯವ ತಲಗುತ್ತೇ । ಅತ್ತಗ್ಮಯ್ದ್ನಿ
ಮೂಡಣ ಗಂಗೀಯಾ ಇಳದಾರೆ । ಅತ್ತಗ್ಮಯ್ದ್ನಿ
ಗಂಗೀಯಾ ಜಲವಾ ಇಳವಾ ಅತ್ತಗ ಮೈದ್ನಿ
ಗಂಗೀಯಾ ಜಲವಾ ಮುಳಕೆದ್ದೆ । ಅತ್ತಗಮಯ್ದ್ನಿ
ಆಗೊಂದು ಮಾತಾ ನುಡಿದಾರೆ ।
ಮಿಂದೊಗದಾರೆ[೨] ಮಿಂದ್ಮುಡಿಯುಟ್ಟಾರೆ ।
ಮಿಂದೀ ಸೆಳಗೆಂಟಾ ಇಡೋೀವಾರೆ । ಅತ್ತಗಮಯ್ದ್ನಿ
ಗಂಗೀಗೇ ಕಯ್ಯಾ ಮುಗೀದಾರೆ । ಅತ್ತಗಮಯ್ದ್ನಿ
ಗಂಗೀಯಾ ದಿಡವಾ ನೆಗದತ್ತೇ । ನಿಲ್ಲೂರೊಟಗೇ[೩]
ಅತ್ತೇ[೪] ಮಾಯ್ನಣ್ಣೆ ಬಳದೇ ಬಂದೇ ।
ಅತ್ತೇ ಮಾಯ್ನಣ್ಣು ಬಳ್ದ ಬಂದೂ ಸೂಬದ್ರಿ
ತಿರಗೇ ನೋೀಡಿದಳೆ ಅರಗೊಮ್ಮೆ । ಸುಬದ್ರಿ
ಗಂಗೀಯಾ ಜಲವಾ ಇಳೋೀದಾಳೆ । ಅತ್ತಗಮಯ್ದ್ನಿ
ಮೊಳಕಾಲ್ ನೀರ್ಗೋೀಗೆ[೫] ಹಿಡತಂದೇ । ಸೂಬದ್ರಿ
ಗಂಗೀಯಾ ದಿಡವಾ ನೆಗದತ್ತೇ । ಸೂಬದ್ರಿ
ಆಗೊಂದೂ ಮಾತಾ ನುಡೀವಾಳೆ ।
ಕತ್ತಿಲ ಕೂವಂದ್ರು[೬] ಕತ್ತಿನೂತರಲಿಲ್ಲಾ
ಸಿಳ್ಳುಗರಲಿ ಸಿಗದಿ ಸಿಗಳೆತ್ತೇ[೭] ।
ಅತ್ತಗ ಗೊಯ್ಟಾ[೮] ತಿಂದೇಮಯ್ದಿನ್ ಸೊಪ್ಪಾತಿಂದೇ
ಸೊಪ್ಪಾ ತಿಂದವರಿಗೆ ಪಲಾ ಹೆಣ್ಣೇ । ಅತ್ತೀಗೇ

೧. ?, ೨. ಸ್ನಾನ ಮಾಡಿ, ವಸ್ತ್ರ ಒಗೆದು ೩. ನಿಲ್ಲುವಷ್ಟರಲ್ಲಿ ೪. ಆ ಕಡೆ ೫. ನೀರಿಗೆ ಹೋೀಗಿ ೬. ಕೊಯ್ಯುವೆನೆಂದರೆ ೭. ಹೋಳುಮಾಡಿ ೮. ಗೊರಟು

ಗೊಯ್ತಾ ತಿಂದರಿಗೆ ಪಲಾಗಂಡೇ ।
ಅಟ್ಟೊಂದು ಮಾತಾ ಕೇಳೀತೋ ಮಾದೇವಿ
ಆಗೊಂದು ಮಾತಾ ನುಡೀದಾಳೆ ।
ಅತ್ತಗ್ ಗಂಡ್ಹೆತ್ತೀ ಮಯ್ದೂನಿ ಹೆಣ್ ಹೆತ್ತೇ
ಮಾಡೂವೊ ಮುದ್ದೂ ಮದವೀಯೆ । ಅತ್ತೀಗೆ
ನೋಡೂವೊ ಒಂದೂ ಅರತ್ಯವ್ ।
ಅಟ್ಟಂದು ಮಾತು ಕೇಳಿತು[೧೦] ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಅತ್ತೀ ಅತ್ತೀ ಸಾಕ್ಷಿ ಅತ್ತೀ ಮರವೇ ಸಾಕ್ಷಿ
ನಾಮೆಟ್ಟೀ ನಿಂದಾ ಜಲಸಾಕ್ಷಿ । ಅತ್ತೀಗೆ
ಮಾಡೂವೊ ಮುದ್ದೂ ಮದವೀಯೇ । ಅತ್ತೀಗೆ
ನೋಡೂವೊ ಒಂದೂ ಅರತ್ಯವೇ । ಅಂದೇಳಿ
ತಮ್ಮಾಲರಮನೆಗೆ ಸವನಾರೆ[೧೧] । ಅತ್ತಗಮಯ್‌ದ್ನಿ
ಕಲ್ಲಾ ದಣಪೀಗಾಗೇ[೧೨] ಬರವಾರೆ ।
ಕಲ್ಲಾ ದಣಪೀಗಾನೇ ಬರುವದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಅತ್ತಗ್ ಗಂಡ್ಹೆತ್ತೀ ಮಯ್ದೂನಿ ಹೆಣ್‌ಹೆತ್ತೇ
ಮಾಡೂವೊ ಮುದ್ದೂ ಮದವೀಯೆ । ಅತ್ತೀಗೆ
ನೊಡೂವೊ ಒಂದೂ ಅರತ್ಯವೇ ।
ಅಟ್ಟೊಂದು ಮಾತ ಕೇಳೀತು ಮಾದೇವಿ
ಆಗೊಂದು ಮಾತಾ ನುಡೀದಾಳೆ ।
ಪಾಂಡೋರು ಬಿತ್ತದ[೧೩] ಬೆಳೆ ಆನಂದನಾಗಲೆ
ಮಾಡೂವೊ ಮುದ್ದೂ ಮದವೀಯೇ । ಅತ್ತೀಗೆ
ನೊಡೂವೊ ಒಂದೂ ಅರತ್ಯವೇ ।
ಅತ್ತೀ ಅತ್ತೀ ಸಾಕ್ಷಿ ಅತ್ತೀ ಮರವೇ ಸಾಕ್ಷಿ
ನಾವ್‌ನಿತ್ತ ಪಲದ ತಲೇಸಾಕ್ಷಿ । ಅತ್ತೀಗೆ
ಮಾಡೂವೊ ಮುದ್ದೂ ಮದವೀಯ । ಅತ್ತೀಗೆ
ನೋಡೂವೊ ಒಂದೂ ಅರತ್ಯವ । ಅಂದೇಮಾದೇವಿ
ತನ್ನಾಲರಮನಗೆ ನೆಡದಾಳೆ ।
ತನ್ನಲರಮನೆಗೆ ನೆಡುವದ್ನು ಸೂಬದ್ರಿ
ತನ್ನಾಲರಮನಗೇ ನೆಡದಾಳೆ ।

---

೯. ಪ್ರೀತಿಯನ್ನು ೧೦. ಕೇಳಿದಳು ೧೧. ಹೊರಟರು ೧೨. ಹಿತ್ತಿಲ ಬಾಗಿಲು ೧೩. ಬಿತ್ತಿದ

ಒಂದೂ ತಿಂಗಳಾಗೀತೆ ಸೂಬದ್ರಿಗೆ
ಒಂದೆಲಿ ಬೆಳವಾ ಎಳಬಾಳಿ । ಹಣ್ಣೀಗೆ
ಎಳಿಯಳು ಸೂಬದ್ರಿ ಕಡಬಯಕೆ
ಎರಡೂ ತಿಂಗಳಾಗೀತೆ ಸೂಬದ್ರಿಗೆ
ಎರಡೆಲಿ ಬೆಳೆವಾ ಎಳಲಿಂಬೆ । ಹಣ್ಣೀಗೆ
ಎಳಿಯಳು ಸೂಬದ್ರಿ ಕಡಬಂಯಕೆ[೧೪] ।
ಮೂರು ತಿಂಗಳಾಗೀತೆ ಸೂಬದ್ರಿಗೇ
ಮೂರೆಲಿ ಬೆಳವಾ ಎಳಕಂಚಿ ಹಣ್ಣಿಗೆ
ಎಳಿಯಳು ಸೂಬದ್ರಿ ಕಡ ಬಯಕೆ ।
ನಾಲ್ಕು ತಿಂಗಳೇ ಆಗೀತೇ ಸೂಬದ್ರಿಗೇ
ನಾಲ್ಕೆಲಿ ಬೆಳವಾ ಎಳಿಈಳೆ ।
ನಾಕೆಲಿ ಬಳುವಾ ಎಳಿ ಈಳಿ ಹಣ್ಣಿಗೇ
ಎಳಯಳು ಸೂಬದ್ರಿ ಕಡಬಂಯ್ಕೆ
ಅಯ್ದು ತಿಂಗಳೆ ಆಗೀತೆ ಸೂಬದ್ರೀಗೆ
ಅಂಗಯ್ಯ ಉಪ್ಪೂ ಹುಳಚೀಯ । ಹಣ್ಣಿಗೇ
ಎಳಯಳು ಸೂಬದ್ರಿ ಕಡ ಬಂಯ್ಕೆ ।
ಆರು ತಿಂಗಳ ಆಗೀತೆ ಸೂಬದ್ರೀಗೆ
ಪಟ್ಟೀಯ ಮ್ಯೆನೆ ಕಡ ಬಂಯ್ಕೆ ।
ಏಳು ತಿಂಗಳ ಆಗೀತೆ ಸೂಬದ್ರೀಗೆ
ಹೂಂಗೀನ ಮ್ಯೆನೆ ಕಡ ಬಂಯ್ಕೆ
ಎಂಟೂ ತಿಂಗಳ ಆಗೀತೆ ಸೂಬದ್ರೀಗೆ
ಚಿನ್ನದ ಮ್ಯೆನೆ ಕಡ ಬಂಯ್ಕೆ
ಒಂಬತ್ತು ತಿಂಗಳ ತುಂಬೀತೆ ಸೂಬದ್ರೀಗೆ
ಸ್ಯೆಮೂಗಿ[೧೫] ಮ್ಯೆನೇ ಕಡ ಬಂಯ್ಕೆ । ಅರಜಿಣಗೇ
ವನವಾಸಕೋಗೂವಾ ದಿನಬಂತೇ । ಅರಜೀಣ
ತನ್ನಾತಾಯವ್ವಿಯಾ ಕರದಾನೆ ।
ಒಂದ ಕರವೀಗೆ[೧೬] ಬಂದಾಳೇ ತಾಯವ್ವಿ
ನಿಂದಳೇ ಅರಜುಣನಾ ಒಡನಲ್ಲೇ । ತಾಯವ್ವಿ
ಏನು ಕಾರಣಲೇ ಕರದೀಯೋ ।
ಕರದಂಬು ಕಾರ್ಯಾಸಯ್ ಕಿರದಂಬ್ಯೆಸರಿಲ್ಲಾ[೧೭]
ಬಂಯ್ಕೀಯೂಟಕೇ ಅನೂ ಮಾಡೇ । ತಾಯೇಕೇಳೇ

೧೪. ಬಹಳ ಆಶೆ ೧೫. ಸೇವಿಗೆ ೧೬. ಕರೆಗೆ ೧೭. ಕರೆದ ಕಾರಣ ಸರಿ, ಕಿರು ಬೇಸರವಿಲ್ಲವಷ್ಟೇ

ವನವಾಸಕೋಗೂವಾ ದಿನ ಬಂತೆ ।
ಕಲ್ಲಾಕಡಬಾ ಕಟ್ಟೇ ಮುಳ್ಳಾ ಸ್ಯೆಮಗಿಮಾಡೇ[೧೮]
ಬಂಯ್ಕೀಯೂಟಿಕೆ ಅನೂ ಮಾಡೇ । ತಾಯೇಕೇಳೇ
ವನವಾಸಕೋಗೂವಾ ದಿನಾ ನಂತೇ ।
ಅಟ್ಟೊಂದು ಮಾತು ಕೇಳೀತೋ ತಾಯವ್ವಿ
ಮಾಳೂಗಿ ಒಳಗೆ ನೆಡದಾಳೆ ।
ಅಟ್ಟದ ಮ್ಯೆನೀನಾ ಪುಟ್ಟೂ ಸೆಣ್ಣಕ್ಕೀಯಾ[೧೯]
ಅನ್ನಾಮ್ಯೆಗರಕೆ[೨೦] ಅನೂಮಾಡೇ
ಮಾಳುಗಿ ಒಳಗೀನಾ ಹಾಲೂ ಹಳ್ಳಗನಕ್ಕಿ[೨೧]
ಹಾಲೂ ಪಾಯಸಕ್ಕೇ ಅನೂ ಮಾಡೇ ।
ಹಿತ್ತಲ ಕಣಕೀನಾ[೨೨] ಬೆತ್ತಾ ಚೆಂಬರಗೀಯಾ[೨೩]
ಬೊಟ್ಟೆಣ್ಣಿ ಕಿಟ್ಟೇ ಬೆಗರಿಸೇ[೨೪] ।
ಬೇಲೀಮ್ಯೆನೀನಾ ದಾರೇ ಹೀರೀಕಾಯಾ
ದಾರೀಯ ನೊರಸೇ ಮೆಣಸಿಟ್ಟೇ ।
ಹರದಬ್ಬಾಗಿಲು[೨೫] ಮುರದಬ್ಬು ತೊಂಡೀನೇ
ತಲವೇರು ಸೊಪ್ಪೇ ಬಸಳೀಯೆ ।
ತಲವೇರು ಸೊಪ್ಪು ಬಸಳಿ ಕೊಡಿಯಾ ತಂದು
ತುಪ್ಪಾದಲ್ಲದರಾ ಹದಮಾಡೆ ।
ಕಲ್ಲಾಕಡಬಾ[೨೬] ಕಟ್ಟೇ ಮುಳ್ಳಾ ಸ್ಯೆಮಗಿ ಮಾಡೇ
ಬಂಯ್ಕೀಯೂಟಕೇ ಅನೂ ಮಾಡೇ ।
ಎಲ್ಲಾ ಗುಳ್ಳೀಕಾಯಿ ಎಲ್ಲಾ ನೆಲ್ಲೀಕಾಯಿ
ಕಲ್ಲೊಡದೇ ಬೆಳವಾ ಕಣಲಿಯೇ[೨೭]
ಕಲ್ಲೊಡದೇ ಬೆಳುವಾ ಕಣಲೀಯಾ ಸೂಸಿಕದಾ
ಎಲ್ಲಾ ಮ್ಯೆಗರಕು ಕಡರಿತೇ ।
ಎಲ್ಲಾ ಮ್ಯೆಗರಕು ಕಡರಿತಿ ಕಜ್ಜಯ್ಯಾ
ಅನು ಮಾಡ್ಯಾಳೊಂದೂ ಗಳಗ್ಯಲ್ಲೇ । ತಾಯವ್ವಿ
ಸೆಣ್ಣ ಗಿಂಡ್ಯಲ್ಲಿ ಉದಕವೇ । ತಡಕಂಡಿ
ಮಾಳಗ್ಗಿಂಡ್ಹೆರಗೇ ಬರವಾಳೆ । ತಾಯವ್ವಿ
ಮಗನಾ ಒಡನೋಗಿ ನಿಲೋವಾಳೆ । ತಾಯವ್ವಿ
ಕೊಟ್ಟಾಳೇ ಕಯ್ಯಾ ಉದಕಾವೇ ।

---

೧೮. ಸೇವಿಗೆ ಮಾಡು ೧೯. ಸಣ್ಣಕ್ಕಿಯನ್ನು ೨೦. ಮೇಲೋಗರಕ್ಕೆ ೨೧. ಒಂದು ಬಗೆಯ ಬಿಳಿಯಕ್ಕಿ ೨೨. ಕಡೆಯ ೨೩. ಕೆಂಪು ಹರಿವೆ. ೨೪. ಎಣ್ಣೆಯಲ್ಲಿ ಹುರಿ ೨೫. ಹರಿದು ಹಬ್ಬುವ ಹಾಗಿಲು ೨೬. ಕಡುಬು. ೨೭. ಬಿದಿರು ಮೊಳಿಕೆ

ತಾಯೀ ಕೊಟ್ಟುದಕಾ ತಟ್ಟನೇ ತಡದಾ
ಕೂತಾ ಗದ್ದಗಿಯಾ ಜಡದೆದ್ದೇ । ಅರಜೀಣ
ಮಾಳಗ್ಗಿಂದ್ದೆರಗೆ ಬಡವಾನೆ । ಅರಜೀಣಾ
ಮಾಳೂಗಿ ಒಳಗೆ ನೆಡದಾನೆ । ತಾಯವ್ವಿ
ತಿರಳೂ ಬಾಳೆಲಿಯಾ ತೊಳದಿಟ್ಟೇ ।
ತಿರಳೂ ತಾಳೆಲಿಯಾ ತೊಳದಿಟ್ಟೇ ತಾಯವ್ವಿ
ಹೊನ್ನಾ ಮಣಿಯೊಂದಾ ಮಡೋಗಾಳೆ ।[೨೮]
ಹೊನ್ನಾಮಣೆಯೊಂದು ಮಡಗ್ವದನು ಅರಜೀಣಾ
ಮಣಿಯಾ ಮ್ಯೆನ್ಹೋಗೇ ಕುಳತಾನೆ ।
ಮಣಿಯಾ ಮ್ಯೆನ್ಹೋಗಿ ಕುಳವದ್ನು ತಾಯವ್ವಿ
ಅನ್ನಾ ಮ್ಯೆಗರವಾ ಬಡಸಾಳೆ । ತಾಯವ್ವಿ
ಹಾಲೂ ಪಾಯಿಸವಾ ಬಡಸಾಳೆ । ತಾಯವ್ವಿ
ಸ್ಯೆಮಗಿ ಕೊಟಗೀಯಾ ಬಡಸಾಳೆ । ತಾಯವ್ವಿ
ತುಪ್ಪ ಸಕ್ಕರಿಯಾ ಎರದಾಳೆ ।
ತುಪ್ಪಾ ಸಕ್ಕರಿಯಾ ಎರದೀ ತಿರಗೂರಟಗೇ
ಉಂಡೆದ್ದಾರೊಂದೂ ಗಳಗ್ಯಲ್ಲೇ ।
ಉಂಡಾನೂಟಾವಾ ತೊಳದನೆ ಎಂಜಲಮೊಕವಾ
ಪಟ್ಟೆ ಮಂಚದಲೆ ಕುಳತಾನೆ ।
ಪಟ್ಟೆ ಮಂಚದಲೆ ಕುಳವದನು ತಾಯವ್ವಿ
ತಮ್ಮೊಟಕಲ್ಲೇ ಎಡೆ ಮಾಡೇ
ತಮ್ಮೊಟಕಲ್ಲೇ ಎಡೆ ಮಾಡಡಗೀ ಬಡಸೇ
ಊಟಕೆ ಹೋಗಿ ಕುಳತಾರೆ । ಅತ್ತೆಸೊಸೆ
ಉಂಡೆದ್ದರೊಂದು ಗಳಗ್ಯಲ್ಲೇ ।
ಉಂಡಾರೂಟಾವಾ ತೊಳದರೆ ಎಂಜಲಮೊಕವಾ
ಎಂಜಲ ಮಯ್ಲುಗಿಯಾ ತೆಗದಾಳೇ । ತಾಯವ್ವಿ
ಬೆಳ್ಳೀ ಸಂಬಳಗಿ[೨೯] ಬೆಳೀಯೆಲೆ ।
ಬೆಳ್ಳೀ ಸಂಬಳಗಿ ಬೆಳಿಯೆಲಡಕೀ ಬಾಗಾ[೩೦]
ಹಾಲಿನಲ್ಲಿ ಬೆಂದಾ ತೆನೀಸುಣ್ಣಾ । ತಡಕಂಡಿ
ಮಾಳಗ್ಗಿದ್ದೆರಗೇ ಬರೋವಾಳೆ ।
ಮಾಳಗಿಂದ್ದೆರಗೆ ಬರುವಾಳು ತಾಯವ್ವಿ

---

೨೮. ಇಡುತ್ತಾಳೆ ೨೯. ಪೆಟ್ಟಿಗೆ ೩೦. ಹೋಳು

ಮಗನಾ ಒಡನೋಗೆ ಕುಳತಾಳೆ । ತಾಯವ್ವಿ
ಮಗಗೊಂದೀಳ್ಯವಾ ಕೊಡೋವಾಳೆ । ತಾಯವ್ವಿ
ತಾನೊಂದೀಳ್ಯವಾ ಮೆಲೋವಾಳೆ ।
ತಾಯೀ ಕೋಟ್ಟೀಳ್ಯ ತಟ್ಟನೇ ತಡದಾನೆ
ಸೋದೀಸೊಂದೆಲಿಯಾ ಮೆಲೋವಾನೆ ।
ಎಲಿಯೊಂದ ತಿಂದಾನೇ ರಜವಲ್ಲೇ[೩೧] ಉಗಳಾನೇ
ಕುಳತಾ ಗದ್ದಗಿಯಾ ಜಡದೆದ್ದೇ । ಅರಜೀಣ
ಮಾಳೂಗೀ ಒಳಗೇ ನೆಡದಾನೆ ।
ಮಾಳೂಗೀ ಒಳಗೇ ನೆಡದಾನೇ ಅರಜೀಣ
ಅಟ್ಟಹತ್ತಿ ಪೆಟ್ಟಗಿಯಾ ತೆಗದಾನೆ । ಅರಜೀಣ
ಮೆಟ್ಟೀ ಬೀಗವಾ ತೆರೀದಾನೆ । ಅರಜೀನ
ಮುಚ್ಚೀಳ ತೆಗದೇ ಕಡೆಗಿಟ್ಟೆ । ಅರಜೀಣ
ಪಟ್ಟೆಜೋತರವಾ ನೆರ ದುಟ್ಟೇ । ಅರಜೀಣ
ನೆಡವೀಗೆ ನ್ಯವಳವಾ ಇಡವಾನೆ । ಅರಜೀಣ
ಬೆರಳೀಗುಂಗಿಲವಾ ಇಡವಾನೆ । ಅರಜೀಣ
ಮುತ್ತನ ನೆಳ್ಳಂಗಿ[೩೨] ಬುಜಕಟ್ಟೇ । ಅರಜೀಣ
ಮುತ್ತನ ಮುಂಡಸವ ತಲೆ ಸುತ್ತೇ । ಅರಜೀಣ
ತನ್ನಾ ಕಯ್ಚೆಂಚೀ ಹಡಪಾಕೇ ।
ತನ್ನಾ ಕಯ್ಚೆಂಚಿ ಹಡಪಾಕಿಟ್ಟೀಕಂಡೇ
ಪೆಟ್ಟಗಿ ಬಾಯಲ್ಲೇ ಮಡಗಾನೆ । ಅರಜೀಣ
ಮೆಟ್ಗಿಂದು ಕೆಳಗೆ ಇಳದಾನೆ । ಅರಜೀಣ
ಮಾಳಗ್ಗಿಂದೆರಗೆ ಬರವಾನೆ । ಅರಜೀಣ
ಸವ್ನಬಂದಿ[೩೩] ಬಾಗಲ್ಲೇ ನಿಲೋವಾನೆ
ಸವ್ನಬಂದಿ ಬಾಗಲ್ಲಿ ನಿಲವದ್ನು ತಾಯವ್ವಿ
ಕುಳತಾ ಗದ್ದಗಿಯಾ ಜಡದೆದ್ದೇ । ತಾಯವ್ವಿ
ಮಾಳೂಗಿ ಒಳಗೇ ನೆಡದಾಳೆ । ತಾಯವ್ವಿ
ಪೆಟ್ಟೂಗಿ ಬಾಯಾ ತೆಗದಾಳೆ । ತಾಯವ್ವಿ
ತನ್ನಾ ಹೂಂವರಣಾ[೩೪] ನೆರದುಟ್ಟೇ । ತಾಯವ್ವಿ
ಮಾಳಗ್ಗಿಂದ್ದೆರಗೇ ಬರವಾಳೇ । ತಾಯವ್ವಿ
ಮಗನಾ ಒಡನೋಗಿ ನಿಲೋವಾಳು ।

೩೧. ಕವಳದ ನೀರಸ ಹುಡಿ ೩೨. ಪಾರದಶ್ಕ ಅಂಗಿ ೩೩. ಹೊರಬಂದು ೩೪. ಹೂಬಣ

ಮಗನಾ ಒಡನೋಗಿ ನಿಲವದ್ನು ಸೂಬದ್ರಿ
ಮಾಳಗ್ಗಿಂದ್ಹೆರನೇ ಬರೋವಾಳೆ । ಸೂಬದ್ರಿ
ಅತ್ಕುಂತೀ ಒಡನೋಗೇ ನಿಲೋವಾಳೆ ।
ಅತ್ತ್ಯೋರ್ ಅತ್ತ್ಯೋರೆ ನೀವ್ ವನವಾಸಕೋಯ್ತ್ತೀರಿ[೩೫]
ನಾಬತ್ತೆ ನಿಮ್ಮಾ ಒಡನಲ್ಲೆ ।
ಅಟ್ಟೊಂದು ಮಾತಾ ಕೇಳಾದೇ ಕುಂತಿದೇವಿ
ಆಗೊಂದು ಮಾತಾ ನುಡೀದಾಳೆ ।
ನಾವ್ ಹೋಗು ಹಾದೀಲಿ ತಂಪಿಲ್ಲಾ ನೆರಳಿಲ್ಲಾ
ಹುಟ್ಟಿದ ಕಂದಾಗೆಲ್ ಒರಸೂವೆ[೩೬]
ಹುಟ್ಟಿದ ಕಂದಾಗೆಲ್ ಒರಸೂವೆ ಅಂಬದ್ನು
ಆಗೊಂದು ಮಾತಾ ನುಡೀದಾಳೆ ।
ಅತ್ತೀಯಾ ಮರಕೇ ನಿತ್ತೀ ತೊಟ್ಟಲಕಟ್ಟೇ
ಅತ್ತೀಯಾ ಸೊಪ್ಪೂ ತಲೆದಿಂಬೆ । ಹಾಸಗಿಮಾಡೆ
ಹುಟ್ಟಿದ ಕಂದನ ಒರಸೂವೆ । ಅತ್ತೀಯೋರೆ
ಕಂದನ ಚೆಂದದಲೆ ಸಲಗೂವೆ ।
ಆಲಾದಾ ಮರಕೆ ಆಲದ ತೊಟ್ಲ ಕಟ್ಟೀ
ಆಲಾದಾ ಸೊಪ್ಪೂ ತಲದಿಂಬೆ । ಹಾಸಗಿಮಾಡೇ
ಹುಟ್ಟಿದ ಕಂದನ ಒರಸೂವೆ । ಅತ್ತೀಯೋರೆ
ನಾಬತ್ತೆ ನಿಮ್ಮ ಒಡನಲ್ಲೆ ।
ನಾವ್ಹೋಗೂ ಹಾದೀಲಿ ತಂಪಿಲ್ಲಾ ನೆರಳಿಲ್ಲಾ
ಹುಟ್ಟಿದ ಕಂದಗೆ ಯಾರೂ ಇಲ್ಲಾ । ಅಂದಾಳೆ
ಆಗೊಂದು ಮಾತಾ ನುಡೀದಾಳೆ ।
ಬೇಡಗರಾ[೩೭] ಮನಿಯಲ್ಲೆ ಜೋಡೆಮ್ಮೆ ಕರವಾದೇ[೩೮]
ಬೇಡೀ ತಂದ್ಹೊವೂ ನೊರೆ ಹಾಲೆ । ಅತ್ತೀಯೋರೆ
ಕಂದನ ಚಂದದಲೆ ಸಲಗೂವೊ ।
ಅಟ್ಟೊಂದು ಮಾತು ಕೇಳೀತು ಅತ್ಕುಂತಿ
ಆಗೊಂದು ಮಾತಾ ನುಡೀದಾಳೆ ।
ಮಾತಾ ಕೇಳದ ಮಡದಿ ಯಾಕ್ ತಂದೆ ಅರಜೀಣ
ಮಾತೋ ಮದ್ದಳಿಯಾ[೩೯] ಹುಳಸೀಯೋ ।
ಮಾತೋ ಮದ್ದಳಿಯಾ ಹುಳಸೀಯಾ ಮರತಂಕೇ

೩೫. ಹೋಗುತ್ತೀರಿ ೩೬. ಮಲಗಿಸುವೆ ೩೭. ಬೇಡರ ೩೮. ಕರೆಯುವದು ೩೯. ಮದ್ದಳೆಯ

ದೂಕೀ ಬಾರದರಾ ತವರೀಗೆ । ಅಂಬದ್ನು
ನಾರಾಯ್ಣ ದೈವಲ್ಲೇ ಬರವಾನೆ । ನಾರಾಯ್ಣದೈವಾ
ಆಗೊಂದು ಮಾತಾ ನುಡಿದಾನೆ ।
ಬಳ್ಳಿಗೆ ಕಾಯ್ ಹೊರಿಯಾ[೪೦] ತಾಯೀಗೆ ಮಕ್ಕಳ್ ಹೊರಿಯಾ
ನನಗೇ ನನತಂಗೀ ಹೊರೀಯೇನೊ । ಬಾವಾಕೇಳೋ
ಕಳಗಸಕೊಡದರಾ ತವರೀಗೆ ।
ಅಟ್ಟೊಂದು ಮಾತಾ ಕೇಳಾನೇ ಅರಜೀಣ
ಮಡದೀಯ ಕರದೇ ನುಡೀಮಾತೇ ।
ಮಡದೀಯ ಕರೆದು ಏನಂದಿ ನುಡಿಮಾತೇ
ಹೋಗೀಬಾ ನಿನ್ನಾ ತವರೀಗೆ । ಅಂಬದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಅತ್ತ್ಯೋರ್ ಅತ್ತ್ಯೋರೆ ನೀವಾ ವನವಾಸಕೋಯ್ತೀರಿ
ಹುಟ್ಟಿದ ಕಂದಗೇ ಹೆಸರೇನೆ ।
ಅಟ್ಟುಂದು ಮಾತಾ ಕೇಳೀತು ಕುಂತೀದೇವಿ
ಆಗೊಂದು ಮಾತಾ ನುಡೀದಾಳೆ ।
ಅರಜಿಣ್ಣ ಮಗನನ್ನೆ ಕುಂತೀ ಮೊಮ್ಮಗನನ್ನೆ
ಅಬೀಮನ್ಯು ಅಂತೆ ಹೆಸರಿಡೆ । ಅಂದೇಳೇ
ವನವಾಸಕಾಗೇ ನೆಡದಾರೆ ।
ವನವಾಸಕಾಗಿ ನೆಡವದ್ನು ನಾರಾಯ್ಣದೈವಾ
ರಾಜಂಗಳ ಮೆಟ್ಟಾ ಇಳದಾನೆ ।
ರಾಜಂಗಳ ಮೆಟ್ಟಾ ಇಳವದ್ನು ಸೂಬದ್ರಿ
ರಾಜಂಗ್ಳ ಮೆಟ್ಟಾ ಇಳದಾಳೆ ।
ಸೂಬದ್ರಿ ಮುಂದಾಗೇ ನಾರಾಯ್ಣದೈವಾ ಹಿಂದಾಗೇ
ರಾಜೋಮಾರ್ಗದಲಿ ನೆಡದಾರೆ । ಇಬ್ಬರು
ಹೋಗೊಂದು ವನವಾ ಇಳೋದರೆ ।
ಕಡವೀನ[೪೧] ಗ್ವೊಲೆ[೪೨] ಬೋರೆದ್ದಿ ಬರುವಂಗೆ
ಇದನೋಡೋ ಅಣ್ಣಾ ಹೊಸವಂತ[೪೩]
ಅದರಾ ಹೊಸವಂತ ನಾಯೇನ ಹೈಳಲೆತಂಗಿ
ಹಿಂದಕ ಪಾಂಡೋರಾ ಕಡಗಂಟ[೪೪] । ಅಂಬದ್ನು
ಆಗೊಂದು ಮಾತಾ ನುಡೀದಾಳೆ ।

---

೪೦. ಭಾರವೆ? ೪೧. ಜಿಂಕೆ ೪೨. ಸಮೂಹ ೪೩. ಹೊಸಬಗೆ ೪೪. ದನಕರು

ನನ್ನಾ ಪಾಂಡೋರು ವನವಾಸಕೋಗರಿಯಂದೇ[೪೫]
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣಾ ತಂಗಿಗೆ ಸರಸಕ್ಹೇಳಿದ ಮಾತು
ತಂಗೀ ನೀ ಕೋಪಾ ನಿಡಬ್ಯೆಡಾ । ಅಂದೇಳೇ
ಅಲ್ಲೀಗಿಂದ್ ಮುಂದೆ ನಡದಾರೆ ।
ಹಂದೀಯಾ ಗ್ವೊಲೇ ಬೋರೇದ್ದಿ ಬರುವಂಗೇ
ಇದನೋಡೋ ಅಣ್ಣಾ ಹೊಸವಂತಾ ।
ಅದರಾ ಹೊಸವಂತಾ ನಾಯೇನ್ ಹ್ಯೆಳಲೆ ತಂಗಿ
ಹಿಂದಕ ಪಾಮಡೋರಾ ಕರೂವೆಮ್ಮೆ । ಅಂಬದ್ನು
ಆಗೊಂದು ಮಾತಾ ನುಡೀದಾಳೆ ।
ನನ್ನಾ ಪಾಂಡೋರು ವನವಾಸಕೋಗರಿಯಂದೇ
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣ ತಂಗೀಗೆ ಸರಸಕ್ಹೇಳಿದ ಮಾತು
ತಂಗೀ ನೀ ಕೋಪಾ ಬಿಡಬ್ಯೆಡಾ । ಅಂದೇಳೆ
ಅಲ್ಲೀಗಿಂದ್ ಮುಂದೆ ನೆಡದಾರೆ ।
ಕೊನಾಳಾ ಬಂದು ಕೊಡಾಕಪಿಗಳಿದ್ದೇ
ಮರಕ್ಹತ್ತಿ ಮರಕೆ ಎಸದಾವೇ ।
ಮರಕ್ಹತ್ತಿ ಮರಕೆ ಎಸವದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಕೊನಾಳಾ ಬಂದು ಮಂಗಕಪಿಗೋಳಿದ್ದೇ
ಮರಕ್ಹತ್ತಿ ಮರಕೆ ಎಸದಾವೊ । ಅಣ್ಣಯ್ಯ
ಇದನೋಡೋ ಅಣ್ಣ ಹೊಸವಂತ ।
ಅದರಾ ಹೊಸವಂತ ನಾಯೇನ್ ಹ್ಯೆಳಲೆ ತಂಗಿ
ಹಿಂದಕ ಪಾಂಡೋರಾ ಹನಮಂತ
ನನ್ನಾ ಪಾಂಡೋರು ವನವಾಸಕೋಗರಿಯಂದೇ
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣಾ ತಂಗೀಗೆ ಸರಸಕ್ಹೇಳಿದ ಮಾತು
ತಂಗೀ ನೀ ಕೋಪಾ ಬಿಡೋಬ್ಯೆಡಾ । ಅಂದೇಳಿ
ಮತ್ತೊಂದು ವನವಾ ಇಳೋದಾರೆ ।
ಹಿಣ್ನವ್ಲ[೪೬] ಗಂಡನವ್ಲ ಸಿಬ್ಬತಾಡೂವಂಗೆ[೪೭]

---

೪೫. ವನವಾಸಕ್ಕೆ ಹೋಗಿದ್ದಾರೆಂದು ೪೬. ಹೆಣ್ಣು ನವಿಲು ೪೭. ಕೂಡಾಡುವುದು.

ಇದ ನೋಡೋ ಅಣ್ಣಾ ಹೊಸವಂತಾ
ಅದರಾ ಹೊಸವಂತ ನಾಯೇನ ಹ್ಯೆಳಲೆ ತಂಗಿ
ಹಿಂದಕ ಪಾಂಡೋರಾ ಮರೀಹುಂಜ ।
ನನ್ನಾ ಪಾಂಡೋರು ವನವಾಸಕೋಗರಿಯಂದೇ
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣಾ ತಂಗೀಗೆ ಸರಸಕ್ವೇಳಿದ ಮಾತು
ತಂಗೀ ನೀ ಕೋಪಾ ಬಿಡೋಬ್ಯೆಡಾ । ಅಂದೇಳಿ
ಅಲ್ಲೀಗಿಂದ್ ಮುಂದೆ ನೆಡದಾರೆ ।
ಅಲ್ಲೀದಿಲ್ಲೀಗು ಚಿನ್ನದ ಗದನೆಟ್ಟಂತೆ
ಇದನೋಡೋ ಅಣ್ಣ ಹೊಸವಂತ ।
ಅದರಾ ಹೊಸವಂತ ನಾಯೇನ್ ಹ್ಯೆಳಲೆ ತಂಗಿ
ಹಿಂದಕ ಪಾಂಡೋರಾ ಅರಮನೆ
ನನ್ನಾ ಪಾಂಡೋರು ವನವಾಸಕೋಗರಿಯಂದೇ
ಅಣ್ಣಾ ಮೂದಲಿಯಾ ಜರದೀಯಾ ।
ಅಣ್ಣಾ ತಂಗೀಗೆ ಸರಸಕ್ವೇಳಿದ ಮಾತು
ತಂಗೀ ನೀ ಕೋಪಾ ನಿಡೋಬ್ಯೆಡಾ । ಅಂದೇಳಿ
ಬಾಳೀಯಾ ಬನವಾ ಇಳೋದಾರೆ ।
ಬಾಳೀಯಾ ಬನವಾ ಇಳವದ್ನು ಮಾದೇವಿ
ಅರಗೀ ನೋಡಿದಳೆ ಹೆರಗೊಮ್ಮೆ ।
ಅತ್ಗ ಬರು ಬರವಾ ಅಟ್‌ದೋರೇ[೪೮] ನೋಡಾಳೆ
ಆಗೊಂದು ಮಾತಾ ನುಡೀದಾಳೆ ।
ನನ್ನಂದೋಳಾದೀರೆ[೪೯] ನಂಗ್ ಬಂಯ್ಕೀತತ್ತೀತೆ[೫೦]
ನನ್ನಂದೋಳಲ್ಲಾ ಹಗೀಯೋಳೆ । ಅಂದೇಳಿ
ಬಿನ್ನಾಕೀ[೫೧] ಬಣ್ಣ ಬರದಾಳೆ । ಮಾದೇವಿ
ಮಾಳುಗಿ ಒಳಗೋಡೆ ನೆಡದಾಳೆ ।
ಮಾಳುಗಿ ಒಳಗೋಡ ನೆಡವದ್ನು ಸೂಬದ್ರಿ
ಬಂದೀ ಬಾಗಲ್ಲೇ ನಿಲವಾಳೆ ।
ಬಂದಿ ಬಾಗಲ್ಲೇ ನಿಲವದ್ನು ನಾರಾಯ್ಣದ್ಯೆವಾ
ತಂಗೀಗೆ ಉದಕಾ ಕೊಡವಾನೆ ।
ಅಣ್ಣಾ ಕೊಟ್ಟುದಕಾ ತಟ್ಟನೇ ತಡದಾಳೆ

---

೪೮. ಅಷ್ಟು ದೂರದಿಂದ ೪೯. ನನಗೆ ಬೇಕಾದವಳಾದರೆ ೫೦. ಬಯಕೆ ತರುತ್ತಿದ್ದಳು ೫೧. ಬೆನ್ನುಹಾಕಿ

ಕಾಲೂ ಸಿರಿಮೊಕವಾ ತೊಳದಾಳೆ ।
ಕಾಳೂ ಸಿರಿಮೊಕವಾ ತೊಳವದ್ನು । ಅಣ್ಣಾತಂಗಿ
ಮಾಳೂಗಿ ಒಳಗೇ ನೆಡದಾರೆ । ಅಣ್ಣಾತಂಗಿ
ಪಟ್ಟೆ ಮಂಚದಲೇ ಕುಳತಾರೆ ।
ಪಟ್ಟೆ ಮಂಚದಲೇ ಕುಳವದ್ನು ನಾರಾಯ್ಣದೈವಾ
ತನ್ನಾ ಕಯ್‌ಚೆಂಚಿ ಬಿಡಸಾನೆ । ನಾರಾಯ್ಣದೈವಾ
ತಂಗೀಗ್ ಒಂದೀಳ್ಯಾ ಕೊಡವಾನೆ । ನಾರಾಯ್ಣದೈವಾ
ತಾನೊಂದೀಳ್ಯವಾ ಮೆಲವಾನೆ ।
ಎಲಿನೊಂದ್ ತಿಂದಾನೆ ರಜವಲ್ಲೇ ಉಗಳಾನೆ
ತನ್ನಾ ಮಡದೀಯಾ ಕರದಾನೆ ।
ತನ್ನಾ ಮಡದೀಯಾ ಕರವದ್ನು ಮಾದೇವಿ
ಓಯೆಂದೇ ಒಡನೆ ಬರೋವಾಳೇ । ಮಾದೇವಿ
ಯಾಕೆ ಸ್ವೊಮಿ ತನ್ನಾ ಕರದೀರೆ ।
ಯಾಕೆ ಸ್ವೊಮಿ ತನ್ನಾ ಕರದೀರಿ ಅಂಬದ್ನು
ಆಗೊಂದು ಮಾತಾ ನುಡೀದಾನೆ ।
ಬಸರು ತಂಗವ್ವಿ ಬಿಸಿಲೊಳಗೇ ಬಂದದೇ
ಪಿತ್ತ ಪಯ್ತೆಲ್ಲಾ ಕೆಣಕೀದೆ । ಮಡದೀಕೇಳೆ
ಹಾಲ್ಗಂಜ್[೫೨] ಹಗಲೂಂಟಕೆ ಅನೂಮಾಡೆ ।
ಅಟ್ಟೊಂದು ಮಾತಾ ಕೇಳೀತೋ ಮಾದೇವಿ
ಮಾಳೂಗಿ ಒಳಗೆ ನೆಡದಾಳೆ । ಮಾದೇವಿ
ಪೆಟ್ಟೂಗಿ ಬಾಯಾ ತೆಗದಾಳೆ । ಮಾದೇವಿ
ಮೂರು ಬೊಗಸ್[೫೩] ಹಣವಾ ಮೊಗದಾಳೆ । ಮಾದೇವಿ
ಸಾಲೀ ಸೆರಗೀಲೆ ಬಿಗೀದಾಳೆ । ಮಾದೇವಿ
ಸೆಣ್ಣಕ್ಕಿ ತೆಗದಿ ಮಡಲಲ್ಲಿಟ್ಟೀಗಂಡಿ
ಹಾಲಾಕಾಯೊಂದ ತಡದಾಳೆ । ಮಾದೇವಿ
ಹೋಗಿ ಬಾಗಲ್ಲೇ ನಿಲೋವಾಳೆ । ಮಾದೇವಿ
ಹೋಗಿ ಬಾಗಲ್ಲೇ ನಿಲೋವಾಳೆ । ಮಾದೇವಿ
ನಾರೀಯೋರೆಂದಿ ಕರದಾಳೆ । ನಾರ್ಯೋರು
ಓಯೆಂದೇ ಒಡನೆ ಬರೋವಾರೆ ।

---

೫೨. ಹಾಳು ಗಂಜಿ ೫೩. ಬೊಗಸೆ

ಏನು ಕರೆದಿರಿಯಮ್ಮ ಎಂತೂ ಕರೆದಿರಿಯಮ್ಮ
ಕರದಾ ಕಾರಣವಾ ನಮಗ್ಹೇಳೆ ।
ಕರದಂ ಕಾರ್ಯಸಯ್ ಕಿರದಂಬ್ಯೆಸಾರಿಲ್ಲಾ[೫೪]
ಗಂಡನ ತಂಗಿ ಉಣಬಂತೇ ।
ಸೀಂಯಕ್ಕೀಕೊಡತೇನೆ ಕಂಯ್ಅಕ್ಕಿ[೫೫] ಕೊಡರವ್ವ
ಗಂಡನ ತಂಗಿ ಉಣಬಂತೇ । ಅಂಬದ್ನು
ಮಾಳೂಗಿ ಒಳಗೆ ನೆಡದಾರೆ । ನಾರ್ಯ್ಯೇರು
ಕಂಯ್ಅಕ್ಕಿ ತಂದೇ ಕೊಡವಾರೆ ।
ಕಂಯ್ಯಕ್ಕಿ ತಂದೂ ಕೊಡವದ್ನು ಮಾದೇವಿ
ಸೆಣ್ಣಕ್ಕೀ ತೆಗದೇ ಕೊಡವಾಳೆ । ಮಾದೇವಿ
ಕಂಯ್ಯಕ್ಕಿ ತೆಗದೇ ಮಡಲಲ್ಲೇ ।
ಗನಕಾಯ್[೫೬] ಕೊಡತೀನಿ ಕೊಳಕ್ಕಾಯ ಕೊಡರವ್ವ
ಗಂಡಾನಾ ತಂಗೀ ಉಣಬಂತೇ ।
ಹಂಗೂ[೫೭] ಮಾತಾ ಕೇಳಾರೇ ನಿಸ್ತ್ರೀಯರು[೫೮]
ಮಾಳೂಗೀ ಒಳಗೇ ನೆಡದಾರೆ । ನಿಸ್ತ್ರೀಯರು
ಕೊಳಕ್ಕಾಯಾ ತಂದೇ ಕೊಡವಾರೆ । ನಿಸ್ತ್ರೀಯರು
ಗನಕಾಯಾ ತೆಗದೇ ಒಳಗಿಟ್ಟೇ ।
ಕೊಳಕ್ ಕಾಯಾ ತಗದೇ ಮಡಲಲ್ಲಿಟ್ಟೀಗಂಡಿ
ರಾಜಂಗಳ ಮೆಟ್ಟಾ ಇಳದಾಳೆ । ಮಾದೇವಿ
ಕುಂಬರನರಮನಗೇ ನೆಡದಾಳೆ ಮಾದೇವಿ
ಹೋಗಿ ಬಾಗಲ್ಲೇ ನಿಲೋವಾಳೆ । ಮಾದೇವಿ
ಕುಂಬಾರಾನಂದೀ ಕರದಾಳೆ ।
ಒಂದಾಕರವಿಗೆ ಬಂದಾನೇ ಕುಂಬಾರಾ
ಬಂದಾನೆ ಮಾದೇವಿಯಾ ಒಡನಲ್ಲಿ ।
ಏನೂ ಕರದಿಯೆ ಅಮ್ಮ ಎಂತೂ ಕರದಿಯೇ ಅಮ್ಮ
ಕರದಾ ಕಾರಣವಾ ನನಗ್ಹೇಳೆ ।
ಕರದಂ ಕಾರ್ಯಸಯ್ ಕಿರದಂಬ್ಯೆಸಾರಿಲ್ಲ
ಎರಡಂಕಣದಗಳೀ ಗೆಯೀಕೊಡೋ[೫೯] । ಕುಂಬಾರಾ
ಗಂಡನಾ ತಂಗೀ ಉಣಬಂದಿ ।

---

೫೪. ಕರೆದ ಕಾರಣ ಸರಿ, ಕಿರಿ ಬೇಸರಿಲ್ಲಾ ೫೫. ಕಪಿ ಅಕ್ಕಿ, ೫೬. ಒಳ್ಳೇ ಕಾಯಿ ೫೭. ಹಂಗಿಸುವ ೫೮. ಸ್ತ್ರೀಯರು. ೫೯. ಮಾಡಿಕೊಡು

ಅಟ್ಟೊಂದು ಮಾತಾ ಕೇಳಾನೇ ಕುಂಬಾರಾ
ಮಾಳೂಗಿ ಒಳಗೇ ನೆಡದಾನೆ । ಕುಂಬಾರಾ
ಎರಡಂಕಣದಗಳಿ[೬೦] ಗೆಯೀದಾನೆ । ಕುಂಬಾರಾ
ಮಾಳಗ್ಗಿಂದ್ಹೆರಗೇ ಬರವಾನೇ । ಕುಂಬಾರಾ
ಮಾದೇವಿ ಬಲಗಯ್ಲೆ ಕೊಡೋವಾನೆ ।
ಮಾದೇವಿ ಬಲಗಯ್ಲೆ ಕೊಡುವದ್ನು ಮಾದೇವಿ
ಎರಡೂ ಕಯ್ಯೊಡ್ಡೇ ತಡದಾಳೆ । ಮಾದೇವಿ
ಅದಕಲ್ಲೇ ಹಣವಾ ಸಲಸಾಳೆ । ಮಾದೇವಿ
ರಾಜಂಗಳ ಮೆಟ್ಟಾ ಇಳೋದಾಳೆ । ಮಾದೇವಿ
ತನ್ನಾಲರಮನಗೆ ಬರೋವಾಳೆ । ಮಾದೇವಿ
ಮಾಳೂಗಿ ಒಳಗೇ ನೆಡದಾಳೆ । ಮಾದೇವಿ
ಎರಡಂಕಣದಗಳಿ ಎಸರೆತ್ತೇ । ಮಾದೇವಿ
ಸೆಣ್ಣಕ್ಕಿ ತೊಳದೇ ಮಡಗಾಳೆ । ಮಾದೇವಿ
ಕಂಯ್ಯಕ್ಕೀ ತೊಳದೇ ಮಡಗಾಳೆ । ಮಾದೇವಿ
ಹಾಲ್ಗಂಜ್ ಹಗಲೂಂಟಕೆ ಅನೂಮಾಡೇ । ಮಾದೇವಿ
ಸೆಣ್ಣಗಿಂಡ್ಯಲ್ಲೇ ಉದಕಾವೇ । ತಡಕಂಡಿ
ಮಾಳಗ್ಗಿಂದ್ಹೆರಗೇ ಬರವಾಳೆ । ಮಾದೇವಿ
ನಲ್ಲಾನೊಡನೋಗಿ ನಿಲ್ಲೋವಾಳೆ । ಮಾದೇವಿ
ಕೊಟ್ಟಳೆ ಕಯ್ಯಾ ಉದಾಕವೊ । ಮಾದೇವಿ
ಕೊಟ್ಟಳೆ ಕಯ್ಯಾ ಉದಾಕವೊ । ಮಾದೇವಿ
ಇಬ್ಬರೂ ಮೊಕವಾ ತೊಳದಾರೆ ।
ಕಾಲೂ ಸಿರಿಮೊಕವಾ ತೊಳದಾರಣ್ಣಾ ತಂಗೀ
ಮಾಳೂಗೀ ಒಳಗೆ ನಡದಾರೆ ।
ಮಾಳೂಗೀ ಒಳಗೆ ನೆಡವದ್ನು ಮಾದೇವಿ
ಹೊನ್ನಾ ಮಣಿಯೊಂದಾ ಮಡಗಾಳೆ ।
ಹೊನ್ನಾ ಮಣಿಯೊಂದಾ ಮಡವದ್ನು ಅಣ್ಣಾತಂಗಿ
ಮಣಿಯಾ ಮ್ಯನೋಗೆ ಕುಳತಾರೆ ।
ಮಣಿಯಾ ಮ್ಯನೋಗೆ ಕುಳುವದ್ನು ಮಾದೇವಿ
ತಿರಳು ಬಾಳೆಲಿಯಾ ತೊಳದ್ಹಾಸೇ । ಮಾದೇವಿ
ಹಸವೀಗ್ ಹಾಲ್ಗಂಜೀ ಬಡಸಾಳೆ ।
ಹಸವೀಗಾಲ್ಗಂಜೀ ಬಡಸೀ ತಿರಗೂರೊಟಗೀ

೬೦. ಅಳಗೆ ಅನ್ನ ಮಾಡುವ ಪಾತ್ರೆ

ಒಂದೂ ತುತ್ತನ್ನಾ ಮೆಲೋವಾಳೆ । ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಅಣ್ಣಾ ನಿನ್ ಮನಿಯನ್ನಾ ಕಾಂಬೂಕೆ ಬಲುಚೆಂದಾ
ಉಂಡೀ ನೋಡಿದರೆ ಕಂಯ್‌ಬಾಳ ।
ಅಟ್ಟೊಂದು ಮಾತಾ ಕೇಳನೆ ನಾರೇಣದ್ಯೇವಾ
ಆಗೊಂದು ಮಾತಾ ನುಡೀದಾನೆ ।
ಬುಸರು[೬೧] ತಂಗವ್ವಿ ಬೆಸಲೊಳಗೆ[೬೨] ಬಂದೀದೆ
ಪಿತ್ತಾ ಪಯ್ತೆಲ್ಲಾ ಕೆಣಕೀದೆ । ತಂಗೀಕೇಳೇ
ಮತ್ತೋಂದು ತುತ್ತಾ ಮೆಲಬಾರೆ ।
ಅಟ್ಟೊಂದು ಮಾತಾ ಕೇಳೀತೋ ಸೂಬದ್ರಿ
ಮತ್ತೊಂದು ತುತ್ತಾ ಮೆಲವಾಳೆ । ಸೂಬದ್ರಿ
ಊಟಾ ಕಯ್ಯಲ್ಲೇ ಕುಡಗಾಳೆ ।
ಅಣ್ಣಾ ನಿನಮನಿ ಅನ್ನಾ ಕಂಪೀನಾ ಅಕ್ಕೀಯೋ
ಕಂಯ್‌ಬಾಳೋ ಅಣ್ಣಾ ಉಣಲಾರೆ । ಅಂಬದ್ನು
ಆಗೊಂದು ಮಾತಾ ನುಡೀದಾನೆ ।
ಅಪ್ಪ ಕಟ್ಟನೆ ಇಪ್ಪಂತಕಣ ಮನಿಯಾ
ಸುತ್ತೆಲ್ಲಾ ನೋಡೇ ಮಣೀ ಮಾಡ । ಅಂಬದ್ನು
ಸುತ್ತಗ ನೋಡಿದಳೇ ಮಣೀ ಮಾಡ । ನಾರೇಣದ್ಯೆವಾ
ತನ್ನೆಡೀಯದಕೇ ಎಳದಿಟ್ಟೇ । ನಾರೇಣದ್ಯೆವಾ
ಅದರೆಡೀ ತಾನು ಎಳಕಂಡಿ । ನಾರೇಣದ್ಯೆವಾ
ಆಗೊಂದು ಮಾತಾ ನುಡೀದಾನೆ ।
ಬಸರು ತಂಗವ್ವಿ ಬಿಸಲೊಳಗೆ ಬಂದೀಯೇ
ಪತ್ತ ಪಯ್ತ್ಯೆಲ್ಲಾ ಕೆಣಕೀದೆ । ತಂಗೀಕೇಳೆ
ಇನ್ನೊಂದು ತುತ್ತಾ ಮೆಲಬಾರೆ । ಅಂಬದ್ನು
ಮತ್ತೊಂದು ತುತ್ತಾ ಮೆಲೋವಾಳೆ ।
ಅಣ್ಣಾ ನಿನಮನಿಯನ್ನಾ ಕಂಪೀನಾ ಅಕ್ಕೀಯೋ
ಸೀ ಬಾಳೋ ಅಣ್ಣಾ ಉಣಾತೀನೋ । ಅಂಬದ್ನು
ತಾ ಒಂದ್‌ತುತ್ತನ್ನಾ ತಿನೋವಾನೆ । ನಾರೇಣದ್ಯೆವಾ
ಮಾಳಗ್ಗಿಂದ್ದೆರಗೆ ಬರವಾನೆ । ನಾರೇಣದ್ಯೆವಾ
ಉಣತಾ ಕಯ್ಯಲ್ಲೇ ಕುಡಗೆದ್ದೆ । ನಾರೇಣದ್ಯೆವಾ
ಮಾಳಗ್ಗಿಂದ್ದೆರಗೆಬರವಾನೆ । ನಾರೇಣದ್ಯೆವಾ

---

೬೧. ಗರ್ಭಿಣಿ   ೬೨. ಬಿಸಿಲಿನಲ್ಲಿ

ಪನ್ನೀರಲಿ ಮೊಕವಾ ತೊಳದಾನೆ । ನಾರೇಣದ್ಯೆವಾ
ನಾಗಾ ಬೆತ್ತವಾ ತಡದಾನೆ । ನಾರೇಣದ್ಯೆವಾ
ಮಾದೇವಿ ಮುಂದಲಿಯಾ ಎಳತಂದೇ ನಾರೇಣದ್ಯೆವಾ
ನಾಗಾ ಬೆತ್ತವಾ ನೆಗದಾನೆ ।
ನಾಗಾ ಬೆತ್ತವಾ ನೆನವದ್ನು ಸೂಬದ್ರಿ
ಊಂಡಾ ಕಯ್ಯಲ್ಲೇ ಕುಡಗೆದ್ದೇ । ಸೂಬದ್ರಿ
ಪನ್ನೀರಲಿ ಕಯ್ಯಾ ತೊಳದಾಳೆ । ಸೂಬದ್ರಿ
ಪನ್ನೀರಲಿ ಮೊಕವಾ ತೊಳದಾಳೆ । ಸೂಬದ್ರಿ
ಅಣ್ಣಾಗಡ್ಡಾಗೇ ನಿಲವಾಳೇ । ಸೂಬದ್ರಿ
ಆಗೊಂದೂ ಮಾತಾ ನುಡೀದಾಳೆ ।
ಗಂಡ್ನಮನಿ ಹೆಣ್ಮಕ್ಳು ಬಂದೀ ಹೊಡಿಸಿದ್ರು ಅಂಬ್ರು[೬೩]
ನನಗಾಗಿ ಮಡದೀ ಹೊಡಿಯಾಬ್ಯೆಡಾ । ಅಂದೇಳಿ
ಅಣ್ಣನ ಕಯ್‌ಕೋಲಾ ಕಸೀದಾಳೆ । ಸೂಬದ್ರಿ
ಮಾಳಗ್ಗಿಂದ್ವೆರಗೆ ಬರೋವಾಳೆ ।
ಮಾಳಗ್ಗಿಂದ್ವೆರಗೆ ಬರುವದ್ನು ನಾರೇಣದ್ಯೆವಾ
ಮಾಳಗ್ಗಿಂದ್ವೆರಗೆ ಬರೋವಾನೆ । ಅಣ್ಣಾತಂಗಿ
ಪಟ್ಟೆ ಮಂಚದಲೆ ಕುಳತಾರೆ ।
ಪಟ್ಟೆ ಮಂಚದಲಿ ಕುಳುವದ್ನು ಮಾದೇವಿ
ತನ್ನೂಟಕಲ್ಲೇ ಎಡೆಮಾಡೆ । ಅಡಗಿಬಡಸೇ
ಉಂಡೆದ್ದಳೊಂದೂ ಗಳಗ್ಯಲ್ಲೇ
ಉಂಡಳೂಟದ ತೊಳದಳೆ ಎಂಜಲ ಮೊಕವಾ
ಎಂಜಲ ಮಯ್ಲುಗಿಯಾ ತೆಗದಾಳೆ ।
ಎಂಜಲ ಮಯ್ಲುಗಿಯಾ ತೆಗವದ್ನು । ಮಾದೇವಿ
ಮಂಚಕೇ ಹಾಸಾ[೬೪] ಬಿಡಸಾಳೆ । ಮಾದೇವಿ
ಮಂಚದ ಕೆಳಗ್ಹಾಸಾ ಬಿಡಸಾಳೆ । ಮಾದೇವಿ
ತಣ್ಣಿರಾ ತಂದೀ ಎರದಾಳೆ । ಮಾದೇವಿ
ಮಾಳಗ್ಗೇ ಹಾಸ ಬಿಡಸಾಳೆ । ಮಾದೇವಿ
ಬಾಗಲ್ಕೆ ಕದಮೀಡ ಇಡವಾಳೆ । ಮಾದೇವಿ
ಹಾಸನ ಮ್ಯೆನ್ಹೋಗಿ ಒರಗಾಳೆ ।
ಹಾಸನ ಮ್ಯೆನ್ಹೋಗಿ ಒರಗ್ವುದ್ನು ನಾರೇಣದ್ಯೆವಾ
ಮಂಚದ ಮ್ಯೆನ್ಹೋಗೇ ಒರಗಾನೆ ।

---

೬೩. ಅನ್ನುವರು ೬೪. ಹಾಸಿಗೆ

ಮಂಚದ ಮ್ಯೆನ್ಹೋಗಿ ಒರಗ್ವದ್ನು ಸೂಬದ್ರಿ
ಮಂಚದ ಕೆಳನೋಗಿ ಒರಗಾಳೆ । ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಅಣ್ಣಾ ನಿನಮನಿ ನೆಲ ತಣ್ಣಗೋ ಬೆಚ್ಚಗೋ
ಕಣ್ಣೀಗೇ ನಿದರಿ[೬೫] ಬರುವಾದಿಲ್ಲಾ । ಅಣ್ಣಾ ಕೇಳೋ
ಬಾರಿತದಾ[೬೬] ಕತಿಯಾ ತೊಡಗ್ವೇಳೋ । ಅಂಬದ್ನು
ಮಯ್ಮುರಿದೆದ್ದೂ ಕುಳತಾನೆ ।
ಮಯ್ಮುರಿದೆದ್ದೂ ಕುಳವದ್ನು ಸೂಬದ್ರಿ
ಆಗೊಂದೂ ಮಾತಾ ನುಡೀದಾಳೆ ।
ಹಿಂದಗ[೬೭] ಬಾರತವಾ ಕೇಳೀಬಲ್ಲೆ ಅಣ್ಣಾ
ಮುಂದಗು[೬೮] ಬಾರತದಾ ಕತಿಹೇಳ । ಅಂಬದ್ನು
ಬಾರತದ ಕತಿಯಾ ತೊಡಗಾನೆ ।
ಬಾರತದ ಕತಿಯಾ ತೊಡಗ್ವದ್ನು ಸೂಬದ್ರಿ
ಮಯ್ಮುರುದೆದ್ದೇ ಕುಳತಾಳೆ ।
ಅಣ್ಣಾ ಕತಿಹೇಳಿ ತಂಗೀನು ಹೂಂ ಹಾಕಿ
ತಂಗಿಗ ಸುಮನಿದರಿ[೬೯] ಕಮೀದಾವೆ[೭೦] । ಸೂಬದ್ರಿಯ
ಗರ್ಬದಿಂದೇ ಸಿಸುವೇ ಹೂಂಗುಟ್ಟೇ ।
ಗರ್ಬದಿಂದೇ ಸಿಸುವೆದ್ದೇ ಹೂಂಗುಟಿದ[೭೧] ನೋಡ್ಯಾಳೆ ಮಾದೇವಿ
ಮಯ್ಮುರುದೆದ್ದೇ ಕುಳತಾಳೇ । ಮಾದೇವಿ
ಬಾಗೀಲ ಕದಮೀಡ ತೆಗದಾಳೆ । ಮಾದೇವಿ
ಮಾಳಗ್ಗಿಂದ್ಹೇರಗೇ ಬರವಾಳೆ । ಮಾದೇವಿ
ನಾರೆಣ್‌ದ್ಯೆವ್‌ನೊಡನೋಗಿ ನಿಲವಾಳೇ । ಮಾದೇವಿ
ಆಗೊಂದು ಮಾತಾ ನುಡೀದಾಳೆ ।
ನಿಮದು ದೆನಿಯಲ್ಲ ನಿಮತಂಗಿದು ದೆನಿಯಲ್ಲ
ಇದುವೆಲ್ಲಿಂದ ಬಂತೇ ಹೊಸದೆನಿಯೇ ।
ಇದುವೆಲ್ಲಿಂದ ಬಂತು ಹೊಸದೆನಿ ಅಂದ್ಹೇಳಿ
ನಲ್ಲನಸಿರಿಪದಕೇ ಸರಣಂದೇ ।
ಅಟ್ಹೊಂದೂ ಮಾತಾ ಕೇಳಾನೇ ನಾರೇಣದ್ಯೆವಾ
ಮಯ್ಮುರುದೆದ್ದೇ ಕುಳತಾನೆ ।
ಮಯ್ಮುರುದೆದ್ದೇ ಕುಳವದ್ನು ಸೂಬದ್ರಿ

---

೬೫. ನಿದ್ದೆ ೬೬. ಮಹಾಭಾರತದ ೬೭. ಹಿಂದಿನ ೬೮. ಮುಂದಿನ ೬೯. ಹೂನಿದ್ದೆ ೭೦. ಕವಿಯಿತು
೭೧. ಹೂಂಗುಡುವುದು

ಮಾಳುಗ್ಗಿಂಡ್ದೆರಗೇ ಬರೋವಾಳೆ । ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಒಂದೊಂದು ಬ್ಯೇನಿ ಸಂದಿಲದೇ[೨೨] ಬರತದೆ
ತಾಳಲಾರೆನಣ್ಣಾ ತಡೀಲಾರೆ । ಅಣ್ಣಾಕೇಳೋ
ಬ್ಯೆಗೋಗಿ ಸೂಲಗತಿ[೨೩] ಕರತಾರೋ ।
ಅಟ್ಟೊಂದೂ ಮಾತ ಕೇಳಾನೆ ನಾರೇಣದ್ಯೆವಾ
ಕುಳತಾ ಗದ್ದಗಿಯಾ ಜಡದೆದ್ದೇ । ನಾರೇಣದ್ಯೆವಾ
ಪನ್ನೀರಾ ಗಿಂಡೀ ಬಲಗಯ್ಲೆ । ತಡಕಂಡೇ
ಮಾಳಗ್ಗಿಂಡ್ದೆರಗೆ ಬರವಾನೆ । ನಾರೇಣದ್ಯೆವಾ
ಕಾಲೂ ಸಿರಿಮೊಕವಾ ತೊಳದಾನೆ । ನಾರೇಣದ್ಯೆವಾ
ಮಾಳೂಗೀ ಒಳಗೆ ನೆಡದಾನೆ । ನಾರೇಣದ್ಯೆವಾ
ಪನ್ನೀರಾ ಗಿಂಡೀ ಮಡೋಗಾನೆ । ನಾರೇಣದ್ಯೆವಾ
ರನ್ನದೊಂದೀಳ್ಯ ಮೆಲವಾನೆ ।
ಎಲಿಯೊಂದ್ ತಿಂದಾನೇ ರಜವಲ್ಲೇ ಉಗಳಾನೆ
ರಾಜ್ಯಂಗಳ ಮೆಟ್ಟ ಇಳದಾನೆ । ನಾರೇಣದ್ಯೆವಾ
ಸೂಲಗಿತಿಯರಮನಗೆ ನೆಡದಾನೆ । ನಾರೇಣದ್ಯೆವಾ
ಹೋಗಿ ಬಾಗಲ್ಲೇ ನಿಲವಾನೆ । ನಾರೇಣದ್ಯೆವಾ
ಸೂಲಗತೀಯಂದೇ ಕರದಾನೆ ।
ಒಂದಾ ಕರವಿಗೆ ಬಂದಾಳೇ ಸೂಲಗತಿ
ನಿಂದಳೇ ನಾರೇಣದ್ಯೆವ್ನಾ ಒಡನಲ್ಲಿ । ಸೂಲಗತಿ
ಆಗೊಂದು ಮಾತಾ ನುಡೀದಾಳೇ ।
ಏನು ಕರೆದಿರಿ ಸ್ವೊಮೀ ಎಂತು ಕರೆದಿರಿ ಸ್ವೊಮಿ
ಕರೆದ ಕಾರಣವಾ ನನಗ್ಹೇಳಿ ।
ಕರದಂಬು ಕಾರ್ಯಸಯ್ ಕಿರದಂಬಾ ಬ್ಯೆಸಾರಿಲ್ಲಾ
ಈಗೇ ನಮ್ಮನಿಗೇ ಬರೋಬೇಕೇ ।
ಒಂದ್ ತುಂಡುಟ್ಕಳೆ ಒಂದ್ ತುಂಡಾ ತಟ್ಕಳ್ಳೆ
ಈಗೇ ನಮ್ಮನಿಗೆ ಬರಬೇಕೆ ।
ಅಟ್ಟೊಂದು ಮಾತು ಕೇಳೀತು ಸೂಲಗತಿ
ಮಾಳೂಗಿ ಒಳಗೇ ನೆಡದಾಳೆ ।
ಒಂದ್ ತುಂಡುಟ್ಟಳೆ ಒಂದ್ ತುಂಡಾತೊಟ್ಟಳೆ
ಮಾಳಗ್ಗಿಂಡ್ದೆರಗೆ ಬರವಾಳೆ । ಸೂಲಗತಿ

೨೨. ಎಡಬಿಡದೆ ೨೩. ಶೂಲಗಿತ್ತಿ

ರಾಜ್ಯಂಗಳ ಮೆಟ್ಟ ಇಳದಾಳೆ ।
ನಾರೇಣ್‌ದೈವ್ ಮುಂದಾಗಿ ಸೂಲಗತಿ ಹಿಂದಾಗಿ
ರಾಜಮಾರ್ಗದಲಿ ಬರೋವಾರೆ ।
ರಾಜಮಾರ್ಗದಲಿ ಬರುವದ್ನು ನಾರೇಣದೈವಾ
ಸೂಲಗತಿಗೆ ಬುದ್ದೀ ಒರದಾನೆ । ನಾರೇಣದೈವಾ
ಆಗೊಂದು ಮಾತಾ ನುಡೀದಾನೆ ।
ಕಾಲ್ಮುಂದ್ಬಂದ್ರೆ ಕಾಲ್ಕಡಿ ಕಯ್ಮುಂದ್ಬಂದ್ರೆ ಕಯ್ಕಂಡಿ
ಗಂಡಾದ್ರೆ ಕುತ್ಗೀನೆ ಮುರಿಯಾಬೇಕೇ । ಸೂಲಗತಿ.
ಹೆಣ್ಣಾದ್ರೆ ಚೆಂದದಲಿ ಸಲಗ್ಬೇಕು । ಸೂಲಗತಿ
ಸೆರಮುತ್ತ ನಿನಗೆ ಕೊಡಸೂನೆ । ಅಂದೇಳಿ
ಸೂಲಗತಿಗೆ ಬುದ್ದೀ ಒರದಾನೆ । ನಾರೇಣದೈವಾ
ತಮ್ಮಾಲರಮನಗೆ ಬರವಾರೆ । ಅವ್ರಿಬ್ಬರು
ಬಂದೀ ಬಾಗಲ್ಲೇ ನಿಲವಾರೆ । ಅವ್ರಿಬ್ಬರು
ಮಾಳೂಗಿ ಒಳಗೆ ನೆಡದಾರೆ ।
ಮಾಳೂ ಒಳಗೆ ನೆಡವದ್ನು ನಾರೇಣದೈವಾ
ಹೊನ್ನಾ ಮಣಿಯೊಂದಾ ಮಡಗಾನೆ ।
ಹೊನ್ನ ಮಣಿಯೊಂದು ಮಡಗ್ವದ್ನು ಸೂಲಗತಿ
ಮಣಿಯಾ ಮ್ಯೆನ್ಹೋಗೇ ಕುಳತಾಳೆ ।
ಮಣಿಯಾ ಮ್ಯೆನ್ಹೋಗಿ ಕುಳುವದ್ನು ನಾರೇಣದೈವಾ
ಎಣ್ಣೀಯಾ ಗಿಂಡೀ ಬಲಗಯ್ಲೇ । ತಡಕಂಡಿ
ಮಾಳಗ್ಗಿಂದ್ಹೆರಗೆ ಬರವಾನೆ । ನಾರೇಣದೈವಾ
ಸೂಲಗತಿ ಬಲಗಯ್ಲಿ ಕೊಡವಾನೆ ।
ಸೂಲಗತಿ ಬಲಗಯ್ಲಿ ಕೊಡವದ್ನು ಸೂಬದ್ರಿ
ಮಾಳಗ್ಗಿಂದ್ಹೆರಗೆ ಬರೋವಾಳೆ । ಸೂಬದ್ರಿ
ಚಿನ್ನದಾ ಗ್ವೊಡೀ ಮರೀಯಲ್ಲೆ । ಸೂಬದ್ರಿ
ಬಣ್ಣಾ[೭೪] ಬಿಡಸೇ ಬದಲುಟ್ಟೆ । ಸೂಬದ್ರಿ
ಸೂಲಗತಿ ಒಡನ್ಹೋಗೇ ಕುಳತಾಳೆ ।
ಸೂಲಗತಿ ಒಡನ್ಹೋಗಿ ಕುಳವದ್ನು ಸೂಲಗತಿ
ಸೂಬದ್ರೀಗೆಣ್ಣೀ ಉಗರಾಡೇ[೭೫] । ಅಬಿಮನ್ಯು
ಆಗೊಂದು ಮನಸಾ ನೆನಸಾನೆ ।
ಕಾಲ್ಮುಂದ್ಬಂದ್ರೆ ಕಾಲ್ಕಡೀತದೆ ಕಯ್ಮುಂದ್‌ಬಂದ್ರೆ ಕಯ್ಕಡಿತದೆ

೭೪. ಸೀರೆ ೭೫. ಉದ್ದಿ

ಗಂಡಾದ್ರೆ ಕುತ್ಗೀನೆ ಮುರಿಯತದಿಯೇ । ದ್ಯೆವಾರೇ
ಯಾವಾ ರೂಪದಲೆ ಜನಸಲೆ । ಅಂದೇಳಿ
ಅತ್ತೆಮಾವ್ಗೆ ಸಾಪಾ[೭೬] ಇಡವಾನೆ ।
ಅತ್ತೀಗುತ್ತೀಲಿಟ್ಟೆ ಮಾವ್ನ ಮಳಗೀಲಿಟ್ಟ
ಮುಂಗಾಲ ಮುಂದಾಗೇ ಜನಸಾನೆ । ಅಬಿಮನ್ಯು
ಸೂಲಗತೀ ಒದ್ದೇ ಕೆಡಗಾನೆ । ಸೂಲಗತಿ
ಮೂರ್ಮಡ[೭೭] ಗೆದ್ಯಾಚೇ[೭೮] ಗಳದೇ ಬಿದ್ದೆ । ಸೂಲಗತಿಯ
ಮುಂದನ ಮೂರ್‌ಹಲ್ಲು ಮುರೀದಾವೆ । ಸೂಲಗತಿ
ಆಗೊಂದು ಮಾತಾ ನುಡೀದಾಳೆ ।
ಅಂದಾಚೆಂದದ ಪ್ವೊರಾ[೭೯] ಚೆಳಬೆಳಕೀ[೮೦] ಪ್ವೊರಾನೇ
ತನ ಅಂದಾ ಚೆಂದೆಲ್ಲಾ ಕೆಡಸಾನೆ । ತನ್ನಾಲಾ
ಮುಂದನ ಮೂರ್ಹಲ್ಲಾ ಮುರೀದಾನೆ । ಅಂದೇಳೆ
ನೆನಸೀತೆ ಮನಗೆ ನೆಡದಾಳೆ ।
ನೆನಸೀತೆ ಮನಗೆ ನಡೆವದ್ನು ಅಬಿಮನ್ಯು
ಮೂಡಣ ಸಮುದರವಾ ತಿರಗಾನೆ । ಅಬಿಮನ್ಯು
ತಾಯವ್ವಿ ಕರದೇ ನುಡೀಮಾತೇ ।
ತಾಯವ್ವಿ ಕರದಿ ಏನಂದೀ ನುಡಿಮಾತೇ
ನನ್ನಲಿಯ[೮೧] ಬ್ಯೆಗೇ ಕಳ ಕೊಡೇ[೮೨] । ತಾಯೇಕೇಳೇ
ನಿನ್ನೊಲಿಯಾ ನೀನು ತಳಕೊಳ್ಳೆ
ಮಾಳೂಗಿ ಒಳಗೀನಾ ಮಾವನಾ ಜೋತರವಾ
ನೆಟ್ಟಗೇ ಸಿಗದೇ ಸಿಗಳೆತ್ತೆ[೮೩] ।
ಒಂದ್ ತುಂಡಾ ಹಾಸೇ ಒಂದ್ ತುಂಡಾ ಹೊದೀಸೆ
ಒಂದ್ ತುಂಡಾ ನೀನು ನೆರದುಡೆ
ಪೆಟ್ಟೂಗಿ ಒಳಗೆ ಅತ್ತೀಯಾ ಪಟ್ಟೀಯಾ
ನೆಟ್ಟಗೆ ಸಿಗದೇ ಸಿಗಳೆತ್ತೆ ।
ಒಂದ್ ತುಂಡಾ ಹಾಸೇ ಒಂದ್ ತುಂಡಾ ಹೊದಿಸೇ
ಒಂದ್ ತುಂಡಾ ನೀನು ನೆರದುಡೆ । ತಾಯೆಕೇಳ
ಮುತ್ನ ತೊಟ್ಲಲ್ಲೇ ಒರಗೀಸೆ ।
ಮುತ್ನ ತೊಟ್ಲಲ್ಲಿ ಒರಗೀಸು ತಾಯೆಕೇಳು
ಮುತ್ನ ತೊಟ್ಲವ ನೇಗದ್ದೊರೆ । ತಾಯೀ ಕೇಳೇ
ಅಪ್ಪಿದ್ದ ರಾಜಿಕೆ ನೆಡೆಬ್ಯೆಗೆ ।

---

೭೬. ಶಾಪ ೭೭. ಮೂರು ಮೂಡೆ ೭೮. ಗದ್ದೆಯಾಚೆ ೭೯. ಪೋರ ೮೦. ಕಾಂತೀಯುತ ೮೧. ನನ್ನನ್ನು ೮೨. ಕಳಿಸಿಕೊಡು ೮೩. ಸೀಳು

ಅಟ್ಟೊಂದು ಮಾತು ಕೇಳೀತು ಸೂಬದ್ರಿ
ಅಭಿಮನ್ಯುನಲಿಯಾ ತಡದಾಳೆ । ಸೂಬದ್ರಿ
ತನ್ನೊಲಿಯಾ ತಾನೂ ತಡಕಂಡೇ । ಸೂಬದ್ರಿ
ಮಾಳೂಗಿ ಒಳಗೆ ನೆಡದಾಳೆ ।
ಮಾಳೂಗಿ ಒಳಗಾನಾ ಅಣ್ಣನಾ ಜೋತರವಾ
ನೆಟ್ಟಿಗೆ ಸಿಗದೀ ಸಿಗಳೆತ್ತೆ ।
ಒಂದ್ ತುಂಡಾ ಹಾಸಾಳೇ ಒಂದ್ ತುಂಡಾ ಹೊದಿಸಾಳೆ
ಒಂದ್ ತುಂಡಾ ತಾನು ನೆರದುಟ್ಟೆ ।
ಪೆಟ್ಟೂಗೀ ಒಳಗೀನ ಅತ್ತೂಗಿ ಪಟ್ಟೀಯಾ
ನೆಟ್ಟಾನೇ ಸಿಗದೇ ಸಿಗಳೆತ್ತೆ ।
ಒಂದ್‌ತುಂಡಾ ಹಾಸಾಳೇ ಒಂದ್ ತುಂಡಾ ಹೊದಿಸಾಳೇ
ಒಂದ್ ತುಂಡಾ ತಾನೂ ನೆರುದುಟ್ಟೇ । ಸೂಬದ್ರಿ
ಅಭಿಮನ್ಯು ತೊಟ್ಲಲ್ಲಿ ಒರಗ್ಸಾಳೆ । ಸೂಬದ್ರಿ
ಮುತ್ತನ ತೊಟ್ಲವಾ ನೆನದೊತ್ತೆ । ಸೂಬದ್ರಿ
ರಾಜಂಗಳ ಮೆಟ್ಟಾ ಇಳದಾಳೆ । ಸೂಬದ್ರಿ
ಆಗೊಂದು ಮಾತಾ ನುಡೀದಾಳೆ ।
ಮಾವನಾ ಮಗಳಾ ನೆನದೇ ತರಬೇಕೋ ಮಗನೆ
ಮಾವಾಗಿಟ್ ಸಾಪಾನಿಡಬೇಕೋ ।
ಅತ್ತೀಯಾ ಮಗಳಾ ನೆಗದೇ ತರಬೇಕೋ ಮಗನೆ
ಅತ್ತೀಗಿಟ ಸಾಪಾ ಬಿಡಬೇಕೋ । ಅಂಬುದ್ನು
ಆಗೊಂದು ಮಾತಾ ನುಡೀದಾನೆ ।
ಮಾವಾಗಿಟ ಸಾಪಾ ಬಿಡತೇ ತಾಯೇಕೇಳು
ಗಟ್ಟಿಲಿ ತೊಟ್ಲಲವಾ ಹಿಡಕೊಳ್ಳೇ । ಅಂಬದ್ನು
ಗಟ್ಟಿಲಿ ತೊಟ್ಲಲವಾ ಹಿಡವದ್ನು ಅಬಿಮನ್ಯು
ಮಾವಾಗಿಟ್ ಸಾಪಾ ಬಿಡವಾನೆ । ಅಬಿಮನ್ಯು
ಅತ್ತೀಗಿಟ್ ಸಾಪಾ ಬಿಡವಾನೆ ।
ಅತ್ತೀಗಿಟ್ ಸಾಪಾ ಬಿಡುವದ್ನು ನಾರೇಣದ್ಯೆವಾ
ಸುಳಗಾಳೀಯಾಗೇ ಸುಳೀದಾನೆ ।
ಸುಳಗಾಳಿಯಾಗಿ ಸುಳವದ್ನು ಸೂಬದ್ರಿ
ಗಟ್ಟಿಲಿ ತೊಟ್ಲಲವಾ ಹಿಡದಾಳೆ । ಸೂಬದ್ರಿ
ವನವಾಸಕಾಗೇ ನೆಡದಾಳೆ । ಸೂಬದ್ರಿ
ಹೋಗೊಂದು ವನವಾ ಇಳದಾಳೆ ।
ಹೋಗೊಂದು ವನವಾ ಇಳವದ್ನು ಕುಂತೀದೇವಿ ಅರಜೀಣ

ಆಲದ ಕಟಿಮ್ಯೆನೆ ಕುಳತಾರೆ ।
ಆಲದ ಕಟಿಮ್ಯೆನೆ ಕುಳವದ್ನು ಸೂಬದ್ರಿ
ಆಲದ ಕಟಿ ಕೆಳಗೆ ಬರೋವಾಳೆ । ಸೂಬದ್ರಿ
ಆಲದ ಕಟ್ಟೀ ನೆಗದ್ಹತ್ತಿ । ಸುಬದ್ರಿ
ನಲ್ಲನೊಡನೋಗೀ ನಿಲೋವಾಳೆ । ಸೂಬದ್ರಿ
ಮುತ್ತನ ತೊಟ್ಟಲವಾ ಮಡಗಾಳೆ
ಮುತ್ತನ ತೊಟ್ಟಲವಾ ಮಡಗ್ವದನು ಅರಜೀಣ
ಅಬಿಮನ್ಯು ನೆತ್ತೇ ನೆಗದಾನೆ ।
ಅಬಿಮನ್ಯುನೆತ್ತಿ ನೆಗದೀ ಕೂರಸಗಂಡಿ
ನೆತ್ತೀಯ ಕಿಟ್ಟೇ ಅಳಗಾನೆ ।
ಆಲಾದಾ ಮರಕೇ ಆಲದಾ ತೊಟ್ಟೀಕಟ್ಟೇ
ಆಲಾದಾ ಸೊಪ್ಪೂ ತಲೆದಿಂಬೆ ।
ಆಲಾದಾ ಸೊಪ್ಪಾ ತಲೆದಿಂಬ್ಹಾಸಗೀ ಮಾಡೇ
ಹುಟ್ಟಿದ ಕಂದನಾ ಒರಗ್ಸಾಳೆ ।
ಅತ್ತೀಯ ಮರಕೇ ನಿಸ್ತ್ರೀ ತೊಟ್ಟಲ ಕಟ್ಟೇ
ಅತ್ತೀಯಾ ಸೊಪ್ಪು ತಲೆದಿಂಬೇ ।
ಅತ್ತೀಯಾ ಸೊಪ್ಪು ತಲೆದಿಂಬ್ಹಾಸಗಿ ಮಾಡೇ
ಹುಟ್ಟದ ಕಂದನಾ ಒರಗ್ಸಾಳೆ । ಸೂಬದ್ರಿ
ನಲ್ಲನೊಡನೋಗಿ ಕುಳತಾಳೆ । ಅವ್ರೆಲ್ಲಾ
ರನ್ನಾದೊಂದೀಳ್ಯ ಮೆಲೋವಾರೆ । ಸೂಬದ್ರಿ
ಅವ್ರು ಅದರಲ್ಲೇ ಇರೋವಾರೆ ।

ಸೆಣಸೂಬದ್ರೆ ಹಾಡು

ಅಣ್ಣನ ಮನೆಯಾ ಬಣ್ಣದ ಜಗುಲಿಮೆನೆ
ತಂಗಿ ಸುಬದ್ರೀ ಕುಳತದೆ
ತಂಗಿ ಸುಬದ್ರೀ ಕುಳವದ್ನು ಅಣದಿರು
ಮಾಳೂಗಿ ಹೆರುಗೆ ಬರೂವಾರೆ
"ಎಂದೂ ಬರ್ದಿದ್ ತಂಗೀ ಇಂದೆಕೆ ಬಂದೀಯೆ
ರಾಜ್ಯ ಬೇಕಾರೆ ಬರಕಣೆ"[೧]

"ನಾಆಳೂ ರಾಜ್ಯದ ನೀನೇ ಆಳಣ್ಣಯ್ಯಾ
ನಾ ಬಂದೆ ನಿನ್ನಾ ಮೊಗೋಳೀಗೆ"[೨]
"ಹೆಣ್ಣಾ ಕೇಳ್ವಳು ನನ್ನೇನಾ ಕೇಳೂತೆ
ಹೆಣ್ಣೀನಾ ತಾಯೀ ಒಳೂಗದೆ । ಸುಬದ್ರಿ
ಹೋಗದ್ರಾ ಮನ್‌ಸಾ ತೆಳದ್‌ಬಾರೆ"[೩]
ಅಟ್ಟಂಬಾ ಮಾತಾ ಕೇಳಾಳೆ ಸುಬದ್ರಿ
ಮಾಳೂಗಿ ಒಳುಗೇ ನೆಡದಾಳೆ । ಸುಬದ್ರಿ
ಲಾಗೊಂದು ಮಾತಾ ನುಡದಾಳೆ

"ಮಾಳೂಗಿ ಒಳ್ಗೆ ರಾಜಕ್ಕಿ ತಳ್ಸು ಅತ್ತಿಗೆ
ರಾಜಕ್ಕಿಗೊಮ್ಮೆ ನೆರವಪ್ಪೆ । ಅತ್ತೀಗೆ
ನಿನ್‌ಕೂಸು[೪] ಕೊಡ್ವೆಯಾ ಕೊಮರಾಗೆ"[೫]
ರಾಜಕ್ಕಿ ತಳ್ಸೂಕೆ ದಾದಿಯರ್ ತನ್ಗುಂಟು
ನಿನ್ನಾದೀರಾತನದಲ್ಲಿ ಮನಗೋಗು"

"ಮಾಳೂಗಿ ಒಳ್ಗೆ ಪುಟಕ್ಕಿ ತಳ್ಸು ಅತ್ತೀಗೆ
ಪುಟ್ಟಕ್ಕಿಗೊಮ್ಮೆ ನೆರವಪ್ಪೆ । ಅತ್ತೀಗೆ
ನಿನ್ ಕೂಸು ಕೊಡ್ವೆಯಾ ಕೊಮರಾಗೆ"
ಪುಟ್ಟಕ್ಕಿ ತಳ್ಸೂಕೆ ದಾದಿಯರ್ ತನ್ಗುಂಟು
ನಿನ್ ಆಯ್ವರ್ತನದಲ್ಲಿ[೬] ಮನಗೋಗು"

---

೧. ಬರೆದುಕೋ ೨. ಮಗಳಿಗಾಗಿ ೩. ತಿಳಿದು ಬಾ ೪. ಮಗಳು ೫. ಕುಮಾರನಿಗೆ ೬. ಒಳ್ಳೆತನದಲ್ಲಿ

ಅಟ್ಟೊಂದು ಮಾತಾ ಕೇಳ್ಯಾಳೆ ಸುಬದ್ರಿ
ಸಿಟ್ಟೀನಿಂದ್ ಮನಗೇ ಬರೋವಾಳೆ । ಸುಬದ್ರಿ
ರಾಜಂಗ್ಳ ಮೆಟ್ಟಾ ಇಳೋವಾಳೆ । ಸುಬದ್ರಿ
ಸೋಡಿಗೆದ್ದಿ[೭] ಗಾಗೇ ನೆಡದಾಳೆ
"ಸೋಡಿಗೆದ್ದೀಲಿ ಸೊಡಡ್ಯಾಡು ಅಬ್ಮನ್ನು[೮]
ಕೇಳೀಬಾರೊಂದು ಹೊಸ್‌ಸುದ್ದಿ । ನಿನ್ಮಾವಾ
ದೀರಾತನ್ದಲ್ಲಿ[೯] ಇರೋವಾನೋ ।

"ಹಾಣೇ ಗೆದ್ದೀಲಿ ಹಾಣ್ಯಾಡು ಅಬ್ಮನ್ನು
ಕೇಳೀ ಬಾರೊಂದು ಹೊಸಸುದ್ದಿ । ನಿನ್ನತ್ತೆ
ಗರ್ವಾತನದಲ್ಲಿ ಇರೋವಾಳೋ."
"ಮಾವನ ಮನಸಾ ಈಗೋಗಿ ತೆಳಗೂವೆ[೧೦]
ಈಗವನ ಮಗಳಾ ತರಸೂವೆ
ಈಗವ್ನ ಮಗ್ಳಾ ತಾರದೇ ಇದ್ದಾರೆ
ಅಚ್ಚ ಪಾಂಡವರಾ ಮಗನಲ್ಲ
ಅತ್ತೆಯ ಮನಸಾ ಈಗೋಗಿ ತೆಳಗೂವೆ

ಈಗವ್ನ ಮಗಳಾ ತರಸೂವೆ
ಈಗವ್ಳ ಮಗ್ಳಾ ತಾರದೆ ಇದ್ದಾರೆ
ಅಚ್ಚ ಪಾಂಡವ್ರಾ ಮಗನಲ್ಲ
ಬೀರಿದ್ದ ಚೆಂಡು ಹೆಕ್ಕಿವಂದನೆ ಮಾಡಿ
ದೂರಿದ್ದ ಚೆಂಡು ತಳನಲ್ಲ । ಆಗಲೆಂದು
ಬೋರೀನೇ ಆನೀ ನೆಗದಾನೆ.
ಬೋರೀನೇ ಆನೀನೆಗ್ದತ್ತಿ ಅಬ್ಮನ್ನು ।

ತನ್ನಾ ಅರಮನೆಗೇ ನೆಡದಾನೆ । ಅಬ್ಮನ್ನು
ಹೋಗೀ ಬಾಗಲ್ಲೇ ನಿಲೋವಾನೆ । ಅಬ್ಮನ್ನು
ಬೋರೀನೇ ಆನೀ ಇಳದಾನೇ । ಅಬ್ಮನ್ನು
ಮಾಳೂಗೀ ಒಳಗೇ ನೆಡದಾನೆ । ಅಬ್ಮನ್ನು
ತೂಗು ಮಂಚಲ್ಲೇ ಕುಳತಾನೆ । ಅಬ್ಮನ್ನು
ತನ್ನಾ ತಾಯವ್ವೀ ದೆನಿದೂರೇ
ತನ್ನಾ ತಾಯವ್ವಿ ದೆನಿದೂರ್‍ವದ್ನು ಸುಬದ್ರಿ

೭. ಸೊಡಿಯಾಟವನ್ನಾಡುವಗದ್ದೆ ೮. ಅಭಿಮನ್ಯು ೯. ಸೊಕ್ಕಿನಲ್ಲಿ ೧೦. ತಿಳಿದುಕೊಳ್ಳುವೆ.

ಮಗ್ನಾ ಒಡ್ನೋಗೇ ನಿಲೋವಾಳೆ । ಸುಬದ್ರಿ
ಏನು ಕಾರಣಲೆ ಕರದಿಯೋ.
"ಕರ್ದಂಬ್ ಕಾರ್ರ್ಯವಿಲ್ಲ ಕಿರಿದುಂಬೆಸರವಿಲ್ಲ
ಹಾಲ್ಗಂಜಗಲೂಟಕೆ ಅನುಮಾಡು"
ಅಟ್ಟಂಬ ಮಾತಾ ಕೇಳಾಳೆ ಸುಬದ್ರಿ
ಮಾಳೂಗಿ ಒಳಗೆ ನೆಡದಾಳೆ ।

ಅಟ್ಟದ ಮೆನನಾ ಜೀರಗ್ ಸಣ್ಣಕ್ಕಿ
ಅನ್ನಾ ಮೆಗ್ರಕೆ ಅನುಮಾಡಿ
ಅಟ್ಟದ ಮೆನನಾ ಜೀರಗ್ ಸಣ್ಣಕ್ಕಿ
ಹಾಲಾ ಪಾಯ್ಸಕೆ ಅನುಮಾಡಿ
ಬೇಲೀ ಮೆನನಾ ದಾರೀ ಹೀರೆಕಾಯಿ
ದಾರಿಯಾ ಹೆರದೇ ಮೆಣಸಿಕ್ಕಿ
ಹಿತ್ಲಾ ಕಣ್ಣಾ ಬಟ್ಟು ಕೆಂಬರಗೀಯಾ

ಬೊಟ್ಟೆಣ್ಣೆ ಕಿಟ್ಟೀ ಮೆಣಸಿಟ್ಟಿ
ಎಲಮೆರ ಒಂಬತ್ ಬಗೆ ಕಾಯ್‌ಮೆರ್ ತೊಂಬತ್‌ಬಗೆ
ನೂರೊಂದು ಬಗೆಯಾ ಅಡಗೀಯೇ
ನೂರೊಂದು ಬಗೆಯಾ ಅಡಗೀಯೇ
ನೂರೊಂದು ಬಗೆಯಾ ಅಡಗೀಯಾ ಕಜ್ಜಾಯಾ
ಅನು ಮಾಡಿದಳೊಂದು ಗಳಿಗ್ಯಲೀ । ಸುಬದ್ರಿ
ಸಣ್ಣ ಗಿಂಡ್ಯಲಿ ಉದಕವ । ತಡಕಂಡಿ

ಮಾಳಗ್ಗಿಂದೆರಗೆ ಬರೋವಾಳೇ । ಸುಬದ್ರಿ
ಮಗನಾ ಒಡ್ನೋಗೀ ನಿಲೋವಾಳೆ । ಸುಬದ್ರಿ
ಮಗ್ಗೊಂದ್ ಚಂಬುದಕಾ ಕೊಡೋವಾಳೆ
ತಾಯ್ ಕೊಟ್ಟುದಕವಾ ತಟ್ಟಾನೆ ತಡ್ಡಾನೆ
ಕಾಲಾ ಸಿರಿಮೊಕವಾ ತೊಳದಾನೆ । ಅಬ್ಮನ್ನು

ಮಾಳೂಗೀ ಒಳಗೆ ನೆಡದಾನೆ
ಮಾಳೂಗೀ ಒಳೆಗೆ ನೆಡ್ವದ್ನು ಸುಬದ್ರಿ
ಹೋನ್ನಾ ಮಣಿಯೊಂದಾ ಮಡಗಾಳೆ
ಕಿರಳಾ ಬಾಳೆಲಿಯಾ ತೊಳದಾಸಿ ಸುಬದ್ರಿ
ಅನ್ನಾ ಮೆಗ್ರವಾ ಬಡಸಾಳೆ । ಸುಬದ್ರಿ

ತುಪ್ಪಾ ಸಕ್ಕರೆಯ ಎರವಾಳೆ
ತುಪ್ಪಾ ಸಕ್ಕರೆಯಾ ಎರ್ದ್ದಿ ತಿರ್ದುಗ್ರೊಟ್ಗೆ
ಉಂಡೆದ್ದನೊಂದು ಗಳಗ್ಯಲ್ಲೇ । ಅಬ್ಮನ್ನು
ಪನ್ನೀರಲಿ ಮೊಕವಾ ತೊಳದಾನೆ । ಅಬ್ಮನ್ನು

ತೂಗು ಮಂಚಲ್ಲೆ ಕುಳೋವಾನೆ
ತೂಗು ಮಂಚಲ್ಲೆ ಕುಳುವದ್ನು ತಾಯವ್ವಿ
ಎಂಜಲ ಮಯ್ಲುಗಿಯಾ ತೊಳದಾಳೆ । ಸುಬದ್ರಿ
ಮಾಳೂಗಿ ಒಳಗೆ ನೆಡದಾಳೆ
ಆಯೊಳ್ಗಾ ಹಣ್ಣಡಕಿ ಸೋಯಿಸಿದ ಬೆಳಿಎಲೆ
ಹಾಲಲ್ಲಿ ಬೆಂದಾ ತೆನೆಸುಣ್ಣಾ । ತಡಕಂಡಿ

ಮಾಳಗ್ಗಿಂದೆರಗೇ ಬರೋವಾಳೆ । ಸುಬದ್ರಿ
ಮಗ್ಗಾ ಒಡ್ನೋಗಿ ನಿಲೂವಾಳು । ಸುಬದ್ರಿ
ಮಗ್ಗೊಂದೀಳ್ಯವಾ ಕೊಡೋವಾಳು
ತಾಯ್ ಕೊಟ್ಟೀಳ್ಯವಾ ತಟ್ಟಾನೆ ತಡದಾನೆ
ಆಯಾಕೊಂದೀಳ್ಯ ಮೆಲೋವಾನೆ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಮಾಳಗ್ಗಿಂದೆರಗೇ ಬರೋವಾನೆ

ಮಾಳಗ್ಗಿಂದೆರಗೇ ಬರೋವಾನೆ । ಅಬ್ಮನ್ನು
ರಾಜಂಗ್ಳ ಮೆಟ್ಟಾ ಇಳದಾನೆ । ಅಬ್ಮನ್ನು
ಆನೀ ಸಾಲೀಗೇ ನೆಡದಾನೆ । ಅಬ್ಮನ್ನು
ಅಂದೊಳ್ಳೊಂದಾನಿ ಹೊಡಕಂಡಿ । ಅಬ್ಮನ್ನು
ತಿಂಬೂಕಿಕ್ಕನಿಯೇ ಕಡಲೀಯ । ಅಬ್ಮನ್ನು
ಆನೀಬಾಲಕ್ ಸುವರ್ನಾ ಗೆಯಸಾನೇ । ಅಬ್ಮನ್ನು
ಮಾಳೂಗಿ ಒಳಗೆ ನೆಡದಾನೆ । ಅಬ್ಮನ್ನು
ಅಟ್ಟತ್ತಿ ಪೆಟ್ಟಗಿಯ ತೆಗದಾನೆ । ಅಬ್ಮನ್ನು
ಮೆಟ್ಟಿ ಬೀಗವಾ ಕರದಾನೆ । ಅಬ್ಮನ್ನು
ಮುಚ್ಚೀಲ ತಗದೇ ಕಡಗಿಟ್ಟಿ । ಅಬ್ಮನ್ನು
ಪಟ್ಟೆ ಜೋತ್ರವಾ ನೆರದುಟ್ಟಿ । ಅಬ್ಮನ್ನು
ಮುತ್ನ ಮುಂಡಸ್ನಾ ತಲಗ್‌ಸುತ್ತಿ । ಅಬ್ಮನ್ನು

ಪಟ್ಟೆ ಜೋತ್ರವಾ ಹೊಗಲೀಗೆ ಹಾಯ್ಕಂಡೀ
ರನ್ನದಯ್ದಿಳ್ಯಾ ತಡದಾನೆ । ಅಬ್ಮನ್ನು
ಚಿನ್ನದಯ್ದಿಳ್ಯಾ ತಡದಾನೆ । ಅಬ್ಮನ್ನು
ಮುತ್ನ ಬಾಸಿಮಗಾ ತಡದಾನೆ । ಅಬ್ಮನ್ನು
ಮುತ್ನ ತೊಂಡಲವಾ ತಡದಾನೆ । ಅಬ್ಮನ್ನು
ಪೆಟ್ಟೀಗೆ ಬಾಯಲ್ಲಿ ಮಡಗಾನೆ । ಅಬ್ಮನ್ನು
ಮಾಳಗ್ಗಿಂದೆರಗೇ ಬರೋವಾನೆ । ಅಬ್ಮನ್ನು
ಬಂದೀ ಬಾಗಲ್ಲೇ ನಿಲೋವಾನೆ । ಅಬ್ಮನ್ನು
ಬಂದೀಬಾಗಲ್ಲೇ ನಿಲೋವಾನೆ । ಅಬ್ಮನ್ನು

ತಾಯೀ ಸಿರಿಪಾದಕೆ ಸರಣಂದಿ ।
"ಆಯಿಸ್‌ವಂತಾನಾಗೊ ಆಯಿಸ್ ಬಲಿದವನಾಗೋ
ನೀ ಕಟ್ಟಿದ್ ಮುಂಡಾಸ್ನಾ ತಿರವಾಲಿ" । ಅಂಬದ್ನು
ರಾಜಂಗ್ಳ ಮೆಟ್ಟಾ ಇಳದಾನೆ । ಅಬ್ಮನ್ನು
ಆಣೀ ಕಂಬ್ನಾನೀ ಸೆಳದ್‌ಬಿಚ್ಚಿ । ಅಬ್ಮನ್ನು
ಬೋರೀನೇ ಆನೀ ನೆಗದತ್ತಿ । ಅಬ್ಮನ್ನು
ತನ್ನ ರಾಜ್ಯವ ಗಳದಾನೆ । ಅಬ್ಮನ್ನು
ಮಾವನ ರಾಜ್ಯಕೆ ನೆಡದಾನೆ । ಅಬ್ಮನ್ನು

ಹೋಗೀ ಬಾಗಲ್ಲೇ ನಿಲೂವಾನೇ ಅಬ್ಮನ್ನು
ಬೋರೀನೇ ಆನೀ ಇಳೂವಾನೆ । ಅಬ್ಮನ್ನು
ಮಾಳೂಗೀ ಒಳಗೆ ನೆಡದಾನೆ । ಅಬ್ಮನ್ನು
ತೂಗು ಮಂಚದಲೆ ಕುಳತಾನೆ
ತೂಗುಮಂಚದಲೆ ಕುಳುವದ್ನು ಅವನಾಲೋ
ಮಾವಾದೀರ್ ಹೆರೂಗೇ ಬರೂವಾರು
ಮಾವಾದೀರ್ ಹೆರುಗೆ ಬಂದೀ ಏನಂಬಾರು

ಬಂದೀಯೋ ಅಳಿಯಾ ಕುಳತೀಯೋ
ಬಂದೀನೋ ಮಾವಾ ಕುಳತೀನೋ । ಅಬ್ಮನ್ನು
ಮಾವನ ಸಿರಿಪದಕೆ ಸರಣಂದಿ
ಆಯಿಸವಂತನಾಗೋ ಆಯಿಸ ಬಲಿದನಾಗೋ
ನೀ ಕಟ್ಟಿದ ಮುಂಡಸ್ನಾ ತಿರವಾಲಿ
ಕಟ್ಟಿದ ಮುಂಡೆಸ್ನಕೆ ಎಲ್ಲರೂ ಅ(ಹ?)ರಸಾರೆ[೧೧]

೧೧. ಹರಸಾರೆ

ನಾ ಬಂದೆ ನಿಮ್ಮಾ ಮಗಳೀಗೆ
ಹಸೀಯನಾಲೆರ್ದು[೧೨] ಸಿಸುವೊಂದಾ ಸಲ್ಗೀದೊ
ಸಿಸುವಾ ಸೊದರಕೆ ಕೊಡಲಾರು । ಅಂಬುದ್ನು
ಅತ್ತೇದೀರ್ಥೆರ್ಗೆ ಬರೂವಾರು
ಅತ್ತೆ ದೀರ್ಥೆರಗೇ ಬಂದೀ ಏನಂಬಾರು

ಬಂದೀಯೋ ಅಳಿಯಾ ಕುಳತೀಯೋ । ಅಂಬುದ್ನು
ಬಂದೀನೇ ಅತ್ತೆ ಕುಳತೀನೇ । ಅತ್ತೀಯ
ಸಿರಿಪದಕೆ ಸರಣಂದಿ
ಆಯೀಸವಂತನಾಗೋ ಆಯಿಸ ಬಲಿದವನಾಗೋ
ನೀ ಕಟ್ದ್ ಮುಂಡಾಸಾ ತಿರವಾಲಿ
ಕಟ್ಟಿದ ಮುಂಡಾಸ್ಕೆ ಎಲ್ಲವ್ರೂ ಹರಸಾರೆ ಅತ್ತೆ

ನಾ ಬಂದೆ ನಿನ್ನಾ ಮಗಳೀಗೆ
ಅಟ್ಟಂಬಾ ಮಾತಾ ಕೇಳಾರೆ ಅತ್ತೆಯೋರು
ತಾವೆದ್ದಿ ಒಳಗೆ ನೆಡದಾರೆ
ತಾವೆದ್ದಿ ಒಳಗೇ ನೆಡ್ವದ್ನು ಒಳಗಿದ್ದಾ
ಬಾವಾದೀರೆರ್ಗೆ ಬರೋವಾರು
ಬಾವಾದೀರೆರ್ಗೆ ಬಂದೀ ಏನಂಬಾರೆ

ಬಂದೀಯೋ ಬಾವಾ ಕುಳತೀಯೋ । ಅಂಬುದ್ನು
ಬಂದೀನೋ ಭಾವಾ ಕುಳತೀನೋ । ಅಂದೇಳಿ.
ಬಾವನ ಸಿರಿಪದಕೇ ಸರಣಂದೇ
ಆಯೀಸವಂತನಾಗೋ ಆಯಿಸಬಲಿದವ ನಾಗೋ
ನೀ ಕಟ್ದ್ ಮುಂಡಸ್ನಾ[೧೩] ತಿರವಾಲಿ
ಕಟ್ದ ಮುಂಡಸ್ಕೆ ಎಲ್ಲಾರು ಹರಸಾರೆ ಬಾವಾ

ನಾ ಬಂದೆ ನಿನ್ನಾ ಕಿರ್ದಂಗಿಗೆ
ಅಟ್ಟಂಬಾ ಮಾತಾ ಕೇಳಾರೆ ಬಾವ್ದೀರು
ಮಾಳೂಗೀ ಒಳಗೆ ನೆಡದಾರೆ
ಅಪ್ಪನ ಮನೆಯಾ ಅಟ್ಟಕೆ ಏಣೀಚಾಚೀ
ಹತ್ತೀ ನೋಡಿದಳೋ ದುರಗವಾ । ತಂಗವ್ವಿ

೧೨. ಆಕಳ ಹಾಲನ್ನು ಕುಡಿಸಿ ೧೩. ರುಮಾಲು

ಊರ್ಗ್ಗೆ ತನ್ನರಸು ಚಲೂವಾನೇ
ಚಲುವ ಚನ್ನಿಗನೆಂದು ಪಟ್ಟಿ ಉಟ್ಟಾಳೆ
ಒಲುಮೀಗೆ ಚಿನ್ನಾ ಇಡೋವಾಳೇ । ತಂಗವ್ವಿ
ಒಲುಮಿಗೆ ಬಣ್ಣಾ ಎಸೋದಾಳೇ । ತಂಗವ್ವಿ
ಹಸಿಯಾ ಹೆಮ್ಮರನಾ ಅಡಕೀಯೇ ।ಯ। ಸಿಂಗರಿಸಿ
ಹುಸಿ[೧೪] ಒಡ್ಡೀ ನಾರೀ ಮುಡದಾಳೇ.

ಕಾವಣದಲ್ಲೂ ಸುಳ್ಳಾಡು ಕನಕಾಂಗಿ
ಚಿನ್ನದ ಆಯ್ದಿಳ್ಯ ತಡಿಬಾರೇ
ಕಾವಣದಲ್ಲಿ ಸುಳ್ಳಾಡು ಕನಕಾಂಗಿ
ರನ್ನದ ಅಯ್ದೀಳ್ಯ ತಡೀಬಾರೇ.
ಚಿನ್ನದ ಅಯ್ದೀಳ್ಯಾ ಕೊಡ್ವಾನೇ ನಾರಿಯರಕಯ್ಲೆ

ಮುತ್ತನ ತೊಂದಲವಾ ಕೊಡೋವಾನೇ
ಮುತ್ತನ ತೊಂಡಲವಾ ಕೊಡುವದ್ನು ನಾರಿಯೋರು
ಮುತ್ತೀನಾ ತೊಂಡಲವಾ ಮುಡೀಸಾರೆ
ಆಚೆ ಅಕ್ಕಾದೀರು ಈಚೆ ಬಾವಾದೀರ,
ಜೋತ್ರದ ಸೆರಗಾ ಇಳೀಬಿಟ್ಟೀ । ಮದುವಣ್ಣ
ನಾರೀ ಸೇರಾನೆ ಒಡನಲ್ಲಿ

ಚಲ್ಕೇ ಚೊಳ್ಳಿ ಕದ್ರು ಕುಲ್ಕೇ ತುಂಬೀ ಹೂಂಗು
ಕೆಂದೀಯಾ ಕರ್ದೀ ನೊರೆಇಹಾಲು ।ಲ। ಗಿಂಡೀ ತುಂಬೀ
ಹೆಣ್ಣೀನಪ್ಪ ಹೊತ್ತಾನೆ ಮುಡಿಮೆನೆ.
ಎಡದಾ ತೊಡಿಮೆನೆ ಅಳಿಯಾ ಬಲದಾ ತೊಡಿಮ್ಮೈನೆಮಗಳು
ಸಿರಿಗಂಗೆ ಗೌರಿ ತೊಡಿಮೆನೆ । ಕುಳ್ಳಿಸಿಗಂಡಿ
ಎರ್ದಾನೆ ಸಾಸನದಾ ಕಯದಾರಿ

ಆನಂದದಕೆರೆ ಇರಳೀ ಕಾಮನಬಯ್ಲು
ತೋರಿ ಉಂಬಳಿಯಾ ಕೊಡೋವಾನೆ
ಮಾಳುಗಿ ಒಳಗೆ ಅಡ್ಡಾಗ್ವಾಡಿಯ ಮನೆ
ಮುದ್ದಕ್ಕ ನೆಂಬಾ ಹರಿವಾಳ । ಕಂಚನ ಹುಟ್ಟು
ಹೊಗುವಾಗ ಬಳುವಳಿಯಾ ಕೊಡೋವಾನೇ

---

೧೪. ಕೊನೆ

ಕೊಟ್ಟಾಗೀ ಒಳಗೀನಾ ಗಟ್ಟೊಮಣಕೆಮ್ಮಿಯಾ
ಬಾಲಕೆ ಸುವರ್ನಾ ಗಳೀಸಾನೆ
ಬಾಲಕೆ ಸುವರ್ಣಾ ಗಳಿಸಿದ ಎಮ್ಮಿಯ
ಮಗಳೀಗೆ ಬಳವಳಿಯಾ ಕೊಡೋವಾನೇ
ಕಂಬುಸಂದಕದಿಂದೆ ಸರ್ವವಾದೀದಿಂದೆ

ಕನಕಾಂಗೀ ದಿಬ್ಬಣ ಸವನಾದೆ
ಕನಕಂಗೀ ದಿಬ್ಬಣ ಸವ್ನೇ ಸಿಂಗಾರಾಗಿ
ಒಟ್ಟಾಗಿ ಒಂದಾನೀ ನೆಗದತ್ತೀ ಕನಕಾಂಗಿ ಅಬ್ಬನ್ನು
ತಮ್ಮ ಅರಮನೆಗೆ ನೆಡದಾರೆ.

ಕನಕಾಂಗಿ ಕಲ್ಯಾಣ

ಹೊತ್ತಾರೆ ಮುಂಚೆ ಎದ್ದಾಳೇ ಸೂಬದ್ರಿ
ಕಾಲೂ ಸಿರಿಮೊಕವಾ ತೊಳದಾಳೇ
ಕಾಲೂ ಶ್ರೀಮೊಕವಾ ತೊಳದಾಳೇ ಸೂಬದ್ರಿ
ಮಾಳೂಗಿ ಒಳಗೇ ನೆಡದಾಳೇ ।
ಮಾಳೂಗಿ ಒಳಗೇ ನೆಡದಾಳೆ ಸೂಬದ್ರಿ
ಹೂಂಗಿನ ಚೆಬ್ಬಿ ಬಲಗಯ್ಲಿ ।
ಹೂಂಗೀನ ಚೆಬ್ಬಿ ಬಲಗಯ್ಲಿ ತಡಕಂಡಿ[೧]
ಮಾಳಗ್ಗಿಂದ್ಹೆರಗೇ ಬರವಾಳೆ ।
ಮಾಳಗ್ಗಿಂದ್ಹೆರಗೇ ಬರುವಾಳು ಸೂಬದ್ರಿ
ರಾಜಂಗಳ ಮೆಟ್ಟ ಇಳದಾಳೆ ।
ರಾಜಂಗಳ ಮೆಟ್ಟ ಇಳದಾಳೆ ಸೂಬದ್ರಿ
ರಾಜೋಮಾರ್ಗದಲಿ ನೆಡದಾಳೆ
ರಾಜಮಾರ್ಗದಲಿ ನೆಡದಾಳೆ ಸೂಬದ್ರಿ
ಹೂಂಗೀನಕ್ಕಲಕೇ ನೆಡದಾಳೆ ।
ಹೂಂಗೀನಕ್ಕಲಕೇ ನೆಡದಾಳೆ ಸೂಬದ್ರಿ
ಹೂಂಗ್ನಹಕ್ಕಲ ಬೇಲಿ ತೆಗದಾಳೆ ।
ಹೂಂಗ್ನಹಕ್ಕಲ ಬೇಲಿ ತೆಗದಾಳೇ ಸೂಬದ್ರಿ
ಹೂಂಗ್ನಕ್ಕಲೊಳಗೇ ನೆಡದಾಳೆ ।
ಹೂಂಗ್ನಕ್ಕಲೊಳಗೆ ನೆಡದಾಳು ಸೂಬದ್ರಿ
ಎಳಿಯು ಸಿಂಗರವಾ ಒಗದಾಳೆ ।
ಎಲ್ಲಾಮಲ್ಲುಗೆ ಸುರಗಿ ಸ್ಯೆಮಂತೂಗೇ
ಹೂಂಗಂಬ್ ಹೂಂಗೆಲ್ಲಾ ಕೊಯೀದಾಳೇ ।
ಹೂಂಗಂಬ್ ಹೂಮಗೆಲ್ಲಾ ಕೊಯ್ದೀ ದಂಡೀಕಟ್ಟೀ
ಹೂಂಗ್ನ ಚೆಬ್ಬೀಲೇ ಮಡೋಗಾಳೆ । ಸೂಬದ್ರಿ
ಹೂಂಗ್ನಹಕ್ಕಲ್ಹೆರಗೆ ಬರೋವಾಳೆ ।

---

೧. ತೆಗೆದುಕೊಂಡು

ಹೂಂಗ್ನಕ್ಕಲೆರಗೆ ಬರುವಾಳು ಸೂಬದ್ರಿ
ಹೂಂಗ್ನಕ್ಕಲ ಬೇಲಿ ಇಡೋವಾಳೆ ।
ಹೂಂಗ್ನ ಬೇಲಿ ಇಡುವಾಳು ಸೂಬದ್ರಿ
ತನ್ನಾಲರ ಮನಗೇ ಬರೋವಾಳೆ ।
ತನ್ನಾಲರಮನಗೆ ಬರುವಾಳು ಸೂಬದ್ರಿ
ಬಂದೀ ಬಾಗಲ್ಲೇ ನಿಲೋವಾಳೆ ।
ಬಂದೀ ಬಾಗಾಲ್ಲಿ ನಿಲುವಾಳು ಸೂಬದ್ರಿ
ಕಾಲು ಸಿರಿಮೊಕವಾ ತೊಳದಾಳೆ ।
ಕಾಲು ಶ್ರೀ ಮೊಕವಾ ತೊಳದಾಳು ಸೂಬದ್ರಿ
ಮಾಳೂಗಿ ಒಳಗೇ ನೆಡದಾಳೆ । ಸೂಬದ್ರಿ
ಹೂಂಗಿನ ಚೆಬ್ಬೀ ಮಡೋಗಾಳೆ । ಸೂಬದ್ರಿ
ಸಿಕ್ಕದ ಕಣ್ಣಾ ಸೆಡೋಲಿಸೇ ।
ಸಿಕ್ಕದ ಕಣ್ಣಾ ಸೆಡಲೀಸೇ ಸೂಬದ್ರಿ
ನೆತ್ತೀ ತುಂಬೆಣ್ಣೇ ಎರದಾಳೆ ।
ತಂಪೀಗೆ ಎಳ್ಳೆಣ್ಣೆ ಹಣಿಯೆಣ್ಣಿ ತಡಕಂಡಿ
ನೆತ್ತಿ ತುಂಬೆಣ್ಣೆ ಎರದಾಳೆ । ಸೂಬದ್ರಿ
ಬಣ್ಣದ ಬಾಚಣಗಿ ಬಲಗಯ್ಲಿ ತಡಕಂಡೇ
ಪಟ್ಟೆ ಮಂಚದಲೆ ಕುಳತಾಳೆ ।
ಪಟ್ಟೆ ಮಂಚದಲೆ ಕುಳತಾಳೆ ಸೂಬದ್ರಿ
ಕಟ್ಟದ ಸೆರಮುಡಿಯಾ ಸೆಡೋಲಿಸೆ ।
ಕಟ್ಟದ ಸೆರಮುಡಿಯಾ ಸೆಡಲೀಸಿ ಸೂಬದ್ರಿ
ಕೆನ್ನೀಯಾ ನಿಗರಾ ಎಡಕೊತ್ತೇ ।
ಕೆನ್ನೀಯಾ ನಿಗರಾ ಎಡಕೊತ್ತಿ ಬಲಕೊತ್ತಿ
ಬಲ್ಲುಳ್ಳರಂಬಾ ಬಗತಾಲೆ ಬಾಮಾಕೇ
ಬಾಚಿ ಕಟ್ಟಿದಳೆ ಸೆರಮುಡಿಯೇ ।
ಬಾಚಿ ಕಟ್ಟಿದಳೆ ಸೆರಮುಡಿ ಬಾಮಾಕೆ
ಎಳಿಯು ಸಿಂಗರವ ಮುಡೀದಾಳೆ । ಸೂಬದ್ರಿ
ಕೆನ್ನಿಗೆ ಕ್ಯೆದುಗಿಯಾ ಮುಡೀದಾಳೆ ।
ಎಲ್ಲಾ ಮಲ್ಲೂಗೇ ಸುರಗೇ ಸ್ಯೆಮಂತೂಗಿ
ಹೂಂಗಂಬ್ ಹೂಂಗೆಲ್ಲಾ ಮುಡೀದಾಳೆ । ಸೂಬದ್ರಿ
ಕುಳತಾ ಗದ್ದಗಿಯಾ ಜಡದೆದ್ದೇ । ಸೂಬದ್ರಿ
ಮಾಳೂಗಿ ಒಳಗೇ ನೆಡದಾಳೆ । ಸೂಬದ್ರಿ
ಬಣ್ಣದ ಬಾಚಣಗಿ ಮಡೋಗಾಳೆ ।
ಬಣ್ಣದ ಬಾಚಣಗಿ ಮಡಗಾಳೆ ಸೂಬದ್ರಿ

ಅಟ್ಟದ ಪೆಟ್ಟಗಿಯಾ ತೆಗದಾಳೆ ।
ಅಟ್ಟದ ಪೆಟ್ಟಗಿಯಾ ತೆಗದಾಳೆ ಸೂಬದ್ರಿ
ಮೆಟ್ಟೀ ಬೀಗವಾ ಕರೀದಾಳೆ ।
ಮೆಟ್ಟೀ ಬೀಗವಾ ಕರದಾಳೆ ಸೂಬದ್ರಿ
ಮುಚ್ಚೀಲ ತೆಗದೇ ಕಡಗಿಟ್ಟೇ
ಮುಚ್ಚೀಲ ತೆಗದಿ ಕಡಗಿಟ್ಟೇ ಸೂಬದ್ರಿ
ತನ್ನ ಹೂವರಣಾ ನೆರದುಟ್ಟೆ । ಸೂಬದ್ರಿ
ತನ್ನಾ ಚಿನ್ನೆಲ್ಲಾ ಕೆಮೀದುಂಬೇ ।
ತನ್ನಾ ಚಿನ್ನೆಲ್ಲಾ ಕೆಮಿದುಂಬಿ ಕೊರಳನೆ ದುಂಬಿ
ತೋಳಗ ರವ್ಕೀಯಾ ಇಡೋವಾಳೆ ।
ತೋಳಗ ರವ್ಕೀಯಾ ಇಡುವಾಳು ಸೂಬದ್ರಿ
ನುಸಲಿಗ್ ಶ್ರೀಗಂದಾ ಇಡೋವಾಳೆ ।
ನುಸಲಿಗ್ ಶ್ರೀಗಂದಾ ಇಡುವಾಳು ಸೂಬದ್ರಿ
ಕಣ್ಣೀಗೆ ಕಪ್ಪಾ ಇಡೋವಾಳೆ । ಸೂಬದ್ರಿ
ಹಸ್ತ್‌ಕಡಗದ[೨] ಜೋಡಾ ಮಡೋಲಲ್ಲೇ
ಹಸ್ತ್‌ಕಡಗದ ಜೋಡಾ ಮಡಲಲ್ಲಿಟ್ಟೀ ಗಂಡೇ
ಪೆಟ್ಟಗಿ ಬಾಯಲ್ಲೇ ಮಡಗಾಳೆ । ಸೂಬದ್ರಿ
ಮೆತ್‌ಗ್ಗಿಂದು[೩] ಕೆಳಗೆ ಇಳದಾಳೆ । ಸೂಬದ್ರಿ
ಮಾಳಗ್ಗಿಂದ್ಧೆರಗೆ ಬರವಾಳೆ ।
ಆಕಯ್‌ಕಂಕಣ ಮಾಕಯ್ಲೆ ತಿದ್ದೀತೆ
ಬಣ್ಣದಾ ನೆರಿಯೇ ಒಲೀಯಾತೇ
ಬಣ್ಣದಾ ನೆರಿಯೇ ಒಲಿಯಾತೆ ಸೂಬದ್ರೆ
ಅಣ್ಣನರಮನಗೆ ಸವನಾಳೇ । ಸೂಬದ್ರಿ
ರಾಜಂಗಳ ಮೆಟ್ಟಾ ಇಳದಾಳೆ ।
ರಾಜಮಗಳ ಮೆಟ್ಟ ಇಳದಾಳು ಸೂಬದ್ರಿ
ರಾಜ ಮಾರಗದಲಿ ನೆಡದಾಳೇ ಸೂಬದ್ರಿ
ತನ್ನ ರಾಜ್ಯವ ಗಳೀದಾಳೇ । ಸೂಬದ್ರಿ
ಅಣ್ಣನ ರಾಜ್ಯಕೇ ನೆಡದಾಳೆ । ಸೂಬದ್ರಿ
ಹೋಗೀ ಬಾಗಲ್ಲಿ ನಿಲವಾಳೆ ।
ಹೋಗಿ ಬಾಗಲ್ಲಿ ನಿಲವದ್ನು ನಾರೆಣದ್ಯೆವಾ
ತಡದನೆ ಚೆಂಬಗಲಿ ಉದಕಾವ ।
ಅಣ್ಣ ಕೊಟ್ಟುದಕಾ ತಟ್ಟನೆ ತಡದಾಳೆ

---

೨. ಕೈಕಡಗ ೩. ಮಾಳಿಗೆಯಿಂದ

ಕಾಲೂ ಸಿರಿಮೊಕವ ತೊಳದಾಳೆ ।
ಕಾಲೂ ಶ್ರೀ ಮೊಕವಾ ತೊಳದಾಳೆ ಸೂಬದ್ರಿ
ಮಾಳೂಗಿ ಒಳಗೇ ನೆಡದಾಳೆ । ಸೂಬದ್ರಿ
ಪಟ್ಟೆ ಮಂಚದಲೆ ಕುಳತಾಳೆ ।
ಪಟ್ಟೆ ಮಂಚದಲಿ ಕುಳುವದ್ನು ನಾರೆಣದ್ಯೆವಾ
ತನ್ನಾ ಕಯ್‌ಚೆಂಚೀ ಬಿಡಸಾನೆ । ನಾರೆಣದ್ಯೆವಾ
ತಂಗೀಗೊಂದೀಳ್ಯ ಕೊಡವಾನೆ । ನಾರೆಣದ್ಯೆವ
ತಾನೊಂದೀಳ್ಯ ಮೆಲವಾನೆ ।
ಎಲಿಯೊಂದ್ ತಿಂದಾನೆ ರಜವಲ್ಲೇ ಉಗಳಾನೆ
ಆಗೊಂದೂ ಮಾತಾ ನುಡೀದಾನೆ ।
ಎಂದೂ ಬರದಿದ್ದ ತಂಗೀಯೇ ಇಂದೇನ ಬಂದೀಯೆ
ರಾಜ್ಯಬೇಕಾದರೆ ಇದ ಆಳೆ ।
ರಾಜ್ಯಬೇಕಾದ್ರೆ ಇದ ಆಳೆ ।
ಆಗೊಂದು ಮಾತಾ ನುಡೀದಾಳೆ ।
ನೀ ಆಳೂ ರಾಜ್ಯವ ನೀನೇ ಆಳೋ ಅಣ್ಣ
ನಾ ಬಂದೆ ನಿನ್ನಾ ಮಗಳೀಗೆ ।
ನಾ ಬಂದೆ ನಿನ್ನಾ ಮಗಳೀಗೆ ಅಂಬದ್ನು
ಆಗೊಂದು ಮಾತಾ ನುಡೀದಾನೆ ।
ಹಿಣ್ಣಗ ಬರುವಳು ನಿನ್‌ಮೊನ್ನಗ್ ಬರಲಿಲ್ಲ
ನಿನಗಿಂದು ಮುಂದೆ ಕವಲೋರೆ[೪] ।
ನಿನಗಿಂದು ಮುಂದೆ ಕವಲೋರು ಪಾಂಡೋರು
ಹಿಣ್ಣಗ ಚೂಡಂಗ[೫] ತಡದಾರೆ ।
ಅವ್ರಿಟ್ಟ ಚೂಡಂಗ ಬಿಚ್ಚಿ ಬೀರಾಡೂವೆ
ನಾಯಿಡುವೆ ಹಸ್ತಾ ಕಡಗಾವೇ ।
ಹೆಣ್ಣಾ ಕೇಳ್ವಳು ನನ್ನೇನಾ ಕೇಳೂವೆ
ಹೆಣ್ಣೀನಾ ತಾಯೀ ಒಳಗುಂಟೇ
ಹೆಣ್ಣೀನಾ ತಾಯಿ ಒಳಗುಂಟು ತಂಗವ್ವ
ಹೋಗ್ ನಿನ್ನ್‌ತ್ತಿಗಿಯಾ ತಿಳದೇ ಬಾರೇ ।
ಅಟ್ಟುಂದ್ ಮಾತನು ಕೇಳೀತು ಸೂಬದ್ರಿ
ಕೂತ ಗದ್ದಗಿಯಾ ಜಡದೆದ್ದೇ ।
ಕುಳತಾ ಗದ್ದಗಿಯಾ ಜಡದೆದ್ದೇ ಸೂಬದ್ರಿ
ಮಾಳೂಗಿ ಒಳಗೇ ನೆಡದಾಳೆ ।

೪. ಕೌರವರು ೫. ತಲೆಮಣಿ

ಮಾಳೂಗಿ ಒಳಗೇ ಪುಟ್ಟಕ್ಕಿ[6] ತಳಸ್ವತ್ತೀಗೆ
ಪುಟ್ಟಕ್ಕೀಗೊಮ್ಮೆ ನೆರ್‍ಯ್ಯೂವಾಪೆ[7] ।
ಪುಟ್ಟಕ್ಕಿ ತಳಸ್ವಕೆ ಸೆಟ್ಟೀಯರು ತನಗುಂಟೇ
ನಿನದೀರತನ ಸಾಕೇ ಮನಗೋಗೇ
ಮಾಳೂಗಿ ಒಳಗೆ ಸೆಣ್ಣಕ್ಕಿ ತಳಸ್ವತ್ತೀಗೆ
ಸೆಣ್ಣಕ್ಕೀಗೊಮ್ಮೆ ನೆರೂವಾಪೆ ।
ಸೆಣ್ಣಕ್ಕಿ ತಳಸ್ವಾಕೆ ದಾದೀಯರು ತನಗುಂಟೇ
ನಿನದೀರತನ ಸಾಕೇ ಮನಗೋಗೇ
ಅಟ್ಟೊಮದು ಮಾತು ಕೇಳೀತು ಸೂಬದ್ರಿ
ಸಿಟ್ಟೀನಲ್ಲೆದ್ದೀ ಬರೋವಾಳೆ ।
ದಿಡದೀಡೆನಸೀತೇ[8] ನೆಲವೆ ಜಂತರಿಸೀತೆ[9]
ಅಡಗೀದ ಬೆರಳು ಅರೀಯಾದೇ । ಸೂಬದ್ರಿ
ರಾಜಂಗಳ ಮೆಟ್ಟಾ ಇಳೋದಾಳೆ । ಸೂಬದ್ರಿ
ರಾಜೋಮಾರ್ಗದಲಿ ನೆಡದಾಳೆ । ಸೂಬದ್ರಿ
ಸೋಡೀ[10] ಗೆದ್ದಿಗಾಗಿ ನೆಡದಾಳೆ ।
ಸೋಡೀ ಗೆದ್ದೀಲಿ ಸೋಡ್ಯಾಡು ಅಬಿಮನ್ಯ
ಕೇಳೀ ಬಾರೊಂದು ಹೊಸ ಸುದ್ದಿ ।
ಕೇಳೀ ಬಾರೊಂದು ಹೊಸ ಸುದ್ದಿ ನಿನ್ನಲಮಾವ
ದೀರಾತನದಲ್ಲೇ ಇರೋವಾನೋ ।
ಅಟ್ಟೊಂದು ಮಾತಾ ಕೇಳಾನೇ ಅಬಿಮನ್ಯು
ಆಗೊಂದು ಮಾತಾ ನುಡೀದಾನೆ ।
ಮಾವಾನಾ ಮನಸಾ ಈಗೋಗಿ ತೆಳಗೂವೆ[11]
ಹೋಗವ್ರಾ ಮಗಳಾ ತರದಿದ್ರೆ ।
ಹೋಗವ್ರಾ ಮಗಳಾ ತರಾದೇಯಿದ್ದಾರೆ
ಧೀರಾ ಪಾಂಡೋರಾ ಮಗನಲ್ಲಾ ।
ಚೆಂಡನ ಗೋಳೀಲಿ[12] ಚಂಡಾಡೂ ಅಬಿಮನ್ಯ
ಕೇಳೀ ಬಾರೊಂದು ಹೊಸ ಸುದ್ದಿ ।
ಕೇಳೀ ಬಾರೊಂದು ಹೊಸ ಸುದ್ದಿ ನಿನ್ನಾಲತ್ತೆ
ದೀರತನದಲ್ಲೇ ಇರೋವಾಳೋ ।
ಅತ್ತೀಯ ಮನಸ ಮತ್ತೋಗಿ ತೆಳಗೂವೆ
ಮತ್ತವ್ರಾ ಮಗಳಾ ತರದಿದ್ರೆ ।

---

೬. ಸಣ್ಣಕ್ಕಿ ೭. ನೆರವಾಗುವೆ ೮. ದಡಗುಡಿಸುತ್ತ ೯. ನಡುಗಿತು ೧೦. ಸೋಡಿಯಾಟದ ೧೧. ತಿಳಿದುಕೊಳ್ಳುವೆ ೧೨. ಬಯ್ಲಲ್ಲಿ

ಮತ್ತವ್ರಾ ಮಗಳಾ ತರದೇಗಿದ್ದಾರೆ
ಪಂಚಪಾಂಡೋರಾ ಮಗನಲ್ಲಾ
ಬೀರೀದ ಚೆಂಡಾ ಹೆಕ್ಕೀ ಒಂದಿಟ ಮಾಡೇ
ಮಿಕ್ಕಿದ್ದ ಚೆಂಡಾ ತಳನಲ್ಲೇ ।
ಮಿಕ್ಕಿದ್ದ ಚೆಂಡಾ ತಳನಲ್ಲೊಂದಿಟ ಮಾಡೆ
ಬೋರೀನೆ ಆನೀ ರತವೇರೆ ।
ಬೋರೀನೆ ಆನೀ ರತವೇರಿ ಅಬಿಮನ್ಯ
ಆನೀಗೆ ಚಬಕದಲೇ ಒಗದಾನೆ ।
ಆನೀಗೇ ಚಬಕದಲೇ ಒಗವದ್ನು ಆ ಆನಿ
ರಾಜೋ ಮಾರ್ಗದಲಿ ನೆಡದಾವೇ ।
ರಾಜ ಮಾರ್ಗದಲಿ ನೆಡದಾವೇ ಆ ಆನಿ
ಅಬಿಮನ್ಯನರಮನಗೇ ನೆಡದಾವೇ ।
ಅಬಿಮನ್ಯನರಮನಗೆ ನೆಡದಾವೇ ಆ ಆನಿ
ಹೋಗಿ ರಾಜಂಗ್ಳಾ ನೆಗದ್ಹತ್ತೇ ।
ಹೋಗಿ ರಾಜಂಗ್ಳಾ ನೆಗದತ್ತೇ ಅಬಿಮನ್ಯ
ಅನೀಗಿಂದು ಕೆಳಗೆ ಇಳದಾನೆ ।
ಆನೀಗಿಂದು ಕೆಳಗೆ ಇಳವದ್ನು ತಾಯವ್ವಿ
ತಡೆದಳು ಚಂಬಗಲಿ ಉದಕಾವೇ ।
ತಾಯಿ ಕೊಟ್ಟುದಕಾ ತಟ್ಟಾನೇ ತಡದಾನೇ
ಕಾಲೂ ಸಿರಿಮೊಕವಾ ತೊಳದಾನೆ ।
ಕಾಲೂ ಸಿರಿಮೊಕವಾ ತೊಳದಾನೇ ಅಬಿಮನ್ಯ
ಪಟ್ಟೆ ಮಂಚದಲೆ ಕುಳತಾನೆ ।
ಪಟ್ಟೆ ಮಂಚದಲಿ ಕುಳವದ್ನು ತಾಯವ್ವಿ
ಬೆಳ್ಳೀಸಂಬಳಗಿ ಬೆಳೀಯೆಲೆ ।
ಬೆಳ್ಳೀ ಸಂಬಳಗಿ ಬೆಳಿಯೆಲಡಕೀಬಾಗ
ಹಾಲೀನಲಿ ಬೆಂದಾ ತೆನೆ ಸುಣ್ಣ ।
ಹಾಲೀನಲಿ ಬೆಂದಾ ತೆನೆಸುಣ್ಣಾ ತಡಕಂಡೇ
ಮಗನಾ ಒಡನೋಗೇ ನಿಲೋವಾಳೆ ।
ಮಗನಾ ಒಡನ್ಬಂದಿ ನಿಲುವಾಳು ತಾಯವ್ವಿ
ಮಗಗೊಂದೀಳ್ಯವಾ ಕೊಡೋವಾಳೆ ।
ಮಗನೊಂದೀಳ್ಯವ ಕೊಡುವಳು ತಾಯವ್ವಿ
ತಾನೊಂದೀಳ್ಯವ ಮೆಲೋವಾಳೆ ।
ತಾಯೀ ಕೊಟ್ಟೀಳ್ಯ ತಟ್ಟಾನೆ ತಡದಾನೆ

ಸೋದೀಸೊಂದೆಲಿಯಾ ಮೆಲೋವಾನೆ ।
ಎಲಿಯೊಂದ್‌ತಿಂದಾನೇ ರಜವಲ್ಲೇ ಉಗಳಾನೆ
ಕುಳತಾ ಗದ್ದಗಿಯಾ ಜಡದೆದ್ದೇ ।
ಕುಳತಾ ಗದ್ದಗಿಯಾ ಜಡದೆದ್ದಿ ಅಬಿಮನ್ಯ
ಮಾಳೂಗಿ ಒಳಗೇ ನೆಡದಾನೆ । ಅಬಿಮನ್ಯ
ಅಟ್ಟಕ ಪೆಟ್ಟಗಿಯಾ ತೆಗದಾನೆ । ಅಭಿಮನ್ಯ
ಮೆಟ್ಟೀ ಬೀಗವಾ ಕರೀದಾನೆ । ಅಬಿಮನ್ಯ
ಮುಚ್ಚೀಲ ತೆಗದೇ ಕಡಗಿಟ್ಟೇ ।
ಮುಚ್ಚೀಲ ತೆಗದೇ ಕಡಗಿಟ್ಟಿ ಅಬಿಮನ್ಯ
ಪಟ್ಟೆ ಜೋತರವಾ ನೆರದುಟ್ಟೇ । ಅಬಿಮನ್ಯ
ನೆಡವಿಗೆ ನೈವಳವಾ ಇಡೋವಾನೆ । ಅಬಿಮನ್ಯ
ಬಣ್ಣದ ನೆರಿಯಂಗಿ ಬುಜಕಿಟ್ಟೇ । ಅಬಿಮನ್ಯ
ಮುತ್ತನ ಮುಂಡೆಸನಾ ತಲೆ ಸುತ್ತೇ ಅಬಿಮನ್ಯ
ಬೆರಳೀಗುಂಗಿಲವಾ ಇಡವಾನೆ । ಅಬಿಮನ್ಯ
ಸಾಲೇ ಹಚ್ಚಡವಾ ಹೊಗಲೀಗೇ[೧೩] ।
ಸಾಲೇ ಹಚ್ಚಡವಾ ಹೊಗಲೀಗೇ ಅಬಿಮನ್ಯ
ಬಣ್ಣದೆಲವಸ್ತ್ರ ಬಲಗಯ್ಲೇ ।
ಬಣ್ಣದೆಲವಸ್ತ್ರ ಬಲಗಯ್ಲೇ ತಡಕಂಡೇ
ಹಸ್ತ್ ಕಡಗದ ಜೋಡಾ ತಡದಾನೆ । ಅಬಿಮನ್ಯ
ಪೆಟ್ಟಗಿ ಬಾಯಲ್ಲೇ ಮಡಗಾನೆ । ಅಬಿಮನ್ಯ
ಮೆಟ್‌ಗಿಂದು ಕೆಳಗೆ ಇಳದಾನೆ । ಅಬಿಮನ್ಯ
ಮಾಳಗಿಂದ್ಹೆರಗೇ ಬರೋವಾನೇ । ಅಬಿಮನ್ಯ
ರಾಜಂಗ್ಳ ಮೆಟ್ಟಾ ಇಳದಾನೆ । ಅಬಿಮನ್ಯ
ಆನೀ ಸಾಲೀಗೆ ನೆಡದಾನೆ । ಅಬಿಮನ್ಯ
ಅಂದುಳ್ ಆನೀಯಾ ಹೊಡತಂದೇ ।
ಅಂದುಳ್ ಆನೀಯಾ ಅಂಗಳಕೇ ಹೊಡತಂದೇ
ಅಂದಚೆಂದದಲೇ ಹೊಡೀಯುದ್ದೇ ।
ಅಂದಚೆಂದದಲೇ ಹೊಡಿಯುದ್ದೇ ಅಬಿಮನ್ಯ
ತಿಂಬೂಕಿಕ್ಕನಿಯೇ ಕಡಲೀಯೇ ।
ತಿಂಬೂಕಿಕ್ಕನಿಯೇ ಕಡಲೀಯ ಅಬಿಮನ್ಯ
ಬಾಲಕ ಸೂವರ್ಣ ಗಳೀಸಾನೆ । ಅಬಿಮನ್ಯ
ಕಾಲಗ್ ಕಟ್ಟನಿಯೇ ಹುರಗೆಜ್ಜೆ[೧೪] ।

೧೩. ಹೆಗಲಿಗೆ ೧೪. ಹುರಿಗೆಜ್ಜೆ

ಕಾಲಕಟ್ಟನಿಯೇ ಹುರಗೆಜ್ಜೆ ಅಬಿಮನ್ಯ
ಕೊಳ್ಳಗ್ ಕಟ್ಟನಿಯೇ ಸರಗೆಂಟೆ ।
ಕೊಳ್ಳಗ ಕಟ್ಟನೆ ಸರಗೆಂಟೆ ಅಬಿಮನ್ಯ
ಕೊಂಬೀಗಿಕ್ಕನಿಯೇ ಕಳಸಾವೇ
ಕೊಂಬೀಗಿಕ್ಕನೆ ಕಳಸವಾ ಅಬಿಮನ್ಯ
ಬೋರಿನೆ ಆನೀ ರತವೇರೆ ।
ಬೋರೀನೆ ಆನೀ ರತವೇರಿ ಅಬಿಮನ್ಯ
ಆನಿನೆ ಚಬಕದಲೇ ಒಗದಾನೆ ।
ಆನಿಗೆ ಚಬಕದಲೆ ಒಗವದ್ನು ಆ ಆನಿ
ತನ್ನಾ ರಾಜ್ಯವಾ ಗಳೀದಾವೇ ।
ತನ್ನಾ ರಾಜ್ಯವಾ ಗಳದಾವೇ ಆ ಆನಿ
ಮಾವನ ರಾಜ್ಯಕೆ ನೆಡದಾವೆ । ಆ ಆನಿ
ಹೋಗಿ ರಾಜಂಗ್ಳ ಇಳದಾವೆ । ಅಬಿಮನ್ಯ
ಆನೀಗಿಂದು ಕೆಳಗೆ ಇಳಿದಾನೆ । ಅಬಿಮನ್ಯ
ಆನೀ ಕೊಂಬ್ಗಾನೀ ಸೆಳದೇ ಕಟ್ಟೆ ।
ಆನೀಕೊಂಬ್ಗಾನಿ ಸೆಳ್ದಕಟ್ಟೇ ಅಬಿಮನ್ಯ
ತಿಂಬೂಕಿಕ್ಕನಿಯೇ ಕಡಲಿಯೇ ।
ತಿಂಬೂಕಿಕ್ಕನಿಯೇ ಕಡಲೀಯ ಅಬಿಮನ್ಯ
ಬಂದೀ ಬಾಗಲ್ಲೇ ನಿಲವಾನೆ ।
ಬಂದೀ ಬಾಗಲ್ಲೇ ನಿಲವದ್ನು ನಾರೇಣದ್ಯೆವಾ
ತಡೆದನೆ ಚಂಬಗಲೆ ಉದಕಾವೇ ।
ಮಾವಾ ಕೊಟ್ಟುದಕಾ ತಟ್ಟನೆ ತಡದಾನೆ
ಕಾಲೂ ಶ್ರೀ ಮೊಕವಾ ತೊಳದಾನೆ । ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ । ಅಬಿಮನ್ಯ
ಪಟ್ಟೆ ಮಂಚದಲೆ ಕುಳತಾನೆ ।
ಪಟ್ಟೆ ಮಂಚದಲಿ ಕುಳುವದ್ನು ನಾರೇಣದ್ಯೆವಾ
ತನ್ನಾ ಕಯ್ ಚೆಂಚೀ ಬಿಡಸಾನೆ ನಾರೇಣದ್ಯೆವಾ
ಅಬಿಮನ್ಯಗೊಂದೀಳ್ಯ ಕೊಡೋವಾನೆ । ನಾರೇಣದ್ಯೆವಾ
ತಾನೊಂದೀಳ್ಯವಾ ಮೆಲೋವಾನೆ ।
ಮಾವಾ ಕೊಟ್ಟೀಳ್ಯ ತಟ್ಟಾನೇ ತಡದಾನೆ
ರನ್ನಾದೊಂದೀಳ್ಯ ಮೆಲೋವಾನೆ ।
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಕುಳತಾ ಗದ್ದಗಿಯಾ ಜಡದೆದ್ದಿ ಅಬಿಮನ್ಯ
ಮಾವನ ಸಿರಿಪದಕೇ ಸರಣಂದೇ ।

ಆಯ್ಸುವಂತನಾಗೋ ಆಯ್ಸು ಬಲಿದವನಾಗೋ
ನಿನ ಪಟ್ಟೆ ಮುಂಡೆಸವೇ ತಿರವಾಲೆ[೧೫] ।
ಪಟ್ಟೆ ಮುಂಡೆಸವೇ ತಿರವಾಲಿ ಅಂದೇಳಿ
ಅಬಿಮನ್ನಿಗ್ ಸಾವರವಾ ಹರಸಾನೆ ।
ಕಟ್ಟಿದ ಮುಂಡಸಕೆ ಎಲ್ಲೋರ್ ಹರಸೋರ್‌ಮಾವಾ
ನಾ ಬಂದೆ ನಿಮ್ಮಾ ಮಗಳೀಗೆ ।
ನಾ ಬಂದೆ ನಿಮ್ಮಾ ಮಗಳಿಗೆ ಅಂಬದ್ನು
ಆಗೊಂದು ಮಾತಾ ನುಡೀದಾನೆ ।
ಹೆಣ್ಣಿಗ್ ಬರುವಂವ ನಿನ್ ಮೊನ್ನಗೆ ಬರಲಿಲ್ಲಾ
ನಿನಗಿಂದು ಮುಂದೆ ಕವಲೋರೋ ।
ನಿನಗಿಂದು ಮುಂದೆ ಕವಲೋರು ಅಬಿಮನ್ಯ
ಹೆಣ್ಣಿಗ್ ಚೂಡಂಗ ತಡದಾರೆ ।
ಅವರಿಟ್ಟ ಚೂಡಂಗ ಬಿಚ್ಚೀ ಬೀರಯ್ದೂವೆ
ನಾಯಿಡುವೆ ಹಸ್ತ ಕಡಗವೇ ।
ನಾಯಿಡುವೆ ಹಸ್ತ ಕಡಗಾವಾ ನಾರೆಣದ್ಯೆವಾ
ಪನ್ನೀ ಮರಿಯಲ್ಲೇ ಮುಗುಳುನೆಗ್ಗೆ ।
ಪನ್ನೀಮರಿಯಲ್ಲೇ ಮುಗುಳನೆಗ್ಗಿಯಾಡ್ವದ್ನು ಮಾದೇವಿ
ಮಗಳೀಗೆ ಬುದ್ದೀ ಒರದಾಳೆ ।
ಅಂಬಲಿ ಉಣಸ್ವಾರೆ ಕಂಬೂಳಿ ಹೊದಿಸ್ವಾರೆ
ದೊಂಬಗರಾ[೧೬] ಬಾಸೀ ಕಲೀಸ್ವಾರೆ ।
ದೊಂಬಗರಾ ಬಾಸೀ ಕಲಿಸ್ವಾರೆ ಮಗಳೆ ಕೇಳೇ
ಅಬಿಮನ್ನಿ ಬಾವ್ಗ ನೀನು ವರಣೆಲ್ಲ ।
ಅಬಿಮನ್ನಿ ಬಾವ್ಗನೀನು ವರಣೆಲ್ಲ ಮಗಳೇ ಕೇಳೆ
ಕವ್ಲರ ಬಾವ್ಗನೀನು ವರಣಿದ್ದೇ ।
ಅಟ್ಟೊಂದು ಮಾತು ಕೇಳೀತು ಕನಕಾಂಗಿ
ಆಗೊಂದು ಮಾತಾ ನುಡೀದಾಳೆ ।
ಅಂಬಲಿ ಉಣಸಲೆ ಕಂಬೂಳಿ ಹೊದಿಸಲೆ
ದೊಂಬಗರಾ ಬಾಸೀ ಕಲೀಸಾಲೆ ।
ದೊಂಬಗರಾ ಬಾಸೀ ಕಲಿಸಾಲೆ ತಾಯಿಕೇಳೆ
ಅಬಿಮನ್ನಿ ಬಾವ್ಗ ನಾನು ವರಣಿದ್ದೇ
ಅಬಿಮನ್ನಿಬಾವ್ಗ ನಾನು ವರಣಿದ್ದೇ ತಾಯೀಕೇಳೆ
ಕವ್ಲರ ಬಾವ್ಗ ನಾನು ವರಣೆಲ್ಲ ।

೧೫. ಸ್ಥಿರವಾಗಲಿ ೧೬. ದೊಂಬ

ಕ್ವೊಟೀ[೧೭] ಕಡಿಸ್ವಾರೇ ಕಾಟೀಯ ಹೊದಿಸ್ವಾರೆ
ಕ್ವೊಂಟೀಯ ಮುಂದೆ ತಿರಸ್ವಾರೆ ।
ಕ್ವೊಟೀಯ ಮುಂದೆ ತಿರಸ್ವರೆ ಮಗಳೆ ಕೇಳೆ
ಅಬಿಮನ್ನಿ ಬಾವ್ಗ ನೀನು ವರಣಿಲ್ಲ ।
ಅಬಿಮನ್ನಿ ಬಾವ್ಗ ನೀನು ವರಣಿಲ್ಲ ಮಗಳೆ ಕೇಳೆ
ಕವ್ಲರ ಬಾವ್ಗ ನೀನು ವರಣಿದ್ದೇ ।
ಕ್ವೊಟೀ ಕಡಿಸಲೆ ಕಾಟೀಯ ಹೊದಿಸಲೆ
ಕ್ವೊಟೀಯ ಮೂರ್ ಸುತ್ತ ತಿರಸಾಲೆ
ಕ್ವಾಟಿ ಮೂರ್ ಸುತ್ತ ತಿರಗ್‌ಸಾಲೆ ತಾಯೀಕೇಳೆ
ಅಬಿಮನ್ನಿ ಬಾವ್ಗ ನಾನು ವರಣಿದ್ದೇ । ತಾಯಿಕೇಳೆ
ಕವ್ಲರ ಬಾವ್ಗ ನಾನು ವರಣಿಲ್ಲ । ಅಂದೇಳಿ
ಮುತ್ತನ ಚಪ್ಪರಕೆ ಬರೋವಾಳೆ ।
ಮುತ್ತನ ಚಪ್ಪರಕೆ ಬರುವದ್ನು ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಮುತ್ತನ ಚಪ್ಪರದಲಿ ಓಡಾಡು ಕನಕಾಂಗಿ
ಮುತ್ತೀನೀಳ್ಯವ ತಡದ್ಹೋಗೆ ।
ಹಗಳದ ಚಪ್ಪರದಲಿ ಸುಳದಾಡು ಕನಕಾಂಗಿ
ಹಗಳದೀಳ್ಯವಾ ತಡದ್ಹೋಗೆ ।
ಮುತ್ತನ ಸಂಬಳಗಿ ನಲ್ಲನ ತಡಿಯಾಮ್ಯೆನೆ[೧೮]
ನಾರೀ ಬಂದೀಳ್ಯ ತಡದಾಳೆ ।
ನಾರೀ ಬಂದೀಳ್ಯ ತಡದಾಳೇ ಅಬಿಮನ್ಯ
ಹಿಡದಾನೆ ಬಳಿಯಾ ನಳೀ ತೋಳೇ ।
ಹಿಡದನಿಯೇ ಬಳಿಯಾ ನಳತೋಳ ಅಬಿಮನ್ಯ
ಇಟ್ಟಾನೇ ಹಸ್ತ ಕಡಗಾವಾ ಕನಕಾಂಗಿ
ಮಾಳೂಗಿ ಒಳಗೇ ನೆಡದಾಳೇ ।
ಅಪ್ಪನ ಮನಿಯಾ ಅಟ್ಟಕೇಣೀಚಾಚೇ
ಹತ್ತೀ ನೋಡಿದಳೇ ದುರಗಾವೇ ।
ಹತ್ತೀ ನೋಡಿದಳೆ ದುರಗಾವ ಕನಕಾಂಗಿ
ಪಟ್ಟಿಕ ತನ್ನರಸು ಚೆಲವಾನೇ ।
ಪಟ್ಟಿಕ ತನ್ನರಸು ಚೆಲವಾ ಚೆನ್ನಗನಂದೇ
ಪಟ್ಟೀ ಉಟ್ಟಾಳೇ ಒಲವೀಗೆ ।
ಎಳಿಯೋರುಟ ಬಣ್ಣ ಹೊಳದಾವೇ ಮೂರ್‌ಲೋಕಕೆ

೧೭. ಕೋಟೆ ೧೮. ತೊಡೆಯ ಮೇಲೆ

ಎಳಿಯೋಹೆಮ್ಮರನಾ ಅಡಕೀಯೆ ।
ಎಳಿಯೋ ಹೆಮ್ಮರನಾ ಅಡಕೇ ಸಿಂಗರ ಕೊನಿಯಾ
ಎಳಿಯೊಡದೇ ನಾರೀ ಮುಡೀದಾಳೆ ।
ಎಳಿಯೊಡದಿ ನಾರೀ ಮುಡದೀ ಬಂದ್ ಕುಳತಾಳೆ
ಎಳಿಯಾ ಸೇರಸರೇ ಗವರೀಗೆ ।
ಎಳಿಯಾ ಸೇರಸರೇ ಗವ್ರೀಗೆ ಮ್ಯೆನಿನಾ
ದ್ಯೆವರಗೇರಸರೆ ಹೊಸ ಹೂಂಗೇ ।
ಅಪ್ಪನಾ ಮನಿಯಾ ಮೆತ್ತೀಗೇಣೀ ಚಾಚಿ
ಹತ್ತೀ ನೋಡಿದಳೇ ದುರಗಾವೇ ।
ಹತ್ತೀ ನೋಡಿದಳೆ ದುರಗಾವ ಕನಕಾಂಗಿ
ರಾಜ್ಯಕೆ ತನ್ನರಸು ಚೆಲವಾನೆ । ಚನ್ನಗನಂದೇ
ಸಾಲೀ ಉಟ್ಟಾಳೇ ಒಲಮೀಗೆ[೧೯]
ಎಳಿಯೋರಿಟ ಚಿನ್ನಾ ಹೊಳದವೆ ಮೂರ್‌ಲೋಕಕೆ
ಎಳಿಯೋ ಹೆಮ್ಮರನಾ ಅಡಕೀಯೇ ।
ಎಳಿಯೋ ಹೆಮ್ಮರನಾ ಅಡಕೆ ಸಿಂಗರ ಕೊನಿಯಾ
ಎಳಿಯೊಡದಿ ನಾರೀ ಮುಡೀದಾಳೆ
ಎಳಿಯೊಡದಿ ನಾರಿ ಮುಡದಿ ಬಂದ್ ಕುಳತಾಳೆ
ಎಳಿಯೋ ಚೆನ್ನಗನಾ ಎಡನಲ್ಲೇ ।
ಎಳೀಯೋ ಚೆನ್ನಗನಾ ಎಡನಲ್ ಬಂದ್ ಕುಳತಾಳೆ
ಎಳಿಯಾ ಸೇರಸರೇ ಗವರೀಗೆ ।
ಎಳೀಯಾ ಸೇರಸರೇ ಗವ್ರೀಗೆ ಮ್ಯೆನಿನಾ
ದ್ಯೆವರೀಗೇರಸರೇ ಹೊಸ ಹೂಂಗೇ[೨೦] ।
ಆಚೆ ಕತ್ತೂ ದೀಪ ಈಚೆ ಕೂಡದ ಮಂದಿ
ಜೋತರದಾ ಸೆರಗಾ ಇಳಲಿಟ್ಟೇ । ಕನಕಾಂಗಿ
ನಲ್ಲನ ಸೇರಿದಳೇ ಗಳಗ್ಯಲ್ಲೇ ।
ಈಚೆ ಕತ್ತೂದೀಪ ಆಚೆ ಕೂಡದ ಮಂದಿ
ಪಟ್ಟೀಯ ಸೆರಗಾ ಇಳಲಿಟ್ಟೇ
ಪಟ್ಟೀಯ ಸೆರಗಾ ಇಳಲಿಟ್ಟೇ ಅಬಿಮನ್ಯ
ನಾರೀ ಸೇರಿದನೇ ಗಳಗ್ಯಲ್ಲೇ ।
ಕುಲಕೇ ತುಂಬೀ ಹೂಂಗು ಚಲಕೇ ಚೊಳಚೀಕದರೇ[೨೧]
ಕೆಂದೀಯ ಕರೆದಿ ನೊರೆ ಹಾಲೇ ।
ಕೆಂದೀಯಾ ಕರದಿ ನೊರೆ ಹಾಲ್ ಗಿಂಡಿ ತುಂಬೀ

೧೯. ಪ್ರೀತಿಗೆ ೨೦. ಹೂವು ೨೧. ತುಲಸಿ ತೆನೆ

ತೊಳಚೀಯ ಮ್ಯೆನೆ ಮಡಗಾನೆ ।
ತೊಳಚಿಯ ಮ್ಯೆನೆ ಮಡಗಾನೆ ನಾರೆಣದ್ಯೆವಾ
ಸುತ್ತನ ದ್ಯೆವರಿಗು ಸರಣಂದೇ ।
ಸುತ್ತನ ದ್ಯೆವರಿಗು ಸರಣಂದಿ ನಾರೆಣದ್ಯೆವ
ಹೊತ್ತನಿಯೇ ಹೊನ್ನಾ ಮುಡಿಯ ಮ್ಯೆನೆ ।
ಹೊತ್ತನಿಯೇ ಹೊನ್ನ ಮುಡಿಮ್ಯೆನ್ ಹೊತ್ತಿಗಂಡಿ
ದಾರೆ ಮಂಟಪಕೆ ಬರವಾನೆ ।
ದಾರೇ ಮಂಟಪಕೆ ಬರೋವದ್ನು ಮಾದೇವಿ
ದಾರೇ ಮಂಟಪಕೆ ಬರೋವಾಳೆ ।
ಬಲಕನ ತೊಡೆಮ್ಯೆನಳಿಯ ಎಡಕನ ತೊಡಿಮ್ಯೆನ್ಮಗಳು
ಶ್ರೀಗಂಗೆ ಗೌರೀ ತೊಡಿಯಾಮ್ಯೆನೆ ।
ಶ್ರೀಗಂಗೆ ಗೌರೀ ತೊಡಿಮ್ಯೆನೆ ಕೂಡಿಸಗಂಡಿ
ಜಯ್‌ವಂದೇ ದಾರೀ ಎರದಾನೆ ।
ಹಾರ್ವರ ಮುಡಿಮ್ಯೆನೆ ಸೂಲ್ಯಮ್‌ದರಿಯಾ ಮ್ಯೆನೇ
ಸಿರಿಗಂಗೇ ಗೌರೀ ತೊಡಿಯಾ ಮ್ಯೆನೆ । ಕೂಡಿಸಗಂಡಿ
ಎರದನೆ ಸೂಸಿಕದಾ ಕಯೀದಾರೆ ।
ಅಂಗಳ್ಳಾದೂವಾ ಸುಂಗಾರದ[೨೨] ಗೊಂಬೀಯಾ
ತಂದೀ ಕಯ್ದಾರೀ ಎರದಾನೆ ।
ತಂದೀ ಕಯ್ದಾರಿ ಎರೆದ ನಾರೆಣದ್ಯೆವ
ತನ್ನಾ ಸ್ವೊದರದಾ ಕಿರದಂಗಿ ।
ತನ್ನಾ ಸ್ವೊದರದಾ ಕಿರದಂಗೀ ಮಗನೀಗೆ
ದರಮ ದಾರೀಯಾ ಎರದಾನೆ ।
ಬಾಗಲ್ಲಾಡೂವಾ ಸೂವರ್ಣದ ಗವ್ರೀಯಾ
ಕರದೀ ಕಯ್ದಾರಿ ಎರದಾನೆ । ನಾರೆಣದ್ಯೆವಾ
ತನ್ನಾ ಸ್ವೊದರದಾ ಕಿರದಂಗೇ ಮಗನೀಗೇ
ದರಮಾ ದಾರೀಯಾ ಎರದಾನೆ ।
ದಾರೀಯ ಎರದಪ ಮಗಳಾ ಮಾರಿಯ ನೋಡಿ
ಏನ್‌ಪುಣ್ಯಾ ಪಡದೇ ಮಗಳೆದೇವಿ ।
ಮ್ಯೆನೆ ಗಂಗೀ ಕಂಡೆ ಕೆಳಗೆ ಗವ್ರೀ ಕಂಡೇ
ನಾಮದ ಬಟ್ಟಿಟ್ಟ ನೆಳಲಾ ಕಂಡೆ ।
ನಾಮದ ಬಟ್ಟಿಟ್ಟ ನೆಳಲ್ ಕಂಡೆ ಅಪ್ಪಯ್ಯ
ದರಮಾ ಕಂಡೆ ಗಳಗ್ಯಲ್ಲೇ

೨೨. ಶೃಂಗಾರದ

ಬಲಕೆ ಬಟ್ಟಾ ಬಂದಾ ಎಡಕೆ ಜೋಯಿಸ ಬಂದ
ಎಡಮುಡೀ ಮ್ಯೆನೆ ಸಿವಬಂದ
ಎಡಮುಡೀ ಮ್ಯೆನೆ ಸಿವ ಬಂದೆ ದಾರೀ ಎರದೇ
ಬಾಲ ನೀ ಗೆದ್ದೆ ನೆಡೆ ಮುಂದೆ
ಬಾಲ ನೀ ಗೆದ್ದೆ ನೆಡೆ ಮುಂದ್ ಮುತ್ತನ ಮುಡಿಯ
ನಾರೇನೀ ಸೋತೆ ನೆಡೆ ಹಿಂದೆ[೨೩] ।
ಆರೇಳ್ ವಜ್ಜರ ಸರವಾ ಆಯಕದರಿಸೀಗಂಡೇ[೨೪]
ಆನೀಯಾ ಮ್ಯೆನೇ ಸಿವ ಬಂದೇ ।
ಆನೀಯ ಮೆನೆ ಸಿವ ಬಂದಿ ದಾರೀ ಎರದ
ಕಂದ ನೀ ಗೆದ್ದೆ ನೆಡೆಮುಂದೆ ।
ಕಂದ ನೀ ಗೆದ್ದೆ ನೆಡೆ ಮುಂದೆ ಹೂಂಗನ ಮುಡಿಯ
ನಾರೇ ನೀ ಸೋತೆ ನೆಡೆ ಹಿಂದೆ ।
ಸೂಸಮ ಸುಳಗಾಳಿ ನೂತನದಾ ಮೇಲ್ಗಟ್ಟು
ಜ್ಯೋತಿ ಮಾಣಿಕದ ಹಸಗರ ।
ಜ್ಯೋತೀ ಮಾಣಿಕದಾ ಹಸಗರದ್ಧಸಿಯಲ್ಲಿ
ಸೋತೀ ಕುಳತಾಳೇ ಮದವಳಗಿ ।
ಸೋತೀ ಕುಳತಾಳೇ ಮದವಳಗಿ ಅಬಿಮನ್ಯ
ಗೆದ್ದೀ ಕುಳತನಿಯೇ ಸಬೀದಲ್ಲೇ ।
ದಾರೀ ಎರದಪ್ಪ ಮಾಳೂಗಿ ಒಳಗ್ಹೋಗಿ
ಮಡದೀಯ ಕರೆದೇ ನುಡೀ ಮಾತೇ ।
ಮಡದೀಯ ಕರದಿ ಏನಂದಿ ನುಡಿ ಮಾತು
ಏನ್ ಕೊಡುವೋ ನಮ್ಮಾ ಮಗಳೀಗೆ । ಅಳಿಯಾಗೆ
ಪಟ್ಟಿ ಕೊಡುವಾನಾ ಉಡಗೆರಿ ।
ಪಟ್ಟೀ ಕೊಟ್ಟರೆ ಎಟ್ಟೊರಸೇ ಬರುವದೇ
ಗುತ್ತೀಲಿಂದಿ ತಂದ ಬಿಡ ಮುತ್ತೇ
ಗುತ್ತೀಲಿಂದಿ ತಂದ ಬಿಡಮುತ್ತನ ಸರಗಳ
ಅದಕೊಡುವೋ ನಮ್ಮ ಮಗಳೀಗೆ ।
ಆದ ಕೊಡುವೊ ನಮ್ಮ ಮಗಳೀಗೆ ಗೆಜ್ಜೀಕಾಲ
ಮಂಚವ ಕೊಡುವೊ ಅಳೀಯಗೆ ।
ಆಡಂದಿ ಆಟವ ಕೊಟ್ಟ ನೋಡಂದಿ ಕನ್ನಡಿ ಕೊಟ್ಟ
ಚೀನೀ ಕಪರದ ಕರಡಿಗೆ ।
ಚೀನೀ ಕಪರದ ಕರಡಿಗೆ ಚೆನ್ನೀಮಣೀಯ

೨೩. ನಡೆ ಹಿಂದೆ   ೨೪. ಚೆಂದಕ್ಕೆ ಧರಿಸಿಕೊಂಡು

ಆಡಂದೇ ಕೊಟ್ಟ ಮಗಳೀಗೆ ।
ಆಡಂದೇ ಕೊಟ್ಟ ಮಗಳೀಗೆ ಅಳೀಯಗೆ
ಕೂದಂದೇ ಕೊಟ್ಟ ಕುರಚಿಯೇ
ಹುಟ್ಟದ ಮಗಳೀಗೆ ಏನೆಲ್ಲಾ ಬಳವರಿ
ಹಾಲಾ ಕಾಸಲಿಕೆ ಕಿರನಳ್ಳಿ[೨೫]
ಹಾಲಾ ಕಾಸಲಿಕೆ ಕಿರನಳ್ಳಿ ಕಂಚೀನ್ಹುಟ್ಟು
ಹುಟ್ಟದ ಮಗಳಿಗೆ ಬಳವರಿಯೇ
ಕೊಂಬು ಚಂದಕದಿಂದೆ ಸರ್ವವಾದ್ಯದಿಂದೆ
ಕನಕಾಂಗಿ ದಿಬ್ಬಣವೇ ಸವನಿತೇ ।
ಕನಕಾಂಗಿ ದಿಬ್ಬಣವೇ ಸವನಿ ಸುಂಗಾರಾಗೇ
ರಾಜಂಗಳ ಮೆಟ್ಟ ಇಳದಾರೆ ।
ಮಾಯನ ಮರತಂಕು ಮಾವಾ ಸಂಗಡೋಗೆ
ಮಿಕ್ಕದ್ದೋರೆಲ್ಲ ಹೊಳೀ ತಂಕೆ । ನಾರೇಣದೈವ
ಆಗೊಂದು ಮಾತಾ ನುಡೀದಾನೆ ।
ಕೊಡುವಟ್ ಬಳುವರಿಯಾ ಕೊಟ್ಟೀದೆ ಅಬಿಮನ್ಯ
ಹೇಳೀ ತನಮಗಳಾ ಜರಿಯಾ ಬ್ಯೆಡಾ ।
ಬಳುವರಿ ಕೊಟ್ಟಾರೆ ನಿನಮಗಳು ಬೆಳಗುಂಬಾಳೂ
ಹೇಳದೆ ನಾನು ಇರುವದಿಲ್ಲ ।
ಅತ್ತೀಮರ ತಂಕೆ ಅತ್ತೇ ಸಂಗಡೋಗೇ
ಅಳಿಯಗೆ ಬುದ್ದೀ ಏನಂದಿ ಒರದಾಳೆ ।
ಹೊಡಿಯಾ ಬ್ಯೆಡ ಮಗಳಾ ಬಯಿಬ್ಯೆಡ ।
ಹೊಡವಕೆ ಬೊವ್ವಕೆ[೨೬] ಮರಳೇನೆ ಮಂಕೇನೆ
ನನ್ನಮ್ಮಗಂಜೇ ನನಗಂಜೇ ।
ನನ್ನಮ್ಮಗಂಜಿ ನನಗಂಜಿಯಿದ್ದರೆ
ಬಾಳಸವೆ ಬಾಳೀ ಸುಳೀಯಂತೆ ।
ಬಾಳಸವೆ ಬಾಳೀ ಸುಳಿಯಂತೆ ಅಂದೇಳಿ
ಬೋರೀನೆ ಆನೀ ರತವೇರಿ
ಬೋರೀನೆ ಆನೀ ರತವೇರಿ ಅಬಿಮನ್ಯ
ಆನಿಗೆ ಚಬಕದಲಿ ಒಗದಾನೆ
ಆನಿಗೆ ಚಬಕದಲಿ ಒಗವದ್ನು ಆ ಆನಿ
ಮಾವನ ರಾಜ್ಯವ ಗಳೀದಾವೇ
ಮಾವನ ರಾಜ್ಯವ ಗಳೀದಾವೇ ಆ ಆನಿ

೨೫. ಸಣ್ಣಪಾತ್ರೆ ೨೬. ಬಯ್ಯಲಿಕ್ಕೆ

ತನ್ನ ರಾಜ್ಯಕೇ ನೆಡದಾವೇ ।
ತನ್ನ ರಾಜ್ಯಕೇ ನೆಡದಾವೇ ಆ ಆನಿ
ಹೋಗಿ ರಾಜಂಗ್ಳ ಇಳದಾವೇ ।
ಹೋಗಿ ರಾಜಂಗ್ಳ ಇಳವದ್ನು ಅಬಿಮನ್ಯ
ಆನೀಗಿಂದು ಕೆಳಗೆ ಇಳದಾನೆ ।
ಆನೀಗಿಂದು ಕೆಳಗೆ ಇಳವದ್ನು ಕನಕಾಂಗಿ
ಆನೀಗಿಂದು ಕೆಳಗೆ ಇಳದಾಳೆ ।
ಆನೀಗಿಂದು ಕೆಳಗೆ ಇಳವದ್ನು ಅಬಿಮನ್ಯ
ಆನೀಕಂಬ್ಗಾನೀ ಸೆಳದೇ ಕಟ್ಟೇ ।
ಆನೀ ಕಂಬ್ಗಾನೀ ಸೆಳದ್ಕಟ್ಟೀ ಅಬಿಮನ್ಯ
ತಿಂಬೂಕಿಕ್ಕನಿಯೇ ಕಡಲೀಯೇ ।
ತಿಂಬೂಕಿಕ್ಕನೆ ಕಡಲೀ ಅವರಿಬ್ಬರು
ಬಂದೀ ಬಾಗಲ್ಲೇ ನಿಲವಾರೇ ।
ಬಂದೀ ಬಾಗಲ್ಲೇ ನಿಲವದ್ನು ತಾಯವ್ವಿ
ಮುತ್ತನೇ ಕುಟ್ಟೀ ಹೊಡೀಮಾಡೇ ।
ಮುತ್ತನೆ ಕುಟ್ಟಿ ಹೊಡಮಾಡೇ ಪುಡಿಮಾಡೇ
ಮುತ್ತೀನಾರತಿಯಾ ಗೆಯೀದಾಳೇ ।
ಮುತ್ತೀನಾರತಿಯಾ ಗೆಯಿದಾಳೆ ತಾಯವ್ವಿ
ಮಾಳಗ್ಗಿಂದ್ವೆರಗೆ ಬರವಾಳೇ ।
ಮಾಳಗ್ಗಿದ್ವೆರಗೆ ಬರವಾಳೆ । ಸೂಬದ್ರಿ
ತಡೆದಳು ಚಂಬಗಲೇ ಉದಕಾವೇ
ತಾಯೀ ಕೊಟ್ಟುದಕಾ ತಟ್ವಾನೇ ತಡದಾರೇ
ಕಾಲೂ ಸಿರಿಮೊಕವಾ ತೊಳದಾರೆ ।
ಕಾಲೂ ಸಿರಿಮೊಕವಾ ತೊಳವದ್ನು ಸೂಬದ್ರಿ
ಮುತ್ತೀನಾರತಿಯಾ ಬೆಳಗಾಳೆ
ಮುತ್ತೀನಾರತಿಯಾ ಬೆಳಗ್ವದ್ನು ಅವರಿಬ್ಬರು
ಆರೂತೀಗೊಮ್ಮೆ ಸರಣಂದೇ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ ।
ಅಬಿಮನ್ನಿ ಮುಂದಾಗೇ ಕನಕಾಂಗಿ ಹಿಂದಾಗೇ
ತೊಳಚೀ ಮುಂದೋಗೇ ನಿಲವಾರೆ ।
ತೊಳಚಿ ಮುಂದೋಗಿ ನಿಲವದ್ನು ಅಬಿಮನ್ನಿನ
ಬಣ್ಣದ ಬಾಸಿಂಗವ ಸೆಡಲೀಸೆ

ಬಣ್ಣದ ಬಾಸಿಂಗವ ಸೆಡಲೀಸಿ ಕನಕಾಂಗ್ಯ
ಮುತ್ತವ ತೊಂಡಲವ ಸೆಡಲೀಸೆ
ಮುತ್ತನ ತೊಂಡಲವ ಸೆಡಲೀಸಿ ಆವ್ರಮನಿಯಾ
ಚಿನ್ನದ ಕೋಳ್ಗಂಬ್ಗೆ ರತವೇರಿ
ಚಿನ್ನದ ಕೋಳ್ಗಂಬ್ಗೆ ರತವೇರಿ ಅವ್ರಿಬ್ಬರು
ತೊಳಚೀಗೆ ಕಯ್ಯ್ಯಾ ಮುಗೀದಾರೆ
ತೊಳಚೀಗೆ ಕಯ್ಯ್ಯಾ ಮುಗದಾರವರಿಬ್ಬರು
ಪಟ್ಟೆ ಮಂಚದಲೆ ಕುಳತಾರೆ ।
ಮಟ್ಟೆ ಮಂಚದಲಿ ಕುಳವದ್ನು ಅಬಿಮನ್ಯ
ಅವ್ರು ಹದಳಾಗೇ ಇರೋವಾರೆ ।

ಅಗಮಂಜು (ಅಭಿಮನ್ಯು)

ಗಂಗೆಗಜಗವ್‌ರಿ ಬಾಯಲ್ಲಿ ಗಟವಳಿರು[೧]
ಎಂಜಲ್‌ಬಾಯಲ್ಲಿ ದೆವ್ರ ನೆನಿಬಾರಾ । ಎಂದರ್ಜುನ
ಗಂಗ್ವೋಗ್ವದಕೇ ಸವ್ನಾನೆ ।
ಗಂಗ್ವೋಗ್ವದಕೆ ಸಂಗಡಾರಿಲ್ಲೆಂದು
ಮಂಗ್ಯೂರ ರಾಜ್ಯ ತಿರಗಾನೆ । ಅರ್ಜಿನಗೆ
ನಾರಾಯಣ ದೆವ ಎದ್ರ ಬಂದ । ಏನಂಬಾನೇ
ನಾಬತ್ತೆ ಬಾವ ಒಡ್ನಲ್ಲಿ ।
ಅಟ್ಟಂಬು ಮಾತಾ ಕೇಳಾನೇ ಅರ್ಜೀಣ

ಹಿಂದಕೆ ತಿರಗಿ ಬರುವಾನೆ ।
ಹಿಂದಕೆ ತಿರಗಿ ಬರುವಾನೇ ಅರ್ಜೀಣ
ತನ್ನಾಲರ ಮನೆಗೆ ಬರುವಾನೆ । ಅರ್ಜೀಣ
ಮಾಳೂಗಿ ಒಳುಗೆ ನೆಡುದಾನೆ । ಅರ್ಜೀಣ
ತನ್ನ ಪೆಟ್ಟಿಗೆಯ ತೆಗುದಾನೆ । ಅರ್ಜೀಣ
ಮೆಟ್ಟಿ ಬೀಗವ ಕರ್ದಾನೆ । ಅರ್ಜೀಣ
ಪಟ್ಟೆ ದೋತರವ ನೆರ್ದುಟ್ಟಿ । ಅರ್ಜೀಣ
ಪಟ್ಟೆ ದೋತರವ ನೆರ್ದುಟ್ಟಿ । ಅರ್ಜೀಣ
ಕೋಲು ನೆವಳವ ಇಳ್ಬಿಟ್ಟಿ । ಅರ್ಜೀಣ
ಮುತ್ತನಾ ಮುಂಡೆಸ್ನ ತಲ್ಗಸುತ್ತಿ । ಅರ್ಜೀಣ
ಪಟ್ಟೆ ಜೋತರವ ಹೊಗೋಲಿಗೆ । ಇಟ್ಟೀಕಂಡಿ

ಮೂರು ಬೊಗ್ಸ ಹಣವ ಮೊಗ್ದಾನೆ । ಅರ್ಜೀಣ
ಹಚ್ಚಡ ಸೆರ್ಗೀಗೆ ಅಗ್ಲಡ್ಗಿ । ಅರ್ಜೀಣ
ಪೆಟ್ಗೀ ಬಾಯನೆ ಮಡ್ಗಾನೆ । ಅರ್ಜೀಣ
ಮಾಳುಗಿಲಿಂದೆರುಗೇ ಬರುವಾನೆ । ಅರ್ಜೀಣ
ರಾಜಂಗ್ಳ ಮೆಟ್ಟಿ ಇಳಿದಾನೆ । ಅರ್ಜೀಣ

---

೧. ಗಟ್ಟಿಗರು

ರಾಜ ಮಾರ್ಗದಲ್ಲಿ ನೆಡದಾನೆ । ಅರ್ಜೀಣ
ದೇವ ಲೋಕಕಾಗಿ ನೆಡದಾನೆ । ಅರ್ಜೀಣ

ದೇವಲೋಕದಂಗಡಿಯ ತೆಣಿಮೆನೆ । ಕೂತಿಕಂಡಿ
ಅಂಗಡಿ ಕಾರನ ಕರ್ದಾನೆ ।
ಅಂಗಡಿಕಾರನ ಕರ್ವದ್ನು ಅಂಗಡಿಕಾರ
ಓಯ್ಗುಂಡೇ ಒಡ್ನೇ ಬರುವಾನೆ । ಅಂಗಡಿಕಾರ
ಏನು ಕಾರಣೇ ಕರ್ದೀಯೋ ।
ಕರ್ದಂಬ್ ಕಾರ್ಯ ಸಯ್ ಕಿರ್ದಂಬ್ ಬ್ಯಾಸರಿಲ್ಲ
ದೇವಲೋಕದ ಪಟ್ಟೇ ತೆಗತಾರೋ ।
ಅಟ್ಟಂಬು ಮಾತನೇ ಕೇಳಾನೇ ಅಂಗಡಿಕಾರ

ಅಂಗಡಿ ಒಳಗೇ ನೆಡುವಾನೇ
ಅಂಗಡಿ ಒಳುಗೇ ನೆಡವಾನೇ ಅಂಗಡಿಕಾರ
ಜವಳೀಯ ದಿಂಡ ಬಿಡುಸಾನೆ । ಅಂಗಡಿಕಾರ
ದೇವಲೋಕದ ಪಟ್ಟೇ ತೆಗದಾನೆ । ಅಂಗಡಿಕಾರ
ಅಂಗೂಡಿ ಹೊರುಗೆ ಬರುವಾನೆ । ಅಂಗಡಿಕಾರ
ಅರ್ಜಿಣನ ಬಲಗಯ್ಲಿ ಕೊಡುವಾನೆ ।
ಅರ್ಜಿಣನ ಬಲಗಯ್ಲಿ ಕೊಡುವದ್ನು ಅಂಗಡಿಕಾರ
ಎಯ್ಡು ಕಯ್ಯುಡ್ಡಿ ತಡದಾನೆ ।

ಆಚೆಸೆರಗ ಈಚೊಮ್ಮೆ ಮೊಗಚಾನೆ ಅರ್ಜೀಣ
ಬಣ್ಣ ಸಾಕಿದರ ಬೆಲೆಹೇಳು ।
ದೆಡಿಗೆ ಸಾವಿರವೆಂದ ಮೊಳಕೆ ಸಾವಿರವೆಂದ
ಅದಕೆ ಸಾವಿರದ ಹಣವೆಂದ ।
ದಡಿಗೆ ಸಾವಿರ ಕೊಟ್ಟ ಮೊಳಕೆ ಸಾವಿರ ಕೊಟ್ಟ
ಅದಕಲ್ಲೇ ಹಣವ ಸಲಿಸಾನೆ । ಅರ್ಜೀಣ
ಪಟ್ಟೆ ದೋತರಲ್ಲೇ ಬಿಗದಾನೆ । ಅರ್ಜೀಣ
ಪಟ್ಟೇಯ ಎತ್ತಿ ಹೊಗಲೀಗೆ । ಅರ್ಜೀಣ

ಅಂಗಡಿಗಿಂದ್ ಕೆಳಗೆ ಎಳದಾನೆ[೨] । ಅರ್ಜೀಣ
ರಾಜ ಬೀದಿಗಾಗಿ ನೆಡದಾನೆ. । ಅರ್ಜೀಣ
ಇಂದ್ರಲೋಕಕಾಗಿ ನೆಡದಾನೆ । ಅರ್ಜೀಣ
ಇಂದ್ರಲೋಕದ ತೆಣಿಮೆನೇ[೩] ಕುಳ್ತೀಕಂಡೆ

೨. ಇಳಿದನು ೩. ಜಗುಲಿಯ ಮೇಲೆ

ಅಂಗಡಿಕಾರನ ಕರ್ದಾನೆ । ಅಂಗಡಿಕಾರ
ಓಯ್ಗುಂಡೇ ಹೆರಗೆ ಬರುವಾನೆ । ಅಂಗಡಿಕಾರ
ಏನುಕಾರಣ ಕರ್ದೀರಿ ।

ಕರ್ದಂಬ್ ಕಾರ್ಯ ಸಯ್ ಕಿರ್‌ದಂಬ್ ಬ್ಯಾಸರಸ್ಯೆ
ಇಂದ್ರಲೋಕದ ಪಟ್ಟಿ ತೆಗತಾರೋ ।
ಅಟ್ಟಂಬು ಮಾತ ಕೇಳಾನೇ ಅಂಗಡಿಕಾರ
ಅಂಗೂಡಿ ಒಳುಗೆ ನೆಡುದಾನೆ । ಅಗಂಡಿಕಾರ
ಜವಳೀಯ ದಿಂಡ ಬಿಡುಸಾನೆ । ಅಂಗಡಿಕಾರ
ಇಂದ್ರಲೋಕದ ಪಟ್ಟೀಯ ತೆಗದಾನೆ ।
ಇಂದ್ರ ಲೋಕದ ಪಟ್ಟಿ ತೆಗದಾನಂಗಡಿಕಾರ

ಅರ್ಜಿಣನ ಬಲಗಯ್ಲಿ ಕೊಡುವಾನೇ । ಅಂಗಡಿಕಾರ
ಅರ್ಜೀಣ ಎಯ್ದು ಕಯ್ಯೊಡ್ಡಿ ತಡದಾನೆ । ಅರ್ಜೀಣ
ಆಚೆ ಮೊಗಚಾನೆ ಈಚೆ ಮೊಗಚಾನೆ[೪]
ಬಣ್ಣ ಸಾಕಿದರ ಬೆಲೆಹೇಳು ।
ದೆಡಿಗೆ[೫] ಸಾವಿರವೆಂದ ಮೊಳಕೆ ಸಾವಿರವೆಂದ
ಅದಕೆ ಸಾವಿರದ ಹಣವೆಂದ । ಅರ್ಜೀಣ
ಅದೆಕೆ ಹಣವ ಸಲಸಾನೆ ಅರ್ಜೀಣ

ಪಟ್ಟೆ ದಟ್ಟೀಲೆ ಬಿಗದಾನೆ । ಅರ್ಜೀಣ
ಪಟ್ಟಿಯ ಎತ್ತೇ ಹೊಗಲೀಗೇ । ಇಟ್ಟಿಕಂಡೇ
ಅಂಗಡಿಗಿಂದ ಕೆಳಗೆ ಇಳಿದಾನೆ । ಅರ್ಜೀಣ
ನಾಗಲೋಕಕಾಗಿ ನೆಡದಾನೆ । ಅರ್ಜೀಣ
ನಾಗಲೋಕದ ಪಟ್ಟೆ ತೆಗದಾನೆ । ಅರ್ಜೀಣ
ಪಟ್ಟೇ ದಟ್ಟೇಯಲ್ಲೇ ಬಿಗದಾನೆ । ಅರ್ಜೀಣ
ಅಂಗಡಿಕಾರಗೆ ಅಂದಾನೆ ।

ನೀಕೊಟ್ಟಗಳಿಗೇಲಿ ನಾ ತೆಗಂಡ[೬] ಮೂರ್ತದಲ್ಲೇ
ಅಗಮಂಜುನಾಯುಸ್ಸ[೭] ಹೆರ್ದಾಲು[೮] । ಎಂದೇಳಿ
ಪಟ್ಟೀಯ ಎತ್ತೇ ಹೊಗಲೀಗೆ । ಇಟ್ಟೀಕಂಡಿ
ಅಂಗಡೀಗಿಂದ್ ಕೆಳುಗೆ ಇಳುದಾನೆ । ಅರ್ಜೀಣ
ರಾಜಬೀದಿಗಾಗಿ ನೆಡದಾನೆ । ಅರ್ಜೀಣ

---

೪. ತಿರುವಿದನು   ೫. ಅಂಚು   ೬. ತೆಗೆದುಕೊಂಡ   ೭. ಅಭಿಮನ್ಯುವಿನ ಆಯುಷ್ಯ   ೮. ಹೆಚ್ಚಾಗಲಿ

ತನ್ನಲರಮನಿಗೇ ನೆಡದಾನೆ । ಅರ್ಜೀಣ
ತೂಗು ಮಂಚದಲ್ಲೇ ಕುಳತಾನೆ । ಅರ್ಜೀಣ
ಜವಳೀಯ ದಿಂಡ ಮಡಗಾನೆ ।
ಜವಳೀಯ ದಿಂಡ ಮಡುಗುದ್ನು ಅಗಮಂಜು

ಓಡ್ಬಂದಿ ತೊಡಿಮೆನೆ ಕುಳಿತಾನೆ । ಅರ್ಜೀಣ
ಜವಳಿ ದಿಂಡ ಬಿಡಸಾನೆ । ಅರ್ಜೀಣ
ದೇವ ಪಟ್ಟೀಯ ನೋಡಿ ತೆಗುದಾನೆ । ಅರ್ಜೀಣ
ಒಂದು ಸುತ್ತಿನಲ್ಲೆ ನೆರ್ದುಡಿಸಿ । ಅರ್ಜೀಣ
ಅಗಮಂಜು ಮೊಕನೋಡಿ ಹೇಳಿದ
ಅಗಮಂಜು ಮೊಕ ನೋಡಿ ಹೇಳಿದ ಅರ್ಜೀಣ
ಸೂಲಿ ದೇವರ ಹೋಲು ಮಗನೀನು । ಅಗಮಂಜು[೯]
ಯಾರು ಕೇಳಿದ್ರು ಕೊಡಬೇಡ । ನಿನ್ನಾಲಾ
ಮಡದಿ ಮಂದ್ರೆ ಬೇಡಿದ್ರು ಕೊಡ್ಬೆಡ । ಕೊಟ್ಟರೆ
ನಿನ್ನಾಯುಸ್ಯ ಸಿರಿಯೇ ತೊಲಗೀತು । ಅಂದೇಳಿ
ಹೇಳಿಯ ಪಟ್ಟಿ ಉಡಸಾನೆ । ಅರ್ಜೀಣ
ನಾಗಲೋಕದ ಪಟ್ಟೀ ತೆಗದಾನೆ । ಅರ್ಜೀಣ

ಒಂದು ಸುತ್ತೀನಲ್ಲೇ ನೆರ್ದುಡಿಸಿ । ಅಗಮಂಜು ಮೊಗನೋಡಿ
ಸುಕ್ರ ದೇವರ ಹೋಲು ಮಗನೀನು । ಮಗನೆಕೇಳು
ಯಾರು ಬೇಡಿದ್ರು ಕೊಡಬೆಡ । ನಿನ್ನಾಲಾ
ತಾಯ್ ಸೋದರ ಬೇಡಿದ್ರು ಕೊಡ್ಬೆಡಾ ಕೊಟ್ಟರೆ
ನಿನ್ನಾಯುಸ್ಯ ಸಿರಿಯೇ ತೊಲಗೂಗು ।[೧೦] ಎಂದೇಳಿ
ಹೇಳಿಯ ಪಟ್ಟೀ ಉಡಸಾನೆ । ಅರ್ಜೀಣ
ಇಂದ್ರಲೋಕದ ಪಟ್ಟೀ ತೆಗೆದಾನೆ । ಅರ್ಜೀಣ
ಒಂದೂ ಸುತ್ನಲ್ಲೇ ನೆರ್ದುಡಿಸಿ । ಮೊಕನೋಡಿ
ಚಂದ್ರಮನ ಹೋಲು ಮಗನೀನು । ಮಗನೆಕೇಳು
ಯಾರು ಬೇಡಿದ್ರು ಕೊಡಬೇಡ । ನಿನ್ನಾಲಾ
ಅಜ್ಜಮ್ಮ ಬೇಡಿದ್ರು ಕೊಡ್ಬೆಡ । ಕೊಟ್ಟದ್ದುಂಟಾದರೆ

ನಿನ್ನಾಯಿಸ ಸಿರಿಯೇ ತೊಲ್ಗೀಗು । ಅಂದೇಳಿ
ಹೇಳಿಯ ಪಟ್ಟಿ ಉಡಸಾನೆ । ಅರ್ಜೀಣ
ನೆತ್ತೀಯ ಕಿಟ್ಟೀ ಅಳಗಾನೆ ।
ನೆತ್ತೀಯ ಕಿಟ್ಟಿ ಅಳುಗುದ್ನು ಅಗಮಂಜು

೯. ಅಭಿಮನ್ಯ ೧೦. ಹೋಗುವುದು

ತೊಡಿನಿಂದು ಕೆಳ್ಗೆ ಇಳಿದಾನೆ । ಅಗಮಂಜು
ತಪ್ಪ ತಳಕೋಗಿ ಕುಳಿತಾನೆ । ಅರ್ಜೀಣ
ಕೂತ ಗದ್ದಿಗೆಯ ಜಡಿದೆದ್ದಿ । ಅರ್ಜೀಣ
ಮಾಳೂಗಿ ಒಳುಗೆ ನೆಡುವಾನೆ । ಅರ್ಜೀಣ

ಹಣ್ಣು ಈಳ್ಯವ ತಡದಾನೆ । ಅರ್ಜೀಣ
ಗಂದ ಮಂಗಲದ ತಡದಾನೆ । ಅರ್ಜೀಣ
ತೆಂಗೀನ ಕಾಯಿ ಹಡಪಾಕೆ । ಅರ್ಜೀಣ
ದೂಪ ದೀಪನೆಲ್ಲ ಹಡಪಾಕೆ । ಇಟ್ಟೀಕಂಡೀ
ಹಡಪಾನೆತ್ತೀ ಹೊಗೋಲಿಗೆ । ಇಟ್ಟೀಕಂಡಿ
ಮಾಳೂಗಿಯ ಹೆರುಗೆ ಬರುವಾನೆ । ಅರ್ಜೀಣ
ಲಾಗೊಂದು ಮತ ನುಡದಾನೆ ।
ಬಾಗಲಲ್ಲಾಡು ಬಾಲ ನನ್ ಅಗಮಂಜೂನ
ಬಾಗಲ್ಲಿಂದೆರುಗೆ ಕಳ್ಗಬೆಡ ।
ಬಂದ ದುರ್ಗವ ಬಂದಂಗೆ ನೋಡಿಕಂತೆ
ಕಂದಯ್ನ ಕಾಳಗ್ಕೆ ಕಳ್ಗಬೇಡ । ಅಂಬುದ್ನು

ಆಗೊಂದು ಮಾತ ನುಡ್ದಾಳೆ ।
ಹೇಳೂವ ಮಾತೆಲ್ಲಾ ಹೇಳೀಕೆ ಹೋಗ್ವರಿ[೧೧]
ಬರುವ ಮೇಲ್ದುರ್ಗ ಅರಿಯಾರಿ ।
ಎತ್ತು ಬೀಜವ ಒಪ್ಪಿಸ್ಗಿ ಹೊಯ್ತೀರಿ
ಬರುವ ಮೇಲ್ದುರ್ಗ ಅರಿಯಾರಿ ।
ಎತ್ತು ಬೀಜವ ಒಪ್ಪಿಸ್ಗಿ ಹೊಯ್ತೀರಿ
ಬರುವ ಮೇಲ್ದುರ್ಗ ಅರಿಯಾರಿ ।
ಅಟ್ಟಂಬು ಮಾತನೇ ಕೇಳಾನೇ ಅರ್ಜೀಣ
ರಾಜಂಗಳ ಮೆಟ್ಟ ಇಳದಾನೆ । ಅರ್ಜೀಣ
ರಾಜಬೀದಿಗಾಗಿ ನೆಡದಾನೆ ।
ರಾಜ ಬೀದಿಗಾಗಿ ನೆಡುವದ್ನು ನಾರ್ಣದೆವ
ಬಂದು ನಿಂತಾನೆ ಎದರೀಗೆ । ಏನಂಬಾನೇ
ನಾಬತ್ತೆ ಬಾವ ಒಡ್ನಲ್ಲೇ ।

ಅರ್ಜೀಣ ಮುಂದಾಗಿ ನಾರ್ಣದೆವ ಹಿಂದಾಗಿ
ರಾಜ ಬೀದಿಗಾಗಿ ನೆಡದಾರೆ । ಬಾವ್ನೆಂಟ
ಮೂಡಣ ಗಂಗೀಗೇ ನೆಡದಾರೆ ।

---

೧೧. ಹೋಗುವಿರಿ

ಗಂಗೀ ಬುಡಕೋಗಿ ನಿಲ್ವಾನೇ ಅರ್ಜೀಣ
ಹಣ್ಣು ಈಳ್ಯವ ಹರಗಾನೆ । ಅರ್ಜೀಣ
ಗಂದ ಮಂಗಲವ ಇಡುವಾನೆ । ಅರ್ಜೀಣ
ದೂಪ ದೀಪೆಲ್ಲ ಕಸದಾನೆ । ಅರ್ಜೀಣ
ಗಂಗೀಗೆ ಕಾಯ ಒಡದಾನೆ । ಅರ್ಜೀಣ

ಗಂಗೀಗೆ ಕಯ್ಯ ಮುಗದಾನೆ । ಅರ್ಜೀಣ
ಗಂಗೀಯ ಜಲವ ಮುಳುಕಾನೆ ।
ಒಂದು ಮುಂಡ್‌ನೀರ ವಾಲಾಡೇ[೧೨] ಮುಳುಕಾನೆ
ಮತ್ತೊಂದ್ ಮುಂಡ್ ನೀರ ಮುಳುಕಾನೇ
ಒಂದ್ ನನ್ನಜ್ಜಗಾದೊ ಒಂದ್ ನನ್ನಜ್ಜೀಗಾದೊ
ಒಂದ್ ನಂಗಿಂದು ಹೆರಿಯವ್ಗೆ । ಆಗಾಲೆಂದು
ಮತ್ತೊಂದು ಮುಂಡ್‌ನೀರ ಮುಳುಕಾನೆ ।
ಮತ್ತೊಂದು ಮುಂಡ್‌ನೀರ ಮುಳುಕುದ್ನು ನಾರ್ಣದೆವಾ
ಮೆಟ್ಟೀ ಕಂದ್ಲೀದ ತಳ್ನಲ್ಲಿ । ನಾರ್ಣದೆವ
ಮತ್ತೊಂದು ರೂಪ್ನಲ್ಲಿ ದಿಡುನೆಗ್ದು[೧೩] । ನಾರ್ಣದೆವ
ಹಣ್ಣು ಈಳ್ಸವ ಹರಗಾನೆ । ನಾರ್ಣದೆವ

ತೆಂಗೀನ ಕಾಯ ಒಡದಾನೆ । ನಾರ್ಣದೆವ
ಗಂಗೀಗೆ ಕಯ್ಯ ಮುಗದಾನೆ । ನಾರ್ಣದೆವ
ರಾಜ ಬೀದಿಗಾಗೆ ನೆಡದಾನೆ । ನಾರ್ಣದೆವ
ತಂಗೀಯರಮನಿಗೆ ನೆಡದಾನೆ ।
ಅಣ್ಣ ಬರುವದ ಅಟ್ಟುದೂರೇ ನೋಡಾಳೇ
ಚಂಬುಗಿಯಲ್ಲುದಕ ತಡದಾಳೇ ।
ತಂಗೀ ಕೊಟ್ಟುದಕವ ಬೆಗದಲ್ಲೇ ತಡದಾನೆ
ಕಾಲು ಸಿರಿಮೊಕವ ತೊಳದಾನೆ । ನಾರ್ಣದೆವ
ಮಾಳೂಗಿ ಒಳುಗೆ ನೆಡುದಾನೆ । ನಾರ್ಣದೆವ
ತೂಗು ಮಂಚದಲ್ಲೇ ಕುಳಿತಾನೆ । ಸೋದೂರಿ

ಇಬ್ಬರೋದಲ್ಲಿ ಒಬ್ಬಾನೇ ಬಂದಾನೆ । ಅಣ್ಣಾಕೇಳೋ
ಇನ್ನೊಬ್ಬರೆತ್ತ ನೆಡದಾರೆ ।
ಗಂಗೀಗೋದವ್ರು ಒಂದೇ ಬಾರ ಬರ್ತಾರ[೧೪]
ಇನ್ನೊಂದರ ಗಳಿಗೆಲ್ಲೇ ಬರ್ತಾನೆ ।
ಅಟ್ಟಂಬು ಮಾತ ಕೇಳೀತೇ ತಂಗೀ ಸೋದೂರಿ

---

೧೨. ತೊನೆದಾಡಿ ೧೩. ದಡಕ್ಕೆ ಬಂದು ೧೪. ಬರುತ್ತಾರೆಯೆ ?

ಹಣ್ಣೆಲಿಯಂತೆ ಬಳ್ಕೀತೇ ಬಾಡೂತೇ
ಮಾಳೂಗಿ ಒಳ್ಗೆ ನೆಡದಾರೆ । ಸೋದೂರೇ
ಅಣ್ಣಗೊಂದೀಳ್ಯ ಕೊಡುವಾಳು । ಸೋದೂರೇ
ತಾನೊಂದು ಎಲಿಯಾ ತಿಂದಾಳೋ । ಸೋದೂರೇ
ಲಾಗೊಂದು ಮಾತಾ ನುಡುದಾಳೆ ।
ನೆರ್ಮನೆಗೆ ಹೋಪರಲ್ಲ ಹೊರ್ಮನೆಗೆ ಹೋಪರಲ್ಲ
ಮತ್ತೊಬ್ಬರೆತ್ತ ನೆಡದಾರೆ ।
ನಿನ್ನ ಗಂಡಗೆ ನಾಡು ನೆಂಟರು ತೋಲು[೧೫]
ಇನ್ನೊಂದು ಗಳಿಗೆ ಬರುವಾನೇ ।
ಬಡವರ ಮನೆಯ ಹುಳಿಗಂಜಿ ತಿಳಿಗಂಜಿ
ಒಂದು ತುತ್ತುಣ್ಣೋ ಹೆರಿಯಣ್ಣ ।
ಇಂದೂ ನಮ್ಮಲ್ಲಿ ಮಂಗ್ಳಾರೊಪ್ಪತ್ತು
ಅನ್ನಕೂ ನನಗೂ ತರ್ಕಾವೇ ।
ಗೆರ್ಸಿಲ್ ಗೇರಾಲಿಲ್ಲಾ ಒನಕೀ ತಾಗಿಸಲಿಲ್ಲ
ಸೆಳ್ಳುಗುರಲ್ ಸುಲದೇ ಅಡಗೀಯ ।
ಸೆಳ್ಳುಗುರಲಿ ಸುಲದೇ ಅಡಗಿ ಮಾಡಿದೆನನ್ನಣ್ಣ

ಒಂದು ತುತ್ತುಣ್ಣೋ ಹೆರಿಯಣ್ಣ ।
ಇಂದೇ ನಮ್ಮಲ್ಲಿ ಸುಕ್ರಾರದೊಪ್ಪತ್ತು
ಎಂಜ್ಲ ಮಯ್ಲುಗಿಯ ಬೆರಸ್ ಬಾರಾ ।
ಎಂಜ್ಲ ಮಯ್ಲುಗಿಯ ಗವ್ಡಿಯರ್ ಕಯ್ಲು ತೆಗಸ್ವೆ
ಒಂದು ತುತ್ತುಣ್ಣೋ ಹರಿಯಣ್ಣ ।
ಅಡಗೀಯ ಮಾಡುವೆಂದಿ ಸಡಗರ ಬ್ಯೆಡಾ ತಂಗಿ
ಕಂದನ ಕಾಳಕ್ಕೆ ಕಲಿಮಾಡು ।
ಕಡಬಾಯ್ ಹಲ್ ಹುಟ್ಟಲಿಲ್ಲ ನೆತ್ತಿ ಸುಳಿ ತುಂಬಲಿಲ್ಲ
ನನ ಬಾಲ ಕಾಳಗವ ಕಲಿಲಿಲ್ಲ ।
ಅರಸ್‌ಗೋಳ್ ಮಕ್ಕಳ್ಗೆ ಕಲಿಸ್‌ಬೇಕೇ ಬುದ್ದೀಯ

ಕಲ್ತಿಪ್ರು ತಾಯ ಗರ್ಬಲ್ಲಿ । ಗಂಡಮಕ್ಕು
ಕಡಚಕ್ರ ಕಾದೀ ಗೆಲ್‌ಬೇಕು ।
ಬೇಲಿದ್ದೆ ಕೆಯ್ ತಿಂಬಂಗೆ ಬೇರ್ಗೆ ಕಿಚ್ಚಿಡುವಂಗೆ
ನೀನಿದ್ದಿ ನನ ಮಗನ ಕುಲುವಂಗೆ । ದೆವರೆ
ನಾನ್ಯಾರಿಗ್ ಹೇಳೀ ಮರಗಲೆ

೧೫. ಬಹಳ

ನಿನ್ನಾಲಾ ಮಗನೀಗೆ ನನ್ಹಿಣ್ಣ ಕೊಟ್ಟೀದೆ
ನಿನ್ನಟ್ಟು ದುಕ್ಕ ನನಗುಂಟು । ಸೋದರಿ.
ಕಂದನ ಕಾಳಕ್ಕೆ ಕಲಿಮಾಡು ।
ಅಟ್ಟಂಬು ಮಾತಾ ಕೇಳೀತೇ ತಂಗ್‌ಸೋದರಿ
ಮಾಳುಗಿಲಿಂದ ಹೆರುಗೆ ಬರುವಾಳೆ ।

ಸೊಡೀಗೆದ್ದೀಲೀ ಸೋಡಿಯಾಡು ಅಗಮಂಜು
ಹೆಣ್ಣ ಕೊಟ್ಟ ಮಾವ ಕರದಾನೆ ।
ಅಟ್ಟಂಬು ಮಾತನೇ ಕೇಳಾನೇ ಆಗಮಂಜು
ಜೋರೀನೇಆನೀ ನೆಗ್ದತ್ತಿ । ಅಗಮಂಜು
ಬೋರಿನೇ ಆನೀ ಹೊಡದಾನೆ ।
ಬೋರೀನೇ ಆನೀ ಹೊಡವದ್ನು ಅಗಮಂಜು
ಬೋರಿನೇ ಆನೀ ಹೊಡದಾನೆ ।
ಬೋರೀನೇ ಆನೀ ಹೊಡವದ್ನು ಅಗಮಂಜೂಗೆ
ಸತ್ತಗಿ ಸಾವಿರವೇ ತಡದದೆ ।
ಸತ್ತಗಿ ಸಾವಿರ ತಡವದ್ನು ಅಗಮಂಜು
ಬಂದೀ ಬಾಗಲ್ಲೇ ನಿಲುವಾನೇ । ಅಗಮಂಜು
ಆನಿಗಿಂದ್ ಕೆಳಗೇ ಇಳದಾನೆ ।
ಆನಿಗಿಂದ್‌ಕೆಳಗೇ ಇಳದಾನೆ ಆಗಮಂಜು

ತಾಯಿಯ ಸಿರಿಪದಕೆ ಸರಣೆಂದ । ತಾಯವ್ವಿ
ಆಗೊಂದು ಮಾತ ನುಡಿದಾಳೆ ।
ಸುತ್ತನ ಮಣಿನಾಡ ಎತ್ತಂದರಸೀತೆ ಮಗನೆ
ಹೆಣ್ಣ ಕೊಟ್ ಮಾವ ಕರದಾನೆ । ಮಗನೆಕೇಳೂ
ಮಾವನ ಸಿರಿಪದಕೆ ಸರಣೆನ್ನು ।
ಅಟ್ಟಂಬು ಮಾತ ಹೇಳಾಳೇ ತಾಯ್‌ಸೋದೂರಿ
ಕೈತೊಟ್ಟು ಪಾದಕೆ ಸರಣೆನ್ನಿ । ಅಗಮಂಜು
ಮಾವನ ಸಿರಿಪದಕೆ ಸರಣೆಂದ ।
ಬಡವರ ಮಕ್ಕಳ ಹೊಗಿಯಾಕಿ ಕೊಲ್ಲೂವೆ
ಮಸಿಮಣ್ಣ ಮಾಡಿ ಮಡಗೂವೆ ।

ಅಟ್ಟಂಬು ಮಾತ ಕೇಳಾನೇ ನಾರ್ಣದೇವ
ಕೂತ ಗದ್ದಿಗೆಯ ಜಡಿದೆದ್ದಿ । ನಾರ್ಣದೇವ
ಹೋಗಿ ಬಾಗ್ಲಲ್ಲೇ ನಿಲ್ವಾನೇ ನಾರ್ಣದೇವ
ಬಾಗ್ಲೋರೆ ಎಂದು ದೆನಿದೋರಿ । ಕರೆವುದ್ನು

ಓಯ್ಗುಂಡೆ ಒಡ್ನೆ ಬರುವಾರು । ಬಾಗಿಲವ್ರು
ಏನುಕಾರಣ್ಲೆ ಕರೆದೀರಿ ।
ಕರ್ದಂಬ್ ಕಾರ್ಯ ಸಯ್ ಕಿರ್ದಂಬ್ ಬೆಸರ ಸಯ್
ನನಗಿಂದು ಹಿಂದೆ ಅಗಮಂಜು । ದೊರೆಬರ್ತ
ತಡ್ದ ಬಾಗಿಲವ ಬಿಡಬೆಡಿ ।
ಅವನುಟ್ಟ ಪಟ್ಟೀಯ ಉಡಗೇರಿ ಕೊಟ್ಟಂಕು[೧೬]

ತಡದ ಬಾಗಲವ ಬಿಡಬೇಡಿ ।
ನಾರ್ಣದೆವನ ಅಳಿಯನೆಂಬ ಮಂದ್ರಿ ಪುರಿಸನೆಂಬ
ಊರ ಆಳೂವ ಅಗಮಂಜು । ದೊರೆತಾನು
ಉಟ್ಟ ಪಟ್ಟೆಯ ತಾನು ಕುಡೆನೆಂಬ ।
ನಾರ್ಣದೆವ್ನ ಅಳಿಯನಾದ್ರೇನು ಊರಿಗ್ ದೊರೆಯಾದ್ರೇನು
ನೀನುಟ್ಟ ಪಟ್ಟೀ ಉಡಗೇರಿ । ಕೊಟ್ಟಂಕು
ತಡೆವ ಬಾಗಿಲವ ಬಿಡುದಿಲ್ಲ । ಎಂದೇಳೇ
ಮುಂದೀನ ಬಾಗಲಕೇ ನೆಡದಾನೆ । ನಾರ್ಣದೆವ
ಬಾಗ್ಲೋರೆ ಎಂದು ದೆನಿದೋರಿ । ಕರೆವುದ್ನು
ಬಾಗ್ಲವ್ರು ಒಡ್ನೆ ಬರವಾರು । ಬಾಗ್ಲವ್ರು

ಏನು ಕಾರಣ್ಲೆ ಕರೆದೀರಿ ।
ನನಗಿಂದು ಹಿಂದೆ ಅಗಮಂಜು ದೊರೆಬರ್ತ
ಅವ ಉಟ್ಟ ಪಟ್ಟೆ ಉಡಗೇರಿ । ಕೊಟ್ಟಂಕು
ತಡದ ಬಾಗಿಲವ ಬಿಡಬೇಡಿ । ಅಂದೇಳಿ
ಬಾಗ್ಲೋರ್ಗೆ ಬುದ್ದೀ ಒರದಾನೆ । ನಾರ್ಣದೆವ
ತನ್ನಾಲರಮನ್ಗೆ ನೆಡದಾನೆ । ನಾರ್ಣದೆವ
ಮಾಳೂಗಿ ಒಳುಗೆ ನೆಡದಾನೆ । ನಾರ್ಣದೆವ
ಮಾಳೂಗಿ ಒಳುಗೆ ನೆಡದಾನೆ । ನಾರ್ಣದೆವ
ತೂಗು ಮಂಚದಲ್ಲೇ ಕುಳಿತಾನೆ ।
ತೂಗು ಮಂಚದಲ್ಲೇ ಕುಳುವದ್ನು ಮಗಳು ಮಂದೂರಿ
ಬಂದು ತೊಡಿಮೆನೆ ಕುಳಿತಾಳೆ ನಾರ್ಣದೆವ

ನೆತ್ತೀಯ ಕಿಟ್ಟೀ ಅಳಗಾನೆ
ನನಗಿಂದು ಹಿಂದೆ ಅಗಮಂಜು ದೊರೆ ಬರ್ತ
ಏನೆಂದು ಮಗಳೆ ಹರಸೀತೆ ।
ಅಪ್ಪ ನಿನ್ನಂತರು ಅರಸಗೇ ಹರಸದ್ರೆ

---

೧೬. ಕೊಡುವಲ್ಲಿಯವರೆಗೆ

ಪುರುಸರ್ಗೆ ಆಯಿಸವೇ ಹೆರ್ದಕ್ಕು ।
ಪಟ್ಟೀನ ಉಟ್ಕಂಡೇ ಮುತ್ತೀನ ಬಟ್ಟಿಟ್ಕಂಡೇ
ಗಟ್ಟೊ ಮಲ್ಲೂಗಿ ಮುಡ್ಕಂಡೇ । ಮಂದೂರಿ
ಗಟ್ಟೊ ಬಟ್ಟಲವ ತಡಕಣೆ । ಮಂದೂರಿ
ಪಚ್ಚದ ಕಂಬಕೆ ಮರಸಾರೆ ।
ಸಾಲೀಯ ಉಟ್ಕಂಡೇ ಸಾಜನ ಬಟ್ಟಿಟ್ಕಂಡೇ

ಜಾಜೀ ಮಲ್ಲೂಗಿ ಮುಡ್ಕಂಡಿ । ಮಂದೂರಿ
ಪಚ್ಚದ ಕಂಬ ಮರಸಾರು ।
ಸಾಲೀಯುಟ್ಟಾಳೆ ಸಾಜೀನ ಬಟ್ಟಿಟ್ಟಾಳೆ
ಜಾಜೀ ಮಲ್ಲೂಗಿ ಮುಡದಾಳೆ ಮಂದೂರಿ
ಪಚ್ಚದ ಕಂಬ್ಗೆ ಮರಸಾರಿ ನಿಲುವಾಳೆ ।
ಪಟ್ಟೀಯನುಟ್ಟಾಳೆ ಮುತ್ತೀನ ಬೊಟ್ಟಿಟ್ಟಾಳೆ
ಗಟ್ಟೊ ಮಲ್ಲೂಗಿ ಮುಡದಾಳೆ । ಮಂದೂರಿ
ಗಟ್ಟಿ ಬಟ್ಟಲವ ತಡದಾಳೆ । ಮಂದೂರಿ
ದಾರಂದ್ರಕೆ ಮರಸಾರಿ ನಿಲೂವಾಳೆ ।
ದಾರಂದ್ರಕೆ ಮರಸಾರಿ ನಿಲುವದ್ನು ನಾರ್ಣಸೊಮಿ

ಮಂದೂರಿಗ್ ಸಾಪಾ ಇಡೂವಾನೆ । ಏನಂದಿ
ನಿಡ್ ನಾಲಗೆ ಕುಂದಿ ಅರಗಾಲಿ[೧೭] । ಮಂದೂರಿ
ಬಲದ ದ್ಯಾಮಟಿಯೆ ತೊಲಗಾಲಿ । ಅಂದೇಳಿ
ಮಂದೂರಿಗ್ ಸಾಪ ಇಡುವಾನೆ ।
ಕಾಳಗ ಅಂದರೆ ಕಲಿಯಾದೆಯಾ ಮಗನೆ
ಹಾಳಾದೆಯೋ ನೀನು ಅರಸಾದ್ಯಾ । ಮಗನೆಕೇಳು
ಮಾವನ ಮಗಳಲ್ಲಿ ನೆರದದೆ ।
ಮಾವನ ಮಗಳಲ್ಲಿ ನೆರೆದರೆ ತಾಯೆಕೇಳೂ
ಬೋಗಸಲೆ ನಾನು ಬರತಿ ಕಾಣಿ । ತಾಯವ್ವ
ದಂಡೀನೂಟಕೆ ಅನುಮಾಡೆ ।

ಕಂಚೀ ಹುಳಿಯಲ್ಲಿ ಮಿಂಚೊಂದ ಮಸದೇ ಇಡುವೆ
ಹಗೆಯವನ ತಲೆಯ ಹಗಲ್ತಿರಿವೆ । ತಾಯೆಕೇಳೆ
ನೀನು ಚಿಂತೆಯ ಬಿಡಬೆಡ । ತಾಯೆ ಕೇಳೆ
ದಂಡೀನೂಟಕೆ ಅನುಮಾಡೆ ।
ಕಂಚೀ ಹುಳಿಯಲ್ಲಿ ಮಿಂಚೊಂದು ಮಸದೇಬಿಡುವೆ

---

೧೭. ನಡುನಾಲಿಗೆ ಮುರುಟಿ ಹೋಗಲಿ

ಹಗೆಯವನ ತಲೆಯ ಹಗಲ್ತರುವೆ । ಅಜ್ಜೀಕೇಳು
ನೀನು ಚಿಂತೆಯ ಬಿಡಬೇಡ । ಅಜ್ಜೀಕೇಳು
ದಂಡೀನ ಮೀಯಣಕೆ[೧೮] ಅನುಮಾಡಿ ।
ಅಟ್ಟಂಬು ಮಾತ ಕೇಳಾಳೇ ತಾಯವ್ವಿ
ಮಾಳೂಗಿ ಒಳಗೆ ನೆಡುದಾಳೆ ।

ಅಟ್ಟದ ಮೆನನ ಜೇರಗ್ ಸಾಲಕ್ಕಿಯ
ಅನ್ನ ಮೆಗ್ರಕೆ ಅನುಮಾಡಿ ।
ಬೇಲಿಯ ಮೆನನ ದಾರಿ ಹೀರೇಕಾಯಿ
ದಾರೀಯ ಒರದಿ ಮಿಣಸಿಕ್ಕಿ ।
ಹಿತ್ಲ ಕಣಕೀನ ಬೊಟ್ಟು ಕೆಂಬಗರ್ೀಯ
ಬೊಟ್ಟೆಣ್ಣೆ ಕಿಟ್ಟೆ ಮಿಣ್ಸೆಟ್ಟಿ ।
ಎಲಿಮೆರ್ ಒಂಬತ್ ಬಗೆ ಕಾಯ್ಮೆರ್ ಒಂಬತ್‌ಬಗೆ
ನೂರೊಂದು ಬಗೆಯ ಅಡಗೀಯೇ ।ಯ। ಕಜ್ಜಾಯ
ಅನು ಮಾಡಿದಳೊಂದು ಗಳಿಗೇಲಿ । ಅಜ್ಜಮ್ಮ
ಜೋಡೆಲಿ ಕೂಡ್ವನ ತಡದಾಳೆ । ಅಜ್ಜಮ್ಮ

ಬಚ್ಚಲರ ಮನೆಗೆ ನೆಡದಾಳೇ । ಅಜ್ಜಮ್ಮ
ಬಚ್ಚಲಗೆ ನೀರ ಎರದಾಳೆ । ಅಜ್ಜಮ್ಮ
ಬಚ್ಚಲಿಗೆ ಕಿಚ್ಚ ಹುರದಾಳೆ । ಅಜ್ಜಮ್ಮ
ಸೀಗೆ ಬಾಗವ ಅರ್ದಾಳೆ ।
ಅಗಮಂಜು ಕೂತ ಗದ್ದುಗೆಯ ಜಡಿದೆದ್ದು
ಆನೆ ಸಾಲೀಗೆ ನೆಡದಾನೆ ।
ಅಂದುಳ್ಳ ಆನೀಯ ಅಂಗಕ್ಕೆ ಹೊಡ್ತಂದಿ
ಅಂದ ಚೆಂದದಲೇ ಹುಡಿಯುದ್ದಿ । ಪುಡಿಯುದ್ದಿ
ಗಂದದ ಗರುಡ ಬಿಗದಾನೆ । ಅಗಮಂಜು
ಬಾಲಕ್ಕಿಕ್ಕಾನೆ ಚವುಲವ । ಅಗಮಂಜು

ಕುಳ್ಳೀಗಿಕ್ಕಾನೆ ಸೆರಗಂಟೆ । ಅಗಮಂಜು
ಕಾಲೀಗಿಕ್ಕಾನೆ ಉರಗಿಜ್ಜಿ । ಅಗಮಂಜು
ತಿಂಬೂಕಿಕ್ಕಾನೆ ಕಡ್ಲೀಯ । ಅಗಮಂಜು
ಅಕ್ಕ ತಂದ್ದೀರ್ ಮನೆಗೆ ನೆಡದಾನೆ ।
ಅಕ್ಕ ತಂಗೀಮಕ್ಳು ಲಕ್ಷವೇ ಕೊಮುರಾರು
ಮಿಂಚೀನ ಕಾಳಗಕ್ಕೆ ಸವ್ನಬೇಕು ।

---

೧೮. ಸ್ನಾನಕ್ಕೆ

ಮಿಂಚೀನ ಕಾಳಗಕ್ಕೆ ಸವ್ನಿ ಸುಂಗಾರಾಗಿ
ಬಂದೀ ಬೀದಿಯಲ್ಲಿ ನಿಲ್ಬೇಕು । ಅಂದೇಳಿ
ಸೀಗ್ರೋರರಮನೆಗೆ ನೆಡದಾನೆ ।
ಅಕ್ಕ ತಂಗೀ ಮಕ್ಳ ಸೀಗ್ರೋರ ಕೊಮುರರಾ

ಕತ್ತೀ ಕಾಳಗಕ್ಕೆ ಸವ್ನಬೇಕು
ಕತ್ತೀ ಕಾಳಗಕ್ಕೆ ಸವ್ನಿ ಸುಂಗಾರಾಗಿ
ಬಂದೀ ಬೀದೀಲಿ ನಿಲ್ಬೇಕು । ಅಂದೇಳಿ
ಪಟ್ಟಣ ಮಾರ್ಗಲ್ಲೇ ನೆಡದಾನೆ । ಅಂಗಮಂಜು
ಪಟ್ನಕೆ ದಂಗುಲವ[೧೯] ಹೊಯ್ದಾನೆ ।
ಆನಿ ಕುದರೀಯೋ ಮಂದೀ ಮಾರ ಬಲವೋ
ದಂಡೀನ ಕಾಳಿ ಕರ್ಕಾಳೀ । ಸಯ್ವಾಗಿ
ದಂಡೀಗೆ ಕಲಿಗಳು ಸುವ್ನಾಲಿ ।
ದಂಡೀಗೆ ಕಲಿಗಳು ಸವ್ನಿ ಸುಂಗಾರಾಗಿ
ಬಂದೀ ಬೀದೀಲಿ ನಿಲ್ಬೇಕು । ಅಂದೇಳಿ
ತನ್ನಲರಮನೆಗೆ ಬರುವಾನೆ । ಆಗಮಂಜು
ಬಚ್ಚಲರಮನಿಗೆ ನೆಡದಾನೆ ।

ಕಂಚೀನ ತಟ್ಟೀಲಿ ಸಂಪ್ಗಿ ಹೂಂಗಿನ ಎಣ್ಣೆ
ಹೊನ್ನ ಮಣೆಯೊಂದ ತಡದಾಳೆ । ತಾಯವ್ವಿ
ಬಚ್ಚಲರ ಮನೆಗೆ ನೆಡದಾಳೆ । ತಾಯವ್ವಿ
ಹೊನ್ನ ಮಣೆಯೊಂದ ಮಡುಗಾಳೆ । ಅಗಮಂಜು
ಮಣೆಯ ಮೆನೋಗಿ ಕುಳಿತಾನೆ ।
ಬೆನ್ನು ತಿಕ್ಕುವರು ಹದಿನೆಂಟು ಸಾವಿರ ಮಂದಿ
ಕಾಲ ತಿಕ್ಕುವರಿಗ್ ಗಡಿಯಿಲ್ಲ । ಅಗಮಂಜೂನ
ಎಣ್ಣೀಯ ಜಳಕವೆ ಹುರದದೆ । ಅಗಮಂಜು

ಬಚ್ಚಲ ಕಲ್ಮೆನೆ ಕುಳಿತಾನೆ ।
ಕಾಮನ ಗುಂಡೀ ನೀರ ಬೀಮನ ಗುಂಡೀಗ್ ಬಿದ್ದಿ
ಅರ್ಜೀಣ ಗುಂಡೀಲೆ ಹದಮಾಡಿ । ತಾಯವ್ವಿ
ಮುತ್ತಿನಾಯರದ ಮಣಿ ತೆಂಗು । ತಡಕಂಡಿ
ಕೇಸೀಗೆ ನೀರ ಎರದಾಳೆ ।
ಕೇಸ ಬಿಡಿಸಿದರೆ ಸೂಸಿದವೋ ಮಲ್ಲೂಗೆ
ಗಂಗೀಲಿದ್ದೇಳು ಗಿಳಿ ಬಂದಿ । ಅಂಗಮಂಜೂಗೆ

---

೧೯. ಡಂಗುರ

ಚೆಲ್ಲಿದವೆ ಮಲ್ಲುಗೆಯ ಕುಸುಮವ ।
ಚೆಂಡ ಬಿಡಿಸಿದರೆ ಚೆಲ್ಲಿದವೋ ಮಲ್ಲೂಗೆ
ಗೊವಿಲಿದ್ದೇಳು ಗಿಳಿ ಬಂದು । ಅಗಮಂಜೂಗೆ
ಚೆಲ್ಲಿದವೆ ಮಲ್ಲಿಗೆಯ ಕುಸುಮವ । ಅಗಮಂಜು
ಮಿಂದೊಗೆದನೊಂದು ಗಳಿಗೇಲಿ ।
ಮಿಂದೊಗೆದಾನೆ ಮಿಂದೀ ಮಡಿಯುಟ್ಟಾನೆ
ಮಿಂದೀ ಚೆಂಡಕಿಯ ಕುಡಗಾನೆ । ಅಗಮಂಜು
ತನ್ನ ಅರಮನೆಗೆ ನೆಡದಾನೆ । ಅಗಮಂಜು
ದೇವರ ಬುಡಕೋಗಿ ನಿಲ್ವಾನೆ । ಅಗಮಂಜು
ತುಳಚೀ ತೀರ್ಥವ ಕುಡದಾನೆ । ಅಗಮಂಜು
ತುಳಚೀಗೆ ಕಯ್ಯ ಮುಗದಾನೆ । ಅಗಮಂಜು
ಮಾಳೂಗಿ ಒಳುಗೆ ನೆಡುದಾನೆ । ತಾಯವ್ವಿ
ಹೊನ್ನ ಮಣೆಯೊಂದ ಮಡಗಾನೆ । ಅಗಮಂಜು
ಮಣೆಯ ಮೆನೋಗಿ ಕುಳಿತಾನೆ । ತಾಯವ್ವಿ
ಕಿರಳ ಬಾಳೆಲೆಯ ತೊಳದಾಸಿ । ತಾಯವ್ವಿ
ಅನ್ನ ಮೆಗ್ರವ ಬಡಸಾಳೆ । ತಾಯವ್ವಿ
ಹಾಲ ಪಾಯಸವ ಬಡಸಾಳೆ । ತಾಯವ್ವಿ
ತುಪ್ಪ ಸಕ್ಕರೆಯ ಎರದಾಳೆ । ಅಂಗಮಂಜು
ಲಾಗೊಂದು ಮಾತ ನುಡಿದಾನೆ ।
ನನ್ನಮ್ಮ ಬಡಸಾಳೆ ಹೊಸ ಕಂಪನ ತುಪ್ಪವ
ದೆಸೆನಾಕೋ ದಿಕ್ಕೇ ಎಸದದೆ । ನನ್ನ ತಾಯಿ
ಹುಗಳೂವೇ ಕೂಟಕೂಡ್ದಲ್ಲಿ । ಅಂದೇಳಿ
ಉಂಡೆದ್ದನೊಂದು ಗಳೀಗೇಲಿ ।
ಉಂಡಾನೂಟವ ತೊಳ್ದಾನೇ ಕಯ್ಬಾಯಿ
ತೂಗೂ ಮಂಚದಲ್ಲೇ ಕುಳಿತಾನೆ । ತಾಯವ್ವಿ
ತಮ್ಮೊಟಕೆ ತಾವೇ ಎಡೆಮಾಡಿ । ಅವ್ರಯ್ವರು
ಊಟಕೆ ಹೋಗಿ ಕುಳಿತಾರೆ ।
ಉಂಡರೂಟವ ತೊಳದರೆ ಕಯ್ಬಾಯಿ
ಎಂಜಲ ಮಯ್ಲಿಗೆಯ ತೆಗದಾರೆ ।
ಆಯುಳ್ಳ ಹಣ್ಣಡಕೆ ಸೋದಿಸಿದ ಬೆಳಿಯೆಲೆ
ಹಾಲಿನಲಿ ಬೆಂದ ತೆನಿ ಸುಣ್ಣ । ತಡಕಂಡಿ
ಮಾಳೂಗಿಲಿಂದೆರುಗೆ ಬರುವಳು । ತಾಯ್ ಸೋದೂರಿ
ಅಗಮಂಜೂಗೊಂದೀಳ್ಯ ಕೊಡುವಳು ।

ಎಲಿಯೊಂದ ತಿಂದಾನೇ ರಜವಲ್ಲೇ ಉಗುಳಾನೆ
ಆಗೊಂದು ಮಾತ ನುಡಿದಾನೆ ।
ಉತ್ತರಿಗೆ ಒಂಬರ್ಗು ಮಂದ್ರಿಗೆ ಬಳಿಬರ್ಗು
ರಸರಾಳಿರ ಮಗು ಹಸಬಾಲಿ ।
ಅರ್ದ ಹಿತ್ಲಕೊಡು ಬದ್ಕು ಬಂಡಾರ ಕೊಡು
ಮುಟ್ಟೀಸಿ ಕೊಡದರ ತೊಗರೀಗೆ[೨೦] ।
ಅಟ್ಟಂಬು ಮಾತ ಕೇಳಿತು ತಾಯವ್ವಿ
ಅರ್ದ ಹಿತ್ಲ ಕೊಟ್ಟು ಅದ್ ಬಂಡಾರ ಕೊಟ್ಟು
ಮುಟ್ಟೀಸಿ ಕೊಟ್ಟದರ ತೊಗರೀಗೆ ಅಗಮಂಜು
ಕುಳಿತ ಗದ್ದುಗೆಯ ಜಡಿದೆದ್ದು । ಅಗಮಂಜು
ಮಾಳೂಗೆ ಒಳುಗೆ ನೆಡುದಾನೆ । ಅಗಮಂಜು
ತನ್ನ ಪಟ್ಟೀಯ ನೆರ್ದೂಟ್ಟಿ । ಅಗಮಂಜು
ತನ್ನ ಆಯುಧವ ತಡದಾನೆ । ಅಗಮಂಜು
ತನ್ನ ಕಡ್ಗವ ತಡದಾನೆ । ಅಗಮಂಜು
ತನ್ನ ಕಯ್‌ಚೆಂಜೀ ತಡದಾನೆ । ಅಗಮಂಜು
ಮಾಳೂಗಿಂದೆರುಗೆ ಬರುವಾನೇ ಅಗಮಂಜು
ಮಾಳುಗಿಂದೆರುಗಿ ಬರುವದ್ನು ಸೋದೂರಿ
ಮುತ್ತನೆಕುಟ್ಟಿ ಹುಡಿಮಾಡಿ । ಪುಡಿಮಾಡಿ
ಮುತ್ತಿನ ಆರುತಿಯ ಗೆಯ್ದಾಳೆ । ಸೋದೂರಿ
ಹಗಳನೇ ಕುಟ್ಟಿ ಪುಡಿಮಾಡಿ । ಹುಡಿಮಾಡಿ

ಹಗಳದಾರತಿಯ ಗೆಯ್ದಾಳೆ ।
ಹಗಳದಾರುತಿಯ ಗೆಯ್ದಾಳೇ ಸೋದೂರಿ
ಅಗಮಂಜುಗಾರತಿಯ ಬೆಳಗಾಳೆ । ಏನಂದಿ
ಈರನಿಗಿಂದ ಸೂರ ಕಲಿಯಾಲಿ ।
ಈರನಿಂದ ಸೂರ ಕಲಿಯಾಗಿ ಕಾದಲಿ
ನೂರಾಳ ಸೋಲ್ಸಿ ತಲೆತರ್ಲಿ । ಅಂದೇಳಿ
ದಂಡೀನಾರತಿಯ ಬೆಳಗಾಳು ।
ದಂಡೀನಾರತಿಯ ಬೆಳಗುದ್ನು ಅಗಮಂಜು
ಬೋರಿನೇಆನೀ ನೆಗದತ್ತಿ । ಅಗಮಂಜು
ರಾಜ ಮಾರ್ಗದಲ್ಲಿ ಹೊಡೆದಾನೆ । ಅಗಮಂಜು
ತನ್ನ ರಾಜ್ಯವ ಗಳದಾನೆ । ಅಗಮಂಜು

೨೦. ತವರಿಗೆ

ಅಕ್ಕ ತಂಗ್ದೀರ ರಾಜ್ಯಕೆ ನೆಡದಾನೆ । ಅಗಮಂಜು
ಅವರೆಲ್ಲೋರ್ನಲ್ಲಿ ಒಡಗುಂಡಿ । ಅಗಮಂಜು
ಸೀಗ್ರೋರ ಕೇರಿಗೆ ನೆಡುದಾನೆ । ಅಗಮಂಜು
ಅವರೆಲ್ಲೋರ್ನಲ್ಲಿ ಒಡಗೊಂಡ ।
ಆನಿ ಕುದರೀಯೋ ಮಂದೀ ಮಾರ್ಬಲವೋ
ದಂಡೀನ ಕಾಳಿ ಕರ್ಕಾಳಿ । ಸಯ್ವಾಗಿ
ದಂಡೀನ ಕಲಿಗಳು ಸವ್ನಾರೇ ।
ದಂಡೀನ ಕಲಿಗಳು ಸವ್ನಿ ಸುಂಗಾರಾಗಿ

ರಾಜ ಮಾರ್ಗದಲಿ ನೆಡದಾರೆ ।
ರಾಜ ಮಾರ್ಗದಲ್ಲಿ ನೆಡದಾರೆ । ಅಗಮಂಜು
ಬಾಳೀಯ ಬನವ ಎಳದಾನೆ । ಅಗಮಂಜು
ಆನಿಯಿಂದ್ ಕೆಳಗೆ ಎಳದಾನೆ । ಅಗಮಂಜು
ಅವರೆಲ್ಲರಲ್ಲೇ ಇರಬೇಕು ಅಂದೇಳಿ
ರಾಜ ಬೀದಿಗಾಗಿ ನೆಡದಾನೆ । ಅಗಮಂಜು
ರಸರಾಳಿರ ಮನೆಗೆ ನೆಡದಾನೆ । ಅಗಮಂಜು
ಹೋಗಿ ಬಾಗ್ಲಲ್ಲೇ ನಿಲೂವಾಣೇ । ರಸರಾಳೀ
ತಡದಾಳೆ ತಂಬುಗಿಲ್ ಉದಕವ ।

ಅತ್ತಿ ಕೊಟ್ಟುದಕವ ಬ್ಯಾಗದಲ್ ತಡದಾನೆ
ಕಾಲು ಸಿರಿಮಿಕವ ತೊಳೆದಾನೆ । ಅಗಮಂಜು
ಮಾಳುಗಿ ಒಳುಗೆ ನೆಡುದಾನೆ । ಅತ್ಯಮ್ಮ
ಅಗಮಂಜೂಗೊಂದೀಳ್ಯ ಕೊಡುವಾಳೇ । ಅಗಮಂಜು
ಆಯಾಕೊಂದೀಲ್ಯ ಮೆಲುವಾನು ।
ಆಯಾಕೊಂದೀಳ್ಯ ಮೆಲುವದ್ನು ರಸರಾಳಿಮಗ್ಳು.
ಓಡ್ ಬಂದೇ ತೊಡೆಮೆನೇ ಕುಳಿತಾಳೆ । ಅಗಮಂಜು

ನೆತ್ತೀಯ ಕಿಟ್ಟೇ ಅಳಗಾನೆ ।
ನೆತ್ತೀಯಕಿಟ್ಟೀ ಅಳಗಾನೆ । ಅಗಮಂಜು
ಕೊಳ್ಳನ ಪಾವ್ನ ಸರ ತೆಗದಾನೆ । ಅಗಮಂಜು
ಇಟ್ಟಾನೆ ರಸರಾಳಿ ಮಗಳೀಗೆ । ಅಗಮಂಜು
ತಾ ಬೆನ್ನಗಾಗೇ[೨೧] ಕುಳಿತಾನೇ ।
ತಾ ಬೆನ್ನಗಾಗೇ ಕುಳುವದ್ನು ರಸರಾಳೀರ್ಮಗ್ಳು
ತೊಡಿಗಿಂದ ಕೆಳಗೇ ಇಳೀದಾಳೆ । ರಸರಾಳಿಮಗ್ಳು

೨೧. ಖಿನ್ನನಾಗಿ

ತಪ್ಪು ತಳಕೋಗಿ ಕುಳಿತಾಳೆ ।
ತಪ್ಪು ತಳಕೋಗಿ ಕುಳುವದ್ನು । ಅಗಮಂಜು
ಕೂತಗದ್ದುಗೆಯ ಜಡಿದೆದ್ದು । ಅಗಮಂಜು
ರಾಜಂಗಳ ಮೆಟ್ಟ ಎಳದಾನೆ । ಅಗಮಂಜು
ಬಾಗ್ಲೋರ ಬಾಗಲ್ಕೇ ನೆಡದಾನೆ । ಅಗಮಂಜು
ಬಾಗ್ಲೋರೆ ಎಂದು ದೆನಿದೋರಿ । ಕರೆವ್ರುದ್ನು
ಓಯ್ಗುಂಡೇ ಬಾಗ್ಲೋರು ಬರುವರು । ಬಾಗ್ಲೋರು

ಏನು ಕಾರಣ್ಲೆ ಕರೆದೀರಿ ।
ಕರ್ದಂ ಕಾರ್ಯ ಸಯ್ ಕಿರ್ದಂಬ ಬೆಸರವಿಲ್ಲ
ತಡದ ಬಾಗ್ಲವ ಬಿಡ್ಬೇಕು ।
ತಡ್ದ ಬಾಗ್ಲವ ನಾವ್ ಹೀಂಗೇ ಬಿಡೂದಿಲ್ಲ
ನೀನುಟ್ಟ ಪಟ್ಟೀ ಉಡ್ಗೆರೆ । ಕೊಟ್ಟಂಕು
ತಡದ ಬಾಗ್ಲವ ಬಿಡುದಿಲ್ಲ ।
ನಾರ್ಣದೆವ್ನ ಅಳಿಯ ನಾನು ಮಂದ್ರಿ ಪುರುಸ ನಾನು
ಉಟ್‌ಪಟ್ಟೀ ನಿಮ್ಗೆ ಕೊಡುದಿಲ್ಲ ।

ನಾರ್ಣದೆವ್ನ ಅಳಿನಾದ್ರೇನು ಮಂದ್ರಿ ಪುರುಸನಾದ್ರೇನು
ನೀನುಟ್ಟ ಪಟ್ಟೀ ಉಡ್ಗೇರೆ । ಕೊಟ್ಟಂಕು
ತಡದ ಬಾಗ್ಲವ ಬಿಡುದಿಲ್ಲ ।
ಏನೂ ಹೇಳೀದ್ರು ಕೇಳೂವರಲ್ಲಂದೇಳಿ
ಒಂದು ಸುತ್ ಪಟ್ಟೀ ಬಿಡಸಾನೆ । ಅಗಮಂಜು
ಬಾರ್ಗ್ಲೋರ್ಗೆ ಉಡುಗೆರೆಯ ಕೊಡುವಾನೇ
ಬಾರ್ಗ್ಲೋರ್ಗೆ ಉಡುಗೆರೆಯ ಏನಂದಿ ಕೊಡುವಾನೆ
ನನ್ನಾಯಿಸ ಸಿರಿಯೇ ತೊಲಗೀತು ।
ನನ್ನಾಯಿಸ ಸಿರಿಯೇ ತೊಲಗೀತು ಅಂದೇಳಿ

ಮುಂದೀನ ಬಾಗ್ಲಕೆ ನೆಡದಾನೆ । ಬಾಗ್ಲೋರು
ನೀನುಟ್ಟ ಪಟ್ಟೀ ಉಡಗೇರಿ । ಕೊಟ್ಟಂಕು
ತಡ್ದ ಬಾಗ್ಲವ ಬಿಡುದಿಲ್ಲ ।
ನಾರ್ಣದೆವ್ನ ಅಳಿಯನಾನು ಮಂದ್ರಿ ಪುರಿಸನಾನು
ಉಟ್ ಪಟ್ಟೀ ನಿಂಗೇ ಕೊಡೂದಿಲ್ಲ ।
ನಾರ್ಣದೆವ್ನ ಅಳಿನಾದ್ರೇನು ಮಂದ್ರಿ ಪುರಿಸನಾದ್ರೇನು

ಊರ ಆಳೂವ ಅಗಮಂಜು । ದೊರೆಯಾದ್ರೇನು
ನೀನುಟ್ಟ ಪಟ್ಟೀ ಉಡಗೆರೆ । ಕೊಟ್ಟಂಕು

ತಡದ ಬಾಗ್ಲವ ಬಿಡೂದಿಲ್ಲ ।
ಏನೂ ಹೇಳಿದ್ರು ಕೂಳೂದಿಲ್ಲಂದೇಳಿ
ಎಯ್ದು ಸುತ್ ಪಟ್ಟೀ ಬಿಡ್ಸಾನೆ । ಅಗಮಂಜು
ಬಾಗ್ಲೋರಿಗದ ಉಡುಗೆರೆಯ ಕೊಡುವಾನೆ । ಏನಂದಿ
ತನ್ನಾಯಿಸ ಸಿರಿಯೇ ತೊಲಗೀಗೇ । ಅಂದೇಳಿ
ಕೊಲ್ಕಾರರ ಬಾಗ್ಲಕೆ ನೆಡದಾನೆ । ಅಗಮಂಜು

ಕಣ್ಣೀಗ್ ಕತ್ತಲೆಯೇ ಕಮದದೆ[೨೨] ।
ಕಣ್ಣೀಗ್ ಕತ್ತಲೆಯೇ ಕಮವದ್ನು ನಾರ್ಣದೆವ್ನಮನಿಯ
ಗಿಂಡೀಕಾಲ್ ಸಣ್ಣಕ್ಕ ಬರುವಾಳು । ಬಂದಿನ್ನೇ
ಅಗಮಂಜುಗಿಟ್ ಅಮ್ರತ ತಳದಾಳೆ ।
ಅಗಮಂಜುಗಿಟ್ ಅಮೃತ ತಳವದ್ನು ಅಗಮಂಜು
ಕಣ್ಣನ ಕತ್ತಲೆಯೇ ತೊಲಗದೆ । ಅಗಮಂಜು
ಮಾಳೂಗಿ ಒಳಗೇ ನೆಡದಾನೆ ।
ಮಾಳೂಗೀ ಒಳುಗೆ ನೆಡವದ್ನು ಅಗಮಂಜು ಬಾವಾ

ಮದಣಯ್ಯ ಎದ್ರು ಬಂದಾನೆ । ಅಗಮಂಜು
ಲಾಗೊಂದು ಮಾತ ನುಡದಾನೆ ।
ಬಾವ ನಿನ್‌ಮಲ್ಲಿ ಸಕಲ ಸಾವ್ರಮಂದಿ
ಯಾವ್ರೋಳು ನಿನ್ನ ಕಿರ್ದಿಂಗಿ ।
ಪಟ್ಟೀ ಉಟ್ಟಿರ್ಗು ಮುತ್ತಿನ ಬಟ್ಟಿಟ್ಟಿರ್ಗು
ಬೆಳ್ಳಿ ಸಂಬಳಗಿ ತಡದಿರ್ಗು । ಬಾವಕೇಳು
ಪಚ್ಚದ ಕಂಬ್ಗೆ ಮರೆಸಾರೇ । ನಿಲ್ವಾಳು
ಆಕೆಯ ಸೆರ್ಗ ತಡೆಹೋಗು ।

ಅಟ್ಟಂಬು ಮಾತಾ ಕೇಳಾನೇ ಅಗಮಂಜು
ಅದಕಿಂದು ಮುಂದೇ ನೆಡದಾನೇ । ಅಗಮಂಜುಗೆ
ನೆಂಟ ಮಸಣಯ್ಯ ಎದ್ರಬಂದ ।
ನೆಂಟ ನಿನ್ ಮಲ್ಲಿ ಸಕಲೋರು ಸಾವಿರಮಂದಿ
ಯಾವ್ರೋಳು ನಿನ್ನ ಹೆರಿಯಕ್ಕ ।
ಸಾಲಿಯುಟ್ಟಾಳೆ ಸಾಜನ ಬಟ್ಟಿಟ್ಟಾಳೆ

ದಾರಂದ್ರ ಮರಸಾರಿ ನಿಲ್ವಾಳೂ । ಬಾವಕೇಳು
ಆಕೆಯ ಸೆರ್ಗ ತಡಿಹೋಗು
ಅಟ್ಟಂಬು ಮಾತಾ ಕೇಳಾನೇ ಅಗಮಂಜು

---

೨೨. ಕವಿಯಿತು

ನಾರ್ನದೆವ್ನರಮನ್ಗೆ ಬರುವಾನೆ ।
ನಾರ್ಣದೆವ ನಿನ್ನಪ್ಪ ನಾಡಿಗಪ್ಪಂತವ
ದಾರಂದ್ರಕೆ ದಾರಿ ಎರ್ದಾನೆ ।
ನಾರ್ಣದೆವ ನಿನ್ನಪ್ಪ ಊರಿಗಪ್ಪಂತವ
ಪಚ್ಚದ ಕಂಬ್ಗೆ ದಾರಿ ಎರ್ದಾನ ।

ನೆಗ್ಗಿಯಾಡು ಹೆಣ್ಣೆನೆಗ್ಗಿ ಯಾಕೆ ಆಡೀಯೆ
ನೆಗ್ಗಿಯಾಡಿದ್ರೆ ಮುತ್ತು ಒಡವದ ।
ಮಾತಾಡು ಹೆಣ್ಣೆ ಮಾತ್ಯೆಕೆ ಅಡ್ತಿಲ್ಲ ।
ಮಾತಾಡಿದ್ರೆ ಹಗ್ಗ ಒಡದವ ।
ಅಳಿಯ ಮಾವಗೆ ಹೇಮುಸ್ ಮಾತಾಡಿದ್ನು
ಮಂದ್ರಿಗಿಟ್ಟ ಸಾಪ ಬಿಡುವಾನೆ ।
ಮಂದ್ರಿಗಿಟ್ ಸಾಪ ಬಿಡುವಾನೆ ನಾರ್ಣದೆವ
ಕುನ್ನಾಲಗೆಲ್ಲ ಸಮನಾಲಿ[೨೩] । ಅಂದೇಳಿ

ಮಂದ್ರಿಗಿಟ್ ಸಾಪ ಬಿಡುವಾನೆ ।
ಮಂದ್ರಿಗಿಟ್ ಸಾಪ ಬಿಡುವದ್ನು ಮಂದೂರಿ
ಮಾತಗ್ ಮಾತಾಡಿ ನೆಗಿಯಾಡಿ । ಮಂದೂರಿ
ಸೆಣ್ಣಗಿಂಡೀಯಲ್ಲಿ ಉದ್ಕವೇ ।ವ। ತಡಕಂಡಿ
ಅಗಮಂಜು ಒಡ್ನೋಗಿ ನಿಲ್ವಾಳು । ಮಂದೂರಿ
ಅಗಮಂಜುಗುದಕಾವ ಕೊಡುವಳು । ಅಗಮಂಜು
ಕಾಲು ಸಿರಿಮೊಕವ ತೊಳದಾನೆ । ಅಗಮಂಜು

ಮಾಳೂಗಿ ಒಳುಗೆ ನೆಡದಾನೆ । ಅಗಮಂಜು
ತೂಗೂ ಮಂಚದಲ್ಲೇ ಕುಳತಾನೆ । ಮಂದೂರಿ
ಮಾಳೂಗಿ ಒಳುಗೇ ನೆಡದಾನೆ ।
ಆಯುಳ್ಳ ಹಣ್ಣಡಕೆ ಸೋದಿಸಿದ ಬೆಳಿಯೆಲೆ
ಹಾಲಿನಲಿ ಬೆಂದ ತೆನಿಸುಣ್ಣ । ತಡಕಂಡಿ
ಮಾಳೂಗೀಲಿಂದೆರುಗೆ ಬರುವಾಳು । ಮಂದೂರಿ
ಅಗಮಂಜುಗೋಂದಿಳ್ಯ ಕೊಡುವಳು । ಅಗಮಂಜು

ಆಯಕೊಂದೀಳ್ಯ ಮೆಲುವಾನೆ । ಅಗಮಂಜು
ಅಗೊಂದು ಮಾತ ನುಡಿದಾನೆ ।
ಅಂದೀಗಿಂದೀಗು ಹೀಂಗೇ ಇರ್ಲುಬಾರ
ಮಾಳ್ಗಲೇ ಹಾಸ ಬಿಡಿಸೆಂದ । ಮಂದೂರಿ

೨೩. ಸರಿಯಾಗಲಿ

ಮಾಳೂಗಿ ಒಳುಗೆ ನೆಡದಾಳೆ । ಮಂದೂರಿ
ಮಾಳಗಿಲಿ ಹಾಸ ಬಿಡಿಸಾಳೆ । ಅಗಮಂಜು
ಹಾಸಗಲ್ಲೋಗಿ ಒರುಗಾನೆ ।
ಹಾಸಗಲ್ಲೋಗಿ ಒರುಗಾನೆ ಮಂದೂರಿ

ತಾನೂ ಒಡನೋಗಿ ಒರುಗಾಳು ।
ತಾನೂ ಒಡನೋಗಿ ಒರುಗುದ್ನು ಮಂದುರಿಯ
ಮೊವದಸರ ಕಡ್ದಿ ಮಣಿಚೆಲ್ಲಿ । ಮಂದೂರಿ
ಆ ಮಣಿ ಹೆಕ್ಕಿ ಸುರದಾಳೆ ।
ಕಡ್ದಿ ಚೆಲ್ಲಿದ ಮಣಿಯ ಹೆಕ್ಕಿ ಸುರಿಯಲ್ಬಾರ
ಗರ್ತಿಲಕ್ಷಣಕೆ ಇದು ಸಲ್ಲ । ಮಂದೂರಿ
ಮಂಚಕೇ ಹಾಸ ಬಿಡಿಸೆಂದ । ಮಂದೂರಿ
ಮಂಚಕೆ ಹಾಸ ಬಿಡಿಸಾಳೆ । ಅಗಮಂಜು
ಮಂಚದ ಮೆನೆ ಒರುಗಾನೆ । ಮಂದೂರಿ

ತಾನೊಡನೋಗಿ ಒರಗಾಳೆ ।
ತಾನೊಡನೋಗಿ ಒರಗುದ್ನು ನಾರ್ಣದೇವ
ತಾ ಕೋಳೀಯಾಗಿ ಸರಗಯ್ದು ।
ಕೋಳಿ ಕೂಗಿದ ಮೆನೆ ಹಿಂಡರ ಹಾಸಿಗೆ ಸಲ್ಲ
ಗಂಡಸು ತನಕೇ ಇದು ಸಲ್ಲ । ಮಂದೂರಿ
ದಂಡೀಗಾರತಿ ಕಳುಗೀಸು ।

ಊರ್ಕೋಳಿಯಾಗೆ ಲೋಕೆಲ್ಲ ಬೆಳಗಾಯ್ತಿತ್ತು.
ಉರ್ಕೋಳಿಯಲ್ಲ ಸಿಂಹ ಕೋಳಿ । ನಿನ್ನಪ್ಪ
ತಾ ಕೋಳಿಯಾಗಿ ಸರಗಯ್ದು ।
ಒಂದು ದಿನ ಒಡ್ನೆ ಇರುವೆನೆಂದರೆ
ಇರ್ಗುಡ ನನ್ನ ಹಗೆಯವ । ಮಂದೂರಿ
ದಂಡೀಗಾರರಸಿ ಕಳುಗೀಸು ।
ದಂಡೀಗ್ಹೋಗ್ವಕೆ ಬಂದದ್ದು ಮತ್ತೇನು
ದಂಡನರು[೨೪] ಕೊಡ್ವ ಹಗೆಯವ್ಗೆ
ದಂಡ ಕೊಟ್ಟರೆ ಸಿರಿಯರಸು ನೆಗಿಯಾಡ್ವ
ಬಂದಟ್ಟು ಬರಲಿ ನಿಜಕರ್ಣ । ಮಂದೂರಿ
ದಂಡೀಗಾರರಸಿ ಕಳುಗೀಸು ।
ಹನ್ನೆಯ್ದು ವರುಸೆ ಎಣ್ಣೀಯುಂಡವ ಕೋಟೆ

೨೪. ದಂಡವನ್ನಾದರೂ

ರಕ್ಕಸಕೋಟೆ ರಣಗೋಟೆ । ನಲ್ಲರೆ
ದಂಡನರು ಕೊಡ್ವ ಹಗೆಯವ್ಗೆ
ದಂಡ ಕೊಟ್ಟರೆ ಹಗೆಯವ ನಗ್ಗೇಯಾಡೂವ
ಬಂದುಟ್ಟು ಬರಲಿ ನಿಜಕರ್ಣ । ಮಂದೂರಿ
ದಂಡೀಗಾರರಸಿ ಕಳುಗೀಸು ।

ಏನು ಹೇಳಿದ್ರು ಕೇಳರು ಅಂದೇಳಿ
ಏನಾಳು ಒಳುಗೆ ನೆಡುದಾಳೆ । ಮಂದೂರಿ
ತಾನುಟ್ಟ ಪಟ್ಟೀ ನೆಗದಾಳೆ । ಮಂದೂರಿ
ಮಾಳೂಗಿಲಿಂದ್ಹೆರುಗೆ ಬರುವಾಳು । ಮಂದೂರಿ
ಅಗಮಂಜುನೊಡನೋಗಿ ನಿಲ್ವಾಳು । ಮಂದೂರಿ
ಅಗಮಂಜುಗೆ ಪಟ್ಟೀ ಕೊಡುವಾಳು । ಅಗಮಂಜು
ಎಯ್ದು ಕಯ್ಯೋಡ್ಡಿ ತಡದಾನೆ ।

ಹೆಂಗಸರುಡು ಪಟ್ಟಿ ದಂಡೀಲಿಡಾಡ್ವದು
ದಂಡೀನಲ್ಲೊಬ್ಬ ಸಿರಿಯರಸು । ಕೇಳಿದ್ರೆ
ತೋಳು ತೊಡಿ ಹೊಯ್ದು ನೆಗಿಯಾಡ್ವ । ಎಂದೇಳಿ
ಹೀತ್ರಕೆ[೨೫] ಪಟ್ಟೀ ಒಗದಾನೆ । ಏನಂದಿ
ಮಂದೂರಿ ಅತ್ತೂಗ್‌ದೀರುಟ್ಟಿ ಹರಿಯಾಲಿ । ಅಂದ್ಹೇಳಿ
ಮಾಳುಗ್ಗಿಂದೆರುಗೇ ಬರುವಾನೆ । ಮಂದೂರಿ

ಮುತ್ತೀನ ಕಣ್ಣೀರ ಸೆಡದಾಳೆ ।
ಮುತ್ತೀನ ಕಣ್ಣೀರ ಸೆಡ್ವದ್ನು ಅಗಮಂಜು
ಬೀಸಿ ಬೆನ್ನಟ್ಟಿ ನೆಡದಾನೇ ಅಗಮಂಜು
ಬೋರಿನೆ ಆನಿ ನೆಗದತ್ತಿ ।
ಆನೆ ಕುದ್ರೀಯೋ ಮಂದೀ ಮಾರ ಬಲವೋ
ದಂಡೀನ ಕಾಳಿ ಕರ್ಕಾಳಿ । ಸಯ್ವಾಗಿ

ದಂಡೀನ ಕಲಿಗಲು ನೆಡದಾರೇ । ಅಗಮಂಜು
ರನ್ನದ ಕೊಟಿಗಾಗೇ ನಡೆದಾನೆ । ಅಗಮಂಜು
ಚಿನ್ನದ ಕೊಟೀಗಾಗೇ ನಡೆದಾನೆ । ಅಗಮಂಜು
ಕೆಂಡದ ಕೊಟಿಗಾಗೇ ನಡೆದಾನೆ । ಅಗಮಂಜು
ಕೆಂಡದ ಕೊಟಿಯಲ್ಲೆ ನಿಲೂವಾನೇ ।
ಕೆಂಡದ ಕೊಟಿಯಲ್ಲೆ ನಿಲುವದ್ನು ನಾರ್ಣ್ದೆವ

೨೫. ಹಿಂದಕ್ಕೆ

ಗಿಳಿಯಾಗೇ ಮಿಳಿಯಾ ಸಿಗದಾನೇ । ಅಗಮಂಜು
ಆಗೊಂದು ಮಾತಾ ನುಡಿದಾನೆ ।

ಅಕ್ಕ ತಂಗ್ದೀರ ಮಕ್ಕಳ್ರ ಲಕ್ಷ್ಮೀಯ ಕೊಮರ್‍ರ
ಮಿಂಚಿನ ಕಾಳಗಕ್ಕೆ ನಿಲಬೇಕು । ಅಂದೇಳಿ
ತನ್ನ ಆಯುದವ ತಡದಾನೆ । ಅಗಮಂಜು
ಒಂದು ಸುತ್ತನ ಮಂದೀ ಸವರಾನೆ ।
ಒಂದು ಸುತ್ತನ ಮಂದಿ ಸವರುದ್ನು ಅಗಮಂಜುಗೆ
ಕಯ್ಯಾಗನ ಕತ್ತೀ ತಡದದೆ । ಅಗಮಂಜು
ನಿಂಬೀ ಹುಳಿಯಲ್ಲೇ ಬಿಡಸಾನೆ ।
ಆನೀ ಕುದ್ರೀಯೋ ಮಂದೀ ಮಾರಾಬಲವೋ

ಅಕ್ಕ ತಂಗ್ದೀರ್ ಮಕ್ಕಳ್ರೆ ಲಕ್ಷ್ಮೀಯ ಕೋಮರರ‍್ರ
ಈಗಿನ ಕಾಳಗಕ್ಕೆ ನಿಲಬೇಕು । ಅಂದೇಳಿ
ಎಯ್ಡು ಸುತ್ತನ ಮಂದಿ ಸವರಾನೇ । ಅಗಮಂಜೂಗೆ
ಕಯ್ಯಗನ ಕತ್ತೀ ತಡದದೆ ।
ಕಯ್ಯಗನ್ ಕತ್ತಿ ತಡವದ್ನು ಅಗಮಂಜು
ಕಂಚೀ ಹುಳಿಯಲ್ಲೇ ಬಿಡಿಸಾನೆ ।
ಆನೀ ಕುದ್ರೀಯೋ ಮಂದೀ ಮಾರಾಬಲವೋ

ದಂಡೀನ ಕಾಳೀ ಕರ್ಕಾಳಿ । ಸಯ್ವಾಗೇ
ದಂಡೀಗ್ ಕಲಿಯಾಗಿ ನಿಲಬೇಕು । ಅಗಮಂಜು
ಮೂರು ಸುತ್ತನ ಮಂದಿ ಸವರಾನೇ ।
ನಾರ್ಣದೇವ ಕೆದೂಗಿ ಬನವ ಇಳಿದು
ಕೆದೂಗೊಂದೋಲಿ ಒಗದಾನೆ । ನಾರ್ಣದೇವ
ಸೆಳ್ಳುಗುರಲ್ ವಾಲೀ ಬರದಾನೆ । ನಾರ್ಣದೇವ
ತನ್ನ ಗಿಳಿಗೋಳ ದೆನೀದೂರಿ ।
ತನ್ನ ಗಿಳಿಗೋಳ ದೆನಿದೂರುದ್ನು ಗಿಳಿಗೋಳು

ಓಯ್ಗುಂಡೇ ಒಡನೇ ಬರೂವಾವೇ ।
ಹಾಳಾವಾದು[೨೬] ಪಟ್ಣ ದೂಳವಾದು ಪಟ್ಣ
ನಾರ್ಣದೇವ್ನ ಪಟ್ಣೆಲ್ಲ ಹಾಳಾಗೋಯ್ತು । ಕರ್ಣನ ಕಯ್ಲಿ
ಕಡಚಕ್ರ ಕೋವಿ ಉಗರಲ್ಲಿ । ಅಡಗಸ್ಕಂಡೆ
ಕರ್ಮುಗುಲೊಳ್ಗೇ ಬರ್‌ಬೇಕು । ಕರ್ಣನ ಕಯ್ಲೆ

೨೬. ಹಾಳಾಯಿತು

ಕೊಡೀಗೇ ಮರಸೇರೆ ನಿಲಬೇಕು । ಕರ್ಣನ ಕಯ್ಲೆ
ಒಂದು ಬಾಣಾದಲ್ಲೇ ಹೊಡಿಬೇಕು । ಅಂದೇಳಿ
ಕೊಟ್ಟಾನೆ ಕಯ್ಯಾ ಬರದೋಲೆ ।
ಕೊಟ್ಟ ವಾಲೀಯ ರಟ್ಟೀಲಡಗಸಕಂಡೇ

ಹಾರದಂಬರಕೇ ಸೆರಿಯಾಗಿ । ಗಿಳಿಗೋಳು
ನಾರ್ಣದೆವ್ನ ಪುರ್ವಾ ಗಳದಾರೇ । ಗಿಳಿಗೋಳು
ಕರ್ಣನ ಪುರಕೇ ಅರಗಾರೆ । ಗಿಳಿಗೋಳು
ಹೋಗಿ ನೋಡಾರೆ ಒಳಗೊಮ್ಮೆ ।
ಒಂದ್ಹೊಗ ಕೊಯ್ದಿ ಒಂಬತ್ ಜಪಮಾಡು ಕರ್ಣನೆ
ಕೇಳ ಬಾರೊಂದು ಹೊಸ ಸುದ್ದಿ ।
ಅಟ್ಟಂಬು ಮಾತನೇ ಕೇಳಾನೇ ಕರ್ಣನು
ಮಾಳಗ್ಗಿಂದ್ಹೆರಗೇ ಬರುವಾನೇ । ಕರ್ಣನು

ಗಿಳಿಗೋಳೊಡನೋಗಿ ನಿಲುವಾನು ।
ಯಾವೂರ ದಂಡೋ ಯಾವೂರ ದಾವುರಿಯೋ
ನಾರ್ಣದೆವ್ನ ಪೆಟೆ ಪಟ್ಣೆಲ್ಲ ಬರೂವಾದೂ ।
ಕರ್ಣನ ಕಯ್ಲಿ ಕರ್ದೊಂದುಟ್ ಕಂಡಿ ಕರ್ದೊಂದ್ ತಟ್ಕಂಡಿ
ಕಡ ಚಕ್ರ ಕೋವಿ ಉಗುರಲ್ಲಿ । ಅಡಗ್ಕಂಡೇ
ಕರಿಯಾದರಗಾಗಿ ಬರಬೇಕು । ಕರ್ಣಕಯ್ಲಿ
ಕೊಟೀಗ್ ಮರಸಾರಿ ನಿಲಬೇಕು । ಕರ್ಣನಕಯ್ಲಿ
ಒಂದು ಬಾಣದ್ಲೇ ಹೊಡೀಬೇಕು । ಅಂದೇಳಿ

ಕೊಟ್ಟವೇ ಕಯ್ಲಿ ಬರದೋಲೆ ।
ಕೊಟ್ಟ ವಾಲೀಯ ದುಟ್ಟೀಸಿ ನೋಡಾನೇ
ಪನ್ನೀ ಮರಿಯಲೇ ಮುಗುಳ್ನಗೆ । ಆಡೀತಾ
ಮಾಳೂಗಿ ಒಳಗೇ ನೆಡದಾನೇ
ಕರ್ದೊಂಡುಟ್ಟಾನೇ ಕರ್ದೊಂದ ತೊಟ್ಟಾನೇ

ಕಡಚಕ್ರ ಕೋವಿ ಉಗರಲ್ಲಿ । ಅಡಗಸ್ ಕಂಡೇ
ಕೆಂಡದ ಕೊಟೀಗೇ ಹೊರಟಾನೆ । ಕರ್ಣನು
ಕೊಟೀಗ್ ಮರಸಾರೇ ನಿಲುವಾನೇ । ಕರ್ಣನು
ಒಂದು ಬಾಣದ್ಲೇ ಹೊಡದಾನೆ । ಅಗಮಂಜು
ಮೇಟಿಕತ್ತರಿಸಿ ಹುಡಿಪುಡಿ । ಅಗಮಂಜು
ಗಡಗಡನಲ್ಲಿ ಹೆದರಾನೇ ।

ಅಯ್ಯ ದೊಡ್ಡಪ್ಪ ನೀನಂಬುದ್ ನಾನರಿಯೆ
ಮೊಸಾದಲ್ ನನ್ನಾ ಕೊಲ ಬಂದಿಯಾ ।

ಆಳೀಗೇ ಆಳು ಸೆರಿಯಾಗೇ ಬಂದೀರೆ
ನೋಡ್ತಿದ್ದೆ ದೊಡ್ಡಪ್ನ ಬಗಿಯಾವಾ । ದೊಡ್ಡಪ್ಪ
ಮೊಸದಲ್ ನನ್ನ ಕೊಲ ಬಂದ್ಯ
ಅಯ್ಯನನ್ ಮಗನೆ ನೀನಂಬುದ್ ನಾನರಿಯೆ
ಕಳ್ಳ ನಾರ್ಣದೆವ ಸುಳ್ಳೊಂದ । ಬರ್ದೀದಾ
ಮೊಸದಲ್ ನಾನು ಹೊಡೆದೀದೆ । ಮಗನೆ ಕೇಳು
ಆರ್‌ಗೆಯ್ದ್ರೆ[೨೭] ನೀನು ಬದ್ಕೂವೆ ।
ಎಳ್ಳೂ ಕಾಳೀನಟ್ಟು ಮುಳ್ಳು ಮೊನೆಯಟ್ಟು

ಕಲಿಯಾದ್ರೆ ನಾನು ಬದಕ್ಲಾರೆ । ದೊಡ್ಡಪ್ಪ
ಮೊಸದಲ್ ನನ್ನ ಕೊಲಬಂದ್ಯಾ ।
ಸರಿಯಾ ಸೆರಿಯೋರು ಸೆರ್‌ಪಗಡೀ ಆಡ್ವಂಗೆ
ತೋಳ ಮೆನೆಂತಾ ಕಲಿಹುಣ್ಣು । ಕೇಳಿದ್ರೆ
ಸತ್ತ ಬಾಳುಮಿಯೇ[೨೮] ತನಗಕ್ಕು ।
ಅಗಮಂಜು ಬಿದ್ದಲ್ಲಿ ಹನ್ನೆಯ್ಡು ಸುತ್ತನ ಕೊಟೆ
ಹನ್ನೆಯ್ಡು ಸುತ್ತೀನಾ ಅರಮನೆ ಆಗಲಂದೇ
ದೊಡ್ಡಪ್ಪ ಸಾವಿರವ ಹರಸಾನೆ ।

ಅಕ್‌ತಂಗೀ ಮಕ್ಕಳ್ಗೇ ಲಕ್ಷ್ಮೀ ಕೊಮರರ್ಗೆ
ಅವರೆಲ್ಲರ್ಗಿಲ್ಲಿ ನೆರಳಿಲ್ಲಿ ।
ಸೀಗ್ರೋರ ಬಂಟ್ರಲ್ಲಿ ಅಯ್ವರ್ಗೆ ನೆರಳಿಲ್ಲ
ದೊಡ್ಡಪ್ಪ ಸಾವಿರವಾ ಹರಸಾನೆ.
ದೊಡ್ಡಪ್ಪ ಸಾವರವ ಹರಸುದ್ನು ಅಗಮಂಜು
ಬಿದ್ದಲ್ ಒಂದೊಲಿ ಬರ್‍ವಾನೆ । ಅಗಮಂಜು

ತನ್ನ ಗಿಳೀಗಳ ಕರೆದಾನೆ । ಗಿಳೀಗೋಳು
ಓಯ್ಗುಂಡೇ ಒಡನೇ ಬರುವಾದು ।
ಹೋಗೇಳಿ ಅಜ್ಜಮ್ಗೆ ಹೋಗೇಳಿ ತಾಯಮ್ಗೆ
ಹೋಗೇಳೀ ಅಯ್ವರು ಮಡದೀರ್ಗೆ । ನಿಮ್ಮಾಲಾ
ಗಂಡಾ ಕಾಲಗ್ಲೇ ಮಡದಾನೆ । ಅಂದೇಳೆ
ಕೊಟ್ಟಾನೇ ಕಯ್ಲೇ ಬರದೊಲಿ ।

---

೨೭. ಏನುಮಾಡಿದರೆ ೨೮. ಸತ್ತಬುದಕು

ಕೊಟ್ಟವಾಲೀಯ ರಟ್ಟೀಯಲ್ಲಡಗಿಸಿಕಂಡೇ
ಹಾರಿದರಂಬರಕೇ ಸೆರಿಯಾಗೇ । ಗಿಳೀಗೋಳು

ಮಾಳುಗಿ ಒಳುಗೇ ನೆಡದಾವೇ ।
ಮಾಳೂಗಿ ಒಳಗೇ ಹಾಲ್ಕಾಸು ಉತ್ತೂರಿ
ಕೇಳಿ ಬಾರೊಂದು ಹೊಸಸುದ್ದಿ ।
ಅಟ್ಟಂಬು ಮಾತಾ ಕೇಳೀತೇ ಉತ್ತೂರಿ
ಮಾಳುಗ್ಗಿಂದೆರುಗೆ ಬರುವಾಳೇ । ಉತ್ತೂರಿ
ಗಿಳೆಗೋಳೊಡನೋಗಿ ನಿಲೂವಾಳು ।
ಗಿಳಿಗೋಳೊಡನೋಗಿ ನಿಲುವದ್ನು ಗಿಳಿಗೋಲು
ಕೊಟ್ಟಾರೆ ಕಯ್ಯ ಬರದೊಲಿ । ಇಗಳೀಗೋಳು
ಹಾರಿದವೇ ಅಂಬರಕೆ ಸೆರಿಯಾಗಿ ।
ಕೊಟ್ಟ ವಾಲೀಯ ದುಟ್ಟೀಸಿ ನೋಡಾಳೇ
ಮಾಳೂ ಒಳುಗೆ ನೆಡದಾಳೇ । ಉತ್ತೂರಿ

ಹೂಂಗಿನ ಚಬ್ಬಿ ತಡದಾಳೆ । ಉತ್ತೂರಿ
ಮಾಳೂಗಿ ಲಿಂದೆರುಗೇ ನೆಡದಾಳೆ । ಉತ್ತೂರಿ
ಹೂಂಗಿನಕ್ಕಲಕೇ ನೆಡದಾಳೆ । ಉತ್ತೂರಿ
ಹೂಂಗಿನಕ್ಕಲ ಒಳಗೇ ನೆಡದಾಳೆ । ಉತ್ತೂರಿ
ಮೊಲ್ಲೆ ಮಲ್ಲುಗಿಯ ಕೊಯ್ದಾಳೆ । ಉತ್ತೂರಿ
ಸುರಗೇ ಸಾವಂತಗಿಯಾ ಕೊಯ್ದಾಳೆ ಉತ್ತೂರಿ

ಹೂಂಗಂಬ ಹೂಂಗೆಲ್ಲ ಕೊಯ್ದಾಳೆ ।
ಹೂಂಗಂಬು ಹೊಂಗೆಲ್ಲ ಕೊಯ್ದಿ ದಂಡೀಕಟ್ಟಿ
ಹೂಂಗ್ನ ಚಬ್ಬೀಯಲ್ಲೇ ಮಡಗಾಳೆ । ಉತ್ತೂರಿ
ಹೂಂಗ್ನ ಹಕ್ಲೆರಗೇ ಬರುವಾಳೇ ಉತ್ತೂರಿ
ಕೆದೂಗಿ ಬನಕೇ ಬರುವಾಳೇ । ಉತ್ತೂರಿ

ಕೆದೂಗಿ ಹೂಂಗ ಒಗದಾಳೇ । ಉತ್ತೂರಿ
ತನ್ನಾಲರಮನಿಗೇ ಬರುವಾಳೆ । ಉತ್ತೂರಿ
ಮಾಳೂಗಿ ಒಳಗೆ ನೆಡದಾಳೇ । ಉತ್ತೂರಿ
ಹೂಂಗನ ಚಬ್ಬಿ ಮಡಗಾಳೆ । ಉತ್ತೂರಿ
ಸಿಕ್ಕದ ಕಣ್ಣ ಸೆಡೋಲಿಸಿ ।
ತಂಪೀಗೆಳ್ಳೆಣ್ಣೆ ನಂಪೀಗ್ ಹಳ್ಳೆಣ್ಣೆ
ಎಳ್ಳು ಕಾಳೆಣ್ಣೆ ಹನಿಯೆಣ್ಣೆ । ಉತ್ತೂರಿ

ನೆತ್ತೀ ತುಂಬೆಣ್ಣೆ ಎರದಾಳೆ । ಉತ್ತೂರಿ
ರನ್ನದ ಬಾಚಣಗಿ ತಡದಾಳೆ । ಉತ್ತೂರಿ

ತೂಗು ಮಂಚದಲ್ಲೇ ಕುಳತಾಳೆ ।
ಕೆನ್ನೀಯ ನಿಗ್ರ ಎಡಕೊತ್ತೆ ಬಲಕೊತ್ತೆ
ಬಲ್ಲಾಳನೆಂಬ ಬಗತಾಲೆ । ಬಾಮಕೆ
ಹಿಕ್ಕೀ ಕಟ್ಟಳಿಯೇ ಸೆರಮುಡಿ । ಬಾಮಕೆ
ಎಳಿಯ ಸಿಂಗರವ ಮೊಡದಾಳೆ ।
ಮೊಲ್ಲೆ ಮಲ್ಲೂಗೆ ಸುರಗೆ ಸಾವಂತೂಗೆ
ಹೂಗಂಬು ಹೂಗೆಲ್ಲ ಮುಡದಾಳೆ । ಉತ್ತೂರಿ
ಕೆನ್ನೆಗೆ ಕೆದುಗಿಯ ಮುಡದಾಳೆ । ಉತ್ತೂರಿ

ಕಣ್ಣೀಗೆ ಕಪ್ಪ ಇಡುವಾಳೆ । ಉತ್ತೂರಿ
ನೊಸಲೀಗೆ ಸಿರಿಗಂದ ಇಡುವಾಳೆ । ಉತ್ತೂರಿ
ಚಿನ್ನೆಲ್ಲ ಕೆಮಿದುಂಬಿ ಇಡುವಾಳೆ । ಉತ್ತೂರಿ
ತನ್ನ ಹೂಬಣ್ಣ ನೆರ್ದುಟ್ಟಿ । ಉತ್ತೂರಿ
ಮಾಳೂಗಿ ಒಳುಗೆ ನೆಡದಾಳೆ । ಉತ್ತೂರಿ
ತೊಟ್ಲನ ಕಂದನ ನೆಗ್ದಾಳೆ ।
ಬಿದ್ದ ಮೊಲಿಮೆನೆ ಬೆಳ್ಳಿಯ ಸಮದರ[೨೯]

ಮುದ್ದಯ್ಯ ಬಾರೋ ಮೊಲಿಉಣ್ಣೊ । ಅಂದುತ್ತೂರಿ
ಅತ್ತೀ ಕಯ್ಲದ್ರ ಕೊಡುವಾಳು ।
ಕಂಬ್ಳೀ ಹೊದಿಸ್ಬೆಡಿ ಅಂಬ್ಲಿ ಉಣಸ್ಬೆಡಿ
ರಂಡೀ ಕೂಸೆಂದಿ ಕರಿಬೆಡಿ । ಅತ್ತೀಯೋರೆ
ಮುದ್ದೀಗೆ ಹೆರಿಯ ಮಗ್ನನ್ನಿ । ಅಂದೇಳಿ
ಅತ್ತೀ ಕಯ್ಲಿ ಮಗನಕೊಡುವಾಳು । ಉತ್ತೂರಿ

ಮಾಳಗ್ಗಿಂದೆರಗೆ ಬರುವಾಳೂ । ಉತ್ತೂರಿ
ರಾಜಂಗ್ಳ ಮೆಟ್ಟ ಇಳ್ದಾಳೆ । ಉತ್ತೂರಿ
ರಾಜ ಬೀದಿಗಾಗಿ ನೆಡದಾಳೆ । ಉತ್ತೂರಿ
ರನ್ನದ ಕೊಟೆಗಾಗಿ ನೆಡದಾಳೆ । ಉತ್ತೂರಿ
ಚಿನ್ನದ ಕೊಟೆಗಾಗಿ ನೆಡದಾಳೆ । ಉತ್ತೂರಿ
ಕೆಂಡದ ಕೊಟೆಗಾಗಿ ನೆಡದಾಳೆ । ಉತ್ತೂರಿ

೨೯. ಸಮುದ್ರ

ಅಗಮಂಜು ಒಡನೋಗಿ ನಿಂತಾಳೆ । ನಾರ್ಣದೆವ
ಗಿಳಿಯಾಗೇ ಮಿಳಿಯಾ ಎಳದಾನೆ । ನಾರ್ಣದೆವ
ತನ್ನಾಲರಮನ್ಗೆ ನೆಡದಾನೆ । ನಾರ್ಣದೆವ
ಮಾಳೂಗಿ ಒಳುಗೆ ನೆಡದಾನೆ । ನಾರ್ಣದೆವ
ತೂಗುಮಂಚದಲ್ಲೆ ಕುಳತಾನೆ । ಮಂದೂರಿ
ಒಡ್ಬಂದ್ ತೊಡಿಮೆನೆ ಕುಳ್ತಾಳೆ । ನಾರ್ಣದೆವ
ನೆತ್ತೀಯ ಕಿಟ್ಟಿ ಎಳಗಾನೆ ।
ಪಟ್ಟೀಯ ಉಡಕೂಸೆ ದಟ್ಟೀಯ ಬಿಡಕೂಸೆ
ಕಾಜೀನ ಬಳಿನೂರ ಜರಿಕೂಸೆ[೩೦] । ನಿನ್ನಾಲಾ
ಗಂಡ ಕಾಳಗ್ಲೆ ಮಡ್ದಾನೆ ।
ಪಟ್ಟೀಯ ಉಡುವಾಕೆ ದಟ್ಟೀಯ ಬಿಚ್ಚುವಾಕೆ
ಏಸು ಸಿರಿಗಂದ ಅಳುವಾಕೆ । ಅಪ್ಪಾಕೇಳೋ
ಹೇಳ್ಕೊಡೊ ಅಯ್ವರ್ರ ಮಡದಿರ್ಗೆ ।
ಗೊಕನ್ಕೆ ಹೋಗೆಕೂಸೆ ಗುಡಿಸಲ್ ಕಟ್ಟೇಕೂಸೆ
ಬೋಳಾ ಮೆನ್ ಅರವಿ ಇಡಕೂಸೆ । ನಮ್ಮನಿಯ
ಕಾಳೀಗೆ ಹುಲ್ಲ ಹೊರಕೂಸೆ ನಿನ್ನಾಲ
ಗಂಡ ಕಾಳಗ್ಲೇ ಮಡದಾನೆ ।
ಗೊಕನೋಗೂಕೆ ಗುಡ್ಸಲ್ ಕಟ್ಟೂವಾಕೆ
ಬೋಳಮೆನರ್ವಿ ಇಡ್ವಾಕೆ । ಅಪ್ಪಾಕೇಳೊ
ಹೇಳ್ಕೊಡಯ್ವರ್ರ ಮಡದೀರ್ಗೆ । ಅಂದ್ಮಂದೂರಿ
ತೊಡಿಗಿಂದು ಕೆಳಗೆ ಇಳದಾಳೆ । ಮಂದೂರಿ
ಬಿದ್ದ ಬಿದ್ದಲ್ಲೇ ಮರ್ಗಾಳೆ । ಮಂದುರಿಯ
ಕಾಲುಂಗಲ್ ಸೀರಿದವೆ ಒಳತಂಕೆ । ಮಂದುರಿಯ
ಕುಂಕುಮ ಸೀರಿದವೆ ಹೆರತಂಕೆ । ಮಂದುರಿಯ
ಅತ್ತಗದೀರ್ ಹೆರಗೆ ಬರುವಾರು ।
ಆಗೇಕತ್ತೀಗೆ ಕಲ್ಲಿನಂಗಯ್ದೀದೆ
ಈಗೇಕತ್ತೀಗೆ ಮರ್ಗೀಗೆ । ಹಾದೀಲೋಗು
ದೊಂಬಗಿನ್ನೇನು ಮರ್ಗೂವೆ । ಅಂದೇಳಿ
ಅತ್ತಗದೀರ್ ಒಳಗೆ ಬರುವಾರೆ ।
ಅತ್ತಗದೀರ್ ಒಳಗೆ ಬರುವದು ಮುಂದುರಿಯ
ತಾಯವ್ವಿ ಹೆರಗೆ ಬರುವಾಳು ।
ಎಲ್ಲೋರಳಿದೀರು ದಂಡ್ಕಾದಿ ಮನೆಗೆಬಂದ್ರು

೩೦. ಒಡೆಮಗಳೆ

ನಮ್ಮಳಿಯಾನೆತ್ತ ನೆಡದಾನೆ । ಅಂದ್ ಮಂದುರಿ ತಾಯಿ
ಮುತ್ತನ ಕಣ್ಣೀರ ಸೆಡದಾಳೆ ।
ಮುತ್ತನ ಕಣ್ಣೀರ ಸೆಡವದ್ನು ನಾರ್ಣದೆವ್ನ
ಕಿರಿಹೆಂಡರೆರ್ಗೆ ಬರುವಾರು
ಎಲ್ಲಾರಿದ್ದಮಲ್ಲಿ ಈ ನಾರಿಮುದ್ದಂದಿ
ಈ ನಾರಿನಮ್ಮ ಇರ್ಗೊಡ । ನಲ್ಲಾರೆ
ಸುರಲೋಕಕ್ಕಿವಳಾ ಇಟ್ಟನ್ನಿ ।

ಅಟ್ಟಂಬು ಮಾತಾ ಹೇಳೀರು ಅವ್ನಹಿಂಡ್ರು
ಮಾಳೂಗಿ ಒಳುಗೆ ನೆಡದಾರೆ ।
ಅಟ್ಟಂಬು ಮಾತನೇ ಕೇಳಾನೇ । ನಾರ್ಣದೆವ
ಮಂದೂರಿ ಎತ್ತೀನಿಲ್ಸಾನೆ । ನಾರ್ಣದೆವ
ಮಂದೂರಿ ಎತ್ತೀ ಹೊಗಲೀಗೆ । ಏರಿಸಿಕಂಡಿ
ಮಾಳಗ್ಗಿಂದೆರಗೆ ಬರುವಾನೆ । ನಾರ್ಣದೆವ
ರಾಜಂಗ್ಳ ಮೆಟ್ಟ ಇಳದಾನೆ । ನಾರ್ಣದೆವ

ತೆಂಗಿನ ಬನವ ಇಳದಾನೆ । ನಾರ್ಣದೆವ
ತೆಂಗೀನೊಂದೊಲೀ ಒಗದಾನೆ । ನಾರ್ಣದೆವ
ಮಂದೂರಿ ಕೆಮಿಗೇ ಇಡುವಾನೆ । ನಾರ್ಣದೆವ
ಚಂದಣದ ಬನವಾ ಇಳದಾನೆ । ನಾರ್ಣದೆವ
ಚಂದಣದ ಪಟ್ಟೀ ಒಗದಾನೆ । ನಾರ್ಣದೆವ
ಮಂದೂರಿ ಮುಕಕೆ ಇಡುವಾನೆ । ನಾರ್ಣದೆವ
ನಾರಿಯೋರ ಕೇರಿಗಾಗಿ ನೆಡದಾನೆ । ನಾರ್ಣದೆವ

ನಾರಿಯೋರೆಲ್ಲ ಎದ್ರಾಗಿ
ನಾರಿಯೋರೆಲ್ಲ ಎದ್ರಾಗಿ ಏನಂಬಾರು
ದೆವರಿಂಡರಂಬೋರು ದೊಡ್ಡೋರ ಮಕ್ಕಳಂಬೋರು
ವಾಲಿಲ್ಲ ವಾಲೀ ಕಳ್ಳಿಲ್ಲ । ಅಂದೇಳಿ
ನಾರ್ಣದೆವ್ನ ಅವರು ಜರದಾರೆ ।

ಅಟ್ಟಂಬು ಮಾತನ್ನೇ ಕೇಳಾನೇ ನಾರ್ಣದೆವ
ಚಿನ್ನದ ಕೊಟೀಗಾಗೇ ನೆಡದಾನೆ । ನಾರ್ಣದೆವ
ರನ್ನದ ಕೊಟೀಗಾಗೇ ನೆಡದಾನೆ । ನಾರ್ಣದೆವ
ಸೀಗ್ರೋರೆಡೆಗಾಗೇ ನೆಡದಾನೆ ।
ವಾಳಿಲ್ಲದತ್ತೀಗೆ ಬರ್ತದೆ ಸೀಗ್ರರೇ
ಕೂಡ್ಕಂಬ್ರ ನಿಮ್ಮ ಒಡ್ನಲ್ಲಿ ।

ಅಟ್ಟಂಬು ಮಾತಾ ಹೇಳೀ ಕೇಳೂರಾಗೇ ನಾರ್ಣದೇವ
ಕೆಂಡದ ಕೊಟೀಗಾಗೇ ನೆಡದಾನೆ । ನಾರ್ಣದೇವ
ಮಂದೂರಿ ಎತ್ತಿ ಇಳುಕೀಸಿ
ಮಂದೂರಿ ಎತ್ತಿ ಇಳುಗಿಸುದ್ನು ಮಂದೂರಿ
ಅಗಮಂಜು ಒಡೋಗಿ ನಿಲುವಾಳೂ । ಅಗಮಂಜು
ಆಗೊಂದು ಮಾತ ನುಡಿದಾನೆ ।

ಒಂದು ವಾಲಿಯಿಟ್ಟು ಬಂದೀಯೇನೆ ಮಂದೂರಿ
ಇನ್ನೊಂದೊಲಿಯಾರ್ಗೆ ಕಳ್ದೀಯೇ । ನಾರ್ಣದೇವ
ನಿನ್ನಪ್ಪ ಗೊಲೀಯ ಕಳ್ದೀಯೆ ।
ಲಳಿಯ ಮಾವಗೆ ಹೇಮಸ ಮಾತಾಡುದ್ನು
ಮಂದೂರಿ ಎತ್ತೀ ಹೊಗಲೀಗೆ । ಇಟ್ಟಕಂಡಿ
ರಾಜ ಬೀದಿಗಾಗಿ ಬರುವಾನೆ । ನಾರ್ಣದೇವ
ತನ್ನಲರಮನೆಗೆ ಬರುವಾನೆ । ನಾರ್ಣದೇವ

ಮಂದೂರಿ ಎತ್ತಿ ಇಳುಗೀಸಿ
ಮಂದೂರಿ ಎತ್ತಿ ಇಳುಸುದ್ನು । ಮಂದೂರಿ
ತಾಯವ್ವಿ ಕರೆದು ನುಡಿಮಾತು । ಏನಂದಿ
ದಂಡೀನೂಟಕೆ ಅನುಮಾಡು ।
ದಂಡೀನೂಟಕೆ ಅನುಮಾಡು ಅಂಬುದ್ನು ತಾಯವ್ವಿ
ಮಾಳೂಗಿ ಒಳಗೆ ನೆಡದಾಳೆ ।

ಕಾಯ್ ಮೆರ್ ಒಂಬತ್ ಬಗೆ ಎಲಿಮೆರ್ ಬಂಬತ್‌ಬಗೆ
ನೂರೊಂದು ಬಗೆಯ ಅಡಗೀಯ । ಕಜ್ಜಾಯ
ಅನುಮಾಡಾಳೊಂದು ಗಳಿಗೇಳಿ । ಮಂದೂರಿ
ಹೂಂಗಿನ ಚಬ್ಬಿ ತಡದಾಳೆ । ಮಂದೂರಿ
ಹೂಂಗಿನಕ್ಕಲ್ಕೇ ನೆಡದಾಳು । ಮಂದೂರಿ
ಮೊಲ್ಲೆ ಮಲ್ಲಗಿಯ ಕೊಯ್ದಾಳೆ । ಮಂದೂರಿ
ಸುರಗೆ ಸಾವಂತೂಗೆ ಕೊಯ್ದಾಳೆ । ಮಂದೂರಿ

ಹೂಂಗಂಬ್ ಹೊಂಗೆಲ್ಲ ಕೊಯ್ದಾಳೆ । ಮಂದೂರಿ
ಹೂಂಗಿನ ಚಬ್ಬೀಲಿ ಮಡಗಾಳೆ । ಮಂದೂರಿ
ಹೂಂಗ್ನಹಕ್ಕಲೆರುಗೆ ಬರುವಾಳು । ಮಂದೂರಿ
ತನ್ನಲರಮನಿಗೆ ಬರುವಾಳು । ಮಂದೂರಿ
ಹೂಂಗಿನ ಚಬ್ಬೀ ಮಡುಗಾಳೆ । ಮಂದೂರಿ
ಬಚ್ಚಲರಮನ್ಗೆ ನಡದಾಳೆ ।

ಕಂಚೀನ ತಟ್ಟೀಲಿ ಸಂಪೂಗಿ ಹೂಂಗಿನೆಣ್ಣೆ
ಹೊನ್ನ ಮಣೆಯೊಂದ ತಡದಾಳೆ । ಮಂದುರಿ ತಾಯಿ
ಬಚ್ಚಲರಮನೆಗೆ ನೆಡದಾಳೆ । ಮಂದುರಿ ತಾಯಿ
ಮಂದುರಿಗ್ ಎಣ್ಣೇ ಇಡೂವಾಳೆ ।
ಕಾಲ ತಿಕ್ಕುವರು ಹದಿನೆಂಟು ಸಾವಿರ ಮಮದಿ
ಬೆನ್ನ ತಿಕ್ಕುವರು ಹದಿನೆಂಟು ಸಾವಿರ ಮಂದಿ
ಬೆನ್ನ ತಿಕಕುವರ್ಗೆ ಅಡ್ಡಿಲ್ಲ । ಮಂದೂರಿ
ಎಣ್ಣೆಯ ಜಳಕ ಮುಗದದೆ । ಮಂದೂರಿ
ಬಚ್ಚಲ ಕಲ್ಮೇಲೆ ಕುಳತಾಳೆ ಮಂದೂರಿ ತಾಯಿ
ಚೆಂಡಿಗೆ ನೀರ ಎರದಾಳೆ ।
ಚೆಂಡ ಬಿಡಿಸಿದ್ರೆ ಚೆಲ್ಲಿದವೋ ಮಲ್ಲೂಗಿ
ಗೊವೀಲಿದ್ದೇಳು ಗಿಳೀ ಬಂದು । ಮಂದೂರಿ
ಚೆಲ್ಲಿದವೆ ಮಲ್ಲಿಗೆಯ ಕುಸುಮವ । ಮಂದೂರಿ
ಮಿಂದೊಗೆದಳೊಂದು ಗಳಿಗೆಲಿ ।
ಮಿಂದಾಳೊಗೆದಾಳೆ ಮಿಂದೇ ಮಡಿಯುಟ್ಟಾಳೆ
ಮಿಂದಿ ಚಂಡಕಿಯ ಕುಡಗಾಳೆ । ಮಂದೂರಿ
ತುಳಚಿ ಬುಡಕೋಗಿ ನಿಲ್ವಾಳು । ಮಂದೂರಿ
ತುಳಚೀ ತೀರ್ತವ ಕುಡಿದಾಳೆ । ಮಂದೂರಿ
ದೇವರ್ಗೆ ಕಯ್ಯ ಮುಗದಾಳೆ । ಮಂದೂರಿ
ಮಾಳೂಗಿ ಒಳುಗೇ ನೆಡದಾಳೆ । ಮುಂದೂರಿತಾಯಿ
ಹೊನ್ನ ಮಣಿಯೊಂದ ಮಡಗಾಳೆ । ಮಂದೂರಿ
ಮಣಿಯಾ ಮೆನೋಗಿ ಕುಳಿತಾಳೆ । ತಾಯವ್ವಿ
ಕಿರುಳು ಬಾಳೆಲಿಯ ತೊಳದಾಸಿ । ತಾಯವ್ವಿ
ಅನ್ನ ಮೆಗ್ರವ ಬಡಸಾಳೆ । ತಾಯವ್ವಿ
ಹಾಲು ಪಾಯಸವ ಬಡಸಾಳೆ । ತಾಯವ್ವಿ
ತುಪ್ಪ ಸಕ್ಕರೆಯ ಎರದಾಳೆ । ಮಂದೂರಿ
ಉಂಡೆದ್ದಳೊಂದು ಗಳಿಗೆಲ್ಲಿ
ಆಯುಳ್ಳ ಹಣ್ಣಡಕೆ ಸೋಸಿದಿ ಬೆಳಿಯೆಲೆ
ಹಾಳಿನಲಿ ಬೆಂದ ತೆನಿಸುಣ್ಣ । ತಡಕಂಡಿ
ಮಾಳುಗಿಲಿಂದೆರುಗೆ ಬರುವಾಳು । ತಾಯವ್ವಿ
ಮಗಳೀಗೊಂದೀಳಯ್ ಕೊಡುವಳು ।
ಎಲಿಯೊಂದು ತಿಂದಾಳೇ ರಜವೊಂದ ಉಗುಳಾಳೇ
ಕೂತ ಗದ್ದಿಗೆಯ ಜಡಿದೆದ್ದು ಮಂದೂರಿ

ಮಾಳೂಗಿ ಒಳುಗೆ ನೆಡುದಾಳೆ । ಮಂದೂರಿ
ಸಿಕ್ಕದ ಕಣ್ಣ ಸೆಡುಲಿಸಿ ।

ತಂಪೀಗ್ ಹಳ್ಳೆಣ್ಣೆ ಕಂಪೀಗ್ ಎಳ್ಳೆಣ್ಣೆ
ಎಳ್ಳು ಕಾಳೆಣ್ಣೆ ಹನಿಯೆಣ್ಣೆ । ಮಂದೂರಿ
ನೆತ್ತೀ ತುಂಬೆಣ್ಣೆ ಎರದಾಳೆ । ಮಂದೂರಿ
ರನ್ನದ ಬಾಚಂಗಿ ತಡದಾಳೆ ।
ಕೆನ್ನೀಯ ನಿಗರ ಎಡಕೊತ್ತಿ ಬಲಕೊತ್ತಿ
ಹಿಕ್ಕಿ ಕಟ್ಟಾಳೆ ಸೆರಮುಡಿಯ । ಬಾಮಕ್ಕೆ[೩೧]
ಎಳಿಯ ಸಿಂಗರವ ಮುಡದಾಳೆ । ಮಂದೂರಿ
ಮೊಲ್ಲೆ ಮಲ್ಲುಗೆಯ ಮುಡದಾಳೆ । ಮಂದೂರಿ

ಹೂಗಂಬ್ ಹೂಗೆಲ್ಲ ಮುಡದಾಳೆ । ಮಂದೂರಿ
ನುಸುಲೀಗೆ ಸಿರಿಗಂಧ ಇಡುವಾಳು । ಮಂದೂರಿ
ಕಣ್ಣೀಗೆ ಕಪ್ಪ ಇಡುವಾಳು । ಮಂದೂರಿ
ತನ್ನ ಚಿನ್ನೆಲ್ಲ ಕೆಮಿದುಂಬಿ । ಮಂದೂರಿ

ತನ್ನ ಹೂಬಣ್ಣ ಉಟ್ಟಾಳೆ ।
ಆನಿ ಕುದರೀಯೋ ಗಂಟೆ ಕರಗೋಳು
ತನಗಿಂತು ಮುಂದು ಸವನಾಲಿ ।
ತನಗಿಂತು ಮುಂದು ಸವ್ನಿ ಸುಂಗಾರಾಗಿ
ಬಂದೀ ಬೀದೀಲಿ ನಿಲ್ಬೇಕು । ಅಂದೇಳೀ
ತನ್ನ ಮನಸಲ್ಲೇ ನೆನಸಾಳೆ । ಮಂದೂರಿ ಅಪ್ಪ

ಹತ್ತು ಹುಯ್ದೆಂಟ ಹೊಯ್ದಾನೆ । ಮಂದೂರಿ
ರಾಜ ಮಾರ್ಗದಲ್ಲೇ ನಡದಾಳೆ ।
ಆನಿ ಕುದರೀಯೋ ಗಂಟೀ ಕರಗೋಳು
ಅವ್ರೆಲ್ಲೋರ್ನೆಲ್ಲ ಒಡಗುಂಡಿ । ಮಂದೂರಿ
ಸುರಲೋಕಕಾಗಿ ಹೊಡದಾಳೆ । ಮಂದೂರಿ
ರನ್ನದ ಕೊಟಿಗಾಗಿ ನೆಡದಾಳೆ । ಮಂದೂರಿ

ಚಿನ್ನದ ಕೊಟಿಗಾಗಿ ನೆಡದಾಳೆ । ಮಂದೂರಿ
ಕೆಂಡದ ಕೊಟಿಗಾಗಿ ನೆಡದಾಳೆ । ಮಂದೂರಿ
ಕೆಂಡದ ಕೊಟೀಲಿ ನಿಲುವಾಳು । ಮಂದೂರಿ
ಅಗಮಂಜು ನೊಡನೋಗಿ ನಿಲುವಾಳು ।

---

೩೧. ಚೆಂದಕ್ಕೆ

ಅಭಿಮನ್ಯು

ಗಂಗೀ ಗವ್ರೀರು ಬಾಯಲ್ ಗಟವಳೀರು[೧]
ಎಂಜಲ್ ಬಾಯ್ಲ್‌ದ್ಯೆವ್ರ ನೆನಯಾಬಾರ ।
ಎಂಜಲ್ ಬಾಯ್ಲ್‌ದ್ಯೆವ್ರ ನೆನಿಯಾಬಾರಂದರಜೀಣ[೨]
ಗಂಗೀಗೋಗ್ವದಕೆ ಸವನಾನೆ ।
ಗಂಗೀಗೋಗ್ವದಕೆ ಸಂಗಡ್ಯೆರಿಲ್ಲಂದೇ
ಮಂಗ್ಳೂರ ರಾಜ್ಯವ ತಿರಗಾಡಿ
ಮಂಗ್ಳೂರ ರಾಜ್ಯವ ತಿರಗಾಡರಜೀಣ್ಣು
ಬಾವ ನಾರಾಯ್ಣದ್ಯೆವ ಎದರಾಗಿ
ಬಾವ ನಾರಾಯ್ಣದ್ಯೆವ ಎದರಾಗೇನಂಬಾನೇ
ನಾಬತ್ತೆ ಬಾವ ಒಡನಲ್ಲೆ ।
ನಾಬತ್ತೆ ಬಾವ ಒಡನಲ್ಲೆ ಅಂಬದ್ನು[೩]
ಹಿಂದಕೆ ತಿರಗಿ ಬರವಾನೆ ।
ಹಿಂದಕೆ ತಿರಗಿ ಬರವಾನೇ ಅರಜೀಣ
ಬಂದೀ ಬಾಗಲ್ಲೇ[೪] ನಿಲವಾನೆ ।
ಬಂದೀ ಬಾಗಲ್ಲೇ ನಿಲವದ್ನು ಸೂಬದ್ರಿ
ತಡದಳೆ ಚೆಂಬಗಲಿ[೫] ಉದಕವಾ ।
ತಡದಳೆ ಚೆಂಬಗಲಿ ಉದಕವ ಅರಜೀಣ
ಕಾಲು ಸಿರಿಮೊಕವಾ ತೊಳದಾನೆ ।
ಕಾಲು ಸಿರಿಮೊಕವಾ ತೊಳದಾನೆ ಅರಜೀಣ
ಮಾಳೂಗಿ ಒಳಗೆ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೆ ಅರಜೀಣ
ಅಟ್ಟದ ಪೆಟ್ಟುಗಿಯ ತೆಗದಾನೆ
ಅಟ್ಟದ ಪೆಟ್ಟುಗಿಯ ತೆಗದಾನೆ ಅರಜೀಣ
ಮೆಟ್ಟೀ ಬೀಗದ ಕರದಾನೆ[೬]
ಮೆಟ್ಟೀ ಬೀಗದ ಕರದಾನೆ ಅರಜೀಣ
ಮುಚ್ಛೀಳ ತೆಗದಿ ಕಡಗಿಟ್ಟೇ[೭] ।

೧. ಗಟ್ಟಿಯುಳ್ಳವರು ೨. ಅರ್ಜುನ ೩. ಅನ್ನಲು ೪. ಬಾಗಿಲಲ್ಲಿ ೫. ತಂಬಿಗೆಯಲ್ಲಿ ೬. ತೆಗೆದನು ೭. ಕಡಗ ತೊಡಿಸಿ

ಮುಚ್ಛೇಳ ತೆಗದಿ ಕಡಗಿಟ್ಟೇ ಅರಜೀಣ
ಪಟ್ಟೆ ಜೋತುರವ ನೆರದುಟ್ಟೇ
ಪಟ್ಟೆ ಜೋತುರವ ನೆರದುಟ್ಟೇ ಅರಜೀಣ
ನಿಡವೀಗೆ ನ್ಯೆವಳ ಇಡೋವಾನೆ ।
ನಿಡವೀಗೆ ನ್ಯೆವಳ ಇಡೋವಾನೆ ಅರಜೀಣ
ಬಣ್ಣದ ನೆರಿಯಂಗಿ ಬುಜಕಿಟ್ಟಿ
ಬಣ್ಣದ ನೆರಿಯಂಗಿ ಬುಜಕಿಟ್ಟಿ ಅರಜೀಣ
ಮುತ್ತಿನ ಮುಂಡೆಸನ[೮] ತಲಸುತ್ತೇ
ಮುತ್ತಿನ ಮುಂಡೆಸನ ತಲಸುತ್ತೇ ಅರಜೀಣ
ಮೂರು ಬಗ್ಸ್[೯] ಹಣವಾ ಮೊಗದಾನೆ
ಮೂರು ಬಗ್ಸ್ ಹಣವಾ ಮೊಗದಾನೆ ಅರಜೀಣ
ಹಚ್ಚಡ ಸೆರಗೀಲೇ ಅಳವಡಚೇ[೧೦] ।
ಹಚ್ಚಡ ಸೆರಗೀಲೇ ಅಳವಡಚೇ ಅರಜೀಣ
ಪೆಟ್ಟೂಗಿ ಬಾಯಲ್ಲೇ ಮಡಗಾನೆ[೧೧] ।
ಪೆಟ್ಟೂಗಿ ಬಾಯಲ್ಲೇ ಮಡಗಾನೆ ಅರಜೀಣ
ಮೆತ್ಗಿಂದೇ[೧೨] ಕೆಳಗೇ ಇಳದಾನೆ ।
ಮೆತ್ಗಿಂದೇ ಕೆಳಗೇ ಇಳದಾನೆ ಅರಜೀಣ
ಮಾಳಗ್ಗಿಂದ್ಹೆರಗೇ ಬರೋವಾನೆ ।
ಮಾಳಗ್ಗಿಂದ್ಹೆರಗೇ ಬರೋವಾನೆ ಅರಜೀಣ
ರಾಜಂಗ್ಯಮೆಟ್ಟ ಇಳದಾನೆ ।
ರಾಜಂಗ್ಯಮೆಟ್ಟ ಇಳದಾನೆ ಅರಜೀಣ
ರಾಜ ಮಾರ್ಗದಲಿ ನೆಡದಾನೆ ।
ರಾಜ ಮಾರ್ಗದಲಿ ನೆಡದಾನೆ ಅರಜೀಣ
ದೇವಲೋಕಕೆ ನೆಡದಾನೆ ।
ದೇವಲೋಕಕೆ ನೆಡದಾನೆ ಅರಜೀಣ
ದೇವ್ ಲೋಕದಂಗಡಿಯಾ ತೆಣಿಮ್ಯನೇ[೧೩]
ದೇವ್ ಲೋಕದಂಗಡಿಯಾ ತೆಣಿಮ್ಯನ್ ಕೂತಿಗಂಡಿ[೧೪]
ದೈವಾ ಸೆಟ್ಟಿಯೆಂದಿ ದೆನೀದೋರೇ[೧೫] ।
ಒಂದಾ ಕರವೀಗೇ ಬಂದಾ ದೈವಾಸೆಟ್ಟ[೧೬]
ನಿಂದಾನೇ ಅರಜಿಣನ ಒಡನಲ್ಲೇ ।
ನಿಂದಾಣೇ ಅರಜಿಣದನ ಒಡನಲ್ಲೇ ದೈವಾ ಸೆಟ್ಟಿ

---

೮. ರುಮಾಲು ೯. ಬೊಗಸೆ ೧೦. ಅಳವಡಿಸಿ ೧೧. ಮುಚ್ಚಿದನು ೧೨. ಮಾಳಿಗೆಯಿಂದ ೧೩. ಜಗಲಿಯ ಮೇಲೆ ೧೪. ಕುಳಿತುಕೊಂಡು ೧೫. ಕರೆದು ೧೬. ದೇವಶೆಟ್ಟಿ

ಏನು ಕಾರಣದಿ ಕರದೀಯೋ ।
ಏನು ಕಾರಣದಿ ಕರದೀಯೋ ಅಂಬದ್ನು
ಆಗೊಂದು ಮಾತಾ ನುಡೀದಾನೆ ।
ಆಗೊಂದು ಮಾತಾ ಏನಂದೀ ನುಡದಾನೆ
ದ್ಯೆವಾ ಪಟ್ಟೀ ನೋಡೀ ತೆಗತಾರೋ
ದ್ಯೆವಾ ಪಟ್ಟೀ ನೋಡೀ ತೆಗತಾರೋ ಅಂಬದ್ನು[೧೭]
ಮಾಳುಗಿ ಒಳಗೆ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೆ ದ್ಯೆವಾ ಶೆಟ್ಟಿ
ಜವಳೀಯಾ ದಿಂಡಾ[೧೮] ಬಿಡಸಾನೆ
ಜವಳೀಯಾ ದಿಂಡಾ ಬಿಡಸಾನೆ ದ್ಯೆವಾ ಸೆಟ್ಟಿ
ದ್ಯೆವಾ ಪಟ್ಟಿ ನೋಡಿ ತೆಗದಾನೆ ।
ದ್ಯೆವಾ ಪಟ್ಟಿ ನೋಡಿ ತೆಗದಾನೆ ದ್ಯೆವಾ ಸೆಟ್ಟಿ
ಮಾಳಗ್ಗಿಂದ್ಹೊರಗೆ ಬರವಾನೆ ।
ಮಾಳಗ್ಗಿಂದ್ಹೊರಗೆ ಬರವಾನೆ ದ್ಯೆವಾ ಸೆಟ್ಟಿ
ಅರಜಿಣ್ನ ಬಲಗ್ಯೆಲಿ ಕೊಡವಾನೆ ।
ಅರಜಿಣ್ನ ಬಲಗ್ಯೆಲಿ ಕೊಡವದ್ನು ಅರಜೀಣ
ಎರಡೂ ಕ್ಯೆಯೊಡ್ಡೀ ತಡದಾನೆ ।
ಆಚೀಯ ಸೆರಗ ಈಚೊಮ್ಮೆ ಮಡಚಾನೆ
ಬಣ್ಣ ಸಾಕಿದರ ಬೆಲೀಹೇಳು ।
ಮೊಳಕೆ ಸಾವೀರಂದ ದಡಿಗೆ ಸಾವೀರಂದಾ
ಅದಕೇಳೂ ಸಾವಿರದಾ ಹಣವಂದ ।
ಅದಕೇಳು ಸಾವಿರದಾ ಹಣವಂದ ಅರಜೀಣ
ಅದಕಲ್ಲೆ ಹಣವಾ ಸಲಸಾನೆ ।
ಅದಕಲ್ಲೆ ಹಣವಾ ಸಲಸಾನೆ ಅರಜೀಣ
ಹಿಂದಕಾಪಟ್ಟೀ ಕೊಡವಾನೆ ।
ಹಿಂದಕಾಪಟ್ಟೀ ಏನಂದೇ ಕೊಡವಾನೇ
ಪಟ್ಟಿಯಾ ಹರಸೇ[೧೯] ಕೊಡಬೇಕೋ ।
ಅಟ್ಟೊಂದು ಮಾತಾ ಕೇಳಾನೇ ದೇವಾ ಸೆಟ್ಟಿ
ಎರಡೂ ಕ್ಯೆಯೊಡ್ಡೀ ತಡದಾನೇ ।
ಎರಡೂ ಕ್ಯೆಯೊಡ್ಡಿ ತಡದಾ ದೇವಾ ಸೆಟ್ಟಿ
ಆಗೊಂದು ಮಾತಾ ನುಡೀದಾನೆ ।
ನಾಕೊಟ್ಟ ಗಳಿಗೆಲಿ ನೀ ತಕಂಡ್ ಮೂರತದಲ್ಲಿ[೨೦]

---

೧೭. ಅಂದ ಕೂಡಲೇ ೧೮. ಕಟ್ಟು ೧೯. ಹರಸಿ ೨೦. ಮುಹೂರ್ತದಲ್ಲಿ

ಅಬಿಮನ್ಯುಗಾಯಸವೇ[೨೧] ಹಿರದಾಲಿ[೨೨] ।
ಅಬಿಮನ್ಯುಗಾಯಸವೇ ಹಿರದಾಲಿ ಅಂದೇಳೇ
ಪಟ್ಟೀಯ ಹರಸೀ ಕೊಡೋವಾನೆ ।
ಪಟ್ಟೀಯ ಹರಸೀ ಕೊಡೋವಾನೆ ಅರಜೀಣ
ಪಟ್ಟೀ ದಟ್ಯಲ್ಲೇ ಬಿಗದಾನೆ ।
ಪಟ್ಟೀ ದಟ್ಯಲ್ಲೇ ಬಿಗದಾನೆ ಅರಜೀಣ
ದ್ಯೆವ ಪಟ್ಟಿ ನೋಡಿ ನೆಗದ್ದೊತ್ತಿ[೨೩]
ದ್ಯೆವ ಪಟ್ಟಿ ನೋಡಿ ನೆಗದ್ದೊತ್ತಿ ಅರಜೀಣ
ಅಂಗೂಡಿ ತೆಣಿಯಾ ಇಳೋದಾನೆ ।
ಅಂಗೂಡಿ ತೆಣಿಯಾ ಇಳೋದಾನೆ ಅರಜೀಣ
ನಾಗಾಲೋಕಕೆ ನೆಡದಾನೆ ।
ನಾಗಾಲೋಕಕೆ ನೆಡದಾನೆ ಅರಜೀಣ
ನಾಗ್‌ಲೋಕದಂಗಡಿಯಾ ತೆಣಿಮ್ಯೆನ್ ಕೂತಿಗಂಡಿ
ನಾಗಾಸೆಟ್ಟಿಯೆಂದೀ ದೆನಿದೋರೆ ।
ಒಂದ ಕರವಿಗೆ ಬಂದನೆ ನಾಗಾಸೆಟ್ಟಿ
ನಿಂದನೆ ಅರಜಿಣನಾ ಒಡನಲ್ಲೇ
ಏನು ಕರದಿ ತನ್ನ ಎಂತು ಕರದಿರಿ ತನ್ನ
ಕರದಾ ಕಾರಣವಾ ನನಗ್ಹೇಳಿ ।
ಕರದಂ ಕಾರ್ಯ ಸರಿಯೋ ಕಿರದಂ[೨೪] ಬ್ಯೆಸರಿಲ್ಲ[೨೫]
ನಾಗಾ ಪಟ್ಟಿ ನೋಡಿ ತೆಗತಾರೋ
ನಾಗಾ ಪಟ್ಟಿ ನೋಡಿ ತೆಗತಾರೋ ಅಂಬದ್ನು
ಮಾಳುಗಿ ಒಳಗೆ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೆ ನಾಗಾ ಶೆಟ್ಟಿ
ಜವಳೀಯಾ ದಿಂಡಾ ಬಿಡಸಾನೆ ।
ಜವಳೀಯಾ ದಿಂಡಾ ಬಿಡಸಾನೆ ನಾಗಾ ಸೆಟ್ಟಿ
ಮಾಳಗ್ಗಿಂದ್ಹೆರಗೆ ಬರವಾನೆ ।
ಮಾಳಗ್ಗಿಂದ್ಹೆರಗೆ ಬರವಾನೆ ನಾಗಾ ಸೆಟ್ಟಿ
ನಾಗಾ ಪಟ್ಟೀಯ ಕೊಡವಾನೇ ।
ನಾಗಾ ಪಟ್ಟೀಯ ಕೊಡವದ್ನು ಅರಜೀಣ
ಎರಡೂ ಕೈಯೊಡ್ಡೀ ತಡದಾನೆ ।
ಆಚೀಯ ಸೆರಗ ಈಚೊಮ್ಮೆ ಮಡಚಾನೆ
ಬಣ್ಣಾ ಸಾಕಿದರ ಬೆಲೆ ಹೇಳೋ ।

---

೨೧. ಆಯುಷ್ಯ ೨೨. ಹೆಚ್ಚಾಗಲಿ ೨೩. ಹೊತ್ತು ೨೪. ಕಿರಿದು ೨೫. ಬೇಸರಿಲ್ಲ

ಮೊಳಕೆ ಸಾವೀರಂದಾ ದಡಿಗೆ ಸಾವೀರಂದಾ
ಅದಕೇಳು ಸಾವಿರದಾ ಹಣವಂದಾ ।
ಅದಕೇಳು ಸಾವಿರದಾ ಹಣವಂದಾ ಅರಜೀಣ
ಅದಕಲ್ಲೇ ಹಣವಾ ಸಲಸಾನೆ[೨೬] ।
ಅದಕಲ್ಲೆ ಹಣವಾ ಸಲಸಾನೆ ಅರಜೀಣ
ಹಿಂದಕಾ ಪಟ್ಟೀ ಕೊಡವಾನೆ ।
ಹಿಂದಕಾ ಪಟ್ಟೀ ಏನಂದೀ ಕೊಡವಾನೇ
ಪಟ್ಟೀಯಾ ಅರಸೇ ಕೊಡಬೇಕೋ ।
ನೀ ಕೊಟ್ಟ ಗಳಿಗ್ಯಲ್ಲಿ ನೀ ತಕಂಡ್ ಮೂರತದಲ್ಲಿ
ಅಬಿಮನ್ಯುಗಾಯಸವೇ ಹಿರದಾಲಿ ।
ಅಬಿಮನ್ಯುಗಾಯಸವೇ ಹಿರದಾಲಿ ಅಂದೇಳೇ
ಪಟ್ಟೀಯ ಅರಸೇ[೨೭] ಕೊಡವಾನೇ ।
ಪಟ್ಟೀಯ ಅರಸೇ ಕೊಡವಾನೋ ಅರಜೀಣ
ಪಟ್ಟೀ ದಟ್ಯಲ್ಲೇ ಬಿಗದಾನೆ ।
ಪಟ್ಟೀ ದಟ್ಯಲ್ಲೇ ಬಿಗದಾನೆ ಅರಜೀಣ
ಅಂಗೂಡಿ ತೆಣಿಯಾ ಇಳದಾನೆ ।
ಅಂಗೂಡಿ ತೆಣಿಯಾ ಇಳದಾನೆ ಅರಜೀಣ
ಇಂದ್ರಲೋಕಕೆ ನೆಡದಾನೆ
ಇಂದ್ರಲೋಕಕೆ ನೆಡದಾನೆ ಅರಜೀಣ
ಇಂದ್ರಲೋಕದಂಗಡಿಯಾ ತೆಣಿಯಾಮ್ಯೆನೆ
ಇಂದ್ರಲೋಕದಂಗಡಿಯಾ ತೆಣಿಮ್ಯೆನ್ ಕೂತಿಗಂಡಿ
ಇಂದ್ರಸೆಟ್ಟಿಯೆಂದೇ ದೆನೀದೋರೇ
ಒಂದ ಕರವಿಗೆ ಬಂದನೆ ಇಂದ್ರಸೆಟ್ಟಿ
ನಿಂದನೆ ಅರಜಿಣನ ಒಡನಲ್ಲೆ
ಏನೋ ಕರೆದಿರಿ ಸ್ವೊಮಿ ಎಂತೊ ಕರೆದಿರಿ ಸ್ವೊಮಿ
ಕರದ ಕಾರಣವ ನಮಗ್ಹೇಳಿ ।
ಕರದಂ ಕಾರ್ಯ ಸೈಯೊ ಕಿರದಂ ಬೈಸರಿಲ್ಲ
ಇಂದ್ರ ಪಟ್ಟಿ ನೋಡಿ ತೆಗತಾರೋ ।
ಇಂದ್ರ ಪಟ್ಟಿ ನೋಡಿ ತೆಗತಾರೋ ಅಂಬದ್ನು
ಮಾಳೂಗಿ ಒಳಗೆ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೆ ಇಂದ್ರ ಸೆಟ್ಟಿ
ಜವಳೀಯಾ ದಿಂಡಾ ಬಿಡಸಾನೆ ।

---

೨೬. ಕೊಟ್ಟನು ೨೭. ಹರಸಿ

ಜವಳೀಯಾ ದಿಂಡಾ ಬಿಡಸಾನೆ ಇಂದ್ರ ಸೆಟ್ಟಿ
ಇಂದ್ರ ಪಟ್ಟಿ ನೋಡಿ ತೆಗದಾನೆ ।
ಇಂದ್ರ ಪಟ್ಟಿ ನೋಡಿ ತೆಗದಾನೆ ಇಂದ್ರ ಸೆಟ್ಟಿ
ಮಾಳಗ್ಗಿಂದ್ಹೆರಗೆ ಬರವಾನೆ ।
ಮಾಳಗ್ಗಿಂದ್ಹೆರಗೆ ಬರವಾನಿಂದ್ರಾ ಸೆಟ್ಟಿ
ಅರಜಿಣ್ಣ ಬಲಗೈಲಿ ಕೊಡವಾನೆ ।
ಅರಜಿಣ್ಣ ಬಲಗೈಲಿ ಕೊಡವದ್ನು ಅರಜೀಣ
ಎರಡೂ ಕೈಯೊಡ್ಡೀ ತಡದಾನೆ ।
ಆಚೀಯ ಸೆರಗ ಈಚೊಮ್ಮೆ ಮಡಚಾನೆ
ಬಣ್ಣಾ ಸಾಕಿದರ ಬೆಲೆ ಹೇಳು ।
ಮೊಳಕೆ ಸಾವೀರಂದಾ ದಡಿಗೆ ಸಾವೀರಂದಾ
ಅದಕೇಳೂ ಸಾವಿರದಾ ಹಣವಂದ ।
ಅದಕೇಳು ಸಾವಿರದಾ ಹಣವಂದ ಅರಜೀಣ
ಅದಕಲ್ಲೇ ಹಣವಾ ಸಲಸಾನೆ ।
ಹಿಂದಕಾ ಪಟ್ಟೀ ಕೊಡವಾನೆ ।
ಹಿಂದಕಾ ಪಟ್ಟೀ ಏನಂದೀ ಕೊಡವಾನೇ
ಪಟ್ಟಿಯಾ ಅರಸೇ ಕೊಡಬೇಕೋ ।
ನಾ ಕೊಟ್ ಗಳಿಗ್ಯಲ್ಲಿ ನೀ ತಕಂಡ್ ಮೂರತದಲ್ಲಿ
ಅಬಿಮನ್ಯುಗಾಯಸವೇ ಹಿರದಾಲಿ ।
ಅಬಿಮನ್ಯುಗಾಯಸವೇ ಹಿರದಾಲಿ ಅಂದೇಳೇ
ಪಟ್ಟೀಯ ಅರಸೇ ಕೊಡವಾನೇ ।
ಪಟ್ಟೀಯ ಅರಸೇ ಕೊಡವದ್ನು ಅರಜೀಣ
ಪಟ್ಟೀ ದಟ್ಯಲ್ಲೇ ಬಿಗದಾನೆ ।
ಪಟ್ಟೀ ದಟ್ಯಲ್ಲೇ ಬಿಗದಾನೆ ಅರಜೀಣ
ಜವಳೀಯ ದಿಂಡ ನೆಗದೊತ್ತೇ ।
ಜವಳೀಯ ದಿಂಡ ನೆಗದ್ಹೊತ್ತೇ ಅರಜೀಣ
ರಾಜಂಗ್ಯಮೆಟ್ಟ ಇಳದಾನೆ ।
ರಾಜಂಗ್ಯಮೆಟ್ಟ ಇಳದಾನೇ ಅರಜೀಣ
ತನ್ನಲರಮನಗೆ ಬರವಾನೇ
ತನ್ನಲರಮನಗೆ ಬರವಾನೆ ಅರಜೀಣ
ಬಂದೀ ಬಾಗಲ್ಲೇ ನಿಲವಾನೇ
ಬಂದೀ ಬಾಗಲ್ಲೇ ನಿಲವದ್ನು ಸೂಬದ್ರಿ
ತಡದಳ ಚಂಬಗಲಿ ಉದಕವ

ಮಡದಿ ಕೊಟ್ಟುದಕ ತಟ್ಟನೇ ತಡದಾನೇ
ಕಾಲು ಸಿಮೊಕವಾ ತೊಳದಾನೆ ।
ಕಾಲು ಸಿರಿಮೊಕವಾ ತೊಳದಾನೇ ಅರಜೀಣ
ಮಾಳೂಗಿ ಒಳಗೆ ನೆಡದಾನೆ ।
ಮಾಳೂಗಿ ಒಳಗೆ ನೆಡದಾನೇ ಅರಜೀಣ
ಪಟ್ಟೆ ಮಂಚದಲೇ ಕುಳತಾನೇ
ಪಟ್ಟೆ ಮಂಚದಲೇ ಕುಳವದ್ನು ಅಬಿಮನ್ಯು
ಓಡ್‌ಬಂದಪ್ಪನ ತೊಡಿಯಾಮ್ಯೆನೇ
ಓಡ್‌ಬಂದಪ್ಪನ ತೊಡಿಯಾಮ್ಯೆನ್ ಕುಳವದ್ನು
ಮುದ್ದು ಮುಂಡಾಡಿ ನೆಗದಾನೆ
ಮುದ್ದು ಮುಂಡಾಡಿ ನೆಗವದ್ನು ಸೂಬದ್ರಿ[೨೮]
ಬೆಳ್ಳಿ ಸಂಬಳಗಿ ಬೆಳೀ ಎಲೆ
ಬೆಳ್ಳಿ ಸಂಬಳಗಿ[೨೯] ಬೆಳಿಯೆಲಡಕೀಬಾಗ[೩೦]
ಹಾಲೀನಲಿ ಬೆಂದಾ ತೆನೆಸುಣ್ಣ
ಹಾಲೀನಲಿ ಬೆಂದಾ ತೆನೆಸುಣ್ಣಾ ತಡಕಂಡೇ
ಮಾಳಗ್ಗಿಂಡ್ಹೆರಗೆ ಬರೋವಾಳೆ

ಮಾಳಗ್ಗಿಂಡ್ಹೆರಗೆ ಬರೋವಾಳೆ ಸೂಬದ್ರಿ
ನಲ್ಲನೊಡನೋಗಿ ನಿಲವಾಳೆ
ನಲ್ಲನೊಡನೋಗಿ ನಿಲವಾಳೆ ಸೂಬದ್ರಿ
ನಲ್ಲಗೊಂದೀಳ್ಯ ಕೊಡವಾಳೆ
ನಲ್ಲಗೊಂದೀಳ್ಯ ಕೊಡುವಳು ಸೂಬದ್ರಿ
ತಾನೊಂದೀಳ್ಯವ ಮೆಲವಾಳೆ
ಮಡದೀ ಕೊಟ್ಟೀಳ್ಯ ತಟ್ಟಾನೇ ತಡದಾನೆ
ಆಯಕೊಂದೀಳ್ಯ[೩೧] ಮೆಲವಾನೆ
ಎಲಿಯೊಂದ್ ತಿಂದಾನೇ ರಜವಲ್ಲೇ ಉಗಳಾನೆ
ಪಟ್ಟೇಯ ಸೆರಗಾ ಬಿಡಸಾನೆ
ಪಟ್ಟೇಯ ಸೆರಗಾ ಬಿಡಸಾನೆ ಅರಜೀಣ
ಒಂದು ಸುತ್ತಿನಲ್ಲಿ ನೆರದುಡಸೇ[೩೨]
ಒಂದೂ ಸುತ್ತಿನಲ್ಲಿ ನೆರಡುಡಸಿ ಮೊಕನೋಡಿ
ರಾಜ್ಯ ಆಳೂವ ಮಗ ನೀನು

---

೨೮. ಸುಭದ್ರೆ ೨೯. ಪೆಟ್ಟಿಗೆ ೩೦. ಬಿಳಿಯೆಲೆ ಅಡಿಕೆಯ ಹೋಳು ೩೧. ಶಿಷ್ಟಾಚಾರಕ್ಕೆ ತಾಂಬೂಲ
೩೨. ಗಳಿಗೆ ಮಾಡಿ ಉಡಿಸಿ

ರಾಜ್ಯ ಆಳೂವ ಮಗ ನೀನು ಮಗನೇ ಕೇಳು
ಯಾರಿಗು ಈ ಪಟ್ಟಿ ಕೊಡಬ್ಯೆಡ
ಯಾರಿಗು ಈ ಪಟ್ಟಿ ಕೊಟ್ಟದ್ದುಂಟಾದರೆ
ನಿನ್ನಾಯುಸದ ಸಿರಿಯೋ ತೊಲಗೀದೊ
ಆಯುಸದ ಸಿರಿಯು ತೊಲಗೀಗು ಅಬಿಮನ್ಯ
ನಿನತಾಯಿ ಬೇಡಿದರು ಕೊಡಬೇಡ
ತಾಯಿ ಬೇಡಿದರು ಕೊಡಬೇಡ ಅಂದೇಳಿ
ನಾಗಾ ಪಟ್ಟಿ ನೋಡೀ ತೆಗದಾನೆ
ನಾಗಾ ಪಟ್ಟಿ ನೋಡೀ ತೆಗದಾನೆ ಅರಜೀಣ
ಎರಡು ಸುತ್ತಿನಲ್ಲಿ ನೆರದುಡಸೇ ಮೊಕನೋಡಿ
ಪಟ್ಟವಾಳೂವ ಮಗ ನೀನು
ಪಟ್ಟವಾಳೂವ ಮಗ ನೀನು ಮಗನೇ ಕೇಳು
ಯಾರಿಗು ಈ ಪಟ್ಟಿ ಕೊಡಬ್ಯೆಡ
ಯಾರಿಗು ಈ ಪಟ್ಟಿ ಕೊಡಬ್ಯೆಡಾ ನಿನ್ನಾಲಾ
ಮಡದಿ ಬೇಡಿದರು ಕೊಡಬೇಡ
ಮಡದಿ ಬೇಡಿದರು ಕೊಟ್ಟದ್ದುಂಟಾದರೆ
ನಿನ್ನಾಯುಸದ ಸಿರಿಯೋ ತೊಲಗೀಗೊ
ಆಯುಸದ ಸಿರಿಯೋ ತೊಲಗೀಗೋ ಅಂದೇಳಿ
ಇಂದ್ರ ಪಟ್ಟಿ ನೋಡಿ ತೆಗದಾನೆ
ಇಂದ್ರ ಪಟ್ಟಿ ನೋಡಿ ತೆಗದಾನೆ ಅರಜೀಣ
ಮೂರು ಸುತ್ತಿನಲ್ಲಿ ನೆರದುಡಸೇ
ಮೂರು ಸುತ್ತಿನಲ್ಲಿ ನೆರದುಡಸಿ ಮೊಕನೋಡರೆ
ಕಾಳಗ್‌ಕ್ಹೋಗೂವ ಮಗ ನೀನು
ಕಾಳಗಕ್ಹೋಗೂವ ಮಗ ನೀನು ಮಗನೇ ಕೇಳು
ಯಾರಿಗು ಈ ಪಟ್ಟಿ ಕೊಡಬ್ಯೆಡ
ಯಾರಿಗು ಈ ಪಟ್ಟಿ ಕೊಟ್ಟದ್ದುಂಟಾದರೆ
ನಿನ್ನಾಯುಸವೊ ಸಿರಿಯೋ ತೊಲಗೀಗೋ
ಆಯುಸದ ಸಿರಿಯೋ ತೊಲಗೀಗೇ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಬಾಗಲ್ಲಾಡುವ ಬಾಲ ಅಬಿಮನ್ಯುವ ಸೂಬದ್ರಿ
ಬಾಗಲ ಹೆರಗೆ ಕಳಗಬ್ಯೆಡಾ
ಹುಸ್ತಲಿಂದ್ಹೆರಗೆ ಕಳಗ್‌ಬ್ಯೆಡಾ ಅಂಬದ್ನು
ಆಗೊಂದು ಮಾತಾ ನುಡೀದಾಳೆ

ಎತ್ತು ಬೀಜವ ಒಪ್ಪಸದೇ ಹೋದಾರೆ
ಬರುವ ಮೇಲ್ದುರಗ ಹುರೀಯಾರ
ಬಂದ ದುರಗವ ಬಂದಂಗ್ ನೋಡೀಕಂಬೆ
ಕಂದನ ಕಾಳಗಕೆ ಕಳಗಬ್ಯೆಡಾ
ಕಂದನ ಕಾಳಗಕೆ ಕಳಗಬ್ಯೆಡಾ ಸೂಬದ್ರಿ
ಬಂದಟ್ಟೇ ಬರಲೇ ನಿಜಕರಣೆ
ಬಂದಟ್ಟೇ ಬರಲೇ ನಿಜಕರಣೆ ನೀ ಕೇಳೇ
ಗಂಗೀಗ್‌ರಸೀ ನೀ ತನ್ನ ಕಳಗೀಸೇ
ಗಂಗೀಗ್ ಹೊಗ್ವದಕೆ ಬಂದ್ದದ್ದು ಮತ್ತೇನೆ
ಕೆಂದೀನರು[೩೩] ಕೊಡುವೊ ಅವದಾನ
ಕೆಂದೀಕೊಟ್ಟರೆ ಸಿರಿಯರಸು ನೆಗ್ಯಾಡ್‌ವ[೩೪]
ಬಂದಟ್ಟೇ ಬರಲೇ ನಿಜಕರಣೆ
ಬಂದಟ್ಟೇ ಬರಲೇ ನಿಜಕರಣೆ ನೀ ಕೇಳೇ
ಗಂಗೀಗರಸಿ ನೀ ತನ್ನ ಕಳಗೀಸೇ
ಗಂಗೀಗರಸಿ ನೀ ತನ್ನ ಕಳಗಿಸಂಬದ್ನು
ಅಬಿಮನ್ಯು ಚೆಂಡಾಡ್ವಕೆ ನೆಡದಾನೆ
ಚೆಂಡ ಆಡ್ವದಕೆ ನಡೆವದ್ನು ಅರಜೀಣ
ಕೊಳತ[೩೫] ಗದ್ದಗಿಯಾ ಜಡದೆದ್ದೇ
ಕೊಳತ ಗದ್ದಗಿಯಾ ಜಡದೆದ್ದೇ ಅರಜೀಣ
ಮಾಳೂಗಿ ಒಳಗೇ ನೆಡದಾನೆ
ಮಾಳುಗಿ ಒಳಗೇ ನೆಡದಾನೇ ಅರಜೀಣ
ಹಣ್ಣೂ ಈಳ್ಯವ ತಡದಾನೆ
ಹಣ್ಣೂ ಈಳ್ಯವ ತಡದಾನೆ ಅರಜೀಣ
ದೂಪ ದೀಪೆಲ್ಲ ತಡದಾನೆ
ದೂಪ ದೀಪೆಲ್ಲ ತಡದಾನೆ ಅರಜೀಣ
ಹಾಲಾ ಗಾಯೊಂದು ತಡದಾನೆ
ಹಾಲಾ ಗಾಯೊಂದು ತಡದಾನೆ ಅರಜೀಣ
ಸ್ಯೆಸೇ ಮಂಗಲವ ತಡದಾನೆ
ಸ್ಯೆಸೇ ಮಂಗಲವ ತಡದಾನೆ ಅರಜೀಣ
ಮಾಳಗ್ಗಿಂದ್ವೆರಗೇ ಬರವಾನೇ
ಮಾಳಗ್ಗಿಂದ್ವೆರಗೇ ಬರವಾನೇ ಅರಜೀಣ
ಗಂಗೀಗ್ಹೋಗ್ವದಕೆ ಸವನಾನೆ

೩೩. ಕೆಂಪಾಕಳು ೩೪. ನಗೆಯಾಡುವನು ೩೫. ಕುಳಿತ

ಗಂಗೀಗ್ಹೋಗ್ವದಕೆ ಸವನಾನೆ ಅರಜೀಣ
ಬಂದೀ ಬಾಗಲ್ಲೇ ನಿಲವಾನೇ
ಬಂದೀ ಬಾಗಲ್ಲೇ ನಿಲವಾನೇ ಅರಜೀಣ
ರಾಜಂಗಳ ಮೆಟ್ಟ ಇಳದಾನೆ
ರಾಜಂಗಳ ಮೆಟ್ಟ ಇಳದಾನೆ ಅರಜೀಣ
ರಾಜ ಮಾರ್ಗದಲಿ ನೆಡದಾನೆ
ರಾಜ ಮಾರ್ಗದಲಿ ನೆಡವದ್ನು ಅರಜೀಣ
ಬಾವ ನಾರೆಣದ್ಯೆವಾ ಎದರಾಗೇ
ಅರ್ಜುನ ಮುಂದಾಗೇ ನಾರೆಣದ್ಯೆವಾ ಹಿಂದಾಗೇ
ಮೂಡಣ ಗಂಗೀಗೇ ನೆಡದಾರೆ
ತೆಂಗೀನ ಮರಕೆ ತಂಗಾಳಿ ಬೀಸಿದಂತೆ
ಇಬ್ಬರೊಂದಾಗಿ ನೆಡದಾರೆ
ಇಬ್ಬರೊಂದಾಗಿ ನೆಡದಾರೆ ಅವರಿಬ್ಬರು
ಮೂಡಣ ಗಂಗೀಗೆ ನೆಡದಾರೆ
ಮೂಡಣ ಗಂಗೀಗೆ ನೆಡವದ್ನು ಅರಜೀಣ
ಗಂಗೀ ತಡಿಯಲ್ಲೇ ನಿಲೋವಾನೆ
ಗಂಗೀ ತಡಿಯಲ್ಲೇ ನಿಲೋವಾನೆ ಅರಜೀಣ
ಹಣ್ಣೂ ಈಳ್ಯವ ಹರಗಾನೆ
ಹಣ್ಣೂ ಈಳ್ಯವ ಹರಗಾನೆ ಅರಜೀಣ
ದೂಪ ದೀಪೆಲ್ಲ ಕಸೀದಾನೆ[೩೬]
ದೂಪ ದೀಪೆಲ್ಲ ಕಸಿದಾನೆ ಅರಜೀಣ
ಕಾಯೊಡದೇ ಕಯ್ಯ ಮುಗಿದಾನೇ
ಕಾಯೊಡದೇ ಕಯ್ಯ ಮುಗಿದಾನೇ ಅರಜೀಣ
ಸ್ಯೆಸೇ ಮಂಗಿಲವ ತಳೀದಾನೆ
ಸ್ಯೆಸೇ ಮಂಗಿಲವ ತಳೀದಾನೆ ಅರಜೀಣ
ಗಂಗೀಗೇ ಕಯ್ಯಾ ಮುಗೀದಾನೆ
ಗಂಗೀಗೇ ಕಯ್ಯಾ ಮುಗೀದಾನೆ ಅರಜೀಣ
ಗಂಗೀಯ ಜಲವ ಇಳದಾನೆ
ಒಂದು ಮುಂಡ್[೩೭] ನೀರಾ ವಾಲಾಡಿ ಮಿಂದಾನೆ
ಎರಡು ಮುಂಡ್ನಲ್ಲೇ ದಿಡನತ್ತೇ
ಎರಡು ಮುಂಡ್ ನೀರಾ ವಾಲಾಡಿ ಮಿಂದಾನೆ
ಮೂರು ಮುಂಡ್ನಲ್ಲೇ ದಿಡನತ್ತೇ

---

೩೬. ಹಚ್ಚಿದನು ೩೭. ಒಂದಾಳು

ಮೂರು ಮುಂಡ್ ನೀರಾ ವಾಲಾಡಿ ಮಿಂದಾನೇ
ನಾಲ್ಕು ಮುಂಡಿನಲ್ಲೇ ದಿಡನತ್ತೇ
ನಾಲ್ಕು ಮುಂಡ್ನಲ್ಲಿ ದಿಡನತ್ತಿ ನಾರೇಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಒಂದ್ ನಿನ್ನಪ್ಪಗಾದೊ ಒಂದ್ ನಿನ್ನಮ್ಮಗಾದೊ
ಒಂದೂ ನಿನಗಿಂದು ಹಿರಿಯರಗೇ
ಒಂದು ನಿನಗಿಂದು ಹಿರಿಯರಿಗಾದುಬಾವ
ನನ್‌ಹೇಳ್ಕಿಲೊಂದಸಿರೇ[೩೮] ಮುಳಕೇಳ
ಅಷ್ಟೊಂದು ಮಾತ ಕೇಳಾನೇ ಅರಜೀಣ
ನಾರಾಯಣನೆಂದೇ ಮುಳಕಾನೆ
ನಾರಾಯಣನೆಂದೇ ಮುಳಕುದ್ನು ನಾರಾಯಣದ್ಯೆವ
ಗಂಗೀಯ ಜಲವಾ ಇಳದಾನೆ
ಗಂಗೀಯ ಜಲವಾ ಇಳದಾನೆ ನಾರಾಯಣದ್ಯೆವ
ಮೆಟ್ಟಿ ಚಂಡಕಿಯಾ ಕನಸಾನೆ[೩೯]
ಮೆಟ್ಟಿ ಚಂಡಕಿಯಾ ಕನಸಾನೆ ನಾರಾಯಣದ್ಯೆವ
ಮಿಂದೊಗೆದಾನೊಂದು ಗಳಗ್ಯಲ್ಲೇ
ಮಿಂದಾನೊಗದಾನೆ ಮಿಂದ್ ಮುಡಿಯುಟ್ವಾನೆ
ಮಿಂದೀ ಚಂಡಕಿಯಾ ಕುಡಗಾನೆ[೪೦]
ಮಿಂದೀ ಚಂಡಕಿಯಾ ಕುಡಗಾನೆ ನಾರಾಯಣದ್ಯೆವ
ಗಂಗೀಯಾ ದಿಡವಾ ನೆಗದತ್ತೇ
ಗಂಗೀಯಾ ದಿಡವಾ ನೆಗದತ್ತೇ ನಾರಾಯಣದ್ಯೆವ
ಗಂಗೀ ತೀರತವ ಕುಡೀದಾನೆ
ಗಂಗೀ ತೀರತವ ಕುಡೀದಾನೆ ನಾರಾಯಣ್ಣದ್ಯೆವ
ಗಂಗೀಗೇ ಕಯ್ಯ ಮುಗೀದಾನೆ ।
ಗಂಗೀಗೇ ಕಯ್ಯ ಮುಗೀದಾನೆ ನಾರಾಯ್ಣದ್ಯೆವ
ಹಿಂದಕೇ ತಿರಗೇ ಬರವಾನೆ
ಹಿಂದಕೇ ತಿರಗೇ ಬರವಾನೆ ನಾರೆಣದ್ಯೆವ
ತಂಗೀಯರಮನಗೇ ನೆಡದಾನೆ
ತಂಗೀಯರಮನಗೇ ನೆಡದಾನೆ ನಾರೆಣದ್ಯೆವ
ಹೋಗಿ ಬಾಗಲ್ಲೇ ನಿಲವಾನೇ
ಹೋಗಿ ಬಾಗಲ್ಲೇ ನಿಲವದ್ನು ಸೂಬದ್ರಿ
ಹಣ್ಣೆಲಿಯಂತೆ ಬಳಕೀತೆ

೩೮. ನನ್ನ ಹೇಳಿಕೆಯಲ್ಲೊಂದಸಲ ೩೯. ಮುಳುಗಿಸಿದನು. ೪೦. ಕೊದಹಿದನು

ಹಣ್ಣೆಲಿಯಂತೆ ಬಳಕೀತೇ ಬಾಗೀತೇ
ತಡದಳೆ ಚಂಬಗಲಿ ಉದಕವ
ತಡದಳೆ ಚಂಬಗಲಿ ಉದಕವ ನಾರೆಣದ್ಯೆವ
ಆಗೊಂದು ಮಾತಾ ನುಡೀದಾನೆ
ಆಗೇನೇ ತಂಗೀ ಸೂಲೀದ್ಯೆವ್ರಂಗಿದ್ದಿ[೪೧]
ಈಗೇನೇ ತಂಗೀ ಬಳಕೂವೆ
ಈಗೇನೇ ತಂಗೀ ಬಳಕೂವೆ ಅಂಬದ್ನು
ಆಗೊಂದು ಮಾತಾ ನುಡೀದಾಳೆ
ಇಬ್ಬರ್ಹೊದಲಿ ಅಣ್ಣ ಒಬ್ಬನೆ ಬಂದೀಯೊ
ಮತ್ತೊಬ್ಬರೆತ್ತ ನೆಡದಾರೆ
ಅಷ್ಟೊಂದು ಮಾತಾ ಕೇಳಾನೆ ನಾರೆಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಗಂಗೀಗ್ಹೋದರು ಹೀಂಗೇ ಬಾರಲುಬಾರಾ
ತಿರುಪೂತಿಗ್ಹೋಗೇ[೪೨] ಬರೋಬೇಕೆ
ತಿರುಪುತಿಗ್ಹೋಗೇ ಬರೋಬೇಕು ತಂಗಿ ಕೇಳೆ
ಬರುವಾ ಇನ್ನೊಂದು ಗಳಗ್ಯಲ್ಲಿ
ಬರುವಾ ಇನ್ನೊಂದು ಗಳಗ್ಯಲ್ಲೇ ಅಂದ್ಹೇಳೇ
ಕಾಲು ಸಿರಿಮೊಕವಾ ತೊಳದಾನೆ
ಕಾಲು ಸಿರಿಮೊಕವಾ ತೊಳದಾನೆ ನಾರೆಣದ್ಯೆವಾ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡವದ್ನು ಸೂಬದ್ರಿ
ಬಣ್ಣದ ಹಾಸ ಬಿಡಸಾಳೆ
ಬಣ್ಣದ ಹಾಸ ಬಿಡಸುದ್ನು ನಾರೆಣದ್ಯೆವಾ
ತಪ್ಪು ತಳಕೋಗಿ ಕುಳತಾನೆ
ತಪ್ಪು ತಳಕೋಗಿ ಕುಳವದ್ನು ಸೂಬದ್ರಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಸೂಬದ್ರಿ
ಹಣ್ಣಡಕೆ ಬೆಳಿಯೆಲಿಯಾ ತಡದಾಳೆ
ಆಯೊಳ್ಳ ಹಣ್ಣಡಕಿ ಸೋಯಿಸಿದ ಬಿಳಿಯೆಲೆ
ಹಾಲಿನಲಿ ಬೆಂದ ತೆನೆಸುಣ್ಣ
ಹಾಲಿನಲಿ ಬೆಂದ ತೆನೆಸುಣ್ಣ ತಡಕಂಡಿ
ಮಾಳಗ್ಗಿಂದ್ಹೆರಗೆ ಬರವಾಳೆ ।

೪೧. ಸೂರ್ಯದೇವಂತಿದ್ದೆ   ೪೨. ತಿರುಪತಿಗೆ ಹೋಗಿ

ಮಾಳಗ್ಗಿಂದ್ಹೆರಗೆ ಬರವಾಳು ಸೂಬದ್ರಿ
ಹಣ್ಣೆಲಿಯಂತೆ ಬಳಕೀತೆ
ಹಣ್ಣೆಲಿಯಂತೆ ಬಳಕೀತೇ ಬಾಡೀತೆ
ಅಣ್ಣನೊಡನೋಗಿ ನಿಲವಾಳೆ
ಅಣ್ಣನೊಡನೋಗಿ ನಿಲವದ್ನು ನಾರೆಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಆಗೇನೇ ತಂಗೀ ಸುಕ್ರದ್ಯೆವ್ರಂಗಿದ್ದೆ
ಈಗೇನೇ ತಂಗೀ ಬಳಕೂವೆ
ಇಬ್ಬರೋದಲಿ ಅಣ್ಣ ಒಬ್ಬನೆ ಬಂದಿಯೋ
ಮತ್ತೊಬ್ಬರೆತ್ತ ನೆಡದಾರೆ
ಗಂಗೀಗ್ಹೋದರು ಹೀಂಗೇ ಬಾರಲು ಬಾರಾ
ಶಿವಸಂಕಕೋಗೆ ಬರಬೇಕೆ
ಶಿವಸಂಕಕೋಗೆ ಬರಬೇಕು ತಂಗಿಕೇಳೆ
ಬರುವಾ ಇನ್ನೊಂದು ಗಳಗ್ಯಲ್ಲೇ
ಬರುವಾ ಇನ್ನೊಂದು ಗಳಗ್ಯಲ್ಲಿ ಅಂಬದ್ನು
ರನ್ನದೊಂದೀಳ್ಯವ ಕೊಡವಾಳೆ
ರನ್ನದೊಂದೀಳ್ಯವ ಕೊಡವದ್ನು ನಾರೆಣದ್ಯೆವಾ
ಸುಣ್ಣಿಲ್ಲದೀಳ್ಯ ಮೆಲವಾನೆ
ಸುಣ್ಣಿಲ್ಲದೀಳ್ಯ ಮೆಲವದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ
ಇಬ್ಬರೋದಲಿ ಅಣ್ಣ ಒಬ್ಬನೆ ಬಂದೀಯೋ
ಮತ್ತೊಬ್ಬರೆತ್ತ ನೆಡದಾರೆ
ಮತ್ತೊಬ್ಬರೆತ್ತ ನೆಡದಾರೆ ಅಂಬದ್ನು ನಾರೆಣದ್ಯೆವಾ
ತಾನೇ ಊರ್ತಿರ್ಗೇ ಮನಗೇ ಬರೋವಾನೆ
ಊರ್ತಿರ್ಗಿ ಮನಗೇ ಬರುವಾನೆ ಸೂಬದ್ರಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಸೂಬದ್ರಿ
ಹಾಲ್ಗಂಜ್[೪೩] ಹಗಲೂಟಕೆ ಅನೂಮಾಡೇ
ಹಾಲ್ಗಂಜ್ ಹಗಲೂಟಕೆ ಅನೂಮಾಡೇ ಸೂಬದ್ರಿ
ಸೆಣ್ಣಗಿಂಡ್ಯಲ್ಲಿ ಉದಕಾವೇ
ಸೆಣ್ಣಗಿಂಡ್ಯಲ್ಲೇ ಉದಕವಾ ತಡಕಂಡೇ
ಅಣ್ಣನೊಡನೋಗಿ ನಿಲವಾಳೆ

೪೩. ಹಾಲು ಗಂಜಿ

ಅಣ್ಣನೊಡನೋಗಿ ನಿಲವದ್ನು ನಾರೆಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಊಟ ಉಂಬೂಕೇ ಸ್ವೊಮಾರದೊಪ್ಪತ್ತೇ
ಊಟಕು ತನಗೂ ತರಕವೇ
ಉಳ್ಳಗ್[೪೪] ತಾಗಸದೆ ಒನಕೀಲಿ ಮೆರಿಯದೇ[೪೫]
ಸೆಳ್ಳುಗುರಲಿ[೪೬] ಸೊಲದಾ[೪೭] ಸೊಲಿಯಕ್ಕಿ[೪೮]
ಸೆಳ್ಳುಗರಲಿ ಸೊಲದಾ ಸೊಲಿಯಕ್ಕಿ ಅಡಗೀ ಮಾಡಿ
ಒಂದೆ ತುತ್ತುಂಬೆ ಕಿರತಂಗಿ
ಅಷ್ಟೊಂದು ಮಾತಾ ಕೇಳೀತೋ ಸೂಬದ್ರಿ
ಮಾಳೂಗಿ ಒಳಗೆ ನೆಡsದಾಳೆ
ಉಳ್ಳ ತಾಗಸದೆ ಒನಕೀಲು ಮೆರಿಯದೆ
ಸೆಳ್ಳುಗುರಿಲ್ ಬತ್ತ ಸೊಲೀದಾಳೆ
ಸೆಳ್ಳುಗುರಿಲ್ ಬತ್ತ ಸೊಲೀದಾಳೆ ಸೂಬದ್ರಿ
ಹಾಲ್ಗಂಜೀಲೂಟಕೆ ಅನೂಮಾಡೇ
ಹಾಲ್ಗಂಜೀಲೂಟಕೆ ಅನುಮಾಡಿ ಸೂಬದ್ರಿ
ಮಾಳಗ್ಗಿಂದ್ದೆರಗೆ ಬರವಾಳೆ
ಮಾಳಗ್ಗಿಂದ್ದೆರಗೆ ಬರವಾಳೆ ಸೂಬದ್ರಿ
ಅಣ್ಣನೊಡನೋಗಿ ನಿಲವಾಳೆ
ಬಡವರ ಮನೆಯಾ ಹುಳಗಂಜಿ ತಿಳಗಂಜಿ
ಒಂದ ತುತ್ತುಣ್ಣೊ ಹೆರೀಯಣ್ಣ
ಒಂದ ತುತ್ತುಣ್ಣೊ ಹೆರೀಯಣ್ಣ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಅಡಗಿ ಮಾಡಿದಿಯೆಂದಿ ಸಡಗರ ಮಾಡಲಬ್ಯೆಡಾ
ಕಂದನ ಕಾಳಗಕೆ ಕಲೀಮಾಡೇ
ಕಂದನ ಕಾಳಗಕೆ ಕಲೀಮಾಡದಿದ್ದರೆ
ಬಾಗಲಗೆ ದಂಡ ತಿರಗೂವೆ
ಬಾಗಲಗೆ ದಂಡ ತಿರಗೂವೆ ತಂಗೀ ಕೇಳೆ
ಕೊಲ್ಲೂವೆ ಮೂರು ದಿನದಲ್ಲೆ
ಎಣ್ಣಿ ಅರದರೆ ಕಣ್ಣೀರ ಬಿಡವನೊ
ಕಂದ ಕಾಳಗವ ಕಲಿಯಲಿಲ್ಲ
ಕಂದ ಕಾಳಗವ ಕಲಿಲಿಲ್ಲ ಅಣ್ಣಕೇಳೋ
ಕಂದನ ಕಾಳಗಕೆ ಕಳಗಲಾರೆ

---

೪೪. ಒರಳಿಗೆ ೪೫. ಕುಟ್ಟಿದ ೪೬. ಸುಂದರ ಉಗುರಲ್ಲಿ ೪೭. ಸುಲಿದ ೪೮. ಸುಲಿದ ಅಕ್ಕಿ

ಅಷ್ಟೊಂದು ಮಾತಾ ಕೇಳಾನೆ ನಾರೆಣದ್ಯೆವಾ
ಆಗೊಂದು ಮಾತಾ ನುಡೀದಾನೆ
ಅರಸ್ಗಳ ಮಕ್ಕಳ್ಗೆ ಕಲಿಸ್ಬೇಕ ಬುದ್ದೀಯ
ಕಲತಿಪ್ರೆ ತಾಯಾ ಗರಬ್ದಲ್ಲಿ
ಕಲತಿಪ್ರೆ ತಾಯ ಗರಬ್ದಲ್ಲಿ ಗಂಡೂಮಕ್ಳು
ಕಡಚಕ್ರನಾಡೀ ಗೆಲವಾರೆ
ಮೊಸರನ್ನ ಇಕ್ಕದರೆ ದೆಸೆಗೆ ಬೀರ್ಯೆಡೂವ
ಕಂದ ಕಾಳಗವಾ ಕಲಿಯಲಿಲ್ಲಾ
ಕಂದ ಕಾಳಗವಾ ಕಲಿಲಿಲ್ಲ ಅಣ್ಣಕೇಳೋ
ಕಂದನ ಕಾಳಗಕೆ ಕಳಗಲಾರೆ
ರುಸಿಗಳ ಮಕ್ಕಳ್ಗೆ ಕಲಿಸ್ಬೇಕ ಬುದ್ದೀಯ
ಕಲತಿಪ್ರೆ ತಾಯಾ ಗರಬ್ದಲ್ಲಿ
ಕಲತಿಪ್ರೆ ತಾಯ ಗರಬ್ದಲ್ಲಿ ಗಂಡೂಮಕ್ಳು
ಕಡಚಕ್ರನಾಡೀ ಗೆಲವಾರೆ
ಕಡಚಕ್ರನಾಡೀ ಗೆಲವರು ತಂಗೀ ಕೇಳು
ಕಂದನ ಕಾಳಗಕೆ ಕಲೀಮಾಡೇ
ಕಂದನ ಕಾಳಗಕೆ ಕಲಿಮಾಡದಿದ್ದರೆ
ಹುಸ್ತಲಗೆ ದಂಡ ತಿರಗೂವೆ
ಹುಸ್ತಲಗೆ ದಂಡ ತಿರಗೂವೆ ತಂಗೀಕೇಳೇ
ಕೊಲ್ಲೂವೆ ಮೂರು ದಿನದಲ್ಲೆ
ಹರಗೀಸೊಪ್ಪಿನ ರಜಕಂಡರ್ಥೆದರೂವ
ರಣವ ಕಂಡಿ ಬಾಲ ಹೆದರೂವ
ರಣವ ಕಂಡಿ ಬಾಲ ಹೆದರೂವ ಅಣ್ಣಕೇಲೋ
ಕಂದನ ಕಾಳಗಕೆ ಕಳಗಲಾರೆ
ಅರಸರ ಮಕ್ಕಳ್ಗೆ ಕಲಿಸ್ಬೇಕ ಬುದ್ದೀಯ
ಕಲತಿಪ್ರೆ ತಾಯಾ ಗರಬ್ದಲ್ಲಿ ನಾರಾಯ್ಣ
ಕಲತಿಪ್ರೆ ತಾಯ ಗರಬ್ದಲ್ಲಿ ಗಂಡೂಮಕ್ಳು
ಕಡಚಕ್ರನಾಡೀ ಗೆಲವಾರೆ–ನಾರಯ್ಣ*
ಕಡಚಕ್ರನಾಡೀ ಗೆಲವರು ತಂಗೀಕೇಳು
ಕಂದನ ಕಾಳಗಕೆ ಕಲೀಮಾಡೇ ನಾರಾಯ್ಣ –ನಾರಾಯ್ಣ
ಅಷ್ಟೊಂದು ಮಾತ ಕೇಳೀತು ಸೂಬದ್ರಿ

* ಹಾಡುಗಾರ್ತಿ ಹಾಡಿನ ಎರಡನೆ ಸಾಲನ್ನು ಮುಗಿಸಿದ ಕೂಡಲೇ ಸರಿದನಿ ಕೊಡುವವರು ನಾರಾಯ್ಣ ಎಂದು ಧನಿಗೂಡಿಸುವರು. ಹಾಡಿನ ಏಕತಾನತೆಯನ್ನು ಕಳೆಯಲು ಹಾಡುಗಾರ್ತಿ ಧ್ವನಿ ಸ್ವಲ್ಪ ಬದಲಿಸಿ ಸರಿದನಿ ಕೊಡುವರೊಗೂಡಿ ಹಾಡುವ ರೂಢಿಯಿದೆ.

ಆಗೊಂದು ಮಾತ ನುಡೀದಾಳೆ
ಬೇಗ್ಗೆ ಕಿಚ್ಚಿಡುವಂಗೆ ಬೇಲೆದ್ದಿಕೆಯ್ ತಿಂಬಂಗೆ
ನೀನೆದ್ದಿ ನಿನ್ನಳಿನಾ ಕೊಲುವಂಗೆ
ನೀನೆದ್ದಿ ನಿನ್ನಳಿನಾ ಕೊಲುವಂಗೆ ಅಣ್ಣಾಕೇಳೋ
ಯಾರೀಗ್ ಹೇಳೀ ಮರಗಾಲೊ
ಯಾರೀಗ್ ಹೇಳೀ ಮರಗಾಲೊ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಏನ ಹೇಳದ್ರು ಕೇಳನೆ ನಿನಮಾತ
ಕಂದನ ಕಾಳಗಕೆ ಕಲೀಮಾಡೆ
ನಿನಮಗನಾದರೇನೆ ನನ್ಹಿಣ್ಣೇ ಕೊಟ್ಟೀದೆ
ನಿನ್ನಟ್ಟೇದುಕ್ಕ ನನಗುಂಟೆ
ನಿನ್ನಟ್ಟೇದುಕ್ಕ ನನಗುಂಟೆ ತಂಗೀಕೇಳೆ
ಕಂದನ ಕಾಳಗಕೆ ಕಲೀಮಾಡೇ
ಕುಳತ ಗದ್ದಗಿಯಾ ಜಡದೆದ್ದೇ
ಕುಳತ ಗದ್ದಗಿಯಾ ಜಡದೆದ್ದೇ ಸೂಬದ್ರಿ
ರಾಜಂಗ್ಳ ಮೆಟ್ಟ ಇಳದಾಳೆ ।
ರಾಜಂಗ್ಳಮೆಟ್ಟ ಇಳದಾಲೆ ಸೂಬದ್ರಿ
ಚಂಡನ ಗಾಳಿಗಾಗೇ[೪೯] ನೆಡದಾಳೆ
ಚಂಡನ ಗಾಳೀಲಿ ಚೆಂಡಾಡೂ ಅಭಿಮನ್ಯು
ಬಾರಾಲೊ ಮಗನೆ ಮನಗೋಪೊ
ಬಾರಾಲೊ ಮಗನೆ ಮನಗೋಪು ನಿನ್ನಾಲ
ಹಿಣಕೊಟ್ಟ ಮಾವಾ ಕರದಾನೆ
ಹಿಣಕೊಟ್ಟ ಮಾವಾ ಕರದಾನೆ ಅಂಬದ್ನು
ಕುಳತಾ ಗದ್ದಗಿಯಾ ಜಡದೆದ್ದೇ
ಸೋಡೀ ಗದ್ದೀಲಿ ಸೋಡ್ಯಾಡು ಅಭಿಮನ್ಯು
ಬಾರಾಲೊ ಮಗನೆ ಮನಗೋಪೊ
ಬಾರಾಲೊ ಮಗನೆ ಮನಗೋಪು ನಿನ್ನಾಲ
ಸೋದರರದಾ ಮಾವಾ ಕರದಾನೆ
ಸೋದರರದಾ ಮಾವಾ ಕರದಾನೆ ಅಂಬದ್ನು
ಸೋಡಿಗದ್ದಿಂದ್ಹರಗೆ ಬರೋವಾನೆ
ಬೀರಿದ ಚೆಂಡ ಹಕ್ಕಿ ಒಂದಟಮಾಡೇ[೫೦]
ಮಿಕ್ಕೀದ ಚೆಂಡ ತಳsನಲ್ಲೇ
ಮಿಕ್ಕಿದ್ದ ಚೆಂಡಾ ತಳನಲ್ಲೊಂದಟ ಮಾಡೇ

---

೪೯. ಚೆಂಡಾಟದ ಬೈಲಿಗೆ ೫೦. ಒಂದೆಡೆ ಮಾಡಿ

ಬೋರಿನೆ ಆನೀ ರತವೇರಿ
ಬೋರೀನೆ ಆನೀ ರತವೇರಿ ಅಭಿಮನ್ಯು
ಆನಿಗೆ ಚಬಕದಲೆ ಒಗದಾನೆ
ಆನಿಗೆ ಚಬಕದಲೆ ಒಗದಾನೆ ಆ ಆನಿ
ಹೋಗಿ ರಾಜಂಗ್ಳ ನೆಗದ್ಹತ್ತೆ
ಹೋಗಿ ರಾಜಂಗ್ಳ ನೆಗದ್ಹತ್ತೆ ಅಭಿಮನ್ಯು
ಆನಿಗಿಂದು ಕೆಳಗೆ ಇಳದಾನೆ
ಆನಿಗಿಂದು ಕೆಳಗೆ ಇಳದಾನೆ ಅಭಿಮನ್ಯು
ಆನೀ ಕಂಬಗ್ ಆನೀ ಸದೆ ಕಟ್ಟಿ ಅಭಿಮನ್ಯು
ಆನಿ ಕಂಬಗ್ ಆನಿ ಸದೆꣳಕಟ್ಟಿ[೫೧]
ತಿಂಬೂಕಿಕ್ಕನಿಯೇ ಕಡಲೀಯ
ತಿಂಬೂಕಿಕ್ಕನಿಯೇ ಕಡಲೀಯ ಅಭಿಮನ್ಯು
ಬಂದೀ ಬಾಗಲ್ಲೇ ನಿಲೋವಾನೇ
ಬಂದೀ ಬಾಗಲ್ಲಿ ನಿಲವದ್ನು ತಾಯವ್ವಿ
ತಡದಳ ಚಂಬಗಲಿ ಉದಕವ
ತಾಯೀ ಕೊಟ್ಟುದಕ ತಟ್ಟಾನೆ ತಡದಾನೆ
ಕಾಲು ಸಿರಿಮೊಕವಾ ತೊಳದಾನೆ
ಕಾಲು ಸಿರಿಮೊಕವಾ ತೊಳವದ್ನು ಸೂಬದ್ರಿ
ಮಾಳಗ್ಗಿಂದ್ಹೆರಗೆ ಬರವಾಳೆ
ಎಡಗೈಲುಪ್ಪಾ[೫೨] ತಂದೇ ಬಲಗೈಲಿ ಬೆಂಕೀತಂದೇ
ಅಬಿಮನ್ಯುಗ್ ದಿಟ್ಟೀ ತೆಗದಾಳೆ
ಅಬಿಮನ್ಯುಗ್ ದಿಟ್ಟೀ ಏನಂದಿ ತೆಗದಾಳೆ
ಕಂಡವರ ದುಟ್ಟಿ ತೊಲಗಾಲಿ
ಕಂಡವರ ದುಟ್ಟಿ[೫೩] ತೊಲಗಾಲಿ ಅಂಬದ್ನು
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡವದ್ನು ನಾರೆಣದ್ವೆವಾ
ಕಣ್ಣಿಗ್ ಕತ್ತಲಿಯಾ ಕಮೀಸಾನೆ[೫೪]
ಕಣ್ಣಿಗ್ ಕತ್ತಲಿಯಾ ಕಮೀಸುದ್ನು ಅಬಿಮನ್ಯು
ಸುತ್ತಲ ಮಣಿಮಾಡ ಅರಸಾನೆ
ಸುತ್ತಲ ಮಣಿಮಾಡ ಅರಸದ್ನು ಅಬಿಮನ್ಯು
ಆಗೊಂದು ಮಾತ ನುಡೀದಾಳೆ
ಸುತ್ತಲ ಮಣಿಮಾಡ ಎತ್ತಲರಸುವೆ ಮಗನೆ
ಹಿಣಕೊಟ್ಟ ಮಾವಾ ಕುಳತಾನೆ

---

೫೧. ಸೆಳೆದು ಕಟ್ಟಿ ೫೨. ಎಡಗೈಯಲ್ಲಿ ಉಪ್ಪು ೫೩. ವೈರಿಗಳ ದೃಷ್ಟಿ ೫೪. ಕವಿಸಿದನು

ಹಿಣಕೊಟ್ಟ ಮಾವಾ ಕಳತಾನೆ ಮಗನೆಕೇಳು
ಮಾವನ ಸಿರಿಪದಕೆ ಸರಣೆನ್ನು
ಸುತ್ತಲ ಮಣಿಮಾಡ ಎತ್ತಲರಸಲೆ ತಾಯೆ
ಕಣ್ಣಿಗ್ ಕತ್ತಲಿಯೇ ಕಂವಿದಾವೆ
ಕಣ್ಣಿಗ್ ಕತ್ತಲಿಯೇ ಕಮದಾವೆ ತಾಯೆಕೇಳು
ಕೈತೊಟ್ಟಿ ಮಾವಗೇ ಸರಣನುತೇ
ಅಷ್ಟೊಂದು ಮಾತ ಕೇಳೀತು ಸೂಬದ್ರಿ
ಕೈತಟ್ಟಿ ಮಾವಾಗೇ ಸರಣಂದೇ
ಕೈತಟ್ಟಿ ಮಾವಾಗೇ ಸರಣಂದೇ ನಾರೆಣದ್ಯೆವಾ
ಕೈತೊಟ್ಟಿ ಮಾವಗೇ ಸರಣನುತೇ
ಅಷ್ಟೊಂದು ಮಾತ ಕೇಳೀತು ಸೂಬದ್ರಿ
ಕೈತಟ್ಟಿ ಮಾವಾಗೇ ಸರಣಂದೇ
ಕೈತಟ್ಟಿ ಮಾವಾಗೇ ಸರಣಂದೇ ನಾರೆಣದ್ಯೆವಾ
ಕಣ್ಣಿಗ್ ಕತ್ತಲಿಯಾ ಹುರೀಸಾನೆ[೫೫]
ಕಣ್ಣಿಗ್ ಕತ್ತಲಿಯಾ ಹುರಿಸಾನೆ ನಾರೆಣದ್ಯೆವಾ
ಮುದ್ದು ಮುಂದಲಿಯಾ ತಡದಾನೆ
ಮುದ್ದು ಮುಂದಲಿಯಾ ತಡದಾನೆ ನಾರೆಣದ್ಯೆವಾ
ಕಾಳಗಕೆ ಬ್ಯೆಗೇ ಕಲೀಯಾಗೋ
ಕಾಳಗಕೆ ಬ್ಯೆಗೇ ಕಲೀಯಾಗೋ ಅಂದ್ಹೇಳೇ
ರಾಜಂಗ್ಯಮೆಟ್ಟ ಇಳದಾನೆ
ರಾಜಂಗ್ಯಮೆಟ್ಟ ಇಳದಾನೆ ನಾರೆಣದ್ಯೆವಾ
ತನ್ನಲರಮನಗೆ ನೆಡದಾನೆ
ತಾಯೊಡನೆ ಮಗ ನಿಲುವದ್ನು ಸೂಬದ್ರಿ
ಆಗೊಂದು ಮಾತಾ ನುಡೀದಾಳೆ
ಏನಂದ್ನೋ ನಿನ ಮಾವಾ ಎಂತಂದ್ನೋ ನಿನಮಾವ
ಏನಂದಿ ಸಾವರವಾ ಹರಸಾನೆ
ಅಷ್ಟೊಂದು ಮಾತಾ ಕೇಳಾನೆ ಅಬಿಮನ್ಯು
ಆಗೊಂದು ಮಾತಾ ನುಡೀದಾನೆ
ಏನ್ ಹೇಳ್ಲೇಲಾ ನನಮಾವಾ ಎಂತೇಹೇಳ್ಲೇಲ ನನಮಾವಾ
ಮುದ್ದು ಮಂದಲಿಯ ಹಿಡದಾನೆ
ಅಷ್ಟೊಂದು ಮಾತ ಕೇಳೀತು ಸೂಬದ್ರಿ
ಮುತ್ತೀನಾ ಕಣ್ಣೀರ ಸೆಡೀದಾಳೆ

೫೫. ಬಯಲುಗೊಳಿಸಿದನು

ಮುತ್ನ ಕಣ್ಣೀರಾ ಸೆಡುವದ್ನು ಅಬಿಮನ್ಯು
ಆಗೊಂದು ಮಾತಾ ನುಡೀದಾನೆ
ಬಾಳೀ ಸುಳಿಯಲಿ ಬಾಕೊಂದ[೫೬] ಮಸದಿರುವೆ
ತಾಯೇ ನೀ ಚಿಂತೀ ಬಿಡಬ್ಯೆಡಾ
ತಾಯೇ ನೀ ಚಿಂತೀ ಬಿಡಬ್ಯೆಡಾ ತನ್ನಾಲಾ
ಹಗೆಯವ್ನ ತಲಿಯಾ ಹಗಲ್ತುರುವೆ
ಹಗೆಯವ್ನ ತಲಿಯಾ ಹಗಲ್ತುರುವೆ ಇರುಳೂತರುವೆ
ತಾಯೇ ನೀ ಚಿಂತೀ ಬಿಡಬ್ಯೆಡಾ
ಲಿಂಬಿ ಹುಳಿಯಲ್ಲೇ ಅಂಬೊಂದ ಮಸದಿರುವೆ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ ತನ್ನಾಲಾ
ಹಗೆಯವ್ನ ತಲಿಯಾ ಹಗಲ್ತುರುವೆ
ಹಗೆಯವ್ನ ತಲಿಯಾ ಹಗಲ್ತುರುವೆ ಇರುಳೂತರುವೆ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ ತಾಯೇಕೇಳೆ
ದಂಡೀನೂಟಕೆ ಅನುಮಾಡೆ
ದಂಡೀನೂಟಕೆ ಅನುಮಾಡು ಅಜ್ಜೀಕೇಳೆ
ದಂಡಾ ಮೀಯಾಕೆ ಅನೂಮಾಡೆ
ದಂಡು ಮೀಯಾಕ ಅನೂಮಾಡು ಅಂದ್ಹೇಳಿ
ಆನೀ ಸಾಲೀಗೆ ನೆಡದಾನೆ
ಅಂದುಳ್ಳ ಆನೀಯಾ ಅಂಗಳಕೆ ಹೊಡತಂದೇ
ಅಂದ ಚೆಂದದಲೆ ಹೊಡಿಯುದ್ದೆ
ಅಂದ ಚೆಂದದಲೆ ಹೊಡಿಯುದ್ದಿ ಅಬಿಮನ್ಯು
ತಿಂಬೂಕಕ್ಕನಿಯೇ ಕಡಲಿಯೇ
ತಿಂಬೂಕಕ್ಕನಿಯೇ ಕಡಲಿಯಾ ಅಬಿಮನ್ಯು
ಬಾಲಕೆ ಸೂವರ್ಣ ಬಳಿಸಾನೆ
ಬಾಲಕೆ ಸೂವರ್ಣ ಬಳಿಸಾನೆ ಅಬಿಮನ್ಯು
ಕಾಲಗ್ ಕಟ್ಟನಿಯೇ ಹುರಗೆಜ್ಜೆ
ಕಾಲಗ್ ಕಟ್ಟಾನೆ ಹುರಗೆಜ್ಜೆ ಅಬಿಮನ್ಯು
ಕೊರಳಿಗ್ ಕಟ್ಟನಿಯೇ ಸರಗೆಂಟೆ
ಕೊರಳಿಗ್ ಕಟ್ಟನಿಯೇ ಸರಗೆಂಟೆ ಅಬಿಮನ್ಯು
ಕೊಂಬೀಗಿಕ್ಕನಿಯೇ ಕಳಸವೇ

೫೬. ಕತ್ತಿಯೊಂದನ್ನು

ಕೊಂಬೀಗಿಕ್ಕನೆ ಕಳಸವಾ ಅಬಿಮನ್ಯು
ಆನೀ ಕಂಬ್ಗಾನೆ ಸದೆಕಟ್ಟಿ
ಆನೀ ಕಂಬ್ಗಾನೆ ಸದೆಕಟ್ಟಿ ಅಬಿಮನ್ಯು
ದಂಡಿನ ಕರಿಯಣಕೆ[೫೭] ನೆಡದಾನೆ
ದಂಡಿನ ಕರಿಯಣಕೆ ನೆಡದಾನೆ ಅಬಿಮನ್ಯು
ರಾಜ ಮಾರ್ಗದಲೆ ನೆಡದಾನೆ ।
ರಾಜ ಮಾರ್ಗದಲೆ ನೆಡದಾನೆ ಅಬಿಮನ್ಯು
ಹೋಗಿ ಬಾಗಲ್ಲೇ ನಿಲವಾನೆ
ಅಕ್ತಂಗ್ದೀರ್ ಮಕ್ಳೇ ಲಕ್ಸ್ಮೀಕಾಮಾದೋರೆ
ನೀವೆಲ್ಲ ದಂಡೀಗೆ ಸವನೀರೇ
ನೀವೆಲ್ಲ ದಂಡೀಗೆ ಸವನೀಸುಂಗಾರಾಗಿ
ಬಂದೀ ಬೀದ್ಯಲ್ಲೇ ನಿಲಬೇಕೇ
ಕೋವ್ಯೋರೇಳೀರೇ ಕತ್ಯವ್ರು ಸವನೀರೇ
ಚೋಣೆಂಬು[೫೮] ಬಲವೇ ಸವನೀರೇ[೫೯]
ಚೋಣೆಂಬು ಬಲವೇ ಸವನೀಸುಂಗಾರಾಗೇ
ಬಂದೀ ಬೀದ್ಯಲ್ಲೇ ನಿಲಬೇಕೇ
ಬಂದೀ ಬೀದ್ಯಲ್ಲೇ ನಿಲಬೇಕು ಸೀಗ್ರೋರೆ
ದಂಡಗ ಕುಚವಾಗೇ[೬೦] ಬರಬೇಕೇ
ದಂಡಗ ಕುಚವಾಗೇ ಬರಬೇಕು ಅಂದೇಳಿ
ದಂಡನ ಕರವೊಂದ ಮುಗೀಸಾನೆ
ದಂಡನ ಕರವೊಂದ ಮುಗೀಸಾನೆ ಅಬಿಮನ್ಯು
ತನ್ನಲರಮನಗೆ ಬರೋವಾನೆ
ತನ್ನಲರಮನಗೆ ಬರವಾನೆ ಅಬಿಮನ್ಯು
ಬಂದೀ ಬಾಗಲ್ಲೇ ನಿಲವಾನೆ ।
ಬಂದೀ ಬಾಗಲ್ಲೇ ನಿಲವಾನೆ ಅಬಿಮನ್ಯು
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯು
ಪಟ್ಟೆ ಮಂಚದಲೆ ಕುಳತಾನೆ
ಪಟ್ಟೆ ಮಂಚದಲಿ ಕುಳವದ್ನು ತಾಯವ್ವಿ
ಮಾಳೂಗಿ ಒಳಗೆ ನೆಡದಾಳೆ
ಅಟ್ಟದ ಮ್ಯೆನೀನ ಪುಟ್ಟೂಟಿ ಸಣ್ಣಕ್ಕೀಯಾ
ಅನ್ನಾ ಮ್ಯಾಗರಕೆ[೬೧] ಅನೂಮಾಡೇ

---

೫೭. ಯುದ್ಧ ಕರೆಗೆ ೫೮. ಮುಂದಳ ೫೯. ಹೊರಡಿರಿ ೬೦. ಹರೆಯದವರಾಗಿ ೬೧. ಮೇಲೋಗದ

ಮಾಳೂಗಿ ಒಳಗೀನ ಹಾಲೂ ಹಳ್ಳಗನಕ್ಕಿ
ಹಾಲೂ ಪಾಯಸಕೆ ಅನೂಮಾಡೇ
ಹಿತ್ತಲ ಕಣಕೀನ[೬೨] ಗಟ್ಟು[೬೩] ಕೆಂಬರಗೀಯ
ಬುಟ್ಟೆಣ್ಣೆ ಕಿಟ್ಟೇ ಬೆಗರಿಸೆ
ಬೇಲೀಮ್ಯೆನೀನಾ ದಾರೇ ಹೀರೆಕಾಯ
ದಾರಿಯನರದೇ ಮಿಣಸಿಟ್ಟೇ
ಹರದಬ್ಬು[೬೪] ಬಾಳೀಯೇ ಮುರದಬ್ಬು[೬೫] ತೊಂಡೀಯೇ
ಪಲಬರು ಸೊಪ್ಪೇ ಬಸಳಿಯೇ
ಪಲಬರು ಸೊಪ್ಪೇ ಬಸಳಿ ಕೊಡಿಯಾ ತಂದೇ
ತುಪ್ಪಾದಲ್ಲದರ ಹದಮಾಡೇ
ಹಿಂಡಾಗುಳ್ಳೀಕಾಯಿ ಬಲ್ಲಾ ನಿಲ್ಲೀಕಾಯೇ
ಕಲ್ಲೊಡದೇ ಬೆಳುವಾ ಕಣಲಿಯೇ[೬೬]
ಕಲ್ಲೊಡದೇ ಬೆಲುವಾ ಕಣಲೀ ಸೂಸಿಕದಾ
ಎಲ್ಲಾ ಮ್ಯೆಗರಕು ಕಡರಿತೇ[೬೭]
ಎಲ್ಲಾ ಮ್ಯೆಗರಕು ಕಡರಿತೇ ಕಜ್ಜಯವಾ
ಅನುಮಾಡ್ಯರೊಂದೂ ಗಳಗ್ಯಲ್ಲೇ
ಅನುಮಾಡ್ಯರೊಂದು ಗಳಗ್ಯಲ್ಲೇ ಅಜ್ಜಮ್ಮ
ಮಾಳಗ್ಗಿಂದ್ಹೆರಗೆ ಬರೋವಾಳೆ
ಮಾಳಗ್ಗಿಂದ್ಹೆರಗೆ ಬರುವಾಳು ಅಜ್ಜಮ್ಮ
ಬಚ್ಚಲರಮನಗೆ ನೆಡದಾಳೆ
ಬಚ್ಚಲರಮನಗೆ ನೆಡದಾಳೆ ಅಜ್ಜಮ್ಮ
ಬಚ್ಚಲಗೆ ನೀರಾ ಎರದಾಳೆ
ಬಚ್ಚಲಗೆ ನೀರಾ ಎರದಾಳೆ ಅಜ್ಜಮ್ಮ
ಬಚ್ಚಲಗೆ ಕಿಚ್ಚಾ ಉರೀಸಾಳೆ
ಬಚ್ಚಲಗೆ ಕಿಚ್ಚಾ ಉರೀಸಾಳೆ ಅಜ್ಜಮ್ಮ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಅಜ್ಜಮ್ಮ
ಎಣ್ಣೀಯಾ ಗಿಂಡೀ ತಡದಾಳೆ
ಎಣ್ಣೀಯಾ ಗಿಂಡೀ ತಡದಾಳೆ ಅಜ್ಜಮ್ಮ
ಹೊನ್ನಮಣೆಯೊಂದ ತಡದಾಳೆ
ಹೊನ್ನಮಣೆಯೊಂದ ತಡದಾಳೆ ಅಜ್ಜಮ್ಮ

---

೬೨. ಕಡೆಗಿನ ೬೩. ಗಟ್ಟಿ ೬೪. ಹರಿದು ಹಬ್ಬುವ ೬೫. ಮುರಿದು ಹಬ್ಬುವ ೬೬. ಬಿದಿರ ಮೊಳಿಕೆ
೬೭. ಬಹಳ ರುಚಿ

ಬಚ್ಚಲರಮನಗೆ ನೆಡದಾಳೆ
ಬಚ್ಚಲರಮನಗೆ ನೆಡವದ್ನು ಅಬಿಮನ್ಯು
ಬಚ್ಚಲರಮನಗೆ ನೆಡದಾನೆ
ಬಚ್ಚಲರಮನಗೆ ನೆಡವದ್ನು ಅಜ್ಜಮ್ಮ
ಹೊನ್ನಮಣೆಯೊಂದ ಮಡಗಾಳೆ
ಹೊನ್ನಮಣೆಯೊಂದ ಮಡಗ್ವದ್ನು ಅಬಿಮನ್ಯು
ಮಣೆಯ ಮ್ಯೆನೋಗಿ ಕುಳತಾನೆ
ಮಣೆಯ ಮ್ಯೆನೋಗಿ ಕುಳವದ್ನು ಅಬಿಮನ್ಯನ
ಕೇಸಪ್ಪ ಮೊಗಟಾ[೭೮] ಸೆಡಲಿಸೇ
ಕೇಸ ಬಿಡಸಿದರೆ ಸೂಸಿದವೆ ಮಲ್ಲೂಗಿ
ದೇಸದಲಿದ್ದೇಳು ಗಿಳೀ ಬಂದೇ
ದೇಸದಲಿದ್ದೇಳು ಗಿಳೀ ಬಂದೇ ಅಬಿಮನ್ಯುನ
ಕೇಸದ ಮಲ್ಲಗಿಯಾ ಕುಸಮಾಕೇ[೭೯]
ಕೇಸ ಬಿಡಸಿದವೆ ಚೆಲ್ಲಿದವೆ ಮಲ್ಲೂಗೆ
ಗಂಗೀಲಿದ್ದೇಳು ಗಿಳೀ ಬಂದೇ
ಗಂಗೀಲಿದ್ದೇಳು ಗಿಳಿ ಬಂದೇ ಅಬಿಮನ್ಯುನ
ಚೆಲ್ಲದ ಮಲ್ಲುಗಿಯಾ ಕುಸಮಾಕೇ
ಚೆಲ್ಲದ ಮಲ್ಲುಗಿಯಾ ಕುಸಮಾಕೇ ಅಜ್ಜಮ್ಮ
ಎಣ್ಣೀಯಾ ಗಿಂಡಿ ಬಲಗೈಲಿ
ಎಣ್ಣೀಯಾ ಗಿಂಡಿ ಬಲಗೈಲಿ ತಡಕಂಡಿ
ನೆತ್ತೀಗೆ ಎಣ್ಣೀ ಎರದಾಳೆ
ಎಣ್ಣೀ ಉದ್ವಾಗೆ ಹನ್ನೆಯ್ಡು ಸಾವರಮಂದಿ
ಬೆನ್ನ ತಿಕ್ವರೆ ಕಡೀಯಲ್ಲ[೮೦]
ಬೆನ್ನ ತಿಕ್ವರೆ ಗಡಿಯಲ್ಲ ಅಬಿಮನ್ಯುನ
ಎಣ್ಣೀಯ ಜಳಕ ಮುಗೀದಾವೆ
ಎಣ್ಣೀಯ ಜಳಕ ಮುಗೀದಾವೆ ಅಬಿಮನ್ಯ
ಬಚ್ಚಲ ಕಲಮ್ಯೆನೆ ಕುಳವದ್ನು ಅಜ್ಜಮ್ಮ
ಸೀಗೇ ಬಾಗ್ಯವ ತಲಗುದ್ದೇ
ಸೀಗೇ ಬಾಗ್ಯವ ತಲಗುದ್ದೇ ಅಜ್ಜಮ್ಮ
ನೆತ್ತೀಗೆ ನೀರಾ ಎರದಾಳೆ
ಕಾಲಾತಿಕ್ವರೆ ಹನ್ನೆರಡ್ ಸಾವರಮಂದಿ

೭೮. ಕೂದಲ ಗಂಟು ೭೯. ಹೂವಿಗೆ ೮೦. ಮಿತಿಯಿಲ್ಲ

ಬೆನ್ನ ತಿಕ್ವರೆ ಗಡೀಯಲ್ಲ
ಬೆನ್ನ ತಿಕ್ವರೆ ಗಡಿಯಲ್ಲ ಅಬಿಮನ್ಯುನ
ಮಿಯ್ಯಣದ ಜಳಕ ಮುಗೀದಾವೆ
ಮಿಂದಾನೊಗದಾನೆ ಮಿಂದ್ ಮಡಿಯುಟ್ಟಾನೆ
ಮಿಂದೇ ಚಂಡಕಿಯಾ ಕುಡಗಾನೆ
ಮಿಂದೇ ಚೆಂಡಕಿಯಾ ಕುಡಗಾನೆ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯು
ದೇವರ ಪೂಜ್ಯಕೆ ಕುಳತಾನೆ
ದೇವರ ಪೂಜ್ಯಕೆ ಕುಳತಾನೆ ಅಬಿಮನ್ಯು
ಹಣ್ಣೂ ಈಳ್ಯವ ಹರಗಾನೆ
ಹಣ್ಣೂ ಈಳ್ಯವ ಹರಗಾನೆ ಅಬಿಮನ್ಯು
ದೂಪದೀಪೆಲ್ಲ ಕಸೀದಾನೆ
ದೂಪದೀಪೆಲ್ಲ ಕಸೀದಾನೆ ಅಬಿಮನ್ಯು
ದೇವರಿಗಾರತಿಯಾ ಬೆಳಗಾನೆ
ದೇವರಿಗಾರತಿಯಾ ಬೆಳಗಾನೆ ಅಬಿಮನ್ಯು
ಕಾಯೊಡದೇ ಕಯ್ಯಾ ಮುಗೀದಾನೆ
ಕಾಯೊಡದೇ ಕಯ್ಯಾ ಮುಗದಾನೆ ಅಬಿಮನ್ಯು
ತುಳಸಿ ತೀರತವ ಕುಡೀದಾನೆ
ತುಳಸಿ ತೀರತವ ಕುಡೀದಾನೆ ಅಬಿಮನ್ಯು
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡವದ್ನು ತಾಯವ್ವಿ
ಹೊನ್ನಮಣೆಯೊಂದ ಮಡಗಾಳೆ
ಹೊನ್ನಮಣೆಯೊಂದ ಮಡಗ್ವದ್ನು ಅಬಿಮನ್ಯು
ಮಣೆಯ ಮ್ಯೆನೋಗಿ ಕುಳತಾನೆ
ಮಣೆಯ ಮ್ಯೆನೋಗಿ ಕುಳವದ್ನು ತಾಯವ್ವಿ
ತಿರಳಬಾಳೆಲಿಯ ತಳದ್ಹಾಸೇ
ತಿರಳಬಾಳೆಲಿಯ ತಳದ್ಹಾಸೇ ತಾಯವ್ವಿ
ಅನ್ನ ಮ್ಯಾಗ್ರವ ಬಡಸಾಳೆ
ಅನ್ನ ಮ್ಯಾಗ್ರವ ಬಡಸಾಳೆ ತಾಯವ್ವಿ
ಹಾಲೂ ಪಾಯಸವ ಬಡಸಾಳೆ
ಹಾಲೂ ಪಾಯಸವ ಬಡಸದ್ನು ಅಜ್ಜಮ್ಮ
ತುಪ್ಪಸೆಕ್ಕರಿಯ ಎರದಾಳೆ

ತುಪ್ಪಸಕ್ಕರಿಯ ಎರದು[೭೧] ತಿರಗುರಟಗೇ[೭೨]
ಆಗೊಂದು ಮಾತ ನುಡೀದಾನೆ
ನನ್ನಮ್ ಬಡಸಾಳೆ ಹೊಸಕಂಪನ ತುಪ್ಪಾವ
ದೆಸೆನಾಲ್ಕು ದಿಕ್ಕೇ ಎಸದಾವೆ
ದೆಸೆನಾಲ್ಕು ದಿಕ್ಕೇ ಎಸದಾವೆ ನನ್ನಮ್ಮನ
ದಂಡನ ಕ್ವೊಟ್ಯಲ್ಲೇ ಹೊಗಳುವೆ
ನನ್ನಮ್ ಬಡಸಾಳೆ ಹೊಸಕಂಪನ ತುಪ್ಪಾವ
ದೆಸೆನಾಲ್ಕು ದಿಕ್ಕೇ ಎಸದಾವೆ
ದೆಸೆನಾಲ್ಕು ದಿಕ್ಕೇ ಎಸದಾವೆ ನನ್ನಜ್ಜಿಯ
ದಂಡನ ಮಂದ್ಯಲ್ಲೇ ಹೊಗಳುವೆ
ದಂಡನ ಮಂದ್ಯಲ್ಲೆ ಹೊಗಳುವೆನೆಂದೆ
ಉಂಡೆದ್ದನೊಂದು ಗಳಗ್ಯಲ್ಲೇ
ಉಂಡನೂಟವ ತೊಳದನೆ ಎಂಜಲ ಮೊಕವ
ತೂಗು ಮಂಚದಲೆ ಕುಳತಾನೆ
ತೂಗು ಮಂಚದಲೆ ಕುಳವದ್ನು ಅತ್ತೆಸೊಸೆ
ತಮ್ಮೊಟಕಲ್ಲೆ ಎಡೆಮಾಡೆ
ತಮ್ಮೊಟಕಲ್ಲೆ ಎಡೆಮಾಡಡಗಿ ಬಡಸೆ
ಉಂಡೆದ್ದರೊಂದು ಗಳಗ್ಯಲ್ಲೆ
ಉಂಡರೂಟವ ತೊಳದರೆ ಎಂಜಲ ಮೊಕವಾ
ಎಂಜಲ ಮೈಲಗಿಯ ತೆಗದಾರೆ
ಎಂಜಲ ಮೈಲಗಿಯ ತೆಗದಾಳೆ ತಾಯವ್ವಿ
ಬೆಳ್ಳೀ ಸಂಬಳಗಿ ಬೆಳೀ ಎಲೆ
ಬೆಳ್ಳೀ ಸಂಬಳಗಿ ಬೆಳಿಯೆಲಡಕೀಬಾಗ
ಹಾಲಿನಲಿ ಬೆಂದ ತೆನೆಸುಣ್ಣ
ಹಾಲಿನಲಿ ಬೆಂದ ತೆನೆಸುಣ್ಣ ತಡಕಂಡೇ
ಮಾಳಗ್ಗಿಂಧ್ವೆರಗೆ ಬರವಾಳೆ
ಮಾಳಗ್ಗಿಂಧ್ವೆರಗೆ ಬರವಾಳು ತಾಯವ್ವಿ
ಮಗನ ಒಡನೋಗಿ ಕುಳತಾಳೆ
ಮಗನ ಒಡನೋಗಿ ಕುಳತಾಳೆ ತಾಯವ್ವಿ
ತಾನೊಂದೀಳ್ಯವ ಮೆಲವಾಳೆ
ತಾಯೀ ಕೊಟ್ಟೀಳ್ಯವ ತಟ್ಟನೆ ತಡದಾನೆ
ಸೋದೀಸೊಂದೀಳ್ಯ ಮೆಲವಾನೆ

೭೧. ಬಡಿಸಿ ೭೨. ತಿರುಗುವಷ್ಟರಲ್ಲಿ

ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ಕುಳತ ಗದ್ದಗಿಯಾ ಜಡದೆದ್ದೇ
ಕುಳತ ಗದ್ದಗಿಯಾ ಜಡದೆದ್ದೇ ಅಬಿಮನ್ಯು
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯ
ಅಟ್ಟದ ಪೆಟ್ಟಗಿಯ ತೆಗದಾನೆ
ಅಟ್ಟದ ಪೆಟ್ಟಗಿಯ ತೆಗದಾನೆ ಅಬಿಮನ್ಯ
ಮೆಟ್ಟೀ ಬೀಗವ ಕರೀದಾನೆ
ಮೆಟ್ಟೀ ಬೀಗವ ಕರಿದಾನೆ ಅಬಿಮನ್ಯ
ಮುಚ್ಚೀಲ ತೆಗದೇ ಕಡಗಿಟ್ಟೇ
ಮುಟ್ಟೀಳ ತೆಗದೇ ಕಡಗಿಟ್ಟೇ ಅಬಿಮನ್ಯ
ಪಟ್ಟೆ ಜೋತುರವ ನೆರದುಟ್ಟೇ
ಪಟ್ಟೆಜೋತುರವ ನೆರದುಟ್ಟೇ ಅಬಿಮನ್ಯ
ಜೋಡುನ್ಯೆವಳವ ಇಡಲಿಟ್ಟೆ
ಜೋಡುನ್ಯೆವಳವ ಇಡಲಿಟ್ಟೆ ಅಬಿಮನ್ಯು
ಬಣ್ಣದ ನೆರಿಯಂಗಿ ಬುಜಕಿಟ್ಟಿ
ಬಣ್ಣದ ನೆರಿಯಂಗಿ ಬುಜಕಿಟ್ಟೇ ಅಬಿಮನ್ಯ
ಮುತ್ತಿನ ಮುಂಡೆಸವ ತಲೆಸುತ್ತೇ
ಮುತ್ತಿನ ಮುಂಡೆಸವ ತಲೆಸುತ್ತೇ ಅಬಿಮನ್ಯ
ತನ್ನ ಕೈಚೆಂಚಿ ಹಡಪಕೆ
ತನ್ನ ಕೈಚೆಂಚಿ ಹಡಪಕಿಟ್ಟೀಕಂಡಿ
ಪೆಟ್ಟಗಿ ಬಾಯಲ್ಲೇ ಮಡಗಾನೆ
ಪೆಟ್ಟಗಿ ಬಾಯಲ್ಲೆ ಮಡಗಾನೆ ಅಬಿಮನ್ಯ
ಮೆತ್ಗಿಂದು ಕೆಳಗೆ ಇಳದಾನೆ
ಮೆತ್ಗಿಂದು ಕೆಳಗೆ ಇಳದಾನೆ ಅಬಿಮನ್ಯ
ಸಂವ್ನಬಂದಿ ಬಾಗಲ್ಲೇ ನಿಲವಾನೆ
ಸವ್ನಬಂದಿ ಬಾಗಲ್ಲೇ ನಿಲವದ್ನು ತಾಯವ್ವಿ
ಆಗೊಂದು ಮಾತಾ ನುಡೀದಾಳೆ
ಕಾಳಗಕಂದರೆ ಕಲಿಯಾದೆ ಅಬಿಮನ್ಯ
ಆಳಾದೆ ನೀನು ಅರಸಾದೆ
ಆಳಾದೆ ನೀನು ಅರಸಾದೆ ಸ್ವೊದರದಾ
ಮಾವನ ಮಗಳಲ್ಲೇ ನೆರದಾಳೆ
ಮಾವನ ಮಗಳಲ್ಲೇ ನೆರದಾಳೆ ಅಬಿಮನ್ಯ

ಹೋಗಿ ಬೋಗಿಸಲೆ ದರಿಯನೊ[೭೩]
ಹೋಗಿ ಬೋಗಿಸಲೆ ಬಲ್ಲೆನಾನೆ ತಾಯೆ
ದಂಡೀಗ್ಹರಸಿ ತನ್ನ ಕಳಗಿಸೆ
ಮಾವನ ಮನೆಯಲ್ಲಿ ಈಳುಂಟೇ ಬಾಳುಂಟೇ
ಕೂದೂವಕೇಳೂ ಗಿಳಿಯುಂಟೆ
ಕಾಳಗಕಂದರೆ ಕಲಿಯಾದೆ ಅಬಿಮನ್ಯು
ಆಳಾದೆ ನೀನು ಅರಸಾದೆ
ಆಳಾದೆ ನೀನು ಅರಸಾದೆ ಸ್ವೊದರದಾ
ಅತ್ತೀ ಮಗಳಲ್ಲೇ ನೆರದಾಳೆ
ಅತ್ತೀ ಮಗಳಲ್ಲೇ ನೆರದಾಳೆ ಅಬಿಮನ್ಯ
ಹೋಗಿ ಬೋಗಿಸಲೆ ದರಿಯನೊ
ಹೋಗಿ ಬೋಗಿಸಲೆ ಬಲ್ಲೆ ಕಾಣೆ ಅಜ್ಜಿ
ದಂಡೀಗ್ಹರಸಿ ತನ್ನಾ ಕಳಗಿಸೆ
ದಂಡೀಗ್ಹರಸಿ ತನ್ನಾ ಕಳಗೀಸು ಅಂದ್ಹೇಳಿ
ಆನೀ ಕಂಬೀನ ಆನಿ ಬಿಡಸಾನೆ
ಆನೀ ಕಂಬನಾನಿ ಬಿಡಸಾನೆ ಅಬಿಮನ್ಯ
ಬೋರಿನೆ ಆನೆ ರತವೇರೆ
ಬೋರೀನೆ ಆನಿ ರತವೇರಿ ಅಬಿಮನ್ಯು
ಬಂದಿ ಬಾಗಲ್ಲೇ ನಿಲವಾನೆ
ಬಂದಿ ಬಾಗಲ್ಲಿ ನಿಲವದ್ನು ತಾಯವ್ವಿ
ಮುತ್ತನೇ ಕುಟ್ಟೇ ಹುಡೀಮಾಡೇ
ಮುತ್ತನೇ ಕುಟ್ಟೇ ಹುಡಿಮಾಡೇ ಪುಡಮಾಡೇ
ಮುತ್ತೀನಾರತಿಯಾ ಗೆಯೀದಾಳೆ
ಮುತ್ತೀನಾರತಿಯಾ ಗೆಯ್ದಾಳೆ ತಾಯವ್ವಿ
ಮಾಳಗ್ಗಿಂದ್ಹೆರಗೆ ಬರವಾಳೆ
ಮಾಳಗ್ಗಿಂದ್ಹೆರಗೆ ಬರುವಾಳು ಅಬಿಮನ್ನಿನ
ದಂಡೀಗಾರತಿಯಾ ಬೆಳಗಾಳೆ
ದಂಡೀಗಾರತಿಯಾ ಏನಂದಿ ಬೆಳಗಾಳೆ
ಈರನಾಲಿ ಸೂರಾ ಕಲಿಯಾಲೆ
ಈರನಾಲಿ ಸೂರ ಕಲಿಯಾಲಿ ಕಾಯಾಲೇ
ನೂರಾಳ ಕಡದೇ ಮನಗೇ ಬರಲಿ
ನೂರಾಳ ಕಡದಿ ಮನಗ್ ಬರಲಿ ಅಂದ್ಹೇಳಿ

೭೩. ಅರಿಯನು

ದಂಡೀಗಾರತಿಯಾ ಬೆಳಗಾಳೆ
ದಂಡೀಗಾರತಿಯಾ ಬೆಳಗ್ವದ್ನು ಆರೂತಿ
ಕೊಡಿಯೆಯ್ದ್ಡೂ ಆಗಿ ಹೊಳದಾವೇ
ಕೊಡಿಯೆಯ್ದ್ಡು ಆಗಿ ಹೊಳವದ್ನು ತಾಯವ್ವಿ
ಬಿದ್ದ ಬಿದ್ದಲ್ಲೇ ಮರಗಾಳೆ
ಬಿದ್ದ ಬಿದ್ದಲ್ಲೇ ಮರಗ್ವದ್ನು ತಾಯವ್ವಿ
ಬಿದ್ದ ಬಿದ್ದಲ್ಲೇ ಮರಗಾಳೆ
ಬಿದ್ದ ಬಿದ್ದಲ್ಲೇ ಮರಗ್ವದ್ನು ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಬಾಳೀ ಸುಳಿಯಲ್ಲಿ ಬಾಕೊಂದಾ ಮಸದಿರುವೆ
ತಾಯೇ ನೀ ಚಿಂತೀ ಬಿಡಬ್ಯೆಡಾ
ತಾಯೇ ನೀ ಚಿಂತೀ ಬಿಡಬ್ಯೆಡಾ ತನ್ನಾಲಾ
ಹಗೆಯವ್ನ ತಲಿಯಾ ಹಗಲ್ತರುವೆ
ಹಗೆಯವ್ನ ತಲಿಯಾ ಹಗಲ್ತರುವೆ ಇರುಳೂತರುವೆ
ತಾಯೇ ನೀ ಚಿಂತೀ ಬಿಡಬ್ಯೆಡಾ
ಲಿಂಬಿ ಹುಳಿಯಲ್ಲೇ ಅಂಬೊಂದ ಮಸದಿರುವೆ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ ತನ್ನಾಲಾ
ಹಗೆಯವ್ನ ತಲಿಯಾ ಹಗಲ್ತರುವೆ
ಹಗೆಯವ್ನ ತಲಿಯಾ ಹಗಲ್ತರುವೆ ಇರುಳೂತರುವೆ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ
ಅಜ್ಜೀ ನೀ ಚಿಂತೀ ಬಿಡಬ್ಯೆಡಾ ಅಂದ್ಹೇಳೆ
ಆನಿಗೆ ಚಬಕದಲೆ ಒಗದಾನೆ
ಆನಿಗೆ ಚಬಕದಲೆ ಒಗದಾನೆ ಅಬಿಮನ್ಯ
ಸುರಲೋಕದ ಗೆಂಟೀ ನುಡೀಸಾನೆ
ಕೆಂದೂಳ್ಹಾರೀತೇ[೭೪] ಕೆನ್ನಿಗೆ ಬೆಸಲುಡಿಯೂತೇ[೭೫]
ಆಕಾಸಕ ದೂಳು ಎಸೀಯಾತೇ[೭೬]
ಆಕಾಸಕ ದಳು ಎಸೀಯಾತೇ ಅಬಿಮನ್ಯ
ಹಾರ್ವರ ಕೇರಿಮ್ಯೆನೆ ನೆಡದಾನೆ
ಹಾರ್ವರ ಕೇರಿಮ್ಯೆನೆ ನೆಡವದ್ನು ಹಾರೂತೀರು
ಅರಗೀ ನೋಡಿದರೆ ಹೆರಗೊಮ್ಮೆ
ಹನ್ನೆಯ್ದ್ಡುರಸೀನ ಸೆಣ್ಣ ಅಬಿಮನ್ಯುವ

೭೪. ಹಾರಿಸುತ ೭೫. ಬಿಸಿಲು ಬಡಿಯುತ್ತ ೭೬. ಹಾರಿಸುತ್ತ ೭೭. ಸುಮ್ಮನೆ

ಕಾಳಗಕಿನ್ನೆಂಗೇ ಕಳಗಾರೆ
ಕಾಳಗಕಿನ್ನೆಂಗೇ ಕಳಗಾರೆ ಅಂದ್ದೇಳೇ
ಮುತ್ನ ಕಣ್ಣೀರಾ ಸೆಡೀದಾರೆ
ಹಾರೂತಿರು ತಮ್ಮಾ ಪಾವನಾಸರವ ಕಳಚೇ
ಅಬಿಮನ್ಯುನ್ ಕೊರಳೀಗೆ ಇಡವಾರೆ
ಅಬಿಮನ್ಯುನ್ ಕೊರಳೀಗೆ ಇಡವಾರು ಹಾರೂತೀರು
ತಾವ್ ಬೆನ್ನಗಾಗಿ[೭೭] ಕುಳತಾರೆ
ತಾವ್ ಬೆನ್ನಗಾಗಿ ಕುಳವದ್ನು ಅಬಿಮನ್ಯ
ಸೆಟ್ಟರ ಕೇರಿಗಾಗಿ ನೆಡದಾನೆ
ಸೆಟ್ಟರ ಕೇರಿಗಾಗಿ ನೆಡವದ್ನು ಸೆಟ್ಟೂತೀರು
ಅರಗೀ ನೋಡಿದರೆ ಹೆರಗೊಮ್ಮೆ
ಅರಗೀ ನೋಡಿದರೆ ಹೆರಗೊಮ್ಮೆ ಸೆಟ್ಟೂತೀರು
ಆಗೊಂದು ಮಾತಾ ನುಡೀದಾರೆ
ಇಪ್ಪತ್ತೊರಸೀನ ಚಿಕ್ಕ ಅಬಿಮನ್ನೂನ
ಕಾಳಗಕಿನ್ನೆಂಗೇ ಕಳಗಾರೆ
ಕಾಳಗಕಿನ್ನೆಂಗೇ ಕಳಗಾರೆ ಅಂದೇಳೇ
ಮುತ್ನ ಕಣ್ಣೀರಾ ಸೆಡೀದಾರೆ
ಸೆಟ್ಟೂತಿರು ತಮ್ಮ ಮುತ್ತಿನ ಸರವಾ ಕಳಚಿ
ಅಬಿಮನ್ಯುನ್ ಕೊರಳೀಗೆ ಇಡವಾರೆ
ಅಬಿಮನ್ಯುನ್ ಕೊರಳೀಗೆ ಇಡವಾರು ಸೆಟ್ಟೂತೀರು
ತಾವ್ ಬೆನ್ನಗಾಗಿ ಕುಳತಾರೆ
ತಾವ್ ಬೆನ್ನಗಾಗಿ ಕುಳವದ್ನು ಅಬಿಮನ್ಯ
ಸುರಲೋಕದ ಗೆಂಟೀ ನುಡೀಸಾನೆ
ಸುರಲೋಕದ ಗೆಂಟೀ ನುಡೀಸಾನೆ ಅಬಿಮನ್ಯ
ಬೋರಿನೇ ದಾರೀ ನೆಡದಾನೆ
ಕೆಂದೂಳ್ ಹಾರೀತೆ ಕೆನ್ನಿಗೆ ಬೆಸಲೊಡೆಯೀತೆ
ಆಕಾಸಕ ದೂಳು ಎಸೀಯಾತೇ
ಆಕಾಸಕ ದೂಳು ಎಸಿಯಾತೇ ಅಬಿಮನ್ಯ
ರಾಜ ಮಾರ್ಗದಲೆ ನೆಡದಾನೆ
ರಾಜ ಮಾರ್ಗದಲೆ ನೆಡದಾನೆ ಅಬಿಮನ್ಯ
ರಸರಾಳಿಯರರಮನೆಗೆ ನೆಡದಾನೆ
ರಸರಾಳಿಯರರಮನೆಗೆ ನೆಡದಾನೆ ಅಬಿಮನ್ಯ

೭೭. ಸುಮ್ಮನೆ

ಹೋಗಿ ಬಾಗಲ್ಲೇ ನಿಲವಾನೇ
ಹೋಗಿ ಬಾಗಲ್ಲೇ ನಿಲವಾನೇ ಅಬಿಮನ್ಯು
ಆನೀಗಿಂದು ಕೆಳಗೆ ಇಳದಾನೆ
ಆನೀಗಿಂದು ಕೆಳಗೆ ಇಳದಾನೆ ಅಬಿಮನ್ಯು
ಆನೀಕಂಬ್‌ಗಾನೀ ಸೆಳದೇಕಟ್ಟೇ
ಆನೀ ಕಂಬ್ಗಾನಿ ಸೆಳದ್ಕಟ್ಟೇ ಅಬಿಮನ್ಯು
ಬಂದೀ ಬಾಗಲ್ಲೇ ನಿಲವಾನೇ
ಬಂದೀ ಬಾಗಲ್ಲೇ ನಿಲವದ್ನು ರಸರಾಳಿಯರ್
ತಡದಳೆ ಚಂಬಗಲಿ ಉದಕವ
ಅತ್ತೆ ಕೊಟ್ಟುದಕವ ತಟ್ಟಾನೆ ತಡದಾನೆ
ಕಾಲು ಸಿರಿಮೊಕವಾ ತೊಳದಾನೆ
ಕಾಲುಸಿರಿಮೊಕವಾ ತೊಳದಾನೆ ಅಬಿಮನ್ಯು
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯು
ಪಟ್ಟೆ ಮಂಚದಲೆ ಕುಳತಾನೆ
ಪಟ್ಟೆ ಮಂಚದ್‌ಮ್ಯೆನೆ ಕುಳವದ್ನು ರಸರಾಳಿಯರ್ ಮಗಳು
ಓಡ್‌ಬಂದಿ ನಲ್ಲನಾ ತೊಡಿಯಾಮ್ಯೆನೆ
ಓಡ್‌ಬಂದಿ ನಲ್ಲನಾ ತೊಡಿಯಾಮ್ಯೆನೆ ಕುಳತಾಳೆ
ಓಡ್‌ಬಂದಿ ನಲ್ಲನಾ ತೊಡಿಯಾಮ್ಯೆನ್ ಕುಳವದ್ನು
ಮುದ್ದೂ ಮುಂಡಾಡಿ ನೆಗದಾನೆ
ಮುದ್ದೂ ಮುಂಡಾಡಿ ನೆಗದಾನೆ ರಸರಾಳಿಯರು
ತಮ್ಮ ಕೈಚೆಂಚಿ ಬಿಡಸಾರೆ
ತಮ್ಮ ಕೈಚೆಂಚಿ ಬಿಡಸಾರೆ ರಸರಾಳಿಯರು
ಅಬಿಮನ್ಯುಗೊಂದೀಳ್ಯ ಕೊಡವಾರೆ
ಅತ್ತೆ ಕೊಟ್ಟೀಳ್ಯ ತಟ್ಟನೆ ತಡದಾನೆ
ಸೋದೀಸೊಂದೀಳ್ಯ ಮೆಲವಾನೆ
ಎಲಿಯೊಂದ್ ತಿಂದಾನೆ ರಜವಲ್ಲೆ ಉಗಳಾನೆ
ತೊಡಿಯಿಂದು ಕೆಳಗೆ ಇಳೀಯಂದ
ತೊಡಿಯಿಂದೆ ಕೆಳಗೆ ಇಳೀಯಂದ ರಸರಾಳಿಯರ್ ಮಗಳು
ತೊಡೆಗಿಂದು ಕೆಳಗೆ ಇಳುವಾದಿಲ್ಲ
ತನ್ನ ಕೊರಳಾನಾ ಪಾವನ ಸರವಾ ಕಳಚಿ
ತನ್ನ ಸುರಸತಿಯ ಕೊರಳಿಗೆ
ತನ್ನ ಸುರಸತಿಯ ಕೊರಳೀಗಿಟ್ಟೀಗಂಡಿ

ತಾ ಬೆನ್ನಗಾಗೇ ಕುಳತಾನೆ
ತನ್ನ ಕೊರಳಾ ಮುತ್ತನ ಸರವಾ ಕಳಚೇ
ತನ್ನ ಸುರಸತಿಯಾ ಕೊರಳಿಗೆ
ತನ್ನ ಸುರಸತಿಯಾ ಕೊರಳೀಗಿಟ್ಟೀಗಂಡೇ
ತಾ ಬೆನ್ನಗಾಗಿ ಕುಳತಾನೆ
ತಾ ಬೆನ್ನಗಾಗಿ ಕುಳವದ್ನು ರಸರಾಳಿಯರ್ ಮಗಳು
ತೊಡೆಗಿಂದು ಕೆಳಗೆ ಇಳದಾಳೆ
ತೊಡೆಗಿಂದು ಕೆಳಗೆ ಇಳವದ್ನು ಅಬಿಮನ್ಯ
ಕುಳತ ಗದ್ದಗಿಯಾ ಜಡದೆದ್ದೇ
ಕುಳತ ಗದ್ದಗಿಯಾ ಜಡದೆದ್ದು ಅಬಿಮನ್ಯ
ರಾಜಂಗ್ನ ಮೆಟ್ಟ ಇಳದಾನೆ
ರಾಜಂಗ್ನಮೆಟ್ಟ ಇಳದಾನೆ ಅಬಿಮನ್ಯ
ಆನೀ ಕೊಂಬ್ಗಾನಿ ಬಿಡಸಾನೆ
ಆನೀ ಕೊಂಬ್ಗಾನಿ ಬಿಡಸಾನೆ ಅಬಿಮನ್ಯ
ಬೋರೀನೆ ಆನೀ ರತವೇರಿ
ಬೋರೀನೆ ಆನಿ ರತವೇರಿದ್ದನೋಡನೆ ನಾರೆಣದ್ಯೆವ
ತನ್ನಲರಮನಗೆ ನೆಡದಾನೆ
ತನ್ನಲರಮನಗೆ ನೆಡದಾನೆ ನಾರೆಣದ್ಯೆವ
ಹೋಗಿ ಬಾಗಲ್ಲೇ ನಿಲವಾನೇ
ಹೋಗಿ ಬಾಗಲ್ಲೇ ನಿಲವಾನೆ ನಾರೆಣದ್ಯೆವ
ಬಾಗ್ಲೋರಿಗ್ ಬುದ್ದೀ ಒರದಾನೆ
ನನಗಿಂದು ಹಿಂದೆ ಅಬಿಮನ್ಯ ದೊರೆ ಬರತ
ಅಬಿಮನ್ಯುಗ್ ಬಾಗಿಲವ ಬಿಡಬ್ಯೆಡಿ
ಕನಕಾಂಗಿ ಪುರಿಸ ತಾನು ನಾರೆಣ್‌ದ್ಯೆವ್ನಳಿಯಾ ತಾನು
ತನಗೆ ಬಾಗಿಲವಾ ಬಿಡಬೇಕೇ
ತನಗೆ ಬಾಗಿಲವಾ ಬಿಡಬೇಕು ಅಂದಾರೆ
ಅವ ತೊಟ್ಟ ಪಟ್ಟೀ ಉಡಗೇರಿ
ಅವ ತೊಟ್ಟ ಪಟ್ಟೀ ಉಡಗೇರಿ ಕೊಟ್ಟರೆ
ತಡದಾ ಬಾಗಿಲವ ಬಿಡಬೇಕೋ
ತಡದಾ ಬಾಗಿಲವ ಬಿಡಬೇಕು ಅಂದೇಳಿ
ಮುಂದನ ಬಾಗಲಕೆ ನೆಡದಾನೆ
ಮುಂದನ ಬಾಗಲಕೆ ನೆಡದಾನೆ ನಾರೆಣದ್ಯೆವ
ಬಾಗ್ಲರಿಗೆ ಬುದ್ದೀ ಒರದಾನೆ

ನನಗಿಂದ ಹಿಂದೆ ಅಬಿಮನ್ಯ ದೊರೆ ಬರತ
ಅಬಿಮನ್ಯುಗ್ ಬಾಗಿಲವ ಬಿಡಬ್ಯೆಡಿ
ಆರಾಯ್ಣದ್ಯೆವನಳಿಯಾ ತಾನು ಕನಕಾಂಗಿ ಪುರಿಸ ತಾನು
ತನಗೆ ಬಾಗಿಲವಾ ಬಿಡಬೇಕು
ತನಗೆ ಬಾಗಿಲವಾ ಬಿಡಬೇಕು ಅಂದಾರೆ
ತಡದಾ ಬಾಗಿಲವ ಬಿಡಬ್ಯೆಡಿ
ತಡದಾ ಬಾಗ್ಲವ ಬಿಡಬ್ಯೆಡಿ ಬಾಗ್ಲೋರೆ
ಅವತೊಟ್ಟ ಪಟ್ಟಿ ಉಡಗೇರಿ
ಅವ ತೊಟ್ಟ ಪಟ್ಟೀ ಉಡಗೇರಿ ಕೊಟ್ಟರೆ
ತಡದಾ ಬಾಗಿಲವ ಬಿಡಬೇಕು
ತಡದಾ ಬಾಗಿಲವ ಬಿಡಬೇಕು ಅಂದೇಳಿ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ನಾರೆಣದ್ಯೆವ
ಪಟ್ಟೆ ಮಂಚದಲೆ ಕುಳತಾನೆ
ಪಟ್ಟೆ ಮಂಚದ್ಮ್ಯೆನೆ ಕುಳವದ್ನು ಕನಕಾಂಗಿ
ಓಡ್ಬಂದಪ್ಪನಾ ತೊಡಿಯಾಮ್ಯೆನೆ
ಓಡ್ಬಂದಪ್ಪನ ತೊಡಿಮ್ಯೆನೆ ನಾರೆಣದ್ಯೆವ
ಮುದ್ದ ಮುಂಡಾಡಿ ನೆಗದಾನೆ
ಮುದ್ದ ಮುಂಡಾಡಿ ನೆಗದೆ ಕೂಡಿಸಿಗಂಡಿ
ಮಂದೂರಿಗ್ ಬುದ್ದೀ ಒರದಾನೆ
ನನಗಿಂದು ಹಿಂದೆ ಅಬಿಮನ್ಯ ದೊರೆ ಬರತ
ಏನೇಳಿ ಮಗಳೆ ಹರಸೂವೆ
ಏನೇಳಿ ಮಗಳೆ ಹರಸೂವೆ ಅಂಬದ್ನು
ಆಗೊಂದು ಮಾತಾ ನುಡೀದಾಳೆ
ಅಪ್ಪಿಂಡಾರು ಅರಸಾಗೆ ಅರಸದರೆ
ಪುರಿಸರಿಗಾಯಸವೇ ಹಿರದಕ್ಕು
ಪುರಿಸರಿಗಾಯಸವೇ ಹಿರದಕ್ಕು ಅಂಬದನು
ಕನಕಂಗಿಗ್ ಸಾಪ ಇಡವಾನೆ
ಕನಕಂಗಿಗ್ ಸಾಪ ಏನಂದಿ ಇಡವಾನೆ
ಕುನ್ನಾಲಗ್[೭೮] ಕಂತೀ[೭೯] ಮುರೀಯಾಲೆ
ಕುನ್ನಾಲಗ್ ಕಂತೀ ಮುರೀಯಾಲೆ ಕನಕಂಗ್ಯ
ಬಲದ ದ್ಯೆವಟಿಯೇ[೮೦] ತೊಲಗಾಲಿ

೭೮. ಕಿರಿನಾಲಿಗೆ ೭೯. ಮಾಯವಾಗಿ ೮೦. ಧ್ವನಿ ಪೆಟ್ಟಿಗೆ?

ಅಟ್ಟೊಂದು ಮಾತಾ ಹೇಳೀ ಕೇಳೂರೊಟಗೆ
ಕುನ್ನಾಲಗ್ ಕಂತೀ ಮುರೀದಾವೆ
ಕುನ್ನಾಲಗ್ ಕಂತಿ ಮುರೀದಾವೇ ಕನಕಂಗ್ಯ
ಬಲದ ದ್ಯೆಂವಟಿಯೇ ತೊಲಗದೆ
ಪಟ್ಟೀ ಉಟ್ಟಾಳೇ ಮುತ್ತಿನ ಬಟ್ಟಿಟ್ಟಾಳೇ
ಗಟ್ಟ ಮಲ್ಲಗಿಯಾ ಮುಡೀದಾಳೆ
ಗಟ್ಟ ಮಲ್ಲಗಿಯಾ ಮುಡದಾಲೆ ಕನಕಂಗಿ
ಮುತ್ತನ ಸಂಬಳಗಿ ತಡದಾಳೆ
ಮುತ್ತನ ಸಂಬಳಗಿ ತಡದಾಳೆ ಕನಕಂಗಿ
ಮಾಲ್ಯದ ಕಂಬ್‌ಸಾರಿ ನಿಲವಾಳೆ
ಮಾಲ್ಯದ ಕಂಬ್‌ಸಾರಿ ನಿಲವದ್ನು ನಾರೆಣದ್ಯೆವ
ಮಿತ್ತನ ಮ್ಯೆನೋಗೇ ಕುಳತಾನೆ
ಕೆಂದೂಳಾರೀತೇ ಕೆನ್ನಿಗೆ ಬೆಸಲೊಡೆಯಾತೇ
ಆಕಾಸಕೆ ದೂಳೂ ಎಸೀಯಾತೇ
ಆಕಾಸಕೆ ದೂಳ ಎಸಿಯಾತೇ ಅಬಿಮನ್ಯ
ಬಂದೀ ಬಾಗಲ್ಲೇ ನಿಲವಾನೇ
ಬಂದೀ ಬಾಗಲ್ಲೇ ನಿಲವಾನೆ ಅಬಿಮನ್ಯು
ಆನೀಗಿಂದು ಕೆಳಗೆ ಇಳದಾನೆ
ಆನೀಗಿಂದು ಕೆಳಗೆ ಇಳದಾನೆ ಅಬಿಮನ್ಯು
ಆನೀ ಕೊಂಬ್ಗಾನೀ ಸೆಳದೇ ಕಟ್ಟಿ
ಆನಿ ಕಂಬ್ಗಾನಿ ಸೆಳದ್‌ಕಟ್ಟೇ ಅಬಿಮನ್ಯ
ತಿಂಬೂಕಿಕ್ಕನಿಯೇ ಕಡಲೀಯ
ತಿಂಬೂಕಿಕ್ಕನೆ ಕಡಲೀಯ ಅಬಿಮನ್ಯ
ಬಂದೀ ಬಾಗಲ್ಲೇ ನಿಲವಾನೇ
ಬಂದೀ ಬಾಗಲ್ಲೇ ನಿಲವಾನೇ ಅಬಿಮನ್ಯು
ಬಾಗ್ಲರೆ ಬಾಗಿಲವಾ ಬಿಡಬೇಕೇ
ಬಾಗಿಲ ಬಿಡವಾಕೆ ದ್ಯೆವರಪ್ಪಣೆಬೇಕು
ಬಂದವರಿಲ್ಲೇ ನಿಲಬೇಕೇ
ಬಂದವರಿಲ್ಲಿ ನಿಲಬೇಕು ಅಂಬದ್ನು
ಆಗೊಂದು ಮಾತಾ ನುಡೀದಾನೆ
ಕನಕಾಂಗಿ ಪುರಿಸ ತಾನು ನಾರೆಣ್‌ದ್ಯೆವ್ನಳಿಯಾ ತಾನು
ತನಗೆ ಬಾಗಿಲವಾ ಬಿಡಬೇಕು
ತನಗೆ ಬಾಗಿಲವಾ ಬಿಡಬೇಕು ಅಂಬುದ್ನು

ಆಗೊಂದು ಮಾತಾ ನುಡೀದಾರೆ
ನಾರೆಣದ್ಯೆವ್ನಳಿನಾದರೇನು ಕನಕಾಂಗಿ ಪುರಿಸನಾದ್ರೇನು
ನೀನುಟ್ಟ ಪಟ್ಟೀ ಉಡಗೆರಿ
ನೀನುಟ್ಟ ಪಟ್ಟೀ ಉಡಗೇರಿ ಕೊಟ್ಟರೆ
ತಡದಾ ಬಾಗಿಲವಾ ಬಿಡತೇವೆ
ಅಟ್ಟೊಂದು ಮಾತಾ ಕೇಳಾನೆ ಅಬಿಮನ್ಯ
ಒಂದ್ ಸುತ್ತನ ಪಟ್ಟೀ ಬಿಡಸಾನೆ
ಒಂದ್ ಸುತ್ತನ ಪಟ್ಟೀ ಬಿಡಸಾನೆ ಅಬಿಮನ್ಯ
ಬಾಗ್ಲರಿಗುಡಗೆರಿಯಾ ಕೊಡವಾನೆ
ಬಾಗ್ಲರಿಗುಡಗೆರಿಯಾ ಕೊಡವಾನೆ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯ
ಮುಂದನ ಬಾಗ್ಲಕೆ ನೆಡದಾನೆ
ಮುಂದನ ಬಾಗ್ಲಕೆ ನೆಡದಾನೆ ಅಬಿಮನ್ಯ
ಹೋಗಿ ಬಾಗಲ್ಲೇ ನಿಲವಾನೇ
ಹೋಗಿ ಬಾಗಲ್ಲೇ ನಿಲವಾನೇ ಅಭಿಮನ್ಯ
ಬಾಗ್ಲರೆ ಬಾಗಿಲವಾ ಬಿಡಬೇಕೇ
ಬಾಗಿಲ ಬಿಡವಕೆ ದ್ಯೆವರಪ್ಪಣೆಬೇಕು
ಬಂದವರಿಲ್ಲೇ ನಿಲಬೇಕೇ
ನಾರೆಣದ್ಯೆವ್ನಳಿಯಾ ತಾನು ಕನಕಾಂಗಿ ಪುರಿಸ ತಾನು
ತನಗೆ ಬಾಗಿಲವಾ ಬಿಡಬೇಕೇ
ನಾರೆಣದ್ಯೆವ್ನಳಿನಾದ್ರೇನು ಕನಕಾಂಗಿ ಪುರಿಸ್‌ನಾದ್ರೇನು
ನೀ ಉಟ್ಟ ಪಟ್ಟೀ ಉಡಗೆರಿ
ನೀ ಉಟ್ಟ ಪಟ್ಟೀ ಉಡಗೇರಿ ಕೊಟ್ಟರೆ
ತಡದಾ ಬಾಗಿಲವಾ ಬಿಡತೀನೋ
ಅಟ್ಟೊಂದು ಮಾತಾ ಕೇಳಾನೇ ಅಬಿಮನ್ಯ
ಎರಡ್ ಸುತ್ತನ ಪಟ್ಟೀ ಬಿಡಸಾನೆ
ಎರಡ್ ಸುತ್ತನ ಪಟ್ಟೀ ಬಿಡಸಾನೆ ಅಬಿಮನ್ಯ
ಬಾಗ್ಲರಿಗ್ ಉಡಗೆರಿಯಾ ಕೊಡವಾನೆ
ಬಾಗ್ಲರಿಗ್ ಉಡಗೆರಿಯಾ ಕೊಡವದ್ನು ಅಬಿಮನ್ಯುನಾ
ಆಯಿಸವೇ ಸಿರಿಯೇ ತೊಲಗೀತೆ
ಆಯಿಸವೇ ಸಿರಿಯೇ ತೊಲಗೀತೊ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ

ಮಾಳೂಗಿ ಒಳಗೆ ನೆಡವದ್ನು ಅಬಿಮನ್ಯನ
ಬಾವದೀರ್ಥೆರಗೆ ಬರವಾರೆ
ಬಾವಾ ನಿಮ್ಮಲ್ಲಿ ಸಕಲ ಸಾವಿರ ಮಂದಿ
ಯಾವಳ ನಿನ್ನ ಕಿರದಂಗಿ
ಪಟ್ಟಿ ಉಟ್ಟಳಿಯೋ ಮುತ್ತನ ಬಟ್ಟಿಟ್ಟಾಳೆ
ಗಟ್ಟಿ ಮಲ್ಲಗಿಯ ಮುಡೀದಾಳೆ
ಗಟ್ಟಿ ಮಲ್ಲಗಿಯ ಮುಡದಾಳೆ ಬಾವಾ ಕೇಳೋ
ಮುತ್ತನ ಸಂಬಳಗಿ ತಡದಾಳೆ
ಮುತ್ತನ ಸಂಬಳಗಿ ತಡದಾಳ್ ಬಾವಾ ಕೇಳೋ
ಮಾಲ್ಯದ ಕಂಬಸಾರಿ ನಿಲವಾಳೆ
ಮಾಲ್ಯದ ಕಂಬ್‌ಸೇರಿ ನಿಲವಳ್ ಬಾವಾ ಕೇಳೋ
ಆಕೀಯೋ ತನ್ನಾ ಕಿರದಂಗಿ
ಅಟ್ಟೊಂದು ಮಾತಾ ಕೇಳಾನೇ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡವದ್ನು ಅಬಿಮನ್ಯ
ಕನಕಂಗಿ ಒಡನೋಗಿ ನಿಲವಾನೆ
ಕನಕಂಗಿ ಒಡನೋಗಿ ನಿಲವಾನೆ ಅಬಿಮನ್ಯ
ಹೋಗದರ ಸೆರಗ ತಡದಾನೆ
ಹೋಗದರ ಸೆರಗ ತಡದಾನೆ ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ನಾರೆಣದ್ಯೆವನ ಮಗಳು ನಾಡೀಗಪ್ಪಂತೋಳು[೮೧]
ಮಾತಾಡಿದರೆ ಮುತ್ತೂ ಸುರೀವಾದ
ಮಾತಾಡಿದರೆ ಮುತ್ತು ಸುರಿವದಂತ್‌ನಿನ್ನಪ್ಪ
ಮಾತಾಡ್ಬೆಡ ಅಂದ್ ಕುಂದ ನುಡೀದಾರೆ
ನಾರೆಣದ್ಯೆವನ ಮಗ್ಳು ಊರಿಗಪ್ಪಂತೋಳು
ನಗ್ಯಾಡಿದರ ಮುತ್ತು ಸುರೀವದ
ನಗ್ಯಾಡಿದರ ಮುತ್ತು ಸುರಿವದಂತ್ ನಾರೆಣದ್ಯೆವ
ನಗ್ಯಾಡ್ಬೆಡ ಅಂದ್‌ಕುಂದ ನುಡೀದಾನೆ
ಒಂದೊಂದೂ ಮಾತ ಹೇಮಿಸ್[೮೨] ಹೇಳುದಕೇಳಿ
ತಾನಿಟ್ಟ ಸಾಪಾ ಬಿಡವಾನೆ
ತಾನಿಟ್ಟ ಸಾಪಾ ಬಿಡವಾನು ಕನಕಾಂಗಿ
ಮಾಳೂಗಿ ಒಳಗೆ ನೆಡದಾಳೆ

೮೧. ಒಳ್ಳೆಯವಳು ೮೨. ಹೀಯಾಳಿಸಿ

ಮಾಳೂಗಿ ಒಳಗೆ ನೆಡದಾಳೆ ಕನಕಾಂಗಿ
ಬೆಳ್ಳೀ ಸಂಬಳಗೀ ಬೆಳೀಯೆಲೆ
ಬೆಳ್ಳೀ ಸಂಬಳಗೀ ಬೆಳಿಯೆಲಡಕೀಬಾಗ
ಹಾಲಿನಲಿ ಬೆಂದ ತೆನೀಸುಣ್ಣ
ಹಾಲಿನಲಿ ಬೆಂದ ತೆನಿಸುಣ್ಣ ತಡಕಂಡಿ
ಮಾಳಗ್ಗಿಂದ್ಹೆರಗೆ ಬರವಾಳೆ
ಮಾಳಗ್ಗಿಂದ್ಹೆರಗೆ ಬರುವದ್ನು ಅಬಿಮನ್ಯ
ಪಟ್ಟೆ ಮಂಚದಲಿ ಕುಳತಾನೆ
ಪಟ್ಟೆ ಮಂಚದಲಿ ಕುಳವದ್ನು ಕನಕಾಂಗಿ
ಪನ್ನಿ[೮೩] ಮರಿಯಲ್ಲಿ ಮುಗುಳ ನೆಗ್ಗ
ಪನ್ನೀಮರಿಯಲ್ಲಿ ಮುಗುಳ್ನಗ್ಗೆಯಾಡೀತೆ
ನಲ್ಲನೊಡನೋಗಿ ಕುಳತಾಳೆ
ನಲ್ಲನೊಡನೋಗಿ ಕುಳತಾಳೆ ಕನಕಾಂಗಿ
ನಲ್ಲಗೊಂದೀಳ್ಯ ಕೊಡವಾಳೆ
ನಲ್ಲಗೊಂದೀಳ್ಯ ಕೊಡವದ್ನು ಅಬಿಮನ್ಯ
ಎರಡೂ ಕೈಯೊಡ್ಡಿ ತಡದಾನೆ
ಎರಡೂ ಕೈಯೊಡ್ಡಿ ತಡವದ್ನು ನಾರೆಣದ್ಯೆವಾ
ಎಲ ಸರ್ಪನಾಗಿ ಹರದಾನೆ
ಎಲ ಸರ್ಪನಾಗಿ ಹರವದ್ನು ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಹಿಂದೂ ನಮಗ್ವೈರಿ ಮುಂದೂ ನಮಗ್ವೈರಿ
ಯಾವಾಗು ನಿಮ್ಮಪ್ಪ ನಮಗ್ವೈರಿ
ಯಾವಾಗು ನಿಮ್ಮಪ್ಪ ನಮಗ್ವೈರಿ ಕನಕಾಂಗಿ
ಮಾಳೂಗಿ ಹಾಸ ಬಿಡಸ್ಹೋಗೇ
ಮಾಳೂಗಿಗ್ಹಾಸ ಬಿಡಸೊಗೇ ಅಂಬದ್ನು
ಕೂತ ಗದ್ದಗಿಯಾ ಜಡದೆದ್ದಿ
ಕೂತ ಗದ್ದಗಿಯಾ ಜಡದೆದ್ದಿ ಕನಕಾಂಗಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಕನಕಾಂಗಿ
ಮಾಳಗ್ಗೇ ಹಾಸ ಬಿಡಸಾಳೆ
ಮಾಳಗ್ಗೇ ಹಾಸ ಬಿಡಸ್ವದ್ನು ಅಬಿಮನ್ಯ
ಕುಳತ ಗದ್ದಗಿಯಾ ಜಡದೆದ್ದಿ

೮೩. ಗಲ್ಲ

ಕುಳತ ಗದ್ದಗಿಯಾ ಜಡದೆದ್ದಿ ಅಬಿಮನ್ಯ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಅಬಿಮನ್ಯ
ಹಾಸನ ಮೈನೋಗಿ ಒರಗಾನೆ
ಹಾಸನ ಮೈನೋಗಿ ಒರಗ್ವದ್ನು ಕನಕಾಂಗಿ
ತಾನೊಡನೋಗಿ ಒರಗಾಳೆ
ತಾನೊಡನೋಗಿ ಒರಗ್ವದ್ನು ನಾರೆಣದ್ಯೆವ
ಕಟ್ಟೆರುವಾಗಿ ಕಡದಾನೆ
ಕಟ್ಟೆರುವಾಗಿ ಕಡವದ್ನು ಕನಕಾಂಗಿ
ಪಾವನ ಸರಹರದೇ ಮಣೀಚೆಲ್ಲೇ
ಪಾವನ ಸರನ್ಹರದೇ ಮಣಿಚೆಲ್ಲಿ ಕನಕಾಂಗಿ
ಮೈಮುರದೆದ್ದೀ ಕುಳತಾಳೆ
ಮೈಮುರದೆದ್ದೀ ಕುಳತಾಳೆ ಕನಕಾಂಗಿ
ಹರದಾ ಮಣಿಸರವಾ ಸುರೀದಾಳೆ
ಹರದಾ ಮಣಿಸರವಾ ಸುರುವದ್ನು ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಹರದಾ ಮಣಿಸರವ ಹೆಕ್ಕಿ ಸುರುವದಸಲ್ಲ
ಗರತೆರಲಕ್ಷಣಕೆ ಇದು ಸಲ್ಲ
ಗರತೆರಲಕ್ಷಣಕೆ ಇದ ಸಲ್ಲ ಕನಕಾಂಗಿ
ಮಿತ್ತೀಗೇ ಹಾಸ ಬಿಡಸ್ಹೋಗೇ
ಮಿತ್ತೀಗೇ ಹಾಸ ಬಿಡಸ್ಹೋಗು ಅಂದ್ಹೇಳೇ
ಮೈಮುರುದೆದ್ದಿ ಕುಳತಾನೆ
ಮೈಮುರುದೆದ್ದಿ ಕುಳವದ್ನು ಕನಕಾಂಗಿ
ಮಿತ್ತೀಗೇ ಹಾಸ ಬಿಡಸಾಳೆ
ಮಿತ್ತೀಗೇ ಹಾಸ ಬಿಡಸ್ವದ್ನು ಅಬಿಮನ್ಯ
ಹಾಸನ ಮೈನೋಗಿ ಒರಗಾನೆ
ಹಾಸನ ಮೈನೋಗಿ ಒರಗ್ವದ್ನು ಕನಕಾಂಗಿ
ತಾನೊಡನೋಗಿ ಒರಗಾಳೆ
ತಾನೊಡನೋಗಿ ಒರಗ್ವದ್ನು ನಾರೆಣದ್ಯೆವ
ಕಲ್ಲಕೋಳ್ಯಾಗಿ ಸರಗೈಯ್ದ
ಕಲ್ಲಕೋಳ್ಯಾಗಿ ಸರಗೆಯ್ದ ಅಬಿಮನ್ಯ
ಮೈಮುರುದೆದ್ದಿ ಕುಳತಾನೆ
ಕೋಳೀ ಕೂಗದ ಮೈನೆ ಹಿಂಡರ್ಹಾಸಗೆ ಸಲ್ಲ

ಗಂಡೂಸತನಕೇ ಇದು ಸಲ್ಲ
ಗಂಡೂಸತನಕೇ ಇದು ಸಲ್ಲ ಕನಕಾಂಗಿ
ದಂಡೀಗರಸೀ ತನ್ನಾ ಕಳಗೀಸೆ
ದಂಡೀಗೋಗ್ವದಕೆ ಬಂದದ್ದೇ ಮತ್ತೇನೆ
ದಂಡನರು ಕೊಡುವ ಹಗೆಯಂವ್ಗೆ
ದಂಡಕೊಟ್ಟರೆ ಸಿರಿಯರಸು ನಗ್ಯಾಡ್ವ
ಬಂದಟ್ಟೇ ಬರಲಿ ನಿಜಕರಣೆ
ಬಂದಟ್ಟೇ ಬರಲಿ ನಿಜಕರಣೆ ನೀ ಕೇಳೇ
ದಂಡೀಗರಸೀ ತನ್ನಾ ಕಳಗೀಸೆ
ಊರ್ಕೋಳಿಯಾದರೆ ಊರೆಲ್ಲ ಬೆಳಗಾಯ್ತಿತೆ
ಊರ್ಕೋಳಿಯಲ್ಲ ಸಿಂವಕೋಳಿ
ಊರ್ಕೋಳಿಯಲ್ಲ ಸಿಂವ್‌ಕೋಳಿ ನಿನ್ನಪ್ಪ
ಕಲ್ಲಕೋಳ್ಯಾಗಿ ಸರಗೆಯ್ದು
ಒಂದೀನೆ ನಿನ್ನ ಸಂಗಡಿರುವಾ ಅಂದ್ರೆ
ಇರಗೊಡಾ ನಿನ್ನ ಹಗೀಯಪ್ಪ
ಇರಗೊಡಾ ನಿನ್ನಾ ಹಗಿಯಪ್ಪ ಕನಕಾಂಗಿ
ದಂಡೀಗರಸೀ ತನ್ನಾ ಕಳಗೀಸೆ
ಇಪ್ಪತ್ತು ವರುಸೆ ತುಪ್ಪಾಗಾರದಕ್ಕೊಂಟೆ[೮೪]
ರಕ್ಕೇಸರ[೮೫] ಕ್ಕೊಂಟೆ ರಣಕ್ಕೊಂಟೆ
ರಕ್ಕೇಸರ ಕ್ಕೊಂಟೆ ರಣಕ್ಕೊಂಟೆ ದ್ಯೆವಾರೆ
ಕ್ಕೊಂಟೀಗ್ಹೊದವರೇ ಬರ಼ಲಿಲ್ಲ
ಕ್ಕೊಂಟೀಗ್ಹೊದರೆ ಬರಲಲ್ಲಾ ಅಂದ್ಹೇಳಿ
ಬಿದ್ದಬಿದ್ದಲ್ಲೇ ಮರ಼ಗಾಳೆ
ಬಿದ್ದಬಿದ್ದಲ್ಲೇ ಮರಗ್ವದ್ನು ಅಭಿಮನ್ಯು
ಆಗೊಂದು ಮಾತಾ ನುಡೀದಾನೆ
ಹಿಂದೂ ನಮಗ್‌ವ್ಯೆರಿ ಮುಂದೂ ನಮಗ್‌ವ್ಯೆರಿ
ಯಾವಾಗು ನಿಮ್ಮಪ್ಪ ನಮಗ್‌ವ್ಯೆರಿ
ಯಾವಾಗು ನಿಮ್ಮಪ್ಪ ಮನಗ್‌ವ್ಯೆರಿ ಕನಕಾಂಗಿ
ದಂಡೀಗರಸಿ ನನ್ನಾ ಕಳಗೀಸೆ
ಇಷ್ಟೊಂದು ಮಾತಾ ಕೇಳೀತೊ ಕನಕಾಂಗಿ
ಕುಳತ ಗದ್ದಗಿಯಾ ಜಡದೆದ್ದಿ
ಕುಳತ ಗದ್ದಗಿಯಾ ಜಡದೆದ್ದಿ ಕನಕಾಂಗಿ

---

೮೪. ಕೋಟಿ ೮೫. ರಾಕ್ಷಸರ

ಪೆಟ್ಟೊಗಿ ಬಾಯಾ ತೆಗದಾಳೆ
ಪೆಟ್ಟೊಗಿ ಬಾಯಾ ತೆಗದಾಳೆ ಕನಕಾಂಗಿ
ಪಟ್ಟೀಯಾ ತಂದೇ ಕೊಡವಾಳೆ
ಪಟ್ಟೀಯಾ ತಂದಿ ಕೊಡವದ್ನು ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಹಿಂಡರುಡುಪಟ್ಟೇ ದಂಡೀನಲ್ಲಿದ್ದೇನೆ
ಕಂಡರಸು ತನಗೇ ನೆಗೆಯಾಡೇ
ಕಂಡರಸು ತನಗೇ ನೆಗೆಯಾಡ್ವ ಕನಕಾಂಗಿ
ಪೆಟ್ಟೊಗಿಲ್ ಪಟ್ಟೀ ಮಡಗಿಡು
ಪೆಟ್ಟೊಗಿಲ್ ಪಟ್ಟೀ ಮಡಗಿಡು ನಿನ್ನಾಲಾ
ಅತ್ತಗದೀರುಟ್ಟೀ ಹರೀಯಾಲೆ
ಅಷ್ಟೊಂದು ಮಾತು ಕೇಳೀತು ಕನಕಾಂಗಿ
ಬಿದ್ದಬಿದ್ದಲ್ಲೇ ಮರಗಾಳೆ
ಬಿದ್ದಬಿದ್ದಲ್ಲೆ ಮರಗ್ವದ್ನು ಅಬಿಮನ್ಯ
ಮೆತ್ತಗಿಂದ್ ಕೆಳಗೆ ಇಳದಾನೆ
ಮೆತ್ತಗಿಂದ್ ಕೆಳಗೆ ಇಳದಾನೆ ಅಬಿಮನ್ಯ
ಮಾಳಗ್ಗಿಂದ್ಹೆರಗೆ ಬರವಾನೆ
ಮಾಳಗ್ಗಿಂದ್ಹೆರಗೆ ಬರವಾನೆ ಅಬಿಮನ್ಯ
ಆನೀ ಕಂಬ್ಳಾನಿ ಬಿಡಸಾನೆ
ಆನೀ ಕಂಬ್ಳಾನಿ ಬಿಡಸಾನೆ ಅಬಿಮನ್ಯ
ಬಂದೀ ಬಾಗಲ್ಲಿ ನಿಲವಾನೇ
ಬಂದೀ ಬಾಗಲ್ಲಿ ನಿಲವಾನೆ ಅಬಿಮನ್ಯ
ಬೋರಿನೆ ಆನೀ ರತವೇರಿ
ಬೋರಿನೆ ಆನಿ ರತವೇರಿ ಕನಕಾಂಗಿ
ಮೆತ್ತಗಿಂದ್ ಕೆಳಗೆ ಇಳದಾಳೆ
ಮೆತ್ತಗಿಂದ್ ಕೆಳಗೆ ಇಳದಾಳೆ ಕನಕಾಂಗಿ
ಮುತ್ತನೇ ಕುಟ್ಟೇ ಹುಡೀಮಾಡೇ
ಮುತ್ತನೆ ಕುಟ್ಟಿ ಹುಡಮಾಡಿ ಪುಡಮಾಡಿ
ಮುತ್ತೀನಾರತಿಯಾ ಗೆಯೀದಾಳೆ ಕನಕಾಂಗಿ
ಮಾಳಗ್ಗಿಂದ್ಹೆರಗೆ ಬರವಾಳೆ
ಮಾಳಗ್ಗಿಂದ್ಹೆರಗೆ ಬರವಾಳೆ ಕನಕಾಂಗಿ
ನಲ್ಲಗಾರತಿಯ ಬೆಳಗಾಳೆ
ನಲ್ಲಗಾರತಿಯ ಏನಂದೀ ಬೆಳಗಾಳೆ

ಈರನಲಿ ಶೂರ ಕಲಿಯಾಲೆ ಕಾಯಾಲೆ
ನೂರಾಳ ಕಡದೀ ಮನಗೇ ಬರಲಿ
ನೂರಾಳ ಕಡದೀ ಮನಗ್ಬರಲೇ ಅಂದೇಳಿ
ದಂಡೀಗಾರತಿಯ ಬೆಳಗಾಳೆ
ದಂಡೀಗಾರತಿಯ ಬೆಳಗ್ವದ್ನು ಆರೂತಿ
ಕುಡಿಯೆಯ್ಡು ಆಗೇ ಹೊಳದಾವೆ
ಕುಡಿಯೆಯ್ಡು ಆಗೇ ಹೊಳವದ್ನು ಕನಕಾಂಗಿ
ಬಿದ್ದಬಿದ್ದಲ್ಲೇ ಮರಗಾಳೆ
ಬಿದ್ದಬಿದ್ದಲ್ಲೆ ಮರಗ್ವದ್ನು ಅಬಿಮನ್ಯ
ಆನಿಗೆ ಚಬಕದಲಿ ಒಗದಾನೆ
ಆನಿಗೆ ಚಬಕದಲಿ ಒಗದಾನೆ ಅಬಿಮನ್ಯ
ಸುರಲೋಕದ ಗೆಂಟೀ ನುಡೀಸಾನೆ
ಸುರಲೋಕದ ಗೆಂಟೀ ನುಡೀಸಾನೆ ಅಬಿಮನ್ಯ
ಆಕಾಸಕೆ ದೂಳೂ ಏಸೀಯಾತೇ
ಆಕಾಸಕ ದೂಳು ಏಸೀಯಾತೇ ಅಬಿಮನ್ಯ
ಅಕ್‌ತಂಗ್ದೀರರಮನಗೆ ನೆಡದಾನೆ
ಅಕ್‌ತಂಗ್ದೀರ ಮಕ್ಕೀರು ಲಕ್ಷಮಿ ಕೊಮರಾರು
ಅವರೆಲ್ಲ ದಂಡೀಗೆ ಸವನಾರೆ
ಅವರೆಲ್ಲ ದಂಡಿಗೆ ಸವನೆ ಸುಂಗಾರಾಗೇ
ಬಂದೀ ಬಿದ್ಯಲ್ಲೇ ನಿಲವಾರೆ
ಕೋವ್ಯರೆದ್ದರೆ ಕತ್ತ್ಯೋರು ಸವನಾರೆ
ಚೋಣ್ಯಾಂಬು ಬಲವೆ ಸವನಾದೆ
ಚೋಣ್ಯಾಂಬು ಬಲವೆ ಸವನೀ ಸುಂಗಾರಾಗೇ
ದಂಡಗ ಕುಚವಾಗೇ ನಿಲವಾರೇ
ದಂಡಿಗ್ ಕುಚವಾಗಿ ನಿಲವದ್ನು ಸೀಗ್ರರು
ದಂಡಿಗ್ ಕುಚವಾಗೇ ಬರವಾರೆ
ದಂಡಿಗ್ ಕುಚವಾಗಿ ಬರವದ್ನು ಅಬಿಮನ್ಯು
ಆಗೊಂದು ಮಾತಾ ನುಡೀದಾನೆ
ಆಗೊಂದು ಮಾತಾ ಏನಂದೀ ನುಡೀದಾನೆ
ಹೋಗ್‌ನಿಮ್ಮತ್ತಗಿಯಾ ತಿಳಗೇ[೮೬] ಬನ್ನಿ
ಹಾಂಗೇ ಬಂದಾದೊಂಬಾ ಹೀಂಗೇ ಹ್ವೊದಾದೊಂಬಾ
ದೊಂಬಗಿನ್ನೇನಾ ಮರಗೂವೆ

೮೬. ತಿಳಿಸಿ

ದೊಂಬಗಿನ್ನೇನ ಮರಗೂವೆ ಅಂದೇಳಿ
ಹೋಗ್‌ನಿಮ್ಮತ್ತಗಿಯಾ ತಿಳಗೇ ಬನ್ನಿ
ಹೋಗ್‌ನಿಮ್ಮ ತ್ತಗಿಯಾ ತಿಳಗೇ ಬನ್ನಿ ಅಂದೇಳಿ
ತನ್ನಾ ಸೀಗ್ರರಾ ಕಳಸಾನೆ
ತನ್ನ ಸೀಗ್ರರ ಕಳಸದ್ನು ಸೀಗ್ರರು
ನಾರೆಣದೈವನರಮನಗೆ ಬರವಾರೆ
ನಾರೆಣದೈವನರಮನಗೆ ಬರವಾರು ಸೀಗ್ರರು
ಬಂದೀ ಬಾಗಲ್ಲೇ ನಿಲವಾರೆ
ಬಂದೀ ಬಾಗಲ್ಲಿ ನಿಲವಾರು ಸೀಗ್ರರು
ಆಗೊಂದು ಮಾತಾ ನುಡೀದಾರೆ
ಹಾಂಗೇ ಬಂದಾದೊಂಬ ಹೀಂಗೇ ಹೋದಾದೊಂಬ
ದೊಂಬಗಿನ್ನೇನಾ ಮರಗೂವೆ
ದೊಂಬಗಿನ್ನೇನ ಮರಗೂವೆ ಅಂದೇಳಿ
ಕನಕಾಂಗಿ ಅತ್ತೇ ಕುಳಸಾರೆ
ಕನಕಾಂಗಿ ಅತ್ತೇ ಕುಳಸಾರೆ ಸೀಗ್ರರು
ಕನಕಾಂಗಿಗೆ ಬುದ್ದೀ ಒರದಾರೆ
ಹಾಂಗೇ ಬಂದಾದೊಂಬಾ ಹೀಂಗೇ ಹ್ವೋದಾದೊಂಬ
ದೊಂಬಗಿನ್ನೇನಾ ಮರಗೂವೆ
ದೊಂಬಗಿನ್ನೇನ ಮರಗೂವೆ ಅಂದೇಳಿ
ಹೋಗಿ ಅತ್ತಗಿಯಾ ತೆಳದೇಬಂದ್ರ
ಹೋಗೇ ಅತ್ತಗಿಯಾ ತೆಳಗ್‌ಬಂದ್ರ ಸೀಗ್ರರು
ಆಗೊಂದು ಮಾತಾ ನುಡೀದಾರೆ
ಆಗೊಂದು ಮಾತಾ ಏನಂದಿ ನುಡೀದಾರೆ
ಹೋಗಿ ಅತ್ತಗಿಯಾ ತೆಳದೇಬಂದು
ಹೋಗಿ ಅತ್ತಗಿಯಾ ತೆಳದ್ಬಂದು ಅಂಬದ್ನು
ರಾಜಮಾರ್ಗದಲೆ ನೆಡದಾರೆ
ಕೆಂದೂಳಾರೀತೆ ಕೆನ್ನೆಗೆ ಬೆಸಲಲಿಯಾತೇ
ಆಕಾಸಕ ದೂಳೂ ಎಸೀಯಾತೇ
ಆಕಾಸಕ ದೂಳೂ ಎಸಿಯಾತೆ ಅಬಿಮನ್ಯ
ದಂಡನ ಕ್ವೊಂಟೀಗೆ ನೆಡದಾನೆ
ದಂಡನ ಕ್ವೊಂಟೀಗೆ ನೆಡದಾನೆ ಅಬಿಮನ್ಯ
ಆನೀಗಿಂದು ಕಳಗೆ ಇಳದಾನೆ
ಆನೀಗಿಂದು ಕೆಳಗೆ ಇಳದಾನೆ ಅಬಿಮನ್ಯ

ಸೊಂಟೀಗೆ ದಟ್ಟೀ ಬಿಗದಾನೆ
ಸೊಂಟೀಗೆ ದಟ್ಟೀ ಬಿಗದಾನೆ ಅಬಿಮನ್ಯ
ಬಿಲ್ಲೊ ಬಾಣವಾ ತಡದಾನೆ
ಬಿಲ್ಲೊ ಬಾಣವಾ ತಡದಾನೆ ಅಬಿಮನ್ಯ
ಉಕ್ಕೀನ ಪಟವ ತಡದಾನೆ
ಉಕ್ಕೀನ ಪಟವ ತಡದಾನೆ ಅಬಿಮನ್ಯ
ಕ್ವೊಂಟೀ ಒಂದ್ ಸುತ್ತ ತಿರಗಾನೆ
ಕ್ವೊಂಟೀ ಒಂದ್ ಸುತ್ತ ತಿರಗಾನೆ ಅಬಿಮನ್ಯ
ಒಂದ್ ಸುತ್ತನ ಮಂದೀ ಸವರಾನೆ
ಒಂದ್ ಸುತ್ತನ ಮಂದೀ ಸವರಾನೆ ಅಬಿಮನ್ಯ
ಕ್ವೊಂಟೀ ಎಯ್ಡ್ ಸುತ್ತ ತಿರಗಾನೆ
ಕ್ವೊಂಟೀ ಎಯ್ಡ್ ಸುತ್ತ ತಿರಗಾನೆ ಅಬಿಮನ್ಯ
ಎಯ್ಡ್ ಸುತ್ತನ ಮಂದಿ ಸವರಾನೆ
ಎಯ್ಡ್ ಸುತ್ತನ ಮಂದಿ ಸವರದ್ನು ನಾರೆಣದ್ಯೆವ
ಅರಗೀ ನೋಡಿದನೆ ಹೆರಗೊಮ್ಮೆ
ಅರಗೀ ನೋಡಿದನೆ ಹೆರಗೊಮ್ಮೆ ನಾರೆಣದ್ಯೆವ
ಆಗೊಂದು ಮಾತಾ ನುಡೀದಾನೆ
ಆಗೊಂದು ಮಾತಾ ಏನಂದೀ ನುಡಿದಾನೆ
ದಂಡೀನ ಮಂದ್ಯೆಲ್ಲಾ ಸವರಣ
ದಂಡಿನ ಮಂದ್ಯೆಲ್ಲಾ ಸವರಾಣ ನೋಡಾನೆ
ರಾಜ ಮಾರ್ಗದಲಿ ನೆಡದಾನೆ
ರಾಜ ಮಾರ್ಗದಲಿ ನೆಡವದ್ನು ನಾರೆಣದ್ಯೆವ
ಕರ್ಣನರಮನಗೆ ನೆಡದಾನೆ
ಕರ್ಣನರಮನಗೆ ನೆಡದಾನೆ ನಾರೆಣದ್ಯೆವ
ಹೋಗಿ ಬಾಗಲ್ಲೇ ನಿಲವಾನೇ
ಹೋಗಿ ಬಾಗಲ್ಲೇ ನಿಲವದ್ನು ನಾರೆಣದ್ಯೆವ
ಒಳಗಿದ್ದ ಕರ್ಣನು ಹೆರಗೆ ಬರವಾನೆ
ಯಾವಾಗು ನಿನ್ನ ಅರಮಲ್ಲಿರು ಬಾವಯ್ಯ
ಯಾನ್ ಬಂದ್ಯೊನನ್ನಾ ಅರಮನಗೆ
ಏನ್ ಬಂದ್ಯೊ ನನ್ನಾ ಅರಮನಗೆ ಅಂಬದ್ನು
ಆಗೊಂದು ಮಾತಾ ನುಡೀದಾನೆ
ಯಾವೂರ್ ದಂಡೋ ಏನೋ ಯಾವೂರ್ ದಳವೊ ಏನೋ
ದಂಡನಕ್ವೊಂಟ್ಯೆಲ್ಲಾ ಸವರಾನೆ

ಕರದೊಂದುಟ್ಕಣೊ ಕರದೊಂದ್ ತೊಟ್ಕಣೊ
ಸೆಣಚಕ್ರ ಕೋವಿ ಹೊಗಲಿಗೆ
ಸೆಣಚಕ್ರ ಕೋವಿ ಹೊಗಲಿಗ್ವಾಕೀಕಂಡಿ
ಕರಮುಗಿಲಾಗಿ[೮೭] ಬರಬೇಕ
ಕರಮುಗಿಲಾಗಿ ಬರಬೇಕು ಬಾವಾಕೇಳೋ
ಕ್ವೊಂಟೀ ಮರಸಾರಿ ನಿಲಬೇಕ
ಕ್ವೊಂಟೀ ಮರಸಾರಿ ನಿಲಬೇಕು ಬಾವಾಕೇಳೋ
ಕ್ವೊಂಟೀ ಮರಸಾರೀ[೮೮] ಹೊಡಿಯಾಬೇಕ
ಅಷ್ಟೊಂದು ಮಾತಾ ಕೇಳಾನೆ ಕರ್ಣಾನು
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ಕರ್ಣನು
ಪೆಟ್ಗೊಗಿ ಬಾಯಾ ತೆಗದಾನೆ
ಕರದೊಂದುಟ್ವಾನೆ ಕರದೊಂದತೊಟ್ವನೆ
ಸೆಣಚಕ್ರ ಕೋವಿ ಹೊಗಲಿಗೆ
ಸೆಣಚಕ್ರ ಕೋವಿ ಹೊಗಲೀಗಾಕೀಕಂಡಿ
ಮಾಳಗ್ಗಿಂದ್ವೆರಗೆ ಬರವಾನೆ
ಮಾಳಗ್ಗಿಂದ್ವೆರಗೆ ಬರವಾನೆ ಕರ್ಣನು
ಕರಮುಗಿಲಾಗಿ ಹೊರಟಾನೆ
ಕರಮುಗಿಲಾಗಿ ಹೊರಟಾನೆ ಕರ್ಣನು
ದಂಡನ ಕ್ವೊಂಟೀಗೇ ನೆಡದಾನೆ
ದಂಡನ ಕ್ವೊಂಟೀಗೇ ನೆಡದಾನೆ ಕರ್ಣನು
ದಂಡನ ಮಂದ್ಯಲ್ಲಾ ಸವರಾಣ
ದಂಡನ ಮಂದ್ಯಲ್ಲಾ ಸವರಾಣ ನೋಡಾನೆ
ಕ್ವೊಂಟೀ ಮರಸೇರಿ ನಿಲವಾನೆ
ಕ್ವೊಂಟಿ ಮರಸೇರಿ ನಿಲವಾನೆ ಕರ್ಣನು
ಕ್ವೊಂಟೀ ಮರಸಾರಿ ಹೊಡವದ್ನು ಅಬಿಮನ್ಯನ
ಮುಂಗಾಲು ಮುರದೇ ಪವಡಿಸೆ
ಮುಂಗಾಲು ಮುರದೇ ಪವಡಿಸಿ ಅಬಿಮನ್ಯ
ತಿರಗೀ ನೋಡಿದನೆ ಹೆರಗೊಮ್ಮೆ
ತಿರಗೀ ನೋಡಿದನೆ ಹೆರಗೊಮ್ಮೆ ಅಬಿಮನ್ಯ
ಆಗೊಂದು ಮಾತಾ ನುಡೀದಾನೆ
ಆಳೀಗೇ ಆಳು ನೆರಿಯಾಗಿ ಬಂದೀರೆ

೮೭. ಕಪ್ಪು ಮೋಡವಾಗಿ ೮೮. ಮರೆಯಾಗಿ

ನೋಡ್ತೀದ್ನೊ ನಿನ್ನಾ ಬಗೆಯೊಂದಾ
ನೋಡ್ತೀದ್ನೊ ನಿನ್ನಾ ಬಗೆಯೊಂದ ದೊಡ್ಡಪ್ಪ
ಮ್ವೊಸಾದಲೆ ನನ್ನಾ ಕೊಲ ಬಂದ್ಯ
ಅಷ್ಟೊಂದ ಮಾತಾ ಕೇಳಾನೆ ಕರ್ಣನು
ಆಗೊಂದು ಮಾತಾ ನುಡೀದಾನೆ
ಅಯ್ಯೋ ನನಮಗನೆ ನೀನಂದೇನಾನರಿಯೆ
ಮ್ವೊಸದಲೆ ನಿನ್ನಾ ಕೊಲ ಬಂದೆ
ಹಂಗಾಲೀನ್ನುಣ್ಣ ಮುಂಗಾಲೀಗಿಳಗೂವೆ
ಆರ್‌ಗೆಯ್ದರೆ ಮಗನೆ ಬದಕೂವೆ
ಆರ್‌ಗೆಯ್ದರೆ೮೯ ಮಗನೆ ಬದಕೂವೆ ಅಂಬದ್ನು
ಆಗೊಂದು ಮಾತಾ ನುಡೀದಾನೆ
ನನ್ನಂತಾ ಸೆರಿಯೋರು ಕೂತ್‌ಮುಳ್ಳಾತೆಗಿವಂಗೆ
ಇದುವೇನಬಿಮನ್ಯ ಕಲೆಹುಣ್ಣ
ಇದುವೇನಬಿಮನ್ಯ ಕಲಿಹುಣ್ಣು ಅಂದಾರೆ
ಸತ್ತಬಾಳುಮಿಯೇ ತನಗಾದೊ
ನಿತ್ತೀಮ್ಯನೀನ್ನುಣ್ಣ ಮುಂಗಾಲೀಗಿಳಗೂವೆ
ಆರ್‌ಗೆಯ್ದರೆ ಮಗನೆ ಬದಕೂವೆ
ನನ್ನಂತ ಸೆರಿಯೋರು ಕೂತ್ವನ್ನೆಗೆಯ್ವಂಗೆ
ಇದುವೇನಬಿಮನ್ಯ ಕಲೀಹುಣ್ಣು
ಇದುವೇನಬಿಮನ್ಯ ಕಲಿಹುಣ್ಣು ಅಂದಾರೆ
ಸತ್ತಬಾಳುಮಿಯೇ ತನಗಕ್ಕು
ಅಷ್ಟೊಂದ ಮಾತಾ ಕೇಳಾನೆ ಕರ್ಣನು
ಅಬಿಮನ್ಯುಗ್ ಸಾವಿರವಾ ಹರಸಾನೆ
ಅಬಿಮನ್ಯು ಬಿದ್ದಲ್ಲಿ ಪೈಟೆ ಪಟ್ಟಣಾಲೆ
ಮಾಲ್ಯದ ಕೊಂಬಲ್ಲಿ ನೆರಿಯಲೆ
ಮಾಲ್ಯದ ಕೊಂಬಲ್ಲಿ ನೆರಿಯಲೆ ಅಬಿಮನ್ಯುಗೆ
ಮನಿಯಲಿದ್ದಟ್ಟೇ ತನೂವಾಲೆ
ಅಬಿಮನ್ಯು ಬಿದ್ದಲ್ಲಿ ಏಳ್ ತುಳಚಿಗಿಡವಾಲಿ
ಮಾಲ್ಯದ ಕೊಂಬಲ್ಲಿ ನೆರಿಯಾಲಿ
ಮಾಲ್ಯದ ಕೊಂಬಲ್ಲಿ ನೆರಿಯಾಲೆ ಅಬಿಮನ್ಯುಗೆ
ಮನಿಯಲಿದ್ದಟ್ಟೇ ತನೂವಾಲೆ
ಅಬಿಮನ್ಯು ಬಿದ್ದಲ್ಲಿ ಏಳ್ ತುಳಚಿಗಿಡವಾಲಿ

---

೮೯. ಏನು ಮಾಡಿದರೆ

ಮಾಲ್ಯದ ಕೊಂಬಲ್ಲಿ ನೆರಿಯಾಲಿ
ಮಾಲ್ಯದ ಕೊಂಬಲ್ಲಿ ನೆರಿಯಾಲೆ ಅಬಿಮನ್ಯುಗೆ
ಮನಿಯಲಿದ್ದಟ್ಟೇ ತನೂವಾಲೆ
ಮನಿಯಲಿದ್ದಟ್ಟು ತನುವಾಲಿ ಅಂದೇಳಿ
ಅಬಿಮನ್ಯುಗ್ ಸಾವಿರವಾ ಹರಸಾನೆ
ಅಷ್ಟೊಂದು ಮಾತಾ ಹೇಳೀ ಕೇಳೂರೊಟಗೆ
ಏಳ್ ತುಳಚೀಗಿಡವೇ ನೆರದಾವೆ
ಏಳ್ ತುಳಚೀಗಿಡವೇ ನೆರದಾವೇ ಅಬಿಮನ್ಯುಗೆ
ಮನಿಯಲಿದ್ದಟ್ಟೇ ತನೂವಾಗೇ
ಅಬಿಮನ್ಯು ಬಿದ್ದಲ್ಲೇ ಪೈಟೀ ಪಟ್ಟಣಾಗೇ
ಮಾಲ್ಯದ ಕೊಂಬಲ್ಲೇ ನೆರದಾವೆ
ಮಾಲ್ಯದ ಕೊಂಬಲ್ಲೇ ನೆರದಾವೆ ಅಬಿಮನ್ಯುಗೆ
ಮನಿಯಲಿದ್ದಟ್ಟು ತನೂವಾಗೇ
ಮನಿಯಲಿದ್ದಟ್ಟು ತನುವಾಗಿ ಅಬಿಮನ್ಯ
ಸೆಳ್ಳುಗುರೀಲ್ ವಾಲೀ ಬರದಾನೆ
ಸೆಳ್ಳುಗುರೀಲ್ವೊಲೀ ಬರದಾನೆ ಅಬಿಮನ್ಯ
ತನ್ನಗಿಳಿನೋಳ ದೆನೀದೋರೇ
ಒಂದ ಕರವಿಗೆ ಬಂದವೇ ಗಿಳಿಗೋಳು
ನಿಂದವೆ ಅಬಿಮನ್ನಿನ ಒಡನಲ್ಲಿ
ಏನು ಕರೆದಿರಿ ಸ್ವೊಮಿ ಎಂತು ಕರೆದಿರಿ ಸ್ವೊಮಿ
ಕರದಾ ಕಾರಣವ ನಮಗ್ಹೇಳಿ
ಹೋಗ್ಹೇಳೀ ಅಜ್ಜೀಗೇ ಹೋಗ್ಹೇಳಿ ಅಮ್ಮಗೇ
ಹೋಗ್ಹೇಳಿ ತನ್ನಾ ಮಡದ್ಯರಗೆ
ಹೋಗೇಳಿ ತನ್ನಾ ಮಡದ್ಯರಗೆ ನಿಮ್ಮಾಲಾ
ಕಂದಾ ಕಾಳಗದಲಿ ಮಡೀದಾನೆ ।
ಹೋಗ್ಹೇಳೀ ಅಮ್ಮಾಗೇ ಹೋಗ್ಹೇಳಿ ಅಜ್ಜೀಗೇ
ಹೋಗ್ಹೇಳಿ ತನ್ನಾ ಮಡದ್ಯರಗೆ
ಹೋಗೇಳಿ ತನ್ನಾ ಮಡದ್ಯರಗೆ ನಿಮ್ಮಾಲಾ
ನಲ್ಲಾ ಕಾಳಗದಲಿ ಮಡೀದಾನೆ ।
ನಲ್ಲಾ ಕಾಳಗದಲಿ ಮಡೀದಾನೆ ಅಂಧ್ಹೇಳೇ
ಕೊಟ್ವಾನೇ ಕಯ್ಯಾ ಬರದ್ವೊಲೆ
ಕೊಟ್ಟವಾಲಿಯ ರಟ್ಟೀಲಡಗಿಸಿಗಂಡೆ
ಹಾರಿದವಂಬರಕೇ ಸೆರೀಯಾಗೇ

ಹಾರಿದವಂಬರಕೇ ಸೆರಿಯಾಗಿ ಗಿಳಿಗೋಳು
ಹೋಗಿ ಮೆಳಿ ಮೈನೆ ಒರಗಾವೆ
ಹೋಗಿ ಮೆಳಿ ಮೈನೆ ಒರಗಾವೆ ತಾಯವ್ವಿಯ
ತೊಡಿಯಾ ಮೈನೊಲೀ ಮಡಗಾವೆ
ತೊಡಿಯಾ ಮೈನನ್ವೊಲಿ ತಡದೆತ್ತಿ ನೋಡಾಳೆ
ಬಿದ್ದ ಬಿದ್ದಲ್ಲೆ ಮರಗಾಳೆ
ಉತ್ರಿಗುರಬರಗು ಕನಕಾಂಗಿಗ್ ಬಳಬರಗು
ರಸರಾಳಿಯರ ಮಗಳು ಹಸಬಾಲಿ
ರಸರಾಳಿಯರ ಮಗಳು ಹಸಬಾಲಿ ತಾಯಿಕಯ್ಲಿ
ಅರದಾ ಮುತ್ತೈತನವಾ ಅದಕೆ ಕೊಡೆ
ಅರದಾ ಮುತ್ತೈತನ ಅದಕ್ಕೊಡು ತಾಯಿಕಯ್ಲೆ
ಕಳಗಸಕೊಡದರ ತವರಿಗೆ
ಅರದಾ ರಾಜ್ಯಕೊಡು ಬರದ ಬಂಡರ ಕೊಡು
ಅರದಾ ಮುತ್ತೈತನವಾ ಅದಕೆ ಕೊಡೆ
ಅರದಾ ಮುತ್ತೈತನ ಅದಕೆ ಕೊಡು ತಾಯಿ ಕೋಡೆ
ಕಳಗಸ ಕೊಡದರ ತವರಿಗೆ
ಅಷ್ಟೊಂದು ಮಾತಾ ಕೇಳೀತು ಅಜ್ಜಮ್ಮ
ಆಗೊಂದು ಮಾತಾ ನುಡೀದಾಳೆ
ಹೆಣ್ಣಿ ಹೆತ್ತರ ಕೆಟ್ರು ಮನ್ನೆ ಪಾಂಡರಕೆಟ್ರು
ಸನ್ನೇಸಿ ಕೆಟ್ಟಾ ಜಪದಲ್ಲಿ
ಸನ್ನೇಸಿ ಕೆಟ್ಟಾ ಜಪದಲ್ಲಿ ನಾರೆಣದ್ಯೆವ್ನಾ
ಹೆಣ್ಣತಂದೇ ಕೆಟ್ಟ ಅಬಿಮನ್ಯ
ಹೆಣತಂದೇ ಕೆಟ್ಟ ಅಬಿಮನ್ಯ ಅಂದ್ಹೇಲೇ
ಮುತ್ತನ ಕಣ್ಣೀರ ಸೇಡಿದಾಳೆ
ಮುತ್ತನ ಕಣ್ಣೀರ ಸೆಡುವದನ್ನು ಗಿಳಿಗೋಳು
ಹಾರಿದವಂಬರಕೆ ಸೆರೀಯಾಗೇ
ಹಾರಿದವಂಬರಕೆ ಸೆರಿಯಾಗಿ ಗಿಳಿಗೋಳು
ಹೋಗಿ ಮೆಳಿ ಮೈನೆ ಒರಗಾವೆ
ಹೋಗಿ ಮೆಳಿ ಮೈನೆ ಒರಗಾವೆ ಕನಕಂಗ್ಯ
ತೊಡಿಯಾ ಮೈನೇ ವಾಲೀ ಮಡಗಾವೆ
ತೊಡಿಯಾ ಮೈನನೊಲೀ ತಡದೆತ್ತಿ ನೋಡಾಳೆ
ಬಿದ್ದ ಬಿದ್ದಲ್ಲೆ ಮರಗಾಳೆ
ಬಿದ್ದ ಬಿದ್ದಲ್ಲಿ ಮರಗ್ವದ್ನು ನಾರೆಣದ್ಯೆವಾ

ಮಾಳಗ್ಗಿಂದ್ದೆರಗೆ ಬರವಾನೆ
ಮಾಳಗ್ಗಿಂದ್ದೆರಗೆ ಬರವಾನೆ ನಾರೆಣದೈವಾ
ಆಗೊಂದು ಮಾತಾ ನುಡೀದಾನೆ
ಕರುವೆಮ್ಮಿಕರುಸತ್ತು ಹೆರಿಕೂಸುಗಂಡ್‌ಸತ್ತ
ಕಾಳೆಮ್ಮೀಗ್ ಹುಲ್ಲಾ ಹೊರೂಕಾದೊ
ಕಾಳೆಮ್ಮೀಗ್ ಹುಲ್ಲಾ ಹೊರೂಕಾದು ಅಂದ್ವೇಳೇ
ಕನಕಾಂಗಿಯೆತ್ತೆ ಹೊಗಲಿಗೇ
ಕನಕಾಂಗಿಯೆತ್ತೆ ಹೊಗಲೀಗಾಯೀಕಂಡೇ
ಮಾಳಗ್ಗಿಂದ್ದೆರಗೆ ಬರವಾನೆ
ಮಾಳಗ್ಗಿಂದ್ದೆರಗೆ ಬರವಾನೆ ನಾರೆಣದೈವಾ
ಒಂದ ವಾಲೀಯಾ ಕಳಚಿಟ್ಟೇ
ಚಿನ್ನದ್ವೊಲೀಯ ಕಳಚಿಟ್ಟಿ ನಾರೆಣದೈವಾ
ಮರನ್ವೊಲಿ ತಂದೇ ಇಡವಾನೆ
ಮರನ್ವೊಲಿ ತಂದೆ ಇಡವಾನೆ ನಾರೆಣದೈವಾ
ಕನಕಾಂಗಿಯೆತ್ತೆ ಹೊಗಲೀಗೇ
ಕನಕಾಂಗಿಯೆತ್ತೆ ಹೊಗಲಿಗಾಯೀಕಂಡೇ
ರಾಜಂಗಳ ಮೆಟ್ಟ ಇಳದಾನೆ
ರಾಜಂಗಳ ಮೆಟ್ಟ ಇಳದಾನೆ ನಾರೆಣದೈವಾ
ತಿರಗಿ ನೋಡಿದನೆ ಹೆರಗೊಮ್ಮೆ
ತಿರಗಿ ನೋಡಿದನೆ ಹೆರಗೊಮ್ಮೆ ನಾರೆಣದೈವಾ
ತನ್ನ ಸೀಗ್ರೋರ ಕರದಾನೆ
ತನ್ನ ಸೀಗ್ರೋರು ಕರವದ್ನು ಸೀಗ್ರೋರು
ಓಯಂದೇ ಒಡನೆ ಬರವಾರೆ
ಎತ್ತದಲಗೀಯ ಹೊತ್ ನೋಡಿ ಸಿಗ್ರೋರೆ
ಎತ್ತಂದೇ ದಂಡೂ ಬರತದೆ
ಎತ್ತಂದೇ ದಂಡೂ ಬರತದೆ ನಿಮ್ಮಾಲಾ
ವಾಲಿಲ್ಲದತ್ತೂಗಿ ಬರತಾದೆ
ವಾಲಿಲ್ಲದತ್ತೂಗಿ ಬರತಾದೆ ಸಿಗ್ರೋರೆ
ಕೂಡ್ಕಂಬ್ರ ನಿಮ್ಮಾ ನೆರೀಯಲ್ಲಿ
ಅಷ್ಟೊಂದು ಮಾತಾ ಕೇಳಾರೇ ಸೀಗ್ರರು
ಆಗೊಂದು ಮಾತಾ ನುಡೀದಾರೆ
ಆಳೀಗೇ ಆಳೂ ಸೆರಿಯಾಗೇ ಬಂದಾರೆ
ಕೂಡ್ಕಂಬೂ ನಮ್ಮಾ ನೆರೀಯಲ್ಲಿ
ಅಷ್ಟೊಂದು ಮಾತಾ ಕೇಳಾನೇ ನಾರೆಣದೈವಾ

ಮಂದೂರಿಯೆತ್ತ್[೯೦] ಹೊಗಲಿಗೇ
ಕನಕಾಂಗಿಯೆತ್ತೆ ಹೊಗಲೀಗಾಯೀಕಂಡಿ
ದಂಡನ ಕ್ವೊಂಟೀಗೆ ಬರವಾನೆ
ದಂಡನ ಕ್ವೊಂಟೀಗೆ ಬರವದ್ನು ಅಬಿಮನ್ಯು
ತಿರಗಿ ನೋಡಿದನೆ ಹೆರಗೊಮ್ಮೆ
ತಿರಗಿ ನೋಡಿದನೆ ಹೆರಗೊಮ್ಮೆ ಅಬಿಮನ್ಯು
ಆಗೊಂದು ಮಾತಾ ನುಡೀದಾನೆ
ಒಂದ್ವೊಲಿಯಿಟ್ಟೇ ಬಂದ್ಯಲೇ ಕನಕಾಂಗಿ
ಒಂದ್ವೊಲಿ ನಿನ್ನಪ್ಪಗೆ ಕಳಕೊಟ್ಯ
ಒಂದ್ವೊಲಿ ನಿನ್ನಪ್ಪಗೆ ಕಳಕೊಟ್ಯ ಅಂಬದ್ನು
ಒಂದೊಂದು ಮಾತ ಹೇಮೀಸೇ
ಒಂದೊಂದು ಮಾತ ಹೇಮಿಸೇಳುದ ಕೇಳಿ
ಕನಕಾಂಗಿಯೆತ್ತ ಹೊಗಲೀಗೆ
ಕನಕಾಂಗಿಯೆತ್ತಿ ಹೊಗಲೀಗೆ ಹಾಯೀಕಂಡಿ[೯೧]
ಹಿಂದಕೆ ತಿರಗಿ ನೆಡದಾನೆ
ಹಿಂದಕೆ ತಿರಗಿ ನಿಡದಾನೆ ನಾರೆಣದೈವಾ
ತನ್ನಾಲರಮನಗೆ ಬರವಾನೆ
ತನ್ನಾಲರಮನಗೆ ಬರವಾನೆ ನಾರೆಣದೈವಾ
ಮಾಳೂಗಿ ಒಳಗೆ ನೆಡದಾನೆ
ಮಳೂಗಿ ಒಳಗೆ ನೆಡದಾನೆ ನಾರೆಣದೈವಾ
ಚಿನ್ನವ ತಂದೇ ಇಡವಾನೆ
ಚಿನ್ನವ ತಂದೇ ಇಡವಾನೆ ನಾರೆಣದೈವಾ
ಮಂದೂರಿಯೆತ್ತೀ ಹೊಗಲಿಗೇ
ಮಂದೂರಿಯೆತ್ತಿ ಹೊಗಲೀಗಾಯೀಕಂಡಿ
ದಂಡನ ಕ್ವೊಂಟೀಗೆ ಬರವಾನೆ
ದಂಡನ ಕ್ವೊಂಟೀಗೆ ಬರವದ್ನು ನಾರೆಣದೈವ್ನ
ಈಳೀ ಬಾಳೆಲ್ಲ ಸವನದೆ
ಈಳೀ ಬಾಳೆಲ್ಲ ಸವನದೆ ನಾರೆಣದೈವನ
ಗಂಟೀ ಕರುವೆಲ್ಲ ಸವನದೆ
ಗಂಟೀ ಕರುವೆಲ್ಲ ಸವನದೆ ನಾರೆಣದೈವ್ನ
ಕಂಚೀ ನಿಂಬೆಲ್ಲಾ ಸವನದೆ
ಕಂಚೀ ನಿಂಬೆಲ್ಲಾ ಸವನದೆ ನಾರೆಣದೈವ್ನ
ಹೂಂಗೀನ್ಹಕ್ಕೆಲ್ಲ ಸವನದೆ

೯೦. ಕನಕಾಂಗಿಯನ್ನೆತ್ತಿ ೯೧. ಹೀನೈಸಿ ಹೇಳುವುದನ್ನು ಕೇಳಿ

ಹೂಂಗೀನ್ಹಕ್ಕೆಲ್ಲ ಸವನದೆ ನಾರೆಣದ್ಯೆವ್ನ
ಗುಡಸು ಹಿಡಿಯೆಲ್ಲ ಸವನದೆ
ಗುಡಸು ಹಿಡೆಲ್ಲ ಸವನೀ ಸುಂಗಾರಾಗಿ
ಕನಕಾಂಗಿ ಬೆನ್ಹಿಡದೇ ನೆಡದಾವೆ
ಕನಕಾಂಗಿ ಬೆನ್ಹಿಡದೀ ನೆಡದಾರೆ ಅವರೆಲ್ಲ
ದಂಡನ ಕ್ವೊಂಟೀಗೆ ನೆಡದಾರೆ
ದಂಡನ ಕ್ವೊಂಟೀಗೆ ನೆಡವದ್ನು ಕನಕಾಂಗಿ
ನಲ್ಲನೊಡನೋಗಿ ಕುಳತಾಳೆ
ನಲ್ಲನೊಡನೋಗಿ ಕುಳವದ್ನು ಗಿಳಿಗೋಳು
ಹಾರಿದವಂಬರಕೆ ಸೆರೀಯಾಗಿ
ಹಾರಿದವಂಬರಕೆ ಸೆರಿಯಾಗಿ ಗಿಳಿಗೋಳು
ಉತ್ತರಿಯರ ಮನಗೆ ನೆಡದಾವೆ
ಉತ್ತರಿಯರ ಮನಗೆ ನೆಡದಾವೆ ಗಿಳಿಗೋಳು
ಹೋಗಿ ಮೆಳಿ ಮ್ಯೆನೆ ಒರಗಾವೆ
ಹೋಗಿ ಮೆಳಿ ಮ್ಯೆನೇ ಒರಗಾವೇ ಉತ್ತರಿಯಾ
ತೊಡಿಯಾ ಮ್ಯೆನೊಲೀಯ ಮಡಗಾವೆ
ತೊಡಿಯಾ ಮ್ಯೆನನ್ವೊಲಿ ತಡದೆತ್ತಿ ನೋಡಾಳೆ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಉತ್ತೂರಿ
ಹಾಲ್ತಟ್ಟೀಲ್ಹಾಲ ಎರದಾಳೆ
ಹಾಲ್ತಟ್ಟೀಲ್ಹಾಲ ಎರದಾಳೆ ಉತ್ತೂರಿ
ಬಾಳೀ ಹಣ್ಣೀಳಾ ಸೊಲದಾಳೆ
ಬಾಳೀ ಹಣ್ಣೀಳಾ ಸೊಲದಾಳೆ ಉತ್ತೂರಿ
ಹಾಲಾಗೆ ಹಣ್ಣಾ ಇಡವಾಳೆ
ಹಾಲೊಳಗ್ಹಣ್ಣಾ ಇಡವಾಳೋ ಉತ್ತೂರಿ
ಮಾಳಗ್ಗಿಂದ್ಹೆರಗೆ ಬರವಾಳೆ
ಮಾಳಗ್ಗಿಂದ್ಹೆರಗೆ ಬರವಾಳು ಉತ್ತೂರಿ
ಗಿಳಿಗೋಳೊಡನೋಗಿ ನಿಲವಾಳೆ
ಗಿಳಿಗೋಳೊಡನೋಗಿ ನಿಲವಾಳು ಉತ್ತೂರಿ
ಗಿಳಿಗೋಳೀಗ್ಹಾಲ್ಹಣ್ಣ ಕೊಡೋವಾಳೆ
ಗಿಳಿಗೋಳೀಗ್ಹಾಲ್ಹಣ್ಣ ಕೊಡುವಾಳು ಉತ್ತೂರಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡವದ್ನು ಗಿಳಿಗೋಳು

ರಟ್ಟೆವಾಲಾಡೇ ಕುಡೀದಾವೆ
ಹಾಲಾ ಕುಡಿದವೆ ಗಿಳಿಯೆ ಹಣ್ಣ ತಿಂದವೆ ಗಿಳಿಯೆ
ಹಾರಿದವಂಬರಕೇ ಸೆರೀಯಾಗೇ
ಹಾರಿದವಂಬರಕೇ ಸೆರಿಯಾಗಿ ಗಿಳಿಗೋಳು
ತಮ್ಮಾ ರಾಜ್ಯಕೆ ನೆಡದಾವೆ
ತಮ್ಮಾ ರಾಜ್ಯಕೆ ನೆಡವದ್ನು ಉತ್ತೂರಿ
ಹೂಂಗಿನ ಚೆಬ್ಬಿ ಬಲಗ್ಯೆಲಿ
ಹೂಂಗಿನ ಚೆಬ್ಬಿ ಬಲಗ್ಯೆಲಿ ತಡಕಂಡಿ
ಮಾಳಗ್ಗಿಂಧ್ವೆರಗೆ ಬರವಾಳೆ
ಮಾಳಗ್ಗಿಂಧ್ವೆರಗೆ ಬರವಾಳು ಉತ್ತರಿ
ಹೂಂಗೀನ್ಧಕ್ಕಲಕೆ ನೆಡದಾಳೆ
ಹೂಂಗಿನ್ಧಕ್ಕಲಕೆ ನೆಡದಾಳೆ ಉತ್ತೂರಿ
ಹೂಂಗ್ನಕ್ಕಲಬೇಲೀ ತೆಗದಾಳೆ
ಹೂಂಗ್ನಕ್ಕಲಬೇಲೀ ತೆಗದಾಳೆ ಉತ್ತೂರಿ
ಹೂಂಗ್ನಕ್ಕಲೊಳಗೆ ನೆಡದಾಳೆ
ಹೂಂಗ್ನಕ್ಕಲೊಳಗೆ ನೆಡದಾಳೆ ಉತ್ತೂರಿ
ಎಳಿಯೋ ಸಿಂಗರವ ಒಗದಾಳೆ
ಎಳಿಯೋ ಸಿಂಗರವ ಒಗದಾಳೆ ಉತ್ತೂರಿ
ಕೆನ್ನಿಗೆ ಕ್ಯೆದಗಿಯಾ ಒಗದಾಳೆ
ಎಲ್ಲಾ ಮಲ್ಲುಗೆ ಸುರಗೀ ಸ್ಯೆಮಂತಿಗೆ
ಹೂಂಗಂಬ್ ಹೂಂಗೆಲ್ಲಾ ಕೊಯೀದಾಳೆ
ಹೂಂಗಂಬ್ ಹೂಂಗೆಲ್ಲಾ ಕೊಯ್ದೀದಂಡೀಕಟ್ಟಿ
ಹೂಂಗ್ನಚಬ್ಯಲ್ಲೇ ಮಡಗಾಳೆ
ಹೂಂಗ್ನಚಬ್ಯಲ್ಲೇ ಮಡಗಾಳೇ ಉತ್ತೂರಿ
ಹೂಂಗ್ನಕ್ಕಲಿಂಧ್ವೆರಗೆ ಬರವಾಳೆ
ಹೂಂಗ್ನಕ್ಕಲಿಂಧ್ವೆರಗೆ ಬರವಾಳು ಉತ್ತೂರಿ
ಹೂಂಗ್ನಕ್ಕಲ ಬೇಲಿ ಇಡವಾಲೆ
ಹೂಂಗ್ನಕ್ಕಲ ಬೇಲಿ ಇಡವಾಳು ಉತ್ತೂರಿ
ತನ್ನಾಲರಮನಗೆ ಬರವಾಳೆ
ತನ್ನಾಲರಮನಗೇ ಬರವಾಳು ಉತ್ತೂರಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಉತ್ತೂರಿ
ಹೂಂಗಿನ ಚೆಬ್ಬಿ ಮಡಗಾಳೆ

ಹೂಂಗಿನ ಚೆಬ್ಬಿ ಮಡಗಾಳೆ ಉತ್ತೂರಿ
ಸಿಕ್ಕದ ಕಣ್ಣ ಸೆಡಲಿಸಿ[೯೨]
ಸಿಕ್ಕದ ಕಣ್ಣ ಸೆಡಲಿಸಿ ಉತ್ತೂರಿ
ಬಣ್ಣದ ಬಾಚಣಗಿ ಬಲಗೈಲಿ
ಬಣ್ಣದ ಬಾಚಣಗಿ ಬಲಗೈಲಿ ತಡಕಂಡೇ
ಮಾಳಗ್ಗಿಂದ್ದೆರಗೆ ಬರವಾಳೆ
ಮಾಳಗ್ಗಿಂದ್ದೆರಗೆ ಬರವಾಳು ಉತ್ತೂರಿ
ಕಟ್ಟದ ಸಿರಿಮುಡಿಯಾ ಸೆಡಲಿಸಿ
ಕಟ್ಟದ ಸಿರಿಮುಡಿಯಾ ಸೆಡಲಿಸಿ ಉತ್ತೂರಿ
ಕೆನ್ನೀಯಾ ನಿಗರಾ[೯೩] ಎಡಕೊತ್ತಿ
ಕೆನ್ನೀಯಾ ನಿಗರಾ ಎಡಕೊತ್ತಿ ಬಲಕೊತ್ತಿ
ಬಲ್ಲೊಳ್ಳರಂಬ ಬಗತಲಿ
ಬಲ್ಲೊಳ್ಳರಂಬ ಬಗತಲಿ ಬಾಮಕೆ
ಬಾಚಿ ಕಟ್ಟಿದಳೆ ಸೆರಮುಡಿಯೆ
ಬಾಚಿ ಕಟ್ಟಿದಳೆ ಸೆರಮುಡಿ ಬಾಮಕೆ[೯೪]
ಎಳಿಯೋ ಸಿಂಗರವ ಮುಡೀದಾಳೆ
ಎಳಿಯೋ ಸಿಂಗರವ ಮುಡಿದಾಳೆ ಉತ್ತೂರಿ
ಕೆನ್ನಿಗೆ ಕ್ಯೆದುಗಿಯಾ ಮುಡಿದಾಲೆ
ಎಲ್ಲಾ ಮಲ್ಲೂಗೇ ಸುರಗೇ ಸ್ಯೆಮಂತೀಗೆ
ಹೂಂಗಂಬ್ ಹೂಂಗೆಲ್ಲಾ ಮುಡೀದಾಳೆ
ಹೂಂಗಂಬ್ ಹೂಂಗೆಲ್ಲಾ ಮುಡಿದಾಳೆ ಉತ್ತೂರಿ
ಮಾಳೂಗಿ ಒಳಗೆ ನೆಡದಾಳೆ
ಮಾಳೂಗಿ ಒಳಗೆ ನೆಡದಾಳೆ ಉತ್ತೂರಿ
ಬಣ್ಣದ ಬಾಚಣಗಿ ಮಡಗಾಳೆ
ಬಣ್ಣದ ಬಾಚಣಗಿ ಮಡಗಾಳೇ ಉತ್ತೂರಿ
ಅಟ್ಟದ ಪೆಟ್ಟುಗಿಯಾ ತೆಗದಾಳೆ
ಅಟ್ಟದ ಪೆಟ್ಟುಗಿಯಾ ತೆಗದಾಳೆ ಉತ್ತೂರಿ
ಮೆಟ್ಟೀ ಬೀಗವ ಕರೀದಾಳೆ
ಮೆಟ್ಟೀ ಬೀಗವ ಕರಿದಾಳೆ ಉತ್ತೂರಿ
ತನ್ನಪಟ್ಟೀಯಾ ನಿರದುಟ್ಟೇ
ತನ್ನಪಟ್ಟೀಯಾ ನಿರದುಟ್ಟೇ ಉತ್ತೂರಿ
ತನ್ನ ಚೆನ್ನೆಲ್ಲ ಕೆಮೀದುಂಬೇ[೯೫]

೯೨. ಸುಲಿದಳು   ೯೩. ಕೂದಲು   ೯೪. ಚೆಂದಕ್ಕೆ   ೯೫. ಕಿವಿ ತುಂಬಿ

ತನ್ನ ಚಿನ್ನೆಲ್ಲ ಕೆಮೀದುಂಬಿ ಕೊರಳನೆ ತುಂಬಿ
ನೊಸಲಗ ಸಿರಿಗಂದ ಇಡೋವಾಳೆ
ನೊಸಲಗ ಸಿರಿಗಂದ ಇಡವಾಳು ಉತ್ತೂರಿ
ಪೆಟ್ಟುಗಿ ಬಾಯಲ್ಲೇ ಮಡಗಾಳೆ
ಪೆಟ್ಟುಗಿ ಬಾಯಲ್ಲೇ ಮಡಗಾಳೆ ಉತ್ತೂರಿ
ಮೆತ್ತಿಗ್ಂದು ಕೆಳಗೆ ಇಳದಾಳೆ
ಮೆತ್ತಿಗ್ಂದು ಕೆಳಗೆ ಇಳದಾಳೆ ಉತ್ತೂರಿ
ತೊಟ್ಲ ಕಂದನ ನೆಗದಾ
ತೊಟ್ಲ ಕಂದನ ನೆಗದಾಳೆ ಉತ್ತೂರಿ
ಮಾಳಗ್ಗಿಂದ್ಧೆರಗೆ ಬರೋವಾಳೆ
ಮಾಳಗ್ಗಿಂದ್ಧೆರಗೆ ಬರವಾಳೊ ಉತ್ತೂರಿ
ರಾಜಂಗ್ಳ ಮೆಟ್ಟಾ ಇಳದಾಳೆ
ರಾಜಂಗ್ಳ ಮೆಟ್ಟಾ ಇಳದಾಳೆ ಉತ್ತೂರಿ
ರಾಜ ಮಾರ್ಗದಲಿ ನೆಡದಾಳೆ
ರಾಜ ಮಾರ್ಗದಲಿ ನೆಡದಾಳೆ ಉತ್ತೂರಿ
ಅತ್‌ಕುಂತಿಯರಮನಗೆ ಬರವಾಳೆ
ಅತ್‌ಕುಂತಿಯರಮನಗೆ ಬರವಾಳೊ ಉತ್ತೂರಿ
ಹೋಗಿ ಬಾಗಲ್ಲೇ ನಿಲವಾಳೆ
ಹೋಗಿ ಬಾಗಲ್ಲೇ ನಿಲವಾಳು ಉತ್ತೂರಿ
ಅತ್ತೀ ಕರಸಿ ಮಗನಾ ಕೊಡವಾಳೆ
ಅತ್ತೀ ಕರಸಿ ಮಗನಾ ಕೊಡವಾಳು ಉತ್ತೂರಿ
ಆಗೊಂದು ಮಾತಾ ನುಡೀದಾಳೆ
ತಣ್ಣೀ ಉಣಸ್ಬ್ಯೆಡಿ ಕಂಬೂಳಿ ಹೊದಿಸ್ಬ್ಯೆಡಿ
ರಂಡೀ ಕೂಸ್ನೆಂದಿ ಕರಿಯಾಬ್ಯೆಡಿ
ರಂಡೀ ಕೂಸನೆಂದಿ ಕರಿಬ್ಯೆಡಿ ಅತ್ತಿಯೋರೆ
ಕಂದನ ಚೆಂದದಲೆ ಸಲಗೀರಿ
ಕಂದನ ಚೆಂದದಲೆ ಸಲಗೀರಿ ಅಂದೇಳೆ
ಮಾಳಗ್ಗಿಂದ್ಧೆರಗೆ ಬರವಾಳೆ
ಮಾಳಗ್ಗಿಂದ್ಧೆರಗೆ ಬರವಾಳೆ ಉತ್ತೂರಿ
ರಾಜಂಗಳ ಮೆಟ್ಟ ಇಳದಾಳೆ
ರಾಜಂಗಳ ಮೆಟ್ಟ ಇಳದಾಳೆ ಉತ್ತೂರಿ
ರಾಜ ಮಾರ್ಗದಲಿ ನೆಡದಾಳೆ
ರಾಜ ಮಾರ್ಗದಲಿ ನೆಡದಾಳೆ ಉತ್ತೂರಿ

ದಂಡನ ಕ್ವೊಂಟೀಗೆ ನೆಡದಾಳೆ
ದಂಡನ ಕ್ವೊಂಟೀಗೆ ನೆಡದಾಳೆ ಉತ್ತೂರಿ
ಅಕ್ಕನ ಕರದಿನುಡೀಮಾತೇ
ಅಮ್ಮನ ಮನಿಮ್ಯೆನೆ ಕಂದನ ಪಡದೀದೆ
ಹಾಲಾ ತೆಣೆಮ್ಯೆನೆ ಒರಸೀಡೆ
ಹಾಲಾ ತೆಣೆಮ್ಯೆನೆ ಒರಸೀಡೆ ಅಕ್ಕಾಕೇಳೇ
ದಂಡಗಿಯಾ ತನ್ನಾ ಕೊಮರಾನೆ
ಅಟ್ವೊಂದು ಮಾತಾ ಕೇಳೀತೋ ಕನಕಂಗಿ
ಆಗೊಂದು ಮಾತಾ ನುಡೀದಾಳೆ
ಹಾಸ್ವಳ ಅಜ್ಜಮ್ಮ ಉಣಸ್ವಳು ಅಜ್ಜಮ್ಮ
ದೋಸೇನ ಕಂಡೀನೆ ಕೊಮರಾನೇ ಅಬಂದ್ನು ಅಬಿಮನ್ಯ
ತಿರಗಿ ನೋಡಿದನೆ ಹೆರಗೊಮ್ಮೆ
ತಿರಗಿ ನೋಡನೆ ಹೆರಗೊಮ್ಮೆ ಅಬಿಮನ್ಯ
ಬೋರೀನೆ ಕಣ್ಣು ಕಡಕೆಂಡ್[೯೬]
ಬೋರೀನೆ ಕಣ್ಣು ಕಡಕೆಂಡ ಅಬಿಮನ್ಯ
ಉತ್ತೂರಿ ಒದ್ದೀ ಕೆಡಗಾನೆ
ಕ್ಯೆದೂಗಿ ಹೂಂಗು ಕೆನ್ನೀಗೆ ಮರೆಯಂದೇ
ಉತ್ತೂರಿ ಒದ್ದೀ ಕೆಡಗಾನೆ
ಉತ್ತೂರಿ ಒದ್ದೀ ಏನಂದಿ ಕೆಡಗಾನೆ
ಪಲ್ಯಾಗ್[೯೭] ಪಚ್ಚೆದ ಕಂಬ ನೆಗದತ್ತೆ
ಪಲ್ಯಾಗಿ ಪಚ್ಚೆದ ಕಂಬ ನೆಗದತ್ತೆ ಉತ್ತೂರಿ
ಹೋಗ್ಬಂದರಿಗ್ ಸಕಣಾ[೯೮] ನುಡೀಬಾರೇ
ಹೋಗ್ಬಂದರಿಗ್ ಸಕಣಾ ನುಡಿಬೇಕು ಅಂದೇಳಿ
ಉತ್ತೂರಿ ಒದ್ದೇ ಕೆಡಗಾನೆ
ಉತ್ತೂರಿ ಒದ್ದೆ ಕೆಡಗ್ವದ್ನು ಉತ್ತೂರಿ
ಪಲ್ಯಾಗಿ ಪಚ್ಚೆದ ಕಂಬಾ ನೆಗದ್ವತ್ತಿ
ಪಲ್ಯಾಗಿ ಪಚ್ಚೆದ ಕಂಬಾ ನೆಗದ್ವತ್ತಿ ಉತ್ತೂರಿ
ಹೋಗ್ಬಂದರಿಗ್ ಸಕಣಾ ನುಡೀದಾಳೆ
ದೇವ್‌ಲೋಕದ ಸತ್ತೂಗಿದೇವ್‌ಲೋಕದ ದಂಡೂಗಿ
ದೇವಲೋಕದ ನವೀಲಾನೆ
ದೇವಲೋಕದ ನವಿಲಾನು ಅಬಿಮನ್ನಿನ
ಅಜ್ಜ ದೇವಿಂದ್ರ ಕಳಸಾನೆ

೯೬. ಉಗ್ರ ಬೆಂಕಿ ೯೭. ಹಲ್ಲಿಯಾಗಿ ೯೮. ಶಕುನ

ಅಜ್ಜ ದೇವಿಂದ್ರ ಕಳಸಾನೆ ಅಬಿಮನ್ಯ
ದೇವ್‌ಲೋಕದ ದಂಡಗಿಯಾ ನೆಗದ್ಹತ್ತೇ
ದೇವ್‌ಲೋಕದ ದಂಡಗಿಯಾ ನೆಗದ್ಹತ್ತೇ ಕನಕಾಂಗಿ
ದೇವ್‌ಲೋಕದ ದಂಡಗಿಯಾ ನೆಗದ್ಹತ್ತೇ
ದೇವ್‌ಲೋಕದ ದಂಡಗಿಯಾ ನೆಗದ್ಹತ್ತೇ ಅವ್ರ ಗಂಡ್ಹಿಂಡರು
ದೇವಲೋಕಕೆ ನೆಡದಾರೆ

ಕಾಮದೇವ (ಸತ್ತಪ್ಪನ ಹಾಡು)

ಹೊತ್ತರ ಮುಂಚೆದ್ದಿ ಹಿತ್ತಲ್ಲೇ[೧] ಒಲಿಬಂದಿ[೨]
ಎತ್ತು ನಾಲುಗಿಯ ಚೊಳೋಚೀಯೇ[೩]
ಎತ್ತು ನಾಲುಗಿಯ ಚೊಳ್ಚೀಯ ಕೊಯ್ತಂದಿ
ಎತ್ತೂವೊ ಹಾಡಾ ಬುಡೋತಂಕೆ
ಹೊತ್ತರ ಮುಂಚೆದ್ದಿ ಹಿತ್ತಲೇ ಒಲಿಬಂದಿ
ಹೋರೀ[೪] ನಾಲುಗಿಯಾ ಚೊಳಚಿಯೇ
ಹೋರಿ ನಾಲುಗಿಯಾ ಚೊಳ್ಚೀಯ ಕೊಯ್ತಂದಿ
ಹೋಳೂವೊ ಈ ಹಾಡ ತುದೀತಂಕೇ
ನಿಸ್ತ್ರೇರ ಬಾಗ್ಲಮುಂದೆ ಕಸ್ತುರ್[೫] ಮುಗ್ಬಾದಂತೆ
ನಿಸ್ತ್ರೇರ್ ಸೊಲ್ ತೋಳ್ನಾಗಿರಲಂದೇ । ಕಾಮ್‌ದ್ಯೆವಾ
ಹೋಗೊಂದು ಸತಿಯಾ ತರಬೇಕು
ಹೋಗೊಂದು ಸತಿಯಾ ತರಬೇಕು ಅಂದೇಳಿ
ಬಾಗಲ್ಲಾಟಕೆ ಕುಳತಾನೆ
ಬಾಗಲ್ಲಾಡಿದರೆ ಯಾರು ನೋಡ್ವರೊ ಮಗನೆ
ಹೋಗ್‌ಬೇಕೋ ಚಂಡಿನ ಅರಮನಗೇ ।
ಹೋಗ್ಬೇಕೋ ಚಂಡೀನ ಅರಮನಗೇ ಮಗನೇ ಕೇಳೋ
ಚಂಡ್ನ ಗೋಳ್ಯಲ್ಲೇ[೬] ಮದಿ ಬರುದು
ಅಟ್ಟಂಬಾ ಮಾತಾ ಕೇಳಾನೇ ನಾರ್ಣದ್ಯೆವಾ
ಕುಳ್ತಾಗದ್ದಗಿಯಾ ಜಡದೆದ್ದೇ
ಕುಳ್ತಾಗದ್ದಗಿಯಾ ಜಡದೆದ್ದೇ ನಾರ್ಣದ್ಯೆವಾ
ಮಾಳೂಗಿ ಒಳಗೆ ನೆಡದಾನೆ
ಮಾಳೂಗಿ ಒಳಗೆ ನೆಡದಾನೆ ನಾರ್ಣದ್ಯೆವಾ
ಪೆಟ್ಗೂಗಿ ಪಟ್ಟಿ ತೆಗದಾನೆ
ಪೆಟ್ಗೂಗಿ ಪಟ್ಟೀ ತೆಗದಾನೆ ನಾರ್ಣದ್ಯೆವಾ
ಮೂರು ಬೊಕ್ಸ್[೭] ಹಣವಾ ಮೊಗದಾನೆ

---

೧. ಹಿತ್ತಲದಲ್ಲಿ ೨. ಒಲಿದು ಬಂದ ೩. ತುಲಸಿ ೪. ಬೀಜ ಒಡೆಯದ ಎತ್ತು ೫. ಕಸ್ತುರಿಯ
೬. ಚೆಂಡಿನ ಬಯ್ಲಲ್ಲಿ ೭. ಬೊಗಸೆ ಹಣವನ್ನು

ಮೂರು ಬೊಕ್ಸ್ ಹಣವಾ ಮೊಗದಾನೆ ನಾರ್ಣದ್ಯೆವಾ
ರಾಜಂಗ್ಳ ಮೆಟ್ಟ ಇಳದಾನೆ
ರಾಜಂಗ್ಳ ಮೆಟ್ಟ ಇಳದಾನೆ ನಾರ್ಣದ್ಯೆವಾ
ಕೆಮಣ್ಣನರಮನಗೆ ನೆಡದಾನೆ
ಕೆಮಣ್ಣನರಮನಗೆ ನೆಡದಾನೆ ನಾರ್ಣದ್ಯೆವಾ
ಹೋಗಿ ಬಾಗಲ್ಲೇ ನಿಲೋವಾನೆ ।
ಹೋಗಿ ಬಾಗಲ್ಲೇ ನಿಲವದ್ನು ಸೊನಗಾರ
ಏನು ಕಾರಣಲೆ ಬರುವಿಯೋ ।
ಬಂದ ಕಾರಣಿಲ್ಲ ಕಿರಿದು ಬ್ಯೆಸರಿಲ್ಲ
ಚಿನ್ನದ ಚಂಡಾ ಗೆಯಿಕೊಡೋ ಕೆಮಣ್ಣಾ
ರತ್ನದ ಚಂಡಾ ಗೆಯೀಕೊಡೋ
ರನ್ನದ ಚೆಂಡಾ ಗೆಯಿಕೊಡೊ ಕೆಮಣ್ಣಾ
ಹಗಳದ ಚಂಡಾ ಗೆಯೀಕೊಡೋ
ಹಗಳದ ಚಂಡಾ ಗೆಯಿಕೊಡೋ ಕೆಮಣ್ಣ
ಹೂಂಗಿನ ಚಂಡಾ ಗೆಯೀಕೊಡೋ
ಅಟ್ಟಂಬಾ ಮಾತಾ ಕೇಳಾನೆ ಕೆಮಣ್ಣ
ಚಿನ್ನದ ಚಂಡಾ ಗೆಯೀದಾನೆ
ಚಿನ್ನದ ಚಂಡಾ ಗೆಯಿದಾನೆ ಕೆಮಣ್ಣ
ರತ್ನದ ಚಂಡ ಗೆಯೀದಾನೆ
ರತ್ನದ ಚಂಡ ಗೆಯಿದಾನೆ ಕೆಮಣ್ಣ
ಹಗಳದ್ ಚಂಡಾ ಗೆಯೀದಾನೆ
ಹಗಳದ ಚಂಡಾ ಗೆಯಿದಾನೆ ಕೆಮಣ್ಣ
ಹೂಂಗಿನ ಚಂಡಾ ಗೆಯೀದಾನೆ
ಹೂಂಗಿನ ಚಂಡಾ ಗೆಯಿದಾನೆ ಕೆಮಣ್ಣ
ಚಂಡಂಬು ಚಂಡೆಲ್ಲ ಗೆಯೀದಾನೆ
ಚಂಡೆಂಬು ಚಂಡೆಲ್ಲಾ ಗೆಯೀದಾನೆ ಸೊನಗಾರ
ಮಾಳಗ್ಗಿಂದೆರಗೆ ಬರೋವಾನೆ
ಮಾಳಗ್ಗಿಂದೆರಗೆ ಬರುವಾನೆ ಸೊನಗಾರ
ನಾರ್ಣದ್ಯೆವ್ನ ಕಯ್ಲೇ ಕೊಡೋವಾನೆ
ಕೊಟ್ಟ ಚಂಡೆಲ್ಲಾ ತಟ್ಟಾನೇ ತಡದಾನೆ
ಅದಕಲ್ಲೇ ಹಣವಾ ಸಲೀಸಾನೆ ನಾರ್ಣದ್ಯೆವಾ
ಚಂಡಾನೇ ಹಿಂದೇ ಕೊಡೋವಾನೆ ।

೮. ಸೊನಗಾರ ೯. ಹವಳದ

ಚಂಡಾನೇ ಹಿಂದೇ ಏನಂದಿ ಕೊಡವಾನೇ
ಚಂಡೀಗೆ ಹರಸಿ ಕೊಡಬೇಕು ।
ನಾ ಕೊಟ್ಟ ಗಳಗ್ಯಲ್ಲಿ ನೀ ತಡ್ಡ ಮೂರುತದಲ್ಲಿ
ಕಾಮ್‌ದ್ಯೆವ್ನಾಯಿಸವೇ ಹಿರಿದಾಲಿ[೧೦] । ಅಂದೇಳಿ
ಚಂಡೀಗೆ ಹರಸೇ ಕೊಡವಾನೆ
ಚಂಡೀಗೆ ಹರಸೇ ಕೊಡುವದ್ನು ನಾರ್ಣದ್ಯೆವಾ
ಹಚ್ಚಡ ಸೆರಗೀಲೇ ಅಳವಡಚೇ[೧೧]
ಹಚ್ಚಡ ಸೆರಗೀಲೆ ಅಳ್ವಡ್ಚೇ ನಾರ್ಣದ್ಯೆವಾ
ತನ್ನಲರಮನಗೇ ಬರುವಾನೇ । ನಾರ್ಣದ್ಯೆವಾ
ತೂಗುಮಂಚದ ಮ್ಯೆನೇ ಕುಳತಾನೇ
ತೂಗ್ ಮಂಚದ ಮ್ಯೆನೆ ಕುಳುವದ್ನು ಕಾಮ್‌ದ್ಯೆವಾ
ಓಡ್‌ಬಂದ್ ತೊಡಿಮ್ಯೆನೆ ಕುಳುವಾನೇ
ಓಡ್‌ಬಂದ್ ತೊಡಿಮ್ಯೆನೆ ಕುಳುವದ್ನು ಕಾಮ್‌ದ್ಯೆವ್ನಪ್ಪ
ನೆತ್ತೀಯ ಕಿಟ್ಟೇ[೧೨] ಅಳಗಾನೆ[೧೩] । ಕಾಮ್‌ದ್ಯೆವ್ನಪ್ಪ
ಚಿನ್ನದ ಚೆಂಡ ಕೊಡುವಾನೆ । ಕಾಮ್‌ದ್ಯೆವ್ನಪ್ಪ
ತೊಡೆಗಿಂದು ಕೆಳಗೆ ಇಳೀ ಅಂದ
ತೊಡೆಗಿಂದು ಕೆಲಗೆ ಇಳುದಾನೇ ಕಾಮ್‌ದ್ಯೆವಾ
ಮಾಳೂಗಿ ಒಳಗೆ ನೆಡೂದಾನೆ
ಮಾಳೂಗಿ ಒಳಗೆ ನೆಡುವದ್ನು ಕಾಮ್‌ದ್ಯೆವಾ
ತಾಯವ್ವಿ ಕರದೇ ನುಡೀಮಾತೆ ।
ತಾಯವ್ವಿ ಕರದೇ ಏನಂದಿ ನುಡಿಮಾತೇ
ಚಂಡೀನೂಟಕೆ ಅನೂಮಾಡೇ
ಚಂಡೀನೂಟಕೆ ಅನುಮಾಡೇ ತಾಯವ್ವಿ
ಚಂಡೀನಾಟಕೆ ನೆಡೀಬೇಕೇ ।
ಅಟ್ಟಂಬು ಮಾತಾ ಹೇಳಾನೇ ಕಾಮ್‌ದ್ಯೆವಾ
ಆನೀ ಸಾಲೀಗಾಗಿ ನೆಡೀದಾನೆ
ಆನೀ ಸಾಲೀಗಾಗಿ ನೆಡದಾನೆ ಕಾಮ್‌ದ್ಯೆವಾ
ಅಂದೊಳ್ಳೊಂದಾನಿ ಹೊಡತಂದೆ । ಕಾಮ್‌ದ್ಯೆವಾ
ಅಂದಚಂದದಲೇ ಹೊಡೀಯುದ್ದಿ
ಅಂದಚೆಂದದಲಿ ಹೊಡಿಯುದ್ದಿ ಕಾಮ್‌ದ್ಯೆವಾ
ತಿಂಬೂಕಿಕ್ಕನಿಯೇ ಕಡಲಿಯೇ
ತಿಂಬೂಕಿಕ್ಕನಿಯೆ ಕಡಲೀಯ ಕಾಮ್‌ದ್ಯೆವಾ

---

೧೦. ಹೆಚ್ಚಾಗಲಿ ೧೧. ಕಟ್ಟಿ ೧೨. ಮುಟ್ಟಿ ೧೩. ನೇವರಿಸು

ಬಾಲಕ ಸುವರ್ಣ ಬಳೀಸಾನೆ । ಕಾಮ್‌ದ್ಯೆವಾ
ಕೊಳ್ಳಿಗ್ ಕಟ್ಟನಿಯೇ ಸೆರಗೆಂಟೆ । ಕಾಮ್‌ದ್ಯೆವಾ
ಕಾಲಗ್ ಕಟ್ಟನಿಯೇ ಉರಗೆಜ್ಜಿ । ಕಾಮ್‌ದ್ಯೆವಾ
ಆನೀಕಂಬಗಾನಿ ಬಿಗಿದಾನೆ । ಕಾಮ್‌ದ್ಯೆವಾ
ಮಾಳೂಗಿ ಒಳಗೆ ನಡದಾನೆ ।
ಅಟ್ಟದ ಮ್ಯೆನನ ಪುಟ್ಟು ಸಣ್ಣಕ್ಕೀಯಾ
ಅನ್ನಮ್ಯಾಗರಕೆ[೧೪] ಅನುಮಾಡಿ । ತಾಯವ್ವಿ
ಹಾಲೂ ಪಾಯಸಕೇ ಅನೂಮಾಡಿ
ಬೇಲಿಯ ಮ್ಯೆನನ ದಾರೆ ಹೀರೆಕಾಯಿ
ದಾರಿಯ ತೆಗುದೇ ಉಗುರಿಸೇ
ಎಲ್ಲಾ ಮೆಗರಕೆ ಅನೂ ಮಾಡಿ
ಎಲ್ಲಾ ಮ್ಯೆಗರಕು ಅನುಮಾಡಿ ತಾಯವ್ವಿ
ಬಚ್ಚಲರಮನಗೇ ನೆಡಽದಾಳೆ । ತಾಯವ್ವಿ
ಹರವೀಗೆ[೧೫] ನೀರಾ ಎರದಾಳೆ ।
ಹರವೀಗೆ ನೀರಾ ಎರವದ್ನು ಕಾಮ್‌ದ್ಯೆವಾ
ಬಚ್ಚಲರಮನಗೆ ನೆಡದಾನೆ । ಕಾಮ್‌ದ್ಯೆವಾ
ಬಚ್ಚಲ ಕಲನಲ್ಲೇ[೧೬] ನಿಲೋವಾನೆ
ಮುತ್ತೀನಲ್ಲೆರದಾ ಮಣಿತೆಂಗು[೧೭] ತಡಕಂಡೇ
ಕೇಸೀಗೆ[೧೮] ನೀರಾ ಎರದಾನೆ
ಕೇಸ ಬಿಡಸದ್ರೆ ದೇಸಕೆ ಒಲವಾದ
ಮುಂದೀನುಪ್ಪರಗಿ ದವಳರ[೧೯]
ಮಿಂದಾನೊಗದಾನೆ ಮಿಂದ್‌ಮಡಿಯುಟ್ಟಾನೆ
ಗಂದಾದ ಬೊಟ್ಟೊಂದ ಇಡವಾನೆ । ಕಾಮ್‌ದ್ಯೆವ
ದ್ಯೆವರಿಗೆ ಕಯ್ಯ್ಯಾ ಮುಗೀದಾನೆ
ದ್ಯೆವರಿಗೆ ಕಯ್ಯ್ಯಾ ಮುಗಿದಾನೆ ಕಾಮ್‌ದ್ಯೆವ
ಊಟಕೊಂದೋಗಿ ಕುಳತಾನೆ ।
ಊಟಾಕೊಂದೋಗಿ ಕುಳವದ್ನು ತಾಯವ್ವಿ
ಬೆಳ್ಳೀ ಹರವಣದ ಮಡಗಾಳೆ । ತಾಯವ್ವಿ
ಮಾಡೀದಡಿಗೀಯ ಬಡಸಾಳೆ । ತಾಯವ್ವಿ
ತುಪ್ಪ ಸಕ್ಕರಿಯಾ ಎರದಾಳೆ । ತಾಯವ್ವಿ
ತುಪ್ಪ ಸಕ್ಕರೆಯ ಎರದೀ ತಿರಗೂರೊಟಗೆ

---

೧೪. ಮೇಲೋಗರ ೧೫. ಬಚ್ಚಲು ಹಂಡೆ ೧೬. ಕಲ್ಲಿನ ಮೇಲೆ ೧೭. ತೆಂಗಿನ ಚಿಪ್ಪಿನಿಂದ ತಯಾರಿಸಿದ ನೀರು ತೆಗೆಯುವ ಸವಟು ೧೮. ಕೂದಲಿಗೆ ೧೯. ಬೆಳ್ಳಗೆ ಮಿಂಚು

ಉಂಡೆದ್ದನೊಂದು ಗಳಗ್ಯಲ್ಲೆ । ಕಾಮ್‌ದೈವ
ತೂಗುಮಂಚಲ್ಲೆ ಕುಳೋವಾನೆ ।
ಆಯುಳ್ಳ ಹಣ್ಣಡಕೆ ಸೋಯಿಸಿದ ಬೆಳಿಯೆಲಿ
ಹಾಲಿನಲಿ ಬೆಂದ ಕೆನೆಸುಣ್ಣ । ತಡಕಂಡೆ
ಮಗ್ಗೊಂದೀಳ್ಯವ ಕೊಡೋವಾಳೆ ।
ತಾಯ್ ಕೊಟ್ಟೀಳ್ಯವ ತಟ್ಟನೇ ತಡದಾನೆ
ಆಯಕೊಂದೀಳ್ಯವ ಮೆಲೋವಾನೆ
ಎಲಿಯೊಂದ ತಿಂದಾನೇ ರಜವಲ್ಲಿ ಉಗುಳಾನೇ
ಕುಳತ ಗದ್ದಗಿಯ ಜಡದೆದ್ದೇ । ಕಾಮ್‌ದೈವಾ
ಮಾಳೂಗಿ ಒಳಗೇ ನೆಡದಾನೆ । ಕಾಮ್‌ದೈವಾ
ಅಟ್ಟತ್ತಿ ಪೆಟ್ಟಗಿಯಾ ತೆಗದಾನೆ । ಕಾಮ್‌ದೈವಾ
ಮೆಟ್ಟಿ ಬೀಗವ ಕರಿದಾನೆ । ಕಾಮ್‌ದೈವಾ
ಮುತ್ನ ಮುಂಡಾಸ್ನ ತಲಸುತ್ತೇ । ಕಾಮ್‌ದೈವಾ
ಬೆರಳೀಗುಂಗಲ ದರೀಸಾನೆ । ಕಾಮ್‌ದೈವಾ
ಎಂಟೂ ಚವಕಲಿಯಾ ಕೆಮಿದುಂಬೇ[೨೦] । ಕಾಮ್‌ದೈವಾ
ನೆಡವೀಗೆ ನೈವಳವ ಇಡುವನೇ ಕಾಮ್‌ದೈವ
ಬಣ್ಣದೆಲವಸ್ತ್ರಬಲಗಯ್ಲಿ । ತಡಕಂಡಿ
ಪೆಟ್ಟುಗಿಯ ಬಾಯಲ್ಲೇ ಮಡೂಗಾನೆ । ಕಾಮ್‌ದೈವಾ
ಮಾಳಗ್ಗಿಂದ್ಹೆರಗೇ ಬರೂವಾನೇ
ಮಾಳಗ್ಗಿಂದ್ಹೆರಗೇ ಬರುವಾನೆ ಕಾಮ್‌ದೈವಾ
ಬೋರಿನೆ ಆನೀ ನೆಗದಾನೆ । ಕಾಮ್‌ದೈವಾ
ಆನೀಗೆ ಚಬಕಾ ಒಗದಾನೆ । ಕಾಮ್‌ದೈವಾ
ಚಂಡೀನ ಗೋಳೀಗೇ ನೆಡದಾನೆ । ಕಾಮ್‌ದೈವಾ
ಚಂಡನ ಬಯ್ಲಲ್ಲೇ ನಿಲವಾನೆ । ಕಾಮ್‌ದೈವಾ
ಆನೀಗಿಂದ್ ಕೆಳಗೇ ಇಳೀದಾನೇ ।
ಆರೂಗೆರಿಯನೇ ಬರದಿ ಒಂಬತ್‌ಗೆರಿಯನೆ ಕಟ್ಟಿ
ಕಾಮ್‌ದೈವಾಟಾಕೇ ಕುಳುತಾನೆ । ಕಾಮ್‌ದೈವಾ
ಚಿನ್ನದ ಚಂಡ ಹೊಡದಾನೆ । ಕಾಮ್‌ದೈವಾ
ಚಂಡ್ಹೋಗಿ ಮಂಡಲವಾ ಗಳೀದಾವೆ
ಮಾಣಿಕದ ಚಂಡ ಹಾರೀಸೊಗವಂಗೇ
ಚಂಡೋಗಿ ಮಂಡಲವ ಗಳೀದಾವೇ
ಹಗಳದ ಚಂಡ ಎತ್ತರಿಸಿ ಹೊಡದಾನೇ

೨೦. ಕಿವಿ ತುಂಬಿ

ಹಗಳದ ಚಂಡ ಎತ್ತರೀಸೋಗವಂಗೇ
ಚಂಡ್ಡೋಗೆ ಮಂಡಲವ ಗಳೀದಾವೇ
ಚಿನ್ನದ ಚಂಡ ಹೆಕ್ಕೀ ತಂದ್ ಕೊಟ್ಟೋರಿಗೆ
ಚಿನ್ನದುಪ್ಪರಗಿ ಒಳನೆಂಚ[೨೧] ।
ಚಿನ್ನದುಪ್ಪರಗಿ ಒಳನೆಂಚಂಬುರಟ್ಟಿಗೆ
ಆಕಾಸದಲ್ ವಾಕ್ಸ ನುಡೀದಾವೆ ।
ಯಾರೀಗೆ ಒಳನೆಂಚ ಯಾರೀಗೆ ಹೆರನೆಂಚ
ಯಾರಿಗೆ ನೆಂಚ ಕೊಡವೀಯೋ । ಕಾಮ್‌ದೈವಾ
ಚಂಡ್ಡೋಗೇ ಮಂಡಲ ಗಳೀದಾವೆ । ಕಾಮ್‌ದೇವಾ
ಚಂಡ್ಡೋಗೇ ರತ್ನಿಯಾ ಮಡಲಲ್ಲಿ । ಬಿದ್ದದೆ
ಚಂಡೀನಲ್ ಬಂತೋ ಮದವೀಯೋ । ಅಂದ್ ರತ್ನಿಯು
ಚಂಡೀನಾಟಕೇ ಕುಳತಾಳೋ ।
ಅಟ್ಟಂಬ ಮಾತಾ ಕೇಳಾನೆ ಕಾಮ್‌ದೈವಾ
ತಾ ತಂದ ಚಂಡ ತಳನಲ್ಲಿ । ಮಡಗಾನೆ
ಬೋರಿನೆ ಆನಿ ನೆಗದತ್ತಿ । ಕಾಮ್‌ದೈವಾ
ಮಾವಾನರಮನಗೇ ಬರೋವಾನೊ
ಉದ್ದನ ಕಾಳ್ನಂತ ತಿದ್ದುಳ್ಳ ನೆರಿಯೋಳೆ
ಒಡನಲೇ ಬಂತೇ ಮದವೀಯೆ
ಒಡನಲೆ ಬಂತೇ ಮದವಿ ಅಂಬದ್ನು ರತ್ನಿ
ಚಂಡಾಬರ್ಗ್ಗ ಕಾಮ್ನೆದಿಗೆ ಒಗದಾಳೆ ।
ಚಂಡಾಬರ್ಗ್ ಕಾಮ್ನೆದಿಗೆ ಒಗುವದ್ನು ಕಾಮ್‌ದೈವ್ನ
ಕಣ್ಣಿಗ್ ಕತ್ತಲಿಯೇ ಕವಿದಾವೆ ।
ಕಣ್ಣಿಗ್ ಕತ್ತಲಿಯೇ ಕವಿದಾವೆ ಅಂಬುದ್ನು
ಗಿಂಡೀ ಸೆಣ್ಣಕ್ಕ ಹೆರಗ್[೨೨] ಬಂತೇ ।
ಗಿಂಡೀ ಸೆಣ್ಣಕ್ಕ ಹೆರಗ್‌ಬಂದೇನ್‌ಮಾಡಾಳೇ
ಎದೆಗೆಲ್ಲಾ ನೀರಾ ಇಡುವಾಳೇ ।
ಎದೆಗೆಲ್ಲ ನೀರ ಇಡುವದ್ನು ಕಾಮ್‌ದೈವಾ
ಮಿಯ್ಯಾ ಮುರುದೆದ್ದೇ ಕುಳುತಾನೋ । ಕಾಮ್‌ದೈವಾ
ಮಾಳೂಗಿ ಒಳಗೆ ನೆಡದಾನೆ । ಕಾಮ್‌ದೈವಾ
ಮಾಮಾದೀರ್ ಬಲಕೇ ನೆಡಃದಾನೆ ಕಾಮ್‌ದೈವಾ
ಮಾವನ ಸಿರಿಪದಕೆ ಸರಣಂದೇ ।
ಆಯ್ಸವಂತನಾಗು ಆಯ್ಸು ಬಲಿದವನಾಗು

೨೧. ಒಳಲಂಚ ೨೨. ಹೊರಗೆ

ದಂಡಗ ಬಂಡರವ ತಡಿದೋಗು
ದಂಡಗ ಬಂಡರ ನಿಮ್ಮಕ್ಕ ತಡಿಯಲಿ
ನಾ ಬಂದೆ ನಿಮ್ಮಾ ಮಗಳೀಗೆ
ಸೊಕ್ಕಿನ ಕಾಮ್‌ದ್ಯೆವಾ ಸೊಕ್ಕನ ಮಾತಾಡಿದಿಯ
ಸೊಕ್ಕೇರಿ ಬರುವಾ ಸೊಣಗೀಯಾ । ಕೊಡಿ[೨೩] ತಂದು
ತಿಕ್ಕೂವೆ ನಿನ್ನಾ ಮುಸಡೀಗೆ
ಅಟ್ಟಂಬ ಮಾತಾ ಕೇಳಾನೇ ಕಾಮ್‌ದ್ಯೆವಾ
ಸಿಟ್ಟೀನಲ್ಲೆದ್ದೇ ನೆಡದಾನೆ । ಕಾಮ್‌ದ್ಯೆವಾ
ತನ್ನಲರಮನಗೆ ನೆಡದಾನೆ । ಕಾಮ್‌ದ್ಯೆವಾ
ಹೋಗಿ ಬಾಗಲ್ಲೇ ನಿಲೂವಾನೆ ।
ಚಂಡಾಡುಕೋದ್ ಮಗನೇ ಮನಗೇ ಬಂದಾನಂದೇ
ಮಾಳೂಗಿ ಒಳಗೆ ನೆಡದಾಳೆ । ತಾಯವ್ವಿ
ಕಾಮ್‌ದ್ಯೆವಗ್ ದಿಟ್ಟೀ ತೆಗದಾಳೆ ।
ಕಾಮ್‌ದ್ಯೆವಗ್ ದಿಟ್ಟೀ ತೆಗವದ್ನು ಕಾಮ್‌ದ್ಯೆವಾ
ತೂಗ್‌ಮಂಚದ ಮ್ಯೆನೇ ಕುಳತಾನೇ ।
ತೂಗುಮಂಚದ ಮ್ಯೆನ್ ಕುಳುವದ್ನು ತಾಯವ್ವಿ
ಮಗ್ಗೊಂದ್ ಈಳ್ಯವ ಕೊಡುವಾಳೆ ।
ಏನಂದ್ರೋ ನಿನ್ನಾ ಮಾವಾ ಎಂತಂದ್ರೋ ನಿನ್ನಾ ಮಾವಾ
ಏನ್‌ಬುದ್ದಿ ಒರದೇ ಕಳ್ಗರಿಯೋ[೨೪]
ಅಯ್ವರು ಮಾವಾದೀರು ಅಚ್‌ಪಗಡೀ ಆಡ್ವಂಗೆ
ಮಾವನ ಸಿರಿಪದಕೇ ಸರಣಂದೇ
ಆಯ್ಸವಂತನಾಗೋ ಆಯ್ಸ ಬಲಿದವನಾಗೋ
ದಂಡಗ ಬಂಡರವ ತಡಿದೋಗೋ
ದಂಡಗ ಬಂಡರ ನಿಮ್ಮಕ್ಕ ತಡಿಯಿರಿ
ನಾ ಬಂದೆ ನಿಮ್ಮ ಮಗಳೀಗೆ
ಅಟ್ಟಂಬ ಮಾತಾ ಹೇಳಿದೆ ತಾಯಿ ಕೇಳೆ
ಸಿಟ್ಟಿನಲ್ಲೆದ್ದ ಬರುವನೆ । ಅಂಬುದ್ನು
ಆಗೊಂದು ಮಾತಾ ನುಡದಾಳೆ
ಒಂದ್ ಪೆಟ್ಹೋದರೆ[೨೫] ನಂಬವೋ ಮಗನೇ ಕೇಳೋ
ಮತ್ತೊಂದ್ ಹತ್ರೋಗಿ ಬರಬೇಕು
ಅಯ್ವರ ನೆಡಗೇ ಒಬ್ಬನೇ ಕಾಮ್‌ದ್ಯೆವಾ
ಕಾಮ್‌ದ್ಯೆವ್ನಂಬಳಿನಾ ಬಿಡಬ್ಯೆಡಿ । ಅಂದ್ಹೇಳಿ

೨೩. ಕುಡಿ ೨೪. ಕಳಿಸಿದ್ದಾರೆ ೨೫. ಒಂದು ಸಲ ಹೋದರೆ

ಅಯ್ವರ್ ಮಾವ್‌ದಿರ್ಗುಸರಣನ್ನೋ । ಅಂಬದ್ನು
ಕಾಮ್‌ದ್ಯೆವಾ ಮಾವನರಮನಗೇ ನೆಡದಾನೆ । ಕಾಮ್‌ದ್ಯೆವಾ
ಮಾವನ ಸಿರಿಪದಕೆ ಶರಣಂದ ।
ಆಯ್ಸವಂತನಾಗೋ ಆಯ್ಸ ಬಲಿದವನಾಗೋ
ನೀ ಕಟ್ಟಿದ ಮುಂಡೆಸ್ನ ತಿರವಾಲಿ
ಕಟ್ಟಿದ ಮುಂಡೆಸ್ನಕೆ ಎಲ್ಲಾರು ಹರಸುರು ಮಾವಾ
ನಾ ಬಂದೆ ನಿಮ್ಮಾ ಮಗಳೀಗೆ
ಕಾಲ್ಗೆ ಕಾಲುಂಗೀಲ ತೋಳಗೆ ತೋಳುಬಳೆ
ಕೊಳ್ಳಗೆ ಪಿರ್ತುಳ್ಳ ಪದಕವೇ
ಕೊಳ್ಳಗ ಪಿರ್ತುಳ್ಳ ಪದಕ ಪಾವನಸರ
ಮರೆಯದೆ ತಾರೋ ಮಗಳೀಗೆ ।
ಅಂಗಯ್ಗ ತಾರಕಲಬೆಳ್ಳಿ ತುರಬೀಗೆ ಹೂಂಗನಜಲ್ಲಿ
ಕೊಳ್ಳಗೆ ಪಿರ್ತುಳ್ಳ ಪದಕವೇ
ಕೊಳ್ಳಗ ಪಿರ್ತುಳ್ಳ ಪದಕ ಪಾವ್ನಸರವ
ಮರೆಯದೆ ತಾರೋ ಮಗಳೀಗೆ ।
ತದಗೀ ಬೆದಗೀಯೇ ಹುಣ್ಣಿಮಿ ಪಂಚಮಿಯೇ
ಪಂಚುಮಿಗೇಳು ದಿನದಲ್ಲಿ । ಕಾಮ್‌ದ್ಯೆವ್ನ ದಿಬ್ಣ
ಆನಗಲ್ಲ ಅರಿಗಾಗಿ[೨೬] ಬರಬೇಕು । ಕಾಮ್‌ದ್ಯೆವ್ನ ದಿಬ್ಣಾ
ಬಾಳೀ ಬನದಲ್ಲೇ ನಿಲಬೇಕು
ಅಟ್ಟಂಬಾ ಮಾತಾ ಕೇಳಾನೇ ಕಾಮ್‌ದ್ಯೆವಾ
ತನ್ನಲರಮನಗೇ ನೆಡದಾನೆ
ತನ್ನಲರಮನಗೇ ನೆಡವದ್ನು ತಾಯವ್ವಿ
ಮಗನಾ ಒಡನೋಗಿ ನಿಲೂವಾಳು ।
ಏನಂದ್ರೋ ನಿನ್ನಾ ಮಾವಾ ಎಂತಂದ್ರೋ ನಿನ್ನಾ ಮಾವಾ
ಏನ್‌ಬುದ್ದೀ ಒರದೀ ಕಳಗರಿಯೋ
ತದಗೀ ಬೆದಗೀಯೋ ಹುಣ್ಣಿಮಿ ಪಂಚಮಿಯೋ
ಪಂಚಮಿಗೇಳು ದಿನದಲ್ಲಿ । ಕಾಮ್‌ದ್ಯೆವ್ನ ದಿಬ್ಣ
ಆನಗಲ್ ಅರಿಗಾಗಿ ಬರಬೇಕು । ಕಾಮ್‌ದ್ಯೆವ್ನ ದಿಬ್ಣ
ಬಾಳೀ ಬನದಲ್ಲೇ ನಿಲಬೇಕು । ಅಂದೇಳಿ
ಬುದ್ದೀಯನ್ನೊರದೀ ಕಳಗರಿಯೇ
ಅಟ್ಟಂಬು ಮಾತಾ ಹೇಳನಿಯೇ ಕಾಮ್‌ದ್ಯೆವಾ
ಕುಳತಾ ಗದ್ದಗಿಯಾ ಜಡದೆದ್ದಿ । ಕಾಮ್‌ದ್ಯೆವಾ

೨೬. ಕಲ್ಲು ಬಂಡೆ

ಅಟ್ಟದ ಪೆಟ್ಟಿಗಿಯ ಅರಳಡಚಿ । ಕಾಮ್‌ದ್ಯೆವಾ
ಮೂರು ಬೊಕ್ಸ್ ಹಣವಾ ಮೊಗದಾನೆ । ಕಾಮ್‌ದ್ಯೆವಾ
ಹಣ್ಣಡಕೆ ಬೆಳಿಯೆಲೆಯ ತಡದಾನೇ । ಕಾಮ್‌ದ್ಯೆವಾ
ನಾರ್‍ಯೋರ ಕೇರಿಗಾಗೇ ನೆಡದಾನೇ । ಕಾಮ್‌ದ್ಯೆವಾ
ನಾರ್‍ಯೋರಿಗ್ ಈಳ್ಯಾ ಕೊಡುವಾನೇ ।
ಬಿರಸ್ತರ ಬಿದಗೀಯೇ ಸುಕ್ರಾರ ತದಗೀಯೇ
ಸಣಿಯಾರ ಕಾಮ್‌ದ್ಯೆವ್ನ ಮದವೀಯೇ । ನಾರಿಯೋರೆ
ಎಳ್ಯ ಮೂರತಕೆ ಬರೋಬೇಕು
ಎಳ್ಯ ಮೂರತಕೆ ಬರಬೇಕು ನಾರಿಯೋರೆ
ಮುಂಚೆ ನಮ್ಮನಿಗೆ ಬರೋಬೇಕು
ಮುಂಚೆ ನಮ್ಮನಿಗೆ ಬರಬೇಕು ನಾರಿಯೋರೆ
ಅಕ್ಕಿಯ ಕೆಲಸ ನಿಮಗುಂಟು । ನಾರಿಯೋರೆ
ಮುತ್ತನ ಹಸಗರವ ಬರಿಯಾಬೇಕು । ಅಂದ್ವೇಳೇ
ಸೊನಗಾರ ಮನಗೇ ನೆಡದಾನೆ ।
ಇಂದ್ರಲೋಕದ ಸೊನಗಾರಾ ಇಂದೇ ಗದ್ದಗಿ ಹೂಡೇ
ಬಂದೀಯ ಬ್ಯೆಗೇ ಗೆಯೀಕೊಡೋ । ಅಂದ್ವೇಳೆ
ಸೊನಗಾರಗೀಳ್ಯ ಕೊಡೋವಾನೊ
ಸೊನಗಾರಗೀಳ್ಯ ಕೊಡವಾನೆ ಕಾಮ್‌ದ್ಯೆವಾ
ಕುಂಬಾರ ಮನೆಗೆ ನೆಡದಾನೊ । ಕಾಮ್‌ದ್ಯೆವಾ
ಕುಂಬಾರಗೀಳ್ಯಾ ಕೊಡವಾನೊ ।
ಕುಂಬಾರಗೀಳ್ಯ ಏನಂದಿ ಕೊಡವಾನೊ
ಕುಂಬದ ಕೆಲಸ ನಿನಗುಂಟು ।
ಇಂದ್ರಾಲೋಕದಂಗಡೀಗೆ ನೆಡದಾನೋ ಕಾಮ್‌ದ್ಯೆವಾ
ಇಂದ್ರಾಲೋಕದ ಪಟ್ಟೀ ತಗದಾನೆ । ಕಾಮ್‌ದ್ಯೆವಾ
ಆಗೊಂದು ಮಾತಾ ನುಡೀದಾನೆ ।
ಆಗೊಂದು ಮಾತಾ ಏನಂದಿ ನುಡಿದಾನೆ
ನೀ ಕೊಟ್ಟ ಮೂರುತದಲ್ಲಿ ನಾ ಹಿಡ್ದ ಮೂರುತದಲ್ಲಿ
ಕಾಮ್‌ದ್ಯೆವ್ನ ಆಯಿಸವೇ ಹಿರಿದಾಲಿ । ಅಂದೇಳಿ
ಪಟ್ಟೀಯಾ ಹರಸೆ ಕೊಡುಬೇಕೇ ।
ಪಟ್ಟೀಯ ಹರಸೇ ಕೊಡುಬೇಕು ಅಂಬುದ್ನು
ಇಂದ್ರಾಲೋಕದ ಅಂಗುಡಿ ಶೆಟ್ಟಿಯು
ಕಾಮ್‌ದ್ಯೆವ್ನ ಆಯುಸವೇ ಹಿರಿದಾಲಿ
ಕಾಮ್‌ದ್ಯೆವ್ನಾಯುಸವೇ ಇರಿದಾಲಿ ಅಂದೇಳಿ
ಪಟ್ಟೀಯ ಹರಸೇ ಕೊಡುವಾನೆ ।

ಪಟ್ಟಿಯ ಹರಸೇ ಕೊಡುವದ್ನು ಕಾಮ್‌ದ್ಯೆವಾ
ತನ್ನಲರಮನಗೇ ಬರವಾನೇ ।
ತನ್ನಲರಮನ್ಗೇ ಬರುವದ್ನು ಕಾಮ್‌ದ್ಯೆವ್ನ ಮಲ್ಲೇ
ನಾರಿಯರ್ ಬಂದೇ ನೆರ್‍ದ್ದಾರೇ ।
ಕೆಂದೀಯ ಸಗಣಿ ಅಂಗೈಲಿ ತಡಕಂಡೇ
ಮುಂದನ ಮಾಳುಗಿಗೇ ನೆಡದಾರೆ । ನಾರಿಯೋರು
ಮೂಡಣ ಗ್ವೊಡೀ ನೆಲನುದ್ದಿ । ನಾರಿಯೋರು
ಅಂಕಣದ ಹಸಗೇರಿ ಬರದಾರೆ ।
ಅಕ್ಕಿ ತಳಸುತ ಮುತ್ತ ಬೆಲಮಾಡುತ
ಚಿತ್ತಾರದ ಕಿವ್ರ ಬರೆಯೂತ । ನಮ್ಮನಿಯ
ಚಿಕ್ಕ ಕಾಮ್‌ದ್ಯೆವ್ನ ಮದವೀಗೆ ।
ಚವ್ಕವ ತುಂಬೇ ಮಲಕೀನ ಕೊರಳೋಳೆ
ಸುಲಿಹಲ್ಲು ಸ್ವೊಗೆ ನೆರಿಯೋಳೆ । ಕಾಜೀನ
ಬಳಿಯೋಳು ತುಂಬೆ ಚವ್ಕವ । ಕಾಮ್‌ದ್ಯೆವ್ನಮಲ್ಲಿ
ಸೇಡೀಯ ಕೆಲ್ಸೆಲ್ಲಾ ಮುಗೀದಾವ್ವೋ ।
ಉದ್ದೀನ ಮುಡಿಯಾ ಸೊರಗಾರೇ ನಾರಿಯೋರು
ಅಕ್ಕೀಯ ಮುಡಿಯಾ ಸೊರುಗಾರೆ । ನಾರಿಯೋರು
ಅಕ್ಕೀ ಗೇರ್‍ವಕೆ ಕುಳತಾರೇ ।
ಗೇರ್‍ವರ್ ಗೇರೀರಿ ತಳಸ್ವರೆ ತಳಸೀರಿ
ಮಿಕ್ಕಿದ್ದೋರುದ್ದ ಒಡಿಯಿರಿ । ನಮ್ಮನಿಯ
ಮುದ್ದು ಕಾಮ್‌ದ್ಯೆವ್ನ ಮದವೀಗೆ ।
ಹೊತ್ತರಾ ಮುಂಚೆದ್ದಿ ಕಾಲು ಸಿರಿಮೊಕ ತೊಳೆಯುತೇ
ತಾಯೀ ಸಿರಿಪದಕೇ ಸರಣಂದೇ । ತಮ್ಮನಿಯಾ
ನಾಗ್ಲ[೨೭] ಗೊಂದೀಳ್ಯ ಕೊಡುವನೇ ।
ನಾಗ್ಲಗೊಂದೀಳ್ಯ ಏನಂದೀ ಕೊಡುವನೇ
ಕಾಮ್‌ದ್ಯೆವ್ನ ಪನ್ನೀ ಗೆಯ್ವಾಕೆ
ಕೆಂದೀ ಸಗಣಿ ಅಂಗಯ್ಲಿ ತಡಕಂಡಿ
ಅಂದ ಚಂದದಲೇ ನೆಲನುದ್ದೇ । ತಾಯವ್ವಿ
ಅಂಕಣದಲಯ್ದ್ ಸೇಡೀಬರದಾಳೇ
ಸೆಗಣೀ ಸಾರೀಸೇ ಸೇಡೀಯ ಹಲಿಹೊಯ್ಯೇ
ತಾಯೀ ತಂದಿರುಸೇ ತಳುಗೀಯ । ತೆಂಗೀನ
ಕಾಯಾ ತಂದಿರುಸೇ ಪಲದೊಸ್ತ ।

---

೨೭. ಕೆಲಸಿ

ಬಂದಾ ಬಿನ್ನಾಣಿಯ[೨೮] ಚಂದದಿಂದುಪಚರಿಸಿ
ರನ್ನದ ಮಣೆಯಾ ಕೊಡವಾನೇ ।
ಅದು ಏನ ಬಿನ್ನಾಣಿ ಹೊತ್ತೇಕೆ ಗಳದಾವೊ
ಮದವಿ ಅಂಬುದನು ಅರಿಯನೋ । ಗೆದ್ದೀಮನಿಯಾ
ಮಾರಾಯಾರೀಳ್ಯಾ ಕೊಡಲಿಲ್ವ
ಬರುವಕೆ ಬಂದೀನೆ ಬಲವಂತನಾಗೀನೆ
ಮುತ್ತನ ಬಿಲ್ನರು[೨೯] ತಡದಾರೆ
ಮುತ್ತನ ಬಿಲ್ನರು ತಡದಾ ಕಾರಣದಿಂದೆ
ಹೊತ್ತು ಮಜ್ಜನವೇ[೩೦] ಗಳಿದಾವೇ
ಭಟಕಳ ಮಲ್ಲೂಗಿ ಚೊಟ್ಟೆಲ್ಲ[೩೧] ಪರಿಮಳ
ಪಟ್ಟೀಯನ್ನಾಸೇ ಕೊಯ್ತಂದೇ
ಪಟ್ಟೀಯನ್ನಾಸೇ ಕೊಯ್ತಂದತ್ತಗದೀರು
ಮುತ್ತನ ಗುಂಡಿಟ್ಟೀ ಅರದಾರೇ । ಕಾಮ್‌ದ್ಯೆವ್ನಾ
ಮುತ್ನಂತಾ ಮಯ್ಯಾ ಚಿಗುರೀಗೆ ।[೩೨]
ಮಾಳೂಗಿ ಒಳಗೆ ಪಟ್ಟೆ ಮಂಚದ ಮ್ಯೆನೇ
ಬಾವಾದೀರ್ ಕೂಡೇ ಪಗಡೀಯಾ । ಆಡೂವಂತ
ಬಾಲಾ ನೀ ಬಾರೋ ಚಿಗರೆಣ್ಣೆ ।
ತಾಯೀತಂದೀನೋ ತಾಯೀತ ತಡಕಂಡೀ
ಸುತ್ತನ ದ್ಯೆವ್ರೀಗೂ ಸರಣಂದಿ । ತಾಯವ್ವಿ
ಮಗನ ಕಳ್ಸ ನೀರ್ಗೆ ಅರಗಾಳೆ ।
ಆಕಾಸ ಹೊಲನೀರು ಭೂಮೀಯ ತಲನೀರು
ಆಕೆ ತಾಯಮ್ನ ಕಳಸದ । ನೀರ್ ಮಿಂದು
ಗೋಪಾಳರ ಸಿಸುವೇ ಬಳದಾನೆ ।
ಬಾಲಾಮಿಂದಾ ನೀರು ಅಂಗಳಕೇ ಹರದಾವೇ
ತಿಂಗು ವಾಲಾಡೇ ಬೆಳದಾವೇ
ಉದ್ಕಮಿಂದನೆ ತಮ್ಮ ತಿಲ್ಕವಿಟ್ಟನೆ ತಮ್ಮ
ಮುದ್ರೀದ ಉಂಗೀಲ ದರುಸೀದ
ನೀರಾ ಮಿಂದನೆ ಬಾಲ ನೀಲ ಇಟ್ಟನೆ ಬಾಲ
ನೀಲಾಣಿಯಂಬಾ ಕುದರೀಯ । ಹೇರೀಕಂಡೇ
ಬಾಲಾ ದಿಬ್ಬಣಕೆ ಸವನೀದ ।
ಹಾರಬಾಣ[೩೩] ಸುರಬಾಣಾ ಸರ್ವವಾದಿದ[೩೪] ಮ್ಯೆನೇ

೨೮. ಕೆಲಸಿ ೨೯. ಬಿಲ್ಲಿನವರು ೩೦. ಮಧ್ಯಾಹ್ನ ೩೧. ದೇಟೆಲ್ಲ ೩೨. ಎಣ್ಣೆ ಮಲ್ಲಿಗೆಯಾದಿ ಹೂಗಳಿಂದ ತಯಾರಿಸಿದ ಸುಗಂಧದೆಣ್ಣೆ ೩೩. ಧರಿಸಿದನು ೩೪. ವಾದ್ಯದ

ಕಾಮ್‌ದ್ಯೆವ್ನ ದಿಬ್ಬಣವೆ ಸವನದೆ ।
ತದಗಿ ಬೆದಗೀಯೇ ಹುಣ್ಣಿಮಿ ಪಂಚಮಿಯೇ
ಪಂಚುಮೀಗೇಳೂ ದಿನದಲ್ಲಿ । ಕಾಮ್‌ದ್ಯೆವ್ನದಿಬ್ಣ
ಆನಗಲ್ ಅರೆಗಾಗಿ[೩೬] ಬರವಾದೇ
ಆನ್‌ಗಲ್ಲರೆಗಾಗಿ ಬರವದು ಕಾಮ್‌ದ್ಯೆವ್ನ ದಿಬ್ಣ
ಬಾಳೀ ಬನದಲ್ಲೇ ನಿಲವಾದೇ
ಬಾಳೀ ಬನದಲ್ಲೇ ನಿಲವದ್ನು ಅರಜೀಣ
ಅರಗೇ ನೋಡನಿಯೇ ಹೆರಗೊಮ್ಮೆ । ಅರಜೀಣ
ಮಾಳೂಗಿ ಒಳಗೇ ನೆಡದಾನೇ ।

(ಕಾಮದೇವನ ಮನೆಯಲ್ಲಿ ಮದುವೆಯ ಸಿದ್ಧತೆ ನಡೆದಂತೆಯೇ ಪಾಂಡವರ ಮನೆಯಲ್ಲಿಯೂ ಕರ್ಣನ ಮಗಳು ಕಾಮದೇವನ ವಧುವಾಗುವ ರತ್ನಿಯ ಮದುವೆಯ ಸಿದ್ಧತೆಯೂ ನಡೆಯುತ್ತದೆ.)

ಮಾಳೂಗಿ ಒಳಗೇ ನೆಡವದ್ನು ಅರಜಿಣ್ಣಮಲ್ಲೇ
ನಾರೀಯರ್ ಬಂದೇ ನೆರದಾರೇ
ನಾರಿಯೋರ್ ಬಂದು ನೆರದಾರೇ ನಾರಿಯೋರು
ಅಕ್ಕೀ ಗೇರ್ವದಕೆ ಕುಳತಾರೇ । ನಾರೀಯೋರು
ಉದ್ದ ಒಡುವದಕೇ ಕುಳತಾರೇ ।
ಉದ್ದ ಒಡುವದಕೇ ಕುಳುವದ್ನು ರತ್ನೀದೇವಿ
ಆಗೊಂದು ಮಾತಾ ನುಡೀದಾಳೆ ।
ಎಲ್ಲೋರ್ವೊಲೀನು ಒಪ್ಪಾಗಿ ಹೊಳುದಾವೇ
ನನ್ನೊಲೀಗೆಂತಾ ಬರಬಂತೇ ।
ನನ್ನೊಲೀಗೆಂತಾ ಬರಬಂತೇ[೩೭] ಲಂದೇಳೇ
ಬಿದ್ದಬಿದ್ದಲ್ಲಿ ಮರಗದೆ ।
ಬಿದ್ದಬಿದ್ದಲ್ಲಿ ಮರಗುದ್ನು ಅರಜೀಣ
ರತ್ನದೇವಿಯೆತ್ತಿ ಹೊಗಲೀಗೆ ।
ರತ್ನದೇವಿಯೆತ್ತಿ ಹೊಗಲೀಗೆ ಹಾಯಿಕಂಡಿ
ಮುತ್ತನ ಚಪ್ಪರಕೆ ನೆಡದಾನೆ । ಅರಜೀಣ
ಚಪ್ಪರ ಸುತ್ತೆಲ್ಲ ತಿರಸಾನೆ
ಚಪ್ಪರ ಸುತ್ತೆಲ್ಲ ತಿರಸಾನೆ ರತ್ನೀಯೆ
ಇದುವೆಲ್ಲ ನಿನ್ನ ಮದವೀಗೆ ।
ಮುತ್ತನ ಚಪ್ಪರ ಎತ್ತ ಸುತ್ತಿದರೇನೊ
ಅಪ್ಪ ಇಲ್ಲದ ಮದ್ವೀಯೋ । ಚಿಕ್ಕಪ್ಪ

೩೬. ಕಲ್ಲುಬಂಡೆ ೩೭. ಕೆಟ್ಟ ಕಾಲ ಬಂತು

ಹೋಗ್ ನನ್ನಪ್ಪನ ಕರತಾರೋ ।
ಅಟ್ಟಂಬಾ ಮಾತಾ ಕೇಳಾನೇ ಅರಜೀಣ
ಮುತ್ತನ್ನಸಗರಕೇ ನೆಡ[೩೮]ದಾನೆ ।
ಮುತ್ತನ್ನಸಗರಕೆ ನೆಡದಾನೆ ರತ್ನಿಯೇ
ಇದುವೆಲ್ಲ ನಿನ್ನಾ ಮದವೀಗೇ ।
ಮುತ್ತೀನ ಚಪ್ಪರ ಎತ್ತ ಸುತ್ತಿದರೇನೋ
ಅಪ್ಪಯಿಲ್ಲದ ಮದ್ವೀಯೋ । ಚಿಕ್ಕಪ್ಪ
ಮೊದುಮಗಳಾಗಿ ನಾ ಕೂದುದಿಲ್ಲ ।
ಮೊದುಮಗಳಾಗಿ ನಾ ಕೂದುದಿಲ್ಲ ಅಪ್ಪಚ್ಚಿ
ಹೋಗ್ ನನ್ನಪ್ಪನ ಕರತಾರೋ
ಅಪ್ಪನ ತಂದ್‌ಕೊಡ್ತೆ ಅಂದ್ ಬಾಸೆಯ ಕೊಟ್ಟ
ಅಪ್ಪಂತ ಮಗಳೀಗೆ ಅರಜೀಣ
ಅಪ್ಪಂತ ಮಗಳೀಗೆ ಹೇಳಾನೆ ಅರಜೀಣ
ತೊಡೆಗಿಂದು ಕೆಳಗೆ ಇಳಿಯಂದ ।
ತೊಡೆಗಿಂದು ಕೆಳಗೆ ಇಳಿಯಂಬದ್ನು ರತ್ನಿದೇವಿ
ತೊಡೆಗಿಂದು ಕೆಳಗೇ ಇಳದಾಳೆ ।
ತೊಡೆಗಿಂದು ಕೆಲಗೆ ಇಳವದ್ನು ಚಿಕ್ಕಪ್ಪ
ಮುತ್ತೀನ್ನಸಗರಲೇ ಕುಳಸಾನೆ ।
ಮುತ್ತೀನ್ನಸಗರಲೇ ಕುಳಸದ್ನು ಅರಜೀಣ
ಮಾಳೂಗಿ ಒಳಗೆ ನೆಡದಾನೆ । ಅರಜೀಣ
ಆ ಲೋಕದ ಸುಣ್ಣಾ ತೆಗಂಡೇ । ಅರಜೀಣ
ಆ ಲೋಕದ ಅನ್ನಾ ತೆಗಂಡೇ । ಅರಜೀಣ
ಆ ಲೋಕದ ಬಣ್ಣಾ ತೊಡವಾನೇ । ಅರಜೀಣ
ಆ ಲೋಕದ ಕೊಡಿಯಾ ತಡದಾನೇ । ಅರಜೀಣ
ಸುರಲೋಕಕಾಗಿ ನೆಡದಾನೇ । ಅರಜೀಣ
ಹೂಂಗಿನ ಹಳುವಾ[೩೯] ದಾಟಾನೇ । ಅರಜೀಣ
ಕಂಡನೇ ಕರ್ಣನ ಹಳುವಲ್ಲಿ
ಹೂಂಗಿನ ಬನದಲ್ಲಿ ಕರ್ಣನಿರುವದ ಕಂಡ
ಅಣ್ಣನೊಡನೋಗಿ ನಿಲುವಾನೇ । ಅರಜೀಣ
ಆಗೊಂದು ಮಾತಾ ನುಡದಾನೆ
ನೀನು ಬರುವಂಗೆ ಮೂರು ತಿಂಗಳ ಬಾಲಿ
ಇದಕಿಂದು ಹಿಂದೆ ಸಲಗೀದೆ । ಅಣ್ಣ ಕೇಳು

೩೮. ಬಟ್ಟೆ   ೩೯. ಬೆಟ್ಟ, ಕಾಡು

ಮಗಳು ಮಂಗಲಕೆ ನೆರದದೆ । ಅಣ್ಣ ಕೇಳು
ದಾರಿ ಅಂಬುದನು ಎರದೋಗೋ । ಅಂಬುದ್ನು
ಕರ್ಣನೊಂದು ಮಾತಾ ನುಡದಾನೆ ।
ಇದ್ದೋರ್ ಮದವೀಗೆ ಸತ್ತೋರ್ ಬರುವಾರೇನೋ
ಮಳ್ಳೀನರಜೀಣ[೪೦] ಮರಳೇನೋ
ಅಪ್ಪನ ತತ್ತೆನಂದೀ ಮಗಳ್ಗೆ ಬಾಸೀ ಕೊಟ್ಟೆ
ನಾ ಹೋಗಲಾರೆ ಅರಮನೆಗೆ । ಅಣ್ಣ ಕೇಳೋ
ನಿನ್ನ ಬಳಿಗ್ ನನ್ನ ಕರಕಣೊ[೪೧] ।
ಯಮರಾಯ್ನ ಪಟ್ಣದಾಗೆ ಬೇಕಾದ ವುಸ್ತದೆ[೪೨]
ಯಮರಾಯ್ರ ಕಂಡ್ರೆ ಬಿಡುದಿಲ್ಲ ।
ಯಮರಾಯ್ರ ಕಂಡ್ರೆ ಬಿಡುದಿಲ್ಲ ತಮ್ಮಾ ಕೇಳೋ
ನೀ ಹೋಗು ನಿನ್ನಾ ಅರಮನಗೆ ।
ಏನೂ ಹೇಳಿದ್ರೂ ಕೇಳೂದಿಲ್ಲಂದೇಳೇ
ಅಣ್ಣನ ಸಿರಿಪದಕೆ ಸರಣಂದೇ ।
ಅಣ್ಣನ ಸಿರಿಪದಕೆ ಸರಣಂದ ಅರಜೀಣ್ಣಾ
ನೆತ್ತೀಯ ನೆತ್ತೀ ಅಳಗಾನೇ ।
ನೆತ್ತೀಯ ನೆತ್ತಿ ಅಳಗೀದ ಕರ್ಣನೆ
ಲಾಗೊಂದು ಮಾತಾ ನುಡೀದಾನೆ
ಲಾಗೊಂದು ಮಾತಾ ಏನಂದಿ ನುಡಿದಾನೆ
ಹೂಂಗನ ಬನದಲ್ಲಿ ಇರು ಅಂದ ।
ಹೂಂಗನ ಬನದಲ್ಲಿ ಇರು ಅಂದೇಳಿ ಕರ್ಣನು
ಯಮರಾಯ್ರರಮನಗೇ ನೆಡದಾನೆ ।
ಯಮರಾಯ್ರರಮನೆಗೆ ನೆಡವದ್ನು ಯಮರಾಯ್ರು
ತುಂಬೀದೋಲಗಲೇ ಇರುವರು ।
ತುಂಬೀದೋಲಗಲೇ ಇರುವದ್ನು ಕರ್ಣನೇ
ಯವರಾಯ್ರ ಸಿರಿಪದಕೆ ಸರಣಂದ ।
ಹೂಂಗಿನ ಬನದಲ್ಲಿ ಇರುವಂತ ಕರ್ಣನೆ
ಏನ್‌ಬಂದೆ ನಮ್ಮಾ ಅರಮನಗೆ ।
ನಾನು ಬರುವಂಗೆ ಮೂರು ತಿಂಗಳ ಬಾಲಿ
ಮಗಳು ಮಂಗಲಕೆ ನೆರದದೆ । ಯಮರಾಯ್ರೆ
ದಾರೀಯೆಂಬುದನು ಎರ್ದಬತ್ತೆ । ಯಮರಾಯ್ರೆ
ಮೂರು ದಿನಕಪ್ಪಣೆಯ ಕೊಡಬೇಕು ।

---

೪೦. ಹುಚ್ಚು ಅರ್ಜುನ   ೪೧. ಕರೆದುಕೋ   ೪೨. ವಸ್ತುವಿದೆ, ವ್ಯವಸ್ಥೆಯಿದೆ

ಅಟ್ಟಂಬ ಮಾತಾ ಕೇಳಾರೇ ಯಮರಾಯ್ರು
ಚಿನ್ನದ ಚಂಡಾ ಕೊಡುವಾರು
ಚಿನ್ನದ ಚಂಡ ಕೊಡುವರು ಯಮರಾಯ್ರು
ಹಗಳದ ಚಂಡಾ ಕೊಡುವಾರು ।
ಕೊಟ್ಟ ಚಂಡೆಲ್ಲ ತಟ್ಟನೇ ತಡದಾರೆ
ಯಮರಾಯ್ನ ಸಿರಿಪದಕೇ ಸರಣಂದೇ । ಕರ್ಣನೇ
ರಾಜಂಗ್ಳ ಮೆಟ್ಟ ಇಳದಾನೇ । ಕರ್ಣನೇ
ಹೂಂಗಿನ ಹಳುದಾಟೇ ನೆಡದಾನೇ ।
ಹೂಂಗಿನ ಹಳುದಾಟೇ ನೆಡದಾನೇ ಕರ್ಣನೇ
ಕಣ್ಸನ್ನಿೀಲೇ ತಮ್ಮನ ಕರ್ದಾನೇ
ಕರ್ಣಾ ಹಿಂದಾಗಿ ಅರಜೀಣ ಮುಂದಾಗಿ
ರಾಜಮಾರ್ಗಲೇ ಬರುವರು
ಅಣ್ಣ ತಮ್ಮನೇ ಒತ್ತಾಳಿ ಮಾಡ್ವಂಗೆ
ಕೊಚ್ಚಿ ಕಾವಲಗಿ ಕೆಡಗೀರು । ತಮ್ಮ ಕೇಳೋ
ಇದುವೊಂದಾ ನೋಡೋ ಇಪರೀತಾ ।
ಹೆಣ್ಕೊಟ್ಟತ್ತಿಯಾ ಬಣ್ಣೀಸಿ ಬಯ್ವವನೆ
ಬಣ್ಣವಾ ಒಗವಾ ಹಸಗನೇ
ಬಣ್ಣವಾ ಒಗವಾ ಹಸಗನ[೪೩] ಕಾಲಡ್ತಿಗೆ
ಗೊಣ್ಣೊಳು[೪೪] ಆಗಿ ಇಮ್ಕದೆ[೪೫] । ಅಂದೇಳಿ
ಭೂಲೋಕದರಮನಗೇ ಬರುವರೆ । ಕರ್ಣನೇ
ತಿಂಗ್ಳಬನದಲ್ಲಿ ನಿಲ್ವನೇ । ಅರಜೀಣ
ತನ್ನಲರಮನಗೇ ಬರುವನೇ ।
ತನ್ನಲರಮನಗೇ ಬರುವದ್ನು ಅರಜೀಣ
ಕಣ್ಸನ್ನಿೀಲೇ ಕಾಮ್‌ದ್ಯೆವ್ನ ಒಡಗುಂಡೇ
ಕಣ್ಸನ್ನಿೀಲೇ ಕಾಮ್‌ದ್ಯೆವ ದಿಬ್ಬಣ ಒಡಗುಂಡೇ
ಬಂದೀ ಬಾಗಲ್ಲಿ ನಿಲುವಾನೇ ।
ಬಂದೀ ಬಾಗಲ್ಲಿ ನಿಲುವದ್ನು ಚಿಕ್ಕಪ್ಪ
ತಾನು ಆರತಿಯ ತರುವಾನೇ । ಕಾಮ್‌ದ್ಯೆವ
ಆರೂತಿಗೊಮ್ಮೆ ಸರುಣನ್ನು । ಅರಜೀಣ
ಕಾಮ್‌ದ್ಯೆವ್ನ ಕರಕಂಡೇ ನೆಡದಾನೆ । ಅರಜೀಣ
ಮುತ್ನ ಮಂಟಪ್ಲೇ ಕುಳಸಾನೆ ।
ಮುತ್ನ ಮಂಟಪ್ಲೇ ಕುಳುವದ್ನು ಅರಜೀಣ

೪೩. ಅಗಸ ೪೪. ಗೊಬ್ಬರ ಹುಳ ೪೫. ಮಿಡಿಕಾಡುತ್ತಿವೆ

ರತ್ನಿದೇವಿ ತಂದೀ ಕುಳಸಾನೆ । ಅರಜೀಣ
ಪಟ್ಟೀಯಾ ತೆರಿಯ ಮರಗಟ್ಟೇ । ಅರಜೀಣ
ಕಣ್ಣನ್ನೀಲಣ್ಣನ ಕುರುವಾನೇ ।
ಕಣ್ಣನ್ನೀಲಣ್ಣನ ಕರವದ್ನು ಕರ್ಣನೇ
ತೆರೆಗಿಂದು ಮರೆಗೇ ಬರೂವಾನೇ ।
ಎಡಕ್ನ ತೊಡಿಮ್ಯೆನೇ ಮಗಳು ಸಿರಿಗೌರಿ ರತ್ನೀಯ
ಬಲಕ್ನ ತೊಡಿಯಾ ಮ್ಯೆನಳಿಯಾ
ಬಲಕ್ನ ತೊಡಿಯಾ ಮ್ಯೆನಳಿಯಾನ ಕೂರಿಸಕಂಡಿ
ಜಯನಂದೇ ದಾರೀ ಎರದಾನೆ ।
ಹುಟ್ಟೀದ ಮಗಳೀಗೆ ಏನೆಲ್ಲ ಬಳವರಿ
ಕೊಟ್ಟೂಗಿಲಿರುವಾ ಕರುವೆಮ್ಮೆ । ಕೊಟ್ಟಿನ್ನು
ಹಿತ್ತಲ ಕಣಕೆ ನೆಟ್ಟಂತ ಸೆಸುವೆಲ್ಲ । ರತ್ನಿಗೇ
ಇದುವೆಲ್ಲ ಬಳವಳಿ ಕೊಟ್ಟಿನ್ನು । ಕರ್ಣನೆ
ತೊಡಗಿಂದೇ ಕೆಳಗೇ ಇಳಿಯಂದ ।
ತೊಡೆಗಿಂದು ಕೆಳಗೇ ಇಳಿಯಂದ
ತೊಡೆಗಿಂದು ಕೆಳಗೆ ಇಳಿಯಂದ್ರೆ ರತ್ನದೇವಿ
ತೊಡೆಗಿಂದು ಕೆಳಗೇ ಇಳುದಿಲ್ಲ ।
ತೊಡೆಗಿಂದು ಕೆಳಗೆ ಇಳುದಿಲ್ಲ ಅಂದೇಳಿ
ಚಿನ್ನದ ಚಂಡ ಬಿಡುವನೇ ।
ಚಿನ್ನದ ಚಂಡ ಬಿಡುವನೇ ಕರ್ಣನೆ
ಹಗಳದ ಚಂಡ ಬಿಡುವನೇ । ಕರ್ಣನೆ
ಹಗಳದ ಚಂಡ ಬಿಡುವದ್ನು ರತ್ನಿಯು
ಚಂಡ ಹೆಕ್ವದಕೆ ಇಳದದೆ ।
ಚಂಡ ಹೆಕ್ವದಕೆ ಇಳವದ್ನು ಕರ್ಣನೆ
ಮಾಯಾವಾಗಾನೇ ಗಳಗೀಲೆ ।
ನಿನ್ನಂತ ತೋಳ್ನವ ನಿನ್ನಂತಾ ತೊಡಿಯವ
ನಿನ್ನಂತ ಮುದ್ದೂ ಮೊಕದವ । ಚಿಕ್ಕಪ್ಪ
ಹೊಡುವಕೆ ನಿಂಗ್ಹೆಂಗೇ ಕಯ್ಬಂತೋ ।
ನಿನ್ನಂತಾ ಮುದ್ದೂ ಎದಿಯವ । ಚಿಕ್ಕಪ್ಪ
ಕೊಲುವಕೆ ನಿಂಗ್ಹೆಂಗೆ ಮನ ಬಂತೋ ।
ಕೊಲುವಕೆ ನಿಂಗೆಂಗೆ ಮನ ಬಂತೋ ಅಂಬದ್ನು
ಕರ್ಣ ಹೇಳಿದನೆ ಹೊಸ ಸುದ್ದಿ ।
ನನ್ ಹಿಂದೇ ತೊಲಗಲಿ ನನ್ ಹಿಂದೇ ಹೋಗಲಿ

ಇನ್‌ಮುಂದೆ ಕಲ್ಕಿ[೪೬] ನೆಡೀಬಾರಾ । ಅಂದೇಳಿ
ಕಯ್ಯಲ್ ಕಾಗ್‌ನೊಲೀ[೪೭] ಬರದಾನೆ । ಕರ್ಣನೇ
ಯಮರಾಯ್ನರಮನಗೇ ನೆಡದಾನೆ ।
ಹಾರುಬಾಣದ ಮ್ಯನೇ ಸರ್ವವಾದಿದ ಮ್ಯನೇ
ಕಾಮ್‌ದ್ಯೆವ್ನ ದಿಬ್ಬಣವೇ ಸವನೀತು
ಕಾಮ್‌ದ್ಯೆವ್ನ ದಿಬ್ಬಣವೇ ಸವ್ನಿಸುಂಗಾರಾಗಿ
ಕಾಮ್‌ದ್ಯೆವಾನರಮನಗೇ ನೆಡsದಾನೆ ।
ಕಾಮ್‌ದ್ಯೆವ್ನರಮನಗೇ ನೆಡವದ್ನು ತಾಯವ್ವಿ
ಮಗ್ಗೊಂದ್ ಚಂಬುದಕಾ ಕೊಡುವಳು । ತಾಯವ್ವಿ
ಸೊಸಗೊಂದ ಹಾಸಾ ಬಿಡಸಾಳೆ
ಸೊಸಗೊಂದ್ ಹಾಸ ಬಿಡಸುದ್ನು ರತ್ನಿಯು
ಹಾಸನ ಮ್ಯನೋಗಿ ಕುಳತಾಳೆ
ಹಾಸನ ಮ್ಯನೋಗಿ ಕುಳವದ್ನು ತಾಯವ್ವಿ
ಮಗ್ಗೊಂದೀಳ್ಯವ ಕೊಡವಾಳೇ ।
ಈ ಹಾಡ ಹೇಳ್ದರ್‍ಗೂ ಆಲೀಸಿ ಕೇಳ್ದರ್ಗು
ದನಕರುದಿ ದಾನ್ಯ ಬೆಳಿಯಲಿ । ದ್ಯೆವರೇ
ಗಂಡೂ ಕೇಳಿದರೆ ಬರಕಳ್ಳಿ । ಈ ಹಾಡಾ
ಹೆಣ್ಣು ಕೇಳಿದರೆ ಕಲಿಯಲಿ ।
ಕಲ್ಲಕ್ಕಿ ಕುಂದಾಲಿ ನೆಲ್ಲಕ್ಕಿ ಹೆಚ್ಚಾಲಿ
ಕಲ್‌ಮ್ಯನೇ ಸವದಾನ್ಯ ಬೆಳಿಯಲಿ । ಭೀಮನು
ಬಿಲ್ಲೂರಿದ ಊರು ಸುಭನಾಲಿ ।

೪೬. ಕಾಲಕ್ಕೆ ಪಾಪ, ಕೆಡಕು (ಕಲ್ಕ)   ೪೭. ಶಾಸನ ಕಾಗುಣಿತದ ಓಲೆ

ಸಾವಿತ್ರಿ

ದೊಡನಮ್ಮ ಸೆಣನಮ್ಮ ದೊಡ್ಡ ಹೀಲ್ಸದ ನಮ್ಮ (ಹಿತ್ಲದಮ್ಮ?)
ಹನ್ನೆಯ್ಡು ಬುಜಕೆ ಒಲಿನಮ್ಮ । ಮೆನನ
ಗಿರಿಯಪ್ಪ ನಾಮ ಜಗಕೆಲ್ಲ ।
ಇಳ್ಳಿಗೆದ್ದಿಲಿ ಗಳಿಲೆಂಬ ಗಣಿನಾಥ
ಚಿನ್ನದ ಕಣ್ಣ ತನಗೆಂದೆ । ಗಣಿನಾಥ
ಒಳ್ಳೊಳ್ಳ ಕಲೆಗೆ ನೆಡದಾನೆ ।

ಒಬ್ಬರ ಮನೆಯ ಬಚ್ಚಲ ಸಾರೀಸಿ
ಹಿಟ್ಟಿನಲಿ ಬರಿಯೆ ಅಡಿಗರ[೧] । ಪಡಿಯರ[೨]
ತಂದೀಡ ಮುತ್ತಿನ ಪಣತೀಗೆ । ನೆರಿಯೋಳೆ
ಸೋದಿಸುಗೊಳ್ಳೆ ಉದಕವ ।
ಹಾರೋರ ಮನಿಯ ಆದೂಗಿ[೩] ಸಾರೀಸಿ
ಹಿಟ್ಟಿನಲಿ ಬರಿಯೆ ಅಡಿಗಪ್ಪ ಪಡಿಯರ
ತಂದೀಡ ಮುತ್ತೀನ ಪಣತೀಗೆ । ನೆರಿಯೋಳೆ
ಸೋದಿಸುಗೊಳ್ಳೆ ಉದಕವ ।

ಸತಿಸಾಪ ಜಪತಪಕಾಗಿ ಕುಳಿತಾಗೆ
ಗಂಗೆ ಬಂದೊಡನೆ ನುಡಿವಾದೆ । ಸತಿಸಪ್ಪ[೪]
ನೂರೊಂದು ಜಪವ ಮರತಾನೆ । ಸತಿಸಪ್ಪ
ಮಾಳೂಗಿ ಒಳುಗೆ ನೆಡುದಾನೆ । ಸತಿಸಪ್ಪ
ಹಣ್ಣಡಕೆ ಬೆಳಿಯೆಲೆ ತಡದಾನೆ । ಸತಿಸಪ್ಪ
ಉಕ್ಕಿನ ಕಯ್‌ಕಡಿ ತಡದಾನೆ ।
ಉಕ್ಕಿನಕಯ್‌ಕಡಿ ತಡದಾನೆ ಸತಿಸಪ್ಪ

ಮಾಳೂಗಿ ಒಳುಗೆ ಬರುವಾನೆ ।
ಮಾಳೂಗಿ ಒಳುಗೆ ಬರುವದ್ನು ಸೆಮಂತ್ರಿ[೫]
ಮಾಳೂಗಿ ಒಳುಗೆ ನೆಡುದಾಳೆ । ಸೆಮಂತ್ರಿ
ಗಂದದುಂಡಿ ತೇದಿ ತುಂಬಾಳೆ । ಸೆಮಂತ್ರಿ

---

೧. ರಂಗೋಲಿ ೨. ಬಾಗಿಲು ಕಾಯುವವ ೩. ಜಗಲಿ ೪. ಸತ್ಯವಾನ ೫. ಸಾವಿತ್ರಿ

ಗಂಡನ ಕೊಡಿಯ ನೆಳಲಾಡಿ । ಸತಿಸಪ್ಪ
ಹೆಂಡೂತಿ ಮೀಯಣ್ಕೆ[೧] ಸವ್ನಾಳೆ ।

ಹಾಲದಮರ್ಕೆ ಹಾಲಬಳ್ಳಿ ಹಬ್ಬಿದಂತೆ
ಇಬ್ಬರೊಂದಾಗಿ ನೆಡದಾರೆ ।
ತೆಂಗೀನ ಮರ್ಕೆ ತಂಗಾಳಿ ಬೀಸ್ದಂತೆ
ಇಬ್ಬರೊಂದಾಗಿ ನೆಡದಾರೆ । ಇಬ್ಬರು
ಮೂಡಣ ಗಂಗೀಗೆ ನೆಡದಾರೆ । ಇಬ್ಬರು
ಗಂಗೀ ತಡಿಯಲ್ಲೆ ನಿಲ್ವಾರೆ ಇಬ್ಬರು
ಹಣ್ಣು ಈಳ್ಯವ ಹರಗಾರೆ । ಇಬ್ಬರು
ತೆಂಗೀನ ಕಾಯ ಒಡದಾರೆ । ಇಬ್ಬರು
ದೀಪ ದೂಪೆಲ್ಲ ಕಸದಾರೆ । ಇಬ್ಬರು
ಗಂಗೀಗೆ ಕಯ್ಯಮುಗದಾರೆ । ಸತಿಸಪ
ಗಂಗೀತೇರತ[೨] ಮುಳುಕಾನೆ ।

ಮಿಂದಾನೊಗೆದಾನೆ ಮಿಂದೆ ಮಡಿಯುಟ್ಟಾನೆ
ಗಂಗೀ ತಡಿಯಲ್ಲೇ ನಿಲವಾನೆ ।
ಗಂಗೀ ತಡಿಯಲ್ಲೇ ನಿಲುವಾನೆ ।
ಗಂಗೀ ತಡಿಯಲ್ಲೇ ನಿಲುವದ್ನು ಸೆಮಂತ್ರಿ
ಗಂಗೀಗೆ ಕಯ್ಯ ಮುಗಿದಾಳೆ । ಸೆಮಂತ್ರಿ
ಗಂಗೀ ತೇರತವ ಮುಳುಕಾಳೆ ।

ಮಿಂದಾಳೊಗೆದಾಳೆ ಮಿಂದ್ ಮಡಿಯುಟ್ಟಾಳೆ
ಎಣ್ಣೀ ಗಂದೊಂದ ಇಡುವಾಳೆ । ಸೆಮಂತ್ರಿ
ನೆಣೆಯ ಮಲ್ಲುಗಿಯ ಮುಡಿದಾಳೆ । ಸೆಮಂತ್ರಿ
ನೊಸಲಿಗೆ ಸಿರಿಗಂದ ಇಡುವಾಳೆ । ಸೆಮಂತ್ರಿ
ಗಂಗೀ ತೇರತವ ಮೊಗೆದಾಳೆ । ಸೆಮಂತ್ರಿ
ಸತಿಸಪ್ನ ಒಡನೋಗಿ ನಿಲುದಾಳು ।

ಆಲದಮರ್ಕೆ ಹಾಲ್ಬಳ್ಳಿ ಹಬ್ಬೀದಂತೆ
ಇಬ್ಬರೊಂದಾಗಿ ಬರುವಾರೆ । ಸತಿಸಪಸೆಮಂತ್ರಿ
ತಮ್ಮಲರಮನೆಗೆ ಬರುವಾರೆ ಸತಿಸಪ
ಲಾಗೊಂದು ಮಾತ ನುಡಿದಾನೆ ।

---

೧. ಸ್ನಾನಕ್ಕೆ   ೨. ಗಂಗೆ ತೀರ್ಥ

ಕಾನೊಳಗೊಂದು ಕಟ್ಟೀಸು ದೇವಲ್ಯ
ಕಾನ ಕಲ್‌ಕಂಬೇ ಒಲಿದಾವೆ । ಮಡದಿಕೇಳೆ
ಅದಕೊಂದು ಕಂಬ ತರೋಬೇಕೇ । ಮಡದೀಕೇಳೆ
ದರವಿ[೭] ಊಟಕೆ ಅನುಮಾಡು ।

ನಿನ್ನಾನಾಗೊಂದು[೮] ತಮ್ಮಣಿ ಬಂದಿದ್ದ
ಹೆಮ್ಮರನತ್ತಿ ಅಂವ ಬಿದ್ದ । ಅಂದೇಳಿ
ನನಗೊಂದು ಜೋಯಿಸ ನುಡಿದೀದ । ದೆವರೆ
ನಾಬತ್ತೆ ನಿಮ್ಮ ಒಡ್ನಲ್ಲಿ ।

ನಾ ಹೋಗು ದಾರೀಲಿ ಮಂಗ ಕಪಿಗಳಿರುಗು[೯]
ಅವಕಂಡರೆ ನೀನು ಹೆದರೂವೆ । ಸೆಮಂತ್ರಿ
ಬರಬೇಡ ನನ್ನ ಒಡ್ನಲ್ಲಿ ।

ನೀವೋಗು ದಾರೀಲಿ ಮಂಗ ಕಪಿಗಳಿರಲಿ
ಅದಕಂಡರೆ ನಾನು ಹೆದರನೆ । ದೆವರೆ
ನಾಬತ್ತೆ ನಿಮ್ಮ ಒಡ್ನಲ್ಲಿ ।

ನಾ ಹೋಗು ದಾರೀಲಿ ಸಿಂಗ ಸೀನಾಯಿರುಗು[೧೦]
ಅದಕಂಡು ನೀನು ಹೊದರೂವೆ । ಸೆಮಂತ್ರಿ
ಬರಬೇಡ ನನ್ನ ಒಡ್ನಲ್ಲಿ ।

ನೀಹೋಗು ದಾರೀಲಿ ಸಿಂಗ ಸೀನಾಯಿರ್ಲಿ
ಅದಕಂಡು ನಾನು ಹೆದರನೆ । ದೆವರೆ
ನಾ ಬತ್ತೆ ನಿಮ್ಮ ಒಡ್ನಲ್ಲಿ ।

ಹೆಣ್ಣಾನಿ ಗಂಡಾನಿ ಸಿಬ್ಬಲಾಡುವಂಗೆ[೧೧]
ಅದಕಂಡು ನೀನು ಹೆದರೂವೆ । ಸೆಮಂತ್ರಿ
ಬರಬೇಡ ನನ್ನ ಒಡ್ನಲ್ಲಿ ।

ಹೆಣ್ಣಾನಿ ಗಂಡಾನಿ ಸಿಬ್ಬಲಾಡುವಾಗೆ
ಅದಕಂಡು ನಾನು ಹೆದರನೆ । ದೆವರೆ
ನಾಬತ್ತೆ ನಿಮ್ಮ ಒಡ್ನಲ್ಲಿ ।

ಆರೂಣಿ ಮೆಣಸು ಬೋರೆದ್ದಿ ಬರುವಂಗೆ
ಅದಕಂಡು ನೀನು ಹೆದರೂವೆ । ಸೆಮಂತ್ರಿ
ಬರಬ್ಯೆಡ ನನ್ನ ಒಡ್ನಲ್ಲಿ ।

---

೭. ಸ್ವಲ್ಪ ? ೮. ನಿನ್ನೆ ೯. ಇರುತ್ತವೆ ೧೦. ಬೆಟ್ಟದ ನಾಯಿ ೧೧. ಕೂಡಾಡು

ಆರುಣ್ಣಿ ಮೆಣಸು ಬೋರೆದ್ದಿ ಬಾರಾಲಿ
ಅದಕಂಡು ನಾನು ಹೆದರನೆ । ದೇವರೆ
ನಾ ಬತ್ತೆ ನಿಮ್ಮ ಒಡ್ನಲ್ಲಿ ।

ಕಾದ ಕಲ್ಲಮೆನೆ ಕಾಸಿಟ್ಟರ್ ಕಾವಲಿ
ಅದ ಕಂಡು ನೀನು ಹೆದರೂವೆ । ಸೆಮಂತ್ರಿ
ಬರಬೆಡ ನನ್ನ ಒಡ್ನಲ್ಲಿ ।

ಕಾದ ಕಲ್‌ಮೆನೆ ಕಾಸಿಡ್ಲಿ ಕಾವಲ್ಲಿ
ಅದ ಕಂಡು ನಾನು ಹೆದರನೆ । ದೆವರೆ
ನಾ ಬತ್ತೆ ನಿಮ್ಮ ಒಡ್ನಲ್ಲಿ ।

ಅಡ್ಗಕಲ್ಲೆಟ್ಟುದು ಮೆನೆ ಬೆಸಲ್‌ಸುಡ್ವಾದು
ಅದ ಕಂಡು ನೀನು ಹೆದರೂವೆ । ಸೆಮಂತ್ರಿ
ಬರಬೇಡ ನನ್ನ ಒಡ್ನಲ್ಲಿ ।

ಅಡ್ಗಕಲ್ಲೆಟ್ಟಲಿ ಮೆನೆ ಬೆಸಲ್‌ಸುಡಾಲಿ
ಸುಡುಸುಡು ಬೊಕ್ಕಿಯೇ[೧೨] ನೆಗಿಯಾಲಿ । ದೆವರೆ
ನಾ ಬತ್ತೆ ನಿಮ್ಮ ಒಡ್ನಲ್ಲಿ ।

ಮುದ್ದುಳ್ಳ ಸೆಮಂತ್ರಿ ಮಾವ್ನವ್ರೀಗೇನೇಳೂವೆ
ಮಾವ್ನವ್ರು ಕೇಳಿದ್ರೆ ಮರ್ಗೂರು ।

ಮಾವ್ನವ್ರ ಮನ್ಸನ್ನು ಕೇಳಲು ನಾಬಲ್ಲೆ
ನಾ ಬತ್ತೆ ನಿಮ್ಮ ಒಡ್ನಲ್ಲಿ ।

ಮಾನುಳ್ಳ ಸೆಮಂತ್ರಿ ಅತ್ಯೋರ್ಗೇನೇಳೂವೆ
ಅತ್ಯವ್ರು ಕೇಳಿದ್ರೆ ಮರ್ಗೂರು ।

ಅತ್ಯವ್ರ ಮನಸನ್ನು ಈಗೋಗಿ ತೆಳಗೂವೆ[೧೩]
ನಾ ಬತ್ತೆ ನಿಮ್ಮ ಒಡ್ನಲ್ಲಿ ।
ಅಟ್ಟಂಬ ಮಾತ ಕೇಳಿದಳೆ ಸೆಮಂತ್ರಿ
ಮಾಳೂಗಿ ಒಳುಗೆ ನೆಡದಾಳೆ ।

ಅಟ್ಟದ ಮೆನನಜೇರಗ ಸಾಲಕ್ಕೀಯ
ಅನ್ನ ಮೆಗ್ರಕೆ ಅನುಮಾಡಿ । ಸೆಮಂತ್ರಿ
ಹಾಲೂಪಾಯಸಕೆ ಅನುಮಾಡಿ ।
ಬೇಲೀಯ ಮೆನನ ದಾರೇಹೀರೇಕಾಯಿ

---

೧೨. ಗುಳ್ಳೆ   ೧೩. ತಿಳದುಕೊಳ್ಳುವೆ

ದಾರೀಯ ಒರ್ದಿ ಮಿಣ್ಸಿಕ್ಕಿ ।
ಹಿತ್ಲಕಣಕೀನ ಬೊಟ್ಟು ಕೆಂಬರ್ಗಿಯ
ಬೊಟ್ಟೆಣ್ಣಿಕಿಟ್ಟಿ ಮಿಣ್ಸಿಟ್ಟಿ । ಸೆಮಂತ್ರಿ
ನೂರೊಂದು ಬಗೆಯ ಅಡಗೀಯ । ಸೆಮಂತ್ರಿ
ಅನುಮಾಡಿದಳೊಂದು ಗಳಿಗೇಲಿ । ಸೆಮಂತ್ರಿ
ಸೆಣ್ಣ ಗಿಂಡೀಲಿ ಉದಕವ ತಡಕಂಡಿ । ಸೆಮಂತ್ರಿ
ಸತಿಸಪ್ಗೆ ಉದಕಾ ಕೊಡುವಳು ।

ಮಡದಿಕೊಟ್ಟುದಕವ ಬೆಗದಲ್ ತಡಕಂಡಿ
ಕಾಲು ಸಿರಿಮೊಕವಾ ತೊಳದಾನೆ । ಸತಿಸಪ
ಮಾಳೂಗಿ ಒಳುಗೆ ನಡೆದಾಳೆ । ಸೆಮಂತ್ರಿ
ರನ್ನದೊಂದ್ ಮಣೆಯ ಮಡಗಾಳೆ । ಸತಿಸಪ
ಮಣೆಯ ಮೆನೋಗಿ ಕುಳಿತಾನೆ । ಸೆಮಂತ್ರಿ
ಕಿರಳ ಬಾಳೆಲಿಯ ತೊಳದಾಸಿ । ಸೆಮಂತ್ರಿ
ಅನ್ನ ಮೆಗ್ರವ ಬಡಸಾಳೆ । ಸೆಮಂತ್ರಿ
ಹಾಲು ಪಾಯಸವ ಬಡಸಾಳೆ । ಸೆಮಂತ್ರಿ
ತುಪ್ಪ ಸಕ್ಕರೆಯ ಎರದಾಳೆ ।

ಉಂಡಾನೂಟವ ತೊಳದನೇ ಕಯ್ಬಾಯಿ
ತೂಗುಮಂಚದಲೇ ಕುಳಿತಾನೆ । ಸೆಮಂತ್ರಿ
ತನ್ನೂಟಕೆ ತಾನೇ ಎಡೆಮಾಡಿ । ಸೆಮಂತ್ರಿ
ಊಟಕೆ ಹೋಗಿ ಕುಳಿತಾಳೆ ।

ಉಂಡಳೂಟವ ತೊಳದಳೇ ಕಯ್ಬಾಯಿ
ಎಂಜಲ ಮಯ್ಲಿಗೆ ತೆಗದಾಳೆ । ಸತಿಸಪ
ಮಾಳೂಗಿ ಒಳುಗೆ ನೆಡದಾನೆ । ಸತಿಸಪ
ಉಕ್ಕೀನಕೊಡ್ಲಿ ತಡದಾನೆ । ಸತಿಸಪ
ಬಂದೀ ಬಾಗ್ಲಲ್ಲೆ ನಿಲುವಾನೆ ।

ಮಾಳೂಗಿ ಒಳುಗೇ ನೆಡದಾಳೆ ಸೆಮಂತ್ರಿ
ತನ್ನ ಪಟ್ಟೀಯ ನೆರ್ದುಟ್ಟಿ । ಸೆಮಂತ್ರಿ
ಅತ್ಯಮ್ಮನರಮನಿಗೆ ನೆಡದಾಳೆ ।

ರಾಜೀಕೊಬ್ಬನೆ ರಾಯ ನಿಮ್ಮ ಮಗ
ಹಾದೀಗೊಬ್ಬರೇ ಸವ್ವಾರೆ । ಅತ್ತಿಯೋರೆ
ನಾನಿಂದು ವನವ ತಿರ್ಗಬತ್ತೆ ।

ಕಣ್ಣು ಕಯ್ಯಾಕಲಿಲ್ದೆ ಮನ್ನೆಗೋಳಾಡುವ[೧೪]
ನಮ್ಮ ಇನ್ನೆರು ಸಲಗಾರು ।

ಕಣ್ಣು ಕಯ್ಯಾಕಲ್ಗೆ ಮುನ್ನ ಬೈಸರಗುಣಬೈಡ್ರಿ
ಅಲ್ಲಿದ್ದೇ ವರವ ತರ್ತೀನಿ । ಅಂದೇಳಿ
ಸತಿಸಪ್ನ ಒಡ್ನೋಗಿ ನಿಲುವಾಳು ।

ಸತಿಸಪ ಸಾವಿತ್ರಿ ನಡೆದಾರೆ ಇಬ್ಬರು
ಹೋಗೊಂದು ವನವಾ ಇಳದಾರೆ ।
ಹೋಗೊಂದು ವನವಾ ಇಳುವದ್ನು ಸತಿಸಪ್ಗೆ
ಮಂಗ ಕಪಿಗಳು ಎದರಾಗಿ । ಹೇಳಾನೆ
ಇದನೋಡು ಸೆಮಂತ್ರಿ ಹದಳಾಗಿ ।
ಹೋಗೊಂದು ವನವ ಇಳದಾರೆ ।
ಹೆಣ್ಣಾನಿ ಗಂಡಾಗಿ ಸಿಬ್ಯಲಾಡುವಂಗೆ ।
ಇದನೋಡೆ ಸೆಮಂತ್ರಿ ಅನುವಾಗಿ ।
ಹೋಗೊಂದು ವನವ ಇಳಿದಾರೆ ।
ಆರಾಣಿ[೧೫] ಮಿಣಸು ಬೋರೆದ್ದಿ ಬರುವಂಗೆ
ಇದನೋಡೆ ಸೆಮಂತ್ರಿ ಅನುವಾಗಿ । ಇದುವೆಲ್ಲ
ಹಿಂದಕೆ ಪಾಂಡವ್ರ ಸೆಣಮೆಣ್ಣು । ಇಬ್ಬರೂ
ಹೋಗೊಂದು ವನವ ಇಳಿದಾರೆ ।
ಕಾದ ಕಲ್ಮೆನೆ ಕಾಸಿಟ್ಟಿರ ಕಾವಲ್ಗೆ
ಇದನೋಡೆ ಸೆಮಂತ್ರಿ ಅನುವಾಗಿ । ಇದುವೆಲ್ಲ
ಹಿಂದಕೆ ಪಾಂಡವ್ರ ಕೆರೆಬಾವಿ ।

ಅಡ್ಗ ಕಲ್ಲೆಟ್ಟಿತ್ತು ಮೇಲ್ ಬೆಸಲ್ ಸುಟ್ಟಿತ್ತು
ಸುಡು ಸುಡು ಬೊಕ್ಕಿಯೆ ನೆಗೆದಿತ್ತು । ದೇವರೆ
ಇದ್ರಗಿಂದು ಮುಂದೆ ಬರ್ಲಾರೆ । ದೇವರೆ
ತಂಪಿಲ್ವ ಮರದಾ ನೆರಳಿಲ್ವ ।

ಅಟ್ಟೊಂದು ಮಾತ ಕೇಳಿದನೆ ಸತಿಸಪ
ಲಾಗೊಂದು ಮಾತ ನುಡಿದಾನೆ.
ಕೇಳೆ ನೇರೀಳೆ ಕೇಳೆ ಕೆನ್ನೇರೀಳೆ
ಗಂಡಹೆಂಡತಿಗೂ ನೆರಳಾಗು ।
ಗಂಡಹೆಂಡತಿಗು ನೆರಳುಂಟಾದರೆ

---

೧೪. ಮನೆಯಲ್ಲಿ ಗೋಳಾಡುವ ೧೫. ಅಡವಿಯ

ಎಲೆಗೆಲ್ಲ ಬಣ್ಣ ತೆಗೆಸೂವೆ ।
ಕೇಳೆ ನೇರೀಳೆ ಕೇಳೆ ಪನ್ನೇರೀಳೆ
ಅರಸಗು ಅರಸಿಗು ನೆರಳಾಗು ।
ಅರಸಗು ಅರಸಿಗು ನೆರಳುಂಟಾದರೆ
ಎಲೆಗೆಲ್ಲ ಮುತ್ತ ಹೊಯ್ಸೂವೆ ।

ಕೇಳೀತು ನೇರೀಳು ಕೇಳಿತು ಕೆನ್ನೇರಿಳು
ಗಂಡಹೆಂಡತಿಗೆ ನೆರಳಾಗಿ ।
ಗಂಡ ಹೆಂಡತಿಗೆ ನೆರಳಾದ್ದ ನೋಡಾನೆ
ಎಲೆಗೆಲ್ಲ ಬಣ್ಣ ತೆಗೆಸಾನೆ ।

ಸತಿಸಪ ಸಾವಿತ್ರಿ ಹತ್ತಾರಾಲದಕಟ್ಟೆ
ಕುಳಿತಾರೆ ಗಿಡದ ನೆರಳೀಗೆ । ಸತಿಸಪ
ಉಕ್ಕೀನ ಕಯ್ಯೊಡಲಿ ತಡದಾನೆ । ಸತಿಸಪ
ಅತ್ತಿಯ ಮರನ ನೆಗದತ್ತಿ । ಸತಿಸಪ
ಅತ್ತಿ ಕಿರದೆಣೀಯ[೧೬] ಕಡಿದಾನೆ । ಆಹೆಣಿಯು[೧೭]
ಬೆನ್ನೀಗೆ ಬಂದು ಬಡಿದಾವೆ । ಸತಿಸಪ
ಮತ್ತೊಂದು ಹೆಣಿಯ ಕಡಿದಾನೆ । ಆಹೆಣಿ
ಕೆನ್ನೀಗೆ ಬಂದು ಬಡಿದಾವೆ । ಸತಿಸಪ
ಮತ್ತೊಂದು ಹೆಣಿಯ ಕಡಿದಾನೆ । ಆಹೆಣಿ
ಕಣ್ಣೀಗೆ ಬಂದು ಬಡಿದಾವೆ । ಸತಿಸಪ್ನ
ಕಣ್ಣೀಗ್ ಕತ್ತಲೆಯ ಕಮಿದಾವೆ । ಸೆಮಂತ್ರಿ
ಆಯದಲ್[೧೮] ನೀಡೇ ನಳಿತೋಳ ।

ಆಯದಲ್ ನೀಡಿದರೆ ನೀಡಾವೇ ನಳಿತೋಳು
ಉಪಾಯ್ದಲ್ ಮರನ ಇಳಿಯಿರಿ
ಕಣ್ಣೀಗೆ ಕತ್ತಲು ಸೆಮಂತ್ರಿ ನೀ ಕೇಳೆ
ಆಯದಲ್ ನೀಡೇ ನಳಿತೋಳ । ಎಂಬುದ್ನು
ಆಯದಲ್ ನೀಡಿದಳೇ ನಳಿತೋಳ । ಸತಿಸಪ

ತೋಳಮೆನ್ ಮರನಾ ಇಳಿದಾನೆ । ಸತಿಸಪ
ತೋಳಮೆನ್ ಮೋಕ್ಷ ಪಡದಾನೆ ।

ಎಳ್ಳೀ[೧೯] ಏಳೆಲಿಯ ಕೊಯ್ತಂದಿ ಸೆಮಂತ್ರಿ
ಎಲಿಯ ಮೆನೆಲಿಯ ಮಡಗ್ಗಾಸಿ । ಸೆಮಂತ್ರಿ

---

೧೬. ಸಣ್ಣ ಟೊಂಗೆಯನ್ನು ೧೭. ಆಟೊಂಗೆ ೧೮. ಆಧಾರಕ್ಕೆ ೧೯. ಅಶ್ವತ್ಥ

ಎಳ್ಳೀ ಎಲಿಮೇನೇ ಒರಗೀಸಿ ಸೆಮಂತ್ರಿ
ಬಿದ್ದೂ ಬಿದ್ದಲ್ಲೇ ಮರ್ಗಾಳೆ
ಸೆಮಂತ್ರಿ ಕಣ್ಣೀರು ಮಾನೋಮಿ ಕೆರ್‌ತುಂಬಿ
ತಾವರೆಯ ಹೂಂಗಾಗಿ ಅಲ್ದಾವೆ । ಆ ಹೂಂಗು
ಸುರಲೋಕಕ್ಕೋಗಿ ಎಸದಾವೆ ।
ಸುರಲೋಕಕ್ಕೋಗಿ ಎಸವದ್ನು ಯಮರಾಯ
ತನ್ನಾಲ ದೂತ್ರ ಕರೆದಾಗೆ ।
ತನ್ನಾಲಾ ದೂತರ ಕರೆದು ಹೇಳಿದನೆ
ಸತಿಸಪ್ನ ಪ್ರಾಣ ತರಬೇಕೆ ।

ಅಟ್ಟಂಬು ಮಾತನೆ ಕೇಳಿದರೆ ಯಮದೂತರು
ಸೆಮಂತ್ರಿ ಯಿದ್ದಲ್ಲಿ ನೆಡದಾರೆ । ಯಮದೂತರು
ಸತಿಸಪ್ನ ಪರಣ[೨೦] ಎಳದಾರೆ ।

ಯಾರು ಬಂದರು ಕೊಡೆ ಯಾರು ನಿಂದರು ಕೊಡೆ
ಯಾರೀಗೀ ಪರಣ ಕೊಡ್ಲಾರೆ । ನಿನ್ನಾಲಾ
ಯಮರಾಯರಿಲ್ಲೇ ಬರಬೇಕು ।
ಯಮರಾಯರಿಲ್ಲೇ ಬಂದದ್ದುಂಟಾದರೂ
ಅವರಿಗೀ ಪರಣ ಕೊಡೆತಾನು ।

ಅಟ್ಟಂಬು ಮಾತನೇ ಕೇಳಾರೇ ಯಮದೂತರು
ಹಿಂದಕೆ ತಿರುಗಿ ಬರುವಾರೇ ಯಮರಾಯ ।

ಲಾಗೊಂದು ಮಾತ ನುಡಿದಾನೆ ।
ಅದುವೇನು ದೂತರೆ ಹಾಂಗೋಗಿ ಹೀಂಗ್ ಬಂದ್ರಿ
ಯಾಕೆ ಆ ಪರಣ ತರಲಿಲ್ಲ
ಕಾನೊಳಗೊಂದು ಕಡುಗೂಸು ಮುತ್ತೈದೆ
ನಮ್ಮೆಲ್ಲ ಬಯ್ದು ಕಳುಗದೆ ।

ಯಾರು ಬಂದರ ಕೊಡೆ ಯಾರು ನಿಂದರ ಕೊಡೆ
ಯಾರಿಗೀ ಪರಣ ಕೊಡ್ಲಾರೆ । ನಿನ್ನಾಲ
ಯಮರಾಯನಿಲ್ಲೇ ಬರಬೇಕು

ಅಟ್ಟಂಬು ಮಾತಾ ಕೇಳಾನೇ ಯಮರಾಯ
ರಾಜಬೀದಿಗಾಗೇ ನೆಡದಾನೆ । ಯಮರಾಯ

೨೦, ಪ್ರಾಣ

ಸೆಮಂತ್ರಿದ್ದಲ್ಲೇ ನೆಡದಾನೆ । ಸೆಮೆಂತ್ರಿ
ಯಮರಾಯ್ನ ಸಿರಿಪಾದ ತೊಳೆದಾಳೆ । ಸೆಮೆಂತ್ರಿ
ಯಮರಾಯ್ನ ಪಾದಕೆ ಸರಣಂತು ।

ಆಯ್ಸವಂತಳಾಗೆ ಆಯ್ಸ ಬಲಿದವಳಾಗೆ
ನೀನಿಟ್ಟ ಚಿನ್ನಾಲೆ[೨೧] ತಿರುವಾಲೆ[೨೨] । ಸೆಮೆಂತ್ರಿ
ಕಟ್ಟಾಳೆ ಮೇಲೂ ಸೆರಗೀಲಿ ।

ಅದುವೇನ ಕೂಸೆ ಸೆರಗೀಲಿ ಗಂಟಿಡುತೆ
ಬಾಯ್ತಪ್ಪಿ ನಾನು ನುಡಿದೀದೆ ।

ಇಟ್ಟೀರಿ ಸಾಪವ ಕೊಟ್ಟೀರಿ ವರವಾನೆ
ಕೊಟ್ಟವರ ತನಗೆ ತಿರವಾಲಿ । ಅಂದೇಳಿ
ಕಟ್ಟೀನೆ ಮೇಲೂ ಸೆರಗೀಗೆ ।

ಇಟ್ಟೊಂದು ಮಾತಾ ಕೇಳಾನೆ ಯಮರಾಯ
ಹಿಂದಕೆ ತಿರ್ಗ್ ಬರುವಾನೆ । ಸೆಮೆಂತ್ರಿ
ಮುಸ್ಕಿನ ಸೊಪ್ಪ ಮುರಿದಾಳೆ । ಸೆಮೆಂತ್ರಿ
ಸತಿಸಪಗೆ ಮುಸಕ ಇಡುವಾಳು ।
ಹಕ್ಕೀಯೆ ಪಕ್ಕೀಯೆ ಯೆರುವ ಎಂಬತ್‌ಕೋಟಿ
ಯಾರು ಈ ಹೆಣ ಮುಟ್ಟಾರ । ಅಂದೇಳಿ
ಯಮರಾಯ್ನ ಬೆನ್ನೀಗೆ ನೆಡದಾಳೆ ।
ಯಮರಾಯ ಬರುವನೆ ಯಮರಾಯ್ನ ಕೊಂಡೀಗೆ
ಸೆಮಂತ್ರಿ ಬಂದಾಳೆ ಬೆನ್ನೀಗೆ ।
ಗಂಡನಮನಿಗೆ ಮಿಂಡಮಾಡೂವಳ
ಕೆಂಡದ ಮರಕೆ ತೊಡಸಾರೆ । ಸೆಮಂತ್ರಿ
ಇದುವೊಂದ ನೋಡೇ ಹದಳಾಗಿ ।

ಹೆಣ್ಕೊಟ್ಟತ್ತೀಗೆ ಬಣ್ಣಿಸಿ ಬಯ್ವವ್ನ
ಬಣ್ಣವ ಒಗುವ ಹಸಗನ । ಕಾಲಡಿಗೆ
ಗೊಣ್ಣೊಳುವಾಗಿ[೨೩] ಹಿಮ್ತುದೆ[೨೪] । ಸೆಮಂತ್ರಿ
ಇದುವೊಂದನೋಡೇ ಹದುಳಾಗಿ ।
ಬೆಸ್ ಬೆಸಿ ತುಪ್ಪವ ಅಳ್ದೀಕೊಡೂವಳ
ಕಾದೊಲಿಮನೆ ಕುಳುಸಾರೆ । ಸೆಮಂತ್ರಿ
ಇದುವೊಂದ ನೋಡೇ ಹದುಳಾಗಿ ।

---

೨೧. ಚಿನ್ನದ ಓಲೆ ೨೨. ಸ್ಥಿರವಾಗಲಿ ೨೩. ಗೊಬ್ಬರ ಹುಳ ೨೪. ಮಿಡುಕಾಡುತ್ತವೆ.

ವತ್ತನ[೨೫] ಗೆದ್ದೀಯ[೨೬] ಒತ್ತಾಳಿ[೨೭] ಮಾಡವ್ನ
ಕತ್ತರಸ್ ಕಾವ್ಲೀಲಿ ಕೆಡ್ದಾರೆ । ಸೆಮಂತ್ರಿ
ಇದುವೊಂದ ನೋಡೇ ಹದಳಾಗಿ ।
ಅಬ್ಬೀ ಬಯ್ವವ್ನ ಗುಬ್ಬೀಗೂಡಳ್ವನ
ಹಬ್ಬದಲ್ ಹುಬ್ಬ ಚೆಡಿವನ । ಕಡುಪಾಪಿಯ
ಎಬ್ಬಾರೆ ಯಮನ ದಳಲೀಗೆ । ಸೆಮಂತ್ರಿ
ಇದುವೊಂದನೋಡೇ ಹದುಳಾಗಿ ।
ಮಾಸೀದ ಪಟ್ಟೀ ಬಿಚ್ಚೀ ಒತ್ತಿಡುವಳ
ಹಸಗನ ಕಲ್ಮೀನೆ ಕುಳ್ಸಾರೆ । ಸೆಮಂತ್ರಿ
ಇದುವೊಂದು ನೋಡೇ ಹದಳಾಗಿ ।

ಯಮನಕೊಂಡಾನೇ ಕಳಿದನು ಯಮರಾಯ
ತನ್ನಾಲರ ಮನಿಗೇ ಬರುವನು । ಯಮರಾಯ
ಮಾಳೂಗಿ ಒಳುಗೆ ನೆಡದಾನೆ । ಯಮರಾಯ
ಲಾಗೊಂದು ಮಾತಾ ನುಡಿದಾನೆ ।
ಕಾನೊಳಗೊಂದು ಕಡುಕೂಸು ಮುತ್ತಯ್ದೆ
ನಿಮ್ಮೆಲ್ಲ ಬಯ್ದು ಕಳಗದೆ ।
ನಮ್ಮ ಬಯ್ವರು ನಮ್ಮ ಮುಂದೆ ಬಂದೀರೆ
ಮುಂದಲಿ ತಟ್ಟಿ ಎಳಿತಿದ್ದು । ನೀವ್‌ಕೂತ
ಸಾಲ್ಮಂಚಕಾಗಿ ಬಡಿತಿದ್ದು ।

ಅಟ್ಟೊಂದು ಮಾತಾ ಕೇಳಾನೇ ಯಮರಾಯ
ಪನ್ನೆಯ ಮರೆಯಲ್ಲಿ ಮುಗುಳ್‌ನಗ್ಗೆ । ಆಡೀತಾ
ಸೆಮಂತ್ರಿ ಕಣ್‌ಸನ್ನೀಲಿ ಕರ್ದಾನೆ । ಸೆಮಂತ್ರಿ
ಬಂದೀ ಬಾಗಲ್ಲೇ ನಿಲುವಾಳು । ಯಮರಾಯ

ಲಾಗೊಂದು ಮಾತ ನುಡಿದಾನೆ ।
ಗೊಕನ್ಗೆ[೨೮] ಹೋಗೇಕೂಸೆ ಗುಡಿಸಲ್‌ಕಟ್ಟೇಕೂಸೆ
ಕಾಜೀನ ಬಳಿನಾರೇ ಜರಿಕೂಸೆ । ನಿನ್ನಾಲಾ
ಗಂಡಕಾನೊಳಗೆ ಮಡಿದಾನೆ
ಪಟ್ಟೀ ಬಿಡಕೂಸೆ ದಟ್ಟೀ ಉಡಕೂಸೆ
ಲೇಸೀದ ಸಿರಿಗಂದ ಅಳಿಕೂಸೆ । ನಿನ್ನಾಲಾ
ಪುರಿಸ ಕಾನೊಳಗೆ ಮಡಿದಾನೆ ।

೨೫. ಅಂಚಿನ ೨೬. ಗದ್ದೆ ೨೭. ಕಬಳಿಸು ೨೮. ಗೋಕರ್ಣಕ್ಕೆ

ಗೊಕನಕೆ ಹೋಗುವಾಕೇ ಗುಡಿಸಲ್ ಕಟ್ಟುವಾಕೆ
ಕಾಜೀನ ಬಳಿನಾರೇ ಜರಿವಾಕೇ । ಯಮರಾಯ
ಹೇಳಿಕೊಡೊ ನಿನ್ನ ಮಡದ್ಯರ್ಗೆ ।
ಪಟ್ಟೇಯ ಬಿಡುವಾಕೆ ದಟ್ಟೀಯ ಉಡುವಾಕೆ
ಲೇಸಿದ ಸಿರಿಗಂದ ಅಳಿವಾಕೆ । ಯಮರಾಯ
ಹೇಳ್ಕೊಡೊ ನಿನ್ನಾ ಮಡದ್ಯರ್ಗೆ ।

ಅಟ್ಟೊಂದು ಮಾತಾ ಕೇಳಾರೇ ಯಮರಾಯ್ನಹಿಂಡ್ರು
ನಿಮಗಂಜದ ನಾರಿ ನಮಗಂಜುವಾಳೆ । ಅಂದೇಳಿ
ತಲೆಬಾಗಿ ಮಾಳಗ್ಗೆ ನೆಡದಾರೆ । ಯಮರಾಯ
ಅಮೃತಗಿಂಡೀ ತಡದಾನೆ । ಯಮರಾಯ
ಸೆಮಂತ್ರಿ ಬಲಗಯ್ಲಿ ಕೊಡುವಾನೆ । ಸೆಮಂತ್ರಿ

ಎರಡೂ ಕಯ್ಯೊಡ್ಡಿ ತಡಿದಾಳೆ । ಸೆಮಂತ್ರಿ
ಹಿಂದಕೆ ತಿರುಗಿ ಬರುವಾಳೇ । ಸೆಮಂತ್ರಿ
ನುಗ್ಲ ಸಂಕಕಾಗಿ ಬರುವಾಳೇ । ಸೆಮಂತ್ರಿ
ನುಗ್ಲ[೨೯] ಸಂಕವ[೩೦] ಗಳಿದಾಳೇ । ಸೆಮಂತ್ರಿ
ಯಮನ ಕೊಂಡಕಾಗಿ ನಡದಾಳೆ ।

ಯಮನ ಕೊಂಡ್ದಲ್ಲಿ ಹಿಮ್ತೇ ಬಿದ್ದೋರ್ ನೋಡಿ
ಅಲ್ಲಿಟ್ಟಮೃತವ ತಳದಾಳೆ । ಅವರೆಲ್ಲ
ಸೆಮಂತ್ರಿ ಬೆನ್ನತ್ತಿ ಬರುವಾರು
ಹಾಳಾದ್ವೇ ಪಟ್ಟಣ ದೂಳಾದ್ವೇ ಪಟ್ಟಣ
ಯಮರಾಯ್ನ ಪಟ್ಣೆಲ್ಲ ಬರುವಾದು । ಅಂದೇಳಿ

ಅಲ್ಲೊಂದು ಚವ್ಡಕಾರ[೩೧] ನುಡಿದಾನೆ ।
ಅಲ್ಲೊಂದು ಚವ್ಡಕಾರ ನುಡಿವುದ್ನು ಯಮರಾಯ
ಸೆಮಂತ್ರಿ ಯಿದ್ದಲ್ಲೇ ಬರುವಾನೇ । ಯಮರಾಯ
ಅಮೃತ ಗಿಂಡೀ ಕಸಿದಾನೇ । ಸೆಮೆಂತ್ರಿ

ಸೆಳ್ಳುಗುರಲ್ ಹನಿಯಾ ಅಡಗೀಸಿ । ಸೆಮಂತ್ರಿ
ಸತಿಸಪಯಿದ್ದಲ್ಲಿ ಬರುವಳು । ಸೆಮಂತ್ರಿ
ಮುಸಕಿನ ಸೊಪ್ಪ ತೆಗದಳು । ಸೆಮಂತ್ರಿ
ಸತಿಸಪಗಮ್ರುತವ ತಳಿದಾಳೇ । ಸತಿಸಪ

೨೯. ನೂಲು ೩೦. ಸೇತುವೆ ೩೧. ಚಾವಡಿಕಾರ?

ಮಯ್ಯುರ್ಮರ್ದಿ ಎದ್ದಿ ಕುಳತಾನೇ । ಸತಿಸಪ
ಆಗೊಂದು ಮಾತಾ ನುಡಿದಾನೆ ।

ಎಲಿಯೊಂದ ತಿಂತಿದ್ದೆ ಎಲಸೊಕ್ಕಿ ಬಿದ್ದಿದ್ದೆ
ಹೆದರೀದ್ಯೋ ಸೆಮೆಂತ್ರಿ ಬೆದರಿದ್ಯೋ ।
ಅಡಕ್ಯೊಂದ ತಿಂದೀದೆ ಅಡಕ್‌ಸೊಕ್ಕಿ ಬಿದ್ದೀದೆ
ಹೆದರಿದ್ಯೊ ಸೆಮಂತ್ರಿ ಬೆದರಿದ್ಯೊ ।
ಹೆದರಿಕೆ ಬೆದರಿಕೆ ನಿಮ್ಮ ಕಂಡಡಗಲಿ
ನಾವ್ ಹೋಗ್ವೊ ನಮ್ಮ ಅರಮನ್ಗೆ । ಅಂದೇಳಿ
ರಾಜಬೀದಿಗಾಗೇ ಬರುವಾರೇ । ಸಾವಿತ್ರಿ ಸತಿಸಪ
ತಮ್ಮಲರಮನಗೇ ಬರುವಾರೇ । ಅತ್ಯಮ್ಮ
ಗಿಂಡ್ಯಲ್ಲಿ ಉದಕವ ತಡದಾಳೆ ।

ತನಗೊಂದು ಚಂಬುದಕ ಕಡೆಗಾರು ಕೊಡಬಹುದು
ಸೊಸಿಗೊಂದು ಚಂದುದಕ ಮೊದಲ್ಕೊಡು । ತಾಯಮ್ಮ
ಸೊಸಿದರ್ಮದಿಂದೇ ಮನಿಗ್ ಬಂದೆ ।

ಕಾವ್ಯಫಲ

ಈ ಹಾಡ್ ಹೇಳ್ದರಿಗು ಸೆರದನಿ[೯೯] ತಂದರಿಗು
ಹಾದೀಗ್ವೊಕನದಾ ಸಿಂವಗಂಗೆ
ಹಾದೀಗ್ವೊಕನದಾ ಸಿಂವಗಂಗಿ ತೀರತವ
ಹೋಗಿ ಮಿಂದಟ್ಟು ಪಲವುಂಟೇ
ಈ ಹಾಡ್ ಹೇಳ್ದರಿಗು ಚಿತ್ತೈಸಿ ಕೇಳ್ದರಿಗು
ಗುತ್ತೀಗ್ವೊಕನದಾ ಸಿಂವಗಂಗೆ
ಗುತ್ತೀಗ್ವೊಕನದಾ ಸಿಂವಗಂಗಿ ತೀರತವಾ
ನಿತ್ತೀ ಮಿಂದಟ್ಟೇ ಪಲವುಂಟೇ
ಈ ಹಾಡ ಹೇಳ್ದರಿಗು ಸೆರದನಿ ತಂದರಿಗು
ಎತ್ವೊಡೇ ಬತ್ತಾ ಬೆಳೀಯಾಲೆ
ಎತ್ವೊಡೇ ಬತ್ತಾ ಬೆಳಿಯಾಲಿ ಈ ಮಲ್ಲಿ
ಕಟ್ವಾಲೇ ಸಾಲೂ ಕಣಜವೇ
ಈ ಹಾಡ ಹೇಳ್ದರಿಗು ಆಲೀಸಿ ಕೇಳ್ದರಿಗು
ದನು ಕರಿಯಲೆ[೧೦೦] ದಾನ್ಯ ಬೆಳೀಯಾಲೆ
ದನು ಕರಿಯಲೆ ದಾನ್ಯ ಬೆಳಿಯಾಲಿ ಈ ಹಾಡ
ಕೇಳಿದರು ಮೋಕ್ಷ ಪಡೀಯಾಲೆ
ಒಂದು ಪಾದದ ಮೈನೇ ಎರಡೂ ಪಾದವನಿಟ್ಟೆ
ಎಂತವರ ಮಗಳೇ ಚೆಲವೀಯೇ
ಎಂತವರ ಮಗಳು ಚೆಲವೀ ತಣ್ಣಿರಮಿಂದೇ
ಮಣಿಯಾರದಲ್ಲೇ[೧೦೧] ಪವಡೀಸೆ
ಮಣಿಯಾರದಲ್ಲೇ ಪವಡೀಸಿ ಹೇಳಿದರೆ
ಹಾಡ್ಗಿಂದು ಹಾಡಿನ ದೆನೀಚೆಂದ
ಇಲ್ ಹಾಡ ಹೇಳಿದರೆ ಎಲ್ಲೀಗೆ ಕೇಳೀಗೇ
ದಿಳ್ಳಿಲಿ ಜಂಗಮರು ತಲೆಬಾಗೇ
ದಿಳ್ಳಿಲಿ ಜಂಗಮರು ತಲೆಬಾಗಿ ಕೇಳಿದರೆ

---

೯೯. ಜೋಡಿಗೆ ಧ್ವನಿ   ೧೦೦. ಆಕಳು ಹಾಲು ಕರಿಯಲಿ ೧೦೧. ಮಣೆಮಾಡದಲ್ಲಿ

ಯಾವಾ ಸ್ವೊಬನದಾ ದೆನೀಯೋರೆ
ಯಾವಾ ಸ್ವೊಬನದಾ ದೆನಿಯೋರೆ ಮಾಳ್ಕೋಡಾ
ಗೆಜ್ಜೇ ಸ್ವೊಬನದಾ ದೆನೀಯೋರೆ
ಚಿತ್ತರಿಸಿ ಹೇಳಿದರೆ ಚಿತ್ತೈಸಿ ಕೇಳೀಗೇ
ಸುತ್ತನ ನಾರ್ಯ್ಯೋರು ತಲೆಬಾಗೆ
ಸುತ್ತನ ನಾರ್ಯ್ಯೋರು ತಲೆಬಾಗಿ ಕೇಳಿದರೆ
ಯಾವಾ ಸ್ವೊಬನದಾ ದೆನೀಯೋರೆ
ಯಾವಾ ಸ್ವೊಬನದಾ ದೆನಿಯೋರು ಹೇಳಿದ ಹಾಡು
ಹಾಡ್ಗಿಂದು ಹಾಡೀನ ದೆನೀಚೆಂದ
ಎಪ್ಪತ್ ವರ್ಸಾದ್ರು ತಪ್ಪಾವೇ ನನ್‌ಹಾಡು
ಕಟ್ಟೊ[೧೦೨] ಕಂವ್‌ಸಂಗ[೧೦೩] ದರೀಯಾವೇ[೧೦೪]
ಕಟ್ಟೊ ಕಂವ್‌ಸಂಗ ದರೀಯಾವೇ ನನ್ ಹಾಡೀನಾ
ಕಟ್ಟಾ[೧೦೫] ಬಿಡಸದರೆ ತೆರಣಿಲ್ಲ
ಅರವತ್ ವರಸಾದ್ರು ಮರೆಯಾವೇ ನನ್‌ಹಾಡು
ಅರಗೂ ಮಲ್ಲಗಿಯಾ ಸುರೀದಂತೆ
ಅರಗೂ ಮಲ್ಲಗಿಯಾ ಸುರಿದಂತೆ ನನ್ ಹಾಡೀನಾ
ಸೆರಗ ಬಿಡಸದರೆ ತೆರಣಿಲ್ಲ
ಹಾಡನ ದೆನಿಯಾ ಕೇಳೇ ಹಾದೀಲ್ ಹೋಗ್ವಂವ ಬಂದಾ
ಹಾಡ್ಹೇಳೇ ತಂಗೀ ದೆನೀಚೆಂದಾ
ಹಾಡ್ಹೇಳೇ ತಂಗಿ ದೆನಿಚೆಂದ ನಿನ್ನಾಲಾ
ಹಾಡಾ ಕೇಳಿದರೆ ಹಸೂವಿಲ್ಲಾ

ಗಿಂಡೀ ಗಿಂಡೀ ತುಂಬಿ ಗಿಂಡಿ ಮುಚ್ಚಲ ತುಂಬಿ
ಗಿಂಡೀ ಬಾಯೀಗೇ ತರಳಾ[೧೦೬] ತುಂಬೇ
ಗಿಂಡೀ ಬಾಯೀಗೇ ತರಳಾ ತುಂಬೀದಂತೆ
ತುಂಬಿರಲೆ ನಮ್ಮಾ ಮನದಲ್ಲೇ
ತುಂಬಿರಲೆ ನಮ್ಮಾ ಮನದಲ್ಲೀ ಹಾಡು
ಬರತಿರಲೆ ಕಾರ್ಯ ಮೊದಲೀಗೆ

೧೦೨. ಕಟುವ ೧೦೩. ಕೌಶಲ್ಯ ೧೦೪. ದೊರೆಯವು ೧೦೫. ಪದರು ೧೦೬. ತಳಿರು

ಶಬ್ದಾರ್ಥಕೋಶ

ಅ

ಅಕ್ಷತ : ಅಕ್ಷತೆ
ಅಗ್ಲಡ್ಜಿ : ಬಿಗಿದು
ಅಚಗಯ್ನು : ಆಚೆಕೈಯಿನ
ಅಟ್ : ಅಷ್ಟು
ಅಡಿ : ತಳ, ಬಾಗಿಲು
ಅಡಿಗರ : ರಂಗೋಲಿ
ಅಡಿಗಾರ : ಸೇವಕರ, ತಳಾರ
ಅತ್ತೆ : ಆಕಡೆ
ಅದಕಿಟ್ಟು : ಅದಕ್ಕಿಷ್ಟು
ಅನೂವದ : ಸಿದ್ಧವಿದೆ
ಅರ್ಜಿನ : ಅರ್ಜುನ
ಅರ್ಜೇರು : ?
ಅರ್ದಿಕಾರರು : ಓಲೆಗಾರರು ?
ಅರ್ಮನೆ : ಅರಮನೆ
ಅರಗೂವೊ : ಅರ್ಪಿಸುವೆವು
ಅರಸಾನೆ : ಹರಸಿದನು
ಅರಿಯೇನೋ : ತಿಳಿಯೆಯೇನೋ
ಅಲರೀಗೆ : ಹಲವರಿಗೆ
ಅಸಗೂತಿ : ಅಗಸಗಿತ್ತಿ
ಅಸ್ಮಾನ : ಅಸಮಾನ
ಅಸೋರಿಸು : ಪಸರಿಸು, ವಿಸ್ತರಿಸು
ಅಳಗಾನೆ : ಎಳೆದನು
ಅಳ್ಳಿಕಣ್ಣಿ : ಕಿಪ್ಪೊಟ್ಟೆ
ಅಂಬುತ್ನು : ಅಂದಕೂಡಲೇ

ಆ

ಆಗೂರೊಟ್ಗೆ
ಆದಗಲೇ
ಆಗುವಷ್ಟರಲ್ಲಿ
ಆದೂಗಿ ಜಗುಲಿ
ಆದಾವೇ : ಹಾದವು
ಆಯಕೆ : ರುಚಿಗೆ
ಆಯಾ : ನೆವ
ಆರ್‌ಗೆಯ್ದ್ರೆ : ಏನು ಮಾಡಿದರೆ
ಆರ್ನ : ಯಾರನ್ನಾದರೂ
ಆರೂಣಿ : ಅರಣ್ಯ

ಇ

ಇಚಮಗ್ಗಿ : ಈಚೆಮಗುಚಿ
ಇಟ್ : ಇಷ್ಟು
ಇಡಗೀದ : ಎಡವಿದ
ಇಡಲೂಗಿ : ಒಂದು ಬಗೆಯ ನೆರಿಗೆ
ಇಮದಿಂದ : ಸಿಟ್ಟಿನಿಂದ
ಇರುಗು : ಇರುತ್ತದೆ
ಇಸ್ಕನ್ನಿ : ವಿಷಕನ್ನೆ
ಇಳಲಿಟ್ಟೆ : ಇಳಿಬಿಟ್ಟು
ಇಳ್ಳಿ : ಅರಳೆ, ಅಶ್ವತ್ಥ
ಇಳುಕೀಸಿ : ಇಳಿಸಿ
ಇಂಗಾಳಿ : ಉರಿಗಾಳಿ

ಉ

ಉಗೂರಾಡೇ : ಉದ್ದು, ತಿಕ್ಕು
ಉದೋರಿಸೇ : ಉದುರಿಸಿ
ಉರದಾವೇ : ಹರಿದವು, ಮುಗಿದವು
ಉಳಗಾವಾ : ಉಳಿಗವನ್ನು

ಎ

ಎಡಗೀದ : ಎಡವಿದ
ಎಡ್ಕೊತ್ತೇ : ಎಡಕ್ಕೊತ್ತಿ
ಎತ್ತನ : ಎಲ್ಲಿಯೂ
ಎತ್ತೂಡಲೆ : ಎತ್ತುಹೂಡಲಿ
ಎರೆ : ಆಹಾರ
ಎಲೆವಸ್ತ್ರ : ರುಮಾಲು
ಎಲಿಮೆರಾ : ಎಲಿಯ ಮೇಲೋಗರ
ಎಳಗ್ವಾನೆ : ಎಳೆಯುವವನು

ಒ

ಒತ್ತಗೆ : ಹೊತ್ತಗೆ
ಒರಿಯಾಲೊದೆ : ಹೇಳ ಹೋದೆ
ಒಲಿಬಂದಿ : ಮೂತ್ರಮಾಡಿ ಬಂದು
ಒಂದಾಸಾ : ಒಂದು ಹಾಸಿಗೆ
ಒಂದೇ : ಜೊತೆಯಲ್ಲಿ

ಓ

ಓಯ್ಗುಣ್ಣು : ಓಯೆನ್ನು
ಓಯ್ಗುಂಡೇ : ಓಯೆಂದು
ಓಲೆ : ಓಲೆಗರಿ

ಕ

ಕಟ್‌ಕಣೋ : ಕಟ್ಟಿಕೊಳ್ಳೋ
ಕಡಚಕ್ರ : ಕೊನೆಯ ಕಾಳಗ
ಕಡಚಕ್ರಕೋವಿ : ಆಯುಧವಿಶೇಷ
ಕಡ / ಕಡಿ : ಕಾಯಿಯ ಅರ್ಧಭಾಗ
ಕಣ್ಕ್ನ / ಕಣಕೀನ : ಕಡೆಗಿನ
ಕದ್ರಾ / ಕದ್ರೋರಾ : ತೆನೆ, ಕದಿರು
ಕರ್ದಾನೆ / ಕರೀದಾನೆ : ತೆಗೆದನು
ಕರ್ದೊಂದು : ಕರಿದೊಂದು
ಕಲಿ : ಗಾಯ, ಕಲಂಕ
ಕಲ್ತಿಪ್ಪು : ಕಲಿತಿರುವರು
ಕಸದಾನೆ / ಕಸಿದಾನೆ : ಹಚ್ಚಿದನು
ಕಳ್ಳಿಲ್ಲ : ಕಣ್ಣಿಲ್ಲ
ಕಂತೆ : ಜೋಳಿಗೆ
ಕಂದ್ರೀದ : ಮುಳುಗಿಸಿದ
ಕಾವಲ್ಗೆ : ಕಾವಲಿ, ಹಂಚು
ಕಾಳಕ್ಕೆ : ಕಾಳಗಕ್ಕೆ
ಕಿಟ್ಟಿ : ಮುಟ್ಟಿ
ಕಿರಳು : ತಳಿರು
ಕಿರಿದಾಣಿಯ : ಸಣ್ಣ ಟೊಂಗೆಯನ್ನು
ಕುಕ್ಕ : ಕುಕ್ಕನ ಹಕ್ಕಿ
ಕುಳುವದ್ನು : ಕುಳಿತ ಮೇಲೆ
ಕುಂದಿಅರಗಾಲಿ : ಮುರುಟಿ ಹೋಗಲಿ
ಕೂಗಿಲ : ಪಕ್ಷಿ ವಿಶೇಷ
ಕೂದು : ಕೂಡ್ರು
ಕೆನೂಳಿ : ಒಂದು ಬಗೆಯ ತರಕಾರಿ
ಕೆಮಿ : ಕಿವಿ
ಕೆಯ್‌ಗೆದ್ದಿ : ಕೆಯ್ವೊಲ
ಕೆಸಕ್ಕಿ : ಕೆಂಪಕ್ಕಿ
ಕೆಂದೋಳ : ಕೆಂಜೋಳ,

ಕೇಸ	:	ಕೂದಲು
ಕೊಟ್ಟಂಕು	:	ಕೊಟ್ಟ ಹೊರತು
ಕೊಡ್ವನ	:	ತಾಮ್ರದ ಕೊಡ
ಕೂಡಲ್ಲಿ	:	ಕೊಡೆಯಲ್ಲಿ
ಕೊಣಕು	:	ಕದಡು
ಕೊಮ್ಮಣಿ	:	ಮೋಜು, ರಸಿಕತೆ

ಗ

ಗಟ್ಟೊ	:	ಗಟ್ಟಿಯಾದ
ಗಡಿಯಿಲ್ಲ	:	ಮೇರೆಯಿಲ್ಲ
ಗರುಡ	:	ಅಲಂಕಾರ ವಿಶೇಷ
ಗವಣ	:	ವಸ್ತ್ರ ಬಗೆ
ಗಪ್ಡಿ	:	ದಾಸಿ
ಗಂಟಿ	:	ದನ
ಗೀಳಾ	:	ಮೀಡ, ಲಗಳಿ
ಗುರ್ರಾಯ	:	ಕುರುರಾಯ ಕೌರವ
ಗೂಟೆ		ಗೋಂಟೆ
ಗೊಟೆ		ಬದಿ, ಮೂಲೆ
ಗೊಣ್ಣೊಳು	:	ಗೊಬ್ಬರ ಹುಳ
ಗೊಪಳರ	:	ಗೋಪಾಲರ
ಗೊ–ಬಿ	:	ವ್ಯಥೆ, ದುಃಖ
ಗೋವ್‌ಕಟ್ನವ್ರು	:	ಗೋವಳ ವಂಶಜರು
ಗೋಳಿ	:	ಸೈನ್ಯ ?

ಚ

ಚಕ್ರಪಳಿ	:	ಪದ್ಮಾಸನ
ಚಂಡಾ / ಚಿಂಡ		ಚಂಡಿಕೆ
ಚಂದ್ರಸ್ತ	:	ಚಂದ್ರಹಸ್ತ
ಚಂಬಗಲೆ / ಚಂಬುಗಲೆ		ತಂಬಿಗೆಯಲ್ಲಿ
ಚಿಗುರು	:	ಮಲ್ಲಿಗೆ ಅರೆದು ತಯಾರಿಸಿದ
ಕಮ್ಮೆಣ್ಣೆ		
ಚಿನ್ನೊಲೆ	:	ಚಿನ್ನದ ಓಲೆ
ಚೇಜಿ	:	ಕುದುರೆ

ಜ

ಜಜ್ಜರಿಯೂತ	:	ತುಳಿಯುತ್ತ
ಜಬ್ಬೆಕ್ಕು	:	ಜಬ್ಬು+ಹೆಕ್ಕು ಸಣ್ಣಮೀನಹೆಕ್ಕು
ಜಂತರ ಸೀತೆ	:	ನಡುಗಿಸುತ್ತ
ಜಿಗಟಿ	:	ರಾಸಿ
ಜಂವತೀರು	:	ಯುವತಿಯರು
ಜುತ್ವ, ಜುತವ	:	ಋಜುತ್ವ ಸತ್ಯ
ಜುಳ್ಳುಳ್ಳಿ	:	ಗಟ್ಟಿ
ಜೊನಗ	:	ಸಿಂಪಿ, ಜಾಡಗ
ಜೋಡಲ	:	ಜೋಡಿ

ತ

ತಗರೀಗೆ / ತೊಗರೀಗೆ		ತವರಿಗೆ
ತಡಕಂಡು	:	ತೆಗೆದುಕೊಂಡು
ತಡದಾನೆ	:	ಹಿಡಿದನು
ತತ್ತಗೆ	:	ಜೊತೆಯಲ್ಲಿ
ತಪ್ಪಸಗಂಡೇ	:	ತಪ್ಪಿಸಿಕೊಂಡು
ತರಕ	:	ದರಕು, ಒಣೆಲೆ
ತಳಿಬಂದಿ	:	ಮಂಗಲ ಸೂತ್ರ
ತುಡಿಲ	:	ತೊಂಡಿಲ
ತಾಳೀದ	:	ಸಾಕಿದ ?

ತಿರವಕ್ಕು : ಸ್ಥಿರವಾಗುವದು
ತಿರವಾಲಿ : ಸ್ಥಿರವಾಗಲಿ
ತಿರ್‍ಗ್ಗೊರೊಟ್ಗೆ : ತಿರುಗುವಷ್ಟರಲ್ಲಿ
ತಿಂಬೂಕೆ : ತಿನ್ನಲಿಕ್ಕೆ
ತೀರ್ತ : ತೀರ್ಥ
ತೀರೀಗೇ : ಮುಗುಯುವದು
ತುಪ್ಪೋಗುರ : ತುಪ್ಪಅನ್ನ
ತುಳಚಿ, ತೊಳಚಿ : ತುಲಸಿ
ತೆಗಂಡ : ತೆಗೆದುಕೊಂಡ
ತೆಣೆಮೆ–ನೆ : ಜಗುಲಿಯ ಮೇಲೆ
ತೆರಣು : ಕಾರಣ, ತೆರಳು ಬಿಡುವು
ತೆಳ್ದಬಾರೆ : ತಿಳಿದು ಬಾ
ತೆಳಗೂವೆ : ತಿಳಿದುಕೊಳ್ಳುವೆ
ತೆಳಿ : ತಿಳಿದುಕೋ
ತೇಗೀತೇ : ತೇಗುತ್ತ
ತೊಲಗೂಗು : ಹೋಗುತ್ತದೆ
ತೋಲು : ಬಹಳ

ದ

ದರವಿ : ದರ್ವಿ, ಸೌಟು ?
ದಳಲಿಗೆ : ಬೇಗೆ ?
ದಳವಳ : ತಾಂಬೂಲ
ದಂಗುಲ : ಡಂಗುರ
ದಾರಂದ್ರ : ಬಾಗಿಲು ಮೇಲ್ಭಾಗ
ದ್ಯಾಮಟಿ : ಧ್ವನಿಗಂಟೆ ?
ದಿಂಡಾ : ಗಂಟನ್ನು
ದುಟ್ಟಿ, ದೂಟಿ : ದೃಷ್ಟಿ
ದುರ್ವಿ : ದರ್ಭೆ
ದೆಡಿ : ಅಂಚು

ನ

ನಾಕು : ನಾಲ್ಕು
ನಿನ್ನಾನಾಗೊಂದು : ನಿನ್ನೆಯೊಂದು
ನಿಲ್ಲಿಸಗಿ : ನಿಲ್ಲಿಸಿಟ್ಟು
ನೀಲಾನಂಬು : ನೀಲವೆನ್ನುವ
ನುಳಿದಾಳೆ : ನುರಿದಳು
ನೆಗದಾಳು : ಎತ್ತಿದಳು
ನೆಗೆ : ನಗೆ
ನೆಗ್ರ : ಕೂದಲು
ನೆಡಿಯಾಲೆ : ನಡೆಯಲಿ
ನೆರವಪ್ಪೆ : ನೆರವಾಗುತ್ತೇನೆ
ನೆರೆ : ಋತುಮತಿ

ಪ

ಪಡಿ : ಭಿಕ್ಷೆ
ಪಡಿಗರ, ಪಡಿಯರ : ಬಾಗಿಲು ಕಾಯುವವ
ಪದನಾ : ಹಾಡು
ಪಪ್ಪಾಳಿ : ಉಡಿಗೆ?
ಪವುಡಿಸು : ಮಲಗು, ಬೀಳು
ಪರ್‍ಸದ : ಪ್ರಸಾದ
ಪಾರ್ವತ್ರರು : ಬ್ರಾಹ್ಮಣರು
ಪುಟ್ಟೊ : ಸಣ್ಣ
ಪುರಿಸ : ಗಂಡ
ಪೆಟೆ : ಸಲ, ಸಾರೆ

ಬ

ಬಗ್ಸ	:	ಬೊಗಸೆ
ಬಡರಾ	:	ಬಡಿಗೆ, ಸೆಳೆ
ಬಣ್ಣದಲ್ಲಿ	:	ಬಟ್ಟೆಯಲ್ಲಿ ಸೀರೆಯಲ್ಲಿ
ಬಯ್‌ರಂಗ	:	ಬೈರಾಗಿ
ಬರ್ಬಾರ	:	ಬರಕೂಡದು,
ಬರ್ಮಾ	:	ಬ್ರಹ್ಮ
ಬರವೀನೋಲೆ	:	ಕರೆಯೋಲೆ
ಬರವಾದು		ಬರಿದಾಯ್ತು
ಬರುವಾದೊ		ಬರಿದಾದವು
ಬಲಗೂಳು	:	ಬಲಿಕೂಳು?
ಬಲೆ	:	ಬಲ್ಲೆನು
ಬಳ್ದಮಿಂದ	:	ಕಲಶನೀರು ಸ್ನಾನ ಮಾಡಿದ
ಬಳಕೀತೆ	:	ಬಳುಕುತ
ಬಳಗು	:	ತೆಗೆ ಸ್ವಚ್ಛ ಮಾಡು
ಬ್ರಸ್ತರ	:	ಗುರುವಾರ
ಬಾಕ, ಬಾಂಕ		ಖಡ್ಗ, ಕತ್ತಿ
ಬಾಗ್ಲೋರು	:	ಬಾಗಿಲ ಕಾಯುವವರು
ಬಾಮಕ್ಕೆ	:	ಚೆಲುವಿಗೆ
ಬಾರ	:	ಸಲ, ಬಾರಿ
ಬಿನ್ನಾಣಿ	:	ಕೆಲಸಿ
ಬಿಲ್ನರು	:	ಬಿಲ್ಲುಗಾರರು
ಬೆಗೋರಿಸು	:	ಹುರಿದು
ಬೆನ್ನಗ್‌ಮಾಡು	:	ಅಲಕ್ಷಿಸು
ಬೊನ್ಪತಿ	:	ಭಾನುಮತಿ
ಬೊನ್ನಹಸೆ	:	ಹೊನ್ನಹಸೆ

ಮ

ಮಕ್ಲಾ	:	ಮಗ್ಗುಲಿಗೆ
ಮಟ್ಟಾ	:	ಮಠ
ಮಡಗು	:	ಇಡು, ಹಿಡಿದು
ಮತಿಯಕ್ಕ	:	ಹಾಡಿನ ದೇವತೆ
ಮನಸೀರು	:	ಮನುಷ್ಯರು
ಮುಯ್ತು	:	ನಂದು
ಮಯ್ಬೆಡ	:	ನಂದೀಹೋಗಬೇಡ
ಮರ್ಗೀತೆ	:	ದುಃಖಿಸುವೆ
ಮರ್ಚೊಂದು	:	ತಿರುಗಿ ಇನ್ನೊಂದು
ಮರಸಾರಿ	:	ಮರೆಸೇರಿ
ಮಲ್ಲಿ	:	ಮನೆಯಲ್ಲಿ
ಮಸ್ತದಿ	:	ವಸ್ತುಒಡವೆ? ಉಡಿಗೆ?
ಮಂಗಿಲ	:	ಮಂಗಲ, ಮದುವೆ
ಮಾದಲ	:	ವತುಲಂಗ
ಮಿಂಚು	:	ಕತ್ತಿ ಮಸಿ
ಮಿಂತು	:	ತಿಂದಿತು, ಮೇಯಿತು
ಮಿಗೋಲಾದು	:	ಹೆಚ್ಚಾಯಿತು
ಮುಚ್ಚು	:	ಮುಚ್ಚು
ಮುಡಾಕಿ	:	ಮುಸುಕು ಹಾಕಿ
ಮುಟ್ಟೀಲ ಗುಂಡಿ	:	ಮುಟ್ಟಾಗಿದ್ದಾಳೆ
ಮುರ್ದಬ್ಬು	:	ಮುಂದು ಹಬ್ಬು
ಮುಂಗರಿ	:	ಮುಂಗುಸಿ
ಮೂರ್ ನೀರು	:	ಮುಟ್ಟಾದ ೩ ದಿನದ ಸ್ನಾನ
ಮೂರೊತ್ತರ	:	ಮೂರು ಸಲ

ಮೆ-ಗರ / ಮೆ-ರ : ಮೇಲೋಗರ
ಮೆದಲಗಿ : ಮೇಲ್ಸೆರಗು
ಮೆಲೋವಾಳೆ : ತಿನ್ನುವಳು
ಮೇಟಿ : ಮುಖ್ಯ ರಕ್ತನಾಳ
ಮೊಗೋಳಿಗೆ : ಮಗಳಿಗೆ
ಮೊವದ ಸರ : ಕರಿಮಣಿ, ಮಂಗಲ ಸೂತ್ರ

ರ

ರಗತ : ರಕ್ತ
ರಾಗದ ಚೆನ್ನುರಿ : ತಂಬೂರಿ
ರೂಪತಿ / ರೋಪತಿ : ದ್ರೌಪದಿ

ವ

ವರ್ರಾಗಿ : ಸರಿ ಜೋಡಿಯಾಗಿ

ಸ

ಸತಿಸಾಪ : ಸತ್ಯವಾನ
ಸದಿ : ಕಸ
ಸಮೆ : ಸಿದ್ಧಪಡಿಸು
ಸಮೆ : ಕಡಿ
ಸಯ್ವಾಗಿ : ಸಹಿತವಾಗಿ
ಸವರತಾ : ಸಾಮರ್ಥ್ಯ
ಸವ್ವಾನೆ : ಹೊರಟಾನೆ
ಸಂಬರ : ಸಂಬಾರ
ಸಂಬಳಗಿ : ತಟ್ಟೆ
ಸಂಬು : ಶಿವ
ಸಾದೇವ : ಸಹದೇವ
ಸಾಯಕ : ಕತ್ತಿ, ಬಾಣ
ಸಾರೋಗಿ : ಬಾರಿ ಹೋಗಿ
ಸಾಸಟಗಿ : ಸಮರ್ಥ?
ಸಿಕ್ಕ : ಪಾತ್ರೆಗಳನ್ನು ತೂಗ ಹಾಕುವ ಕಣ್ಣಿ
ಸಿಕ್ಸಾ : ಶಿಕ್ಷೆ
ಸಿಬ್ಬಲಾಡು : ಕೂಡಾಡು
ಸಿಮ : ಶಿವ
ಸಿಂಗ : ಸಿಂಹ, ನರಸಿಂಹ
ಸೀಗ್ರರು : ಅಭಿಮನ್ಯುವಿನ ಬಂಧುಗಳು
ಸೀನಾಯಿ : ಬೆಟ್ಟದ ನಾಯಿ
ಸುಮನಿದ್ರೆ : ಸುಖ ನಿದ್ರೆ
ಸೆಟ್ಟುಗ : ಸಟ್ಟುಗ
ಸೆಡೋಲಿಸು : ಸಡಿಲಿಸು
ಸೆಮಂತ್ರಿ : ಸಾವಿತ್ರಿ
ಸೆಯಾ : ಛಾಯೆ, ಚಹರೆ
ಸೆರ್ ದನಿ : ಸರಿ ಧ್ವನಿ
ಸೆರುಮುಡಿ ಶ್ರೀಮುಡಿ?
ಸೆರ್ಮುಡಿ ಸೋರ್ಮುಡಿ?
ಸೊಕ್ಕತೀ : ತಾಂಬೂಲ ತಲೆಗೆ ಹತ್ತಿ ತಲೆ ತಿರುಗಿಬೀಳು
ಸೊಗದೇ : ಸುಗಿದು
ಸೊಗಿ : ನವಿಲು
ಸೊಣದು : ಒಗೆದು
ಸೋಡಿ : ಒಂದು ಬಗೆಯ ಆಟ
ಸೋವು : ಸುಳಿವು

ಹ

ಹಕ್ಲ : ತೋಟ, ಬೇಣ
ಹಚ್ಚಗಿ : ಗೋಲಾಕಾರದ ಉದ್ದವಾದ ಅಕ್ಕಿ ತೊಳೆಯುವ ಬೆತ್ತದ ಚಬ್ಬೆ
ಹತ್ಯಾಣಪುರ : ಹಸ್ತಿನಾಪುರ
ಹರ್ದಬ್ಬು : ಹರಿದುಹಬ್ಬು
ಹರ್‌ನೀರು : ಹರಿಯುವ ನೀಡು
ಹಸಗುತ್ತೆ : ಅಗಸಗಿತ್ತಿ
ಹಳ್ಗನಕ್ಕೆ : ಹಳ್ಳಗ ಎಂಬ ಜಾತಿಯ ಅಕ್ಕಿ
ಹಳವು : ಕಲಂಕ, ಕುಂದು
ಹಾದಗಲೇ : ಹಾದಿಯಲ್ಲಿ
ಹಾಸನ : ಆಸನ, ಹಾಸಿಗೆ
ಹಾಸಾ : ಹಾಸಿಗೆ
ಹಿಮ್ತದೆ : ಮಿಡುಕಾಡುತ್ತದೆ
ಹೀತ್ರಕೆ : ಹಿಂದಕ್ಕೆ
ಹಿಲ್ಸ : ಜ್ಯೋತಿ, ಹಿಲಾಲ
ಹುಗಳೂವೆ : ಹೊಗಳುವೆ
ಹುರದಾಳೆ : ಹಚ್ಚಿದಳು
ಹುರದದೆ : ಮುರಿಯಿತು
ಹುರದಾವೆ : ಮುಗಿಯಿತು
ಹುರೋಗಡಲೆ : ಹುರಿಗಡಲೆ
ಹೂಂಗು : ಹೂ
ಹೆಡಿಗ್ಯನ : ಬೆತ್ತದ ಬುಟ್ಟಿಯಲ್ಲಿಯ
ಹೆಣಿ : ಟೊಂಗೆ
ಹೆರ್ದಾಲಿ : ಹಿರಿದಾಗಲಿ
ಹೆರಗ್ಹಣದೆ : ಹೊರಗೆ ಹೊಡೆದು
ಹೆರಿ : ಹಿರಿ
ಹೆರುಗೆ : ಹೊರಗೆ
ಹೆರುದಕ್ಕು : ಹಿರಿದಾಗುವದು
ಹೆರೋಟಾನೆ : ಹೊರಟನು
ಹೇಮಸ : ಹೀಯಾಳಿಸಿ
ಹೇಳಿಯ : ಸೊಗಸಾದ?
ಹೇಳ್ದಗೂರು : ಹೇಳಿದವರಿಗೂ
ಹೇಳೂಗಿ : ಬುಟ್ಟಿ
ಹೊಗಲು : ಹೆಗಲು
ಹೊಳಲು : ಹೊಳಹು ಸುಳಿವು
ಹೋದಂಕು : ಹೋದ ಹೋರತು